# ವೈಶಾಖ

**ಚದುರಂಗ**

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು – ೫೬೦ ೦೦೨

**VYSHAKHA -** A Novel by **Chaduranga**; Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮುದ್ರಿತ ವರ್ಷ : ೨೦೧೦

ಪ್ರತಿಗಳು : ೧೦೦೦

ಪುಟಗಳು : xx + ೩೯೨

ಬೆಲೆ : ರೂ. ೯೦/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನಸಂಕಲನ – ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.


ದಿನಾಂಕ ೧೮.೧.೨೦೧೧

**(ಗೋವಿಂದ ಎಂ. ಕಾರಜೋಳ)**

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.



ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝುಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**

ಅಧ್ಯಕ್ಷ

ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ: ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯು ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**
ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕರ್
ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಅರ್ಪಣೆ

ಕಾಡು ಹಳ್ಳಿಯೊಂದರ ಮಣ್ಣಿನ ಮಕ್ಕಳು
ಅವರ ಹಬ್ಬಹರಿದಿನಗಳು
ಅವರ ಒಡನಾಟ
ಅಲ್ಲಿನ ಕಾಡು
ಆ ಕಾಡಿನ ಪ್ರಾಣಿಪಕ್ಷಿಗಳ
ಸಾಮೀಪ್ಯ
ಇವು
ಆ ಮಣ್ಣು ಹಡೆದ ನನ್ನೊಡಲಿಗೆ
ಭಾವಕೋಶವಾದ ಸವಿನೆನಪಿಗೆ

# ಅರಿಕೆ

ಕಳೆದ ಸುಮಾರು ಇಪ್ಪತ್ತು ವರ್ಷಗಳಿಂದ ನಾನು ಕಾದಂಬರಿ ಬರೆಯದಿದ್ದರೂ ಕಾದಂಬರಿಯೊಂದು ನನ್ನೊಳಗೇ ಮೈ ಮುರಿದೇಳುತ್ತಿರುವ ಅನುಭವ ಕಳೆದ ಕೆಲವು ವರ್ಷಗಳಿಂದ ಆಗುತ್ತಲೇ ಇತ್ತು. ನನ್ನ ಬದುಕಿನಲ್ಲಿ ಎದುರಾದ ಸಮಸ್ಯೆಗಳು ಕಾರಣವೊ, ಪಟ್ಟು ಹಿಡಿದು ಬರೆಯಲು ಕುಳಿತುಕೊಳ್ಳಲಾಗದ ನನ್ನ ಆಲಸ್ಯ ಕಾರಣವೊ, ಅಥವಾ ನನ್ನಲ್ಲಿ ಕುದಿಯುತ್ತಿದ್ದ ಅನುಭವ ಇನ್ನೂ ಅಭಿವ್ಯಕ್ತಿಗಾಗಿ ನನ್ನನ್ನು ಒಳಗಿನಿಂದ ಒತ್ತಾಯಿಸುತ್ತಿದೆ ಎಂದು ನನಗೆ ಅನ್ನಿಸದೆ ಇದ್ದುದರಿಂದಲೊ ಅಥವ ಈ ಎಲ್ಲ ಕಾರಣಗಳಿಂದಾಗಿಯೊ ಈ ಕಾದಂಬರಿ ಇಷ್ಟು ಕಾಲದವರೆಗೆ ಸತಾಯಿಸಿ, ಇನ್ನು ಮೇಲೆ ಸುಮ್ಮನಿರಲಾರೆ ಎನ್ನಿಸುವಂತೆ ಮಾಡಿ ನನ್ನಿಂದ ಇದೀಗ ಬರೆಸಿಕೊಂಡಿದೆ.

ಈ ಬರೆಯುವ ಪ್ರಕ್ರಿಯೆಯಲ್ಲಿ ನೋವು, ನಲಿವು–ನೋವಿನಿಂದ ಕೂಡಿದ ನಲಿವು, ಎಲ್ಲವನ್ನೂ ಅನುಭವಿಸಿದ್ದೇನೆ. ನನ್ನ ಒಳಗನ್ನು ತೋಡಿಕೊಳ್ಳುತ್ತಿರುವೆ ಎನ್ನುವ ತೃಪ್ತಿಯ ಜೊತೆಜೊತೆಗೇ ಈವರೆಗೆ ಗುರುತಿಸಿಕೊಂಡಿರದೆ ಇದ್ದುದನ್ನು ಹಠಾತ್ತನೆ ಕಂಡಂತಾಗಿ ಚಕಿತಗೊಂಡಿದ್ದೇನೆ. ಈ ರೀತಿಯಲ್ಲಿ ಪಡೆದ ಸಂತೋಷ ಒಂದು ಅನನ್ಯವಾದ ಬಿಡುಗಡೆಯ ಭಾವನೆಯನ್ನು ನನಗೆ ತಂದುಕೊಟ್ಟಿದೆ. ಯಾವಯಾವುದೊ ಪಾತ್ರ, ಯಾವ ಯಾವುದೊ ಸನ್ನಿವೇಶಗಳ ಚಿತ್ರಣ ಇಲ್ಲಿದೆಯಾದರೂ ಇಡಿಯಾಗಿ ನೋಡಿದಾಗ ನನ್ನನ್ನು ನಾನೇ ಇಲ್ಲಿ ಕಂಡುಕೊಳ್ಳುತ್ತಿದ್ದೇನೆ ಎಂದು ನನಗೆ ಅನಿಸಿದ್ದುಂಟು. ಬರಹಗಾರನಾದ ನನಗೆ ಇದಕ್ಕಿಂತ ಮಿಗಿಲಾದ ಆತ್ಮ ಸುಖ ಬೇರೆ ಏನೂ ಕಾಣದು. ಈ ಕಾದಂಬರಿಯಲ್ಲಿ ಬಂದ ಪಾತ್ರಗಳು, ಸನ್ನಿವೇಶಗಳು ನಾನು ಎಲ್ಲೊ, ಯಾವಾಗಲೋ ಕಂಡವು; ಹೇಗೊ, ಏಕೊ ಅನುಭವಿಸಿದವು. ಅವೆಲ್ಲ ಒಂದು ಬಂಧನದಲ್ಲಿ, ಒಂದು ಅರ್ಥವಂತಿಕೆಯಲ್ಲಿ ಕಾಣಿಸಿಕೊಂಡು ನನ್ನನ್ನು ಮುದಗೊಳಿಸುತ್ತಿರುವ ಬಗೆ ನನಗೆ ವಿಸ್ಮಯವನ್ನುಂಟು ಮಾಡಿದೆ. ಬದುಕಿನ ನೋವು–ನಲಿವುಗಳ ಆ ಮುಖ–ಈ ಮುಖಗಳಿಗೆ ನಾನೆಂದೂ ಋಣಿಯಾಗಿದ್ದೇನೆ. ನಾನು ಪಡೆದ ಅನುಭವದ ಒಂದಂಶವಾದರೂ ಓದುಗರಿಗೆ ಆತ್ಮೀಯವೆಂಬಂತೆ ಆಗುವುದಾದರೆ ಈ ಕೃತಿ ಸಾರ್ಥಕವೆಂದು ಭಾವಿಸುತ್ತೇನೆ.

ನನ್ನ ಸುದೈವದಿಂದ ನನಗೆ ಸಹೃದಯ ಮಿತ್ರರ ಕೊರತೆಯಿಲ್ಲ. ನಾನು ಕಾದಂಬರಿ ಬರೆದಾದಬಳಿಕ ತುಂಬ ಪ್ರೀತಿಯಿಂದ, ಅದೊಂದು ಶ್ರಮವೆಂದು ಭಾವಿಸದೆ ಓದಿ, ತಮ್ಮ ಅನಿಸಿಕೆಗಳನ್ನು ಆತ್ಮೀಯತೆಯಿಂದ ಹಂಚಿಕೊಂಡ, ಆ

ಮೂಲಕ ನಾನು ನನ್ನ ಕಾದಂಬರಿಯ ಅನುಭವ ಪ್ರಪಂಚವನ್ನು ಇನ್ನೊಮ್ಮೆ ಏಕಾಗ್ರತೆಯಿಂದ ಕಂಡು ಅಲ್ಲಿ ಇಲ್ಲಿ ಅಗತ್ಯವೆನಿಸಿದ ಬದಲಾವಣೆಗಳನ್ನು ಮಾಡಿಕೊಳ್ಳುವಂತೆ ಮಾಡಿ ಕೃತಿಯ ರೂಪ ರೇಖೆ ಹೆಚ್ಚು ಸ್ಫುಟವಾಗುವುದಕ್ಕೆ ಪರೋಕ್ಷವಾಗಿ ಕಾರಣರಾದ ಜಿ.ಎಚ್. ನಾಯಕ, ಯು.ಆರ್. ಅನಂತಮೂರ್ತಿ, ಪ್ರಭುಶಂಕರ, ಡಿ.ಎ. ಶಂಕರ್, ಮಾಧವ ಕುಲಕರ್ಣಿ, ಪಂಡಿತಾರಾಧ್ಯ ಮುಂತಾದ ಸಹೃದಯ ಮಿತ್ರರನ್ನು ಇಲ್ಲಿ ನೆನೆಯುವುದು ನನ್ನ ಕರ್ತವ್ಯವಾಗಿದೆ.

೨೮೨೩, ೮ನೇ ಕ್ರಾಸ್ **ಚದುರಂಗ**
ವಿ.ವಿ. ಮೊಹಲ್ಲ, ಮೈಸೂರು – ೨
ನವಂಬರ್, ೧, ೧೯೮೦

I have seen yesterday ; I know tomorrow.

-Tutankhamun
Pharaoh 1350 B.C.

Pessimism is a sign of decay, optimism is a sign of superficiality; ``tragic optimism'' is the mood of the strong man who seeks intensity and extent of experience, even at the cost of woe and is delighted to find that strife is the law of life.

-Friedrich Nietzsche

ಇಯಂ ವಿಸೃಷ್ಟಿಃ ಯತ ಆ ಬಭೂವ ಯದಿ ವಾ ದಧೇ ಯದಿ ವಾನ
ಯೋ ಅಸ್ಯಾಧ್ಯಕ್ಷಃ ಪರವೇ ವ್ಯೋಮನ್ ರ್ತ್ಸ ಅಂಗ ವೇದ ಯದಿ ವಾ ನ ವೇದ॥
**ಋಗ್ವೇದ : ೧೦ನೇ ಮಂಡಲ ೧೨೯ನೇ ಸೂಕ್ತ ೭೮ನೇ ಮಂತ್ರ**

ಈ ವಿಶ್ವವ್ಯವಹಾರಕ್ಕೆ ಮೂಲವಾದ ಯಾವ ಪರತತ್ತ್ವವುಂಟೋ ಅದು ಈ ವಿಶ್ವವ್ಯವಹಾರ ಭಾರವನ್ನೆಲ್ಲ ಭರಿಸುವುದೆ ಇಲ್ಲವೆ.... ಎಂಬುದೂ ಸ್ಪಷ್ಟವಿಲ್ಲ !

ಈ ವಿಶ್ವವ್ಯವಹಾರಕ್ಕೆ ಮೂಲಕಾರಣವೂ ನೇತೃವಯ ಆದ ಪರತತ್ವಕ್ಕೂ ಇದರ ಗುರಿಯೇನು, ಧ್ಯೇಯವೇನು–ಎಂಬ ಅರಿವಿದೆಯೊ ಇಲ್ಲವೊ ಎಂಬುದನ್ನು ಹೇಳಲೂ ಸಾಧ್ಯವಿಲ್ಲ !....

–ಅಂದರೆ ವಿಶ್ವವ್ಯವಹಾರವು (Cosmic Principle) ಅತ್ಯಂತ ಗಂಭೀರವೂ ಜಟಿಲವೂ ಆದ ವಿಸ್ಮಯಗಳ (Mysteries of the Universe) ಮೊತ್ತವಾಗಿದೆ.

ಚದುರಂಗರು ಹುಟ್ಟಿದ್ದು ೧೯೧೬ರಲ್ಲಿ ಮೈಸೂರಿನ ಹತ್ತಿರದ ಕಲ್ಲಹಳ್ಳಿಯಲ್ಲಿ. ಮೈಸೂರಿನಲ್ಲಿ ವಿದ್ಯಾಭ್ಯಾಸ. ೧೯೪೧ರಲ್ಲಿ ಬಿ.ಎ. ಪದವಿ.

೧೯೪೮ರಲ್ಲಿ ಮೊದಲ ಕಥಾಸಂಕಲನ 'ಸ್ವಪ್ನಸುಂದರಿ'ಯ ಪ್ರಕಟಣೆ. ಆಮೇಲೆ ಕಾದಂಬರಿ 'ಸರ್ವಮಂಗಳಾ', 'ಉಯ್ಯಾಲೆ', 'ವೈಶಾಖ', 'ಹೆಜ್ಜಾಲ' ಹೊರಬಂದವು. 'ಸತ್ಯದ ರ್ಝೋಕು', 'ಕುಮಾರರಾಮ', 'ಇಣುಕುನೋಟ', 'ಬಂಗಾರದ ಗೆಜ್ಜೆ', 'ಮೀನಿನ ಹೆಜ್ಜೆ', 'ಕ್ವಾಟೆ', 'ಮೃಗಯಾ' ಕಥಾಸಂಕಲನಗಳು. 'ನನ್ನ ರಸಿಕ' ಎಂಬ ಗದ್ಯಗೀತೆ, ಚುಟುಕಗಳ ಸಂಗ್ರಹ, ಸಮಗ್ರ ಕಥೆಗಳು ಹಾಗೂ ಸಮಗ್ರ ನಾಟಕಗಳು ಪ್ರಕಟವಾಗಿವೆ.

ಇವರ 'ವೈಶಾಖ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 'ಮೃಗಯಾ' ಕಥಾಸಂಕಲನಕ್ಕೆ ೧೯೪೯ರ ಅತ್ಯುತ್ತಮ ಕಥಾಸಂಕಲನ ಪ್ರಶಸ್ತಿ, ೧೯೯೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪುರಸ್ಕಾರ. ೧೯೯೪ರಲ್ಲಿ ಮಂಡ್ಯದಲ್ಲಿ ನಡೆದ ೬೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ಚದುರಂಗರೇ ನಿರ್ದೇಶಿಸಿ, ನಿರ್ಮಾಣ ಮಾಡಿದ 'ಸರ್ವಮಂಗಳಾ' ಚಿತ್ರದ ನಿರ್ದೇಶನ, ಕತೆ, ಚಿತ್ರಕಥೆಗಾಗಿ ಮತ್ತು 'ಉಯ್ಯಾಲೆ' ಚಿತ್ರದ ಸಂಭಾಷಣೆಗಾಗಿ ಪ್ರಶಸ್ತಿ ದೊರೆತಿದೆ.

೧೯೯೮ರಲ್ಲಿ ಅಕ್ಟೋಬರ್ ತಿಂಗಳ ಹತ್ತೊಂಬತ್ತನೇ ತಾರೀಖಿನ ದೀಪಾವಳಿಯ ಸದ್ದಿನಲ್ಲಿ ಚದುರಂಗರು ಸದ್ದಿಲ್ಲದೆ ಕಣ್ಮರೆಯಾದರು.

# ಪರಿವಿಡಿ


| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | iv |
| ಎರಡು ನುಡಿ | v |
| ಅಧ್ಯಕ್ಷರ ಮಾತು | vi |
| ಪ್ರಕಾಶಕರ ಮಾತು | vii |
| ಆಯ್ಕೆ ಸಮಿತಿ | ix |
| ಮುನ್ನುಡಿ | |
| ಅರ್ಪಣೆ | |
| ಅರಿಕೆ | |
| | |
| ವೈಶಾಖ | ೧–೩೯೨ |

# ವೈಶಾಖ

# ೧

ಓಣೀಲಿ ಸಣ್ಣ ಕಲ್ಲೊಂದ್ನ ವದೀತ ಬತ್ತಾ ಇದ್ದ ಲಕ್ಕನ ತಲೇಲಿ ಎದ್ದೊತ್ನಿಂದ ಒಂದೇ ಇಚಾರ ಚಕ್ಕಲುಬಕ್ಕಲು ಆಕಿತ್ತು. ಬೊಡ್ಡಿ ಮಕ್ಕಳು ಉದ್ದಕ್ಕೂ ನಮ್ಮ ಲಗ್ಗೆ ಚಂಡು ಮಾಡ್ಕಂಡುಬುಟ್ರಲ್ಲ ಅಂತ ಕ್ವಾಪದಿಂದ ಕ್ಯಾಕರ್ಸಿ ಪಕ್ಕದ ಬೇಲಿಗೆ ಉಗುಳ್ದ. ಪಂಚಾತಿಯೋರು ಮಾಡೋ ನ್ಯಾಯದ ದಾಳ ಉಳ್ಳೋದು ಕೊನೀಕೆ ಉತ್ತಮರ ಕಡೀಕೇಯ... ತುಸು ಗಟ್ಯಾಗೆ ಗೋಣಾಗ್ದ...

ಗೌಡಯ್ಯ ಗಂಗಪ್ನ ಅಟ್ಟೀಲಿ ಇನ್ನೂರು ರೂಪಾಯಿ ಸಾಲಕಾಗಿ ಜೀತಕಿದ್ದ ಬುಂಡನ ಹೈದ, ಆವಯ್ಯ ಗೋಳುಕಿಚ್ಚು ಉಯ್ಯಿಕಾಳಾದ ತಡೀನಾರ್ದೆ, ತಿಂಗಳೊಪ್ಪತ್ನಲ್ಲಿ ಇಂದಕೇ ವಾಪಸು ಬಂದಿದ್ದ... ಜಟಜಟ್ನೆ ಗಂಗಪ್ಪ ಪಂಚಾತಿ ಸೇರ್ಸಿ, ಬುಂಡನ ಹೈದ ತಮ್ಮಟ್ಟೀಗೇ ಜೀತಕೆ ಬರಬೋಕೂಂತ ತಗಾದೆ ಮಾಡ್ದ...

ಪುನಾ ಅರವಟ್ಟಿಗೆ ಬಿಲ್‌ಕುಲ್ ನಾ ವೋಗಕ್ಕಿಲ್ಲ. ಜಲುಮೆ ಮಾಡಿದ್ರೆ ನ್ಯಾಣು ಆಕತ್ತೀನಿ–ಮುಸ್ಕರ ಊಡ್ತು ಹೈದ... ಮಗನ ಪಟ್ಟು ಬುಂಡನ್ಗೆ ಆಕಾಸ ಬೂಮಿ ಏಡ್ನೂ ಒಂದು ಮಾಡ್ತು. ಚಿಂತೆ ಆತ್ತಿ ಸುಮ್ಕೆ ಕುಂತ.

ಆಗ ಕ್ವಾಟೆ ಬುಳ್ಳಪ್ಪ ಎದೆ ಚಾಚಿಗೊಂಬಂದು ಚೌಕಾಸಿ ಮಾಡಿ ಕ್ವಡಬೇಕಾಗಿದ್ದ ಅರ್ದ ಅಣಕೇ ಹೈದ್ನ ವಸಕ್ಕೆ ತಕ್ಕಂಡಿದ್ದ... ಆ ಕ್ಸಣಕೆ ಉರುದು ಉಪ್ಪಾದರೂವೆ ಗಂಗಪ್ಪ ಜೋಗಿ ಅಂಗೆ ಕಯ್ಯ ಜಾಡಿಸಿ ತೆಪ್ಪಗಾದ...

ಎತ್ತಾಗಿ ವೊಂಟೆ ಮೊಗ?– ಯಾರೋ ಕೇಳಿದ್ದಕೆ, ಇಂಗೇ ವೊಂಟೆ ಅಂದ ಲಕ್ಕ ಓಣೀಲಿ ಬಲಚೂರಿ ತಿರುಗ್ದಾಗ ವೊಲಗೇರಿ ಇಂದ್ಕೇ ಉಳೀತು. ಲಕ್ಕನ ಯೋಚ್ಣೆ ನಡೀತಾನೆ ಇತ್ತು...

ಗೌಡಯ್ನ ಗಂಗಪ್ಪ, ಕ್ವಾಟೆ ಬುಳ್ಳಪ್ಪ ಏಡು ಆಳೂವೆ ವಬ್ಬರಿಗೊಬ್ರು ಮಚ್ಚರಿಸೋದ ಕಂಡು– ಇವ್ರು ಪಾಂಡವರ ಕೌರವ್ರ ವಂಸದೋರೆ ಇರಬೇಕು ಅಂತಿದ್ರು ಊರಿನೋರು!

ಜೀತದ ಆಳ ಹಾರ್ಸಿ ಬುಳ್ಳಪ್ಪ ಉರಿಯೊ ಕೊಳ್ಳೀಗೆ ಮತ್ತೊಂದು ಕೊಳ್ಳೀನೆ ಒಟ್ಟಿದ್ದ. ಆದ್ರೆ ಕೊಳ್ಳೀ ಉರಿ ಘಾಟಿ ಬುಳ್ಳಪ್ಪನ್ನೇನೂ ತಟ್ಟೊವಂಗೇ ಇರ್ನಿಲ್ಲ. ಅದ್ಕೆ ಗುರಿಯಾದೋನು ಮಾತ್ರ ಬುಂಡನ ಹೈದ್ನೇಯ!... ಹಿಂದ್ನ ಸ್ವಾಮಾರ

ನಸುಕ್ನಲ್ಲೆ ಗಂಗಪ್ಪ ಒಂದು ಬೀಡಿಕಟ್ಟು ಕ್ವಟ್ಟು ಹೈದ್ನ ಪುಸಿ ಮಾಡಿದ್ದ.

"ನಮ್ಮಾಳಿನ ಜ್ವತ್ಗೆ ವಸಿ ನಮ್ಮ ತ್ವಾಟಕೆ ವೋಗ ಬಾರ್ಲ. ಅಲ್ಲಿ ಅವ್ನು ತೆಂಗಿನ ಮರ ಅತ್ತಿ ಒಂದೀಟು ಕಾಯ ಕೀಳ್ತಾನೆ. ಕಾಯಿ ಮರದಿಂದ ಕೆಳೀಕೆ ಬೀಳ್ತಿದ್ದಂಗೇಯ ಆ ಕಾಯ್ಗಳ ವಚ್ಚೋರಿ ಗುಡ್ಡೆಮಾಡು. ಆಮ್ಯಾಕೆ ಗೋಮಿ ಚೀಲಗಳ್ಗೆ ತುಂಬಿ ನಮ್ಮಾಳಿನ ಜ್ವತ್ಗೆ ಅವನ್ನ ವೊತ್ತುಗಂಬಂದು ನಮ್ಮಟ್ಟಿ ಅಜಾರಕೆ ಅಕಿಬುಟ್ರೆ, ಇವೊತ್ತು ನಮ್ಮಟ್ಟೀಲೆ ನಿಂಗೂಟ... ಅದ್ಯಾಕ್ಲ ತಲೆ ಕೆರೀತ ನಿಂತೆ?... ಇವೊತ್ತು ಬಸವಜಯಂತಿ ಅಲ್ಲವೇನ್ಲ? ಅದ್ಕೆ ಒಬ್ಬಟ್ಟು ಪಾಯಸ್ದ ಊಟ. ಅದರಾಗು ನನೆಡತಿ ಕಯ್ಯಿ ಅಡುಗೆ ಗಮ್ಮತ್ನ ನಿಂಗೆ ವೊಸದಾಗೇನು ಯೋಳಬೇಕಾಗಿಲ್ಲ, ಅಲ್ಲವೇನ್ಲ? ... ಬುಳ್ಳಪ್ನ ಅಟ್ಟೀಲಿ ಎಂಗಿದ್ರೂವೆ ಅಬ್ಬ ಮಾಡಕ್ಕಿಲ್ಲ, ನಿಂಗೊತ್ತಿಲ್ವಾ?– ಈ ಜೆನಾನೆ ಹ್ವಾದ ಸಾಲ್ನಲ್ಲಿ ಅವ್ರಯ್ಯ ಬೆನ್ನುಪಣಿ ಆಗಿ ತೀರಿಕೋನಿಲ್ವ... ಅದುಕೆ?" ಇಂಗೆ ಇವರ್ನಿ ಆ ಹೈದ್ನ ವಪ್ಪಿಸ್ದ... ಲಕ್ಕನ ಯೋಜ್ನೆ ನಡದೇ ಇತ್ತು...

ತ್ವಾಟದಲ್ಲಿ ತೆಂಗಿನ ಮರ ಅತ್ತಿದ ಗಂಗಪ್ಪ ಆಳು ಸುದ್ದ ಪಟಿಂಗತ ಅವ್ನ ಅಯ್ಯ ಯಾರೋ ಅವ್ವ ಯಾರೋ ಊರ್ನಲ್ಲಿ ಯಾರೂ ಆರೀರು. ಕೊಡಗಿನ ಸನಿವಾರಸಂತೇಲಿ ವೊಟ್ಟೆಗಿಲ್ದೆ ಬೀದಿ ಬೀದಿ ಅಲೀತಿದ್ನಂತೆ. ಆಳಿಲ್ಲದೆ ಪಜೀತಿ ಪಡ್ತಿದ್ದ ಗಂಗಪ್ಪ್ನ ಗೋಳು ನ್ವಾಡನಾರ್ದೆ ಅವ್ನ ಕೊಡಗಿನ ಭಾವ, ಇಲ್ದೇ ಇಲ್ಲದ್ಕೆ ಅಲ್ಲು ಬೀರನೆ ಗಂಡಾಂತ, ಆ ಗೆಣೆಯನ್ನೆ ಸಾಗಾಕಿದ್ದ...

"ಮುಟ್ಟಿಸಿಕೊಂಡುಬಿಟ್ಟೆಯಲ್ಲೊ ರಂಡೆಗಂಡ?... ಮತ್ತೆ ಬಾವಿ ನೀರು ಸೇದಿ, ಮೈ ಮೇಲೆ ಸುರಿದು, ಮಡಿ ಉಡೊ ಹಾಗೆ ಮಾಡಿದ್ಯಲ್ಲೊ, ಪಾಪಿ!"

ಮಡಿ ಎಂಗಸೊಂದು ಮುಲಕ್ದಾಗ, ಬಸವೇಶ್ವರನ ಗುಡಿ ತಿರುವ್ನಲ್ಲಿ ಲಕ್ಕ ಬೆಚ್ಚಬಿದ್ದ...

ತೆಂಗಿನ ಕಾಯ್ಗಳ ಮರದ ಮ್ಯಾಗ್ನಿಂದ ಕೆಡುವ್ತ ಇದ್ದಂಗೆ, ಹೈದ ಅವ್ನ ಒಂದೋಂದಾಗಿ ಅರ್ನಿ ಆರ್ನಿ ಎತ್ತಿವಕ್ಕಡೆ ರಾಸಿ ಮಾಡ್ತಿದ್ದ. ಇನ್ನೂವೆ ಕೆಳಗೆ ಬಿದ್ದಿದ್ದ ಕಾಯ್ಗಳ ಆರುಸ್ತ ಇದ್ದಂಗೇಯ ಮರದ ಮ್ಯಾಗ್ನಿಂದ ಒಂದು ಇಡೀ ತಾರ್ನ ಕಾಯ್ಗಳು ತಟಪಟ ಬೀಳಕ್ಕೆ ಸುರು ಆದೊ. ಹೈದ ಆಯ್ತಿದ್ದ ಜಾಕ್ಕೆ ಗುರಿ ಅಕಿ, ಮರದಮ್ಯಾಗೈ ಕುಂತ ಆಳು ಆ ಹೈದನ ಮ್ಯಾಲೆ ಸರ್ಯಾಗಿ ಬೀಳೊತರ, ತಾರ್ನ ಮಚ್ನಿಂದ ಕ್ವಚ್ಚಿ ಕೆಡುವ್ದ. ತನ್ನ ಮುಂಡ್ಕೆ ಇಂದ್ಕೆ, ಆ ಚೋರಿ ಈ ಚೋರಿ, ಕಾಯ್ಗಳು ದಪ್ಪಡಿ ದುಪ್ಪಡಿ ಬೀಳೋದ ಕಂಡು ಬೆಕ್ಕಸ ಬೆರುಗಾದ ಹೈದ, ಒಂದು ಪಕ್ಕಕ್ಕೆ ವೋಳ್ಳಿ ಬಿದ್ದ. ಅದ್ರೂವೆ ಒಂದು ಕಾಯಿ ಅವ್ನ ಬಲದ ತೋಳಿನ ಮ್ಯಾಲೆ, ಏಡು ಬಲದ ಮಂಡಿ ಮ್ಯಾಡೆ ಅಪ್ಪಳಿಸ್ದೊ... ಅಯ್ಯೋ ಸತ್ತೆ ಸತ್ತೊದೆ,

ಚೀರ್ತ ಅಲುಗಾಡ್ದೆ ಬಿದ್ದು ಕತ್ತು ಹೈದ. ಅಕ್ಕಪಕ್ಕದ ತ್ವಾಟ ವೊಲದಲ್ಲಿ ಕೇಮೆ ಮಾಡ್ತಿದ್ದ ಮಂದಿ ತಳಕೆ ಓಡಿಬಂದು ಜಮಾಯಿಸ್‌ದ್ರು...

ಲಕ್ಕ ಮಾರಿಗುಡಿ ಮುಂದ್ಕೆ ಬಂದಾಗ ವಳೂಗಡೆ ಜಮಾಯಿಸ್ದ ಆಸಾಮಿಗೋಳು, "ಇಷ್ಟೀಟು ಅಡಕ್ಕೆ ಬತ್ತೀಯೆನ್ಲ?" ಕರದ್ರು, ಅವರಲ್ಲೊಬ್ಬ ಕುಡುದ ಅಮಲ್ನಲ್ಲಿ ಪದಯೋಳ್ತಿದ್ದ:

ರಾಗಿ ಇಟ್ಟಿನ ಮುದ್ದೆ
ಮಾರಿಗುಡಿ ನಿದ್ದೆ
ಇದ್ದರೆ ಇದ್ದೆ
ಎದ್ದರೆ ಎದ್ದೆ...

ಹೈದ್ನ ಮೈಸೂರು ದೊಡ್ಡಾಸ್ಪತ್ರೆಗೆ ತಟಾಯಿಸ್‌ದ್ರು–ಮೂಲೆ ಪರೀಕ್ಷೆ ಮಾಡೊ ದಾಕ್ತರು–"ಬಲದ ತೋಳು, ಮತ್ತೆ ಮಂಡಿ ಮೂಳೆ ಮುರಿದೋಗವೆ" ಅಂದರು. "ಒಂದು ಪಕ್ಸ ಆ ತೋಳು ಸರಿಯಾಗಬೈದು. ಆದ್ರೆ ಮಂಡಿ ಲಿಪೇರೀ ಕಸ್ಟ" ಅಂತಾನು ಅಂದರು...

ಮಾಮೂಲ್ನಂಗೆ ಪಮಚಾತಿ ಸೇರ್ತು. ವೊಗೆಸೊಪ್ನ ವೇರೋಸ್ ಸಾವುಕಾರ್‍ರು ಬುಡನ್ ಸರೀಪು ಸಾಬರಿಂದ ಎಂಟು ಸಾವ್ರ ರೂಪಾಯಿ ಸಾಲ ತಂದು ಊರ್‍ನ ಐನಾತಿ ಕುಳಗೋಳಿಗೆಲ್ಲ ವೊಗಸೊಪ್ನ ಚಪ್ಪರ ಕಟ್ಟಕ್ಕೆ ವೋಟೋಟು ಬಿತ್ತಿದ್ರಿಂದ ಪಂಚಾತೀಲಿ ಗಂಗಪ್ಪಂದೇ ಮೇಲುಗೈ ಆಯ್ತು. ಬುಂಡಪ್ನ ಆಳಿನ ಇಲಾಜಿಗೆ ಕೇವ್ಲ ಆಯವತ್ತು ರೂಪಾಯಿ ದಂಡತೆತ್ತು ಗಂಗಪ್ಪ ಪಾರಾದ...

ಗಂಗಪ್ಪ ಆಳುಮಗ ರಾಚನ ಸರಾಪು ಅಂಗಡೀಲಿ ಭರ್ತಿ ಕುಡುದು ಉಚ್ಚುಚ್ಚಾಗಿ ಒದರಾಡ್ದಾಗ, ಕಿವಿಂದ, ಕಿವಿಗೆ ಬಿದ್ದ ಸುದ್ದಿ ಲಕ್ಕನ್ನೂ ಮುಟ್ಟಕ್ಕೆ ತಡ ಆಗ್ನಿಲ್ಲ.

ಪುನಾ ಬುಳ್ಳಪ್ಪ ಪಂಚಾತಿ ಸೇರುಸ್ದ. ಕುಡಿದೋನ ಮಾತೂಂತ ಪುನಾ ಗಂಗಪ್ನ ಬಾವುಟಾನೆ ಮ್ಯಾಲಾಯ್ತು. ಮಯಸುರು ಆಸ್ಪತ್ರೇಲಿ ಹೈದ ಪಳಾಸ್ಪರು ಸುತ್ತುಸಿಕಂಡು ನಾಕು ತಿಂಗಳು ಅಳ್ಳಾಡ್ದೆ ಮಂಚದಲ್ಲೆ ಸುಮ್ಕೆ ಬಿದ್ದಿರಬೇಕೂಂತ ಆಯ್ತು...

ಸಂಕಟದಿಂದ ಈ ಬಾರಿ ಲಕ್ಕ ಉಗುಳ್ದ ತೊಂಟೆ ಪುಟ್ಟಾಚಾರಿ ಅಟ್ಟಿ ಮುಂದಿನ ತುಂಬೆ ಗಿಡದ ಮ್ಯಾಲೆ ಬಿದ್ದು ತೂಗಾಡ್ತು.

"ಹಯ್ಯೊ ಹಯ್ಯೊ ಹಯ್ಯೊ... ಹೋಯ್ತಲ್ಲ, ಹೋಯ್ತಲ್ಲ... ಕಾಲು

ಮುರಿದಿರೊ ನನ್ನ ಹಸುವಿನ ಮೇಲೆ ಸವಾರಿ ಮಾಡಲಿಕ್ಕೆ ಶುರು ಮಾಡ್ರಲ, ಈ ಹಾಳು ಕಡಸು... ಇದರ ವಂಶ ನಿರ್ವಂಶವಾಗ..."

ಈ ಉಯ್ಲು ಆಚೆ ಬೀದಿ ಬ್ರಾಂಬರ ಕೇರಿಂದ ಒಂದೆ ಉಸುರ್ಗೆ ಬತ್ತಾ ಇತ್ತು. ಲಕ್ಕ ಆ ಬೀದಿಗೆ ವೊಳ್ಳಿ ನ್ವಾಡ್ದಾಗ, ಒಂದು ಕುಂಟೊ ಮುದಿ ಆಸೀನ ಮ್ಯಾಲೆ ಒಂದು ಎಣ್ಣು ಕಡಸು ದಪಾ ದಪಾ ಅತ್ತಕ್ಕೆ ಪರ್ಯತ್ನ ಮಾಡ್ತಿತ್ತು. ಆ ಮುದಿ ಅಸೀನ ಒಡತಿ, ಮಡಿ ಎಂಗಸು, ತನ್ನಟ್ಟಿ ಜಗುಲಿ ಕಂಬ ತಬ್ಬಿ ತಲೆ ತಲೆ ಬಡಿಕೊತ್ತಿತ್ತು. ಎದುರಟ್ಟಿ ವಳುಗ್ನ ಪಡಸಾಲೇಲಿ ಬ್ರಾಂಬರ ಹೈಕಳು ನಿಜ್ವ ಯೋಳೊವಂಗೆ ಅದ್ಯಾವುದೊ ಮಂತ್ರವ ಬಾಯಿಪಾಟ ಮಾಡಿಕತ್ತಿದ್ರೂ.

"ಬೆದೆಗೆ ಬಂದಿರೊ ಕಡಸಿಗೆ ಹೋರಿ ಕೊಡಿಸದೆ ಹಾಗೇ ಬಿಟ್ಟರೆ, ಆದಿನ್ನೇನು ಮಾಡುತ್ತೆ? ತನ್ನ ತೀಟೆ ತೀರಿಸಿಕೊಳ್ಳಲಿಕ್ಕೆ, ಸಿಕ್ಕುಸಿಕ್ಕಿದ ಹಸುಗಳ ಮೇಲೆ ಹಾರುತ್ತೆ... ಮುಖ್ಯ, ಆ ಕಡಸನ್ನ ಸಾಕ್ತಿರೊ ಜನಕ್ಕೆ ಗ್ನ್ಯಾನ ಇರಬೇಕು..."

ಆರುವರ ಮುದುಕಿ ಮೂಲೆ ಮನೆ ದಿಕ್ಕೆ ಕೆಂಗಣ್ಣ ಬೀರತ, ಮಾತ್ಮಾತ್ಗೂ ಜಗಲಿ ಕಂಬವ ಮುಸ್ಟಿಯಿಂದ ಕುಟ್ತ, ಊಳಿಡ್ತಿತ್ತು. ಸಟೀಗೆ ವಾರೆ ಮಾಡ್ದ ಕದೀನ ಸಮದಿನಿಂದ ವೊರಕ್ಕೆ ಇಣುಕ್ಕೆ ಪಣಕಿ ನ್ವಾಡ್ತಿದ್ದ ಮೂಲೆಮನೆ ಎಂಗಸು, ಆ ಮಾತು ಕ್ಯಾಳುನಾರದೆ, ನಾಚಿ ಕದ ಮುಚ್ಚಿದಳು.

ಲಕ್ಕ ಓಡೋಗಿ, ಕಯ್ಲಿದ್ದ ಕೋಲ್ನಿಂದ ಕಡಸ್ಗೆ ನಾಕೇಟು ಬಿಗ್ದು, ಅದ್ನ ಮೂಲೆಮನೆ ಇಂಚೊರಿ ಕ್ವಟ್ಟಿಗ್ಗೆ ಅಟ್ಕೊಯ್ದು, ಗೂಟಕ್ಕೆ ಕಟ್ಟಾಕಿದ. ಅವ್ನು ಕತ್ತೆತ್ತೂನೂವೆ ಇತ್ತಿಲ ಬಾಗ್ಲ ಚೌಕಟ್ಟು ತನ್ನೇಡು ಕಯ್ಯಿಲೂ ಇಡುದು ನಿಂತಿದ್ದ ರುಕ್ಮಿಣವ್ವ ಕಣ್ಣಿಗೆ ಬಿದ್ಲು.

"ಆ ಲಕ್ಷಮ್ಮನೋರ ಬಾಯಿ ತೆರೀತು ಅಂದರೆ, ನಮ್ಮೂರ ಮುಂದಿನ ಹೆಬ್ಬಾಗಿಲು ತೇರಿತು ಅಂದ ಹಾಗೇನೇ!... ಆ ಮುದುಕಿ ಏನಾರು ನೆಪತೆಕ್ಕೊಂಡು ಯಾರ ಬಗ್ಗೆಯಾದರೂ ಬೊಬ್ಬೆಯಿಡ್ತಾ ಇರಬೇಕು. ಒಂದು ಪಕ್ಷ ಅಂಥ ಅವಕಾಶ ಸಿಕ್ಕದೇ ಹೋದರೆ, ಬಹಳ ಹಿಂದೆಯೇ ತೀರಿಹೋದ ತನ್ನ ಗಂಡ ಜೀವನದ್ದುದ್ದಕ್ಕೂ ತನಗೆ ಹಾಗೆ ತೊಂದರೆಕೊಟ್ಟ ಹೀಗೆ ಗೋಳು ಹುಂಯ್ದು–ಅಂತ ಮನೆಮನೆಗೂ ಹೋಗಿ ಡಂಗುರ ಸಾರಬೇಕು...ಅಂತು ಹೀಗೆ ಏನಾರ ರಂಪ ಮಾಡದಿದ್ರೆ, ತಿಂದ ಅನ್ನ ಅವರಿಗೆ ಮೈ ಹತ್ತುಲ್ಲ... ಆದರೆ, ಅವರಿಗೆ ಸಮಯ ಬಿದ್ದು ಯಾವುದಾದರೂ ಸಣ್ಣ ಪುಟ್ಟ ಸಾಮಾನು ಬೇಕಾದಾಗ ಮಾತ್ರ, ಪೂಸಿ ಮಾಡಿಕೊಂಡು ಬರ್ತಾರೆ!... ನಮ್ಮಿಂದಲೆ ಸಹಾಯಪಡೆದು, ನಾವು ಕೊಡುವುದೇನಾದರೂ ಕಿಂಚಿತ್ ಕಡಿಮೆಯಾದರೆ, ನಮ್ಮನ್ನ ಹೀನಾಮಾನ ದೂರುವ

ದುರುಳ ಸ್ವಭಾವ!... ಏನಾದರೂ ಆಗ್ಲಿ, ಸದ್ಯ ನೀನು ಬಂದು, ಒಂದ ದೊಡ್ಡ ರಂಪದಿಂದ ನನ್ನನ್ನ ಪಾರುಮಾಡಿದೆ..."

ಬೆನ್ನಿಗೆ ಬಿದ್ದ ಅಕ್ಕ ತಂಗೆಮ್ಮದೀರಂಗೆ ಕಣ್ಣಾಡುಸ್ತ ಪಿರೀತ್ಯಿಂದ ರುಕ್ಮಿಣವ್ವ. ತುಸು ವೊತ್ತಿಗೆ ಮುಂಚೆ ಉತ್ತುಮರು ಅನ್ನುಸಿಕೊಂಡೋರ ಮ್ಯಾಲೆ ಲಕ್ಕಂಗಿದ್ದ ಕ್ವಾಪ, ರುಕ್ಮಿಣವ್ವ ಕಾಣ್ತಿದ್ದಂಗೆ ಆರಿ ತಣ್ಣಗಾಯ್ತಾ ಬತ್ತು. ಅವಳ್ನ ಕಂಡಾಗನೆಲ್ಲ, ಉತ್ತಮರಾಗೂ ವಸಿ ಜನ ವಳ್ಳೆಯೋರು ಅವರೇಂತ ಅವನ್ಗೆ ಅನ್ನುಸ್ತಾನೆ ಇತ್ತು. ರುಕ್ಮಿಣವ್ವನಂತೂ ಯಾವ ವೊತ್ತಾದರೂ ಸೈ, ಲಕ್ಕನ್ನ ಬಾಕಿಯೋರಂಗೆ ಕೀಳಾಗಿ ಕಂಡಿರನಿಲ್ಲ. ಅಲ್ಲದೇಯ ಆರೇಳು ತಿಂಗ ಇಂದ್ಕೆ, ಅವ್ವಂಗೆ ಸಕತ್ ಎಂಟು ಜಿನ ಜರ ಕಾದು ಚಾಪೆ ಬುಟ್ಟು ಏಳನಾರದೇ ಇದ್ದಾಗ, ಈ ಮಾತಾಯ್ಗೆ ಗ್ವತ್ತಾಗಿ, ತನ್ನ ತಾವೇ ತನ್ನಯ್ಯಂಗೆ ಯೋಳಿಕಳಿಸಿ, ಅವ್ನ ಕಯ್ಲಿ ಅತ್ತು ರೂಪಾಯಿ ಇಟ್ಟು, ಮೊದ್ಲು ಪಂಡಿತರ ಕರೆಸಿ ನಿನ್ನೆಡತೀಗೆ ಇಲಾಜು ಮಾಡಿಸೂಂತ ಯೋಳಿದ್ಲು, ಮುಂದುಕೆ, ಅವ್ವನ ಕಾಯ್ಲೆ ವಾಸ್ಯಾಗಿ, ಅಯ್ಯ ಯಾರ ಕುಟ್ಟೊ ಸಾಲ ತಂದು ಅಣವ ವಾಪಸು ಮಾಡಕ್ಕೋದರೆ, "ಇರ್ಲಿ, ಇಟ್ಟುಗೊ. ನಿನ್ನ ಮಗ ಆಗ ಈಗ ಬಂದು ಚೂರುಪಾರು ಕೆಲ್ಸ ಮಾಡಿಕ್ವಡ್ತಾನೆ ಇರ್ತಾನೆ. ಹಂಗೆ ನೋಡಿದ್ರೆ ನಾನೇ ನಿಮಗೆ ಇನ್ನೂ ಎಸ್ಟೋ ಹಣ ಕೊಡಬೇಕು"– ಅಂದುಬುಡೋದ?

ಅದ್ಕೇ ಸಿಬ್ರಿ ಇಲ್ಲದೆ, ಇಂಗೇ ಯಾವಾಗಲಾರೂ ಬಿಡತಿ ಮಡಿಕಂಡು ಇವುರಟ್ಟಿ ತಾವಿಕೆ ಬಂದು ರುಕ್ಮಿಣವ್ವ ಯೋಳ್ದ ಅದೂ ಇದೂ ಕೆಲ್ಸ ಮಾಡಿ ಕ್ವಟ್ಟು ವೋಯ್ತಿದ್ದ...ಅವಳತ್ರ ಯಾವುದಾದರೂ ಇಸ್ಯ ಪರಸಂಗ ವೊಡೀಬೇಕಾದರೂ ಆಸ್ಟೇಯ–ಲಕ್ಕಂಗೆ ಬೋ ಸರಾಗ!

ಕಡಸಿನ ಮುಂಚೋರಿ ಗೊಂತಿಗೆ ಒಂದು ತಬ್ಬು ಉಲ್ಲಾಕಿ ಮಾತೆತ್ದ:

"ನೀವೇನೆ ಅನ್ನಿ ಅಮ್ಮಾರೆ. ಈಟು ಜಿನೂವೆ ನಿಮ್ಮ ಕಡಸ್ಗೆ ವೋರಿ ಕಟ್ಟಿಸದೆಯ ಇಂಗೆ ಸಿಕ್ಕಸಿಕ್ದ ದನೀನ ಮ್ಯಾಕ್ಕೆಲ್ಲ ಅತ್ತಕ್ಕೆ ಬುಟ್ಟಿರಾದು, ನಂಗ್ಯಾಕೊ ವೈನಾಗಿ ಕಾಣ್ನಿಲ್ಲ."

ಬಳೆಯಿಲ್ದ ಬೋಳುಗೈ ಮೇಲೆ ಬೆರಳಾಡಿಸುತ್ತ ರುಕ್ಮಿಣಿ.

"ನಾನೇನು ಮಾಡಲಿ?... ಎಂಡು ದಿವಸ ಆಯ್ತು ನಮ್ಮಾಳು ಸೊಸಿಯ ಜ್ವರ ಅಂತ ಮಲಗಿ. ಈ ಕಡೆ ಸುಳಿದು ನೋಡಿಲ್ಲ. ನಾನು ಯಾರುಯಾರನ್ನೋ ಗೋಗರೆದು ಅವರ ಕೈಲಿ ಕೊಟ್ಟಿಗೆ ತೊಡೆಸಿ, ಕಾಡಿಗೆ ದನ ಅಟ್ಟಿಗೊಂಡು ಹೋಗೋಕೂ ಏರ್ಪಾಡು ಮಾಡಿದ್ದೆ. ಆದರೆ ಆ ಮಾಚನ ಹೆಣ್ಣು ಇಷ್ಟು ದಿವಸ ಬರ್ತಿದ್ದದ್ದು ಇವತ್ತೇ ಈ ಕಡೆ ತಲೆ ಹಾಕಿಲ್ಲ... ನೆನ್ನೆ ನಾನೇ ಆ ಹುಡುಗ

ಸೊಸಿಯ ಹೇಗಿದಾನೆ ನೋಡೋಣಾಂತ ನಿಮ್ಮ ಹೊಲಗೇರಿಗೆ ಹೋದೆ. ಅವರ ಗುಡಿಸಲ ಮುಂದೆ ಆರಾಮವಾಗಿ ಬಿಸುಲ ಕಾಯ್ತಾ ಕೂತಿದ್ದ ಸೊಸಿಯ ನನ್ನ ಮುಖ ಕಂಡಕೂಡಲೆ, ತನ್ನ ಗುಡಿಸಲೊಳಗೆ ಗುಡಕ್ಕನೆ ನುಸುಳಿದ. ನಾನು ನಿಂತೇ ಇದ್ದೆ. ಅವನವ್ವ ಗುಡಿಸಲಿನೊಳಗೇ ಇದ್ದು ತನ್ನ ಕತ್ತು ಮಾತ್ರ ಇಚೆಗೆ ತೂರಿಸಿ 'ಬೇಜಾರು ಮಾಡಿಕೊಬ್ಯಾಡಿ ಅಮ್ಮಾರೆ, ಚೆಂಗೂಲಿ ಹೈದ. ನಾಯೇನು ಮಾಡ್ಲಿ?... ಈ ಹಕ್ಕಳ ಕಟ್ಟಿಕಂಡು ನಂದೂ ಹ್ವಡಬಾಳು...ದನ ಬುಡೊ ವ್ಯಾಳ್ಯಾಕ್ಕೆ ನಾಳೀಕೆ ನಾನೇ ಒದ್ದು ನಿಮ್ಮಟ್ಟಿ ತಾವಿಕೆ ಅವ್ನ ಕರಕೊಂಬತ್ತೀನಿ. ಈ ಜಿನ ರವೋಟು ಎಂಗಾರು ನಿಮ್ಮ ಬದುಕ ನೀಸುಗನ್ನಿ" ಅಂದ್ಲು. ಆದ್ರೆ ಇಲ್ಲೀನಕ ಈ ಕಡೆ ಮುಖ ಹಾಕಿಲ್ಲ. ಇವೊತ್ತು ಕಸ ಹಾಕ್ಲಕ್ಕೆ, ದನ ಕಾಡಿಗೆ ಅಟ್ಟಿಗೊಂಡು ಹೋಗಲಿಕ್ಕೆ ಯಾರನ್ನ ಹಿಡಿಯಲೀಂತ ಯೋಚಿಸ್ತಿದ್ದೆ. ನಿನ್ನ ನೆನಪಾಯ್ತು. ನಿನಗೆ ಹೇಳಿಕಳಿಸೋಣ ಅಂತ ಯೋಚಿಸ್ತಿದ್ದೆ. ಅಷ್ಟರಲ್ಲಿ ನೀನೇ ಬಂದೆ... ಇನ್ನು ಆ ಕಡಸಿನ ವಿಚಾರ!– ನಮ್ಮ ಮಾವಯ್ಯನ ನೀನು ಕಂಡೇ ಇದ್ದೀಯೆ. ಅವರು ಹಟ್ಟಿ ಬಿಟ್ಟು ಹೊರಗೆ ಹೋದರೆ ತೋಟದ ಕೆಲಸ, ಸಂತೆ ದಿವಸ ಪ್ಯಾಟೆ, ಅಡಿಕೆ ವ್ಯಾಪರಕ್ಕೆ ಶಿವಮೊಗ್ಗದವರೆಗೂ ಒಂದೊಂದು ಸಾರಿ ಹೋಗೋದುಂಟು. ಅವರು ಹಟ್ಟೀಲೆ ಇದ್ದರೆ ಪೂಜೆಪುನಸ್ಕಾರ, ಜಪತಪ, ಇವೇ ಆಯ್ತು– ನಮ್ಮ ಸುಶೀಲತ್ತೆಯು ಹುಷಾರಿಲ್ಲದೆ ಹಾಸಿಗೆ ಹಿಡಿದು ಮಲಗಿಬಿಟ್ಟಿದ್ದಾರೆ. ಇನ್ನು ನಮ್ಮ ಸರಸಿ– "ಎನ್ನುತ್ತಿದ್ದ ಹಾಗೆ," ಅದು ಬುಡಿ ಆಟುಗುಳಿ ಎಣ್ಣು" ಅಂತಂದ ಲಕ್ಕ.

"ನಿಮ್ಮ ಗುಡ್ಲಲ್ಲಿ ತಂಗಳ ಆಯಿತೇನೋ?" ಕೇಳಿದ್ದಕ್ಕೆ, ಆಯಿತು ಅನ್ನೂವಂಗೆ ಲಕ್ಕ ತಲೆ ಕುಣಿಸ್ದಾಗ "ಸುಳ್ಳು ಸುಳ್ಳು" ಅಂದ ರುಕ್ಮಿಣಿ, ಮನೆಯೊಳಗೆ ನಡೆದು, ಎರಡು ಅಕ್ಕಿರೊಟ್ಟಿಯ ಮೇಲೆ ಬದನೆಕಾಯಿ ಎಣ್ಣೆಗಾಯಿ ಹಾಕಿ ತಂದು, "ತೆಗೆದುಕೊ" ಎಂದು ಅವನ ಕೈಗಿಟ್ಟಳು.

"ಅಂತ ನಿಮ್ಮಟ್ಟೀಗೆ ಬಂದ್ರೆ ಯೇನಾರ ಕ್ವಾಡ್ತಾನೆ ಇರ್ತೀರಿ, ಬಾಯಾಡಕ್ಕೆ. ನಂಗೆ ನೆಪ್ಪಿರೂವಂಗೆ ಯಾವತ್ತೂ ನೀವು ತೆಪ್ಪಿಸನೇ ಇಲ್ಲ."

ಚೂರು ರೊಟ್ಟಿ ಮುರುದು ಎಣ್ಣೆಗಾಯಿಗೆ ಅದ್ನ ಅದ್ದಿ ತಿನ್ತಾ ತಿನ್ತಾ ಲಕ್ಕ ಯೋಳಿದ. ಅವನ ಜ್ವತ್ಗೇ ಬಂದು ಪಕ್ಕದಲ್ಲೆ ಹ್ಯಾ ಹ್ಯಾ ನಗರ್ತ ಬಿದ್ದುಕಂಡಿದ್ದ ಅವ್ನ ನಾಯಿ ಬೊಡ್ಡ, ನಾಲಿಗೆಯ ಇರಿದು, ಉದ್ದಕ್ಕೆ ಜೋಲು ಬುಟ್ಟು, ಜೊಲ್ಲು ಸುರುಸ್ತ, ಲಕ್ಕನ್ನೆ ಕಣ್ಣೆಲ್ಲ ಆಸ್ಯಾಗಿ ನ್ವಾಡ್ತ ಇತ್ತು.

"ಅಲಲೆ, ನಿನ್ನ ಮರೆತೇಬುಟ್ಟು ತಿನ್ನಕ್ಕೆ ಸುರು ಮಾಡಿದ್ನಲ್ಲೊ, ಬೊಡ್ಡ!–

ತಕ್ಕ ತಿನ್ನು" ಅಂತ ಒಂದು ಚೂರು ರೊಟ್ಟಿ ಮುರುದು ಲಕ್ಕ ತನ್ನ ನಾಯಿಯ ಮುಂದ್ಕೆ ಎಸ್ದ.

"ತಾಳು, ತಾಳು ನನಗೂ ನಿನ್ನ ಬೊಡ್ಡ ಮರೆತೇಹೋಯ್ತು. ಇನ್ನೊಂದು ಮುರುಕಲ ರೊಟ್ಟಿ ತರ್ತೀನಿ" ಎಂದು– ಲಕ್ಕ "ಬ್ಯಾಡಿ ಬ್ಯಾಡಿ, ಅಮ್ಮಾರೆ. ಇಲ್ಲಿರೂ ವೋಟೆ ಸಾಕು" ಅಂತ ಕೂಗ್ತಿದ್ದರೂ ಕೇಳದೆ– ಸರ್‍ರನೆ ಮತ್ತೆ ಒಳಗೋಗಿ, ಒಂದು ದೊಡ್ಡ ರೊಟ್ಟಿ ಮುರುಕು ತಂದು, ಅದನ್ನು ಚೂರು ಚೂರು ಮಾಡಿ ಬೊಡ್ಡನ ಮುಂದೆ ಎಸೆಯುತ್ತ.

"ಈ ಕಡಸಿಗೆ ಹೋರಿ ಕಟ್ಟಿಸಬೇಕೂಂತ ನಾನು ಪ್ರಯತ್ನ ಮಾಡ್ತಾನೆ ಇದೀನಿ. ಸಮೀಪದಲ್ಲೆಲ್ಲೂ ಹೋರಿ ಸಿಕ್ತಾ ಇಲ್ಲ. ಚೌಡೀಪುರದ ಕಾಳೇಗೌಡರ ಹತ್ತಿರವೆ ಹೋಗಬೇಕು. ಅವರ ಹೋರಿ ತಾನೆ ಈ ಸುತ್ತಿಗೆಲ್ಲ ಪ್ರಸಿದ್ಧಿ. ಆದರೆ ಅಲ್ಲೀವರೆಗೆ ಈ ಕಡಸನ್ನ ಅಟ್ಟಿಗಂಡು ಹೋಗಲಿಕ್ಕೆ ನಮ್ಮ ಮಾವನವರು ಯಾಕೊ ಮನಸ್ಸು ಮಾಡಿಲ್ಲ, ಇನ್ನೂ. ಅವರು ಮನಸ್ಸು ಮಾಡೋತನಕ ಈ ಕಡಸನ್ನ ತಡೆಯೋದು ನನಗಂತೂ ಪರಮ ಕಷ್ಟವಾಗಿದೆ" ಎಂದು ನಿಟ್ಟುಸಿರಿಟ್ಟಳು.

"ನಂಗೆ ಈ ವಾರ ತುಸ ಕೆಲ್ಸ–ಬರೋ ವಾರ ಕಡಸ್ಗೆ ಕಲಗ್ಚು ಉಲ್ಲು ಕಮ್ಮಿ ಆಕಿ. ಒಂದು ನಾಕೈದು ಜಿನ ನವುದು ನಾಚಾರಾಗ್ಲಿ ದನ. ಇಲ್ದೇವೋದ್ರೆ, ಗಬ್ಬ ನಿಲ್ಲಕಿಲ್ಲ ಅನ್ನಾದು ನಿಮಗೂ ಗ್ವತತೇ ಅದಲ್ಲ...? ನೀವೋಟು ಮಾಡಿ. ಆಮ್ಯಾಕೆ ನಾನೇ ಬಂದು ಇದ್ನ ಚೌಡೀಪುರಕ್ಕೆ ಅಟ್ಟಗಂಡೋಗಿ ವೋರಿ ಕ್ವಡಿಸಿಗಂಬತೀನಿ."

ಲಕ್ಕ ಮಾತಾಡ್ತ ಇದ್ದಂಗೆ ಬೀದಿ ಬಾಗ್ಲ ತಟ್ಟಿದ ಸಬ್ದ!... "ರುಕ್ಮಿಣಿ, ರುಕ್ಮಿಣಿ" ಅಂತ ಯಾರ್‍ದೊ ಕೂಗು!...

"ಮಾವಯ್ಯ ಬಂದರು ಎಂದು ಕಾಣುತ್ತೆ. ಹಾಗೇ ಕೊಟ್ಟಿಗೆ ಕಸ ತೊಡೆದು ಹೋಗಪ್ಪ, ಆ ಸೊಸಿಯ ಈಗಲೂ ಬರದೇ ಹೋದರೆ ಮತ್ತೆ ನೀನೇ ಬಂದು ಈ ದಿನ ಕಾಡಿಗೆ ದನಗಳನ್ನ ಅಟ್ಟಿಕೊಂಡು ಹೋಗಬೇಕಾದೀತೋ ಏನೋ ಎಂದವಳೇ ರುಕ್ಮೀಣಿ ಮನೆಯೊಳಗೆ ನಡೆದಳು.

ಕ್ವಟ್ಟಿಗೇಲಿ ಒಂದರ ಪಕದಲ್ಲೊಂದು ಕಟ್ಟಾಕಿದ್ದ ಏಡು ಗೋವು ಹಾದಾಡಕ್ಕೆ ಮುಟ್ಟಿಕಂಡದ್ದೂ. ಸೂರಿಗೆ ಸೆಕ್ಕಿದ್ದ ಕೋಲು ಇರುದು ಏಡಕ್ಕೂ ಪಟ್ಟಾಗಿ ಬಿಗ್ದು ಇತ್ತಲ್ಗೆ ಅಟ್ಟಕಂಡೋಗಿ ದೂರದೂರಕಿದ್ದ ಗೂಡಗಳ್ಗೆ ಆವೇಡ್ನ ಕಟ್ದ. ಆ ಮ್ಯಾಕೆ ಕ್ವಟ್ಟಿಗೆ ವೊಳುಗಿದ್ದಯೆಲ್ಲ ಎಮ್ಮೆ ದನಕರನೂವೆ ವೊಡಕಂಡೋಗಿ ಕಟ್ಟೊ ಜಂಬರ. ಅದು ಮೂಗೀತು ಅಂದ್ರೆ ಕಸಾವ ಬಾಚಿ, ಬಿದಿರು ಮಂಕರಿಗೆ ತುಂಬಿ, ತಿಪ್ಗೆ

ಸುರ್‍ದ್ದು, ತಾನೂ ಕ್ವಟ್ಟಿಗಿಂದ ವೊರಬಿದ್ದ ಲಕ್ಕ. ದಡಕ್ಕನೆ ಅವ್ನ ಇಂದೇನೆ ವೊಂಟ ಬೊಡ್ಡ ನಾಕು ದಾಪು ಇಡೋದರೊಳ್ಗೆ ಅವ್ನಗಿಂತ್ಲೂವೆ ಒಂದು ಮಾರು ಮುಂದಾಗಿತ್ತು.

ಲಕ್ಕ ರುಕ್ಮಿಣವ್ವನ ಅಟ್ಟಿಂದ ಸಾಗ್ತ ಇನ್ನೂ ಆ ಬೀದೀಲಿದ್ದ ಏಡು ಬ್ರಾಂಬ್ರ ಅಟ್ಟಿಗಳ್ನೂವೆ ದಾಟಿರ್‍ನಿಲ್ಲ. ಅಸ್ಟರಾಗೆ ಎದುರುಗಡಿಂದ ಸೊಸಿಯ ಸಿಳ್ಳಿ ಆಕ್ತಾ ಆರಾಮಾಗಿ ಬತ್ತಿದ್ದ. ಅವನ್ನ ಕಂಡು ಲಕ್ಕಂಗೆ ಇಪರೀತ ಸಿಟ್ಟು ಬಂತು. “ಕಳ್ಳ ಬಡ್ಡೀದೆ. ಜರ ಅಂತ ಯಾಸ ಅಕ್ಕಂಡು ಸೋಕಿ ಮಾಡ್ತ ಬತ್ತಿದ್ದೀಯ?...ನಡಿ, ನಡಿ, ನಾನಾಗ್ಲೆ ರುಕ್ಮಿಣಿವ್ವಾರ್ ಕ್ವಟ್ಟೆಗೆ ತ್ವಡುದು ಬಂದಿವ್ನಿ. ಜಟಜಟ್ಟಿ ಎಜ್ಜೆ ಆಕಿ, ಇತ್ಲೆಲ್ಲಿ ಕಟ್ಟಿರೊ ದನಗಳ ಬಿಚ್ಕಂಡು ಕಾಡಿಗಟ್ಟಗಂಡೋಗು” ಅಂದು ಲಕ್ಕ, ತನ್ನ ಕಣ್ಣುಗಳ ಕ್ವಾಪದಿಂದ ಮರಳಿಸ್ದ. ಸೊಸಿಯ ಸಿಳ್ಳಿ ಆಕೋದ ತಟಕ್ನೆ ನಿಲ್ಕ ಬಾಲ ಮುದುರ್‍ದ ನಾಯಿ ಮರ್‍ಯ್ಯಾಗಿ ತಲೆ ತಗ್ಗುಸಿ ರುಕ್ಮಿಣವ್ವನ ಅಟ್ಟ ಕಡೀಕೆ ದೌಡಾಯ್ಸಿ ವೊಂಟ.

## ೨

ರುಕ್ಮಿಣಿಯ ಮನೆಯ ಮುಂಬಾಗಿಲು ತೆರೆದಾಗ ಬಾಳೆಲೆ ಆಡಿಕೆಪಟ್ಟೆಗಳನ್ನು ಕಂಕುಳಲ್ಲಿ ಇರುಕಿ ಗೊದೆಮೊಟ್ಟೆಗಳ ಕಟ್ಟನ್ನು ತಲೆಯ ಮೇಲೆ ಹೊತ್ತ ಕೃಷ್ಣಶಾಸ್ತ್ರಿಗಳು ತಮ್ಮ ಬಲಿಷ್ಠ ಕಾಲುಗಳನ್ನು ಎತ್ತೆತ್ತ ಇಡುತ್ತ ಒಳಗೆ ಬಂದರು. ಹೊರೆಯನ್ನು ಅಂಗಳದಲ್ಲಿ ಇಳುಕುತ್ತಿರುವಂತೆ, “ಸುಶೀಲ ಈಗ ಹೇಗಿದ್ದಾಳಮ್ಮ?” ಎಂದು ರುಕ್ಮಿಣಿಯನ್ನು ಕೇಳಿದರು. “ಇನ್ನು ಸ್ವಲ್ಪ ಜ್ವರ ಇದೆ. ಪಂಡಿತರು ಬಂದು ಔಷಧಿ ಕೊಟ್ಟು ಹೋದರು” ಎಂದು ರುಕ್ಮಿಣಿ ತಿಳಿಸಿದರು. “ಹೊಟ್ಟೆಗೇನು ತೆಗೊಂಡಳು?” ಎಂದು ಕೈಕಾಲು ತೊಳೆಯುತ್ತ ಶಾಸ್ತ್ರಿಗಳು ಕೇಳಿದರು. “ಏನೂ ಬೇಡ ಎಂದು ಹಟ ಮಾಡ್ತಾಳೆ. ನಾನು ಎಷ್ಟೋ ಪ್ರಯತ್ನಪಟ್ಟೆ, ಹಾಲನ್ನಾದರೂ ಕುಡಿ ಅತ್ತೆ ಅಂತ ಒತ್ತಾಯಪಡಿಸಿದೆ. ಆದರೂ ಸುಶೀಲತ್ತೆ ನನಗೆ ಹಸಿವಿಲ್ಲ, ಏನೂ ಬೇಡ, ಅಂದಳು.” ರುಕ್ಮಿಣಿ ಹೀಗೆ ವಿವರಿಸಿದಾಗ, ಕೃಷ್ಣಶಾಸ್ತ್ರಿಗಳು, “ಎಲ್ಲಾದರೂ ಉಂಟೆ. ಹೊಟ್ಟೆಗೆ ಏನೂ ತೆಗೊಳ್ಳದೆ ಹೋದರೆ ಇನ್ನೂ ನಿಶ್ಯಕ್ತಿ ಆಗುತ್ತೆ” ಎನ್ನುತ್ತ ತಾವೇ ಸುಶೀಲೆ ಮಲಗಿದ್ದ ನಡುಮನೆಗೆ ನಡೆದು, ಅವಳು ಎಷ್ಟು ಹಟ ಮಾಡಿದರು ಬಿಡದೆ ಹಾಲನ್ನು ಕುಡಿಸಿಯೇ ಕುಡಿಸಿದರು... ಅಣ್ಣ ತಂಗಿಯರೆಂದರೆ ಹೀಗಿರಬೇಕೆಂದು ಒಳಗೆ ಸಂತೋಷಪಡುತ್ತ. ರುಕ್ಮಿಣಿ ಮಾವನವರನ್ನು ಊಟಕ್ಕೆಬ್ಬಿಸಿದಳು.

ಅನ್ನ, ಮೆಂತ್ಯದ ಹಿಟ್ಟಿನ ಗೊಜ್ಜು, ಪಡವಲಕಾಯಿ ಹುಳಿ ಇತ್ಯಾದಿಗಳನ್ನು ರುಕ್ಮಿಣಿ ಮೊನೆ ಬಾಳೆಯೆಲೆಯ ಮೇಲೆ ಬಡಿಸುತ್ತಿದ್ದಂತೆ ಶಾಸ್ತ್ರಿಗಳು ಗಾಯತ್ರಿ ಹೇಳಿ, ಪರಿಷೇಚನೆ ಮಾಡಿ, ಚಿತ್ರಾಹುತಿ ಇಟ್ಟು, ಉದಕಪ್ರಾಶನ ಮಾಡಿ ಮಂತ್ರೋಚ್ಚಾರಣೆಯೊಡನೆ ಊಟಕ್ಕೆ ಕೂತರು. ರುಕ್ಮಿಣಿಯು ಶಾಸ್ತ್ರಿಗಳು ಕೇಳಿದ್ದನ್ನು ಬಡಿಸಿ, ಅವರು ಊಟ ಮುಗಿಸಿ, ಆಪೋಶನ ತೆಗೆದುಕೊಂಡು –ರೌರವೇ ಅಪುಣ್ಯನಿಲಯಂ ಇತ್ಯಾದಿ ಹೇಳಿ, ಅನ್ನದಾತಾ ಸುಖೀಭವ, ಎನ್ನುತ್ತ ನೀರು ಬಿಟ್ಟು ಏಳುವವರೆಗೂ ಸೊಂಟಕ್ಕೆ ಸೆರಗು ಸೆಕ್ಕಿ ನಿಂತೇ ಇದ್ದಳು.

ಊಟ ಮುಗಿಸಿ ಶಾಸ್ತ್ರಿಗಳು ಹಜಾರದ ಮೂಲೆಗೆ ಹಾಸಿದ ಚಾಪೆಯ ಮೇಲೆ ಕುಳಿತು, ಸುತ್ತಿಟ್ಟ ಹಾಸಿಗೆಗೆ ಬೆನ್ನು ಕೊಟ್ಟು, ಕಾಲು ಚಾಚಿ, ಬೆಳ್ಳಿಯ ತಟ್ಟೆಯಲ್ಲಿ ರುಕ್ಮಿಣಿಯು ತಂದಿಟ್ಟ ಗೊಟಡಿಕೆಯನ್ನು ಬಾಯಿಗೆಸೆದು ಕಟುಂ ಕಟುಂ ಎಂದು ಅಗಿಯುತ್ತ, ವೀಳೆಯದೆಲೆಗೆ ಸುಣ್ಣ ಹಚ್ಚುತ್ತಿದ್ದ ಹಾಗೆ, "ಪರವಾಗಿಲ್ಲ, ಐವತ್ತರ ಮೇಲೆ ಆಗಿದ್ದರೂ ನಮ್ಮ ಅಯ್ಯನೋರ ಹಲ್ಲು ಇನ್ನೂ ಗಟ್ಟ್ಯಾಗೇ ಅವೆ" ಎನ್ನುವ ಮಾತು ಕೇಳಿ, ಕತ್ತೆತ್ತಿ ಅಂಗಳದ ತುದಿಗಂಬಕ್ಕೆ ಆಂತು ಕೂತಿದ್ದ ವ್ಯಕ್ತಿಯನ್ನೆ ನಿರ್ಭಾವದಿಂದ ನೋಡಿದರು. ನಂಜೇಗೌಡ ಸಹಜವಾಗಿ ಮಾತಾಡಿದ್ದರೂ ಶಾಸ್ತ್ರಿಗಳು ಅವನ ಮಾತಿನಲ್ಲಿದ್ದ ಕೊಂಕನ್ನು ಗಮನಿಸಿದೆ ಇರಲಿಲ್ಲ. ಆದರೂ ಅವರು ಮೌನವಾಗಿಯೇ ಇದ್ದರು... ನಂಜೇಗೌಡ ಮಹಾ ಕಿತಾಪತಿ ಮನುಷ್ಯ. ತನಗೆ ವಿರೋಧವಾದರೆ ಊರಿಗೆ ಊರನ್ನೇ ಹೊತ್ತಿಸಿ ಬೇಯಿಸುವಂಥವನು. ಊರಿನಲ್ಲಿ ಯಾರೂ ಸುಖವಾಗಿರಬಾರದು. ತನ್ನನ್ನು ಮೀರಿ ಯಾರೂ ಬೆಳೆಯಬಾರದು. ಇದು ಅವನ ಚಾಳಿ. ತನ್ನ ಜುಬ್ಬದ ಜೇಬಿನಿಂದ ಒಂದು ಬೀಡಿಕಟ್ಟನ್ನು ಹೊರದೆಗೆದು ಒಂದು ಬೀಡಿಯನ್ನು ಹೊತ್ತಿಸುತ್ತ, ನಂಜೇಗೌಡ,

"ಈಗೊಂದು ಎಲ್ಡು ಜಿನದಿಂದ ಮ್ಯಾಡ ಮೊಖ ಗಂಟಾಕಂಡೇ ಅದೆ. ತ್ವಟ್ಟು ಅನೀನೂ ಕರೀನೇ ಇಲ್ಲ" ಎಂದ.

"ಊರಿನಲ್ಲಿ ನಾವು ಹೇಗೆ ಆಡ್ತಾ ಇದೇವೋ ಮೋಡವೂ ಹಾಗೇ ಆಡ್ತಾ ಇದೆ–" ಕಣ್ಣು ಸಣ್ಣದ್ದು ಮಾಡಿ ಶಾಸ್ತ್ರಿಗಳು ತೀಕ್ಷ್ಣವಾಗಿ ನೋಡಿದರು.

"ಯಾಕೆ ಸೋಮಿ ಅಂಗಂದೀರಿ?... ನಮ್ಮೂರು ಯೇನಾಗಿದ್ದತು?... ಪಗಡೆ ಆಡಿ ರಾಜ್ಯ ಸೋತ ಪಾಂಡವರು, ನಿಮ್ಗೂ ಗ್ವತ್ತಿರೋವಂಗೆ, ವನವಾಸ ಓವಂಟಾಗ, ನಮ್ಮೂರಿನಾಗೂ ವಸಿ ಜಿನ ತಂಗಿದ್ರು ಅಂತ ಯೇಳಕ್ಕಿಲ್ವ?... ಅದುಕೇ ದರುಮರಾಯನ ಎಸರ್ನೇ ಕರೆದವ್ರಲ್ಲ ನಮ್ಮೂರ್ಗೆ– ದರುಮನಳ್ಳಿ, ದರುಮನಳ್ಳಿ ಅಂತಾವ!"

ಸುಣ್ಣ ಹಚ್ಚಿ ಎಡಹಸ್ತದ ಬೆರಳು ಸಂದಿಗಳಲ್ಲಿ ಜೋಡಿಸಿಟ್ಟ ವೀಳೆಯದೆಲೆಗಳನ್ನು ಬಾಯಿಗಿಟ್ಟು, ಕತ್ತನ್ನು ಹಿಂದಕ್ಕೆ ಒಗೆದು ಶಾಸ್ತ್ರಿಗಳು ಕಣ್ಣು ಮುಚ್ಚಿದರು. ಗಂಡ ಮನೆಯಲ್ಲಿಲ್ಲದಾಗ ಗುಂಡ್ಲುಪೇಟೆಯಿಂದ ಇನ್ನೊಬ್ಬನ ಮಡದಿಯನ್ನು ಹಾರಿಸಿ ತಂದದ್ದು; ಆರು ತಿಂಗಳು ಕಳೆಯುವುದರೊಳಗೆ ಅವಳ ಶೀಲದ ಬಗ್ಗೆ ಸಂಶಯಗೊಂಡು ಥಳಿಸುತ್ತಿದ್ದದ್ದು; ತಾನು ಮಾತ್ರ ಕಣ್ಣಿಗೆ ಬಿದ್ದ ಹುಡುಗಿಯರನ್ನು ಕೆಡಿಸಲು ಸನ್ನಾಹ ನಡೆಸುತ್ತಿದ್ದದ್ದು; ಇವನ ಕಾಟವನ್ನು ತಾಳಲಾರದೆ ಆಕೆ ನೇಣು ಹಾಕಿಕೊಳ್ಳಲು ಪ್ರಯತ್ನಪಟ್ಟಿದ್ದು; ತರುವಾಯ ಆರು ಮಕ್ಕಳನ್ನು ಹೆತ್ತವಳಡನೆ ಹಣದಾಸೆಗಾಗಿ ಸಂಪರ್ಕ ಬೆಳೆಸಿ, ಅವಳ ಗಂಡನಿಗೆ ವಿಷವುಣಿಸಿ ಕೊಂದದ್ದು; ತಳಂಗು ಬಳಂಗು ಮಾಡಿ ಗಂಡ ಸತ್ತ ಮುಂಡೆಯರ ಆಸ್ತಿಯನ್ನು ಲಪಟಾಯಿಸುತ್ತಿದ್ದದ್ದು; ತನ್ನ ಸುಳ್ಳು ದೈವಭಕ್ತಿ ಮತ್ತು ಕಪಟವಿದೇಯತೆಗಳಿಂದ ಸದಾ ಶಿವಪೂಜೆ, ಸದಾಚಾರಗಳಲ್ಲಿ ನಿರತರಾದ ಜಪ್ಪಯ್ಯನ ಮಠದ ಸ್ವಾಮಿಗಳ ಮುಗ್ಧ ಮನಸ್ಸನ್ನು ಗೆದ್ದು, ಅವರ ಪರಮಶಿಷ್ಯನಾಗಿದ್ದುದೇ ಅಲ್ಲದೆ, ನರಿಯಂತಹ ಕುಯುಕ್ತಿ ಮನುಷ್ಯನಾದುದರಿಂದ ಊರಿನ ಜನರೆಲ್ಲರೂ ಅವನಿಗೆ ಹೆದರುತ್ತಿದ್ದದ್ದು–ಒಂದೆ, ಎರಡೆ!...

"ಯಾಕೆ ಸೋಮಿ, ನಿದ್ದೆ ಬಂದು ಬುಡ್ತ?– ಈಗ ನಿಮ್ಮ ತಂಗಮ್ಮನೋರು ಆಸಿಗೆ ಇಡುದು ಮನಗಿರೋದ್ರಿಂದ ಈ ಚಿಕ್ಕಮ್ಮಾರ್ದೆ ಅಡಿಗೆ ಅಲ್ವ?... ಇವರ ಕಯ್ಯಿ ಅಡಿಗೆ ಬೋ ಜೋರೂಂತ ಕಾಣಿಸ್ತದೆ!"

ಎನ್ನುತ್ತ ನಂಜೇಗೌಡ ಬಚ್ಚಲುಕೋಣೆಯತ್ತ ತೆರಳುತ್ತಿದ್ದ ರುಕ್ಮಿಣಿಯನ್ನೆ ಹುಸಿನಗೆ ನಗುತ್ತ ಓರೆಯಾಗಿ ನೋಡಿದ. ಶಾಸ್ತ್ರಿಗಳ ಮುಖ ಗಂಟಿಕ್ಕಿತ್ತು. ಎದ್ದು ನಿಂತರು.

"ಇದ್ಯಾಕೆ ಸೋಮಿ, ಅದೇನೂ ಮಾತಾಡ್ದೆ ಎದ್ದೇ ಬುಟ್ರಿ?... ನಂಗೆ ಯೋಳಿಕಳಿಸಿದ್ದೇನು?– ಈಗ ಇಂಗ ಹ್ವಂಟು ನಿಂತಿದ್ದೇನೆ?..."

ನಂಜೇಗೌಡನ ಮಾತಿಗೆ ಲಕ್ಷ್ಯ ಕೊಡದೆ, ಶಾಸ್ತ್ರಿಗಳು ಹೆಜ್ಜೆಯಿಡುತ್ತ,

"ತೋಟಕ್ಕೆ ಹೋಗ್ತಾ ಇದೀನಿ...ಬನ್ನಿ ನಂಜೇಗೌಡರೆ. ಹಾಗೆ ಮಾತಾಡ್ತ ಹೋಗೋಣ" ಎಂದವರು, ರುಕ್ಮಿಣಿಯತ್ತ ತಿರುಗಿ" ಸರಸಿ ಇನ್ನು ಬರಲಿಲ್ಲವೆ?" ಎಂದು ಕೇಳಿದಾಗ,

"ಇಷ್ಟೊತ್ತಿಗೆ ಎಲ್ಲಿ ಬರ್ತಾಳೆ?... ನನ್ನ ಜತೇಲಿ ನಮ್ಮ ತೋಟಕ್ಕೆ ಬರೋ ದಿನಗಳನ್ನು ಬಿಟ್ಟು, ಬಾಕಿ ದಿನಗಳಲ್ಲಿ ನಾಲ್ಕಾರು ಮನೆ ಸುತ್ತಾಡುವ ಬೆಕ್ಕಿನ ಮರಿ ಆಗ್ತಾಳೆ. ಅದರಲ್ಲೂ ವೆಂಕಣ್ಣ ಜೋಯಿಸರ ಹೆಣ್ಣುಮಕ್ಕಳು ಇವಳನ್ನು ತೀರಾ

ಹಚ್ಚಿಕೊಂಡಿರೋದರಿಂದ, ಹೆಚ್ಚು ಕಾಲಾನ ಅವರ ಮನೇಲಿ ಕಳೀತಾಳೆ... ಮಹಾರಾಯಿತಿ ಊಟ ಮಾಡಿ ಹೊರಟುಬಿಟ್ಟರೆ, ಮತ್ತೆ ಸಂಜೆಗೇ ಅವಳು ಮನೆ ಸೇರೋದು!... ಒಂದೊಂದು ಸರ್ತಿ ತನಗೆ ಹಸಿವಿಲ್ಲ ಎಂದು ಅವನ ಮನೇಲೆ ಊಟ ಮಾಡಿ ಬರೋದೂ ಉಂಟು!"

ಎಂದು ಹೇಳುತ್ತ, ಅವರು ಮನೆಯ ಮುಂದಿನ ಮೆಟ್ಟಿಲು ಇಳಿಯುವುದನ್ನೇ ನೋಡುತ್ತಿದ್ದು ರುಕ್ಮಿಣಿ ತಮ್ಮ ಮನೆಯ ಮುಂದಿನ ಬಾಗಿಲು ಮುಚ್ಚಿದಳು.

ಊರೋಳಗೆ ಹೋಗುವವರೆಗೂ ಲೋಕಾಭಿರಾಮದ ಮಾತು. ಊರು ಮುಂದಿನ ಗೋಣಿಮರವನ್ನು ದಾಟುತ್ತಲೂ ಶಾಸ್ತ್ರಿಗಳು ನಿಧಾನವಾಗಿ ಮಾತೆತ್ತಿದರು:

"ಏನು ನಂಜೇಗೌಡರೆ, ಆ ರುದ್ರನ ದೆಸೆಯಿಂದ ನಮ್ಮ ತೋಟಕ್ಕೆ ಉಳಿಗಾಲವಿಲ್ಲವಲ್ಲ?... ಎಳನೀರು, ಬಾಳೆಗೊನೆ ಎಲ್ಲವನ್ನೂ–ಒಂದೊಂದು ಸಲ ತನ್ನ ಪುಂಡು ಗುಂಪು ಸೇರಿಸಿಕೊಂಡು, ಒಂದೊಂದು ವೇಳೆ ತಾನೊಬ್ಬನೆ–ರುದ್ರ ಲೂಟಿ ಹೊಡೀತಾ ಇದಾನಲ್ಲ?"

ಎನ್ನುತ್ತಲೂ ತನ್ನ ಬೀಡಿಯಿಂದ ಎರಡು ದಂ ಎಳೆದು ಅದನ್ನು ಬಿಸಾಡಿ,

"ಒಳ್ಳೆ ಪಸಂದಾಯ್ತು. ಪಟಿಂಗ ಮುಂಡೆಯೋವಕ್ಕೆ ನಾಲ್ಕು ಬಿಗ್ದು ಬುದ್ಧಿ ಕಲಿಸೋದು ಬುಟ್ಟು; ನನ್ನ ಕುಟ್ಟೆ ವಪ್ಪುಸ್ತಾ ಇದ್ದೀರಲ್ಲ–ಏನು ಯೋಳ್ಲಿ?"

ಎಂದು ತಲೆ ಚಚ್ಚಿ, ಮೀಸೆಯ ಮರೆಗೆ ನಕ್ಕ ನಂಜೇಗೌಡ.

"ಸರಿಹೋಯ್ತು. ನಾನು ಶಿಕ್ಷೆ ಮಾಡಲು ಹೋದರೆ ಅವನ ಮಾವ ಗಂಗಪ್ಪ ಸುಮ್ಮನಿರಬೇಕಲ್ಲ!... ನಾಳೆ, ತನ್ನ ಸೋದರಳಿಯನ್ನು ಹೊಡೆದರು ಬಡಿದರೂಂತ ಪಂಚಾಯಿತಿ ಕಟ್ಟೆ ಹತ್ತಿಸಿದರೆ ನಾನೇನು ಮಾಡೊದು, ಗೌಡರೆ?"

ಎನ್ನುತ್ತ ಆಕಾಶ ನೋಡಿದರು. ಬೇಲಿಯಲ್ಲಿ ಬೆಳೆದಿದ್ದ ಉಣ್ಣಿಯ ಹಳದಿ ಕೇಸರಿ ಹೂಗೊಂಚಲನ್ನು ಕಿತ್ತು ಮೂಸುತ್ತ.

"ಸರಿಕನ ಬುಡಿ. ಆ ಗಂಗಪ್ಪ ಯಾವ ಮಹಾ ಸ್ಯಾಟ– ಅದ್ನ ಸುಟ್ಟರೆ ಇದ್ದಲೂ ಅಲ್ಲ, ಬೂದಿಯೂ ಅಲ್ಲ"

ಎಂದ. ಶಾಸ್ತ್ರಿಗಳ ಮುಖ ಗಂಟಿಕ್ಕಿತು. ತನ್ನ ನೋಟವನ್ನು ಪುಂಡರಿಂದ ಕಾಪಾಡಿಕೊಳ್ಳುವ ಸಲುವಾಗಿ, ಇಂಥ ಲಫಂಗನ ನೆರವು ಬಯಸಿದೆನಲ್ಲ–ಎಂದು ಹೇಸಿಗೆಯಾಯಿತು. ತಾನು ಇಷ್ಟು ಕೀಳುಮಟ್ಟಕ್ಕೆ ಇಳಿದೆನಲ್ಲ ಎಂದು ತಮ್ಮ ಬಗ್ಗೆಯೇ ಅಸಹ್ಯಪಟ್ಟರು. ಹಾಳು ಸ್ವಾರ್ಥ ಒಬ್ಬ ವ್ಯಕ್ತಿಯನ್ನು ಇಂಥ ಇಕ್ಕಟ್ಟಿನ ಪರಿಸ್ಥಿತಿಗೆ ತಂದೊಡ್ಡುತ್ತದೆ ಎಂದೆನ್ನಿಸಿ, ದೊಡ್ಡದಾಗಿ ಉಸಿರುಬಿಟ್ಟರು. ಶಾಸ್ತ್ರಿಗಳ ವರ್ತನೆ ಗೌಡನಿಗೆ ವಿಚಿತ್ರವಾಗಿ ಕಂಡಿರಬೇಕು. ಉಣ್ಣೆಯ

ಹೂಗೊಂಚಲನ್ನು ಒಂದು ಪಕ್ಕಕ್ಕೆ ಒಗೆದು,

"ಯಾಕೆ ಸೋಮಿ, ತಟಕ್ಕನೆ ಸುಮ್ಮಕ್ಕಾದ್ರಿ?" ಎಂದು ಕೇಳಿದ.

"ಏನೊ ಹೇಳಿದೆ. ಇದರ ಬಗ್ಗೆ ನೀವೇನೂ ತಲೆ ಕೆಡಿಸಿಕೊಬೇಕಾಗಿಲ್ಲ. ಇದು ನನ್ನ ಸಮಸ್ಯೆ. ಇದನ್ನು ನಾನೇ ಪರಿಹರಿಸಿಕೊಳ್ಳಬೇಕು"

ಎಂದು ತೋಟದ ಬಾಗಿಲು ದಬ್ಬಿ ಒಳನಡೆದರು.

ತೋಟದ ಹೊರಗೇ ನಿಂತ ನಂಜೇಗೌಡ, "ಅಬ್ಬ ಈ ಹಾರುವಯ್ಯ ಬಾಕಿಯೋರಂಗಲ್ಲ. ಸಖತ್ ಗಟ್ಟಿಪಿಂಡ" ಎಂದು ತಲೆದೂಗಿ, ಇನ್ನೊಂದು ಬೀಡಿ ಹಚ್ಚಿ, ಸಾವಧಾನವಾಗಿ ತೋಟದ ಮೂಡಲ ತಿರುವಿನಲ್ಲಿ ಜಾರಿಕೊಂಡ.

ಯೋಚಿಸುತ್ತಲೇ ಶಾಸ್ತ್ರಿಗಳು ತೋಟವನ್ನು ಪ್ರವೇಶಿಸಿದರು. ಸುಮಾರು ಒಂದೂವರೆ ಎಕರೆ ತೋಟ. ನಾಲ್ಕುನೂರಕ್ಕೂ ಮಿಕ್ಕಿದ ಅಡಿಕೆ ಮರಗಳು. ಅವಕ್ಕೆ ಹಬ್ಬಿಸಿದ ವೀಳೆಯದೆಲೆ ಹಂಬು. ಎಲೆ ಹಂಬು ಇಲ್ಲದ ಸ್ಥಳದಲ್ಲಿ ಬಾಳೆ ಗಿಡಗಳು. ಹಳ್ಳ ಹಸಿ ಕಡಿಮೆ ಇರುವ ಭಾಗದಲ್ಲಿ ತೆಂಗು, ಮಾವಿನಮರ. ಒಂದೆರಡು ಹಲಸಿನ ಮರಗಳು. ಶಾಸ್ತ್ರಿಗಳು ಸುಮ್ಮನೆ ಸಿಂಹಾವಲೋಕನ ಮಾಡುತ್ತ ಸುತ್ತಾಡಿದರು. ಕೆಲವು ಅಡಿಕೆ ಮರಗಳಿಗೆ ಹಬ್ಬಿಸಿದ ಎಲೆಹಂಬಿನ ಪಲ್ಲಿಗಳು ಸಡಿಲಗೊಂಡು, ಹಂಬು ಮರಗಳಿಂದ ಜಾರುತ್ತಿದ್ದವು. ಶಾಸ್ತ್ರಿಗಳು ಹಿಕ್ಕಲು ಸೋಸುತ್ತಿದ್ದ ಆಳುಗಳನ್ನು ಕೂಗಿ ಕೇಳಿದರು:

"ಇದೇನ್ರಪ್ಪ, ಈ ಕಡೆ ಮರಗಳಿಗೆ ಹಂಬು ಸೇರಿಸಿ ಕಟ್ಟುಹಾಕದೆ–ಹಾಗೇ ಬಿಟ್ಟಿದ್ದೀರಲ್ಲ?...ಎಲೆ ಹಂಬು ಮರಗಳ ಮೇಲೆ ಬಿಟ್ಟುಕೊಂಡು ಹೋಗ್ತಿರೋ ಪಲ್ಲಿಗಳೆಲ್ಲ ಸಡಿಲವಾಗಿ, ಕೆಳಕ್ಕೆ ಜಾರಿ ಜೋಲಿ ಹೊಡೀತಾ ಇವೆಯಲ್ಲ?...

ಅಗೆಯುವುದನ್ನು ನಿಲ್ಲಿಸಿ ಮರಿಯ ಉಳಿಕೆ ಅಳುಗಳ ಪರ ಉತ್ತರವಿತ್ತ:

"ನಾವೂ ಸುಮಾರು ಮರಗಳ್ಗೆ ಕಟ್ಟಾಕಂಡು ಬಂದೊ ಕಣ್ರಯ್ಯಾ...ವಸಿ ಮರ ಎಲ್ಲೊ ಕೈ ತೆಪ್ಪೋಗಿರಬೈದು."

"ಯಾವತ್ತೂ ಹೀಗೆ ಮರೀಬೇಡಿ. ಎಲೆ ಹಂಬು ಅತಿಸೂಕ್ಷ್ಮ. ಕೆಳಗೆ ಬಿದ್ದರೆ ಮುರಿದುಹೋಗುತ್ತೆ ಅನ್ನೋದು ನಿಮಗೆ ತಿಳಿದಿಲ್ಲವೆ?– ಕೆಳಕ್ಕೆ ಬರದ ಹಾಗೆ, ಹಂಬಿನ ಪಲ್ಲಿ ಮೇಲಕ್ಕೆ ಹೋಗುವ ಹಾಗೆ, ಕುಡಿಗಳಿಗೆ ಕಟ್ಟು ಹಾಕದೆ ಹೋದರೆ ಬರ್ತಾ ಬರ್ತಾ ಇಡೀ ಎಲೆಗೋಟವೆ ಮಗುಚಿಕೊಳ್ಳೊಲ್ಲವೆ?..."

ಹೀಗೆ ಎಚ್ಚರಿಸಿ, ಶಾಸ್ತ್ರಿಗಳು ಪಂಚೆಯೆನ್ನೆತ್ತಿ ಕಟ್ಟಿದರು. ವಲ್ಲಿಯನ್ನು ತಲೆಗೆ ಸುತ್ತಿದರು. ಸೊಂಟದ ಮೇಲೆಲ್ಲ ಬರಿಮೈಯಾಗಿ, ಒಂದೊಂದು ಮರಕ್ಕೂ ಬಿದಿರೇಣಿಯನ್ನು ಆನಿಸಿ, ಅದರ ಮೇಲೆ ಹತ್ತಿ ನಿಂತು, ಆಳುಗಳು ಬಿಟ್ಟಿದ್ದ

ಒಂದೊಂದು ಮರದ ಹಂಬಿಗೂ ಕಟ್ಟು ಬಿಗಿಯುತ್ತ ಸಾಗಿದರು.

೩

"ಅಯ್ಯಯ್ಯೋ ಬಿದ್ದೇವೋಗಿದ್ನೆಲ್ಲ!... ಇದರ ವಂಸ ಎಕ್ಕುಟ್ಟೋಗ. ಎತ್ತಾಗೋದರೂವೆ ಕಾಲುಕಾಲಿಗೇ ತ್ವಡರಿಕತ್ತದಲ್ಲ!...

ಕ್ವಾಪದಿಂದ ಲಕ್ಕ ಬೋಡ್ಡನ್ನ ಕಾಲ್ನಿಂದ ಝಾಡಿಸ್ದ. ಕುಂಯಯ್ಯೋ ಕುಂಯ್ಯಯ್ಯೋ ಅಂತ ಬೊಡ್ಡ ವಚ್ಚೋರಿಕೆ ಬಿದ್ದೋಡ್ತು.

ಕಿಸ್ಣಶಾಸ್ತ್ರಿಗಳ ಮನಿಂದ ವೊಂಟ ಲಕ್ಕ ದೇವಗಣಗ್ಲೆ ಮರಕ್ಕೆ ಕಟ್ಟಿದ್ದ ಕಟ್ಟೆಮ್ಯಾಕೆ ಕುಂತು ಊರ್ನ ಹೈಕಳು ಒಬ್ಬರಿಗೊಬ್ಬರು ಒಗಟು ಒಡಿಯೊ ಆಟ ಆಡ್ತಿದ್ದ ಆಟ ಕಂಡು, ಅದ್ನೆ ಕೇಳ್ತ ನಿಂತ:

"ಪಂಚ ಮೊಕದ ಕುದುರೆ ಪಾರ ತಿರುಗ್ತದೆ–ಅದೇನು ಯೋಳಿ?" ಅಂತು ಒಂದು ಹೈದ. ಉಳಿಕೆ ಹೈಕ ಮಕ್ಕಳೆಲ್ಲ ಯೋಚ್ನೆ ಮಾಡ್ತ ಕುಂತುಗಂಡೊ. ಯಾರೂ ಯೋಳೋಕ್ಕಾಗನಿಲ್ಲ.

"ಅಯ್ಯೊ, ಪೆದ್ದುಗಳೇ ಇಸ್ಟೂ ವೋಳಿನಿಲ್ವ?– ಮಜ್ಜಿಗೆ ಕಡಿಯೋ ಮಂತು" ಅಂತು ಹೈದ.

"ಕತ್ತಲೆ ಮನೇಲೆ ಕರಿಯಪ್ಪ ಗುಟರಾಕ್ತಾನೆ?" ಈ ಪ್ರಸ್ನೆ ಕೇಳಿದ್ದು ಕಟ್ಟೊ ಲಂಗದ ಒಂದು ಎಣ್ಣು. ಆ ಕ್ಸಣ ಏಡು ಹೈಕಳು– "ರಾಗಿಕಲ್ಲು, ರಾಗಿಕಲ್ಲು..." ಅಂತ ಕೂಗ್ದೊ.

"ಇಟ್ಟು ಆಯಿತ್ಲೆ ಜುಟ್ಟುಕುಣಿಸ್ತು– ಈ ಒಗಟು ಒಡೀರಿ?" –ಕೇಳ್ತು ಎಣ್ಣು.

"ಕಸಬರಲು, ಕಸಬರಲು" – ಒಟ್ಟಿಗೇ ಕೂಗ್ದೊ ಹೈಕಳು.

"ಎಲ್ಲಾನೂ ಯೋಳಿಕ್ವಟ್ಟಮ್ಯಾಲೆ ಯೋಳಕ್ಕೆ ನೀವೇ ಬಲುಸೂರರು..." ಅಣುಕ ಆಡ್ತು ಹೆಣ್ಣು.

ಇನ್ನೊಂದು ಹೈದ ಕೇಳ್ತು: "ಊತ್ತ ವೊಳದಲ್ಲಿ ತೆಕ್ಕೆ ಮೊಡಿಸಿ ಬಿದ್ದದೆ, ಅದೇನು?"

"ಹಾವು"– ಅಂತು ಒಂದು ಹೈದ.

"ಅಲ್ಲ–ಉಳೋ ಹಗ್ಗ"– ಅಂದ ಲಕ್ಕ.

"ಸುಮ್ಕಿರದೆ ನಮ್ಮಾಟದಲ್ಲಿ ನೀ ಯಾಕೊ ತಲೆ ಆಕೀಯೆ?" ಸಿಟ್ಟು ಮಾಡಿದೊ ಹೈಕಳು.

ಲಕ್ಕ ಪೆಚ್ಚಾಗಿ ವಸಿ ದೂರಕೆ ಚೆಗಿದು ನಿಂತ. ಬೊಡ್ಡನೂವೆ ಅವನೊಂದಿಗೆ ಸರಿದು ನಾಲಿಗೆ ಇಳಿಬಿಟ್ಟು ಜೊಲ್ಲು ಸುರುಸ್ತ ನಿಂತುಗತ್ತು.

ಆ ಗುಂಪ್ನಿಂದ ಯಾರೊ ಇನ್ನೊಂದು ಒಗಟು ಚಿಮ್ಮಿಸಿದ್ರು.

"ಗುಡುಗುಡು ಬಂತು, ಗೂಡಿನ ತುಂಬ ಮೊಟ್ಟೆ ಇಕ್ತು..."

ಸಾರಾ ಸಗಟಾಗಿ ಪರ್ತಯೊಬ್ಬರೂ "ಕೆಂಡ, ಕೆಂಡ" ಅಂತ ಕೂಗಿದ್ರು.

"ಏಳದೇ ಇದ್ದೋರ ಮುಕುಳಿಗೆ ಚೂರೆ–ಈ ಒಂಟಿಗೇನ್ರಪ್ಪ ಅರ್ತ?" – ಇನ್ಯಾರೋ ಕೇಳ್ದ ಪ್ರಶ್ನೆ. ಗೊಳ್‌ಗೊಳ್ ನಗಾಡಿದರು ಹೈಕಳು.

ಕ್ವಾಟೆ ಬಾವಿಂದ ಚರಿಗೆ ಕೊಳದಪ್ಪಲೇಲಿ ನಿಒತ್ತು ತತ್ತಿದ್ದ ಎಂಗಸರ ಸೀರೆ ಸೆರಗ್ನ ತುದಿಂದ ಬಾಯ್ಮುಚ್ಚಿ, ಒಬ್ಬರಿಗೊಬ್ಬರು ಕಣ್ಣು ಮಿಟುಕ್ಸಿ ನಗಾಡ್ತ ವೋದರು.

"ನಗಾಡೋದು ಇರಲಿ. ನನ್ನ ಒಂಟು ಒಡೀರಿ"– ಕೇಳ್ತು ಹೈದ.

"ಗ್ವತ್ತಾಗನಿಲ್ಲ."

"ಅಯ್ಯೋ. ಇನ್ನು ಗ್ವತ್ತಾಗ್ನಿಲ್ಲ? – ದ್ವಾಸೆ ಮೊಗುಚೊ ಕಯ್ಯಿ!"

"ಎಂಗೆ?"– ತಬ್ಬಿಬ್ಬಾಗಿ ಕೇಳ್ದೊ ಹೈಕಳು.

"ದ್ವಾಸೆ ಏಳದೆ ವೋದರೆ, ಅದರ ಅಡೀಕೆ ಅಕಕ್ಕಿಲ್ಲವ, ದ್ವಾಸೆ ಅಲ್ಲೆ!... ಅದೇಯ."

ಒಪ್ಪಿ, ತಲೆದೂಗಿ ಮುಂದಕ್ಕೆ ನಡೆದ ಲಕ್ಕ. ಒತ್ತ ತಿಂದ ಬಳಿಕ ಕಾಲಿಗೆ ತ್ವಡರ್ಸಿಕ್ವಳ್ದೆ ಮರ್ವಾದ್ಯಾಗಿ ತುಸು ದೂರದಿಂದ್ಲೆ ಇಂಬಾಲಿಸ್ತಿತ್ತು ಬೊಡ್ಡ.

ಮಾರಿಗುಡಿ ವಳುಗೆ ಇಸ್ಪೀಟಾಟ ಜೋರ್ನಿಂದ ನಡೆದಿತ್ತು. ಇಸ್ಪೀಟೆಲೆ ಕಲುಸಿ ಸುತ್ಲೂ ಗುಂಡಗೆ ಆಟಕ್ಕೆ ಕುಂತಿದ್ದ ಮಂದಿ ಮುಂದ್ಕೆ ಚಕಚಕ್ನೆ ಎಲೆಗಳ ಒಂದೋಂದಾಗಿ ಎಸೀತ ಯಾರೋ ಒಬ್ಬ ರಾಗ್ವಾಗಿ ಹಾಡಿಕೊತ್ತಿದ್ದ:

ಎಣ್ಣಿಗ ಪುಲ್ಲ,
ಎಡತಿ ಒಲ್ಲ,
ಯಾಕೆ ಒಲ್ಲ?–
ಸಿವನೆ ಬಲ್ಲ!

ಲಕ್ಕ ತುಸ ತಡೆದು ನಿಂತು ಮಾರಿಗುಡಿ ತುಂಬ ತುಂಬಿದ್ದ ಬೀಡಿ, ಸಿಕರೋಟಿನ ವೊಗೆ, ಮ್ಯಾಡದೊಳೀಕೆ ಮ್ಯಾಡ ನುಗ್ಗಿ ತೆಕ್ಕೆ ಆಕ್ಕಂಡಂಗೆ ಜಗ್ಗಾಡಿ, ತೆವುಳ್ತ ತೆವುಳ್ತ ವೊರಕ್ಕೆ ಬಂದು, ಲಕ್ಕಕಣ್ಣು ಮೂಗ್ನೆಲ್ಲ ಮುತ್ತಿಗತ್ತು. ಈ ವೊಗ್ಗೆ ಕುಡೀತ ಅದೆಂಗೆ ಮಾರಿಗುಡಿ ವಖಯಗೆ ಸೇರಿ, ಈ ಇಸಮು ಇಸ್ಪಟು ಆಡ್ತಾ ಇದ್ದಾರೋ! ಅಂತ ಲಕ್ಕ ತನ್ನಲ್ಲೆ ಚೋಜಿಗಪಡ್ತ ಇರೋನೊವೆ, ವಳುಗ್ನಿಂದ

"ರಂಗ್‌ಚೋರಿ, ರಂಗ್‌ಚೋರಿ..." ಅನ್ತ ಒಬ್ಬರಿಗೊಬ್ರು ಕದ್ನ ಮಾಡಕ್ಕೆ ಸುರು ಮಾಡಿದ್ರು...

"ಇವುಕೆ ಇನ್ನೆನು ಬ್ಯಾರೆ ಕೇಮೆ ಇಲ್ಲ. ಇಂತೋರಿಂದ್ಲೇಯ ಊರಿಗೆ ಕೇಡು" –ಅನ್ನುಸಿ, ಲಕ್ಕ ಅಲ್ಲಿಂದ ಕಾಲುಕಿತ್ತ.

ಜಪ್ಪಯ್ಯನ ಮಠ ಬಳಸ್ತಾ ಇರೂವಂಗೆ ಮಠದ ಅಯ್ಯನೋರು ವೊರಗೆಲ್ಲೂ ಕಾಣಿಸ್ನಿಲ್ಲ. ವೊಕಮಂಟಪ್ದಲ್ಲಿ ಅವರು ಕುಂತುಕೊತಿದ್ದ ಕಾಲಮಣ್ಣೆ ಹಾಸ್ದ ಚಿಂಕೆ ಚರ್ಮದ ಮ್ಯಾಲೆ ಕೈಯಾಡಿಸ್ತ ಏನೋ ಯೋಚಣೇಲಿ ಮುಳುಗಿ, ನಂಜೇಗೌಡ ಕುಂತಿದ್ದು ಕಾಣಿಸ್ತು. ನಂಜೇಗೌಡಂದು ಆದ್ದಿನ ಕಣ್ಣು. ಆದ ತೆಪ್ಪಿಸಿ ವೋಗಾದು ಸಾದ್ಯವ?– ಲಕ್ಕ ಯೋಚಿಸ್ತ ನಿಂತ,

ಮಠದಯ್ನೋರು ಸಿವಪಾದಪ್ಪಾರ ಇಸ್ಯಾದಲ್ಲಿ ಲಕ್ಕಂಗೆ ಅಪ್ಪಾರ ಗೌರವ. ಸ್ವಾಮಿಗಳ್ಗೆ ವಯಸ ಆಗಿದ್ರೂವೆ ಕೆಂಪಕೆಂಪಗೆ ಯಾವುತ್ತೂ ಒಳ್ಳೆ ತಾಮ್ರದ ಜೆಂಬು ವೋಳೆಯೂವಂಗೆ ತಳತಳಗುಟ್ಟೋ ಮೊಕ. ಅಗಲಾದ ಅಣೆ. ಅದ ತುಂಬದಂಗೆ ಮೂರು ಬೆಟ್ಟಿನ ಈಬೂತಿ... ಆ ಮೊಕ ನ್ಯಾಡಕ್ಕೇ ಒಂದು ಚೆಂದ ಆದ್ರೆ ಜನಕೆ ಈ ಸ್ವಾಮಿಗೋಳು ವೊರಗಡೆ ಕಾಣಿಸೋದೆ ಅಪುರ್ಪ. ಮೂಡ್ಲು ಕೆಂಪಾಗಕ್ಕೂ ಮುಂಗಾಗಿ ತಾನಮಾಡಿ ದ್ಯಾವರ ಕ್ವಾಣೆ ಸೇರುದ್ರೂ ಅಂದ್ರೆ ಅವರಲ್ಲಿಂದ ವೋರೀಕೆ ಬರೂವೋಟರಲ್ಲಿ ಸ್ವಾಮಿ ನೆತ್ತಿ ದಾಟಿ ಒಂದು ಮಾರು ಇಳುದಿರ್ತಿದ್ದ... ಇನ್ನು ಅವರೂಟ–ಒಂದು ಕೂಸು ಮಾಡಕ್ಕಿಂತಲೂ ಕಮ್ಮಿಯಂತೆ... ಒಂದೀಟು ಅಣ್ಣು ಅಂಪ್ಲು. ಒಂದು ಮುಕ್ಕಾಲು ಗಳಾಸು ಹಾಲು– ಈ ತಪಸೀಲ ಲಕ್ಕಂಗೆ ಕ್ವಟ್ಟಿದ್ದೋಳು ಅಡುಗೆ ಮಾದಮ್ಮ...ಆಮ್ಯಾಕೆ ದಪ್ಪ ದಪ್ಪ ಪುಸ್ತಕ ಓದ್ತಾ ಕುಂತಿರಾದು. ಸಿವರಾತ್ರಿ, ಬಸವಜಯಂತಿ ಇಂತ ಅಬ್ಬಗಳಲ್ಲೇಯ ಜನ ಯೆಚ್ಚಾಗಿ ಅವರ್ನ ಕಾಣಬೇಕಾರೆ!... ಆದ್ರೆ ನಂಜೇಗೌಡ್ನಂತ ವಸಿ ಮಂದಿ ಭಕ್ತರ್ಗೆ, ಅವ್ರ ಸಮೀಪಾನೆ ಓಡಾಡೂ ಅವಕಾಸ!... ಅಯ್ಯನೋರ ಇಸ್ವಾಸವ ನಂಜೇಗೌಡ್ರ ತನ್ನ ವರ್ಚಸ್ಸ ಊರಿನಾಗೆ ಎಚ್ಚಿಸಿಗಳಕ್ಕೆ ಚೆಂದಾಗಿ ಬಳಸ್ತಿದ್ದ. ಬುದ್ಧಿಬುದ್ಧೀವಂತ ಸ್ವಾಮಿಗೊಳು ಯೋಳ್ದ ಕೆಲುಸವ ಕಾಲ್ನಲಿ ತೋರಿದ್ರ ಕಯ್ನಲ್ಲಿ ಮಾಡ್ತ, ಆಸಾದ ಅಂತಿದ್ರಿಂದ ಊರ್ನಲ್ಲಿ ಗೌಡನ ಆಟಕ್ಕೆ ತಡೆ ಅನ್ನಾದೆ ವೊಂಟೋಗಿತು... ಗೌಡನ ಇತ್ಲ ಮಲ್ಲಿಗೆ ಊವು ಬಂದರೇಯ ಅಯ್ಯನೋರ ಪೂಜೆ– ಅಂತಾವ ಜನ ಆಡಿಕೊತ್ತಿದ್ರು!...

ಅದ್ಯಾವ ಮಾಯದಲ್ಲೊ ನಂಜೇಗೌಡನ ದ್ರುಸ್ಟಿ ಲಕ್ಕನ ಕಡೀಕೆ ವೋಳ್ತು. ಲಕ್ಕ ತಬ್ಬಿಬ್ಬಾದ, "ಅದ್ಯಾಕೊ ಲಕ್ಕ ಹೊರಗೇ ನಿಂತೆ. ಇತ್ತತ್ತ ಬಾ" ಗೌಡ ಕರದೇ

ಕರದ. ಬ್ಯಾರೆ ದಾರಿಲ್ದೆ ಅವ್ನು ಮುಂಚೋರಿಕೋಗಿ ವೊಸಿಲಾಚ್ಗೆ ಕುಂತುಕೋಬೇಕಾಯ್ತು, ಲಕ್ಕ. "ತಕ್ಕೋ, ಬಾಯಾಡು"– ಗೌಡ ಕ್ವಟ್ಟ ಎಲಡಿಕೆ ಈಸಿಕೊತ್ತಿದ್ದಂಗೆ, ಬೊಡ್ಡ ಮಠದ ಇಂಚೋರ್ಕೆ ಓಡೋಗಿ ಅಡುಗೆ ಮಾದಮ್ಮ ಏನಾರೆ ಆಕಾಳಾಂತ ಬೊಗಳ್ತ ನಿಂತಗತ್ತು...

"ತಾಳ್ಲ –ಮಾದಮ್ಮ ನತ್ರ ಸ್ವಲ್ಪ ಹೊಗೆಸೊಪ್ಪ ಈಸುಗೊಂಬತ್ತೀನಿ."

ಯೋಳಿ, ನಂಜೇಗೌಡ ಮಠದ ಒಳಾಂಗಣ್ಕೆ ನಡುದ. ಲಕ್ಕಂಗೆ ಒಳ್ಳೆ ಪೇಚು. ಎದ್ದೋಗೋವಂಗಿಲ್ಲ, ಸುಮ್ಕೆ ಕುಂತಿರಕ್ಕೆ ಬಿಡಬ್ಯಾಸರ. ಈ ನಂಜೇಗೌಡನೋ ಆ ಎಡಗಂಟಿ ಮಾದಮ್ನು ತಾವೀಕೆ ವೋದರೆ, ನಗಸಾರ ಮಾಡ್ತ ಹಕಳೆ ವೊಡೀತ ಕುಂತರೆ ಈಚೆಗೆ ಕಡಿಯೋದೆ ದುಸ್ತಾರ.. ಇಂಗಾಗಿ ಏನು ಮಾಡಕ್ಕೂ ತಿಳೀದೆ ಕುಂತಿರ್ವಾಗ, ಲಕ್ಕನ ಯೋಚ್ಣೆ ಎತ್ತತ್ತಾಗೊ ಸುತ್ತಿ ಬಳಸಿ ಇಂದಿಂದೆ ಅರೀತು...

ಒಂದು ರಾತ್ರಿನಾಗ ಇದೇ ಇಪ್ಪಯ್ಯನ ಮಠದ ಮುಂಚೋರಿ ಲಕ್ಕ ವೊಯ್ತೊ ಇದ್ದ. ಇದೇ ನಂಜೇಗೌಡ ಎಲಡಕೆ ವೊಗೆಸೊಪ್ಪ ಜಗೀತ ಮಠದ ಮುಂದೆ ಒಬ್ಬಾನೊಬ್ನೆ ಗಸ್ತಾಕ್ತಾ ಇದ್ದ. ಲಕ್ಕ ಕಣ್ಣಿಗೆ ಬಿದ್ದನೋ ಇಲ್ವೋ, "ಬಾ" ಅಂದ. ಲಕ್ಕ ವೋದ. "ನಿನ್ನಯ್ಯ ಕುಡೀತಾನೆ ಅಲ್ಲವೇನ್ಲ?" ಕೇಳ್ದ ಗಭಡ. ಇದ್ಯಾಕಪ್ಪ ಇಂಗೆ ಕೇಳ್ತಾನೆ?– ಎದರಿಕಂಡು ಎದರಿಕಂಡೆ, "ಔದು ಗೌಡ್ರೆ..." ತೊದಲಾಗ, "ನೀನು?" ಕೇಳ್ದ. "ಇಲ್ಲ ಗೌಡ್ರೆ"– ತಲೆ ಕೆರೀತ ನಿಂತ.

"ಬಾ ಇಲ್ಲಿ."

ಒಂದು ಬೆಳ್ಳಿ ರುಪಾಯ ಕಯ್ಯಾಗಿಟ್ಟು,

"ವೋಗು ಸಂತೋಸ್ವಾಗಿ ನೀನೂ ಕುಡಿವೋಗು" ಅಂದ.

"ನಂಗೆ ಬ್ಯಾಡಿ ಗೌಡ್ರೆ–ನಂಗಿದು ಬ್ಯಾಡಿ" –ಗ್ವಾಗರಿದ್ರೂವೆ ರೂಪಾಯ ಹಿಂದ್ಕೆ ಈಸುಕೊಳನೇ ಇಲ್ಲ.

ಸರಿ, ದೂರದಿಂದೆ ಕಯ್ಯಿ ಮುಗುದು,

"ಈ ಪಟ್ಟು ವೋಗಿ ಬತ್ತೀನಿ" ಅಂತಿದ್ದಂಗೇಯ

"ಉಂಟ ಉಂಟ–ಉಣ್ಣದೆ ವೋಗೋದ?.." ಅಡಿಗೆ ಮಾದಮ್ನು ಕರೆದು "ಇವ್ನಿಗೆ ಉಣ್ಣಕ್ಕೆ ಇಡು" ಅಂದ.

ಮಲ್ಲಿಗೆ ಊವನಂಗಿದ್ದ ಬೋನ ಉಂಡು ಬೋಜಿನ ಆಗಿತ್ತು. ಗಡದ್ದಾಗಿ ವೊಡ್ಡ ಲಕ್ಕ. ಅವ್ನ ಬೊಡ್ಡಂಗೂ ಅವತ್ತು ಮುಸ್ಟಾನ್ನ...

ಉಂಡು ಬಂದ ಗೌಡ, ಸನ್ನೆ ಮಾಡಿ ಗುಟ್ಟಾಗಿ ತನ್ನತ್ತಿರ್ಕೆ ಕರುದ.

"ನಂಗೊಂದು ಕೆಲ್ಸ ಮಾಡಿಕ್ವಡಬೇಕಲ್ಲೋ, ಲಕ್ಕ?" ಮೆತ್ತಮೆತ್ತಗಂದ

"ಅದೇನು ಗೌಡ್ರೆ, ಯೋಳಿ" ಅಂತಿದ್ದಂಗೇಯ

"ನ್ವಾಡೋ ಲಕ್ಕ, ನಮ್ಮ ಮಠದ ಅಯ್ಯನೋರ ಮಯ್ಯಿಗೆ ರವೋಟು ಚೆಂದಾಗಿಲ್ಲ. ನೀ ವೋಗಿ ಅವರ್‍ಗೆ ಔಸ್ದ ತಕ್ಕಂಬುಂದು ಕ್ವಡಬೇಕಲ್ಲ?"

"ಅದ್ಕೇನ ಆಗ್ಲಿ" ಅಂದ.

"ನ್ವಾಡು, ಈಗ ನೀನು ಮಾರಿಗುಡಿಗೆ ವೋದ್ರೆ, ಅಲ್ಲಿ ಬೈಲಿಗ ರಂಗ, ರಾಚೇವಾರದ ಕಾಳೂರ, ರುದ್ರ, ಕೊಪ್ಪಲು ಚೆನ್ನ, ಗುರುಮಲ್ಲು– ಇವ್ರೆಲ್ಲ ಇರ್‍ತಾರೆ. ಅವರ ಸಂಗಾಟ, 'ಜಪ್ಪಯ್ಯನ ಮಠದ ಸಿವಪಾದಯ್ಯನೋರ್‍ಗೆ ಔಸ್ದ ಬೇಕಂತೆ. ಗೌಡ್ರು ಯೋಳಿಕಳಿಸಿದ್ರು ಅನ್ನು. ತಂದುಕ್ವಡ್ತಾರೆ. ಇಲ್ಲಿಗೆ ಗುಟ್ಟಾಗಿ ತಕ್ಕಂಬಾ..."

"ಆಗ್ಲಿ" ಅಂದು ಲಕ್ಕ ಮಾರಿಗುಡಿಗೋದ. ಇನ್ನೂ ವಳೀಕೆ ಕಾಲಿದ್ನಿಲ್ಲ. ಯಾರೋ ಅಂದ್ರು:

ಮೊಟ್ಟೆ ತುಂಬ ಅಂಬಳಿ
ಮೈತುಂಬ ಕಂಬಳಿ
ಅನ್ನಬಟ್ಟೆ ಆಸ್ತಿ
ಮಿಕ್ಕಿದ್ದೆಲ್ಲ ಜಾಸ್ತಿ

ಉಳಿಕೆಯೋರು ವಳುಗ್ನಿಂದ "ಭೇಸ್ ಮಾತು" ಅಂದದ್ದು ಕೇಳಸ್ತು. ವೊಳಾಗಡೆ ಕಾಳಿಡ್ತಿದ್ದಂಗೆ, ಇನ್ನೊಬ್ಬರಾಗ ಏಳುದ–

ಮೀಸೆ ಬಂದರೆ ದೇಸ ಕಾಣಕ್ಕಿಲ್ಲ,
ಮೊಲೆ ಬಂದರೆ ನೆಲ ಕಾಣಕ್ಕಿಲ್ಲ.

ಇಸ್ಪೀಟು ಎಡದು ಕೆಕ್ಕೆಕ್ಕೆ ನಗಾಡಿದರು.

ಅವರ ಮಾತು, ಅವರ ಯಾಸ–ಇವೆಲ್ಲ ನ್ಯಾಡಿ ಲಕ್ಕಂಗೆ ವಾಕರಿಕೆ ಬರೋವಂಗೆ ಆದರೂವೆ, ಇವ್ನು ಗೌಡ್ನ ಅಪ್ಪಣೆ ಮಿರೋವಂಗಿರ್‍ನಿಲ್ಲ. ಸುಮ್ಕೆ, ಬಾಯಿ ಬಿಚ್ಚದೆ ನಿಂತಿದ್ದ. ವೊಸಿ ವೊತ್ತಿನ ಬಳೀಕ ಗುರುಮಲ್ಲು ಗುರುತಿಸ್ದ.

"ಯಾನ್ಲ ಲಕ್ಕ ಬಂದೆ?" ಕೇಳ್ದ.

"ಸಿವಪಾದಯ್ಯನೋರ್‍ಗೆ ಏನೋ ಔಸ್ದ ಬೇಕಂತೆ. ಗೌಡ್ರು ನಿಮ್ಮ ತಾವು ಕೇಳಿ ತಕ್ಕಂಬಾ, ಅಂದ್ರು" ಅಂತಿದ್ದಂಗೇಯ ಬೈಲಿಗೆ ರಂಗ,

"ಊ, ಊ–ವೊದಲ್ನಂಗೆ ನಾವೀಗ ಅದ್ನ ಗೌಡ್ರ ಅತ್ತಿರಕೆ ನ್ಯಾರವಾಗಿ ತಕ್ಕಂಡು ಹೋಗಕ್ಕುಂಟ?... ಈ ಊರ್‍ನ ಉತ್ಪತ್ತಗರ ಕಾಟದಲ್ಲಿ ಈಗ ಸಾದ್ಯಾನೆ

ಇಲ್ಲ. ಆ ಮಟದ ಆಜೂಬಾಜೂನಲ್ಲಿ ನಾವೀಗ ಸುಳುದಾಡೋದು ಮುಕ್ಸ ಬಂದ್!... ಅದ್ಕೆ ಗೌಡ್ರು ನಿನ್ನ ಮದ್ಯಸ್ತಿಕೆ ಮಾಡಿಕಂಡವ್ರೆ... ಬಾ ಬಾ, ಕ್ವಡ್ತೀನಿ. ತಕಂಡೋಗೀವಂತೆ..."

ಇಸ್ಪೀಟು ಎಲೆ ಎಸೆದು ಬೈಲಿಗೆ ರಂಗ ವೊಂಟ. ಲಕ್ಕ ಅವ್ನ ಹಿಂದುಗಟ್ಕೆ ವೋದ– ಊರ್ನ ಕೊನೀಕೆ ಅಗ್ನಿ ಮೂಲೇಲಿ ಅವ್ನ ಜೋಪಡಿ...ಜೋಪಡಿ ತಲುಪುತ್ಲೇಯ, ಬೈಲಿಗ ರಂಗ ಜೋರ್ನಿಂದ ಕದ ತಟ್ದ. ವಳುಗ್ನಿಂದ,

"ಅಸ್ಸಿ ಯಾವೋನ ಅವ್ನು –ಬೆದೆ ಬಂದೋನ ತರ, ಒಂದೆ ಸಮಕೆ ಇಂಗೆ ಕದ ಕುಟ್ಟೋನು?"

ಬೈತ ಬೈತ, ನಿದ್ದ ಕಣ್ಣ ಹ್ವಸಗ್ತ ಅವನ ಎಂಗಸು ಕದ ತಗಿಯಕ್ಕೆ ಸುಮಾರು ವ್ಯಾಳ್ಯವೇ ಇಡೀತು–ಗಂಡಯ್ನ ನ್ವಾಡಿಮ್ಯಾಲಂತೂ ಉರಿದುಪ್ಪಾಗಿ,

"ಮಾರಿಗುಡಿ ಬುಟ್ಟು ಇಲ್ಯಾಕೆ ಬಂದಿದ್ದೀ–ನಿಂಗೆ ಎಡತಿ ಯಾಕೆ? ಹಕ್ಕಳ್ಯಾಕೆ? –ನಿನ್ನ ಆ ಬರಬಿಜ್ಜಾರು ಬಂದು ವೊತ್ತಗಂಡು ವೊಗಬಾರ್ದ!...ಆ ಮಟದಯ್ಯ ಒಬ್ಬ ಕೇಡಿಗ ಬಂದ ಊರ್ಗೆ–ಹಿಂದಿದ್ದ ಅಯ್ಯನೋರು ದ್ಯಾವರಂತ ಮನುಸ್ರು! ಈವಯ್ಯ ನಿಂಗೆ, ನಿನ್ನ ಪೋಲಿ ಪಟಾಲಂಗೆ ಎಲ್ಲಾರ್ಗೂವೆ ದುಡ್ಡು ಕ್ವಟ್ಟು ಕುಡುಸಿ, ನಿಮ್ಮ ಕೆಯ್ಲಿ ಮಾಡಬಾರದ್ದ ಮಾಡ್ಸಿ ಊರ್ನೆ ನಿಪಾತಗೊಳಸ್ತಾ ಅವ್ನೆ ಅಂತ ವಳುವಳಗೆ ವಸಿ ಜನ ಗುಸಗುಸಗುಟ್ತಾ ಅವ್ರೆ. ಇನ್ನೊಸಿ ಜನ ಇದ್ಕೆಲ್ಲ ಆ ನಂಜೇಗೌಡ್ನೆ ಕೇತು ಅಂತಾನು ಯೋಳೋದ ಕೇಳಿವ್ನಿ... ಯಾರು ಸಾಚವೊ ಯಾರು ಪಾಚವೊ– ಆ ಜಡೆಮುನೀಗೆ ಗ್ವತ್ತು... ಅದೆಂಗಾರು ಆಗ್ಲಿ ಕನ, ನೀ ಯಾಕೆ ಬಂದೆ ಇಲ್ಲಿ? ಆ ಮಾರಿಗುಡೀಲೇಯ ನಿಮ್ಮಪ್ಪನ ಚಪ್ಪೋಡು ಅಂತ ಬಿದ್ದುಕೋ ವೋಗು."

ಅರಳು ಸಿಡಿಯೋವಂಗೆ ಸಿಡುದ್ಲು. ಬೈಲಿಗ ರಂಗ ಕಿಲಾಡಿ. ಒಂದು ಮಾತ್ನೂ ಆಡದೆ ಆಯಿದು ರೂಪಾಯಿ ನೋಟ ವಳುಗಿಸೆಯಿಂದ ತಗ್ದು ಅವಳ ಕೈಯಾಗಿಟ್ಟ. "ಈ ರೂಪಾಯಿ ಯಾವ ಮುಂಡೆಗೆ ಬೇಕಾಗಿತ್ತು?" ಅಂತ ಅಂತಾನೆ ತನ್ನ ರವಿಕೆ ವಳೀಕೆ ಅದ್ನ ಇಳಿಬುಟ್ಟಲು... ಅಲ್ಲಿಂದ ಮುಂದ್ಕೆ ಮಾತ್ನೆಲ್ಲ ನಿಲ್ಲುಸಿ, ತನ್ನ ಗಂಡಯ್ಯ ಬೆಂಕಿಕಡ್ಡಿ ಕೀರಿ, ಸೀಮೆಯೆಣ್ಣೆ ಬುಡ್ಡಿ ಕತ್ತಿಸಿ, ವಳುಕ್ವಾಣೆ ಮೂಲೇಲಿ, ಗೋಣಿ ತಾಟ್ನಲ್ಲಿ ಸುತ್ತಿಟ್ಟಿದ್ದ ಅತ್ತು ಬಾಟ್ಲಿಗಳ ಎತ್ತ ಲಕ್ಕನ ಕಯ್ಯಿಗಿಡಾದ್ನೆ ಗುರುಕಾಯ್ಸಿ ನ್ವಾಡ್ತಿದ್ದು, ಲಕ್ಕ ಆ ಬಾಟ್ಲಿಗಳ ತಕ್ಕಂಡು ವೋರಿಕೊಂಡಿದ್ದೇ ತಡ, ತನ್ನ ಗಂಡನೂವೆ ಲಕ್ಕನ ಬಾಲಂಗಚ್ಯಾಗಿ ಕಾಲಿಟ್ಟಿದ್ದ ಕಂಡು,

"ನೀಯೆಲ್ಲೀಗೆ ವೊಂಟಿದ್ದಿಯೊ ನನ್ನ ಅಳೇನ ಮಗನೆ?" –ಅರಚಿ, ಅವ್ನ

ರಟ್ಟೆ ಇಡುದೆಳ್ದು, ದಡಾರ್ನೆ ಕಡ ಮುಚ್ಚಿ, ತಾಪಾಳು ಝಾಡಿಸಿದ್ಲು...

ವಸಿ ದೂರ ವೋಗೂದರೋಳ್ಗೆ ಆ ಗೋಣಿ ತಾಟ್ನ ವಳುಗೆ ಏನಿರಬೈದು ಅನ್ನೊದು ಲಕ್ಕಂಗೆ ತಿಳಿದೋಗಿತ್ತು. ಅದರ ನಾತವೆ ಸಾರ್ತಾ ಇತ್ತು ಎಲ್ಲಾ ಕತೆನೂವೆ!... ತನ್ನಯ್ಯನೂ ಕುಡಿದು ಬರ್ತಾ ಇರನಿಲ್ವ?... ತನಗೆ ಅದರ ವಾಸಣ ತೀರ ಹೇಸಿಗೆ...

"ಲಕ್ಕ...ಲೋ ಲಕ್ಕ...ನಿಂತುಗೊಳ್ಳಾ ಅಪ್ಪಯ್ಯಾ..."

ಹಿಂದ್ನಿಂದ ಕೂಗ್ತ ಓಡಿಬಂದೋರು ಯಾರೂಂತ ನ್ವಾಡಿದ್ರೆ–ಬೈಲಿಗ ರಂಗ!

"ಸದ್ಯ ಆ ಮಾರಿ ಕಯ್ಯಿಂದ ತೆಪ್ಪುಸಿಬಂದೆ..."ದುಸುದುಸು ಏದ್ತ ವದುರ್ದ.

"ಅದ್ಯಾವ ಮಾಟದಲ್ಲಿ ತೆಪ್ಪುಸ್ದೆ?" –ಲಕ್ಕ ಕೇಳಿದಾಗ,

"ಏಡು ನಿಮಿಸ ಅವಳು ಯೋಳಿದ್ದ ಕೇಳ್ಕಂಡು ವಕ್ಕಡೆ ಕುಕ್ಕುರುಸಿದ್ದೋನು, ಅವಳು ಅಡಿಗೆ ಕ್ವಾಣೆಗೆ ಹ್ವಾದ್ದೆ ಸಮ, ಮುಂದಿನ ಬಾಗಿಲ ತಾಪಾಳ ತೆಗೆದು ವಾಟ ವೊಡದುದ್ದೇ ವೊಡದುದ್ದು!..."

ರಂಗ ಜೋರು ಜೋರ್ನಿಂದ ನಕ್ಕ. ಅಂಗೆ ನಗಾಡ್ವಾಗ ಅವ್ನ ಹ್ವಟ್ಟೆ ಮುಂಚೋರಿ ದೋಣೂವೆ ಎದ್ದು ಬಿದ್ದು ಕುಣುದಾಡ್ತಿತ್ತು. ಅದ ಕಂಡು ಲಕ್ಕನೂವೆ ತಡಕೋನಾರದೆ ಬಿದ್ದು ಬಿದ್ದು ನಗಾಡ್ದ. ನಗಾಡ್ತ ನಗಾಡ್ತಾನೆ ಬೈಲಿಗೆ ರಂಗ ಲಕ್ಕನ ಸಂಸಯಾವ ನಿವಾರ್ಸಿದ್ದ.

"ಈ ಬಾಟ್ಲಿಗಳು ಜಪ್ಪಯ್ನ ಮಟದ ಸಿವಪಾದಪ್ಪಾರಿಗಲ್ಲ ಕನೊ, ಲಕ್ಕ..."

"ಮಂತೆ?"

"ಅವರೆಸರ್ನಲ್ಲಿ ನಂಜೇಗೌಡ್ರು ನಡುಸ್ತಿರೋ ಕರಾಮತ್ತು ಇದು. ಪಾಪ, ಈ ಪರಿಪಾಟ್ಲ ಒಂದೂ ತಿಳೀದ ಆ ಅಯ್ಯನೋರ್ಗೆ ಸುಮ್ಮಸುಮ್ಕೆ ಅಪಾದ, ಕೆಟ್ಟೆಸರು..."

ಕುಡುದ ಗ್ಯಾನದಲ್ಲಿ ಈಟೆಲ್ಲ ಇವರಿಸಿ, ಬೈಲಗ ರಂಗ ಮಾರಿ ಗುಡಿದಿಕ್ಕೆ ವೋಳ್ಳಿದ. ಅಂಗೆ ವೊಳ್ವಾಗ ಲಾಟೀನ ಈ ಕಯ್ಯಿಂದ ಈ ಕಯ್ಯಿಗೆ ಬದ್ಲಾಯಿಸ್ದ. ಆಗ ಅವ್ನ ಕಂಕುಳಲ್ಲಿ ಇರುಕಿಸಿದ್ದ ಬಾಟ್ಲಿಗಳ ಇನ್ನೊಂದು ಹೊದೆ ಲಕ್ಕನ ಕಣ್ಣಿಗೂ ಬಿತ್ತು... "ಈ ನಮ್ಮ ಊರಾಗೆ ಯಾರ್ದೋ ಹೆಸರು, ಇನ್ಯಾರ್ದೋ ಬೊಸರು"– ಇಸ್ಮಯಪಡ್ತ, ಆ ಮಾಲ ಗುಟ್ಟಾಗಿ ಕ್ವಂಡೋಗಿ ಗೌಡ್ರಿಗೆ ತಲುಪಿಸ್ದ ಲಕ್ಕ...ಮಠದ ವಳುಗಡೀಕೆ ಎಲ್ಲೋ ಸಿವಪಾದಪ್ಪನೋರು ತಮ್ಮೋಟಿಗೆ ತಾವು ಯಾವ್ದೋ ಸರಣರ ಪದವ ಅಂದುಕತ್ತಿದ್ದರು...ಗೌಡ್ರಿಗೆ ಕುಸಿ ಆಯ್ತು. ಮೊಗ

ಎತ್ತಿಗಳೊ ತರ ಗೋಣಿತಾಟ ಜ್ವಾಕೆಯಾಗಿ ತತ್ತುಗಂಡು ಮಠದ ಇಂದುಗಡೀಕೆ ಹ್ವಾದರು. ಲಕ್ಕಂಗೆ ಯಾಕೊ ದಾವಾಗಿ ಮಾದಮ್ಮ ಒಂದೀಟು ಮಜ್ಜಿಗೇನಾರ ಕೇಳುವಾಂತ ಲಕ್ಕನೂವೆ ಅವ್ರ ಹಿಂದೆ ಹಿಂದ್ಯೇಯ ವೋದ. ಕ್ವಾಣೇವಳೀಕೆ ಬಿರಬಿರ್ನೆ ವೋದ ಗೌಡ್ರು, ಆ ಗೋಣಿತಾಟ ಮಾದಮ್ನ ಕಯ್ಯಿಗಾಕಿ,

"ಜ್ವಾಪಾನ–ಮಠಕ್ಕೆ ಯಾರ್‍ಯಾರೋ ಬತ್ತಿರ್‍ತಾರೆ. ಯಾರ್‍ಗೂ ವಾಸನೆ ಬೀಳದಂಗೆ, ವಕ್ಕಡೆ ಮುಚ್ಚಿಡು. ನಂಚಿಕಳಾಕೆ ಒಂದೀಟು ಅಪ್ಪಳ, ಸೆಂಡಿಗೆ ಕರಿಡಿಡು. ರಾತ್ರಿಗೆ ಮಠದಲ್ಲಿ ಎಲ್ಲಾರು ಮನಗಿದ ಮ್ಯಾಗೆ ನಂಗೂ ನಿಂಗೂ ಭೋಗ..."

ಅಂದದ್ದು ಲಕ್ಕನ ಕಿವಿಗೂ ಬಿದ್ದು, ಇನ್ನು ಅಲ್ಲಿ ನಿಲ್ಲೋದು ತರವಲ್ಲಾಂತ ಅಲ್ಲಿಂದ ಕಾಲ್ಕಿತ್ತು ಮಠದ ಮುಂಚೋರೆಗೆ ಬಂದು ಮೆಟ್ಟಿಲು ಮ್ಯಾಲ್ಗಡೆ ಕುಂತ. ವಸಿ ವ್ಯಾಳ್ಯದಲ್ಲೆ ಮಾದಮ್ನ ಕ್ವಾಣೆಯಿಂದ ಸುಮ್ಮಾನದಿಂದ ಬಂದ ಗೌಡ್ರು.

"ನೀನ್ನಿಂದ ಬೊ ಉಪಕಾರಾಯ್ತು ಕನೋ, ಲಕ್ಕ"– ಬೆನ್ನುತಟ್ಟಿ "ಮಾತ್ರ ಈ ಚಮಾಚಾರ್‍ವ ಯಾರ ಕುಟ್ಲೂವೆ ಕವ್ ಕಿವ್ ಅನ್ನಬಾರ್‍ದು. ಗ್ವತ್ತಾಯ್ತೇನ್ಲ?" ಅಂದ್ರು.

"ಮುಟ್ಟುಸ್ಕಂಡ್ರಲ್ಲ ಗೌಡ್ರೆ?" –ಲಕ್ಕ ಎದರೆದರಿ ಕೇಳಿದ್ರೆ,

"ಅದ್ಕೇನು ಪರ್ವಿಲ್ಲ ಬುಡು. ಕಯ್ಯಿ ತಾನೆ ಮುಟ್ಟದ್ದು. ತ್ವಳಕಂಡರಾಯ್ತು" –ಅನ್ನಾದ?

ನಂಜೇಗೌಡರ ಈ ಚಾಷ್ಟ್ಯದಿಂದ ಇದಕೂ ಇಂದುಕೆ ನಡೆದಿದ್ದ ಒಂದು ಪರಸಂಗ ಗೆಪ್ತ್ಯಾಗಿ, ತನ್ನ ಹೆಗಳ ಮ್ಯಾಲಿದ್ದ ಕೆಂಪನೆ ಚೌಕಳಿ ವಸ್ತ್ರದಿಂದ ಬಾಯಿ ಮುಚ್ಕಂಡು, ವಳುಗ್ನಿಂದ ಪಿಡೀತಿದ್ದ ನಗಾವ ತಡೆಯಕ್ಕೆ ಕಸರತ್ತು ವಾಡ್ತಿದ್ದ... ಲಕ್ಕನ ಪುಣ್ಯಕ್ಕೆ ಸಿವಪಾದಪ್ಪಾರ್‍ಗೆ ಏನೋ ಬೇಕಾಗಿ "ನಂಜೇಗೌಡ...ನಂಜೇಗೌಡ..." ಅಂತ ಕೂಗಿದ್ರು. "ಬುದ್ದಿಯೋರು ಕರೀತಾ ಅವ್ರೆ. ಅದೇನು ಕೇಳಿಕಂಬತ್ತೀನಿ" –ನಂಜೇಗೌಡರು ಮಠದ ವಳಗಡೀಕೆ ನುಗ್ಗಿದ್ರು. ಗೌಡ್ರೆದುರ್‍ಗೆ ವೊಟ್ಟೆ ವಳೀಕೆ ಅದಮಿ ಎಂಗೊ ತಡಕಂಡಿದ್ದ ಲಕ್ಕನ ನಗ, ಕಟ್ಟೆ ಒಡದು ಉಕ್ಕುಕ್ತ ಬಂತು. ನಗಾಡ್ತಿದ್ದಂಗೆ ಆ ಪರಸಂಗದ ಕಟ್ಟೂ ಬಿಚ್ಚಿಗತ್ತು:

ದರುಮನಳ್ಳಿ ಸಿವಾಚಾರದೋರು ಎಲ್ಲರೂವೆ ಜಪ್ಪಯ್ಯನ ಮಠಕೆ ನಡಕೊತ್ತಿರನಿಲ್ಲ. ಗ್ರಾಮದ ಏಳೆಂಟು ಇಸಮುಗಳ್ಗೆ ಕಡ್ಲೆ ಮಠದ ಅಯ್ಯನೋರೆ ಗುರುಗಳು...ಒಂದು ದಪ ಏನಾಯ್ತೂಪ್ಪಾಂದ್ರೆ–ಕಡ್ಲೆಮಠದ ಅಯ್ಯನೋರು ದರುಮನಳ್ಳಿ ಒಬ್ಬ ಭಕ್ತರಟ್ಟೀಗೆ ಭಿನ್ನಕ್ಕೆ ಬಂದಿದ್ರು, ತಾನ ಮುಗುಸಿ, ಮಡಿ

ಉಟ್ಕಂಡು ಸಿವಪೂಜೆಗೆ ಈನ್ನೇನು ಕುಂತುಗೋಬೇಕು– ಆ ವ್ಯಾಳ್ಯಕ್ಕೆ ಸರ್ರ್ಯಾಗಿ ಅವರಿಗೆ ನಡಕೊತ್ತಿದ್ದ ಇನ್ನೊಬ್ಬ ಭಕ್ತ ಬರಬೇಕ?... ಬಂದೋನು ಉಳಿಕೆಯೋರಂಗೆ ಗಮ್ಮನೆ ಇರಬ್ಯಾಡದ?...ಮೊದ್ಲೆ ಎದೆ ಸೀಳುದ್ರೆ ಮೂರು ಅಕ್ಷರ ಕಲೀದ ರೈತಾಪಿ ಕುಳ!... ತನ್ನ ತ್ವಾಟದಲ್ಲಿ ಬೆಳುದಿದ್ದ ಕೆಂಡಸಂಪಿಗೆ ಹೂವ ಮಸ್ತಾಗಿ ತಕ್ಕಂಬಂದು,

"ತಕ್ಕನ್ನಿ ನನ್ನೊಡೆಯ. ನಿಮ್ಮ ಸಿವಪೂಜೆಗೆ ತಂದಿವ್ನಿ" ಅಂತ ಭಕ್ತಿಯಿಂದ ಅವ್ರ ಮುಂದಕಿಟ್ಟ.

ಆ ಅಯ್ಯನೋರಿಗಾಗ್ಲೆ ಎಪ್ಪತ್ತೆಂಟರ ಮುಪ್ಪು. ಬೋ ಮಡಿ. ದೂರದಿಂದ್ಲೇಯ

"ಸಂತೋಸ, ಸಂತೋಸ, ಸಂಪಗೆ ಹೂವು ಪಸಂದಾಗದೆ. ಯಾಪಾಟಿ ತಂದು ಬುಟ್ಟೆಯಪ್ಪ?" ಅಂದ್ರು. ತಟಕ್ನೆ ಆ ಸಿವಭಕ್ತರೋನು,

"ನಿಮ್ಮ ಪಾದಕೆ, ಇದ್ಯಾವ ಮಹಾ ಸ್ಯಾಟ–ಬುಡಿ ನನ್ನೊಡೆಯ. ಬೇಕಾದರೆ, ಇದ್ರ ಅತ್ತರೋಟು ಹೂವ ನಿಮ್ಮ ಪಾದಕ್ಕೆ ತಂದು ಎರೀತೀನಿ"–ಅನ್ನಾದ?

ಆ ಮಡಿ ಅಯ್ಯನೋರು ಈ ಕೇಳಬಾರ್ದ ಮಾತ ಕೇಳಿ, ದಿಗ್ಗನೆದ್ದು, "ಮಡಿ ವೋಯ್ತು, ಮಡಿ ವೋಯ್ತು" ಅಂತಾ ಅಂತಾ ತಾನ ಮಾಡಕ್ಕೆ ಪುನಾ ಬಚ್ಚಲ ಕ್ವಾಣೆಗೋದ್ರು...ಇದ ನೋಡಿ, ಅಲ್ಲಿ ನೆರುದಿದ್ದ ಭಕ್ತರಿಗೆಲ್ಲ ತಮ್ಮ ಸ್ವಾಮಿಗಳ್ಗೆ ಎಂತಾ ಅಪಚಾರ ಆಯ್ತೂಂತ ಸಿಟ್ಟು. ಅವಯ್ಯ ಕೆಂಡಸಂಪಿಗೆ ಹೂವ ಕುಯ್ಯಕ್ಕೆ ಲಕ್ಕನ್ನೂ ಕರಕಂಡೋಗಿದ್ರಿಂದ, ಲಕ್ಕೂನೆ ಇದ್ನೆಲ್ಲ ನೋಡ್ತಾ ಕುಂತಿದ್ದ. ಸಿಟ್ಟು ಅತ್ತಿ ಕುದೀತಿದ್ದ ಭಕ್ತಾದಿಗಳು, "ಏನಯ್ಯ, ವಳ್ಳೆ ಗೆಣೆಕಾರ ನೀನು!... ಈ ಕೆಲಸುವಾ ಮಾಡಾದು? –ಏನೇನೊ ಮಾತಾಡಿ ಬುದ್ದಿಯೋರು ಈ ಇಳಿ ವಯಸ್ನಲ್ಲಿ ಪುನಾ ತಾನ ಮಾಡೊ ತರ ಮಾಡಿದ್ಯಲ್ಲ?"– ಅಂತ ಒಬ್ಬ ತಪ್ಪ ಒಬ್ಬರು ಚೀಮಾರಿ ಅಕಿದ್ರು.

ಅವಯ್ಯಂಗೆ ತನ್ನಿಂದ ಆಚಾತರ್ಯ ಅದ್ದು ಮಂದಟ್ಟಾಗಿ, ಸಾಮಿಯೋರು ತಾನದ ಮನಿಂದ ವರೀಕೆ ಬರಾದ್ನೆ ಕಾಯ್ತಿದ್ದು, ಬಂದೊಡ್ನೆ, ಕವಕ್ನೆ ಅವ್ರ ಮುಂದ್ಕೆ ಹಾಸಿ ಅಡ್ಡಬಿದ್ದು–

"ಮಾ ತೆಪ್ಪಾಯ್ತು, ನಿಮ್ಮ ಪಾದ. ಇನ್ನೊಂದು ಸತಿ ನಾನೇನಾರ ಈ ತೆರ ಬಾಯಿ ತೆಪ್ಪಿ, ಕೆಟ್ಟ ವಾಕ್ಸ ಕಡಿಸುದ್ರೆ, ನನ್ನ ಕೆಡೀಕಂದು ಮುಖಳೀಗೆ ಹೆಟ್ಟಿ" ಅಂದುಬುಟ್ಟ!

ಆ ಮಾತ ಕೇಲಿದ ಸ್ವಾಮಿಗೋಳು ಬೆಚ್ಚೋದ್ರು. ಪುನಾ ತಾನ ಮಾಡಕ್ಕೆ

ಬಚ್ಚಲು ಕ್ವಾಣೆ ವೊಕ್ಕಿದೋರು, ಆ ಭಕ್ತ ಆ ಅಟ್ಟಿ ಬುಟ್ಟು ಆಚ್ಗೆ ಹ್ವಂತೋಗೊ ವರ್ಗೂವೆ ಕ್ವಾಣಿಂದ ಈಚ್ಗೆ ಕಡೀನೆ ಇಲ್ಲ!

ಈ ಪರಸಂಗ ಗೆಪ್ತಿ ಆದಂಗೆಲ್ಲ ಲಕ್ಕ ಬಿದ್ದುಬಿದ್ದು ನಗಾಡ್ದ. ಆದ್ರೆ ನಂಜೇಗೌಡ ವಳುಗ್ನಿಂದ ಬತ್ತಿದ್ದ ಕಂಡು ನಗ ನಿಲ್ಲುಸಿ, ಗಂಬೀರ್ವಾಗಿ ಕುಂತರೂವೆ, ಲಕ್ಕನ ಮೊಗಲ್ಲಿ ನಲೀತಿದ್ದ ಸುಮ್ಮಾನವ ಗೌಡ ಗುರಿತಿಸ್ದೇ ಇರ್ನಿಲ್ಲ

"ಏನ್ಲ ಲಕ್ಕ, ಈಪಾಟಿ ಸುಮ್ಮಾನದಲ್ಲಿದ್ದೀಯಲ್ಲ?" ಕೇಳಿದ.

"ಏನಿಲ್ಲ ಗೌಡ್ರೆ, ಹಿಂದಿಂದು ಯಾವ್ದೊ ಸಂಗ್ತಿ ನೆಪ್ಪಾಯ್ತು. ನಗ ಬಂತು. ವೋಟೇಯ" ಎಂದ. ಅದೇನು ಸಂಗ್ತಿ ಅಂತ ಗೌಡ ಕೇಳ್ದೇ ಇರ್ಲೀಂತ ದೇವರ್ಗೆ ಪ್ರಾರ್ತನೆ ಮಾಡ್ತಿದ್ದ ಲಕ್ಕ. ಅದಕ್ಕೆ ತಕ್ಕ ಹಾಗೆ ಗೌಡರಿಗೂ ಅಂಥ ಚಿಲ್ಲರೆ ವಿಷಯವನ್ನು ಹೆಕ್ಕಿ ತಿಳಿಯುವ ಕಾತರವೂ ಇರಲಿಲ್ಲ. ಅವನಿಗೆ ಕಾತರವಿದ್ದುದು ತನಗೆ ಪ್ರತಿನಿತ್ಯ ಅಗತ್ಯವಾದ ಔಷದಿ'ಯನ್ನು ಆಗಿಂದಾಗ ಮುಗಿದಂತೆ ಒದಗಿಸಲು ಲಕ್ಕ ಒಪ್ಪುವನೋ ಇಲ್ಲವೊ, ಎಂಬುದರಲ್ಲಿ!... ಲಕ್ಕ ಒಂದು ಮಾದರಿಯ ಹೈದ. ತನಗೆ ಸರಿ ಕಂಡಿದ್ನೇ ಅವ್ನು ಒಪ್ಪೋದು. ಇದು ಗೌಡಂಗೆ ಗೊತ್ತಿದ್ದರಿಂದ ಲಕ್ಕನ್ನ ಇನ್ನೊಮ್ಮೆ ನೇರವಾಗಿ ಕೇಳಲು ಸಂಕೋಚ. ಬಾಯ ತೆಗೀತಾನೆ. ಆಮೇಲೆ ಏನೋ ಅಲೋಚಿಸಿದಂತೆ ಮುಚ್ಚತಾನೆ–ತೆಗೀತಾನೆ, ಮುಚ್ಚುತಾನೆ...

ಗೌಡ ಹೀಗೆ ಪೇಚಾಡುತ್ತಿದ್ದುದು ಲಕ್ಕನಿಗೂ ಕಸಿವಿಸಿಯಾಗಿ,

"ಹಂಗಾರೆ ನಾ ವೋಯ್ತಿನಿ, ಗೌಡ್ರೆ" ಎಂದು ಎದ್ದ.

"ಹುಂ, ಹೋಗಿ ಬಾ. ನಾನೂವೆ ನಮ್ಮ ಸ್ಯಾನುಬೋಗ್ರು, ಕೆಸವಯ್ಯಾರು, ಆ ಕಿಸ್ಟಸಾಸ್ತ್ರಿಗಳು ಇವ್ರೆಲ್ಲಾರ ತ್ವಾಟಗೊಳ ಕಡೆ ಅಂಗೇ ಕಾಲಾಡಿ ಬತ್ತೀನಿ" ಎನ್ನುತ್ತ ನಾಲ್ಕು ದಾಪು ಹಾಕಿ, ಏನೋ ನೆನೆದಂತೆ ಹಿಂದಿರುಗಿ ಬಂದು, ಬೆಣ್ಣೆಯಿಂದ ಕೂದಲು ತೆಗೆಯುವ ಹಾಗೆ, ಮೆದು ದನಿಯಲ್ಲಿ ನಂಜೇಗೌಡ,

"ನೀ ತಂದು ಕ್ವಟ್ಟ ಔಸದಿ ಇನ್ನೊಂದು ಎಂಟು ಜಿನ ಆಗವ್ಯೆದು ಕನೊ ಲಕ್ಕ. ಅಮ್ಯಾಕೆ ಪುನಾ ನೀನೇ ತಂದು ಕ್ವಡಬೇಕು... ಬುದ್ದಿಯೋರೂವೆ ಲಕ್ಕನೇ ನಂಬಿಕಸ್ತ, ಅವ್ನ ಕೈಲೇ ತರಿಸೊಂದವರೆ... ಅಂಗೇಯ ನೀ ತಂದಾಗ್ಲೆಲ್ಲ ನಮ್ಮಟದಲ್ಲೇ ಉಂಡೋಗಲಿ ಅಂತಾನು ಅಂದ್ರು" ಎಂದ.

ನಾ ತರನಾರೆ ಆ ಗಬ್ಬುನಾತ ತಡಿನಾರೆ ಅನ್ನಾ ಮಾತ ನಾಲಿಗೆ ತುದಿಗಂಟ ಅರಿಕಂಬಂದು ಮುಂದ್ಕೆ ದಾಟನಾರ್ದೆ, ಅಡಗಟ್ಟೆ ಕಟ್ದಾಗ ಗದ್ದೆ ಪಾತಿ ನೀರು ಚೂರೂ ತಟಾಯಕ್ಕಿಲ್ವಲ್ಲ –ಅಂಗೆ, ತಟಕ್ನೆ ಬಂದಾಯ್ತು... ತನ್ನ ಅಯ್ಯಂಗೂ ತನಗೂವೆ ವಾರ ಒಪ್ಪತ್ನಿಂದ ಇದೆ ಇಚಾರ್ದಲ್ಲಿ ಕದ್ನ ನಡುದೇ ಇತ್ತು...

"ಊರ್ನ ದೊಡ್ಡ ದೊಡ್ಡ ಕುಳಗಳ್ನ ಮ್ಯಾಲೆ ಕೆಡಿಕಾಬ್ಯಾಡ. ಅದ್ರಿಂದ ಲೇಸಾಗಕ್ಕಿಲ್ಲ. ಅವ್ರು ಒಂದು ಮೊಳ ಕೇಮೆ ಯೇಳಿದ್ರೆ, ನಾಕು ಮೊಳ ಮಾಡ್ಕೊಂಡು"– ಇದು ಅಯ್ಯನ ವರಾತ.

"ಮಾಡಬಾರದ್ದ ಮಾಡೊಂದ್ರೆ ಎಂಗೆತಾನೆ ಮಾಡಕ್ಕಾದಾತು?"–ಇದು ಲಕ್ಕನ ತಕರಾರು.

"ಒಂದೀಟು ಕೇಮೆ ಮಾಡಿಕ್ವಟ್ರೆ, ನಿನ್ನ ಮಾನಕ್ಕೆ ಮುಕ್ಕಾದಾತ?" – ಇದು ಅಯ್ಯನ ದಬಾವಣೆ.

"ಅವ್ನ ಕುಟ್ಟೆ ವಾಕ್ವಾದ ಮಾಡಾದು ಒಂದೆ, ಅರೆಕಲ್ಲು ಬಂಡೆಗೆ ತಲೆ ಚೆಚ್ಚಿಕಳಾದು ಒಂದೆ!... ಈ ಗೌಡನೋ ಮಾ ಪಾತಕ. ಗಂಗಪ್ನಂಗೆ ದಡೂತಿ ಇಸಮೂ ಅಲ್ಲ –ಸೆಣಕಲು ಸಿಳ್ಳೆಕ್ಯಾತೆ. ಆದ್ರೆ ಗುಳ್ಳೆ ಲಕ್ಕನಂತ ಕುಯುಕ್ತಿ. ತನ್ನ ಕಿತಾಪತ್ಯಿಂದ ಊರ್ನೆ ಅತ್ತಿ ಬೇಯ್ಸಿ, ತಾನು ಮತ್ರ ಕಾಣ್ದ ಪಾಯಿ ತರ ನಟನೆ ಮಾಡಿ, ಅಯ್ಯಯ್ಯೊ ಇದ್ಯಾವ ಮನೆಹಾಳನಪ್ಪ ಈ ಕೆಲುಸ ಮಾಡ್ದೋನೂಂತ ತಾನೇ ಮಟಾಮೊದ್ಲು ಚರಿಗೇಲಿ ನೀರು ತಕ್ಕೊಂಡು ಬೆಂಕಿ ಉರಿ ಅರಿಸಕ್ಕೆ ಬತ್ತಾನೆ!... ವಸಿ ಜಿನದಿಂದ ರುದ್ರನ್ನ ಸಾಸ್ತ್ರಿಗಳ ತ್ವಾಟಕ್ಕೆ ಕೆಡುವಿದೋನ್ ಇವ್ನೆ, ಈಗ ಸಂಬಾವಿತ್ನಂಗೆ ಅವ್ರಟ್ಟಿಗೂ ತ್ವಾಟಕೂ ಓಡಾಡ್ತ ಮತ್ತೆ ಮಣ್ಣ ಮಾಡ್ತಿರಾನು ಇವ್ನೆ!..."

ಒಂದು ಕಾಲನ್ನು ನೆಲದ ಮೇಲಿಟ್ಟು ಇನ್ನೊಂದನ್ನು ಮಠದ ಮುಂದಿಟ್ಟು ಮೆಟ್ಟಿಲ ಮೇಲಿಟ್ಟು ಸಾವಧಾನವಾಗಿ ಬೀಡಿ ಕತ್ತಿಸಿ ಎಳೀತಿದ್ದ ನಂಜೇಗೌಡ, ಕೊನೆಯ ದಂ ಎಳೆದು ಬೀಡಿಯ ತುಂಡನ್ನು ಬಿಸುಟು,

"ಯಾಕ್ಲ ಲಕ್ಕ, ನನ್ನ ಮಾತ್ಗೆ ಏನೊಂದೂ ಜವಾಬು ಕ್ವಡದೆ, ಅದೇನೋ ಯೋಚ್ನೆ ಮಾಡ್ತ ನಿಂತೆ?" –ಕೇಳಿದ.

ಲಕ್ಕ ಪರಮ ಪ್ರಯಾಸದಿಂದ ಹಲ್ಲುಕಚ್ಚಿ,

"ಆಗ್ಲಿ ಗೌಡ್ರೆ." ಎಂದು ಹೆಜ್ಜೆ ತೆಗೀತರುವಾಗ, ನಂಜೇಗೌಡನಿಗೆ ಲಕ್ಕನ ಒಪ್ಪಿಗೆಯಿಂದ ಬಲು ಮೋಜಾಯಿತು. ಮತ್ತೊಮ್ಮೆ ಅವನ ಬೆನ್ನುತಟ್ಟಿ,

"ಲಕ್ಕ, ನಿನ್ನ ಗುಣವ ಯಾವತ್ತೂ ನಾ ಮೆಚ್ಚಿಗಂಡಿವ್ನಿ...ನಿನ್ನ ಜಪಾತಿ ಜನ, ನಿಮ್ಮ ಹೊಲಗೇರೀಲೆ ಯಾಕೆ, ನಮ್ಮ ಇಡೀ ಊರ್ನಲ್ಲೆಲ್ಲ ತಡಕಾಡಿದ್ರೂ ಸಿಕ್ಕಕ್ಕಿಲ್ಲ" ಎಂದು ಬ್ರಾಹ್ಮಣರ ತೋಟಗಳತ್ತ ನಡೆದ.

ಲಕ್ಕನೂವೆ ಮಠ ಬಿಟ್ಟು, ಮಠದ ಮುಂದಿನ ಬೀದಿಗೆ ಕಾಲಿಟ್ಟ, ನಂಜೇಗೌಡ್ನ ಬಲೇಗೆ ನಾ ಬಿದ್ದೋದೆ, ಅನ್ನೋ ತೋಳಲಾಟ ಅವ್ನ ಎದೆಯೊಳ್ಗೆ ತಮಟೆ ಬಾರಿಸಕ್ಕೆ ಮುಟ್ಟಿಕಂಡಿತ್ತು.

## ೪

ಅಡಿಕೆ ಮರಗಳಿಗೂ ವೀಳೆಯದೆಲೆ ಹಂಬುಗಳಿಗೂ ಕಟ್ಟು ಬಿಗಿಯುವ ಕಾರ್ಯ ಮುಗಿಯುತ್ತ ಬಂದಿತ್ತು. ಕೊನೆಯ ಒಂದೆರಡು ಮರಗಳಿಗೆ ಅವರನ್ನೂ ಕಟ್ಟು ಬಿಗಿಯುತ್ತಿರುವಾಗಲೆ, "ಮಾಮ, ಮಾಮ– ನಾನು ತೋಟಕ್ಕೆ ಬಂದಿದೀನಿ" ಎನ್ನು ಎಳೆ ವಯಸ್ಸಿನ ದನಿಯನ್ನು ಕೇಳಿ ಕೃಷ್ಣಶಾಸ್ತ್ರಿಗಳು ಹೊರಳಿ ನೋಡಿದರು, ಲಂಗವನ್ನು ಮೇಲೆತ್ತಿ ಪುಟ್ಟ ಪುಟ್ಟ ಹೆಜ್ಜೆ ಇಟ್ಟು ಬರುತ್ತಿದ್ದ ಸರಸಿ, ಅವಳನ್ನು ಹಿಂಬಾಲಿಸಿ ತಲೆ ತುಂಬಾ ಸೆರಗು ಹೊದೆದ ರುಕ್ಮಿಣಿ– ಇಬ್ರನ್ನೂ ಗಮನಿಸಿ,

"ಇವಳನ್ನು ಯಾಕೆ ಇಲ್ಲಿಗೆ ಕರೆದುಕೊಂಡು ಬಂದೆ?" ಎಂದು ರುಕ್ಮಿಣಿಯನ್ನು ಪ್ರಶ್ನಿಸಿದರು.

"ಹಟಮಾರಿ, ಎಷ್ಟು ತಡೆದರೂ ಕೇಳಲಿಲ್ಲ" ತಪ್ಪು ಮಾಡಿದವಳಂತೆ ರುಕ್ಮಿಣಿ ಮೆಲ್ಲನೆ ಉಸಿರಿದಳು.

ಸರಸಿ ಈ ರೀತಿ ಇಚ್ಛೆ ಬಂದಾಗ ತನ್ನ ತಾಯಿಯೋಡನೆಯೂ ರುಕ್ಮಿಣಿಯೊಡನೆಯೂ ತೋಟಕ್ಕೆ ಧಾವಿಸುತ್ತಿದ್ದುದು ಇದೇ ಮೊದಲೇನಲ್ಲ. ಅವಳು ಬಂದಾಗಲೆಲ್ಲ ಶಾಸ್ತ್ರಿಗಳು ಹುಸಿ ಬೇಸರ ತೋರಿದರೂ ಅನಂತರ ಅವಳನ್ನು ಮುದ್ದಿಸುತ್ತಿದ್ದುದರಿಂದ ಸರಸಿಯು ಅವರ ಮಾತಿಗೆ ಕಿಂಚಿತ್ತೂ ಸೊಪ್ಪು ಹಾಕದೆ, ತೋಟದಲ್ಲೆಲ್ಲ ಸಡಗರದಿಂದ ಓಡಾಡುವಳು. ಆಳುಗಳ ಕೆಲಸವನ್ನು ಸರಸಿ ನೋಡುತ್ತ ನಿಂತಾಗ ಮನೆಗಾಗಿ ರುಕ್ಮಿಣಿಯು ವೀಳೆಯದೆಲೆಗಳನ್ನು ಬಿಡಿಸಲು ಪ್ರಾರಂಭಿಸಿದರು.

ಶಾಸ್ತ್ರಿಗಳು ಕೊನೆಯ ಮರದ ಹಂಬಿಗೆ ಕಟ್ಟು ಬಿಗಿಯುತ್ತಿರುವಾಗ ತೋಟವನ್ನು ಪ್ರವೇಶಿಸಿದರು ವೆಂಕಟೇಶ ಜೊಯಿಸರು. "ಇನ್ನು ಮುಗೀಲಿಲ್ಲವೆ ತೋಟದ ಕೆಲಸ?" ಎಂದವರೆ "ಹಾಕಿಕೊಳ್ಳಲಿಕ್ಕೆ ಒಂದೆರಡು ಎಲೆ ಬಿಡಿಸಿಕೊಳ್ಳಲೆ?" –ಎನ್ನುತ್ತ, ಶಾಸ್ತ್ರಿಗಳ ಒಪ್ಪಿಗೆಗೆ ಕಾಯದೆ, ಸಮೀಪದ ಮರಕ್ಕೆ ಬಳಸಿದ್ದ ಹಂಬಿನಿಂದ ನಾಲ್ಕೈದು ವೀಳೆಯದೆಲೆಗಳನ್ನು ಕಿತ್ತು, ಸೊಂಟಕ್ಕೆ ಸೆಕ್ಕಿದ್ದ ಬಟ್ಟೆಯ ಚೀಲದಿಂದ ಗೋಟಡಿಕೆ ತೆಗೆದು ಬಾಯಿಗೆ ಎಸೆಯುತ್ತ, ಹಿತ್ತಾಳೆಯ ಉದ್ದನೆ ಸುಣ್ಣದ ಡಬ್ಬಿಯಿಂದ ಸುಣ್ಣವನ್ನು ಹೆಬ್ಬೆರಳಿನ ಉಗುರಿನಿಂದ ಮೀಟಿ ತೆಗೆದು ಎಲಗೆ ಹಚ್ಚುತ್ತಿರುವಂತೆಯೆ, ಶಾಸ್ತ್ರಿಗಳು ಬಿದಿರೇಣಿಯಿಂದ ಕೆಳಗಿಳಿದು ಕೊಳದತ್ತ ಹೆಜ್ಜೆ ಹಾಕುವುದನ್ನು ಗಮನಿಸಿ, ತಾವು ಅವರನ್ನು ಹಿಂಬಾಲಿಸಿದರು.

ಶಾಸ್ತ್ರಿಗಳು ಕೊಳದ ಮೆಟ್ಟಿಲುಗಳನ್ನಿಳಿದು ಕೈಕಾಲಿನ ಕೆಸರು ತೊಳೆದು ಮೇಲೆ ಬರುವವರೆಗೆ ವೆಂಕಟೇಶ ಜೋಯಿಸರು ಮೇಲುಗಡೆಯ ಮೆಟ್ಟಿಲು

ಮೇಲೆಯೇ ಕುಳಿತರು. ಹೆಗಲ ಮೇಲಿನ ವಲ್ಲಿಯಿಂದ ಕೈಗಳನ್ನು ಒರೆಸುತ್ತ ಶಾಸ್ತ್ರಿಗಳು,

"ಏನು ಜೋಯಿಸರ ಸವಾರಿ, ಇಷ್ಟು ದೂರ?" –ಎಂದು ಕೇಳಿದರು.

"ಕೂತುಗೊಳ್ಳಿ ಶಾಸ್ತ್ರಿಗಳೆ, ಸ್ವಾರಸ್ಯವಾದ ವಿಚಾರ. ನಿಮಗೆ ತಿಳಿಸಬೇಕು ಎಂತಲೆ ಬಂದೆ" ಎಂದರು ಶಾಸ್ತ್ರಿಗಳು ಹುಬ್ಬೇರಿಸಿ.

"ಏನಪ್ಪ ಅಂಥ ವಿಚಾರ?" – ಎಂದು ಪ್ರಶ್ನಿಸಿದರು

ಜೋಯಿಸರು ತಮ್ಮ ನಸ್ಯದ ಬಣ್ಣದ ಶಾಲನ್ನು ಸರಿಪಡಿಸಿಕೊಳ್ಳುತ್ತ, ಹುಸಿ ನಕ್ಕು,

"ನಮ್ಮ ನಾಟಕದ ಕೇಶವಯ್ಯ ಇಲ್ಲವೆ?..."

ಶಾಸ್ತ್ರಿಗಳು ಹೂಂಗುಟ್ಟಿದರು.

"ಅವನು ಈ ಬೆಳಿಗ್ಗೆ ಆ ಪುಂಡ ರುದ್ರನಿಗೆ ಒಳ್ಳೆ ಪಾಟ ಕಲಿಸಿದ..."

"ಹೇಗೆ?"

"ಬೇರೆಯವರ ತೋಟ ಲೂಟಿ ಮಾಡೋ ಹಾಗೆ ರುದ್ರ ಕೇಶವಯ್ಯನ ತೋಟಕ್ಕೂ ಅಗಾಗ ಲಗ್ಗೆ ಹಾಕ್ತಿದ್ದ... ಬಹಳ ದಿನ ಚಿಂತಿಸಿ ಕೇಶವಯ್ಯ ಒಂದು ಉಪಾಯ ಹೂಡಿದನಂತೆ..."

"ಏನದು?"

"ಒಬ್ಬ ಹಾವಾಡಿಗನಿಗೆ ದುಡ್ಡು ಕೊಟ್ಟು, ಅವನನ್ನು ಜೊತೆ ಮಾಡಿಕೊಂಡು, ಹಲ್ಲು ಕಿತ್ತ ಒಂದು ನಾಗರಹಾವನ್ನು ತೋಟದ ತುದಿಗಿತ್ತ ಒಂದು ತೆಂಗಿನ ಮರದ ಮೇಲೆ ಬಿಡು, ಎಂದನಂತೆ. ಆ ಹಾವಾಡಿಗನಿಗೆ ಮರ ಹತ್ತಿ ಅಭ್ಯಾಸವಿಲ್ಲ, 'ನಾ ಹತ್ತಲಾರೆ' ಎನ್ನುತ್ತಲೂ ಆ ಹಾವನ್ನು ತಾರ ಬುಟ್ಟಿಯಿಂದ ತೆಗೆದು, ಈಶ್ವರನ ಹಾಗೆ ಅದನ್ನ ತನ್ನ ಕೊರಳ ಸುತ್ತಲೂ ಸುತ್ತಿ, ಮರ ಹತ್ತಿ ಹೋಗಿ, ತೆಂಗಿನ ಗರಿಗಳ ನಡುವೆ ಆ ಹಾವನ್ನಿಟ್ಟು ಇಳಿದನಂತೆ ಕೇಶವಯ್ಯ..."

"ಈ ಉಪದ್ವ್ಯಾಪವೆಲ್ಲ ಯಾಕೆ?" – ಶಾಸ್ತ್ರಿಗಳು ಬೆರಗಾದರು.

"ಕೇಳಿ ಶಾಸ್ತ್ರಿಗಳೆ. ಕೇಶವಯ್ಯನ ಪ್ಲಾನು ಏನೆಂದರೆ–ರುದ್ರ ಬಂದು ಮರ ಹತ್ತಿದಾಗ, ನಾಗರಹಾವು ಹೆಡೆ ಎತ್ತಿ ಆಡೋದು ಕಂಡು, ಜಂಘಾಬಲ ಉಡುಗಿ, ಇನ್ನು ಮುಂದೆ ತನ್ನ ತೋಟದೆಡೆಗೆ ತಿರುಗಿಯಾ ಸಹ ನೋಡದಿರಲಿ... ಇದು ಅವನ ಹೂಟ...!

"ಒಳ್ಳೆ ಉಪಾಯ. ಅವನ ಪ್ಲಾನು ಫಲಿಸಿತೊ!"– ಕುತೂಹಲಾವಿಷ್ಟರಾಗಿ ಕೇಳಿದರು ಶಾಸ್ತ್ರಿಗಳು.

"ಇಲ್ಲ. ಕೆಲವು ದಿನ ಫಲಿಸಲಿಲ್ಲ. ಯಾಕೆಂದರೆ, ರುದ್ರ ತೋಟಕ್ಕೆ ಕಾಲಿಡುವ ಹೊತ್ತನ್ನೇ ಅನುಸರಿಸಿ ಈ ತಂತ್ರ ಹೂಡಿದ್ದರೂ, ಕೇಶವಯ್ಯನ ಲೆಕ್ಕಾಚಾರ ತಪ್ಪಿ, ರುದ್ರ ನಾಲ್ಕು ದಿನ ಪೂರ್ಣವಾಗಿ ಬಚಾವಾದನಂತೆ..."

"ಹೇಗೆ?"

"ಹಾವಿದ್ದ ಮರವನ್ನು ಬಿಟ್ಟು ರುದ್ರ ಬೇರೆ ಮರವನ್ನು ಹತ್ತಿತ್ತಿದ್ದ. ಹಾವಿನ ವಿಷಯ ಅವನಿಗೇನು ಗೊತ್ತು. ಅಂತೂ ಹಾಗಾಗುತ್ತಿತ್ತು. ಐದನೆ ದಿನ ರುದ್ರ ಎಂದಿನಂತೆ ಯಾವ ಭಯವೂ ಇಲ್ಲದೆ ಪಶ್ಚಿಮದ ಬೇಲಿ ಕಿಂಡಿಯಿಂದ ಪ್ರವೇಶಿಸಿ, ಮಟಮಟ ಮಧ್ಯಾಹ್ನ ಆಳುಕಾಳು ಯಾರೂ ಇಲ್ಲದೇ ಇರೋದನ್ನ ಖಾತ್ರಿ ಮಾಡಿಕೊಂಡು, ಸರಸರನೆ ಒಂದು ತೆಂಗಿನ ಮರವನ್ನೇರಲು ಆರಂಭಿಸಿದ. ತುದಿಯನ್ನು ಸಮೀಪಿಸಿದ ಹಾಗೆ ಭರ್ಜರಿ ನಾಗರಹಾವೊಂದು ಹೆಡೆ ಬಿಚ್ಚಿ ಭುಸ್ ಭುಸ್ ಮೊರೀತ ಭಯಂಕರವಾಗಿ ಹೆಡೆಯಾಡೊದನ್ನ ಕಂಡು, ಥರಥರ ನಡುಗಿದನಂತೆ ರುದ್ರ. ಕಿಟಾರನೆ ಕಿರುಚಿದನಂತೆ. ಇನ್ನೇನು ಮರದಿಂದ ಬಿದ್ದೇ ಹೋಗಬೇಕು–ಹೇಗೋ ಮರವನ್ನು ತಬ್ಬಿ ಹಿಡಿದನಂತೆ... ಅಲ್ಲೆ ಸಮೀಪದ ಮಲ್ಲೆಗೆ ಹೊದರಿನ ಹಿಂದ ಅವಿತಿದ್ದ ಕೇಶವಯ್ಯ ತನ್ನ ಆಳುಮಗನ ಜೊತೆ ಕಾಣಿಸಿಕೊಳ್ಳುತ್ತ.

"ಓಹೊ ರುದ್ರನೊ...? ನಾನು ಯಾರೋ ಅಂತಿದ್ದೆ!" ಎನ್ನುತ್ತಲೆ, ಮೇಲೆ ಹತ್ತಲೂ ಅಗದೆ, ಇಳಿಯಲೂ ಆಗದೆ, ರುದ್ರ ಕಂಗಾಲಾದನಂತೆ.

ಕೇಶವಯ್ಯನೆ ಸಾಂತ್ವನಗಳಿಸುವ ಸ್ವರದಲ್ಲಿ

"ಬಾಪ್ಪ ರುದ್ರ, ಬಾ. ಇಳಿದು ಬಾ... ನಾನೇನು ನಿನಗೆ ತೊಂದರೆ ಮಾಡುಲ್ಲ. ಬಾ– ನನ್ನಾಳಿನ ಕೈಲಿ, ನನ್ನ ಕೈಲಿ ಮಚ್ಚುಗಳಿದ್ರೂವೆ, ನಾವೇನು ನಿನ್ನನ್ನ ಹೊಡೆಯಲ್ಲ, ಬಡಿಯುಲ್ಲ, ಪಂಚಾಯಿತಿ ಕಟ್ಟೆ ಹತ್ತಿಸುಲ್ಲ... ನಿಶ್ಚಿಂತೆಯಿಂದ ಇಳಿದು ಬಾ... ಸದ್ಯ ಆ ಘಟಸರ್ಪ ಏನಾದರೂ ಕೆಳಗಿಳಿದು ಬಂದು ಕಚ್ಚಿದರೆ ಏನು ಗತಿ...? ಒಂದು ಕ್ಷಣವೂ ಕೂಡ ನೀನು ಅಲ್ಲೇ ಉಳಿದಿರೋದು ಕ್ಷೇಮವಲ್ಲ..."– ಹೀಗೆ ಹೇಳ್ತಿರೋವಾಗ ರುದ್ರ ಮತ್ತೊಮ್ಮೆ ಕತ್ತೆತ್ತಿ ಮೇಲೆ ನೋಡಿದನಂತೆ... ಸರ್ಪ ಭೀಕರವಾಗಿ ಹೆಡೆಯಾಡಿಸುತ್ತ, ಮೊರೆಯುತ್ತಲೇ ಇತ್ತಂತೆ...!

ರುದ್ರ ಚಿಂತಿಸಿರಬೇಕು: "ಕೆಳಗೆ ನೋಡಿದ್ರೆ ಕೇಶವಯ್ಯ, ನೆತ್ತಿಯ ಮೇಲೆ ಸರ್ಪ... ಕೇಶವಯ್ಯನೂ ಅವನ ಆಳೂ ಹೊಡೆದರೆ ಏನು ಮಹಾ–ಒಂದು ಹತ್ತಿಪ್ಪತ್ತು ಏಟು...! ಸರ್ಪ ಕಡಿದರೆ ಸಾವೇ ಖಾತರಿ"– ಹೀಗೆ ಲೆಖ್ಖ ಹಾಕಿ

ಕೆಳಗಿಳಿದು ಬಂದಿರಬೇಕು...

"ರುದ್ರ ಕೆಳಗಿಳಿದು ಬಂದಾಗ ನಡುಗುತ್ತಲೇ ಇದ್ದನಂತೆ... ಆದರೆ ರುದ್ರ ನಿರೀಕ್ಷಿಸಿದಂತೆ ಕೇಶವಯ್ಯನಾಗಲಿ, ಅವನ ಆಳುಮಗನಾಗಲಿ ರುದ್ರನ ಮೇಲೆ ಕೈಯೆತ್ತಲೇ ಇಲ್ಲವಂತೆ. ಅದಕ್ಕೆ ಬದಲು, ಕೇಶವಯ್ಯ ರುದ್ರನ ಬೆನ್ನು ಸವರಿ– 'ಪಾಪ, ಎಳನೀರಿನ ಆಸೆಗೆ ನಿನ್ನ ಪ್ರಾಣಾನೆ ಒಪ್ಪಿಸ್ತಿದ್ದೆಯಲ್ಲೋ, ರುದ್ರ!... ನಮ್ಮ ತೋಟಗಳಲ್ಲಿ ಈಚೀಚೆಗೆ ಸರ್ಪಗಳ ಹಾವಳಿ ವಿಪರೇತವಾಗಿಬಿಟ್ಟಿದೆ. ನಾವು ಕೂಡ ನಮ್ಮ ಜೀವಾ ಕೈಲಿ ಹಿಡದೇ ಈ ತೆಂಗಿನ ಮರಗಳನ್ನು ಹತ್ತಬೇಕಾಗಿದೆ. ಸದ್ಯ, ಸರ್ಪ ತೆಂಗಿನ ಮರದ ಮೇಲಿರೋದರಿಂದ ನೀನು ಬದುಕಿದೆ. ನೀನು ಬಾಳೆಗೊನೆಗಳಿಗೆ ಕೈಹಾಕಿದಾಗ ಏನಾರ ಬಾಳೆಗಿಡಗಳಲ್ಲಿ ಸರ್ಪ ಇದ್ದರೆ ಏನಪ್ಪ ಗತಿ?... ಅದರಲ್ಲೂ ಬೆಳಗಿನ ವೇಳೆ ಆದ್ದರಿಂದ ಬಚಾವಾದೆ. ರಾತ್ರಿ ಸಮಯ ಆಗಿದ್ದರೆ ಏನಾಗ್ತಿತ್ತು ಯೋಚನೆ ಮಾಡು!... ನೋಡಪ್ಪ ರುದ್ರ, ನೀನು ಒಂದೆರಡು ತೆಂಗಿನಕಾಯಿ ಕಿತ್ತರೆ, ಮೂರುನಾಲ್ಕು ಬಾಳೆಗೊನೆ ಹಾರಿಸಿದರೆ ನಮ್ಮ ತೋಟವೇನೂ ಅಂಥ ಹಾಳಾಗುಲ್ಲ. ಲಕ್ಷ್ಮಿ ನಮಗೆ ಕೊಡೊದನ್ನ ಕೊಟ್ಟೇ ಕೊಡ್ತಾಳೆ. ಆದರೆ ಏನಾರ ಹೆಚ್ಚು ಕಮ್ಮಿ ಆಯ್ತು ಅಂದರೆ, ನಿನ್ನ ಹೆಂಡತಿ ಮಕ್ಕಳ ಗತಿಯೇನು?– ಅಲ್ಲದೀರ ನಿನ್ನ ಎರಡನೆಯ ಮಗು ಇನ್ನೂ ಕೈಕೂಸು. ಒಂದು ತಿಂಗಳೂ ಸಹ ತುಂಬಿಲ್ಲ... ಆ ನಿನ್ನ ಮಕ್ಕಳು ಹೆಂಡತಿ, ಅವರಿಗೋಸ್ಕರವಾಗಿಯಾದರೂ ಪ್ರಾಣಭಯ ಇಲ್ಲದೆ ಹೀಗೆ ಅವರಿವರ ತೋಟಕ್ಕೆ ನುಗ್ಗೋದು ನಿಲ್ಲಿಸಪ್ಪ...' ನಯವಾಗಿ ಹೇಳಿ, ಅವನ ತಲೆ ಸವರಿದನಂತೆ, ರುದ್ರ ಕೇಶವಯ್ಯನ ಕಾಲಿಗೆ ಬಿದ್ದು, ಕ್ಷಮಿಸಿ ಕೇಶವಯ್ಯನೋರೆ, ಇನ್ನು ನಿಮ್ಮೋರ ತೋಟಗಳಿಗೆ ಕಾಲಿಟ್ಟರೆ ನನ್ನ ಹೆತ್ತ ತಾಯಿ ಆಣೆ' ಎಂದು ಭಾಷೆಯಿತ್ತು, ಅಲ್ಲಿಂದ ಕಾಲುಕಿತ್ತ ಸುದ್ದಿಯನ್ನ ಸ್ವಯಂ ಕೇಶವಯ್ಯನೆ ಸ್ವಾರಸ್ಯವಾಗಿ ನನ್ನ ಸಂಗಡ ಹೇಳಿದ. ಇದನ್ನ ನಿಮಗೂ ತಿಳಿಸೋಣ ಅನ್ನಿಸಿ, ಇಲ್ಲಿಗೆ ಬಂದೆ" ಎಂದರು.

ಈ ಸಂಗತಿಯನ್ನು ಕೇಳಿ ಶಾಸ್ತ್ರಿಗಳು ತೃಪ್ತಿಯ ನಿಟ್ಟುಸಿರು ಬಿಟ್ಟರು.

"ಆ ಕೇಶವಯ್ಯ ತಾಯಗ್ಗಂಡ, ಸಹಜ, ಆದರೆ ಅವನು ಈ ಹೂಟ ಹೂಡಿದ್ದರಿಂದ ಸದ್ಯ ನಮ್ಮ ತೋಟಗಳು ಉಳಿಯುವ ಹಾಗಾಯ್ತು... ಒಮ್ಮೊಮ್ಮೆ ದುಷ್ಟರಿಂದಲೂ ಸಹ ಹೀಗೆ ಅಪ್ಪಿತಪ್ಪಿ ಒಂದೊಂದು ಒಳ್ಳೆಯ ಕಾರ್ಯ ನಡೆದು ಹೋಗತ್ತೆ ನೋಡಿ, ವೆಂಕಣ್ಣ..."

ಇಷ್ಟು ಹೇಳಿ ಕೃಷ್ಣಶಾಸ್ತ್ರಿಗಳು ಎದ್ದು ಆಳುಗಳತ್ತ ನಡೆದರು. ವೆಂಕಟೇಶ

ಜೋಯಿಸರು ನಿಮಿತ್ತ ಹೇಳಬೇಕಾಗಿದೆಯೆಂದು ನಾಗವಾಲಕ್ಕೆ ತೆರಳಿದರು.

ಇಷ್ಟರಲ್ಲಿ ರುಕ್ಮಿಣಿಯು ಒಂದು ಕೌಳಿಗೆಯಷ್ಟು ವೀಳೆಯದೆಲೆಗಳನ್ನು ಕೊಯ್ದು, ಅವನ್ನು ಬಾಳೆನಾರಿನಿಂದ ಬಿಗಿದು, ಎಷ್ಟು ಪರಿಯಿಂದ ಮುದ್ದಿಸಿದರೂ ಜೊತೆಗೆ ಬಾರದೆ ಆಳುಗಳು ಮಾಡುತ್ತಿದ್ದ ಕೆಲಸವನ್ನೆ ನೋಡುತ್ತ ಕುಳಿತಿದ್ದ ಸರಸಿಯ ಪಕ್ಕದಲ್ಲಿ ತಾನೂ ಸಹ ನಿಸ್ಸಹಾಯಕಳಾಗಿ ಕುಳಿತಳು. ಎಷ್ಟೋ ಸಮಯ ಕಳೆದ ನಂತರ ಸುಮ್ಮನೆ ಕುಳಿತು ನೋಡಿ ನೋಡಿ ತನಗೇ ಬೇಸರ ಬಂದು "ಹೋಗೋಣ ಬಾಕ್ಕ" ಎಂದು ಸರಸಿ ತಾನೇ ಎದ್ದು ರುಕ್ಮಿಣಿಯನ್ನು ಜಗ್ಗಿದಳು. ರುಕ್ಮಿಣಿ ಆಳುಗಳ ಗೆಯ್ಮೆಯಲ್ಲಿ ಹುಸಿ ಆಸಕ್ತಿ ನಟಿಸುತ್ತ, "ಇನ್ನು ಕೊಂಚ ಸಮಯ ಕೂತುಗೊಳೆ...ನೋಡು, ಆಳುಗಳು ಎಷ್ಟು ಚೆನ್ನಾಗಿ ಕೆಲಸ ಮಾಡ್ತಾ ಇದಾರೆ?" ಎಂದಾಗ, "ಅವರು ಮಾಡೋದನ್ನೇ ನೋಡೋದರಲ್ಲಿ ಏನು ಚೆಂದ. ಇನ್ನೂ ನಾವೇ ಮಾಡಿದರಪ್ಪ, ಅದು ಚೆನ್ನು" ಎಂದಳು ಸರಿಸಿ. ರುಕ್ಮಿಣಿ ನಕ್ಕು ಸುಮ್ಮನಾದಳು. "ಅಕ್ಕ ಏಳೆ, ಏಳೆ" ಎಂದು ಸರಸಿ ಒಂದೇ ಸಮನೆ ರುಕ್ಮಿಣಿಯ ಭುಜ ಹಿಡಿದು ಜಗ್ಗತೊಡಗಿದಳು. ರುಕ್ಮಿಣಿ ಕದಲಲಿಲ್ಲ. ಸರಿಸಿ ಕೋಪದಿಂದ ಕೆನ್ನೆ ಊದಿಸಿಕೊಂಡು, ದೂರ ಸರಿದು ನಿಂತಳು ಅವಳ ಕಣ್ಣಿನಲ್ಲಿ ಲಕ್ಷ್ಮಣತೀರ್ಥ ಉದ್ಭವಿಸಿದ್ದಳು!... ರುಕ್ಮಿಣಿ ತಟ್ಟನೆದ್ದಳು ಸರಸಿಯನ್ನಪ್ಪಿ ರಮಿಸುತ್ತ, "ತಮಾಷ ಮಾಡಿದೆ ಕಣೆ, ಬೇಸರ ಮಾಡಿಕೊಬೇಡ. ಬಾ, ಬಾ– ಮನೆಯಲ್ಲಿ ಈ ರಾತ್ರಿ ನಿನಗೆ ಬೆಣ್ಣೆಗಾರಿಗೆ ಮಾಡಿಕೊಡ್ತಿನಿ" ಎಂದು ಪುಸಲಾಯಿಸಿ, ಸರಸಿಯನ್ನು ಕರೆದೊಯ್ದು, ಕೈಕಾಲು ತೊಳೆಯಲು ಕೊಳಕ್ಕಿಳಿದಳು.

ಅದೇ ತಾನೆ ತೋಟದೊಳಗೆ ಬಂದ ನಂಜೇಗೌಡ ಕೊಳದ ಆಚೆ ದಡದಲ್ಲಿ ನಿಂತು, ಮಂಡಿಯವರೆಗೂ ಸೀರೆಯನ್ನೆತ್ತಿ ತೊಳೆಯುತ್ತಿದ್ದ ರುಕ್ಮಿಣಿಯ ನುಣ್ಣನೆಯ ಬೆಳ್ಳಗಿನ ತುಂಬಿದ ಕಾಲುಗಳನ್ನೆ ಎವೆಯಿಕ್ಕದೆ ನಿಟ್ಟಿಸುತ್ತಿದ್ದ. ಆಗಲೆ ತನ್ನ ಕೈಕಾಲು ತೊಳೆಸಿಕೊಂಡು ರುಕ್ಮಿಣಿಯ ಬೆನ್ನಿಗೆ ಒರಗಿ ನಿಂತಿದ್ದ ಸರಸಿ, ತಮ್ಮತ್ತಲೆ ದುರುಗುಟ್ಟಿ ನೋಡುತ್ತಿರುವ ನಂಜೇಗೌಡನ ಕಡೆಗೆ ಬೆರಳು ಮಾಡಿ,

"ಅಕ್ಕ ಅಲ್ನೋಡೆ, ನಮ್ಮನ್ನೆ ತಿಂದಾಕೊ ಹಾಗೆ ನೋಡ್ತಿದಾನೆ. ನನಗೆ ಯಾಕೊ ಭಯವಾಗತ್ತಮ್ಮ" ಎಂದಳು.

ತಲೆಯೆತ್ತಿ ನೋಡಿದರೆ ರುಕ್ಮಿಣಿಗೆ ನಾಚಿಕೆಯಾಗಿ ಸಕ್ಕನೆ ತನ್ನ ಸೀರೆಯ ಅಂಚನ್ನು ಮಂಡಿಯಿಂದ ಕೆಳಗೆಳೆದಳು. ನಂಜೇಗೌಡ ನಗುತ್ತ,

"ನಿಮ್ಮೆಣ್ಣು ಬೋ ಚೂಟಿ!" ಎಂದ.

ರುಕ್ಮಿಣಿಯು ಅವನ ಮಾತಿಗೆ ಪ್ರತ್ಯುತ್ತರವಾಗಿ ಏನನ್ನೂ ಹೇಳದೆ, ಅವನನ್ನೆ

ಒಮ್ಮೆ ದುರುಗುಟ್ಟಿ ನೋಡಿ, ಸಿಡುಕಿನಿಂದ ಎದ್ದು ನಿಂತು–

"ಬಾ ಸರಸಿ, ಹೋಗೋಣ" ಎಂದು ಕೊಳದ ಹಬ್ಬುಗೆಗಳನ್ನೇರಿ ಶಾಸ್ತ್ರಿಗಳಿದ್ದ ತಾಣಕ್ಕೆ ನಡೆದಳು. ನಂಜೇಗೌಡನೂ ಹಿಂಬಾಲಿಸಿ ಬಂದು,

"ಕೇಳಿದ್ರಾ ಶಾಸ್ತ್ರಿಗಳೆ, ಸುದ್ಯಾ?" ಎನ್ನುತ್ತಲೂ ಶಾಸ್ತ್ರಿಗಳು ಏನೂ ಅರಿಯದವರಂತೆ ಹುಬ್ಬೇರಿಸಿದರು. ನಂಜೇಗೌಡ ಬೀಡಿ ಹಚ್ಚಿ ಕೇಶವಯ್ಯನ ತೋಟದಲ್ಲಿ ನಡೆದ ಪ್ರಸಂಗವನ್ನು ವಿವರಸಿದ. ರುದ್ರನ ಪೇಚನ್ನು ಮೌನವಾಗಿ ಆಲಿಸಿದ ಶಾಸ್ತ್ರಿಗಳು,

"ಕಳ್ಳನ ಹೆಂಡತಿ ಎಂದಿದ್ದರೂ ಮುಂಡೆಯೆ ಅಲ್ಲವೆ, ನಂಜೇಗೌಡರೆ?" ಕಹಿಯಾಗಿ ನುಡಿದು ತಮ್ಮ ಕಾಯಕದಲ್ಲಿ ಮಗ್ನರಾದರು.

ಹಾವಿನ ಕತೆ ಕೇಳಿ ಹೆದರಿದ ಸರಸಿ, ರುಕ್ಮಿಣಿಯನ್ನು ಬಿಗಿಯಾಗಿ ಅಪ್ಪಿ, "ಮನೆಗೆ ಹೋಗೋಣ, ಬಾಕ್ಕ" –ಪೀಡಿಸತೊಡಗಿದಳು.

ಆ ಘಟನೆಯನ್ನು ಕೇಳಿ ರುಕ್ಮಿಣಿಯೂ ಬೆಚ್ಚಿ, ದಿನೇ ದಿನೇ ತಮ್ಮ ಊರು ಯಾವ ಪ್ರಮಾಣದಲ್ಲಿ ಕೆಡಲು ಪ್ರಾರಂಭವಾಗಿದೆ! ಎಂದು ಒಳಗೊಳಗೆ ಕೊರಗಿದಳು.

೫

ಮಠದಿಂದ ವೊಂಟ ಲಕ್ಕ ಈ ಕೇರಿಗೆ ಬಿದ್ದು ಆ ಕೇರಿ ಹಾಯ್ದು ವೊಯ್ತಾ ಇರ್ವಾಗ, ಇನ್ನೂ ಅವ್ನ ತಲೆ ವಳುಗೆ ನಂಜೇಗೌಡ್ನೆ ತುಂಬಿದ್ದ...

–ನಮ್ಮೊಲೇರ ಕಂಡ್ರಂತು ವೊಟ್ಟೆ ವಳುಗೇ ಇಸ ತುಂಬವ್ನೆ. ಮ್ಯಾಲೆ ಮ್ಯಾಲೆ ತುಪ್ಪ ಸುರುಸೊ ಮಾತು. ಅದಕೇ ನಮ್ಮೋವ್ರು ಬೀಗ್ತಾವೆ. ಕೆಲವಂತೂ ಈವಯ್ಯ ಯೋಳಿದಂಗೇ ಕುಣೀತಾವೆ. ಎದೆ ಸೀಳುದ್ರೆ ಮೂರು ಅಕ್ಸರ ಇಲ್ದೆ ಇರಾದ್ರಿಂದ್ರ ಅವ್ಕೆ ಯೇನೂ ತಿಳಿಯಕ್ಕಿಲ್ಲ. ಈವಯ್ನ ಮಾತಿಗೇ ಯಾವತ್ತೂವೆ ಪರ್ದಾನ್ಯ. ಬಸವಣ್ಣೋರು ಅಂಗಂತಾರೆ ಇಂಗಂತಾರೆ, ಯೋಳಿ ಯೋಳಿ ನಮ್ಮೋರ್ನೆಲ್ಲ ಮರುಳು ಮಾಡವ್ನೆ. ಇದಕ್ಕೆ ತಕ್ಕಂಗೆ ಆ ಸಿವಪಾದಪ್ಪಾರೋ ನಮ್ಮೊಲಗೇರಿಗೆ ಯಾವತ್ತೂ ಕಾಲಿಕ್ಕಿದೋರೆ ಅಲ್ಲ. ಈವಯ್ಯ ಮಾತ್ರ ಎದ್ದರೆ ಬಿದ್ದರೆ ನಮ್ಮ ಕೇರಿಗೆ ಬತ್ತಾನೆ ಇರ್ತಾನೆ. ಸಾಸ್ತ್ರಿಗಳಂತ ಒಬ್ಬಿಬ್ಬು ಇನಾಸಿ, ಉಳಿಕೆ ಬ್ರಾಂಬರೂವೆ ಈವಯ್ನ ಇಸ್ಯದಲ್ಲಿ ವಳುಗೇ ಬೆಚ್ತಾರೆ ಅಂತಾನು ಕ್ಯಾಳಿಲ್ವ? ಊರ್ನಲ್ಲಿ ಇವ್ನ ಜನವೇಯ ಇಂದುಗಡಿಂದ ಇವ್ನೊಂದು ಕೊಳಕು ಮಂಡಲ ಅನ್ನಾದ ತಾನೇ ಕಿವ್ಯಾರ ಕ್ಯಾಳಿಲ್ವ?– ಇವ್ನು ಉಸುರು ಬುಟ್ಟ ಕಡೆ ಹುಲ್ಲೂ

ಹುಟ್ಟಕ್ಕಿಲ್ಲ ಅಂತಾನು ಅನ್ನಕ್ಕಲ್ವ... ಅದಕೇ ಇವ್ನ ಮ್ಯಾಲೆ ಆಕಳಕ್ಕೆ ಊರ್‍ನೋರು ವಕ್ಕಡೀಕಿರ್‍ಲಿ, ಸಾಕ್ಸಾತ್ ಸಿವಪಾದಪ್ಪಾರೆ ಎದುರಿಕತ್ತರೆ ಅಂತಾನು ಜನ ಆಡಿಕಳಕ್ಕಿಲ್ವ?...

ಈ ಯೋಚ್ನೇಲೆ ಎಣ್ಣೇಲಿ ಬಿದ್ದ ನೋಣವಾಗಿ ಬತ್ತಾ ಇರೋನೂವೆ, ನಾಟಕದ ಕೇಸವಯ್ಯ ತನ್ನೋಟಿಗೆ ತಾನು ಯಾವ್ದೊ ನಾಟಕದ ಮಟ್ಟು ಹಾಡಿಕತ್ತಾ ಬತ್ತಾ ಇದ್ದೋನ, ಲಕ್ಕನನ್ನ ಕಂಡು,

"ಏನೋ ಲಕ್ಕ, ನೀ ಬಲು ಠಕ್ಕ..."– ನಾಟಕದಲ್ಲಿ ಅನ್ನೋತರ ಅಂದ.

"ಅದ್ಯಾಕೆ ಸೋಮಿ ಅಂಗಂದೀರಿ? ನಾಯೇನು ಮಾಡ್ದೆ?" –ಕೇಳ್ದ ಲಕ್ಕ.

ಆದ್ಕೆ ಅವಯ್ಯ ಯೇನನ್ನಬೇಕು? "ಕೋಲು ಜೇನು ತಕ್ಕೊಂಬಂದು ಕ್ವಡು, ತಕ್ಕೊಂಬಂದು ಕ್ವಡೂಂತು ನಾ ಕೇಳಕೆ ಮುಟ್ಟುಕಂಡು ಯಾವ ಕಾಲ ಆಯ್ತು? ತತ್ತೀನಿ ತತ್ತೀನೀಂತ ಬಾಯ್ನಲ್ಲಿ ಮುತ್ತು ಸುರುಸಿ ಸಬೂಬು ಯೋಳ್ತೀಯೆ ಇನಾಯ್ಸಿ, ಮಾಲು ಮಾತ್ರ ನನ್ನ ವೊಡ್ಲು ತುಂಬನಿಲ್ಲ!...."

ಸರಾಪಿಗೆ ಆವಯ್ಯ ಕರೀತಿದ್ದ ವರುಸೆ ಅದು!... ಯಾರೂ ಇಲ್ದೆ ನಾ ಒಬ್ನೆ ಸಿಕ್ಕಿದರೆ ಕೇಸವಯ್ನ ಈ ಕುಚಾಷ್ಟ್ಯ ತೆಪ್ಪುತಾನೆ ಇರ್‍ನಿಲ್ಲ!... ಸಮ್ಮಸುಮ್ಕೆ ಕ್ಯಾಳಾದು. ಅದಕೆ ಪರ್ತಿಯಾಗಿ ನಾ ಇನ್ನೂ ಬಾಯ್ನೇ ಬಿಚ್ಚಿಲ್ಲ. ವೋಟರಾಗೆ ಜಾಗ ಖಲಾಸ್ ಮಾಡಾದು!... ಇವತ್ತೂ ಅದೇ ವರುಸೆ!... ಯೇಟೇ ಯಾಚ್ಣೆ ಮಾಡಿದ್ರೂವೆ ಈ ವಯ್ನ ಉದ್ದ ಆಳಾವ ಕಂಡು ಇಡಿಯಾದು ಎಂತೋರ್‍ಗೂ ಎಕ್ಕಾಸ!... ಇದು ಆಳ್ವಾದ ಬಾವಿ. ಚರಿಗೆ ಇಳೀಬುಟ್ಟರೆ, ವಳೀಕೆ ವೋಯ್ತಾನೆ ಇರ್‍ತದೆ. ತಳ ಮಾತ್ರ ಸಿಕ್ಕಕ್ಕಿಲ್ಲ. ಹುಲಿಹಾಲು ಮೊಲದ ಗಿಣ್ಣಾದ್ರೂವೆ ಒಂದು ಪಕ್ಸ ತರಬ್ಯೆದು. ಈವಯ್ನ ಚಹರೆ ಪಟ್ಟಿ ಅರಿಯಾದು ಎಂತೋರಿಗಾದ್ರೂ ಕಸ್ತೇಯ!... ನಂಜೇಗೌಡ್ರ ಲಕ್ಕ ಒಂದು ಸರ್ತಿ ಕ್ಯಾಳಿದ್ದ: 'ಈವಯ್ಯ ಅದ್ಯಾಕೆ ಗೌಡ್ರೆ ನಾಟಕದ ಕೇಸವಯ್ಯಾರು ಅಂತ ಕರೀತಾರ?'... ಆಗ ಗೌಡ್ರು ಅಂದಿದ್ರು: 'ಈವಯ್ಯ ಮಾತುಮಾತ್ಗೂ ನಾಟಕ ಆಡ್ತಾನೇ ಇರ್‍ತಾರೆ ಕನ್ಲ ಲಕ್ಕ–ಅದ್ಕೆ~'...

ಚಿಂತಿಸ್ತ ಚಿಂತಿಸ್ತ ಲಕ್ಕ ಮುಂದುಮುಂದಕೆ ಹೆಜ್ಜೆ ಆಕ್ದ. ಸ್ವಾಮಾರ ಆದ್ರಿಂದ ಆ ಜೀನ ರ್‍ಯೆತಾಪಿ ಜನಕೆಲ್ಲಾ ವೊಲಗೆಲಸಕ್ಕೆ ಬಿಡತಿ. ಆ ಜಿನ ಎಲ್ಲಾ ಜನಕೂ ಆರಾಮ. ಎಲ್ಲೊ ಒಂದೊಂದು ಸ್ವಾಮಾರ ಮನೆಗೊಂದಾಳು ವೊಂಟು 'ಊರು ಬಿಟ್ಟಿ ಕೆಲ್ಸ' ಮಾಡ್ತಿದ್ದದ್ದುಂಟು.

ಆಗ್ಗೆ ವೊತ್ತೇರಿತ್ತು. ಆದರೂವೆ ಜನ ಇನ್ನೂ ನಿದ್ದೇಲಿ ತಡರ್‍ಸಿ ತಡರ್‍ಸಿ ವೋಗೋರಂಗೆ ಅತ್ತಿಂದಿತ್ತಾಗಿ ಇತ್ತಿಂದತ್ತಾಗಿ ತಿರುಗಾಡ್ತಿದ್ರು. ಜಗಲಿಗಳ ಮ್ಯಾಲೆ ಕೆಲವ್ರು, ಅಸ್ವತ್ತಕಟ್ಟೆಮ್ಯಾಲೆ ಕೆಲವ್ರು, ರಸ್ತೆ ಬದೀಗೆ ಹಾಸಿ ಬಿದ್ದಿದ್ದ ದಿಮ್ಮಿಗಳ

ಮ್ಯಾಲೆ ಕೆಲವ್ರು–ಇಂಗೆ ಕುಂತು ನಿಂತು ಪರಸಂಗ ವೊಡೀತಿದ್ರು ಜನ... ಇದ ಕಂಡೇ ಕೇಸವಯ್ಯ ತಮಾಸೆ ಮಾಡ್ತಿದ್ದದ್ದು: 'ನಮ್ಮ ದರುಮನಳ್ಳೀಲಿ ಸ್ವಾಮಾರದ ಜಿನ ಸೂರ್ಯಪ್ಪ ಮಯ್ಯಿ ಮುರದೇಳೋದು ತಳಾರ ಅಂದರೆ ತಳಾರ!'

ಲಕ್ಕ ತೆಂಕಲಾಗಿ ತಿರುಗಿನಾಗ, ವಕ್ಕಲುಗೇರಿ, ಕುಂಬಾರಗೇರಿ, ಪರಿವಾರಗೇರಿ, ಕುರುಬಗೇರಿ, ಇಂತಿಂತಾ ಕೇರಿಗಳೆಲ್ಲ ಇಂದುಕಾಗಿ, ಜೈನಿಗ ಜಿನ್ನಯ್ಯ ತನ್ನಟ್ಟಿ ಜಗುಲೀಲಿ ಕುಂತು ಚೌರಾ ಮಾಡಿಸಿಕೂತ್ತ ಇದ್ದದ್ದು ಕಣ್ಣಿಗೆ ಬಿತ್ತು. ಅವ್ನ ಎಡತಿ ಒಗೆಯೋ ಬಟ್ಟ–ಒಂದು, ಏಡು, ಮೂರೂಂತ ತಂದು ತಂದು ರಾಸಿ ಆಕ್ತಾ ಇದ್ರೆ, ಹಿಂದ್ನ ಲೆಕ್ಕ ಚುಕ್ತಾ ಮಾಡುದ್ರೆ ಮಾತ್ರ ವೊಸದಾಗಿ ಒಗಿಯೋ ಅರಿವೆ ಎಂತಿಗಂಡೋಯ್ತೀನಿ, ಅಂದ ಮಡಿವಾಳ ಸೆಟ್ಟಿ. ಕಳೆದ ವಾರವೆ ಆ ಬಾಕೀನೆಲ್ಲ ತೀರುಸಿದ್ನಲ್ಲೊ ಮಡಿವಾಳ ಸೆಟ್ಟಿ – ಅಂತ ಜಿನ್ನಯ್ನ ಎಡತಿ... ಈ ತರ ಅವರಿಬ್ಬರ‍್ಗೂ ಲಟಾಪಟಿ ನಡೀತಿತ್ತು. ಒಂದು ಮೂಲ್ಗೆ, ಒಂದು ಎತ್ತ ಕೆಡೀಕೆಂಡು ಲಾಳ ವೋಡೀತಿದ್ರು...

ಇದ್ನೆಲ್ಲ ನ್ವಾಡ್ತ ನ್ವಾಡ್ತ, ಲಕ್ಕ ಬುಂಡಮ್ಮನ ಹಟ್ಟಿ ತಾವಿಕೆ ಬಂದಿದ್ದ. ಆಗ್ಲೆ ಊರ ಹೈಕಳು ಕಾಡಿಗೆ ದನ ಅಟ್ಟಗಂಡೋಗಿದ್ರು, ಒಂದು ಹೈದ ಮಾತ್ರ ಏಳು ಮದ್ದಿನ್ನ ಮಾಡ್ಕಂಡು, ತನ್ನ ದನ ಅಟ್ಟಿಗಂಡೋಯ್ತಿದ್ದೋನು, ತೀರ ಅವಸರಾಗಿ, ತನ್ನ ಚಡ್ಡಿ ಗುಂಡಿ ಬಿಚ್ಚಿ, ಅಟ್ಟಿ ಗ್ವಾಡೇನೆ ನೆನೆಸ್ತಾ ಇತ್ತು. ಬುಂಡಮ್ಮ ಯಾಕೋ ವೊರೀಕೆ ಬಂದೋಳು ಕ್ವಾಪ ಅತ್ತಿ,

"ಏನ್ಲ, ಈ ನಮ್ಮಟ್ಟಿ ಕಟ್ಟಿದೋನು ನಿಮ್ಮಪ್ನೊ? ನಿಮ್ಮಜ್ಜೊ?– ನಿಸೂರಾಗಿ ನಿನ್ನ ಗ್ವಾಡ್ಕೇ ನಿನ್ನ ಚಿರುಕಿ ತಿರುಗುಸ್ತ ನಿಂತುಬುಟ್ಯಲ್ಲ?"= ಕೈಕೋಲು ಬೀಸ್ತಾ ಅಂದ್ಲು.

ಹೈದ ದಿಗಲುಬಿದ್ದು ಉಚ್ಚೆ ಉಯ್ಯೋದ ಅರ್ದಕೇ ತಡುದು, ಕೆಟ್ನೋ ಬದುಕಿದ್ನೋಂತ ಗಂಜಳ ಸುರುಸ್ತಾ ವೋಗೋ ಎತ್ತಿನಂಗೆ ಉದ್ದಕೂ ಉಚ್ಚೆ ಸುರಿಸಿಕೊತ್ತ ದನಗಳ ಇಂದಿಂದೆ ಓಡೋಯ್ತು.

ಲಕ್ಕ ಆ ಹೈದ್ನ ಅವಸ್ತೆ ನೋಡಿ ನಕ್ಕ.

"ಅದ್ಯಾಕ್ಲ ಗಂಡೆ, ನಗಾಡ್ತ ನಿಂತೆ?... ಆ ಹೈದ್ನ ವಯಸಾಗಿದ್ದಾಗ ಬೆದುರಿಸಿದ್ರೆ, ನೀನೂವೆ ಚಡ್ಡಿ ವಳುಗೇಯ ಇಂಗೇ ಸೊರ ಬುಟ್ಟುಕತ್ತಿದ್ದೆ... ನೀ ನಗಾಡುದು ಅಂಗಿಲ್ಲಿ, ವಸಿ ಬಾ ವಳೀಕೆ." ಬುಂಡಮ್ಮ ಕರೆದ್ಲು. ಲಕ್ಕ ನಗ ತಡುದು ಮುದುಕಿಯ ಗಮ್ನೆ ಇಂಬಾಲಿಸ್ದ. ವಳೀಕೋಯಿತ್ಲೆ.

"ಲಕ್ಕ, ನಮ್ಮೆಮ್ಮೆ ಕರೀಗೆ ಅಕ್ರ ಆಗದೆ ಕನ್ಲ. ವಸಿ ತಕ್ಕೊಟ್ಟೀಯ?"

ಅಂದ್ಲು.

"ಅದ್ಕೇನಂತೆ, ತಕ್ಕೊಟೇನು– ಚೂಜಿ ಇದ್ದದಾ?"

"ಓ, ಮಡಗಿವ್ನಿ, ತಂದು ಕ್ವಟ್ಟೇನು"– ಬುಂಡಮ್ಮ ಚೂಜಿ ತಂದುಕ್ವಟ್ಟಳು.

"ತಾಳಿ, ತುಂಬೆ ಸೊಪ್ಪ ಕಿತ್ತುಗಂಬತ್ತೀನಿ..." ಲಕ್ಕ ಎಜ್ಜೆ ತೆಗೀತಿರೊನೂವೆ,

"ನಿನ್ನ ತುಂಬೆ ಸೊಪ್ಪು, ಸುಣ್ಣ ಏಡ್ನೂ ಲಡಿಯಾಗಿಟ್ಟಿವ್ನಿ."

ಒಂದು ಇತ್ತಾಳೆ ಬಟ್ಲ ತಂದು, ಅದ್ಕೆ ತುಸ ಸುಣ್ಣ ಆಕಿ, ತುಂಬೆ ಸೊಪ್ನ ರಸವ ಅದರೊಳೀಕೆ ಇಂಡಿ ಕಲುಸಕ್ಕೆ ಸುರುವಾದ್ಲು.

"ಈ ಪಟ್ಟು ಸರೋಯ್ತು" ಅಂದ ಲಕ್ಕ, ಎಮ್ಮೆ ಕರೀನ ನಾಲಗೆಯ ಈಚ್ಗೆ ಇರುದು, ನಾಲಗೆ ಕೆಳಗೆ ಬೆಟ್ಟುಗಾತ್ರ ಊದಿ ನಿಂತಿದ್ದ ಕಪ್ಪಾನೆ ರಕ್ತನಾಳ್ವ ಚೂಜೀಲಿ ಕಿತ್ತಿ, ಕೆಟ್ಟ ರಕ್ತಾನೆಲ್ಲಾನೂವೆ ಈಚ್ಗೆ ಕಡುಸ್ದ. ಜಟ್ನೆ, ತುಂಬೆರಸ ಗೋಟಾಯಿಸ್ದ. ಮಿಸ್ರಣಾವ ಬುಂಡಮ್ಮ ಆ ಎಮ್ಮೆ ಕರೀನ ನಲಿಗೆ ಅಡೀಕೆ ಮೆತ್ತಿದ್ಲು. ಲಾಜಾದಲ್ಲಿ ತಲೆ ವಗೀತಿದ್ದ ಎಮ್ಮೆ ಕರ ಸಮಾಧಾನಕೆ ಬಂದಂಗೆ ಕಂಡ್ತು!...

ಎಮ್ಮೆಕರ ನೆಟ್ಟಗಾದ್ಕೆ ಬುಂಡಮ್ಮಗೆ ಕುಸ್ಯಾಯ್ತು. ಕುಸ್ಯಾದಾಗ ಬುಂಡಮ್ಮನ ನ್ವಾಡಬೇಕು!... ಎಂಬತ್ತೂಕ್ಕ ಎಚ್ಚಿನ ಸಿವರಾತ್ರೀಲಿ ಕಟ್ಟುವಾಸ ಇದ್ದು, ಜಾಗ್ರಣೆ ಸಿವಪೂಜೆ ಮಾಡಿ, ವಯಸ್ನ ಬಾರಕೆ ನಡ ಬಗ್ಗೋಗಿದ್ದ ಮುದುಕಿ. ಮೊಕದಲ್ಲಿ ಸೀರೆನೆರಿಗೆ ತರ ಮಡಿಕೆಮಡಿಕ್ಯಾಗಿರೊ ಚರ್ಮ, ಏಡು ಕಟವಾಯಿಂದ್ಲೂವೆ ಸದಾ ಸೋರ್ತಾ ಇರೋ ಎಲಡಿಕೆ ರಸ... ಈ ಮುದುಕಿ ನಕ್ಕಾಗ, ಅವಳ ಕಣ್ಣಿನ ಜ್ವತೆಗೆ ಅವಳ ಮೊಕದ ಮಡಿಕೆ ಮಡಿಕೇನೂ ನಕ್ಕಂಗಾಗೋದು!... ಆ ದ್ಯಾವರು, ಕುಸೀನೆ ಉಂಡೆ ಮಾಡಿ, ಈಯಮ್ನ ರೂಪವ ತಿದ್ದಿರಬೇಕು, ಅಂದುಕತ್ತಿದ್ದ ಲಕ್ಕ!... ಆಗ ಬುಂಡಮ್ಮ,

"ಬಾರ್ಲ ಲಕ್ಕ, ರೊಟ್ಟಿ ತಿನ್ನೀವಂತೆ"– ಬುಂಡಮ್ಮ ಎಲಡಿಕೆ ರಸವ ಪಿಚಕ್ನೆ ಉಗುದು, ಪಿರೀತ್ಯಿಂದ ಕರೆದ್ಲು.

"ಬ್ಯಾಡಿ ಬುಂಡಮ್ಮಾರೆ." ಯೋಳಿ, ಜೊತ್ಗೆ ತನ್ನ ಕಯ್ಯಿನೂ ಆಡುಸಿ, ತನಗೆ ಬ್ಯಾಡ ಅನ್ನಾದ ಸೂಚಿಸ್ದ.

"ಇದ್ಯಾಕಿವತ್ತು ಇಂಗಾಡೀ?– ತಿಳುದೋರು ಯಾಳಾದು ಗ್ವತ್ತಿಲ್ವ?"

"ಅದೇನ ಬುಂಡಮ್ಮಾರೆ"?

"ನೋಡ್ಲ– ಗುಟುಕಿದ್ರೆ ಮಿಟುಕು, ಮಿಟುಕಿದ್ರೆ ಮಿಂಡಾಟ!... ಕಾಣದೆ ಮಾಡದ್ದಾರ ಇರೀಕರು ಗಾದ್ಯ?... ಮೊದ್ಲು ವೊಟ್ಟೆಗೆ ಇಟ್ಟು. ಅದರ ಮುಂದ್ಕೆ ನಿನ್ನ ವೋಡಾಟ ಪಾಡಾಟಯೆಲ್ಲಾ... ಬಾ, ಬಾ," –ಮುದುಕಿ ಒಂದು ಕಯ್ಯ

ಸೊಂಟದ ಮ್ಯಾಲಿಟ್ಟು, ಇನ್ನೊಂದರಿಂದ ಅವ್ನ ಕೆನ್ನಗೆ ತಿವಿಯೋಳಂಗೆ ನಟ್ನೆ ಮಾಡಿ ಕರೆದ್ಲು. ಲಕ್ಕ ತಲೆ ಕೆರೀತ,

"ಬ್ಯಾಡಿ ಬುಂಡಮ್ಮಾರೆ, ನಾ ಆಗ್ಲೆ ರೊಟ್ಟಿ ತಿಂದು ಬಂದಿವ್ನಿ..."

"ಅದ್ಯೆಲ್ಲಿ ತಿಂದೆ?"

"ಬ್ರಾಂಬರ ಮೂಲೆ ಅಟ್ಟಿ ಕಿಸ್ಟಸಾಸ್ತ್ರಿಗಳ ಸೊಸೆ ರುಕ್ಮಿಣವ್ವ ಇಲ್ಲ, ಅವರು ಅಕ್ಕಿರೊಟ್ಟೀನೂವೆ ಬದ್ನೆಕಾಯಿ ಎಣಗಾಯ್ನೂವೆ..."

ಮಾತು ಮುಂದರಿಗ್ವಡದೆ, ಅಲ್ಲಿಗೇ ಕಡ್ವಾಣ ಆಕಿ, ಏಡು ಕಟವಾಯ್ಲೂವೆ ಇನ್ನು ಮಸ್ತಾಗಿ ಎಲಡಿಕೆ ರಸ ಸುರುಸ್ತ,

"ಊ, ಈಗ ನಿಂಗ ನಾನ್ಯಾಕೆ ಬೇಕು?... ಈಗ ಎಂಗಿದ್ರೂ ಆ ಹಾರುತಿ ಅಟ್ಟಿ ಸಿಕ್ಕೋಗದೆ. ನಮ್ಮಟ್ಟಿ ಕಂಡ್ರೆ ಈಗ ಬಿಡಬ್ಯಾಸರ" – ಬುಂಡಮ್ಮ ಸಿಡುಕ್ದಾಗ, ಲಕ್ಕ

"ಇಲ್ಲ ಬುಂಡಮ್ಮಾರೆ, ನಿಮ್ನ ನಾಯೆಂಗೆ ಮರೆಯಕ್ಕಾದಾತು..." ಮಾತು ಮುಗೀಸೆ ಇಲ್ಲ, ಚಾವುಟಿ ಬೀಸಿದಂತೆ,

"ಸರಿಕನ ಬುಡು. ಬರೀ ಮಾತಿನ ಕೆಂಪಿ. ನಿನ್ನ ಬಾಯೆಲ್ಲ ಅಪ್ರಂಜಿ." ಕೊಸರ್ತ, ಅಡುಗೆ ಕ್ವಾಣೆಗೆ ನಡೆದ್ಲು,

"ಇಲ್ಲ, ಇಲ್ಲ, ತಿಂತೀನಿ. ಒಂದು ಮುರುಕು ತತ್ತಿನ್ನಿ... "ವೊರಗ್ನಿಂದ್ಲೆ ಕೂಗ್ದ.

"ತರಕ್ಕಿಲ್ಲ, ವೋಗೊ. ಅದೇನು ನೀ ಯೋಳಿದಂಗೆ ನಾ ಕ್ಯಾಳಬೇಕು? ನೀಯೇನು ಮಾರಾಜರ ಮೊಮ್ಮಗನ?..." ವಳುಗ್ನಿಂದ್ಲೆ ಮುದುಕಿ ಅಬ್ಬರಿಸಿದ್ಲು.

"ನಿಮ್ಮ ದಮ್ಮಯ್ಯಾಂತೀನಿ. ಕ್ವಾಪ ಮಾಡಕಾಬ್ಯಾಡಿ. ತತ್ತನ್ನಿ...

"ದಮ್ಮಯ್ಯಾಂದರೂ ಇಲ್ಲ ದತ್ತಯ್ಯಾಂದರೂ ಇಲ್ಲ." ಕಲ್ಲು ಬೀಸ್ದಂಗೆ ಮಾತು ವಗುದ್ಲು.

"ನೀವು ತರದೇವೋದ್ರೆ, ನಾಯಿಲ್ಲಿಂದ ಎದ್ದೇ ವೋಕ್ಕಿಲ್ಲ..."

"ಎದ್ದೇ ವೋಗಬ್ಯಾಡ, ಕುಂತಿರು ನಂಗೇನು?... ಯಾರ ಸಂಕಟಕ್ಕೆ ಕುಂದಿದ್ದೀ?– ನೀಯೇನಾರ ನನ್ನೆದೆ ಗುಂಡಿಗೆ ಮ್ಯಾಲೆ ಕುಂತಿದ್ದೀಯ?... ಕುಂತುಗೊ, ಕುಂತುಗೊ, ಮಾರಾಯನಂಗೆ ಕುಂತುಗೊ..." ಅಡುಗೆ ಕ್ವಾನಿಂದ ಅರೀತಿದ್ದ ಮಾತ್ನಲ್ಲಿ ಹಿಂದ್ನ ಮೊರತ ತಗ್ಗಿ ದಂಗಿತ್ತು... ಲಕ್ಕಂಗೂ ಗ್ವತ್ತು. ಇದು ಮಳೆ ಕರೆಯೊ ಮ್ವಾಡ ಅಲ್ಲ. ಒಂದು ಚಣ ಗೇರಾಯ್ಸಿ ಅನಂತ್ರ ಅತ್ತಿ ಇಂಜಿದಂಗೆ ಚೆದುರೋಗೊ ವರುಸೇದು ಅಂತಖ್ಯು!.

ಲಕ್ಕ ಸುಮ್ಮಕೆ ಕುಂತೇ ಇದ್ದ. ಮುದುಕಿ ಅಂಗೆ ನೋಡದ್ಲು ಇಂಗೆ ನೋಡದ್ಲು... ಒಂದುದಪ ಅವಳು ಇಂಗೆ ಅವಿತು ಗುಮ್ಮ ಆಡ್ತ ಇಣಕಿ ನೋಡ್ತಿರೋನೂವೆ ಲಕ್ಕ ನ್ವಾಡೇಬುಟ್ಟ!... ಆಗ ಅವಳ ಮೊಖ ತನ್ನ ನೆರಿಗೆ ನೆರಿಗೇಲೂವೆ ನಗಾವ ಮೊಡಿಸಿ ಮುಕ್ಕುಳುಸ್ತಿತ್ತು!

"ಯಾಕ್ಲಾ ನಗಾಡೀಯೆ?" – ಅಂತಾನೆ ವೊರೀಕೆ ಬಂದ್ಲು. ಕಯ್ಯಾಗೆ ಒಂದು ಮುರುಕು ರೊಟ್ಟಿಯೂ ಇತ್ತು... ಆದ್ರೆ, "ನಿಂಗ್ಯಾರೊ ಕ್ವಡಕ್ಕೆ ಬಂದಿರಾರ" ಅಂತ ಬೀದಿ ಬಾಗಿಲತ್ರ ನಡುದಾಗ, ಮುಂಬಾಗಿಲ ಅಬ್ಬುಗೆ ಮ್ಯಾಲೆ ನಾಲಿಗೆ ಇರಿದು ಕುಂತಿದ್ದ ಬೊಡ್ಡ ಚೇತರಿಸಿಕಂಡು ಬೊಗಳಕ್ಕೆ ಮುಟ್ಟುಗತ್ತು. ಅದ್ಕೆ ರೊಟ್ಟಿ ಮುರುಕ ತಿನ್ನುಸಿ, ಇಂದ್ಕೆ ತಿರುಗಿ ನ್ವಾಡಿದಾಗ, ಲಕ್ಕ ಅವಳಿಂದ ಬಂದು ತಲೆ ತಗ್ಗುಸಿ ನಿಂತಿದ್ದ.

"ಅಪ್ಪಯ್ಯ– ಆಗ್ಲೆ ಎದ್ದುನಿಂತ!... ಎತ್ತಾಗಿ ವೊಂಟದೆ ಸವಾರಿ?– ಅಲ್ಲ ಕನೋ ನೀ ರೊಟ್ಟಿ ತಿನ್ನದಿದ್ರೆ ಸಮ. ಆದ್ರೆ ನಿನ್ನ ಕಯ್ಲಿ ಎಮ್ಮೆ ಕರೀನ ಅಕ್ರ ತೆಗುಸಿ, ಕೇಮೆ ಮಾಡಿಸಿಕಂಡು. ನಿಂಗೆ ಕೂಲಿ ಕ್ವಡದೆ ಕಳುಸುದ್ರೆ ಯಾವ ತಲೆಪೊಟರಾಯ ಮೆಚ್ಚಾನು?..."

"ಅಯ್ಯೊ, ಬುಡಿ, ಇದ್ಕೆಲ್ಲ ಯೆಂತಾ ಕೂಲಿ?– ಕಂಡ್ಲಾ ಬ್ಯಾಡಿ. ನನ್ನ ಕತ್ತು ಕೂದರೂ ತಕ್ಕಳಕ್ಕಿಲ್ಲ..." ಲಕ್ಕ ಕೂಗ್ತಾನೆ ಇದ್ದ.

ಅವನ ಒಂದು ಮಾತು ಮುಕ್ಕಸ ತನ್ನ ಕಿವಿಗೆ ಬೀಳನೇ ಇಲ್ವೇನೋ ಅನ್ನೋಳಂಗೆ ಬುಂಡಮ್ಮ ಅಡುಗೆ ಕ್ವಾಣೆಗೆ ನಡದು ವೊರಬಂದಾಗ ಅವಳ ಕಯ್ಲಿ ಯೇನೋ ಇತ್ತು.

"ಅಯ್ಯೊ, ಬ್ಯಾಡಿ ಬ್ಯಾಡೀಂದ್ರೂವೆ ಪುನಾ ತಂದು ಬುಟ್ರಲ್ಲ" – ಲಕ್ಕ ಪೇಚಿಕೊತ್ತ ಇರೋನೂವೆ,

"ತಕ್ಕ, ತಕ್ಕ, ಇದು ನಿಂಗೇನು ಯತ್ವಾಸ ಮಾಡಕ್ಕಿಲ್ಲ ಕನಂತೆ. ಇದ್ನ ನಿ ಬಾಯಗೆ ಇಡಾದೆ ತಡ, ವಳೀಕೆ ಸಲೀಸಾಗಿ ವೊಂಟೋಯ್ತದೆ... ನಿನ್ನ ಸರೀರಕೂ ತ್ವಂದರೆ ಕ್ವಡಕ್ಕಿಲ್ಲ"– ಅಂದು, ಹಸಿ ಮುತ್ತುಗದೆಲೆ ಮ್ಯಾಲೆ ಯೇನೊ ಇದ್ದದ್ದ ಕಯ್ಯಾಗಿಟ್ಟಾಗ, ಲಕ್ಕ ನ್ವಾಡಿಕಂಡ. ಅದು ತನಗೆ ಬಾಯ್ನಲ್ಲಿ ನೀರೂರಿಸೊ ಆಲುಂಡಿಗೆ!... ಅವ್ನ ಮೊಖ ಅರಳಿಕತ್ತು... ಕುಸ್ಯಾಗಿ ಮುದುಕಿ ಮೊಖ ನ್ವಾಡಿದ. ಬುಂಡಮ್ಮ,

"ಇದೂವೆ ನಿಂಗೆ ಸೆಡೀದಿದ್ರೆ, ನಿನ್ನ ಬೊಡ್ಡ ಕಾಯಿಕಂಡದೆ. ಅಕಿಬುಡು" ಅಂದ್ಲು.

"ಸೀ ಆಕಿದ್ರೆ ನಾಯ್ಗಳ್ಗೆ ಕಜ್ಜಿ ಆಯ್ತುದೆ ಅಂತಾರಲ್ಲ, ಬುಂಡಮ್ಮಾರೆ?" – ಯೋಳಿ, ನಗಾಡ್ತ, ನಗಾಡ್ತಾನೆ ಆಲುಂಡಿಗ್ಯ ಚೂರುಚೂರಾಗಿ ಗುಳು ಗುಳುಂ ನುಂಗಕ್ಕೆ ಸುರುವಾದ.

ಬುಂಡಮ್ಮಾ ಒಂದು ಕಯ್ಯ ಸ್ವಂಟದ ಮ್ಯಾಲಿಟ್ಟು, ಇನ್ನೊಂದರಿಂದ ನಡುಮನೆ ಪಟ್ಟಿ ಇಡಿದು "ಅದ್ಯಾಕ್ಲ, ಅಂಗಂದೀಯೆ? –ಸೀ ತಿಂದ್ರೆ, ನಮ್ಮಂತಾ ಮನುಸರೂವೆ ಸಕ್ಕರೆ ಕಾಯ್ಲೆ ಬತ್ತದೆಂತ ಕೊಪ್ಪಲ ಪಂಡಿತಯ್ನೋರು ಯೋಳೋದ ನೀನೂ ಕ್ಯಾಳಿಲ್ಲವೇನ್ಲ?" – ಇಂಗೆ ಅನ್ತಾ ಅನ್ತಾ ಬಂಡಮ್ಮ ತನ್ನ ಕಣ್ಣೋಳಗೇ ನಗಾಡ್ತಿದ್ಲು.

ಹಾದಿ ಉದ್ದಕ್ಕೂ ಲಕ್ಕನ ಮನಸಿನ ತುಂಬ ಆ ಬುಂಡೆಮ್ಮೆ ಇಜ್ರುಂಬುಸ್ತಾ ಇದ್ಲು. ವಯಸಾಗಿ ನಡ ಬಗ್ಗೆದ್ರೂವೆ, ಆ ಮುದುಕಿ ಮಾತ್ಮಾತಿಗೂ ತುಳುಕ್ತಾ ಇದ್ದ ತುಂಟಾಟಾವ ಯಾವ ಅರೇದ ಎಣ್ಣಿನಲ್ಲೂ ಲಕ್ಕ ಕಂಡಿರ್ನಿಲ್ಲ. ಮಾತ್ನಲ್ಲಿ ಯಾವ ಫಲಾತನ ಮಗಂಗೂ ಅವರು ಸೋತೋಳೇ ಅಲ್ಲ! – ಬದುಕ್ನಲ್ಲೂ ಅಸ್ಟೇಯ!...

ಇನ್ನೂ ಚಿಕ್ಕೋಳಾಗಿದ್ದಾಗ್ಲೆ ಗಂಡ ಸತ್ತೋಗಿದ್ದ. ಸಾಲದ್ಕೆ ಒಂದು ಕಯ್ಯಿ ಕೂಸು ಬ್ಯಾರೆ ಬುಟ್ಟೋಗಿದ್ದ. ವಾರಕ್ಕೆ ಕ್ವಟ್ಟಿದ್ದ ಏಡೂವರೆ ಎಕ್ರೆ ಹ್ವಲ. ವಾಸಕ್ಕೆ ಇದ್ದ ಒಂದಟ್ಟಿ, ಏಡು ಎಮ್ಮೆ. ಒಂದು ಎಮ್ಮೆಕರ. ಆ ಎಮ್ಮೆ ಕರೆದು ಯೇಪ್ಪಾಕಿ, ಮೊಸರ ಕಡುದು, ಬೆಣ್ಣೆ ಉಂಡೆ ತಗುದು, ಅದ್ನ ಸಂತೆ ಜಿನ ಟವನ್ನಿಗೆ ಆರೇಳು ಮೈಲಿ ವೊತ್ತುಗಂಡೋಗಿ, ಆದ ಮಾರಿಬಂದ ದುಡ್ನಲ್ಲಿ. ಮೊಗ ಸಾಕಿ ದೊಡ್ಡದು ಮಡಿದ್ಲು...

ಅವ್ನು ವಯಸಿಗೆ ಬಂದ ಅಂತಲೂವೆ, ಬ್ಯಾರೆ ಊರ್ನಿಂದ ಚೆಂದುಳ್ಳಿ ಎಣ್ಣನೆ ತಂದು ಲಗ್ಣ ಮಾಡಿದ್ಲು. ಅವಳ ಗಾಚಾರಕೆ, ಆ ಉಡುಗಂಗೆ ಲಾಗಾಯಿತ್ನಿಂದ್ಲೂವೆ ಭಂಗಿ ಕುಡಿಯೊ ಚಟ ಅಂಟಿಗಂಡು, ಅವ್ನು ಎಡತೀಯ ಬಾಳಿಸ್ನಿಲ್ಲ. ಅವ್ನು ಪ್ರಾಯಕ್ಕೆ ಬಂದಾಗ, ಒಬ್ಬ ಗೋಸಾಯಿ ಎತ್ತಾಕಡಿಂದಲೊ ಬಂದು ಇವರ ಜಗುಲಿ ಮ್ಯಾಲೆ ಟಿಕಾಣಿ ಊಡಿದ್ನಂತೆ. ಆವಯ್ಯನೆ ಈ ಹೈದಂಗೆ ಭಂಗಿ ಕುಡಿಯೋದ ಪಾಟ ಮಾಡಸಿದ್ದೂಂತ ಊರ್ನಲ್ಲೆಲ್ಲ ಗುಲ್ಲು... ಅವ್ನಿಗೀಗ ಮನೆ ಬ್ಯಾಡ, ಮಟ ಬ್ಯಾಡ, ಎಡತಿ ಬ್ಯಾಡ, ಅವ್ವ ಬ್ಯಾಡ, ಯಾರೋಬ್ರೂ ಬ್ಯಾಡ!... ಸದೊಂಬತ್ತು ಕಾಲ ಭಂಗಿ ಕುಡುದು ಕೊಂಟಿನಂಗೆ ಬಿದ್ದು ಕಂಡಿರೋದೆ ಕೇಮೆ! ಅವ್ವ ಜುಲುಮೆ ಮಾಡಿ ಉಣ್ಣು ಬಾ ಅಂದಾಗ, ಆ ಗೆಣೆಕಾರಂಗೆ ಮನಸಿತ್ತಾ ಬಂದ; ಮನಸಾಗ್ನಿಲ್ಲ–ಜಪ್ಪಯ್ಯ ಅಂದರೂವೆ ಜಗುಲಿ ಬುಟ್ಟೇಳದೆ

ಬಿದ್ದಿರ್ತಾನೆ ಇದ್ದ. ವೊತ್ತಾರೆಯೊ ಸಂದೆ ದನೀಗೊ ಕೆರೆ ಕಡೀಕೆ ವೋಗಿ ಬಂದರೆ, ಐಗಂಟೆ ಪಟ್ನ ವೊಕ್ಕಿ ಬದೋನಂಗೆ ಆಡೋದು!...

ಭಂಗಿ ಸೊಪ್ಪ ಅವ್ನು ಇತ್ತಲಲ್ಲೆ ಬೆಳುಕಂಡಿದ್ದ. ಒಂದು ಸರ್ತಿ ಆ ಭಂಗಿ ಗಿಡಗಳ ಬಂಡಮ್ಮಾರು ಕಿತ್ತಾಕಕ್ಕೋಗಿ ಅವಗೂ ಮಗಂಗೂ ಲಟಾಪಟ್ಯಾಗಿ, ಊರ್ನೋರೆಲ್ಲ ಸೇರಿ–

"ಓಗ್ಲಿ ಬುಡು ಬುಂಡಜ್ಜಿ, ಕಾಲಾದಿಂದ್ಲೂವೆ ಈ ಹೈದ ಗಜಗಂಟಾಗೆ ಬೆಳುಕಂಡದೆ. ಈಗಿವ್ನ ನೆಟ್ಟಗೆ ಮಾಡಕ್ಕೆ ಆ ಅರಿ ಅರ ಬೊಮ್ಮನ ಕಯ್ಲೂ ದುಸ್ತಾರ. ಮುಕ್ಕನ್ನ ಅದರ ಪಾಡಿಗೆ ಬುಟ್ಟು ನಿನ್ನ ಬದುಕು ನೀ ನೋಡಿಕೊತ್ತಾ ವೋಗು..." ಸಮಜಾಯ್ಸಿ ಯೇಳಿದ್ರು...

ಊರ್ನೋರ ಸಪೋಲ್ಟು ಸಿಕ್ಕಿದ ಮ್ಯಾಲಂತೂ, ಅವ್ನು ಇನ್ನೂ ಕೆಟ್ಟೋದ. ಆ ಸೊಸೆಗೂ ನೆಲ ಗುದ್ದಿದರೆ ನೀರು ಚಿಮ್ಮೊ ವಯಸ. ಅಟೀಲಾಗ್ಲಿ, ವೊರಗಾಗ್ಲಿ, ಆ ಎಣ್ಣು ಯಾರಾರು ಗಂಡಿಸಿನ ತಾವು ಮಾತಾಡದು ವಚ್ಚೋರಿಕೆ ಇರ್ಲಿ; ಅವಯ್ಯನ ಮೊಖ ನ್ವಾಡಕ್ಕುಂಟ?– ಅತ್ತೆ ಅವಳ ಸುತ್ತ ಭದ್ರಾದ ಇನ್ನೊಂದು ಚಿತ್ರಮೂಲನ ಕ್ವಾಟೇನೆ ಕಟ್ಟಿ, ಆ ಕ್ವಾಟೆ ಬಾಗಿಲ್ಗೆ ಗಟ್ಯಾದ ಬೀಗ ಮುದ್ರೆ ಜಡುದು ಜ್ವಾಪಾನ ಮಾಡಿದ್ಲು... ಕಟ್ಟು ಅಪ್ಪಾರ ಬಿಗಿಯಾದ್ರೆ ವಚ್ಚೋರಿ ಕಿತ್ತೋಗಲೇಬೆಕಲ್ಲ?... ಸೊಸೆ ಮೊದಮೊದ್ಲು, ಎಂಟು ಜಿನ ಈ ಊರಿನಲ್ಲಿದ್ರೆ, ಇನ್ನೆಂಟು ಜಿನಕೆ ತನ್ನ ತೌರಿಗೆ ಅರೋಳು– ಇಲ್ಲೇ ಇದ್ದರೂವೆ ಆಚೆ ಕಡ್ಡಿ ತಗುದು ಈಚೆ ಕಡೀಕೆ ಆಕೊ ಗೋಜಿಗೇ ವೋದೋಳಲ್ಲ!... ಸದೋಂಬತ್ತು ಕಾಲ ಸಿಸ್ತು ಸುಂಗಾರ ಮಾಡ್ಕಂಡು ಗಂಡಯ್ಯನ ತಾವ ಕುಂತಿರತೀನೀಂತ ನೆಪ ತಕ್ಕೊಂಡು, ಅಟ್ಟಿ ಮುಂದಿನ ಹಾದೀಲಿ ವೋಗಿ ಬರೊ ಗಂಡಸರ ಸುತ್ತ ವಾರೆಗಣ್ಣು ತೇಲಿಸೋಳು!

ಅತ್ತೆಗೆ ಇವ್ಳ ಮಿಂಡಾಟ ಸರಿಬರದೇಯ, "ಜಗುಲೀಲೆ ಕುಂತು ಅಲ್ಲೇನು ಪಸದೀಯೆ?... ಎದ್ದು ಬಾಮ್ಮಿ ವಳೀಕೆ" ಅಂದರೆ, ಸಟ್ನೆ

"ತೆಗಿ, ತೆಗಿ. ಈ ಅಟ್ಟೀಲಿ ಅದ್ಯಾವ ಕೇಮೆ ಇದ್ದು?... ಇಲ್ಲೇನು ಊಟದ ಸುಕವಾ? ನ್ವಾಟದ ಸುಖವಾ? ಇಲ್ಲ ವೋಗ್ಲೀಂದ್ರೆ, ಆಸಿಗೆ ಸುಕವಾ? ಎಮ್ಮೆ ತಿಕ ತೊಳುದು, ಗಂಜಳ ಸೀಟಿ, ತ್ವಪ್ಪೆ ಬಾಚ್ತಾ ಬಿದ್ದಿರಕ್ಕಾ ಈ ಅಟ್ಟೀಗೆ ನಾ ಲಗ್ನ ಆದದ್ದು?" – ಆ ಗರತಿ ಮಾತಿನ ಮುಂದೆ ಬುಂಡಮ್ಮಾರಂತೂ ತುಟಿ ಪಿಟಕ್ಕನ್ದೆ ಬಾಯಿ ಮುಚ್ಚುಕಾಬೇಕಾಯ್ತು!

ಮಯ್ಯಿ ಮ್ಯಾಲೆ ಎದ್ದುಣ್ಣು ಯಾವತ್ತಿದ್ರೂವೆ ವಡೀನೇ ಬೇಕಲ್ವ?... ಒಂದು

ನಾತ್ರೆನಾಗ ಸರೋತ್ನಲ್ಲಿ ಜಲಾಬಾದ್ಗೆ ಅವಸ್ರಾಗಿ ಬುಂಡಮ್ಮಾರು ಎದ್ದು ನ್ವಾಡ್ತಾರೆ: ವಚ್ಚೋರಿ ಮೂಲೆಲ್ಲಿ ತನ್ನ ಪಕ್ಕದಾಗ ಕೊಕ್ಕುರುಸಿ ಬಿದ್ದಿದ್ದ ಸೊಸೆ ಮಂಗರ ಮಾಯ!... ಜಟಜಟ್ನೆ ದೀಪ ಕತ್ತಿಸಿ, ಅಟ್ಟಿಸಂದಿ ಸಂದೀಲೂವೆ ತಡಕಾಡಿದ್ರಂತೆ. ಮುಂಚೋರಿ ಬಾಗಿಲ್ಗೆ ಬಂದು ದೀವಿಗೆ ಇಡುದು ನ್ವಾಡಿದ್ರಂತೆ. ಕದ ಸುಮ್ಕೆ ಮುಚ್ಚಿದಂಗಿತ್ತು. ತಾವೆ ಮನಕ್ಕಳೋವಾಗ ಭದ್ರ ಮಾಡಿದ್ದ ತಾಪಾಳು ಮಾತ್ರ ತಕ್ಕಂಡಿತ್ತಂತೆ! ಇನ್ನು ಕಣಿ ಕ್ಯಾಳಾದೇನದೆ?... ಆ ತಾಟಗಿತ್ತಿ ಅಟ್ಟಿ ಆಚ್ಗೆ ವೋಗರಾದಂತೂ ದಿಟವೇ ದಿಟ. ಯಾರದೊ ಅಟ್ಟೀಲಿ ಕ್ಯಾಣಸರಕೋಗಿ ಬಿದ್ದವ್ಳೆ. ಬೆಳಕರೀತ್ಲೆ, ತನ್ನ ಪಾಡಿಗೆ ತಾನು ಎದ್ದು ಬತ್ತಾಳೆ ಅರಾಮಿ ರಂಡೆ– ಬಯ್ಯಿಕತ್ತ ತಾಪಾಳಾಕಿ, ಸಿವಾಂತ ಚಾಪೇಲಿ ತಮ್ಮೋಟಿಗೆ ತಾವು ಮುದುರಿಕಂಡ್ರಂತೆ...

ವೊಲಗೇರಿ ಇನ್ನೂ ಕೋಲಿ ಕೂಗೇ ಇರ್ನಿಲ್ಲ. ಆಟೋತ್ತಿಗೇ ಎದ್ದು ಬಂದು ಬುಂಡಮ್ಮಾರಟ್ಟಿ ಕದ ತಟ್ಟಿದ ಲಕ್ಕ. "ಸೊಸೆ ಬಂದಳೇನೋ ಅಂದುಕೊತ್ತ, ವಳುಗೆ ಕಾಲಿಟ್ಟ ಕೂಡ್ಲೆ ಯಾವ್ಯಾವ ಮಾತ ಪೋಣಿಸಿ ಬೈದು, ಅವ್ಳ ಹೈರಾಣ ಮಾಡ್ಬೇಕೂಂತ ನಾ ಬಂದ್ರೆ... ನೀನಾ?"... ಕದ ತಾಗೀತಾ ಒಂದು ಕೈಯ ತಲೆ ಮ್ಯಾಲೆ ಇಟ್ಟುಗಂಡ್ರು ಬುಂಡಮ್ಮಾ...

ಆಗ ಲಕ್ಕ ಇನ್ನೂ ಚಿಕ್ಕೋನು. ಮಟಕೋಯ್ತಿದ್ದ ತೆಪ್ಪುಸಿ ಅವನಯ್ಯ ಇವ್ರ ಅಟ್ಟೀಲಿ ಜೀತಕಿರುಸಿದ್ದ.

ಎಮ್ಮೆ, ಕರ...ಎಲ್ಲಾ ನೂವೆ ಗೊಂತ್ನಿಂದ ಬಿಚ್ಚಿ, ಇತ್ತಲ ಗೂಡಗಳ್ಗೆ ಅವ ಬಿಗುದು, ಕಸಬರಲಿಂದ ಕ್ವಟ್ಟಿಗೆ ತ್ವಡುದ ಲಕ್ಕ–ಬುಂಡಮ್ಮಾರ ಮಾತಿನ ಸನಗು ಚಿಂಕರಾನು ಅರ್ತ ಆಗದೆ!... ಬುಂಡಮ್ಮ ಹಾಲು ಕರೆಯಕ್ಕೆ ಬಂದರು. ಲಕ್ಕ ಇನ್ನೇನು ಕರ ಬುಡಬೇಕು, ವೋಟರಲ್ಲಿ ಆಚೆ ಅಟ್ಟಿ ತಿಮ್ಮರಾಯಿ ಎಡತಿ ಸಾಕಿ ಸುದ್ದಿ ತಂದಿದ್ಲು;

"ನಮ್ಮಟ್ಟಿ ಜಗುಲೀಲೆ ಮೊಕ್ಕಾಂ ಮಾಡಿದ್ದ ಕಂಚುಗಾರ ಸಾಬಿ ನೆನ್ನೆ ನಾತ್ರೋನಾತ್ರೆ ಫೇರಿ ಕಿತ್ತವ್ನೆ. ನಮ್ಮೆಜಮಾನ್ರು ಹೊಲದ ಕಡೀಕೋಗಕ್ಕೆ ಎದ್ದೋರು ಅಟ್ಟಿ ಮುಂದಿನ ಬಾಗಿಲ ತೆಗುದಾಗ ಜಗುಲಿ ಖಾಲಿ ಇದ್ದದ್ದು ಕಂಡು, ನನ್ನ ಕೂಗಿ "ನ್ವಾಡೆ ಸಾಕಿ, ಒಂದು ತಿಂಗಳಿಂದ ಮಾಸಾಬ್ಯಸ್ತನ ತರಾನೆ ಇಸಿದ್ದ ಈ ಕಂಚುಗಾರ ಸಾಬಿ ಎಂಥ ಚಕ್ಕರ್ ಕ್ವಟ್ಟು ಎದ್ದವನೆ!... ನಾ ನಿಂಗೆ ಮೊದ್ಲೇ ಯೋಳ್ದೆ ಅವ್ನ ನಮ್ಮ ಜಗುಲೀಗೆ ಸೇರುಸಬ್ಯಾಡ, ಸೇರುಸಬ್ಯಾಡಾಂತ. ನೀ ಕ್ಯಾಳ್ನಿಲ್ಲ. ಊರ್ನಲ್ಲಿ ಯಾರ್ಯಾರು ಏಟೇಟು ಪಾತ್ರೆಗಳ ಕಲಾಯ್ ಮಾಡಕ್ಕೆ ಕ್ವಟ್ಟು ಕಳಕಂಡರೊ ನಾ ಕಾಣೆ!' ಅಂದ್ರು... ಒಂದು ಇತ್ತಾಳೆ ಬೋಸಿ, ಒಂದು ಅರಕನ

ಚೆಟ್ಟಿ, ಒಂದು ಗಂಜು... ಇವಿಟ್ನೂ ನಾನು ಕ್ವಟ್ಟಿದ್ದೆ ಬುಂಡಮ್ಮಾರೆ. ಆದ್ರೆ ಹಡಸಿಕಂಡಮ್ಯಾಲೆ ಯೋಳಿಕೋಬ್ಯಾಡದು ಅಂತ ಆ ಚಮಾಚಾರ್ವ ನಮ್ಮೆಜ್ಮಾನರಿಂದ ಮುಚ್ಚಾಕ್ದೆ!... ಇನ್ನೇನಮಾಡಾದು. ಇನ್ನು ಮ್ಯಾಕೆ ಅಂತೋನು ಯಾರಾರು ಜಾಗ ಕ್ಯಾಳಿಕಂಬಂದ್ರೆ, ವೋಗ್ಲ ಅಪ್ಪಯ್ಯ, ನೀ ಬಂದ ಹಾದಿಗೆ ಸುಂಕ ಇಲ್ಲ ಅಂದು ಬಿಡ್ತೀನಿ" – ಚಕ್ಕಚಕ್ನೆ ಮಾತಾಡಿ ಮುಗಿಸಿದ್ಲು ಸಾಕವ್ವ...

ಸುದ್ದಿ ಕೇಳಿ ಬುಂಡಮ್ಮಾರ ಮೊಖದಾಗೆ, ತಟಕ್ನೆ ದೀವಿಗೆ ಕೆಡುಸದಂಗೆ ಕಪ್ಪು ಮೆತ್ತಿಗತ್ತು... ಇಂಗಾದ್ದು ಒಂದೇ ಗಳಿಗೆ, ಆಟೇಯ. ಆ ಗಳಿಗೆ ಕಳೀತು. ಪುನಾ ಅವರ ಮೊಖದಾಗೆ ನಗಸಾರ ಇಟ್ಟಾಡ್ತು... ಊ– ಅಂತ ತುಟಿ ಬಿರುವಿ, ತಲೆಕೊಸರಿ, ಎಮ್ಮೆ ಕೆಚ್ಚಲ್ಗೆ ನೀರೆರುಚಿ, ಹಾಲು ಕರೆಯಕ್ಕೆ ಕುಂತರು... ಆಚೆ ಅಟ್ಟಿ ತಿಮ್ಮರಾಯಿ ಎಡತಿ ಸಾಕಿ ಆಟೋತ್ತು ಈಟೋತ್ತು ನಿಂತು, ಆ ಸುದ್ದಿ ಈ ಸುದ್ದಿ ಎತ್ತ, ಕೊನೇಲಿ – "ನಿಮ್ಮ ಸೊಸೆಯೆಲ್ಲಿ ಬುಂಡವ್ವ, ಕಾಣುಸ್ತಾನೆ ಇಲ್ಲ?" ಅಂದುದಕೆ, ಹಾಲು ಕರೀತಾ ಕರೀತಾನೆ ಬುಂಡಮ್ಮಾರು "ಇನ್ನೆನ– ಆ ಕಂಚುಗಾರ ಸಾಬಿ ಕುಟ್ಟೆ ವೋಡೋಗಿರಬೇಕು, ಆ ಹಗಲು ಹಾದರಗಿತ್ತಿ" – ನಿಸೂರಾಗಿ ಯೇಳಿಬುಟ್ರು, ಆಚೆ ಅಟ್ಟಿ ತಿಮ್ಮರಾಯಿ ಎಡತಿ ಸಾಕವ್ವ,

"ಇದೂ ಉಂಟ? ಕಲಿಗಾಲ!... ನಿಮ್ಮಟ್ಟೀಲಿ ಅವಳಿಗೇನ ಕೊರತೆ ಮಾಡಿದ್ರಿ?..." ಅಂದುಕೊತ್ತ, ಊರೋಳ್ಗೆ ಈ ಬಿಸಿಬಿಸಿ ಸುದ್ಯ ಟಾಂಟಾಮು ಮಾಡಕ್ಕೆ ತುದಿಗಾಲ್ನಲ್ಲೆ ಬಿರಬಿರ್ನೆ ವೊಂಟೋದ್ಲು...

ಹಾಲ ಕಾಯಿಸಿಟ್ಟು ಬುಟ್ಟು ಬಂದು ನಡುದ ಸಮಸ್ತಿಚಾರಾನು ನನ್ನ ಕುಟ್ಟೆ ಯೋಳಿ, ಬುಂಡಮ್ಮಾರು–

"ಲೌಡಿಮೋದರೊಯ್ತಾಳೆ ಬುಡೋ, ಲಕ್ಕ. ಅವ್ಳು ವೋದರೆ ನಮ್ಮಟ್ಟಿ ಇಟ್ಟಿನ ಮುದ್ಯೇ ಉಳೀತವೆ..." ಅನ್ತಾ ಅನ್ತಾ ಸಮಾದಾ ತಂದುಕ್ವಂಡ್ರು.

* * * *

ಲಕ್ಕ ಇದೇ ಗುಂಗ್ನಲ್ಲಿ ವೋಯ್ತಾ ಇದ್ದ... ಚಾಪೆ ಸುರುಳಿ ಬಿಚ್ಚಿದಂಗೆ ಅವ್ನ ವಳುಗ್ನಿಂದ ನೆಪ್ಪು ಬಿಚ್ಚುಗತ್ತಾ ವೋಯ್ತು:

ಒಂದು ವೊತ್ತಾರೆ, ಕಸ ಆಕಿ, ಹಾಲ ಕರೆದಾದಮ್ಯಾಲೆ ಬುಂಡಮ್ಮಾರ ಅಯಿದು ಎಮ್ಮೆನೂವೆ ಮೇಯಕ್ಕೆ ಕಾಡಿಗೆ ಅಟ್ಟಿಗಂಡೋಗಿದ್ದ. ಉಳಿಕೆ ಹೈಕಳೂ ಬ್ಯಾರೆ ಬ್ಯಾರೆ ಎಮ್ಮೆ ದನಗಳ ಅಟ್ಟಿಗಂಬಂದಿದ್ರೊ. ಆಗ್ಲೇ ನಂಗೆ ಹೇಲಕ್ಕೆ ಅವಸರಾಗಬೇಕ?... ಉಳಿಕೆ ಹೈದಳಿಗೆ, "ವಸಿ ನನ್ನೆಮ್ಮೆ ನ್ವಾಡಕತ್ತಿರಿ" ಯೋಳಿ, ಜೊತ್ಗೆ ಒಂದು ಎಣ್ಣೂವೆ ಇದ್ದದ್ರಿಂದ ನಾಚಿಕ್ಯಾಗಿ ಕಾಡ್ನಲ್ಲಿ ರವೋಟು ದೂರವೋಗಿ

ಮೆಳೆ ಮರೇಲಿ ಕುಂತ...ಆ ವಯಸ್ನಲ್ಲಿ ಬಿಸಿಬಿಸ್ಯಾಗಿ ಸ್ಯಾವಿಗೆ ವತ್ತಿದಂಗೆ ಇಂದಿನಿಂದ ತೊಡೆಗಳ ಸಂದೀಲಿ ಈಚ್ಗೆ ಕಡೆಯೋವ್ನ ಬಗ್ಗೆ ಬಗ್ಗೆ ನ್ವಾಡ್ತಾ ಇರಕ್ಕೆ ಕುಸಿಯೋ ಕುಸಿ:

ನ್ವಾಡ್ತಾನೆ ಇದ್ದ. ಒಂದು ದಪ್ಪನೆ ಕೊಂತ ಬಿತ್ತು. ಅದರ ಇಂದೇಯ ಒಂದು ಉದ್ದಾನೆ ಎರೆ ಉಳ– ಇನ್ನೂ ಜೀವ ಇರಾದು!– ತಿಕದಿಂದ ಅರ್ಧ ಈಚೆಗೆ ಬಂದು, ಹಾವಿನಂಗೆ ಆಚೆ ತೊಡೆ ಕಡಿಂದ ಈಚೆ ತೋಡೇಗೆ ಬಡಿದಾಡಿ ನುಲಿದಾಡ್ತ ಇತ್ತು... ಲಕ್ಕ ಹಾವು ಅಂತಾನೆ ಬ್ರಮುಸಿ– "ಹಾವು!...ಹಾವು!" ಅಂಚ ಗಟ್ಯಾಗಿ ಅರಚಿ, ನಿಂತ ಜಾಗ್ದಲ್ಲೇ ತಕಪಕ ಕುಣಿದಾಡ್ತಿದ್ದ.

ಆಟಗುಳಿ ಹೈಕಳು ಎಮ್ಮೆ ದನಗಳ ಮೇಯಕ್ಕೆ ಬುಟ್ಟು ಯಾವುದೋ ಆಟ ಆಡ್ತಿದ್ರುವು ಲಕ್ಕ ಹಾವೂಂತ ಕಿರುಚಿದ ಕೂಡ್ಲೆ ಆ ಕೂಗು ಕ್ಯಾಳಿ ಒಂದೇ ಉಸುರ್ಗೆ ವಾಟ ವೊಡದು ಅವ್ನು ನಿಂತಿದ್ದ ತಾವಿಗೆ ಬಂದೋ–ನ್ವಾಡಿದ್ರೆ– ಚಡ್ಡ ಬಿಚ್ಚಾಕಿ, ಒಂದು ಕಯ್ಲಿ ಇಡುದು, ಬೆತ್ತಾನೆ ಮರಿ ಕುಣ್ತ ಕುಣಿತಾ ಅವ್ನೆ!... ಇನ್ನೂ ಸಮೀಪ ಬಂದು ನ್ವಾಡಿದಾಗ ವಸಿ ಹೈಕಳು ಹಾವೊಂತಾನೆ ಎದರಿ ದೂರದೂರ್ಕೆ ವೋದೊ. ಅದರಾಗೆ ಆ ಎಣ್ಣು, ಗಂಗಿಯೇ ಧೈರ್ಯ ಮಾಡಿದೋಳು... ಅವ್ಳೆ ನಮ್ಮೆಲ್ಲಾರಿಗಿಂತ ದೊಡ್ಡೋಳು. ಆಗ್ಲೆ ಎಣ್ಣಾಗಕ್ಕೆ ಬತ್ತಾ ಇದ್ಲು... ಏಡು ವಣುಗಿದ ಕಡ್ಡಿಗಳ ಮೆಳಿಂದ ಮುರ್ದು, ಏಡು ಕಡ್ಡಿಗೂ ಎರೆ ಹುಳುವ ಇಕ್ಕಳಿಕ್ಕೆ ಸಿಕ್ಕಸ್ದಂಗೆ ಸಿಕ್ಕುಸಿ, ಈಚೆಗೆ ಎಳದಾಕಿ– "ಇದಕ್ಯಾಕೊ ಲಕ್ಕ ಈ ಪಾಟಿ ಎದರಿ ಎಪ್ಪಳಿಸೋದೆ? –ನ್ವಾಡು, ಇದು ಹಾವಲ್ಲ... ಎರೆಹುಳ!"... ಕೆದಕಿ ಕೆದಕಿ, ತೋರಿದ್ಲು...

ಅಲ್ಲೀಗಂಟ ಇಲ್ಲಿದ್ದ ನಾಚಿಕೆ, ಎರೆಹುಳ ಈಚ್ಗೆ ಕಡೀತ್ಲೆ, ತನ್ನ ಮುತ್ತುಗಂಡಿತ್ತು. ಆತ್ರ ಎಲ್ಲೂ ನೀರು ಸಿಕ್ಕದೆ, ತಮ್ಮೂರ ದೊಡ್ಡಕೆರೆ ತಾವಿಕೆ ಓಡೋದ. ಸರಸರ ತಿಕ ತೊಳದು, ಚಡ್ಡಿ ಸಿಕ್ಕುಸಿ, ಇಂದ್ಕೆ ಓಡೋಗಿ ನ್ವಾಡಿದ್ರೆ– ತನ್ನೆಮ್ಮೆಗಳೇ ಕಾಣುಸ್ತಿಲ್ಲ!... ಬಾಕಿಯೋರ ಎಮ್ಮೆ ದನಗೋಳೆಲ್ಲ ವೋಟೋಟು ದೂರಕೆ ಮೇಯ್ತಾ ಇದ್ದೊ!... ಜೀವ ಹಚಾಡು ಪಚಾಡಾಗಿ ಮೆಳೆಗಳ ಸಂದುಸಂದೀಲೂ ತಡಕಾಡ್ದ. ತನ್ನ ಎಮ್ಮೆಗಳು ಮಾತ್ರ ಯಾತಾವೂ ಕಾಣ್ನಿಲ್ಲ. ತನ್ನ ಜೊತೆಗಾರ ಹೈಕಳೂವೆ, ಪಾಪ– ಅವೂವೆ ಒಂದು ಮೆಳೆ ಸಂದನೂ ಬುಡದೆ ಸೋಸಿ ಸೋಸಿ ಬೆಪ್ಪಾದೊ. ಯಾತಾವೂ ಎಮ್ಮೆಗಳ ಸುಳುವೇ ಇಲ್ಲ!– ಸಂದೆ ದನ ಅಟ್ಟಿ ಊರಿಗೆ ಇಂತಿರುಗೊವರಿಗೂ ಉಡುಕ್ದೊ. ಸಿಕ್ಕನೇ ಇಲ್ಲ. ಹ್ಯಾಪಮ್ವಾರೆ ಅಕ್ಕಂಡು ವೊತ್ತೊ ಗಿನ್ವಾಡ್ಲಿ? ಅನ್ನುಸ್ತು. ದುಕ್ಕ ವಳುಗ್ನಿಂದ ವತ್ಕೊತ್ತಿ ಏಡು ಕಣ್ಣನೂವೆ ತುಂಬಿಕತ್ತು. ಊರು ಮುಟ್ಟತ್ಲೂವೆ ಮೊದ್ಲು ಸಿಕ್ಕೋದೆ ವೊಲಗೇರಿ. ಲಕ್ಕ ಮೆತ್ತಗೆ

ತಮ್ಮ ಗುಡ್ಲಿಗೋಗಿ, ಕಂಬಳೀಯ ಮೊಖದ ತುಂಬ ಎಳುದು ಬಿದ್ಕಂಡ. ಅವನವ್ವ ಅಡಿಗೆಕ್ವಾಣೇಲಿ ಎಸೆರೆತ್ತುತ ಇದ್ದೋಳು,

"ಇದ್ಯಾಕ್ಲ, ಲಕ್ಕ, ಜೊರಗಿರ ಬಂದಿದ್ದಾತೇನ್ಲ?"... ಕೇಳಿದ್ದು.

ಲಕ್ಕನಿಂದ ಉತ್ತರವೇ ಇಲ್ಲ!... ಕಂಬಳಿ ಉಡುಕಂಡು ಕಪ್ಪರ ಜೋಳಿನಂಗೆ ಬಿದ್ಕಂಡು ಅವ್ವ ಅದೇಟೇ ಸಾಸ ಮಾಡಿದ್ರೂವೆ ಆ ಕಂಬಳಿ ಕಿತ್ತು ಮಯ್ಯಿ ಮುಟ್ಟಿ ನ್ವಾಡಕ್ಕೆ ಅನುವು ಕ್ವಡ್ತಾನೆ ಇರ್ಲಿಲ್ಲ...

ತಾವಿಬ್ರೂ ಈ ಪರಿ ಜಗ್ಗಾಡ್ತ ಇರೋನೂವೆ, ನಮ್ಮ ಗುಡ್ಲ ವೋರಗ್ನಿಂದ–

"ಕಲ್ಯಾಣಿ... ಕಲ್ಯಾಣಿ... ನಿನ್ಮಗ ಲಕ್ಕ ಬಂದಿದ್ದಾನೇನೆ?" ಅಂದದ್ದು ಕ್ಯಾಳಿ ನನ್ನ ತೊಳ್ಳೆ ನಡುಗೋಯ್ತು. ಅವ್ವ ಕಂಬಳಿ ಕೀಳಾದು ನಿಲ್ಲುಸಿ,

"ಯಾರು?" ಅಂದು ಮುಂಚೊರಿಕೋಗಿ,

"ನೀವಾ– ಬುಂಡಮ್ಮಾರೆ?... ನಾ ಯಾರೋ ಅಂತಿದ್ದೆ!" ಅಂದದ್ದು ಕ್ಯಾಳಿಸ್ತು.

"ಅದಿರ್ಲಿ, ನಿನ್ಮಗ ಲಕ್ಕ ಬಂದಿದ್ದಾನೊ, ಇಲ್ವೊ?"

–ಬುಂಡಮ್ಮಾರೇಯ!... ಇನ್ನೇನಪ್ಪ ಗತಿ?

"ಬಂದವ್ನ ಕನ್ರವ್ವ, ಜೊರಾ ಬಂದಿರಾ ಅಂಗದೆ. ಕಂಬಳಿ ವೊದ್ದು ನಡುಗ್ತಾ ಮನಗವ್ನೆ."

"ಜೊರವೂ ಇಲ್ಲ, ಚಳಿಯೂ ಇಲ್ಲ. ನನ್ನೆಮ್ಮೆಗಳ ಕಾಡ್ನಲ್ಲಿ ಕಳುದು, ಇಲ್ಲಿ ಬಂದು ಯಾಸ ಆಕ್ತಾ ಅವ್ನೆ... ಎದ್ದು ಈಚೆಗೆ ಬರ್ಲಾ–ಕಂಡಿವ್ನಂತೆ!"

ಬುಂಡಮ್ಮಾರ ಗುಡುಗು ನಮ್ಮ ನೆರಿಕೆ ಗುಡ್ಲುನೂವೆ ಅಲುಗಾಡಿಸ್ತು. ಗುಡ್ಲ ಮ್ಯಾಲೆ ಹಬ್ಬಿ ಮನಗಿದ್ದ ಸಕ್ಕರಗುಂಬಳದ ಕಾಯ್ಗಳು ನನ್ನ ತೊಳ್ಳೆವಳುಗೆಲ್ಲ ಉಳ್ಳಾಡಿದಂಗಾಯ್ತು.!... ಮೊಖ ಸುತ್ತಿದ್ದ ಕಂಬಳ್ಯ ಸರುಸಿ ಕಿಂಡಿ ಮಾಡಿ ನ್ವಾಡ್ದೆ. ಬುಂಡಮ್ಮಾರು ಗುಡ್ಲು ಬಾಗ್ಲಲ್ಲಿ ಬಕ್ಕಂಡು ನಡ ನಿಗುರ್ಸಿ ಸೊಂಟದ ಮ್ಯಾಲೆ ಬಲದಾ ಕಯ್ಯಿಟ್ಟು, ಏಡು ಕಟವಾಯ್ಲೂವೆ ಎಲಡಿಗೆ ರಸವ ಸೋರುಸ್ತ, ರುಕ್ಮಿಣವ್ವಾರ ಅಟ್ಟ ವಳುಚೋರಿ ಗ್ವಾಡೆಗೆ ನ್ಯಾತಾಕಿದ್ದ ಪಟದ ಚಾಮುಂಡೇಸ್ವರಿ ತಾಯಾಗಿ ನಿಂತಿದ್ರು... ಇನ್ನು ನನ್ನ ಬ್ಯಾಳೆ ಕಾಳು ಇವರ ಮುಂದೆ ಬೇಯಕ್ಕಿಲ್ಲ ಅನ್ನುಸ್ತು. ಜಟ್ನೆ ಕಬಳಿ ವದುರಿ, ಎದ್ದೋಗಿ, ಅವರ ಮುಂದೆ ತಲೆತಗ್ಗುಸಿ, ಕುರಿಮರ್‍ಯಾಗಿ ನಿಂತೆ...

"ನಂಗಾಗ್ಲೆ ಗ್ವತ್ತಾಗದೆ. ನೀನು ಕಾಡ್ನಲ್ಲಿ ನನ್ನೆಮ್ಮೆ ಕಳುದು ಬಂದಿರಾ ಇಸ್ಯ. ನಿನ್ನ ಜೊತ್ಗೆ ಬಂದಿದ್ದ ಎಮ್ಮ ದನ ಕಾಯೋ ಹೈಕಳು ಎಲ್ಲಾ ನೂವೆ ಯೋಳಿ

ವೋದ್ರೋ"– ತಟತಟ್ನೆ ಬುಂಡಮ್ಮ ಈ ತರ ಅಂದಕೂಡ್ಲೆ, ಲಕ್ಕ ಕಣ್ಣೀರು ಸುರುಸ್ತ ಕದ್ದು ಕದ್ದು ಅವ್ವನ ಮೊಖ ನ್ವಾಡಿದ್ದ. ಅವ್ವ ಎದುರಿಕೆಯಿಂದ ಬಿಳುಚಿ ಬಿಳಿ ಹಾತೆ ಉಳುವೆ ಆಗಿದ್ಲು. ಕಣ್ಣಿಂದ ನೀರು ಬಳ್ನೆ ಮರಳಿ ಏಡು ಕೆನ್ನೇನೂವೆ ವದ್ದೆ ಮುದ್ದೆ ಮಾಡಿತ್ತು... ಬುಂಡಮ್ಮಾರು ಅವ್ವನ ಕುಟ್ಟೆ ಗದರಿದ್ರು.

"ನೀ ಯಾಕಮ್ಮಿ ಅತ್ತೀ... ವೋಗಿರಾವು ನನ್ನೆಮ್ಮೆ" ಅಂದು ಲಕ್ಕನ ಕಡೀಕೆ ತಿರುಗಿ– "ಊ, ಆದ್ದು ಆಗೋಯ್ತು. ಕಾಡ್ನಲ್ಲಿ ಹಿಂದ್ಕೆ ಒಂದು ಸರ್ತಿ ಅದಂಗೆ ಅವು ಉಲಿ ಬಾಯ್ಗೆ ವೋಗಿರಬೇಕು... ಈಗ ನೀ ಅಳ್ತಾ ನಿಂತ್ರೆ, ಯಮಪುರಿಗೋದ ನನ್ನೆಮ್ಮೆ ಯೇನಾರ ಇಂದ್ಕೆ ಬರಾದುಂಟ?... ಬಾ, ಬಾ. ಅಟ್ಟೀಲಿ ಮಸ್ತಾಗಿ ಕೇಮೆ ಗುಡ್ಡೆ ಅಕ್ಕಂಡು ಕುಂತದೆ" – ಯೋಳ್ತಾ ಯೋಳ್ತಾ ಮುಂದುಮುಂದ್ಕೆ ಅಡಿ ಕಿತ್ತರು. ಲಕ್ಕನೂವೆ ಎದುರ್ತ ಎದುರ್ತಾನೆ ಬುಂಡಮ್ಮಾರ ಇಂದಿಂದೆ ವೊಂಟ...

"ನಿಮ್ಮ ಕಾಲಿಗೆ ಬೀಳ್ತೀನಿ. ನಾ ಬೇಕಾದರೆ ಸಾಯೋತಂಕ ನಿಮ್ಮಟ್ಟಿ ಜೀತ ಮಾಡ್ತೀನಿ. ನನ್ನ ಮಗನ್ನ ಮಾತ್ರ ಪಂಚಾತಿ ಮುಂದೆ ನ್ಯಾಯಕೆ ಕುಂದರಿಸ ಬ್ಯಾಡಿ, ಬುಂಡಮ್ಮಾರೆ..." ಕರುಳು ಕಿತ್ತುಗಂಡು ಅವ್ವ ಬೇತುಗತ್ತಿದ್ಲು... ಕ್ಯಾಳಿಸಿದ್ರೂವೆ ಕ್ಯಾಳಸ್ದೇ ಇದ್ದೋರಂಗೆ, ಒಂದು ಕಯ್ಲಿ ಬಗ್ಗಿದ ನಡ ಇಡುದು, ಇನ್ನೊಂದು ಕಯ್ಯಾಗಿದ್ದ ಕೋಲು ಊರ್ತಾ, ಪುಟ್ಟ ಪುಟ್ಟೆಜ್ಜೆ ಇಡ್ತಾ ಬುಂಡಮ್ಮಾರು ನಡುದೇ ಬುಟ್ರು...

ಅಟ್ಟಿ ಮುಟ್ಟುತ್ತಿದ್ದಂಗೆ ಬುಂಡಮ್ಮಾರ ಮಗ ಚೆನ್ನೂರ ಜಗುಲಿ ಮ್ಯಾಲೆ ಕುಂತು, ಚಿಮಣಿಗೆ ಭಂಗಿ ಸೊಪ್ಪು ತುಂಬಿ, ಅದರ ಮುಂದ್ಕೆ ಕೆಂಡ ಆಕ್ಕಂಡು, ಚಿಮಣಿ ಇಂದ್ಕೆ ಚೂರು ಬಟ್ಟೆ ಸುತ್ತು, ಈ ಪರ್ಪಂಚದಲ್ಲೇ ನಿಲ್ಲದೇ ಇರೋ ನಂಗೆ, ಅರ್ಧರ್ದ ಕಣ್ಣು ತೆರೆದು ದಂ ಎಳೀತಿದ್ದ. ಬುಂಡಮ್ಮಾರು ಒಂದು ಪದಾರ್ತ ಅನ್ನೂವಂಗೆ ಒಂದ್ಸಲ ಅವನ್ನೋಡಿ, ಮೊಖಾವ ಒಂದು ತರ ಮಾಡಿ, ಅಟ್ಟ ಮುಂದಿನ ಕದ ಜಾಡುಸಿ ವಳುಕ್ಕೆ ನಡುದ್ರು–

ಅಟ್ಟಿ ವಳುಗಡೆ ಕಾಲಿಡ್ತಿದ್ದಂಗೆ, ಅಯಿದು ಎಮ್ಮೆಗಳು ಇಲ್ಲದೇಯ ಕ್ವಟ್ಟಿಗೆ ಬಣಬಣ ಅಂತಿತ್ತು. ಅದ ಕಂಡು, ಈ ತೆಪ್ಪಿಗೆ ತಾನೇ ಕಾರಣ ಅನ್ನುಸಿ, ಲಕ್ಕ ಬಳಬಳ ಅತ್ತ. ಅವ್ನ ಮೂಗಿನ ಸೊರಸೊರ ಕ್ಯಾಳುಸಿ, ಬುಂಡಮ್ಮ ಇಂದ್ಕೆ ತಿರುಗಿ,

"ಬೇಕೂಫ– ಎಣ್ಣಿಂಗಸಿನ ಜಪಾತಿ ಆಳ್ತಿದ್ದೀಯಲ್ಲೊ! ಅದೇನ ಅಗೋದ್ದು ಈಗ?... ಉರುಳಿ ಬೇಯ್ಸಿಟ್ಟಿವ್ನಿ. ಅಂಗಳದ ಮೂಲೆ ವಳುಕಲ್ನಲ್ಲಿ ಅದ್ನ ನುಣ್ಣಗೆ ಆಡುಸಿ, ಉಳಕಂಡಿರೋ ಆ ಮೂರು ಎಮ್ಮೆ ಕರುಗಳಿಗೂವೆ ಒಂದೊಂದು

ಮುದ್ದೆ ಕಟ್ಟಿ ಉಡುಸು... ಅಮ್ಯಾಕೆ ಈಚೋರಿ ದೊಡ್ಡೆಮ್ಮೆಗಳ ಕಟ್ಟಿದ್ದ ಜಾಗದಲ್ಲಿ ಒಂದು ತಬ್ಬು ಉಲ್ಲಾಕಿವ್ನಿ. ಆ ತಬ್ನಲ್ಲಿ ಒಂದೀಟೀಟು ತಗುದು ಒಂದೊಂದು ಕರೀನ ಮುಂದ್ಕೂ ಇಕ್ಕು. ವೋಟ್ರಲ್ಲಿ ನಾನು ರಾಗಿ ರೊಟ್ಟಿ ತಟ್ಟಿ ಇಡ್ತೀನಿ"...

ಆ ಪರ್ಕಾರ ಅಂಗಿ ತುದಿಂದ ಕಣ್ಣೀರೊತ್ತೊ, ಬೆಯ್ಸಿಟ್ಟಿದ್ದ ಉಳ್ಳೀಯ ವಳುಕಲ್ನಲ್ಲಿ ಆಡುಸಿ, ಮುದ್ದೆ ಕಟ್ಟಿ, ಅದ್ನ ಮುರು ಉಂಡೆ ಮಾಡಿ, ಮೂರು ಕರುಗಳ್ಗೂ ತಿನ್ನುಸಿ, ಅವುಗಳ ಮುಂದ್ಕೆ ಉಲ್ಲಾಕಿ ಬಂದು ನೆಟ್ಟಗಿನ್ನೂ ನೆಲಕೆ ಅಂಡ ಊರೇ ಇಲ್ಲ, ವೋಟರಲ್ಲಿ– "ಇಡೀಲ ನೀರ" ಅಂತ ಕಯ್ಯ ತ್ವಳುಸಿ, ತಕ್ಕ ಅಂತ ರೊಟ್ಟೀಯ ಕಯ್ಯಾಗಿಟ್ಟರು. ನಂಗೆ ತಿನ್ನಕ್ಕೆ ಸೆಡೀದು. ವಳುಗ್ನಿಂದ ತಿದಿ ಒತ್ತ ಬತ್ತಾ ಇತ್ತು ದುಕ್ಕ. ರೊಟಿ ಮುರೀದೆ ಸುಮ್ಮೆ ಕುಂತಿದ್ದೆ...

ಬುಂಡಮ್ಮಾರು ವಳೀಕೋಗಿ, ಅವ್ನು ಕುಡಿಯಕ್ಕೆ ಒಂದು ತೆಂಗಿನ ಕರಟದಲ್ಲಿ ನೀರು ತಂಡು ನ್ವಾಡ್ತಾಂ–ನಾನಿನ್ನೂ ಒಂದು ಚೂರು ರೊಟ್ಟೀನು ಮುರಿದೇ ಇಲ್ಲ. ಕ್ಯಾಣ ಅತ್ತಿ...

ಇದ್ಯಾಕ್ಲ ಅಪ್ಪಯ್ಯ ರೊಟ್ಟಿ ತಿನ್ನದೆ, ಬೆಪ್ಪು ನಾಡ್ನಿಂದ ಬಂದೋನಂಗೆ ಹ್ಯಾಪಹ್ಯಾಪಗೆ ಕಣ್ಣ ತೇಲಿಸೀಯೆ?... ನನ್ನೆಮ್ಮೆ ವೋದ್ರೆ ವೋದೊ, ಅದು ನನ್ನಣೆಬರಾವು. ನಾ ಕಳಕೋಬೇಕೂಂತ ಬರದಿದ್ರೆ ನೀಯೇನುತಾನೆ ಮಾಡೀಯ?" –ಗ್ವಾಡೆ ವರಗಿ ಕುಂತು ಇಂದಿನದೆಲ್ಲಾನೂ ಗೆಪ್ತಿ ಮಾಡ್ಕತ್ತ ಮಾಡ್ಕತ್ತ ವೊಂಟರು...

"ನ್ವಾಡ್ಲ ಲಕ್ಕ, ಇಂದ್ಕೆ ನನ್ನ ತಾವು ಏಳು ಎಮ್ಮೆ ಇದ್ದೂ. ಅವ್ನ ಇಂಗೇಯ ಒಂದು ಹೈದನ ಜ್ವತೆ ಮಾಡಿ ಮೇಯ್ಸಿಗಂಬಾ ಅಂತ ಕಾಡಿಗೆ ಕಳುಸಿದ್ದೆ. ಆ ಆಟಗುಳಿ ಹೈದ, ಉಳಿಕೆ ಹೈಕಳ ಜ್ವತೆ ಸೇರಿ ಗೋಲಿ, ಗಂಜೀಪು ಆಡ್ತ, ಎಮ್ಮೆಗಳ ಕಡೆ ನಿಗಾನೆ ಮಡಗ್ನಿಲ್ಲ. ಆ ಆಳುಗೇರಿ ಎಮ್ಮೆಗಳು ಮೇಯ್ತಾ ಮೇಯ್ತಾ ಹಾದಿ ತೆಪ್ಪೋಗಿ ನಟ್ಟಡವಿ ಸೇರ್ದೊ. ಅಲ್ಲಿ ಏಡು ಬೆದೆ ಉಲಿ, ಬೆದೆ ಆಡ್ತ ಬಂದಾಗ ನನ್ನೆಮ್ಮೆ ಅವ್ಕೆ ಆವುತಿ ಆದೊ...ಆ ಉಳಿಗಳು ಏಳೆಮ್ಮೆಗಳ ಮ್ಯಾಲೂ ಬಿದ್ದು ಸಾಲಾಗಿ ವೊಡುದು ಮನಗಿಸಿದ್ವಂತೆ. ಆದ್ರೆ ನನ್ನಮ್ಮೆಗಳಲ್ಲಿ ಒಂದೆಮ್ಮೆ ಬೋ ಸೂರ ಅದು ಸಾಯಕ್ಕೆ ಮುಂಚೆ ಒಂದು ಉಲಿ ವೊಟ್ಟೇಯ ತನ್ನ ಕೊಂಬ್ನಿಂದ ತಿವುದು ಅದ್ರ ಪಿರಾಣಾನು ತಕ್ಕಂಡಿತ್ತಂತೆ!... ಮಾರನೆ ಜಿನ ಸವುದೆ ತಕರಕ್ಕೆ ಕಾಡಿಗೋಗಿದ್ದ ನಮ್ಮೂರ ರೈತಾಪಿ ಕುಳ ಆ ದ್ರುಸ್ಯ ನ್ವಾಡಿ ಚೊಚಿಗಪಟ್ರಂತೆ! ಇಂದಿನ ನಾತ್ರೇನೆ ಮಳೆ ಬಿದ್ದಿತ್ತು. ಎಮ್ಮೆಗಳ ದಿಕ್ಕಾಪಾಲು ಅಟ್ಟಾಡಿ, ಆ ಕಕಾನ್ದ ವೋಟಗಲ್ಲೂ ಉಲಿ ಎಜ್ಜೆ ಎಮ್ಮೆ ಎಜ್ಜೆ ಒಂದಕೊಂದು ಬೆರಕಂಡಿದ್ವಂತೆ... ಒಂದೊಂದು ಎಮ್ಮೆ ಮಯ್ಯಿಂದ್ಲೂವೆ, ಉಲಿಗಳು ಈಟೀಟು

ಮಾಂಸವ ಕಿತ್ತಿದ್ವಂತೆ... ಆ ದ್ರುಸ್ಯ ನ್ವಾಡ್ತಿದ್ದಂಗೆ, ಇನ್ನೊಮದು ಉಲಿ ಸಮೀಪದಾಗಿ ಯೆಲ್ಲೋ ಅವುತಿರಬೇಕೂಂತ ಬಯಬಿದ್ದು, ಆ ಜಾಗದಿಂದ ಕಾಲುಕಿತ್ತರಂತೆ!... ಸತ್ತ ಉಲಿಯ ಎತ್ತಿನ ಗಾಡಿಗೆ ಆಕಂಬಂದು ಅದರ ಚರ್ಮ ಅಸೀಬೇಕೂಂತ ಅವ್ರಿಗೆ ಇಪರೀತ ಆಸೆ ಆಯ್ತಂತೆ. ಆದ್ರೆ. ಆಳುಗಳ ಕುಮ್ಮಕ್ಕು ಕಮ್ಮಿ, ಊರ್‍ನಿಂದ ಎಚ್ಚ ಆಳ ಕರಕಂಬಂಧು ಉಲಿ ಸಾಗಿಸಾದು ಅಂದುಕಂಡ್ರಂತೆ... ಈ ಸುದ್ಯ, ಆ ತಳಕೋಗಿದ್ದ ಅಂಚೀಕಡ್ಡಿ ಈರಪ್ಪ ಜೈನಿಗರ ಅನಂತಯ್ಯ ನೂವೆ ನಿನ್ನಂಗೆ ಹ್ಯಾಪ ಮ್ವಾರೆ ಅಕ್ಕಂಡೇ ತಂದಿದ್ದ. ಆ ನಾತ್ರೆ ಹಾಲಿಗೆ ಎಪ್ಪಾಕಿ, ಅಣತೆ ನಂದಸ್ತಿದ ವೊತ್ನಲ್ಲಿ ಬಂದು, ಕದ ತಟ್ಟಿ ತೆಗುಸಿ, ಯೋಳಿ ವೋದ್ರು...ಆಗ ನಾನೇನು ಎದುರಿ ಹೇತುಗಂಡು ಕಯ್ಯಿ ಕಾಲು ಸೋತು ಕುಂತನ್ಯಾ?... ನ್ವಾಡ್ಲ, ಆ ಎಮ್ಮೆಗಳ್ಗೆ ಆಯಿದು ಕರ ಇದ್ದೊ. ಅವ್ನೇಯ ಚೆಂದಾಗಿ ಸುಸ್ರೂಸೆ ಮಾಡ್ದೆ. ಬೆಳುಸಿ ದೊಡ್ಡೋವ ಮಾಡ್ದೆ– ಎಂಗೋ ರತ ನಡೀತು... ಈಗೇನ ಸೊರೋದ್ದು?... ಈಗ್ಲೂ ವೋಟೆಯ. ಅಯಿದು ಎಮ್ಮೆ ವೋದರೂವೆ ಅವು ಮೂರು ಕರ ಬುಟ್ಟೋಗವೆ. ಉಳುಕಂಡಿರೋ ಈ ಮೂರು ಕರುಗಳ್ನೇ ಇಂದ್ಕೆ ಆ ಕರುಗಳ ಸಾಕ್ದಂಗೇ ಸಾಕ್ತೀನಿ. ಬೆಳುಸಿ ದೊಡ್ಡೋವ ಮಾಡ್ತೀನಿ... ಇದ್ಕೆ, ನೀ ಯಾಕ್ಲ ಚಿಂತೆ ಮಾಡೀ?– ತಿನ್ನು, ತಿನ್ನೂಂತ

*　　　*　　　*　　　*

ರೊಟ್ಟಿ ತಿಂದು, ನೀರು ಕುಡದು, ಬಂಡಮ್ಮನ ಅಟ್ಟಿಯಿಂದ ವೊರ ಬೀದಿಗೆ ಬಂದ ಲಕ್ಕ, ಆ ಮಾತಾಯ ತನ್ನ ಮಯ್ಯಿ, ಮನಸು ಏಡರ ತುಂಬಾನು ತುಂಬುಕೊತ್ತ ಲಕ್ಕ ಎಜ್ಜೆ ಆಕ್ತಿದ್ದ. ಆ ಯೋಚ್ನೇಲಿ ವಂದಿಗೇ ನೆರಳಿನಂಗೆ ಉದ್ದಕೂ ಬತ್ತ ಇದ್ದ ಬೊಡ್ಡನ ಕಡೀಕೆ ಲಕ್ಕನ ಗ್ಯಾನ ಆರೀನೆ ಇಲ್ಲ.

ಬುಂಡಮ್ಮಾರ ಅಟ್ಟಿ ಬುಟ್ಟು ಇನ್ನೂ ರವೋಟು ದೂರಾನು ವೋಗಿಲ್ಲ. ಸಣ್ಣ ಸಣ್ಣಗೆ ಅನಿ ಇಡ್ತಿದ್ದ ಮಳೆ ಬತ್ತಾ ಬತ್ತಾ ಗಟ್ಟಿಸಕ್ಕೆ ಮುಟ್ಟುಕತ್ತು. ಇನ್ನೂ ಜಗಲಿ ಮ್ಯಾಲೆ ನಿಂತಿದ್ದ ಬುಂಡಮ್ಮಾರು,

"ಲೋ ಲಕ್ಕ... ಲಕ್ಕ ಲೋ, ಇಂದ್ಕೆ ಬಾರ್‍ಲ. ಮಳೆ ಗಟ್ಟಿಸ್ತಾ ಅದಲ್ಲೊ?... ನೆಂದೋಯ್ತಿಯೆ – ಇತ್ತಾಗೆ ಓಡ್ಬಾರ್‍ಲ–ಮಳೆ ನಿಲೊಗಂಟ ನಮ್ಮ ಅಟ್ಟೀಲಿ ಕುಂತಿದ್ದ ವೋಗೀವೆ," ಕೂಗ್ದಾಗ ಬೆಳ್ಳಿ ಲಿಂಗದ ಕಾಯಿ ಅವರ ಎದೆ ಮ್ಯಾಲೆ ಅಳ್ಳಾಡ್ತಿತ್ತು.

ಲಕ್ಕ ತಿರುಗಿ ನ್ವಾಡಿದೋನು,

"ನಮ್ಮ ಗುಡ್ಲಿಗೇ ವೋಂಟೋಯ್ತಿನಿ ಅಮ್ಮಾರೆ... ಅಮ್ಯಾಕೆ ಪುನಾ ಬತ್ತೀನಿ,"

ಕೂಗೇಳಿ, ತನ್ನ ಗುಡ್ಲು ಕಡೀಕೆ ದೌಡು ವೋಡ್ದ.

ಲಕ್ಕ ಗುಡ್ಲು ಸೇರೋ ವ್ಯಾಳ್ಯಕ್ಕೆ, ಅವ್ನು ನೆಂದು ಪಜ್ಯಾಗಿದ್ದ. ವೋಟತ್ತಿಗೆ ಅವನವ್ವನೂ ನೆನಕೊಂಬಂದು ಗುಡ್ಲ ವಳಗೆ ತನ್ನ ಸ್ಯಾಲೆ ಇಂಡಿ ನೀರು ಕಡುಸ್ತ ಇದ್ಲು. ಆಗ ಉಡುಗ ಲಕ್ಕ ಕೇಳಿದ್ದ.

"ಇದ್ಯಾವ ಮಳೆಯವ್ವ ಇದು– ಇದ್ದಕಿದ್ದಂಗೆ ಉಯ್ಯುಬುಡ್ತಲ್ಲ?"

"ಇದು ಉಯ್ಯೊ ಮಳಯೇಯ– ಗೌರಿ ತಿಂಗಳಲ್ವ– ಉಬ್ಬೆ ತುಳುದು ಉತ್ತರೆ ಬಂದದೆ! ಗೌರಮ್ಮ ಬತ್ತಾಳಲ್ಲ– ಅದಕೆ ಇದು ಉಯ್ದು ಧರೆ ತಣಿಸಿ ಗೌರಮ್ಮಗೆ ನಡೆಮಡಿ ಆಸ್ತಾ ಅದೆ," ಸ್ಯಾಲಿಂದ ನೀರು ಕಡುಸ್ತ ಕಡುಸ್ತಾನೆ ಕಲ್ಯಾಣಿ ಇವರಿಸಿದ್ಲು.

ಬೊಡ್ಡ ಇವರಿಬ್ರ ಜ್ವತ್ಗೆ ಮಯ್ಯಿ ನೀರ ಅತ್ತಾಗಿ ಇತ್ತಾಗಿ ವದುರ್ತ ನಿಂತಿತ್ತು.

ದ್ಯಾವಾಜಮ್ನೆ ನಾಕು ಆಡೂ ಇವ್ರ ಗುಡ್ಲ ವಳೀಕೆ ಮಳೆ ಎರಚಲು ತಡೀನಾರದೆ ಬಂದುವಕ್ಕಡೀಕೆ ನಿಂತಿದ್ದೊ. ಅಲ್ಲಿದ್ದೋರಲ್ಲಿ ನೆನೀದೇ ಇದ್ದೋಳು ಅಂದ್ರ ಲಕ್ಕನ ತಂಗಿ ಸವುನಿ...ಆ ಎಣ್ಣು ಯಾರದೋ ಅಟ್ಟಿಗೆ ಕೆಲ್ಸಕ್ಕೋಗಿದ್ದು, ಮಳೆ ಅನಿ ಇಡ್ತಿದ್ದಂಗೆಯೇ ಗುಡ್ಲಿಗೆ ವೋಡಿಬಂದಿತ್ತು. ಆಡು ಅವಳ ಅತ್ರಕ್ಕೆ ಚಿಗಿದಾಗ, ಆ ಎಣ್ಣು,

"ತೂ,– ಈ ಅಳಗೇರಿಯೋವು ಯಾಕೆ ಬಂದೊ ನಮ್ಮ ಗುಡ್ಲಿಗೆ. ಇವ್ರ ಸಿಂಡ ನಾ ತಡೀನಾರಿ" ಅಂತಿತ್ತು.

"ವೊ– ನಿನ್ನ ಸಾಸ್ಟ್ಯಾವ ನಾ ನೋಡನಾರಿ, ಸುಮ್ಕಿರೆ ಸಿವುನಿ... ನಮ್ಮತ್ರಯಿದ್ದ ಏಡು ಆಡ, ಇಂದ್ಕೆ ನೀನೇ ಅಟ್ಟಿಕಂಡು ವೋಯ್ತಿದ್ಯಲ್ಲ? ಆಗ ಅವ್ರ ಸಿಂಡು ನಿಂಗೆ ಸೆಡೀತಿತ್ತೇನೊ?" ಅಂದ್ಲು ಅವ್ವ...

## ೬

ಸಂಧ್ಯಾವಂದನೆ ಮುಗಿದ ಬಳಿಕ, ಬೆಳ್ಳಿಯ ಸಂಪುಟದಿಂದ ದೇವರುಗಳನ್ನು ಒಂದೊಂದಾಗಿ ಅಗಲವಾದ ಬೆಳ್ಳಿಯ ತಟ್ಟೆಗೆ ತೆಗೆದಿಟ್ಟು ಕೃಷ್ಣಶಾಸ್ತ್ರಿಗಳು ಮಂತ್ರ ಪಠಿಸುತ್ತ ರುಕ್ಮಿಣಿಯು ತಂದಿಟ್ಟ ಹಾಲಿನಲ್ಲಿ ಅಭಿಷೇಕ ಮಾಡಿದರು. ಅನಂತರ ಸ್ಫಟಿಕದ ಶಿವಲಿಂಗ, ಬೆಳ್ಳಿಯ ಸುಬ್ರಹ್ಮಣ್ಯೇಶ್ವರ, ಕಾಶಿಯಿಂದ ಅವರ ಅಜ್ಜ ಸೊಮಯಾಜಿಗಳು ತಂದಿದ ಅಮೃತಶಿಲೆಯ ಅನ್ನಪೂರ್ಣಾ ಮತ್ತು ನರಸಿಂಹ ಸಾಲಿಗ್ರಾಮ ಎಲ್ಲವನ್ನೂ ಮಟ್ಟ ಚೌಕುಳಿ ಮಡವಸ್ತ್ರದಿಂದ ಒಂದೊಂದಾಗಿ ಒರಿಸಿ, ಮತ್ತೆ ಸಂಪುಟದೊಳಗೆ ಇಟ್ಟರು.

ದೇವರ ಕೋಣೆಯ ಹೊರಗೆ ಹೊಸ್ತಿಲಿನಾಚೆ ಕುಳಿತು ಶ್ರೀಗಂಧ ತೇಯುತ್ತ ರುಕ್ಮಿಣಿ ಯೋಚನಾಮಗ್ನಳಾಗಿದ್ದಳು... ಈಚೀಚೆಗೆ ಏಕೆ ಮಾವಯ್ಯ ತನಗೆ ಮುಖ ಕೊಟ್ಟು ಮಾತನಾಡುವುದಿಲ್ಲ?... ತಾನೇನು ತಪ್ಪು ಮಾಡಿರಬಹುದು?... ತನ್ನ ಮೇಲೆ ಅವರಿಗೆ ಕೋಪವೆ?– ಛೆ.ಛೆ, ಇರಲಾರದು, ತನ್ನನ್ನು ಸ್ವಂತ ಮಗಳಿಗಿಂತಲೂ ಅತಿಶಯವಾದ ಮಮತೆಯಿಂದ ನೋಡಿಕೊಂಡಿದ್ದಾರೆ!... ಹೀಗಿದ್ದೂ ಅವರ ಅಸ್ವಾಭಾವಿಕ ವರ್ತನೆಗೆ ಕಾರಣ ಏನಿರಬಹುದು?... ಶ್ರೀಗಂಧ ತೇಯುತ್ತ ತೇಯುತ್ತ ಅವರನ್ನೆ ಹೊಸದಾಗಿ ನೋಡುವವಳಂತೆ ಮತ್ತೆ ಮತ್ತೆ ನೋಡಿದಳು. ಕೆಂಪು ಮಕುಟವಿಟ್ಟು, ಕೊರಳಿಗ ಚಿನ್ನದ ತಂತಿಯಿಂದ ಬಿಗಿದ ಸಣ್ಣ ರುದ್ರಾಕ್ಷಿಗಳ ಸರ ಹಾಕಿ, ಮೈ ಕೈಗಳಿಗೆ ವಿಭೂತಿ ಧರಿಸಿ, ಹಣೆಗೆ ತ್ರಪುಂಡ್ರ ಆಕ್ಷತೆಗಳನ್ನಿಟ್ಟು ಮಾವಯ್ಯ ನೋಡುವವರ ಕಣ್ಣು ತುಂಬುವಂತೆ ಕುಳಿತಿದ್ದರು. ಅವರನ್ನು ನೋಡುತ್ತಿದ್ದಂತೆ ಎಂತಹ ದೊಡ್ಡ ಮನುಷ್ಯ! ಎಂತಹ ಉದಾರ ಮನಸ್ಸು ಇವರದು! ಎಂದು ಅವಳ ಒಳಮನಸ್ಸು ನುಡಿಯಿತು... ರುಕ್ಮಿಣಿಯ ಅಲೋಚನೆ ಹೀಗೆ ಹರಿದಾಗ, ಅವಳ ಮನಸ್ಸಿನೊಳಗೂ ಏನೋ ತೇದಂತಾಗಿ, ಅವಳ ಹಿಂದಿನ ಬದುಕನ್ನು ಬಿಚ್ಚುತ್ತ ಹೋಯಿತು.

ಶಾಸ್ತ್ರಿಗಳ ಮಗನೊಡನೆ ಜರುಗಿದ ತನ್ನ ವಿವಾಹವು ತನ್ನ ನೆನಪಿನಂಗಳದಲ್ಲಿ ಸುಳಿಯಿತು. ಅಗ್ರಹಾರ, ಮಲ್ಲರಾಜಪಟ್ಟಣ, ಕೊಣನೂರು, ಕಟ್ಟೇಪುರ, ರಾಮನಾಥಪುರ, ಕೆರಲಾಪುರ, ಕೌಶಿಕ, ಅಂಬಿಗ, ಮೊಸಳೆ ಮುಂತಾದ ಊರುಗಳನ್ನೆಲ್ಲ ಸುತ್ತಿ ಯಾವ ವಧುವನ್ನೂ ಒಪ್ಪದೆ, ಅಂತಿಮವಾಗಿ ರುದ್ರಪಟ್ಟಣಕ್ಕೆ ಬಂದು, ಮಾವಯ್ಯ ಮತ್ತು ಅವರ ಮಗ ಇಬ್ಬರೂ ತಾವೇ ಸರಿ ಎಂದು ಒಪ್ಪಿದ್ದರು... ಮಾವಯ್ಯ ಒಪ್ಪಿದ್ದರಿಂದ ಅವರ ಮಗ ಒಪ್ಪಿದರೊ, ಇಲ್ಲ ಅವರ ಮಗ ಒಪ್ಪಿದ್ದರಿಂದ ಮಾವಯ್ಯ ಒಪ್ಪಿದರೊ ನನಗೆ ತಿಳಿಯದು. ಆದರೆ ತಂದೆಯ ಮಾತನ್ನು ಎಂದಿಗೂ ಮೀರದ, ತಂದೆಯ ಮಾತನ್ನು ತನಗೆಷ್ಟು ಅಹಿತವಾದರೂ ನಡೆಸಿಕೊಡುವ ವ್ಯಕ್ತಿ ಅವರ ಮಗ ಎನ್ನುವ ವಿಷಯ ಮುಂದಿನ ದಿನಗಳಲ್ಲಿ ಅನೇಕ ಸಂದರ್ಭಗಳಲ್ಲಿ ತನ್ನ ಗಮನಕ್ಕೆ ಬಂದಿತ್ತು. ಉದಾಹರಣೆಗೆ ತನ್ನ ವಿವಾಹಮಹೋತ್ಸವವನ್ನೇ ತೆಗೆದುಕೊಳ್ಳಬಹುದು. ಮಗನಿಗೆ ಕಂದಾಚಾರಗಳಲ್ಲಿ ನಂಬಿಕೆಯಿಲ್ಲ. ಅತಿಯಾದ ಶಾಸ್ತ್ರಗಳ ಪರಿಪಾಟವನ್ನು ತಪ್ಪಿಸಿ, ಎಷ್ಟು ಅಗತ್ಯವೊ ಅಷ್ಟು ಶಾಸ್ತ್ರಗಳನ್ನು ಮಾತ್ರ ಉಳಿಸಿ, ತಮ್ಮಿಬ್ಬರ ವಿವಾಹ ಜರುಗಲಿ ಎಂದು ಮಗನ ಅಭಿಲಾಷೆ. ಶಾಸ್ತ್ರಗಳಿಗೆ ಕೊಂಚವೂ ಲೋಪ ಬರಬಾರದು ಎಂಬುದು ಮಾವಯ್ಯನ ಹಟ. ಕೊನೆಯಲ್ಲಿ ಮಾವಯ್ಯನ ಇಚ್ಛೆಯೇ ನೆರವೇರಿ ಮದುವೆ

ಆರು ದಿನಗಳ ಪರ್ಯಂತ ವೈಭವಯುತವಾಗಿ ನಡೆಯಿತು...

ವಿವಾಹವೇನೋ ಜರುಗಿತು. ತನಗಾಗಲೆ ಹದಿನೈದು ವರ್ಷಗಳಾಗಿದ್ದರೂ ಮೈ ನೆರೆದಿರಲಿಲ್ಲ. ತನ್ನ ತಂದೆ ತಾಯಿ ತನ್ನ ಬಾಲ್ಯದಲ್ಲೆ ಅಂದರೆ ತನಗೆ ಸುಮಾರು ಒಂಬತ್ತು ವರ್ಷವಾಗಿದ್ದಾಗಲೇ ಇಬ್ಬರೂ ಆರು ತಿಂಗಳ ಅಂತರದಲ್ಲಿ –ಮೊದಲು ತೆಂಗಿನ ಮರದಿಂದ ಬಿದ್ದು ತನ್ನ ತಂದೆ, ಅದೇ ಕೊರಗಿನಲ್ಲಿ ಹಸಿಗೆ ಹಿಡಿದು ಅಲ್ಲಿಂದ ಆರೇ ತಿಂಗಳೊಳಗೆ ಉಸಿರೆಳೆದಿದ್ದ ತಾಯಿ –ತನ್ನನ್ನು ತಬ್ಬಲಿ ಮಾಡಿ ಹೋಗಿದ್ದರು. ಅಲ್ಲಿಂದ ಮುಂದೆ ತನ್ನ ಅತ್ತಿಗೆಯ ಕೃಪಾಶ್ರಯದಲ್ಲಿ ಬೆಳೆಯಬೇಕಾಗಿ ಬಂದ ಕಾರಣ. ತಾನು ಮುಂದೆ ಮೂರು ವರುಷ ಋತುವಾಗಲೇ ಇಲ್ಲ! ಆದ್ದರಿಂದ ಋತುವಾಗುವವರೆಗೂ ತಾನು ರುದ್ರಪಟ್ಟಣದಲ್ಲೇ ಉಳಿಯಬೇಕಾಯಿತು... ಏತನ್ಮಧ್ಯೆ, ತನ್ನ ಅತ್ತೆಯವರು ಮಗನಿಗೆ ಬೇರೊಂದು ಲಗ್ನ ಮಾಡಲು ಆಲೋಚಿಸುತ್ತಿರುವರೆಂಬ ಸುದ್ದಿಯೂ ರುದ್ರಪಟ್ಟಣವನ್ನು ಮುಟ್ಟಿತ್ತು! ಆದರೆ ತನ್ನ ಪತಿ ಹಟ ಹಿಡಿದು, "ಇನ್ನೂ ಒಂದೆರಡು ವರ್ಷ ಕಾದು ನೋಡೋಣ. ಎಷ್ಟೋ ಹೆಣ್ಣುಗಳು ಹದಿನೇಳು ಹದಿನೆಂಟು ವರ್ಷದಲ್ಲಿ ಋತುವಾಗಿರುವರೆಂದು ಕೇಳಿಲ್ಲವೆ?... "ಎಂದು ಅತ್ತೆ ನಿರ್ಧಾರವನ್ನು ಮುಂಡೋಡಿದ್ದರಂತೆ! ಅವರ ಮಾತನ್ನು ನಿಜಮಾಡುವಂತೆ, ತಾನು ಹದಿನೆಂಟನೆ ವರ್ಷಕ್ಕೆ ಮೈನೆರೆದು ಗಂಡನ ಮನೆ ಸೇರಿದ್ದಳು!... ಅಷ್ಟರಲ್ಲಿ ತನ್ನ ಅತ್ತೆಯವರು ಸ್ವರ್ಗಸ್ಥರಾಗಿದ್ದರು...

ಇಷ್ಟಾದರೂ ತನ್ನ ಮನಸ್ಸಿಗೆ ಸ್ವಲ್ಪವೂ ಕರೆಕರೆಯಾಗದಂತೆ ತನ್ನ ಪತಿ ಹಾಗೂ ತನ್ನ ಮಾವನವರು ನಡೆದುಕೊಂಡಿದ್ದರು. ತನ್ನವರಂತೂ" ನಮ್ಮ ತಾಯಿಯ ಹಟದಿಂದ ನಿನ್ನನ್ನ ಇಷ್ಟು ದಿನ ಅಲ್ಲೇ ಬಿಡಬೇಕಾಯಿತು..." ಎಂದು ತಪ್ಪೊಪ್ಪಿಕೊಳ್ಳುವವರಂತೆ ರಮಿಸಿ ಹೇಳಿದ್ದರು. ತಮ್ಮ ತಾಯಿಯ ಹಟದ ಸ್ವಭಾವಕ್ಕೆ ನಿದರ್ಶನವಾಗಿ ಮನೆಯಲ್ಲಿ ಹಿಂದೆ ನಡೆದ ಒಂದು ಸಂಗತಿಯನ್ನೂ 'ಅವರು' ತನಗೆ ನಗುತ್ತ ವಿವರಿಸಿದ್ದರು:

ಒಮ್ಮೆ ತೋಟದ ಬೇಲಿಗೆ ಕಾಡಿನಿಂದ ಮುಳ್ಳು ತಂದು ಹೊದ್ದಿಸುವ ಆಳುಗಳಿಗೆ ಹಿಟ್ಟು ಬೇಯಿಸು, ಎಂದು ಮಾವಯ್ಯ ಹೇಳಿದರಂತೆ, ಆಳುಕಾಳಿಗಲ್ಲ ಹಿಟ್ಟು ಬೇಯಿಸೊಕಲ್ಲ ನೀವು ನನ್ನನ್ನ ಲಗ್ನ ಆದದ್ದು– ಎಂದು ಅತ್ತೆಯವರು ವಿರೋಧ. ಮಾತಿಗೆ ಮಾತು ಮಾತು ಮಥಿಸಿ, ಇವಳನ್ನ ಕರೆದುಕೊಂಡು ಹೋಗಿ ಇವಳ ಅಪ್ಪನ ಮನೆಗೆ ಬಿಟ್ಟು ಬಾ– ಎಂದು ಮಾವಯ್ಯ ತಮ್ಮ ಮಗನಿಗೆ ಆಜ್ಞೆ ಮಾಡಿದರಂತೆ. ಅಪ್ಪನ ಆಜ್ಞೆಯನ್ನು ಮೀರಲಾರದೆ, ಅಮ್ಮನನ್ನು

ನಾನೇ ತೌರಿಗೆ ಬಿಟ್ಟು ಬಂದೆ, ಎಂದಿದ್ದರು. 'ಆಧುನಿಕ ಪರಶುರಾಮ' ಎಂದು ತಾನು ಅವರನ್ನು ಲೇವಡಿ ಮಾಡಿದ್ದ ನೆನಪು!... ಅನಂತರ ಏನಾಯಿತು? ಎಂದು ಕೇಳಿದ್ದೆ. 'ಅಯ್ಯೋ, ನಾಲ್ಕು ದಿನವೂ ಸಹ ಕಳೆಯಲಿಲ್ಲ. ಹೋಗಿ ಕರೆದುಕೊಂಡು ಬಾ' ಎಂಬ ಇನ್ನೊಂದು ಆಜ್ಞೆ ಹೊರಬಿತ್ತು!– ಅಪ್ಪ ಮೇಲೆ ಮೇಲೆ ಹಟಮಾರಿ ಎನ್ನುವ ಹಾಗೆ ತೋರಿದರೂ ಒಳಗೆ ತೀರಾ ಮೃದು. ಇನ್ನೊಬ್ಬರಿಗೆ ನೋವಾದರೆ ಮರುಗಿ, ಕರಗುವ ಸ್ವಭಾವ!'...

"ಗಂಧ–"

ಶಾಸ್ತ್ರಿಗಳು ಕೇಳಿದೊಡನೆಯೇ ಬೆಚ್ಚಿ ಶ್ರೀಗಂಧವನ್ನು ಗಂಧದ ಕೊರಡಿಗೆ ಮೆತ್ತಿ,

"ತಗೋಳ್ಳಿ ಮಾವಯ್ಯ. ನೀವು ದೇವರುಗಳಿಗೆ ಗಂದ, ಕುಂಕುಮ ಇಟ್ಟು, ಹೂವುಗಳನ್ನು ಸಂಪುಟದ ದೇವರುಗಳಿಗೆ, ಪಟದ ದೇವರುಗಳಿಗೆ ಭರಿಸೋದರೊಳಗೆ ದೇವರ ನೈವೇದ್ಯಕ್ಕೆ ಸಜ್ಜಿಗೆ ಮಾಡಿ ತಂದುಬಿಡ್ತೀನಿ" ಎಂದು, ಗಂಧದ ಕೊರಡನ್ನು ಅವರ ಕೈಗಿತ್ತು ಎದ್ದಳು.

ಅಡಿಗೆಕೋಣೆಗೆ ಹೋಗುವಾಗ ಮಾತ್ರವಲ್ಲದೆ, ಅಲ್ಲಿ ರಸಬಾಳೆಹಣ್ಣುಗಳನ್ನು ಸುಲಿದು, ಅವನ್ನು ಕಿವುಚಿ, ಒಲೆಯ ಮೇಲೆ ಬೇಯುವ ರವೆ, ಸಕ್ಕರೆ, ಹಾಲು, ಕುಂಕಮದೇಸರಿ, ಏಲಕ್ಕಿ ಪುಡಿಗಳ ಮಿಶ್ರಣಕ್ಕೆ ಅವನ್ನು ಹಾಕುತ್ತಿರವಾಗಲೂ ತನ್ನ ಮದುವೆ ಮತ್ತು ಅದರ ತರುವಾಯದ ದಿನಗಳ ನೆನಪು ಮತ್ತೆ ಮತ್ತೆ ಮಾಡಿತು. ಇಷ್ಟು ಕಾಲವೂ ಆ ನೆನಪು ತನ್ನ ಬಳಿ ಸುಳಿಯುತ್ತಿರಲಿಲ್ಲವೆಂದೇನಲ್ಲ. ಆದರೆ ಇಂದು ಏಕೊ ಅದು ಅತಿ ಪ್ರಖರವಾಗಿ ತಾಂಡವವಾಡಿತು...ಮದುವೆ ಮಂಟಪದಲ್ಲಿ ಅಲಂಕಾರ ಮಾಡಿ ನಿಂತಾಗ– ಗಂಡು, ಹೆಣ್ಣು ಎಂದರೆ ಹೀಗಿರಬೇಕು; ಇದು ಅಪರೂಪದ ಜೋಡಿ; ಈ ರೀತಿಯ ವರಸಾಮ್ಯ ಲಕ್ಷಕ್ಕ ಒಂದು; ಆ ಭಗವಂತನೇ ಇವರಿಬ್ಬರನ್ನೂ ಒಂದುಮಾಡಿ, ಕಣ್ಣುತುಂಬ ನೋಡಿ, ಸಂತೋಷಿಸುತ್ತಿರಬೇಕು!– ಇವೇ ಮಾತುಗಳು, ದೀಪಾವಳಿಯ ಹೂಬಾಣಗಳಂತೆ ನೆರೆದವರೆಲ್ಲರ ಬಾಯಿಗಳಿಂದ ಉದುರಿ ತಮ್ಮಿಬ್ಬರನ್ನೂ ಪುಳಕಗೊಳಿಸಿದ್ದವು...

ಸಜ್ಜಿಗೆ ತಳದಲ್ಲಿ ಸೀದ ವಾಸನೆ ಬಂದು, ಪಾತ್ರೆಯನ್ನು ಸೀರೆಯ ಸೆರಗಿನಲ್ಲೆ ಹಿಡಿದು, ಒಲೆಯಿಂದ ಕೆಳಗೆ ಇಳುಕಿಟ್ಟಳು. ಮನಸ್ಸು ಹಟಾತ್ತನೆ ಬೇರೆ ದಿಕ್ಕಿಗೆ ತಿರುಗಿತು. ಸುಮಾರು ಹಿಂದಿನ ಮಾತು. ಹೀಗೆಯೇ ತಾನು ವೈವೇದ್ಯಕ್ಕೆ ಸಜ್ಜಿಗೆ ಮಾಡಲು ಎಲ್ಲ ಸಿದ್ಧತೆ ಮಾಡಿ, ಪಾತ್ರೆಯನ್ನು ಒಲೆಯ ಮೇಲೆ ಇಡುತ್ತಿರುವಂತೆ ಎರಡು ತೊಡೆಗಳ ನಡುವೆ ತಣ್ಣಗಾದಂತ ಆಗಿ 'ಅಯ್ಯೋ ದೇವರೇ!– ಈ

ಹೊತ್ತಿನಲ್ಲಿ!!' ಎಂದು ಕೈ ಕೈ ಹಿಸುಕುತ್ತ ದೇವರ ಕೋಣೆಯ ಮುಂದೆ ಬಂದು ನಿಂತಿದ್ದಳು. 'ಇದ್ಯಾಕೆ ದೇವರ ನೈದೇದ್ಯ ತರದೆ ಬರಿಗೈಲಿ ಬಂದೆ? ಎಂದು ಕೇಳಿದ್ದರು ಮಾವಯ್ಯ. ಹೇಗೆ ಹೇಳುವುದೊ ತಿಳಿಯದೆ, ಸ್ವಲ್ಪಸಮಯ ಉಂಗುಷ್ಟದಿಂದ ನೆಲವನ್ನು ಕೆರೆಯುತ್ತ ನಿಂತಿದ್ದು, 'ಇವೊತ್ತು ನಾನು ಸಜ್ಜಿಗೆ ಮಾಡೊ ಹಾಗಿಲ್ಲ' ಎಂದಿದ್ದಳು. ಅವರಿಗೆ ತನ್ನ ಮಾತಿನ ಪೂರ್ಣಾರ್ಥ ಹೊಳೆಯಲು ಸ್ವಲ್ಪ ಸಮಯವೇ ಹಿಡಿಯಿತು. ಏನೊ ಯೋಚಿಸುತ್ತಿದ್ದವರು ಫಕ್ಕನೆ ಹೊಳೆದಂತೆ ತಲೆ ಕುಣಿಸಿ 'ಬಾಧಕವಿಲ್ಲ. ನೀನು ಹೊರಗಿರು. ನಾನೇ ಸಜ್ಜಿಗೆ ಸಿದ್ಧಪಡಿಸುತ್ತೇನೆ" ಎಂದು ತಾವೇ ಅಡಿಗೆಕೋಣೆಗೆ ತೆರಳಿ ಸಜ್ಜಿಗೆ ಮಾಡಿ ತಂದು, ಆ ದಿನ ನೈವೇದ್ಯ ಮಾಡಿ ತಂದಿದ್ದರು. ಬಳಿಕೆ ವೆಂಕಣ್ಣ ಜೋಯಿಸರ ಹಿರಿಯ ಮಗಳು ನಾಗಲಕ್ಷ್ಮಿ ಬಂದು ನೀರೆರೆದು ತನ್ನು ಮುಟ್ಟು ಕಳೆಯುವವರೆಗೂ ಅವರೇ ನೈವೇದ್ಯ ಹಾಗೂ ಅಡಿಗೆ ತಯಾರಿ ಮಾಡಿ ಮುಗಿಸಿದ್ದರು. ನಾನು ಹೀಗೆ ಹೊರಗೆ ಕುಳಿತಾಗಲೆಲ್ಲ, ಸುಶೀಲತ್ತೆ ಹುಶಾರಾಗುವವರೆಗೂ ಅಡಿಗೆಕೋಣೆಯ ಪಾರುಪತ್ಯವನ್ನೆಲ್ಲ ಅವರೇ ವಹಿಸಿಕೊಳ್ಳುವುದು ರೂಢೀಯಾಗಿತ್ತು...

ಸದ್ಯ ಈ ದಿನ ಹಾಗಾಗಲಿಲ್ಲವಲ್ಲ ಎಂದು ನಕ್ಕು, ಸಜ್ಜಿಗೆಯನ್ನು ಬೇರೆ ಪಾತ್ರೆಗೆ ರವಾನಿಸಿ, ಅದನ್ನೆತ್ತಿ ತರುತ್ತಿದ್ದಂತೆ, ಅಂಗಳದಲ್ಲಿ ಆಟವಾಡುತ್ತಿದ್ದ ಸರಸಿ 'ನಂಗೆ– ಸಜ್ಜಿ...ಗೆ' ಎಂದು ದುಂಬಾಲುಬಿದ್ದಳು. ದೇವರ ನೈವೇದ್ಯ ಆಗಲಮ್ಮ, ಆಮೇಲೆ ಕೋಡ್ತೀವಿ– ಎಂದು ಪರಿಪರಿಯಲ್ಲಿ ರಮಿಸಿದರೂ ಒಪ್ಪದೆ ಚಂಡಿ ಮಾಡಲು ಆರಂಭಿಸಿದಳು. 'ಸುಮ್ಮನೆ ಇರ್ತೀಯೊ, ಇಲ್ಲವೊ'– ಎಂದು ಗದರಿ, ಅವಳನ್ನು ಒಂದು ಕೈಯಲ್ಲಿ ನೂಕಿದ್ದಳು. ಸರಸಿ ಅಯ ತಪ್ಪಿ ಕೆಳಗೆ ಬಿದ್ದು ಅಳುವುದಕ್ಕೆ ಆರಂಭಿಸಿದಳು. ಆದಿ ಶಂಕರರ ಅನ್ನಪೂರ್ಣಾಸ್ತೊತ್ರವನ್ನು ಮೈ ಮರೆತು ಹೇಳಿಕೊಳುತ್ತಿದ್ದ ಮಾವನವರು ಸರಸಿಯ ಓಲಗವನ್ನು ಕೇಳಿ, ತಮ್ಮ ಸ್ತೋತ್ರವನ್ನು ಅರ್ಧಕ್ಕೆ ನಿಲ್ಲಿಸಿ, ಎದ್ದು ಬಂದರು. ಸರಸಿಯನ್ನೆ ದಯಾರ್ದ್ರವಾಗಿ ಒಮ್ಮೆ ನೋಡಿ, 'ತಾಯಿಯಲ್ಲದ ಕೂಸು...'ಎಂದಷ್ಟೆ ನುಡಿದರು. ತಕ್ಷಣ ನೈವೇದ್ಯದ ಬಟ್ಟಲನ್ನು ಅವಳ ಕೈಗಿಟ್ಟು, ಅವಳನ್ನೆತ್ತಿ ರಮಿಸಿದೆ. ಸರಿಸ ಅಳು ನಿಲ್ಲಿಸಲೇ ಇಲ್ಲ!... ಸಜ್ಜಿಗೆ, ಸಜ್ಜಿಗೆ ಎಂದು ಮಾವನವರು ಹಿಡಿದ ಬಟ್ಟಲ್ಲೆ ದೃಷ್ಟಿಯಿಟ್ಟು ರಾಗ ತೆಗೆದಿದ್ದಳು. ಮಾವನವರು ಒಂದು ಸಲ ಅಳುವ ಸರಿಸಿಯನ್ನು ನೋಡಿದರು. ಇನ್ನೊಮ್ಮೆ ಅವಳಿಂದ ದೃಷ್ಟಿ ಕಿತ್ತು ದೇವರುಗಳನ್ನು ನೋಡಿದರು. ಅವರಿಗೇನೆನ್ನಿಸಿತೊ, ಬಟ್ಟಲನ್ನು ದೇವರಿಗೆ ತೋರಿಸಿ, ಅದನ್ನು ಸರಸಿಯ

ಕೈಯಲ್ಲಿಟ್ಟು 'ಅಳಬೇಡ ಕಂದಾ. ತಿನ್ನು' ಎಂದರು. ಅದನ್ನು ಕಂಡು ತಾನು ಅವಾಕ್ಕಾಗಿದ್ದಳು...

"ಇದೇನು ಕಿಟ್ಟಣ್ಣ, ದೇವರಿಗೆ ಅಪಚಾರವಾಗಲಿಲ್ಲವೆ?" ಎಂದು ನಡುಮನೆಯಲ್ಲಿ ಮಲಗಿದಂತೆಯೇ ಸುಶೀಲಮ್ಮ ಕೂಗಿದಳು.

ಆಗ ಅಳು ನಿಲ್ಲಿಸಿ ಬೆರಳಿನಲ್ಲಿ ಸಜ್ಜಿಗೆಯನ್ನು ಬಟ್ಟಲಿನಿಂದ ತೋಡಿ ತೋಡಿ ಆನಂದದಿಂದ ತಿನ್ನುತ್ತಿದ್ದ ಸರಿಸಯನ್ನೆ ನಿರುಕಿಸುತ್ತ.

"ಯಾವುದು ಅಪಚಾರ?– ಹಸಿದಿರೊ ಕಂದನಿಗೆ ಕೊಡದೆ, ಸಜ್ಜಿಗೇನ ದೇವರ ಮುಂದಿಟ್ಟಿದ್ದರೆ ಅದು ದೇವರಿಗೆ ಪ್ರಿಯಾಗುತ್ತಿತ್ತೆ?" ಎಂದಷ್ಟೇ ಹೇಳಿ, ಮಾನವನವರು ಪುನಃ ದೇವರ ಕೋಣೆಯನ್ನು ಪ್ರವೇಶಿಸಿ ಅನ್ನಪೂರ್ಣಾಸ್ತುತಿಯನ್ನು ಮುಂದಿವರಿಸಿದ್ದರು!...

ರುಕ್ಮಿಣಿಯ ಮನಸ್ಸಿನೊಳಗೆ ಅವಳ ಮದುವೆಯ ಸಂದರ್ಭವೆ ತುಂಬಿದಂತಿತ್ತು. ಸರಸಿ, ಸಜ್ಜಿಗೆಯನ್ನು ಚಪ್ಪರಿಸಿ ತಿನ್ನುತ್ತ, ಕಣ್ಣು ಮಿಟುಕಿಸಿ ಆಸೆ ಮೊಸ ಮಾಡುವಂತೆ ಬೆರಳು ಮಡಿಸಿ, ಸನ್ನೆಮಾಡುತ್ತಿದ್ದಳು. ತುಂಟಿ ಎಂದು ಪ್ರೀತಿಯಿಂದ ಅವಳ ಕೆನ್ನೆಯನ್ನು ಹಿಂಡಿ, ರುಕ್ಮಿಣಿ ಅಡಿಗೆ ಕೋಣೆಗೆ ನಡೆದಳು.

ಅಲ್ಲಿ ಮಧ್ಯಾಹ್ನದ ಅಡಿಗೆಗೆಂದು ಮದರಂಗದ ಬಾಳೆಕಾಯಿಗಳನ್ನು ಈಳಿಗೆಮಣೆಯಲ್ಲಿ ಹೋಳುಹೋಳಾಗಿ ಕತ್ತರಿಸಲು ಪ್ರಾರಂಭಿಸಿದಳು. ಸರಸಿ ಸಜ್ಜಿಗೆ ತಿಂದು ಮುಗಿಸಿ, ಬಾಯಿ ಕೆನ್ನೆ ಗಲ್ಲಗಳಿಗೆಲ್ಲ ಆ ತಿನಿಸನ್ನು ಮೆತ್ತಿಸಿಕೊಂಡು ಒಳಗೆ ಬಂದಳು. ರುಕ್ಮಿಣಿ 'ಏನು ಅವಸ್ಥೆಯೆ ನಿನ್ನದು! ಎದು ನಕ್ಕು, ಅವಳ ಮುಖ ಕೈಗಳನ್ನೆಲ್ಲ ನೀರಿನಿಂದ ತೊಳೆದು ತನ್ನ ಸೆರಗಿನಲ್ಲಿ ಒರೆಸಿದಳು. ಅವಳನ್ನು ಮುದ್ದಿಸಿ, ಒಂದು ಬೆಳ್ಳಿಯ ಮಿಳ್ಳೆಯಲ್ಲಿ ಕಾಸಿದ ಹಾಲು ಕುಡಿಸಿ, 'ಈಗ ನೀನು ನಾಗಲಕ್ಷ್ಮಿಯ ಮನೆಗೆ ಹೋಗಬಹುದು. ಆದರೆ ಅಲ್ಲಿ ವಾಸಂತಿ, ಶಾಂತಿಯರ ಜೊತೆ ಆಡ್ತಾ ಕೂತು ಮಧ್ಯಾಹ್ನದ ಊಟಕ್ಕೆ ಬರದೇ ಹೋದರೆ ಏಟು' ಎಂದು ಮೆತ್ತಗೆ ಕೆನ್ನೆಯನ್ನು ಚಿವುಟಿದ್ದಳು.

ಪುನಃ ರುಕ್ಮಿಣಿಯು ಕಾಯಿಪಲ್ಲೆ ಹೆಚ್ಚುವ ಕ್ರಿಯೆಯಲ್ಲಿ ತೊಡಗಿದಳು. ಮತ್ತೆ ಮನಸ್ಸು ಹಿಂದಿನ ನೆನಪಿನಲ್ಲಿ ಮುಳುಗಿತು...

*                    *                    *                    *

ಸಂಸ್ಕೃತ ಪಂಡಿತರಾದ ತನ್ನ ಯಜಮಾನರು ಬಲು ರಸಿಕರು. ಶೃಂಗಾರದ ಮಾತುಗಳನ್ನು ಪೋಲಿ ಎನ್ನಿಸುವಷ್ಟು ಸಲೀಸಾಗಿ ಹೇಳಿಬಿಡುತ್ತಿದ್ದರು. ತನ್ನ ಅನುಭವದಲ್ಲಿ ಸಂಸ್ಕೃತ ಪಂಡಿತರೆಲ್ಲ ಇವರಂತೆಯೇ ರಸಿಕಾಗ್ರಣಿಗಳು. ಆದರೂ

ಮೊದಲ ರಾತ್ರಿ ಅವರು ಎಷ್ಟೇ ಸರಸಸಲ್ಲಾಪಗಳಿಂದ ಮೃದುವಾಗಿ ಮುದ್ದಿಸಿ ಪ್ರಯತ್ನಪಟ್ಟರೂ ತಾನು ಮಾತ್ರ ಮುದುಡಿಕೊಂಡೇ ಇದ್ದದ್ದು! –ಅವರೂ ಸೋತು ಕೊನೆಗೆ ಮೈನೀಡಿ ನಿದ್ದೆಹೋದರು... ಮಗುವಿನಂತೆ ಮಲಗಿದ್ದ ಅವರನ್ನು ದಿಟ್ಟಿಸುತ್ತಿದ್ದಂತೆ, ತನ್ನನ್ನ ಬಲಾತ್ಕರಿಸದ ಅವರ ಸಂಸ್ಕೃತಿ ತನ್ನ ಮನವನ್ನು ಸೆಳೆಯಿತು. ಇಲ್ಲಿಯ ತನಕ ತನ್ನನ್ನು ಆವರಿಸಿದ್ದ ಭಯ, ನಾಚಿಕೆಗಳು ಕರಗುತ್ತಾ ಬಂದು, ಅವರ ಬಗ್ಗೆ ಅನುಕಂಪ ಮೂಡಿತು. ತನಗೆ ಅರಿವಿಲ್ಲದೆಯೇ ಅವರ ತಲೆಗೂದಲ್ಲನು ನೇವರಿಸಿದಳು. ಅಷ್ಟು ಧೈರ್ಯ ಮಾಡಿದ್ದು ಸಿಡಿಲು ಮಲ್ಲಿಕಾರ್ಜುನ ಬೆಟ್ಟವನ್ನೇರಿದಷ್ಟು, ದಣಿವಾಗಿ ಬೆವತು ಹೋದಳು. ಆದರೂ ಅವರು ಎಚ್ಚರಗೊಳ್ಳಲಿಲ್ಲ. ಇನ್ನು ಮುಂದೆ ಸಾಹಸಕ್ಕಿಳಿಯದೆ ಮೌನವಾಗಿ ಮಲಗಿದಳು. ಏನೊ ತಪ್ಪು ಮಾಡಿದವಳಂತೆ ನರಳುತ್ತ ಹೊರಳಾಡಿದಳು. ಮೊದಲ ಕೋಳಿ ಹೊಲಗೇರಿಯಲ್ಲಿ ಕೂಗಿದಾಗ ಅವರಿಗೆ ಎಚ್ಚರವಾಯಿತು. ಎಚ್ಚರಾದೊಡನೆಯೆ ತನ್ನ ಹೊರಳಾಟದಿಂದ ತನಗಿನ್ನೂ ನಿದ್ದೆ ಬಂದಿಲ್ಲವೆಂದು ಗುರುತಿಸಿ ತನ್ನನ್ನು ಮೆಲ್ಲನೆ ತಬ್ಬಿ ಗಲ್ಲ ಹಿಡಿದು ತಿರುಗಿಸಿ, 'ಇನ್ನೂ ನಿದ್ರೆ ಬರಲಿಲ್ಲವೆ?' ಎಂದು ಕೇಳಿದರು. ಹಾಗೆ ಕೇಳುವಾಗ ಪ್ರೀತಿಯ ರಸವನ್ನೆ ತಮ್ಮ ಮಾತಿನ ಮೂಲಕ ಹರಿಸಿದ್ದರು. ತಾನು ಸಂಕೋಚ ಮರೆತು ನಕ್ಕಿರಬೇಕು. ಅವರು ಬಾಗಿ ಮುತ್ತಿಟ್ಟರು. ತಾನು ಅಡ್ಡಿ ಮಾಡಲಿಲ್ಲ. ಮುಂದೆ ಎಲ್ಲ ಸಲೀಸು–ನೆನದೊಡನೆಯೇ ನಾಚಿ ಹಿಡಿಯಾದಳು...

ಮೊದಲ ರಾತ್ರಿಯೇ ಅವರು ತನ್ನನ್ನು ಉದ್ದಕ್ಕೂ ಅಪರಿಮಿತ ಒಲುಮೆಯಿಂದಲೆ ನಡೆಸಿಕೊಂಡಿದ್ದರು. ಅವರ ಸಂಗಡ ಇದ್ದಾಗ ಬದುಕು ಕೇವಲ ಒಂದು ಹುಡುಗಾಟವೆಂದೇ ತನಗೆ ತೋರಿತ್ತು. ತನ್ನ ಇಡೀ ಬದುಕು ಒಂದು ಸುಂದರ ಹಗಲು, ಇಲ್ಲಿ ಇರುಳು ಇಣುಕಲೂ ಶಕ್ಯವಿಲ್ಲ– ಎಂದ ಭಾವನೆ ತನ್ನನ್ನು ಆವರಿಸಿತ್ತು...

* * * *

ಹಟಾತ್ತನೆ ಲಕ್ಷಮ್ಮನವರು ಪ್ರತ್ಯಕ್ಷವಾದರು, ರುಕ್ಮಿಣಿಯ ಆಲೋಚನೆಯನ್ನು ಭಂಗಗೊಳಿಸುತ್ತ... ಈ ದಿನ ಆಕೆಯ ಮಾತಿನ ಧಾಟಿಯೆ ಬೇರೆ!–

"ರುಕ್ಕು, ಕೊಂಚ ಸೀಮೆ ಅಕ್ಕಿ ಇದ್ದರೆ ಕೊಡ್ತೀಯ?... ರಾತ್ರಿ ಮೂರು ನಾಲ್ಕು ಬಾರಿ ಪ್ರವೃತ್ತಿ ಆಯ್ತು. ಈ ಮುತ್ತಿನ ಮಣಿ ಪಾಯಸ ಕಾಯಿಸಿ ಕುಡಿದ್ರೆ ಎಷ್ಟೋ ಶಮನ... ಊರಿನಲ್ಲಿ ಯಾವ ಅಂಗಡೀಲಿ ವಿಚಾರಿಸಿದರೂ ಇಲ್ಲ ಅಂತಾರೆ. ಆ ಲಬ್ಬೆ ಸಾಬಿ ಇಟ್ಟಿರ್ತಿದ್ದ. ಈಗ ಅವನೂ ಕೈಯಾಡಿಸಿಬಿಟ್ಟ. ಸಂತೆ

ದಿನದವರೆಗೂ ಕಾಯಬೇಕು ಅಂದುಬಿಟ್ಟ (ಹಸಿ ಸುಳ್ಳು! ಅಂದುಕೊಂಡಳು ರುಕ್ಮಿಣಿ). ನನಗೆ ಏನಾರೂ ಬೇಕದರೆ ಈ ಊರಿನಲ್ಲಿ ಬೇರೆ ಯಾರ ಮನೆಗೂ ಹೋಗಲ್ಲ. ನಿಮ್ಮ ಮನೆ ಒಂದಕ್ಕೆ ತಾನೆ ನಾನು ಬರೋದು?" (ಇದು ಮಾತ್ರ ನಿಜ. ಯಾಕೆಂದರೆ, ಬೇರೆ ಯಾರ ಮನೆಗೆ ಹೋದರೂ ಈಕೆಗೆ ಏನು ಹುಟ್ಟಲ್ಲ. ಈಸುಕೊಂಡದ್ದನ್ನು ಹಿಂದಕ್ಕೆ ಕೊಟ್ಟರೆ ತಾನೆ ಯಾರಾದರೂ ಮತ್ತೆ ಕೊಡ್ತಾರೆ!... ತನ್ನ ಮನೆಗೆ ಬಂದಾಗಲೆ ರುಕ್ಮಿಣಿ 'ಮುದುಕಿ–ಏನೊ ಹೋಗಲಿ ಎಂದು' ಕಿಂಚಿತ್ತೂ ಗೊಣಗದೆ ಕೊಸರಾಡದೆ ಈಕೆ ಕೇಳಿದ ಸಣ್ಣದು ಪುಟ್ಟದು ಕೊಡುತ್ತಿದ್ದದ್ದು!)... ಲಕ್ಷಮ್ಮನವರು ಸೀಮೆ ಅಕ್ಕಿಯನ್ನು ಸೆರಗಿನ ತುದಿಗೆ ಗಂಟುಹಾಕಿ ನಡುಮನಗೆ ನಡೆದು, "ಏನಮ್ಮ ಸುಶೀಲ, ಈಗ ಹೇಗಿದ್ದೀಯ?... ಇನ್ನೂ ಜ್ವರ ಇದೆಯೇನು?" ಎಂದು ಕೇಳಿದರು. "ಜ್ವರ ಈಗ ಬಿಟ್ಟಿದೆ. ಆದರೆ ಇನ್ನೂ ನಿತ್ರಾಣ. ಇನ್ನೊಂದೆರಡು ದಿನ ಅಷ್ಟೆ. ಆಮೇಲೆ ಎಲ್ಲ ಸರಿಯೋಗುತ್ತೆ" ಎಂದು ಸುಶೀಲ ಇನ್ನೂ ಬಳಲಿದ ದನಿಯಲ್ಲೇ ಉತ್ತರಿಸಿದಳು. ಲಕ್ಷಮ್ಮನವರು "ಸರಿಯಮ್ಮ ಬರ್ತೇನೆ. ನೀನು ಬೇಗ ಎದ್ದು ಓಡಾಡಿದರೆ, ರುಕ್ಮಿಣಿಗೂ ಎಷ್ಟೊ ಸಹಾಯವಾಗುತ್ತೆ" ಎಂದು ಉಪಚಾರದ ಮಾತನ್ನಾಡಿ ಹೋಗುತ್ತಿರುವಂತೆ ರುಕ್ಮಿಣಿಯು– ಏನು ಜನ! ತಮಗೆ ಬೇಕಾದಾಗ ಒಂದು ಥರ, ಬೇಡವಾದಾಗ ಇನ್ನೊಂದು ಥರ ಆಡುತ್ತೆ ಈ ಹೆಂಗಸು. ಈ ಗಳಿಗೆಗೆ ಮೋಡ, ಇನ್ನೊಂಡು ಗಳಿಗೆಗೆ ಬಿಸಿಲು– ಎಂದು ಬೇಸರಪಡುತ್ತ, ಹೆಚ್ಚಿದ ಮದರಂಗದ ಕಾಯಿಗಳನ್ನು ಪಲ್ಯ ಮಾಡಲೆಂದು ತೆಗೆದಿಟ್ಟು, ಒಲೆಯ ಮೇಲೆ ಹಿತ್ತಾಳೆ ಬೋಸಿಯಲ್ಲಿ ಕುದಿಯುವ ನೀರಿಗೆ ಸುರಿದಳು. ಅಷ್ಟರಲ್ಲಿ ದೇವರ ಕೋಣೆಯಿಂದ ಗಂಟೆ ಬಾರಿಸಿದ ಸದ್ದು ಕೇಳಿ ಬಂದು, ತನ್ನ ಸೀರೆಯ ಸೆರಗಿಗೆ ಕೈಗಳನ್ನು ಒತ್ತಿಕೊಳ್ಳುತ್ತ ಅಲ್ಲಿಗೆ ಧಾವಿಸಿದಳು. ಶಾಸ್ತ್ರಿಗಳು ಮಂತ್ರ ಹೇಳುತ್ತ ಮಂಗಳಾರತಿ ಮಾಡಿ, ಆರ್ಘ್ಯ ಬಿಟ್ಟು, ಕೈಯಲ್ಲಿ ಹಿಡಿದಿದ್ದ ಹೂಗಳನ್ನು ದೇವರುಗಳಿಗೆ ಅರ್ಪಿಸಿ, ಬಳಿಕೆ ಮಂಗಳಾರತಿಯನ್ನು ತಂಗಿ ಸುಶೀಲೆಗೂ ಅನಂತರ ಸೊಸೆ ರುಕ್ಮಿಣಿಗೂ ಕೊಟ್ಟು, ತಾವೂ ತೆಗೆದುಕೊಂಡು ಭಕ್ತಿಯಿಂದ ತಮ್ಮನ್ನೆ ಮೂರು ಸಲ ಸುತ್ತು ಹಾಕಿ, ಪ್ರದಕ್ಷಿಣ ನಮಸ್ಕಾರಂ ಸಮರ್ಪಯಾಮಿ ಎಂದು ಉಚ್ಚರಿಸುತ್ತ ನೆಲದ ಮೇಲೆ ದೀರ್ಘದಂಡ ಪ್ರಣಾಮ ಮಾಡಿದರು.

ಅನಂತರ ಉಪಾಹಾರ. ಉಪ್ಪಿಟ್ಟಿಗೆ ಮೊಸರು ಕಲೆಸಿ ಸೇವಿಸಿ, ಐದಾರು ಬೂದು ಬಾಳೆಹಣ್ಣುಗಳನ್ನು ಮೆದ್ದು, ಒಂದು ಬೆಳ್ಳಿಯ ಉದ್ದನೆ ಲೋಟ ಭರ್ತಿಯಾಗಿ ಹಾಲು ಕುಡಿದು, ತೋಟಕ್ಕೆ ಹೋರಟ ಶಾಸ್ತ್ರಿಗಳನ್ನೆ ನಿಟ್ಟಿಸುತ್ತಿದ್ದ,

ಕೆಲಸ ಮಾಡುವುದರಲ್ಲಿ ಹೇಗೋ ಇವರ ಮಗನೂ ಸಹ ಊಟೋಪಚಾರಗಳಲ್ಲಿ ಇವರಂತೆಯೇ ಗಟ್ಟಿಗರು ಎನ್ನುವ ಸಾಮ್ಯ ಹೊಳೆಯಿತು. ಒಂದೊಂದು ದಿನ ವ್ಯವಧಾನವಿಲ್ಲದ್ದಕ್ಕೆ ತಾನು ಅಪರೂಪವಾಗಿ ಮಾಡಿ ಬಡಿಸುತ್ತಿದ್ದ ತಿಳಿಸಾರು ಅನ್ನವನ್ನೆ ಅತಿಶಯವಾದ ತೃಪ್ತಿಯಿಂದ ಅದೇ ಅಮೃತವೆನ್ನುವಂತೆ ತನ್ನವರು ಊಟ ಮಾಡುತ್ತಿದ್ದುದು ನೆನಪಾಯಿತು. 'ಒಳ್ಳೆಯವರನ್ನು ದೇವರು ಬಹುಬೇಗ ತನ್ನಲ್ಲಿಗೆ ಕರೆದುಕೊಳ್ಳುತ್ತಾನೆ' ಎಂದು ಅಜ್ಜಿ ಆಗಾಗ ಹೇಳುತ್ತಿದ್ದ ಉಕ್ತಿಯೂ ಜ್ಞಾಪಕಕ್ಕೆ ಬಂತು. ಬೇಳೆ ಬೆಂದದ್ದನ್ನು ಗಮನಿಸಿ, ಸಂಬಾರದ ಪುಡಿಯನ್ನು ಬೋಸಿಗೆ ಹಾಕಿದಳು.

* * * *

ಮಧ್ಯಾಹ್ನ ತೋಟದ ಕೊಳದಲ್ಲಿ ಬಟ್ಟೆ ಒಗೆಯುವಾಗಲೂ ರುಕ್ಮಿಣಿಗೆ ತನ್ನವರದೇ ಚಿಂತೆ... ಈ ತೋಟ ಈ ಸ್ಥಿತಿ ಮುಟ್ಟಲು ತಂದೆಯ ಜೊತೆಗೆ ಮಗನ ಅಸಾದಾರಣ ಶ್ರಮವೋ ಸೇರಿದ್ದಿತೆಂದು ದರುಮನಳ್ಳಿ ಜನ ಆಡಿಕೊಳ್ಳುತ್ತಿದ್ದುದುಂಟು. ಸಂಸ್ಕೃತಿ, ವೇದಾಧ್ಯಯನಗಳಲ್ಲದೆ, ಶಾಲಾ ಕಾಲೇಜು ಮೆಟ್ಟಿಲು ತುಳಿದವರಲ್ಲ, ಇವರು.

ಹೀಗಿರುವಾಗ ಒಂದು ದಿನ ಇವರು ನಮ್ಮ ಊರಿನ ಮಾರಿಗುಡಿಯ ಮುಂದೆ ತಮ್ಮ ಪಾಡಿಗೆ ತಾವು ಹೋಗುತ್ತಿದ್ದರಂತೆ. ಪರಿವಾರ ಜಾತಿ ಸಣ್ಣೆ ತಲೆಯ ಮೇಲೆ ಒಂದು ಕೊಡ, ಕಂಕುಳಲ್ಲಿ ಒಂದು ಕೊಡ ನೀರು ಹೊತ್ತು ಇವರ ಸನಿಯದಲ್ಲೆ ಸಾಗುತ್ತಿದ್ದಳಂತೆ. ಮಾರಿಗುಡಿಯ ಪೋಲಿ ಪಟಾಲಾಮ್ಮಿನಲ್ಲಿ ಒಬ್ಬನಾದ ರುದ್ರ, ಸಣ್ಣೆಯನ್ನೇ ದುರುಗುಟ್ಟಿ ನೋಡುತ್ತ, ಕೆಣಕುವ ದನಿಯಲ್ಲಿ–

"ನ್ವಾಡ್ರಪ್ಪ ಚೋಜಿಗವ!– ತಲೆಮ್ಯಾಗಿನ ಕೊಡ ಸೊಂಚದ ಕೊಡ, ಇವು ಏಡಂಕಿಂತಲೂವೆ ಎದೆಮ್ಯಾಗಿನ ಕೊಡಗಳೇ ಭಾರವಾಗಿರಾ ಅಂಗವಲ್ಲ!" ಅಂದನಂತೆ.

ಅವನ ಪಟಾಲಮ್ಮೆಲ್ಲ ಆ ಕೀಟಲೆ ಮಾತು ಕೇಳಿ ಗಟ್ಟಿಯಾಗಿ ಚಪ್ಪಾಳೆ ತಟ್ಟಿ, ಅಸಹ್ಯವಾಗಿ ನಕ್ಕರಂತೆ... ಯಾವುದೋ ಲೆಕ್ಕಾಚಾರದಲ್ಲಿ ಮುಳುಗಿದ್ದರೂನು, ಈ ಆಶ್ಲೀಲದ ಮಾತು ಕೇಳಿ ತನ್ನ ಯಜಮಾನರಿಗೆ ಸಹಿಸಲಾರದ ಸಿಟ್ಟು ಬಂದು, ರುದ್ರನ ಕತ್ತಿನ ಪಟ್ಟಿ ಹಿಡಿದೆಳೆದು, ಅವನ ಎರಡು ಕೆನ್ನೆಗಳಿಗೂ ರಪರಪ ತೀಡಿ,

"ಹುಶಾರ್, ಇನ್ನೊಂದು ಸಲ ಹೆಣ್ಣುಮಕ್ಕಳನ್ನ ಹೀಗೆ ಹಾದಿಬೀದೀಲೆಲ್ಲ ಚುಡಾಯಿಸಿದರೆ, ನಿನ್ನ ಚರ್ಮ ಸುಲಿದು ಊರ ಬಾಗಿಲಿಗೆ ತೋರಣ ಕಟ್ಟಿಬಿಡ್ತೀನಿ"

ಎಂದು ಗುಡುಗಿದರಂತೆ! ಅಂದಿನಿಂದ ಅವರು ಬದುಕಿರುವವರೆಗೂ ಆ ಪೋಲಿಗಳ ಪುಂಡಾಟಿಕೆ ಊರಿನಲ್ಲಿ ಕೊಂಚ ತಣ್ಣಗಾಗಿತ್ತು!... ರುದ್ರನ ಮಾವ ಗಂಗಪ್ಪನಾಗಲಿ, ಸ್ವಯಂ ನಂಜೇಗೌಡನೆ ಆಗಲಿ, ಬಹಿರಂಗವಾಗಿ ಅವರ ಪೋಲಿ ಆಟವನ್ನು ವಹಿಸಿ ಬರುವಂತಿರಲಿಲ್ಲ. ಆದ್ದರಿಂದ ಅವರೆಲ್ಲರೂ ಪೆಟ್ಟು ತಿಂದ ನಾಗರಹಾವಿನಂತೆ ತನ್ನವರ ವಿರುದ್ಧ ಒಳಗೊಳಗೇ ವಿಷ ಕಾರಲು ಉದ್ಯುಕ್ತರಾದರು...

ಪರಿವಾರದ ಸಣ್ಣೆ ತಮ್ಮ ತೋಟದಲ್ಲಿ ಆದೂ ಇದೂ ಕೂಲಿ ಮಾಡುತ್ತಿದ್ದ ಹೆಣ್ಣು. ಹೆಸರಿಗೆ ತಕ್ಕಂತೆ ಅವಳ ಶರೀರದ ರಚನೆ ಸಣ್ಣದಾಗಿದ್ದರೂ ಅವಳ ಎದೆಯ ಭಾಗ ತುಂಬಿ ಬೆಳೆದು, ಅವಳು ನಡೆಯುವಾಗ–ಅವಳು ರವಿಕೆ ತೋಡುತ್ತಿರಲಿಲ್ಲವಾಗಿ–ಅತ್ತಿಂದಿತ್ತ ಕುಂಬಳ ಕಾಯಿಗಳಂತೆ ಉರುಳಾಡಿ, ಎಂಥವರೂ ಒಮ್ಮೆ ಅತ್ತ ಕಣ್ಣು ಹಾಯಿಸುವಂತೆ ಮಾಡುತ್ತಿತ್ತು. ಈ ಸನ್ನಿವೇಶವನ್ನೇ ಉಪಯೋಗಿಸಿ ಗಂಗಪ್ಪನೂ ನಂಜೇಗೌಡನೂ ಆ ಪೋಲಿ ಪಟಾಲಮ್ಮಿನ ಜೊತೆಗೂಡಿ ತನ್ನ ಯಜಮಾನರಿಗೂ ಆ ಹೆಣ್ಣಿಗೂ ಸಂಬಂಧ ಕಲ್ಪಿಸಿ ಕತೆ ಕಟ್ಟಿದ್ದರು. ಅದನ್ನು ಊರಿನಲ್ಲಿ ಒಳಗಿಂದೊಳಗೆ ನಾಲಿಗೆಯಿಂದ ನಾಲಿಗೆಗೆ ದಾಟಿಸುವ ಹೀನ ಕಾರ್ಯಕ್ಕೂ ಇಳಿದರು. ಊರಿನ ಹಲವರು ಈ ಮಸಲತ್ತಿಗೆ ಮಾರುಹೋಗುದಿದ್ದರೂ ಕೆಲವರಾದರೂ ಅಂತರಂಗದಲ್ಲಿ ಅದಕ್ಕೆ ಆಸ್ಪದವಿತ್ತು ನಂಬಿದ್ದುಂಟು...

ಇದಕ್ಕೆ ಬಹಳ ಹಿಂದೆಯೇ ಗಂಡನನ್ನು ಕಳೆದುಕೊಂಡು ತನ್ನ ಒಬ್ಬಳೇ ಮಗಳು ಸರಿಸಿಯೊಡನೆ ತೌರನ್ನೆ ನಂಬಿ, ನಮ್ಮ ಮನೆಗೇ ಬಂದು ಠಿಕಾಣಿ ಹೂಡಿದ್ದ ಸುಶೀಲತ್ತೆಗೆ ಈಗ ಜ್ವರ ಬಿಟ್ಟು ಅವಳು ಸಂಪೂರ್ಣ ಗುಣ ಹೊಂದಿದ್ದಳು. ಗಂಡನ ಮನೆಯವರು ಸುಶೀಲತ್ತೆಗೆ ಕೊಡುತ್ತಿದ್ದ ಕಿರುಕುಳವನ್ನು ಕೇಳಿ ವ್ಯಾಕುಲಗೊಂಡು, ಮಾವನವರು ತಾವೇ ತೆರಳಿ ಅವಳನ್ನು ಇಲ್ಲಿಗೆ ಕರೆದತಂದಿದ್ದರು. ತನಗಿಂತ ನಾಲ್ಕೈದು ವರ್ಷವಷ್ಟೇ ಹಿರಿಯವಳಾದ ಸುಶೀಲತ್ತೆಗೆ ಅವಳ ಗಂಡನ ಮನೆಯವರು ಗಂಡ ಸತ್ತೊಡನೆಯೆ ತಲೆ ಬೋಳಿಸಿ, ಕೆಂಪು ಸೀರೆ ಉಡಿಸಿದ್ದುದಂತೂ ಮಾವನವರಿಗೆ ಕಣ್ಣೀರು ತಂದಿತ್ತು...

ಮೊದಮೊದಲಿಗೆ ಕತ್ತಲೆಯ ಬೋನಿಗೆ ಬಿದ್ದ ಹುಲಿಯಂತೆ, ಸುಶೀಲತ್ತೆ ಯಾವ ಸಣ್ಣ ವಿಷಯಕ್ಕೂ ತನ್ನನ್ನೆ ಕೇಳಿ ಅನುಸರಿಸಿ ನಡೆಯುತ್ತಿದ್ದಳು, ಕಾಲ ಕಳೆದಂತೆ ಕೊಂಚಕೊಂಚವಾಗಿ ಅವಳ ಚರ್ಯೆ ಬದಲಿಸುತ್ತ ಹೋಯಿತ್ತು...

"ನಾನಿರುವಾಗ ನೀನ್ಯಾಕೆ ವೃಥಾ ಅಡಿಗೆ ಮಾಡಬೇಕು?... ನನಗೆ ಅಡಿಗೆ ಮಾಡಲಿಕ್ಕೆ ಬಲು ಇಷ್ಟ. ಹೇಗೂ ಸಕೇಶಿಯಾದ ನೀನು ಮಾಡುವ ಅಡಿಗೆಯನ್ನು

ನಾನು ಊಟ ಮಾಡುವುದಿಲ್ಲ. ಹೇಗಿದ್ದರೂ ನಾನು ಪ್ರತ್ಯೇಕವಾಗಿ ಅಡಿಗೆ ಮಾಡಿಕೊಳ್ಳಲೇಬೇಕು... ಯಾಕೆ ಇಷ್ಟೆಲ್ಲ ರಂಪಾಟ?– ಎಲ್ಲರಿಗೂ ನಾನೇ ಅಡಿಗೆ ಮಾಡಿಬಿಟ್ಟರೆ, ಯಾವ ಸಮಸ್ಯೆಯೂ ಇರಲ್ಲ" ಎಂದು ಅಡಿಗೆಕೋಣೆಯ ಯಜಮಾನಿಕೆಯನ್ನು ತಾನೇ ವಹಿಸಿಬಿಟ್ಟಳು! ಮಾವನವರ ತಿಂಡಿ ತೀರ್ಥ ಊಟ ಉಪಚಾರ ಎಲ್ಲವೂ ಅವಳ ಕಾರುಬಾರಿಗೇ ಒಳಪಟ್ಟವು. ತನ್ನ ಯಜಮಾನರು ಮಾತ್ರ ಅದೇಕೋ ಅವಳಿಗೆ ಒಗ್ಗಿರಲಿಲ್ಲ!– ಅವಳು ಮದುವೆಯಾಗದೆ ಕನ್ಯೆಯಾಗಿ ತಮ್ಮ ಮನೆಯಲ್ಲಿದ್ದಾಗಲೂ ಇದೇ ಪರಿಪಾಟಲಂತೆ!...

"ಆಗಲೂ ಅಷ್ಟೆ, ಸುಶೀಲತ್ತೆಯ ಗುಣ ನನಗೆ ಕೊಂಚವೂ ಪ್ರಿಯವಾಗುತ್ತಿರಲಿಲ್ಲ. ಯಾವಾಗಲೂ ತನ್ನ ಮಾತೇ ಮುಂದಾಗಬೇಕು. ಯಾವ ಸಂದರ್ಭದಲ್ಲೂ ತನ್ನ ಬೇಳೆಯೇ ಬೇಯಬೇಕು ಅನ್ನುವ ಜಾತಿ!... ಅವಳ ಈ ಸ್ವಭಾವ ನಮ್ಮ ತಾಯಿಯನ್ನೂ ಒಮ್ಮೊಮ್ಮೆ ರೊಚ್ಚಿಗೇಳಿಸಿದ್ದುಂಟು. ಹಾಗೆ ನೋಡಿದರೆ, ನಮ್ಮ ತಂದೆಯವರೆ, ಕಿರಿಯ ತಂಗಿ ಎಂಬ ಮಮಕಾರದಿಂದಲೊ ಏನೊ, ಅವಳು ಎಷ್ಟೇ ಅಹಂಕಾರದಿಂದ ನಡೆದರೂ ಏನೇ ಅವಿವೇಕ ಮಾಡಿದರೂ ಸೊಲ್ಲೆತ್ತದೆ ಸುಮ್ಮನಿರುತ್ತಿದ್ದರು"– ಹೀಗೆಂದು ತನ್ನ ಯಜಮಾನರೆ ಸುಶೀಲತ್ತೆಯ ನಡತೆಯ ಬಗ್ಗೆ ಒಮ್ಮೆ ವಿವರಸಿದ್ದುಂಟು...

ಮಾವನವರ ಈ ಮಮಕಾರವೆ ಸುಶೀಲತ್ತೆಯು ನಮ್ಮ ಮನೆಯ ಆಡಳಿತದ ಮೇಲೆ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸಲು ನೆರವಾಯಿತು. ಒಂದು ದಿನ ನಾನು ಹಜಾರದ ಕಸ ಗುಡಿಸುತ್ತಿದ್ದೆ. ಸುಶೀಲತ್ತೆ ಯಾರ ಮನೆಗೊ ಹೋಗಿದ್ದವರು ಒಳ ಬಂದು ಬಾಗಿಲು ಮುಚ್ಚಿ ನನ್ನಲ್ಲಿಗೆ ಬಂದವರು, ದನಿ ತಗ್ಗಿಸಿ ಏನೊ ಗೊಪ್ಯ ಹೇಳುವವರಂತೆ,

"ಏಳಿದೆಯೇನೆ ರುಕ್ಕು. ನಮ್ಮ ವಿಶ್ವ ಈ ಪರಿ ಕೆಟ್ಟು ಹೋಗ್ತಾನೆ ಎಂದು ಕನಸು ಮನಸಿನಲ್ಲೂ ನಾನು ಎಣಿಸಿರಲಿಲ್ಲ" –ಹೇಳಿ ಬೆಚ್ಚಿಸಿದರು.

"ಯಾಕೆ?" ಕೇಳಿದಾಗ,

"ಆ ಪರಿವಾರದ ಸಣ್ಣಿ ಇಲ್ಲವೆ?– ಅವಳ ಜೊತೆ ತೋಟದಲ್ಲಿ ಅವಕಾಶ ಸಿಕ್ಕಾಗಲೆಲ್ಲ ಸರಸ ಆಡ್ತಾನಂತೆ ನಮ್ಮ ವಿಶ್ವ..."ಎಂದರು.

ನಾನು ಒಳಗೇ ಕಂಪಸುತ್ತ,

"ಯಾರು ನಿಮಗೆ ಈ ಸುದ್ದಿ ತಿಳಿಸಿದ್ದು?" –ಕೇಳಿದೆ.

ಸುಶೀಲತ್ತೆ ಸಿಡುಕುತ್ತ.

"ಯಾರೇನು ಹೇಳಬೇಕು?– ಊರಿಗೇ ಊರೇ ಕುಣೀತಾ ಇದೆ...

ಮೊನ್ನೆ ಅರಳೀಕಟ್ಟೆ ಮೇಲೆ ನಂಜೆಗೌಡ, ಗಂಗಪ್ಪ ಇನ್ನೂ ಯಾರುಯಾರೋ ಯಜಮಾನರು ಕೂತು ಮಾತಾಡಿಕೊಳ್ತ ಇದ್ದದ್ದನ್ನ ನಾನೇ ಸ್ವತಃ ಕೇಳಿ ಬಂದಿದ್ದೇನೆ. ಇದಕ್ಕೆ ಇನ್ನೂ ಬೇರೆ ಪುರಾವೆ ಬೇಕಾ?" ಎಂದು ನನ್ನನ್ನು ಒಂದು ತರಹ ನೋಡಿದಳು. ಆ ನೋಟದಲ್ಲಿ ನನಗೆ ಗಂಡ ಇಲ್ಲದೇ ಇರೋದೂ ಒಂದೆ, ನಿನಗೆ ಗಂಡ ಇರೋದು ಒಂದೆ ಎಂಬ ಭಾವವನ್ನು ಅದೇಕೋ ನನ್ನ ಆಂತರ್ಯ ಗುರುತಿಸಿತು...

ನಂಜೇಗೌಡ ಗಂಗಪ್ಪನಂಥವರು ಈ ಸುದ್ದಿಯನ್ನು ಹರಡುತ್ತಿದ್ದುದರಿಂದ ರುಕ್ಮಿಣಿಯು ಇದಕ್ಕೆ ಅಷ್ಟೇನೂ ಪ್ರಾಮುಖ್ಯತೆ ಕೊಡದಿದ್ದರೂ, ಇಂಥ ವಿಷಯಗಳಲ್ಲಿ ಹೆಣ್ಣಿಗೆ ಸಹಜವಾದ ಅನುಮಾನ ಅವಳಲ್ಲಿ ಮೂಡದೆ ಇರಲಿಲ್ಲ. ಆದರೆ ಗಂಡನ ಸಂಗಡ ಈ ವಿಚಾರ ಪ್ರಸ್ತಾಪಿಸಲು ಅಂಜಿಕೆ...

ಹೆಣ್ಣು ಎಂದರೆ ಹೆಬಗನೂ ನಕ್ಕ ಎನ್ನು ಗಾದೆಯೇ ಇಲ್ಲವೆ?... ಒಂದು ಪಕ್ಷ ನಾನು ಕೇಳೇಬಿಟ್ಟೆ ಅನ್ನೋಣ. ಆಗ ಅವರು, 'ಹೌದು, ನಿಜ. ಆ ಹೆಣ್ಣು ನನಗೆ ಪ್ರಿಯವಾಯಿತು. ಆದರಿಂದ ನಿನಗೇನು ಕೊರತೆ ಮಾಡಿದ್ದೇನೆ?' ಎಂದುಬಿಟ್ಟರೆ?... ನಮ್ಮ ಬ್ರಾಹ್ಮಣಕೇರಿ ಮಾತ್ರವಲ್ಲದೆ, ಊರಿನ ಬೇರೆ ಬೇರೆ ಕೇರಿಗಳ ಅದೆಷ್ಟು ಮಂದಿ ಗೃಹಸ್ಥರು, ಇದೇ ಕೆಲಸ ಮಾಡುತ್ತಿಲ್ಲ?!... ನನ್ನ ಮನಸ್ಸು ಇದೇ ವರ್ತುಲದಲ್ಲಿ ಚಲಿಸುತ್ತಿರುವಾಗ, ಸುಶೀಲ ಇನ್ನೊಂದು ದಿನ ಇದೇ ವಿಷಯ ಪ್ರಸ್ತಾಪ ಮಾಡಿ,

"ಅಯ್ಯೊ, ಅದೇನು ಕೇಡುಗಾಲ ಬಂದಿದೆಯೋ ನಮ್ಮ ವಿಶ್ವನಿಗೆ–" ಎಂದು ಪೀಠಿಕೆ ಹಾಕಿದಳು. ನಾನು ಬೇಸರದಿಂದ ಮೌನವಾಗಿಯೆ ಇದ್ದೆ. ಅವಳು ಮಾತ್ರ ಮಾತುಗಳನ್ನು ಉರುಳಿಸುತ್ತಲೇ ಹೋದಳು.

"ಆ ಸಣ್ಣಿ ತೋಟದಲ್ಲಿ ತಲೆ ಸುತ್ತಿತ್ತು ಎಂದು ದೊಪ್ಪನೆ ನೆಲಕ್ಕೆ ಬಿದ್ದಳಂತೆ. ಎಲ್ಲ ಆಳುಗಳೂ ಅಲ್ಲೆ ಇರುವಾಗ ನಮ್ಮ ವಿಶ್ವ ಓಡಿಹೋಗಿ ಅವಳ ಸೊಂಟಕ್ಕೆ ಕೈ ಕೊಟ್ಟು ತಬ್ಬಿ ಶೈತ್ಯೋಪಚಾರ ಮಾಡಿದನಂತೆ...!" ಎಂದು ವಿಷಯಕ್ಕೆ ಮತ್ತೊಂದು ಹೊಸ ಆಯಾಮವನ್ನೆ ನಿರ್ಮಿಸಿದ್ದಳು...

ಕೆಲವು ದಿನಗಳಿಂದ ನನ್ನೊಳಗೆ ಒಲೆಯ ಮೇಲಿನ ಹಾಲು ಕುದಿಯುವಂತೆ ಕುದಿಯುತ್ತಿದ್ದ ಬೇಗೆ, ಒಂದು ದಿನ ನನ್ನವರ ಮುಂದೆ ಕಂಬನಿದುಂಬಿ ಪ್ರತ್ಯಕ್ಷವಾಯಿತು.

"ಯಾಕೆ ರುಕ್ಕು? –ಏನಾಯಿತು?... ನಿನ್ನ ಕಣ್ಣಲ್ಲಿ ಯಾಕೆ ನೀರು?" – ಯಜಮಾನರು ಏನೂ ಅರಿಯದವರಾಗಿ ಕೇಳಿದರು.

"ನೀವು-ಗಂಡಸರು ಇದ್ದೀರಲ್ಲಾ-ನಿವೇಲ್ಲಾರು ಶುದ್ದಾಂಗ ಮೋಸಗಾರರು..." ಬೆರಳಿನಿಂದ ಕಂಬನಿ ಮಿಡಿಯುತ್ತ ತ್ವೇಷದಿಂದಲೆ ನುಡಿದೆ.

ಇಲ್ಲಿಯವರೆಗೆ ಎಂದೂ ನನ್ನಿಂದ ಇಂಥ ಮಾತನ್ನೆ ಕೇಳರಿಯದ ನನ್ನವರು ಕೊಂಚ ತಬ್ಬಿಬ್ಬಾದರೂ ಸಂಪೂರ್ಣವಾಗಿ ವಿಚಲಿತಗೊಳ್ಳದೆ ತಮ್ಮ ಸಹಜ ಸರಸ ಪ್ರವೃತ್ತಿಯನ್ನು ತಂದುಕೊಳ್ಳುತ್ತ,

"ಓಹೊ-ಇದೇನು ಸಹ ಮಾತು?...ಗಂಡಸು ಜಾತಿಯ ಬಗ್ಗೆಯೇ ಯಾಕೆ ಈ ದಿನ ಅಮ್ಮಾವರಿಗೆ ಇಷ್ಟೊಂದು ಕ್ಲೇಶ? -ನನ್ನ ಬೆನ್ನು ಸವರುತ್ತ ಕೇಳಿದ್ದರು.

"ಗಂಡಸರು ಅಂದರೆ ನನಗೆ ಗೊತ್ತಿರೋದು ಒಬ್ಬರೆ!" ಎಂದು ಯಾವುತ್ತೂ ಪತಿರಾಯರೆದುರು ಉದ್ಭವಿಸದಿದ್ದ ದಾಕ್ಷೀಕದಿಂದ ನಾನು ಚುಚ್ಚಿದೆ. ಆಗ ನನ್ನವರು ನಗುತ್ತ,

"ಯಾಕೊ ಬಾಣ ನನ್ನ ಮೇಲೇ ಎರಗ್ತಾ ಇದೆ! —ಏನು ಸಮಾಚಾರ?"

"ಸುತ್ತಿ ಬಳಸಿ ಮಾತಾಡೋದರಲ್ಲಿ ಯಾವ ಪ್ರಯೋಜನ? —ಅದೆ ಸಣ್ಣಿ ವಿಷಯ..."

"ಏನು ಸಣ್ಣಿ ವಿಷಯ?"

"ಮೊನ್ನೆ ತೋಟದಲ್ಲಿ ಸಣ್ಣಿ ನೆಲಕ್ಕೆ ಕುಸಿದಾಗ, ನೀವು ಅವಳನ್ನು ನಾಚಿಕೆ ಇಲ್ಲದೆ ಆಳುಕಾಳು ಎಲ್ಲರೆದುರೂ ತಬ್ಬಿ ಸರಸ ಆಡಿದ್ದು..."

"ಓ-ಅದೇ!..." ಘೋಳ್ಳನೆ ನಕ್ಕರು.

"ಹು. ನೀವು ನಿಮ್ಮಿಷ್ಟ ಪ್ರಕಾರ ನಿಮಗಿಷ್ಟ ಬಂದ ಹೆಣ್ಣುಗಳ ಸಂಗಡ ಸರಸವಾಡ್ತ, ಅದರೆ ಬಗ್ಗೆ ನಾನು ಕೇಳಿದರೆ ನಗ್ತಾ ಇರಿ. ನೀವು ಆಡ್ತಿರೋ ಆಟಗಳ ಬಗ್ಗೆ ಕೇಳಿ ಕೇಳಿ ನಾನು ಅಳ್ತಾನೇ ಇರ್ತೀನಿ... ಈ ಸೌಭಾಗ್ಯಕ್ಕೆ ನನ್ನನ್ನೇಕೆ ಮದುವೆಯಾಗಬೇಕಿತ್ತೊ?" ತಡೆದು ನಿಂತಿದ್ದ ಕಣ್ಣೀರು ಚೆಲ್ಲೊಡೆಯಿತು.

ಯಜಮಾನರು ಈಗಲೀಗ ನಗು ನಿಲ್ಲಿಸಿಬಿಟ್ಟರು. ನನ್ನನ್ನು ಅಪ್ಪಿ ಸಂತೈಸುತ್ತ

"ಪಾಪ, ಆ ಸಣ್ಣಿ ತೋಟದಲ್ಲಿ ಜಾರಿ ಬಿದ್ದಿದ್ದಳು. ಆಳುಕಾಳು ಎಲ್ಲರು ದೂರದಲ್ಲಿದ್ದರು. ಸಮೀಪದಲ್ಲಿ ಇದ್ದೋನು ಅಂದರೆ ನಾನೊಬ್ಬನೆ. ಆದ್ದರಿಂದ ಅಲ್ಲಿದ್ದೋರಿಗೆ ನನ್ನ ವರ್ತನೆಯಿಂದ ಬೇಸರವಾದರೂ ನಾನೇ ಅವಳನ್ನ ನನ್ನ ತೊಡೆಯ ಮೇಲಿಟ್ಟು ಉಪಚರಿಸಿದೆ..." ಎಂದರು.

"ಅಲ್ಲರೀ, ಈ ಮಾತನ್ನ ನನ್ನ ಸಂಗಡ ಹೇಳಲಿಕ್ಕೆ ನಿಮಗೆ ಕೊಂಚವೂ ನಾಚಿಕೆಯೆ ಆಗಲಿಲ್ಲವೆ?"

"ಯಾಕೆ?"

"ಯಾಕಂತೆ ಯಾಕೆ!.... ರಾಜಾರೋಷವಾಗಿ ಎಲ್ಲರೆದುರೂ ಒಂದು ಪ್ರಾಯದ ಹೆಣ್ಣಿನ ಸೊಂಟ ಬಳಸಿ, ತೊಡೆಯ ಮೇಲೆ ಮಲಗಿಸಿ, ಉಪಚರಿಸಿದೆ ಅಂತ ನನ್ನ ಮುಂದೆಯೂ ನಿಸ್ಸಂಕೋಚವಾಗಿ ಹೇಳ್ತಿದೀರಲ್ಲ..."

"ಪ್ರಾಯದ ಹೆಣ್ಣು?"

"ಇದೇನು ಸಣ್ಣಿ ಪ್ರಾಯದ ಹೆಣ್ಣಲ್ಲವೆ? –ಯಾಕ್ರಿ ಸುಮ್ಮನೆ ನನ್ನನ್ನ ಸತಾಯಿಸ್ತೀರ?"

"ಯಾವ ಸಣ್ಣೀನೆ ನೀನು ಹೇಳ್ತಿರೋದು?"

"ಅಬ್ಬಬ್ಬಬ್ಬ– ಏನು ಮಳ್ಳೀ ಹಾಗೆ ಮಾತಾಡ್ತೀರ? –ಇನ್ಯಾವ ಸಣ್ಣಿ? – ಅದೇ, ಆ ಪರಿವಾರದ ಹುಡುಗಿ!"

ಯಜಮಾನರು ಇನ್ನೊಮ್ಮೆ ನಕ್ಕರು. ಬಿದ್ದು ಬಿದ್ದು ನಕ್ಕರು. ಎರಡು ಪಕ್ಕೆಗಳನ್ನೂ ಹಿಡಿದು "ಅಮ್ಮ–ನಾನು ನಗಲಾರೆ" ಎಂದು ಹೇಳುತ್ತಲೆ ನಕ್ಕರು. ತಡೆಯಲಾಗದೆ ಬುಗ್ಗೆ ಬುಗ್ಗೆಯಾಗಿ ಉಕ್ಕುತ್ತಿದ್ದ ನಗು ಅವರ ಕಣ್ಣಿನಿಂದ ನೀರು ತುಳುಕಿಸುತ್ತಿತ್ತು.

"ಸರಿ ಸರಿ. ಸಾಕು ನಿಲ್ಲಿಸಿ ನಿಮ್ಮ ನಗುವನ್ನ –ಬೆಕ್ಕಿಗೆ ಚೆಲ್ಲಾಟ..."

"ನನ್ನ ಈ ಮುದ್ದು ಅರಗಿಣಿಗೆ ಪ್ರಾಣಸಂಕಟ..." ಎನ್ನುತ್ತ ನನ್ನನ್ನು ರಮಿಸಲು ಬಂದರು. ನಾನು ಅವರ ತೆಕ್ಕೆಯಿಂದ ಬಿಡಿಸಿಕೊಳ್ಳುತ್ತ ಹೇಳಿದೆ:

"ಬಿಡಿ ಬಿಡಿ. ಈ ಪ್ರಾಣಸಂಕಟ ಸಹಿಸಿ ಇನ್ನೆಷ್ಟು ಕಾಲ ಬದುಕಬೇಕು?" ನನ್ನವರು ನಗು ನಿಲ್ಲಿಸಿ ನುಡಿದರು:

"ಇನ್ನು ನಾನು ಹುಡುಗಾಟ ಆಡಲ್ಲ. ನನ್ನ ಪ್ರಾಣೇಶ್ವರಿ ಪ್ರಾಣಸಂಕಟಾನ ತಪ್ಪಿಸ್ತೇನೆ."

ನಾನು ಕತ್ತೆತ್ತಿ ಮೂಕವಾಗಿ ನನ್ನ ಪತಿಯನ್ನು ನೋಡಿದ. ನನ್ನ ನೋಟದಲ್ಲಿ, ನನಗೊಂದು ಅರ್ಥವಾಗ್ತಿಲ್ಲ, ಬಿಡಿಸಿ ಹೇಳಬಾರದೆ – ಎಂಬ ಆರ್ತತೆಯಿತ್ತು.

"ಇಲ್ಲಿ ಕೇಳು ರುಕ್ಕು–ತೋಟದಲ್ಲಿ ನಾನು ಉಪಚರಿಸಿದ್ದು, ಪರಿವಾರದ ಸಣ್ಣಿಯನ್ನಲ್ಲ..."

"ಮತ್ತೆ?"

"ಮಾದಿಗರ ಮುದುಕಿ–ಸಣ್ಣಿಯನ್ನ...ಹಾಕ್ಕಳಕ್ಕೆರವಷ್ಟು ಎಲೆ ಬೇಕು ಒಡೆಯಾ ಅಂದಿದ್ಲು. ತೋಟಕ್ಕೆ ಬಾ ಕೊಡ್ತೀನಿ, ಅಂದಿದ್ದೆ. ಮಾರನೇ ದಿನ ಬಂದೋಳು, ಎಲೆ ಕುಯ್ಯೊವ ಹಂಬಿನ ಜಾಗಕ್ಕೆ ನಾನು ಬರುವ ವೇಳೆಗೆ ಜಾರಿ ಬಿದ್ದಿದ್ದಳು. ಸಮೀಪದಲ್ಲಿ ಯಾರೂ ಇರಲಿಲ್ಲ. ಪಾಪ, ಮುದುಕಿ ಎಂದು ಎತ್ತಿ ತೊಡೆಯ

ಮೇಲಿರಿಸಿ ಉಪಚರಿಸಿದೆ, ಅಷ್ಟೆ."

ಅವರ ಮಾತುಗಳನ್ನು ಆಲಿಸುತ್ತಿದ್ದಂತೆ ನನ್ನ ಕಣ್ಣಿನಲ್ಲಿ ಪುನಃ ನೀರು ಕಾಣಿಸಿತು. ಆದರೆ ಅದು ಶೋಕದ ಕಂಬನಿಯಾಗಿರದೆ, ನನ್ನ ಪತಿಯ ಬಗ್ಗೆ ಅಭಿಮಾನದ ಮೆಚ್ಚುಗೆಯ ಕಣ್ಣೀರಾಗಿತ್ತು...

* * * *

ಆ ಪ್ರಸಂಗವನ್ನು ನೆನೆದಂತೆ ಮತ್ತೊಮ್ಮೆ ರುಕ್ಮಿಣಿಯ ಕಣ್ಣಿನಲ್ಲಿ ನೀರಾಡಿತ್ತು. ಅಂಥ ಗಂಡನನ್ನು ಪಡೆಯಲು ತಾನು ಕೋಟಿ ಜನ್ಮಗಳ ಪುಣ್ಯ ಮಾಡಿದ್ದೆ ಎನ್ನಿಸಿತ್ತು. ಆದರೆ ಆ ಪುಣ್ಯ ಕೇವಲ ಒಂದೂವರೆ ವರ್ಷದಷ್ಟು ಅಲ್ಪಾವಧಿಯಲ್ಲಿ ಕ್ಷಯಿಸಿದ್ದೇಕೆ? – ಈ ಪ್ರಶ್ನೆಯನ್ನು ವಿಷಮಶೀತ ಜ್ವರದಿಂದ ತನ್ನ ಪತಿ ಸತ್ತ ದಿನದಿಂದಲೂ ದೇವರ ಮುಂದೆ ಕೇಳುತ್ತಲೆ ಬಂದಿದ್ದಳು. ಬಾಲ್ಯದಿಂದಲೂ ಯುಗಾದಿಯಲ್ಲಿ ಬೇವು–ಬೆಲ್ಲಗಳನ್ನು ಸಮಸಮವಾಗಿಯೆ ತಿನ್ನುತ್ತ ಬಂದಿದ್ದೇನಲ್ಲ. ಆದರೆ ನನ್ನ ಬಾಳ್ವೆಯಲ್ಲಿ ಬೆಲ್ಲದ ಸವಿ ಬಹು ಕ್ಷಿಪ್ರವಾಗಿ ಕರಗಿ, ಇನ್ನು ನನ್ನ ಬದುಕಿನುದ್ದಕ್ಕೂ ಬೇವಿ ಕಹಿಯನ್ನೆ ಸೇವಿಸುವಂತಾಯಿತಲ್ಲ?... ಅವಳ ಆಲೋಚನೆ ಈ ಪರಿ ಹರಿಯುತ್ತಿರುವಾಗ ಈಗಾಗಲೆ ಚೆನ್ನಾಗಿ ಚೆತರಿಸಿದ್ದ ಸುಶೀಲ ಏಣಿ ಹಾಕಿ ಅಟ್ಟಕ್ಕೆ ಹತ್ತುವುದನ್ನು ಗಮನಿಸಿ, 'ಅಯ್ಯೋ ನನ್ನೊಬ್ಬಳದೇ ಏನು ಮಹಾ– ಈ ಸುಶೀಲತ್ತೆಯೂ ನನ್ನಂತೆ ಚಿಕ್ಕ ಪ್ರಾಯದಲ್ಲಿಯೇ ಗಂಡನನ್ನು ಕಳೆದುಕೊಂಡಿಲ್ಲವೆ?... ಆದರೆ ಒಂದು ವ್ಯತ್ಯಾಸ–ದೇವರು ಅವಳಿಗೆ ಒಂದು ಕೂಸನ್ನಾದರೂ ಕರುಣಿಸಿದ್ದಾನೆ. ಆ ಭಾಗ್ಯದಿಂದಲೂ ತಾನು ವಂಚಿತಳು!...

ಅಂಗಳದ ತಾಮ್ರದ ಕೊಪ್ಪರಿಗೆಯಲ್ಲಿ ಹದವಾಗಿ ಬೆಂದ ಅಡಿಕೆಯ ಕಮಟು ವಾಸನೆ ಮೂಗಿಗೆ ಬಡಿದಿತ್ತು. ಅಟ್ಟದಿಂದಲೇ ಸುಶೀಲತ್ತೆ.

"ಹೋಗಿ ನೋಡೆ, ರುಕ್ಕು–ಅಡಿಕೆ ಹದವಾಗಿ ಬೆಂದಿರೊ ಹಾಗಿದೆ" ಎಂದು ಕೂಗಿದಳು. ರುಕ್ಮಿಣಿ ತಟ್ಟನೆದ್ದು ಅಂಗಳಕ್ಕೆ ನಡೆದಳು. ಅನ್ನ ಬೆಂದ ಹಾಗೆ ಬೆಂದಿದೆಯೆ ಎಂದು ಪರೀಕ್ಷಿಸಿ ಖಚಿತಪಡಿಸಿಯಾದ ಬಳಿಕ, ರುಕ್ಮಿಣಿಯು ಬೆಂದ ಅಡಿಕೆಗಳನ್ನು ಈಚಲು ಮಂಕರಿಗಳಿಗೆ ತುಂಬುವುದರಲ್ಲಿ ನಿರತಳಾದಳು.

"ಹೆಣ್ಣಾಳುಗಳು ಬಂದರೇನೆ?" –ಅಟ್ಟದಿಂದಲೆ ಸುಶೀಲಮ್ಮನ ಗರ್ಜನೆ.

"ಹೇಳಿ ಕಳಿಸಿದೀನಿ. ಇನ್ನೇನು ಬರಬಹುದು" ಎನ್ನುತ್ತ, ಬೆಂದ ಅಡಿಕೆಗಳನ್ನು ಮಂಕರಿಗಳಿಗೆ ತುಂಬಿದಳು.

ಹೆಣ್ಣಾಳುಗಳು ಬರುವ ವೇಳೆಗೆ ಇನ್ನೂ ಅಟ್ಟದಲ್ಲಿ ತೆಂಗಿನ ತರಳು, ಪಾತ್ರೆ ಪರಡು, ಹುರಿ ಹಗ್ಗ ಇತ್ಯಾದಿಗಳನ್ನು ಓರಣಗೊಳಿಸುವುದರಲ್ಲೆ ಸುಶೀಲಮ್ಮ

ಮಗ್ನಳಾಗಿದ್ದಳು.

ಹೆಣ್ಣಾಳುಗಳು ಬಂದೊಡನೆಯೆ ಮಂಕರಿಗಳಲ್ಲಿ ಬಟ್ಟಲು, ಲವಂಗದ ಚುರು, ಅಷ್ಟಭಾಗದ ಚೂರು– ಈ ರೀತಿ ಕತ್ತರಿಸಿ, ಚಾಪೆಗಳ ಮೇಲೆ ಒಣಹಾಕುವುದರಲ್ಲಿ ರುಕ್ಮಿಣಿಯು ತಾನೂ ಅವರಿಗೆ ಜೊತೆಯಾಗಿದ್ದಳು. ಅಷ್ಟರಲ್ಲಿ ಅಟ್ಟದಿಂದ ಇಳಿದು ಬಂದು ಸುಶೀಲ,

"ಇಲ್ಲೆ ಶ್ಯಾನುಭೋಗರ ಮನೆ ಹತ್ತಿರ ಕೊಂಚ ಹೋಗಿ ಬರ್ತೇನೆ...ನೆನಪಿರಲಿ ರುಕ್ಮಿಣಿ–ಒಣಗಿಸುವಾಗ ಬಟ್ಟಲಾದರೆ ಎರಡು ಬಿಸಿಲು, ಚೂರಾದರೆ ಒಂದು ಬಿಸಿಲೇ ಸಾಕು" ಎಂದು ರುಕ್ಮಿಣಿಗಿಂತಲೂ (ಎಲ್ಲ ವಿಚಾರಗಳಂತೆ!) ಅಡಿಕೆ ಪಾಕು ಮಾಡುವುದರಲ್ಲಿಯೂ ಕೂಡ ತನ್ನ ಅನುಭವವೇ ಹಿರಿದೆಂಬುದನ್ನು ಹೆಣ್ಣಾಳುಗಳೆಲ್ಲರ ಮುಂದೆಯೂ ಸಾರುವಂತೆ ಹೇಳಿ ಹೋದಳು.

* * * *

ಅಪರೂಪಕ್ಕೆ ಗಂಟುಬೀಳುತ್ತಿದ್ದ ಸರಸಿ ಈ ದಿನವೂ ದುಂಬಾಲು ಬಿದ್ದು ರುಕ್ಮಿಣಿಯ ಸಂಗಡ ತೋಟಕ್ಕೆ ಬಂದಿದ್ದಳು. ತೋಟದಲ್ಲಿ ಕೃಷ್ಣಶಾಸ್ತ್ರಿಗಳು ಆಳುಗಳನ್ನು ಕೂಡಿಕೊಂಡು ವೀಲೆಯದೆಲೆ ಹಂಬುಗಳನ್ನು ಅಡಿಕೆ ಮರಗಳಿಂದ ಇಳುಕಿ, ಅನಂತರ ಅದನ್ನು ಮಂಡಿಯುದ್ಧ ಗುಂಡಿಗಳಲ್ಲಿ ಹೂಳಿ, ಪಾತಿಗಳನ್ನು ಮಾಡಿ, ಗೊಬ್ಬರ ಹಾಕಿ, ಅಲ್ಲಲ್ಲಿ ತೋಡಿದ್ದ ನೆಲ ಬಾವಿಗಳಿಂದ ಮಣ್ಣಿನ ಗಡಿಗೆಗಳಲ್ಲಿ ತಂದು ನೀರುಣಿಸುತ್ತಿದ್ದರು. ಸರಸಿಗೆ ಇದೆಲ್ಲ ಹೊಸದಾಗಿ ಕಂಡು,

"ಇದೆಲ್ಲ ಯಾಕೆ?... ಯಾಕೆ ಹೀಗೆ ಮಾಡ್ತಿದಾರಕ್ಕ?" –ವಿವರಣೆ ಕೇಳಿದಳು.

"ನೋಡ್ತಿದೀಯಲ್ಲ ಸರಸಿ. ಅವರೆಲ್ಲರೂ ವೀಳೆಯದೆಲೆ ಹಂಬುಗಳನ್ನು ಅಡಿಕೆ ಮರಗಳಿಂದ ಕೆಳಕ್ಕೆ ಇಳಿಸ್ತಾ ಇದಾರೆ. ಮೂರು ವರ್ಷಕ್ಕೊಮ್ಮೆ ಹೀಗೆ ಮಾಡ್ತಾರೆ."

"ಯಾಕೆ ಇಳಿಸಬೇಕು?"

"ಯಾಕೆ ಅಂದರೆ– ಈ ಹಂಬುಗಳು ಹಳೇದಾಗಿರುತ್ವೆ. ಹೀಗೆ ಮಾಡಿ ಹೊಸ ಹಂಬುಗಳನ್ನು ಬೆಳೆಸ್ತಾರೆ... ಆ ಕಡೆ ನೋಡು. ಬಿದಿರೇಣಿ ಮೇಲೆ ಹತ್ತಿ ಆಳುಗಳು ಹೇಗೆ ಅಡಿಕೆ ಮರಗಳನ್ನು ಬಿಗಿಯಾಗಿ ಹಿಡಿದಿರೊ ಪಲ್ಲಿಗಳನ್ನ ಮತ್ತು ನಾರಿನ ಕಟ್ಟುಗಳನ್ನು ಸಡಿಲಿಸಿ ಇಳಿಸ್ತಾ ಇದಾರೆ!..."

"ಏನೋಮ್ಮ ನನಗೊಂದೂ ಅರ್ಥವಾಗಲ್ಲ. ನಾನೂ ಆ ಬಿದಿರೇಣಿ ಮೇಲೆ ಹತ್ತಿ, ಮಾವನ ಹತ್ತಿರ ಹೋಗಬೇಕು. ಹತ್ತಿಸಿಕೊಡ್ತೀಯ, ಅಕ್ಕ?" – ದೊಡ್ಡವರ ಹಾಗೆ ಗಂಭೀರವಾಗಿ ಮಾತಾಡಿತು ಹುಡುಗಿ.

"ಮಾವ ಕೋಪಿಸ್ಕೋತಾರೆ. ಬೇಡಮ್ಮ...." ಎನ್ನುತಿದ್ದಂತೆ, ಶಾಸ್ತ್ರಿಗಳು ಆಗಲೆ ಬಿದಿರೇಣಿಯಿಂದ ಇಳಿಯಲು ಉಪಕ್ರಮಿಸಿದ್ದರು. ಸರಸಿಯ ರಂಬಾಟವನ್ನು ಅಲ್ಲಿಂದಲೆ ಗಮನಿಸಿ,

"ಹೋಗಲಿ ಕರೆದುಕೊಂಡು ಬಾ, ರುಕ್ಮಿಣಿ, ಅವಳ ಚಪಲ ಕೊಂಚ ತೀರಿಸೋಣ" ಅಂದದ್ದೇ ತಡ, ರುಕ್ಮಿಣಿಯಿಂದ ತನ್ನ ಕೈ ಬಿಡಿಸಿ ಓಡಿಹೋದಳು.

ಕೆಳಗಿನ ಎರಡು ಮೆಟ್ಟಿಲು ತನಕ ಏಣಿಯಿಂದ ಇಳಿದು, ಕೈ ನೀಡಿ ಸರಸಿಯನ್ನು ಮೆಲ್ಲನೆ ಏಣಿಯ ಮೇಲುಗಡೆ ಹತ್ತಿಸಿಕೊಂಡರು ಶಾಸ್ತ್ರಿಗಳು, ಆ ಬಳಿಕ ಅವಳನ್ನು ಮುಂದೆ ಬಿಟ್ಟು, ತಾವು ಹಿಂದೆ ಇರುತ್ತ ಐದಾರು ಮೆಟ್ಟಿಲು ಹತ್ತಿಸಿ, ತರುವಾಯ ಕೆಳಗಿಳಿಸಿ, ತಾವೂ ಕೆಳಗಿಳಿದರು. ಕೆಳಗೆ ಇಳಿದವರೆ,

"ಇದೇನು ಕೇಶವಯ್ಯ, ಈ ದಿನ ನಿನ್ನ ಮುಖವನ್ನು ಇಷ್ಟು ಸಪ್ಪಗೆ ಮಾಡಿಕೊಂಡಿದ್ದೀಯ?... ಯಾವಾಗಲೂ ಖುಷಿಯಾಗೇ ಇರ್ತಿದ್ದೋನಿಗೆ ಈ ದಿನ ಏನಾಯ್ತು?" ಎಂದದ್ದು ಕಿವಿಗೆ ಬಿದ್ದು, ರುಕ್ಮಿಣಿ ಹಿಂದಿರುಗಿ ನೋಡಿದಳು.

ಅವಳ ಬೆನ್ನ ಹಿಂದೆಯೇ ಕೇಶವಯ್ಯ ಜೋಲುಮುಖ ಹಾಕಿ ನಿಂತಿದ್ದ. ಅವನು ಬಂದು ಆಗಲೇ ಕೆಲ ಸಮಯ ಕಳೆದಿರಬಹುದು.

"ಅಗ್ರಹಾರಕ್ಕೆ ಕೊಟ್ಟಿರುವ ನನ್ನ ಅಕ್ಕನಿಗೆ, ಅವಳ ಗಂಡ ರಾಮಸ್ವಾಮಯ್ಯ ತೀರಿಕೊಡ್ರಲ್ಲ– ಆ ಪ್ರಯುಕ್ತ ನಮ್ಮಕ್ಕನಿಗೆ ಅವಳ ಗಂಡನ ಮನೆಯೋರು, ಅದರಲ್ಲೂ ರಾಮಸ್ವಾಮಯ್ಯನ ತಾಯಿ, ಅವನ ಚಿಕ್ಕಮ್ಮ ಎಲ್ಲರೂ ಸೇರಿ, ಹೋದ ಮಂಗಳವಾರ ತಲೆ ಬೋಳಿಸಿದರಂತೆ..." ಇಷ್ಟು ನುಡಿದು ಕೇಶವಯ್ಯ ಮಾತು ನಿಲ್ಲಿಸಿದ. ಕೇಶವಯ್ಯ ಈ ರೀತಿ ತೀವ್ರವಾಗಿ ಕುದಿಯುವುದನ್ನು ರುಕ್ಮಿಣಿಯು ಕಂಡಿದ್ದೇ ಇಲ್ಲ.

"ಎಲ್ಲರ ಮನೇಲು ಇದೇ ಗೋಳು. ಈ ಶಾಪದಿಂದ ನಮ್ಮ ಸಮಾಜಕ್ಕೆ ಎಂದು ಮುಕ್ತಿ ದೊರೆಯುತ್ತೊ, ಆ ಪರಮಾತ್ಮನಿಗೇ ಗೊತ್ತು." –ಒಂದೊಂದು ಮಾತನ್ನೂ ತಮ್ಮ ಹೃದಯದಲ್ಲಿ ತುಂಬಿದ್ದ ಅನುಕಂಪದಲ್ಲಿ ಅದ್ದಿ ಅದ್ದಿ ತೆಗೆದಂತೆ ಶಾಸ್ತ್ರಿಗಳು ಆಡಿದ್ದರು.

ಆ ಸನ್ನಿವೇಶ ರುಕ್ಮಿಣಿಯ ಮನದಲ್ಲಿ ತನ್ನ ಕತೆಯನ್ನೆ ಮತ್ತೊಮ್ಮೆ ಮರುಕಳಿಸಿದಂತಾಯಿತು. ತನ್ನ ಪತಿ ದೈವಾಧೀನರಾದಾಗ ಸುಶೀಲತ್ತೆಯ ಜೊತೆಗೆ ದರುಮನಳ್ಳಿಯ ಇಡೀ ಬ್ರಾಹ್ಮಣ ಸಮುದಾಯ ತನ್ನ ತಲೆ ಬೋಳಿಸಬೇಕೆಂದು ಕಟ್ಟುಗ್ರ ಆಗ್ರಹ ವ್ಯಕ್ತಪಡಿಸಿದಾಗ ಮಾವನವರು ಬಂಡೆಯಂತೆ ಅಚಲವಾಗಿ ನಿಂತು ಅವರೆಲ್ಲರನ್ನೂ ಏಕಾಂಗಿಯಾಗಿ ವಿರೋಧಿಸಿದ್ದರು. ಈ ಎಳೆಪ್ರಾಯದ

ತರುಣಿಯ ಮಂಡೆ ಬೋಳಿಸಿ ವಿರೂಪಗೊಳಿಸಲು ನಾನೆಂದೂ ಒಪ್ಪಲಾರೆ, ಎಂದು ಖಚಿತವಾಗಿ ನುಡಿದಿದ್ದರು...

"ನಿಮಗೆ ಬಹಿಷ್ಕಾರ ಹಾಕಬೇಕಾಗುತ್ತದೆ" ಎಂದು ಬ್ರಾಹ್ಮಣ ಮುಖಂಡರು ಗುಡುಗಿದ್ದರು. ಎಲ್ಲರಿಗಿನ್ನ ಅತಿಯಾಗಿ ಆರ್ಭಟಿಸಿವನು ಇದೇ ಕೇಶವಯ್ಯ!– ಎಂಥ ವಿಪರ್ಯಾಸ!

"ಬಹಿಷ್ಕಾರ ಹಾಕ್ತಿರೇನ್ರಯ್ಯ– ಹೋಗಿ ಹಾಕ್ಕೊಳಿ". ದೃಢವಾಗಿ ಹೇಳಿ, ರೋಷದಿಂದ ಹೆಜ್ಜೆಗಳನ್ನು ಎತ್ತೆತ್ತಿ ಹಾಕುತ್ತ, ಹೊರಜಗುಲಿಯಿಂದ ಮಾವಯ್ಯ ಮನೆಯೊಳಗೆ ಬಂದಾಗ, ಸುಶೀಲತ್ತೇ ಸುಮ್ಮನಿರಲಿಲ್ಲ.

ಆ"ಆಚಾರ, ಬಹು ಪ್ರಾಚೀನ ಕಾಲದಿಂದಲೂ ನಡೆದು ಬಂದ ಪದ್ಧತಿ. ಅದಕ್ಕೆ ವಿರೋಧವಾಗಿ ಹೋಗಬಾರದು, ಕಿಟ್ಟಣ್ಣ. ಅದರಲ್ಲೂ ಈ ಸಣ್ಣ ವಿಷಯಕ್ಕೆ ಇಡೀ ಸಮಾಜವನ್ನೇ ಮೈಮೇಲೆ ಹಾಕಿಕೊಳ್ಳುವುದರಲ್ಲಿ ಯಾವು ಜಾಣತನವಿದೆ?– ನೀನೇ ಹೇಳು..." ಹೀಗೆ ಇನ್ನೂ ಏನೇನೂ ಗಳಹುವುದರಲ್ಲಿದ್ದಳು ಸುಶೀಲತ್ತೆ.

"ಸುಶೀ, ನೀನು ಮಾತಾಡಬಾರದು, ಸುಮ್ಮನಿರು... ನೀನು–ಬಾಲ ಕಳೆದುಕೊಂಡಿರುವ ನರಿ" ಎಂದು ಕಠಿಣವಾಗೇ ಹೇಳಿದರು. ಈ ಮಾವಯ್ಯನ ಈ ಚುಚ್ಚು ಮಾತು ಅತ್ತೆಯ ಬಾಯಿ ಮುಚ್ಚಿಸಿತ್ತು...

ಆದರೆ ಸಕೇಶಿಯಾಗಿ ರುಕ್ಮಿಣಿ ಉಳಿದದ್ದು ಕೆಲವು ಕಾಲ, ಅವಳೊಬ್ಬಳಿಗೆ ಅಲ್ಲದೆ ಕೃಷ್ಣಶಾಸ್ತ್ರಿಗಳಿಗೂ ಬ್ರಾಹ್ಮಣ ಸಮುದಾಯ ಅನೇಕ ಬಗೆಯಲ್ಲಿ ಕಿರುಕುಳ ಕೊಟ್ಟಿತ್ತು. ಆ ಸಮಾಜದಲ್ಲಿ ಒಳ್ಳೆಯದು ಕೆಟ್ಟದ್ದು ಏನು ಸಂಭವಿಸಿದರೂ ಈ ಮನೆಯವರಿಗೆ ಅಂಥ ಸಮಾರಂಭಗಳಿಗೆ ಪ್ರವೇಶವಿರಲಿಲ್ಲ. ಹಾಗೆಯೇ ಈ ಮನೆಯಲ್ಲಿ ಯಾವ ಶುಭ ಅಶುಭಕ್ಕೂ ತಾವು ಭಾಗಿಯಾಗಬಾರದೆಂದು ಅವರೆಲ್ಲರೂ ನಿಶ್ಚಯಿಸಿದ್ದರು. ಇದರ ಬಿಸಿ ವ್ಯಾಪಕವಾಗಿ ರುಕ್ಮಿಣಿಗೆ ತಟ್ಟಿತೇ ವಿನಹ ಶಾಸ್ತ್ರಿಗಳಿಗಲ್ಲ. ಅವರು ಎಂದಿನಂತೆ ನಿರ್ಲಿಪ್ತವಾಗಿ ತಮ್ಮ ತೋಟ ತುಡಿಕೆ ದೇವರ ಪೂಜೆಗಳಲ್ಲಿ ನಿರತವಾಗಿ ಏನೂ ಅಂಟದಂತೆ ಇದ್ದುಬಿಟ್ಟರು. ರುಕ್ಮಿಣಿಯಾದರೊ ಮನೆಯ ಹೊರಗೆ, ಒಳಗೆ ಹಿಂಸೆ ಅತಿಯಾಯಿತು. ಹೊರಗಿನವರ ಹಿಂಸೆಯನ್ನು ಅವಳು ಹೇಗೊ ಸಹಿಸಬಲ್ಲವಳಾಗಿದ್ದಳು. ಹಾಗೆ ಸಹಿಸಿಕೊಳ್ಳಲು ಆಗಾಗ ರುಕ್ಮಿಣಿಯ ಮನೆಗೆ ಬಂದು, ತಮ್ಮ ಮನೆಗೂ ಕರೆದೊಯ್ದು ವೆಂಕಣ್ಣಜೋಯಿಸರ ಹಿರಿಯ ಮಗಳು ನಾಗಲಕ್ಷ್ಮಿಯು ನೀಡುತ್ತಿದ್ದ ಸಹಾನುಭೂತಿ ಉಪಚಾರಗಳು ತುಂಬ ಸಹಾಯಕವಾಗಿದ್ದುವು. ಆದರೆ ಸುಶೀಲತ್ತೆಯ ಒಳಗಿನ ಕಾಟ ಮಾತ್ರ ಸಹಿಸಲು ದುಸ್ಸಾಧ್ಯವಾಗಿತ್ತು...

"ನಿನ್ನಿಂದ ಕಣೆ ನಮ್ಮ ಮನೆಗೆ ಬರಬಾರದ ಅಪತ್ತು ಬಂತು–ನೆಂಟರು, ಇಷ್ಟರು ಎಲ್ಲಾರಿಂದಲೂ ಬಹಿಷ್ಕಾರ ಹಾಕಿಸಿಕೊಂಡು ಕಿಟ್ಟಣ್ಣ ಒಳಗೆ ಕೊರಗ್ತಿದ್ದಾನೆ...ನಿಂಗೇನು ಲಂಗಿಲ್ಲ. ಲಗಾಮಿಲ್ಲ. ನೀನು ಹೂ–ಅಂದಿದ್ದರು ಅವನೇನು ಬೇಡ ಅಂತಿದ್ದನೆ?... ಹರಾಮಿ, ಹರಾಮಿ. ನಿನ್ನ ಹರಾಮುಖೋರತನದಿಂದ ನಮ್ಮಣ್ಣನ ಮನೆತನದ ಹೆಸರು ಮಣ್ಣುಗೂಡಿಹೋಯ್ತು!". ಬೆಳಗಾಯಿತು ಎಂದರೆ ಇಂಥವೆ ಮೂದಲಿಕೆಯ ಈಟಿಗಳಿಂದ ಇರಿದು ಇರಿದು ನೋಯಿಸುತ್ತಿದ್ದಳು.

ಬೇಕೆಂದು ಜಗಳ ತೆಗೆಯುವುದು, ಕೆನ್ನೆಗೆ ತಿವಿಯುವುದು, ಮುಂದಲೆ ಹಿಡಿದು ಜಗ್ಗುವುದು ಇವು ಸುಶೀಲತ್ತೆಯ ದಿನಚರಿಯಲ್ಲಿ ಸರ್ವೇಸಾಮಾನ್ಯವಾಗುತ್ತ ಬಂದವು. ಮನೆಯೊಳಗೆ ಹೆಚ್ಚು ಕಡಿಮೆ ಪ್ರತಿನಿತ್ಯವೂ ಒಂದಲ್ಲ ಒಂದು ರೀತಿಯಲ್ಲಿ ನಡೆಯುತ್ತಿದ್ದ ಈ ವ್ಯಾಪಾರ ಸೂಕ್ಷ್ಮಮತಿಯಾದ ಕೃಷ್ಣಶಾಸ್ತ್ರಿಗಳ ಗಮನಕ್ಕೂ ಬಾರದೇ ಹೋಗಲಿಲ್ಲ. ಆದರೂ ಇಂದೊ ನಾಳೆಯೊ ಸರಿಹೋದೀತೇನೊ ಎಂದು ಸುಮ್ಮನಿದ್ದರು.

ಒಂದು ದಿನ ರುಕ್ಮಿಣಿಗೆ ನಾಲ್ಕನೇ ನೀರು. ಬೇಕೆಂದೇ ತನಗೆ ಆ ಕೆಲಸ ಈ ಕೆಲಸ ಎಂದು ನೆಪ ಹೂಡಿ, ಸುಶೀಲ ಹಗಲು ಕಳೆಯುವವರೆಗೂ ಕಾಲ ತಿಳ್ಳಿದ್ದಳು. ರುಕ್ಮಿಣಿಯ ದುರದೃಷ್ಟಕ್ಕೆ, ವೆಂಕಣ್ಣ ಜೋಯಿಸರ ಹೆಣ್ಣುಮಕ್ಕಳು ಕಟ್ಟೆಪುರದ ತಮ್ಮ ಚಿಕ್ಕಮ್ಮನ ಮನೆಗೆ ಪ್ರಯಾಣ ಹೋಗಿದ್ದುದರಿಂದ ರುಕ್ಮಿಣಿಗೆ ಆ ಬಾಲಕಿಯರ ನೆರವೂ ತಪ್ಪಿತ್ತು. ಲಕ್ಷಮ್ಮನವರನ್ನು ಕೇಳಿದರೆ ಇವೊತ್ತೇಕೊ ನನಗೆ ಮೈಲಿ ಸ್ವಸ್ಥವಿಲ್ಲಮ್ಮ ಎಂದು ಜಾರಿಕೊಂಡಿದ್ದರು. ಆ ದಿನ ಕೃಷ್ಣಶಾಸ್ತ್ರಿಗಳು ಗಾಡಿಯಲ್ಲಿ ಬಾಳೆಗೊನೆಗಳನ್ನು ಸಂತೆಗೆ ಕೊಂಡುಹೋಗಿದ್ದು, ಅವರು ಊರಿಗೆ ಮರಳಲು ಇಳಿಹೊತ್ತೇ ಆಗುವುದೆಂದು ಅನುಭವದಿಂದ ಅರಿತಿದ್ದುದರಿಂದ, "ನೀರು ಹಾಕಿ, ಅತ್ತೆ" ಅಂದು ರುಕ್ಮಿಣಿಯು ಪರಿಪರಿಯಾಗಿ ಬೇಡಿದರೂ "ತಾಳೆ, ಇನ್ನು ಸ್ವಲ್ಪ ಕೆಲಸವಿದೆ. ಅದನ್ನು ಮುಗಿಸಿ ಬರ್ತೇನೆ" ಎಂದು ಹಾಗು ಹೀಗೂ ಕಾಲಯಾಪನೆ ಮಾಡಿದ್ದಳು, ಸುಶೀಲ.

ಕೃಷ್ಣಶಾಸ್ತ್ರಿಗಳು ಎತ್ತಿನ ಗಾಡಿಯಿಂದ ಇಳಿದವರೆ, ತಾವು ಸಂತೆಯಿಂದ ತಂದ ಬಿಸ್ಕತ್ತು, ಪೆಪ್ಪರ್‌ಮಿಂಟುಗಳನ್ನು ಸರಸಿಗೆ ಇತ್ತು. ಇನ್ನೂ 'ಹೊರೆಗಡೆ ಇರುವ ಸೊಸೆಯನ್ನು ಗಮನಿಸಿ,

"ಯಾಕೆ, ನೀರಾಗಿಲ್ಲವೆ ಇನ್ನೂ?" ಪ್ರಶ್ನಿಸಿದಾಗ, ರುಕ್ಮಿಣಿ ಏನು ಹೇಳಲೂ ತೋಚದೆ ಉಂಗುಷ್ಠದಿಂದ ನೆಲ ಕೆರೆಯುತ್ತ ನಿಂತಿದ್ದಳು. ಒಳಗೆ ಅದೇನೊ

ಕೆಲಸ ಮಾಡುತ್ತಿದ್ದ ಸುಶೀಲ, ಯಾವ ಮಾಯದಲ್ಲೊ ಅಣ್ಣ ಹೇಳಿದ್ದನ್ನು ಆಲಿಸಿ, ದುಡದುಡನೆ ಧಾವಿಸಿ ಬಂದು,

"ಕೈ ಬಿಡುವಿರಲಿಲ್ಲ, ಕಿಟ್ಟಣ್ಣ. ನೀರು ಕಾಯಿಸಿಟ್ಟಿದೀನಿ. ಇನ್ನೇನು ಹಾಕ್ತೀನಿ. ಅವಳು ಬೇಗ ಒಳಗೆ ಬಂದು ತಾನೆ ಏನು ಮಾಡೋದಿದೆ?... ಎಲ್ಲಾ ಹೊರೇನು ನಾನು ತಾನೆ ಹೊತ್ತಿರೋದು" –ಅರಳು ಸಿಡಿಯೋ ತರ ಸಿಡಿದಿದ್ದಳು. ಕೃಷ್ಣಶಾಸ್ತ್ರಿಗಳು ತಲೆಬಾಗಿ ನಿಂತ ಸೊಸಯತ್ತ ಕರುಣಾಪೂರಿತವಾಗಿ ಒಮ್ಮೆ ದೃಷ್ಟಿ ಚೆಲ್ಲಿ, ಮಾತಿಲ್ಲದೆ ಒಳಗೆ ನಡೆದಿದ್ದರು.

ಸುಶೀಲ ಅವರು ಕೈಕಾಲು ತೊಳೆಯಲು ನೀರು ಕೊಟ್ಟಳು. ಅನಂತರ

"ಬೇಗ ಬೇಗ ಸಂಧ್ಯಾವಂದನೆ ಮುಗಿಸಿ, ಊಟಕ್ಕೆ ಏಳು" ಎಂದು ಒತ್ತಾಯಿಸಿದಳು.

"ಮೊದಲು ರುಕ್ಮಿಣಿಗೆ ನೀರಾಗಲಿ" ಎಂದರು ಶಾಸ್ತ್ರಿಗಳು. ಇದರಿಂದ ಅವಳ ನರನರವೂ ಬುಸುಗುಟ್ಟುವಂತಾಯಿತು. ಅವಳ ಅಸಹಾಯಕತೆಗೆ ಸೊಪ್ಪುಹಾಕದೆ, ಸಂಧ್ಯಾವಂದನೆ ಪೂಜಾದಿಗಳು ಮುಗಿದರೂ ರುಕ್ಮಿಣಿಗೆ ನೀರಾಗುವವರೆಗೂ ತೂಗುಮಣೆಯ ಮೇಲೆ ಕುಳಿತು, ಸರಸಿಯನ್ನೂ ತಮ್ಮ ಪಕ್ಕದಲ್ಲೇ ಕೂರಿಸಿಕೊಂಡು, ಮೆಲ್ಲನೆ ತೂಗಿಕೊಳ್ಳುತ್ತ, ಯಾವುದೋ ಕ್ಲಿಷ್ಟವಾದ ಸಮಸ್ಯೆಯ ಸುಳಿಯಲ್ಲಿ ಸಿಕ್ಕಿದವರಂತೆ ತೋರುತ್ತಿದ್ದರು... ಸಂಜೆಯ ವೇಳೆ ನೀರೆರೆದುದರಿಂದ ರುಕ್ಮಿಣಿಯ ತಲೆಗೂದಲು ಶೀಘ್ರವಾಗಿ ಆರುವಂತಿರಲಿಲ್ಲ. ಆಗ್ಗಿಷ್ಟಿಕೆಯ ಕೆಂಡಕ್ಕೆ ಸಾಂಬ್ರಾಣಿ, ಹಾಲುಮಡ್ಡಿ ಸುರಿದು, ಅದರ ಮೇಲೆ ಬಿದಿರುಕುಕ್ಕೆಯನ್ನು ದಬ್ಬ ಹಾಕಿ, ಆ ಕುಕ್ಕೆಯ ಸಂದಿಸಂದಿಯಲ್ಲೂ ಪರಿಮಳಭರಿತ ಧೂಪದಲ್ಲಿ ತಲೆಗೂದಲನ್ನು ಚೆಲ್ಲಿ ಅದನ್ನು ಆರಿಸಿಕೊಳ್ಳಲು ಇಲ್ಲೇನು ನನ್ನ ತಾಯಿ ಇದ್ದಾಳೆಯ?– ಎಂಬ ಮರುಕ ಆ ಕ್ಷಣಕ್ಕೆ ರುಕ್ಮಿಣಿಯಲ್ಲಿ ಅಂಕುರವಾಯಿತು. ನಿಟ್ಟುಸಿರಿಡುತ್ತ, ಟವೆಲಿನಿಂದ ಆದಷ್ಟು ಚೆನ್ನಾಗಿ ತೇವವನ್ನು ಒರೆಸಿ, ಆದರೆ ಇನ್ನೂ ಉಳಿದ ಹಸಿಯನ್ನು ಸ್ಪರ್ಶದಿಂದ ಗುರುತಿಸಿ, ಅದನ್ನು ತೀಡಿ ತನ್ನ ಉದ್ದನೆ ಕೂದಲಿನ ತುದಿಯಲ್ಲಿ ಸಣ್ಣದಾದ ಕಿರಿಗಂಟು ಹಾಕಿದ್ದಳು... ಮುಟ್ಟು ಕಳೆದ ಐದನೇ ನೀರು ಎರೆಯುವಾಗಲೂ ಸಂಜೆಯಷ್ಟು ತಡಮಾಡದಿದ್ದರೂ ಮಧ್ಯಾಹ್ನ ದಾಟಿಸಿಯೇ ನೀರು ಎರೆದಿದ್ದಳು ಸುಶೀಲ!...

ಊಟ ಮುಗಿದುದೇ ಸಮ, ಮೊದಲು ಮಲಗಿದವಳು ಸರಸಿ. ಅತ್ತೆ ಯಾವ ಕೋಪಕ್ಕೊ ಅಷ್ಟು ಬಿಸಿನೀರು ಎರೆದಿದ್ದುದ್ದರಿಂದ ಸರಸಿಯ ಪಕ್ಕದಲ್ಲಿ ಮಲಗಿದ ರುಕ್ಮಿಣಿಗೂ ತುಸು ವೇಳೆಯಲ್ಲೆ ನಿದ್ರೆ ಆವರಿಸಿತ್ತು. ಕೃಷ್ಣಶಾಸ್ತ್ರಿಗಳು

ಹಜಾರದಲ್ಲಿ ಮಲಗಿ ಕಣ್ಣು ಮುಚ್ಚಿದರೂ ಇವರಿಬ್ಬರು ಹೆಂಗಸರು ಪರಸ್ಪರ ಹೊಂದಿ ನಡೆಯದಿದ್ದುದು, ಮುಂದೇನು? ಎಂಬ ಆತಂಕಕ್ಕೆ ಎಡೆಮಾಡಿಕೊಟ್ಟಿತ್ತು. ಅಷ್ಟೇ ಸಾಲದೆಂಬಂತೆ ಸುಶೀಲ ಐದೈದು ನಿಮಿಷಕ್ಕೊಮ್ಮೆ ನಡುಮನೆಯಿಂದ ಹೊರಬಂದು, ಅಣ್ಣ ಮಲಗಿದ್ದಾನೆಯೆ, ಇಲ್ಲವೆ ಎಂದು ಪರೀಕ್ಷಿಸಿ ಹೋಗುತ್ತಿದ್ದುದು ಅವರ ಕಾತರವನ್ನು ಹೆಚ್ಚಿಸಿತ್ತು. ಮೊದಲ ಬಾರಿ ಇಣಿಕಿ ನೋಡಿ 'ನಿದ್ದೆ ಬಂತ–ಕಿಟ್ಟಣ' ಪಿಸುಗುಟ್ಟಿರಬೇಕು. ಚಿಂತೆಯಲ್ಲಿ ಮುಳುಗಿದ್ದುದರಿಂದ ಕೇಳಿಸಿದರೂ ಉತ್ತರ ಕೊಡುವ ಗೋಜಿಗೆ ಅವರು ಹೋಗಿರಲಿಲ್ಲ. ಎರಡನೆಯ ಸಲ 'ಕಿಟ್ಟಣ್ಣ'– ಒಂದೇ ಪದ ಪ್ರಯೋಗ. ಕೊಂಚ ಏರಿದ ದನಿ. ಮೂರನೆಯ ಸರ್ತಿ ಅವರು ಮಲಗಿದ್ದ ಸ್ಥಳಕ್ಕೇ ಬಂದು ಪರೀಕ್ಷೆ!... ಈಗಲೀಗ ಸುಶೀಲಳ ವರ್ತನೆ ಶಾಸ್ತ್ರಿಗಳಿಗೆ ಅನುಮಾನ ತೀವ್ರಗೊಂಡಿತು. ಕಣ್ಣು ಮುಚ್ಚಿದರೂ ಮೈಯೆಲ್ಲ ಕಿವಿಯಾಗಿ, ಇದರಲ್ಲಿ ಏನೋ ರಹಸ್ಯವಿದೆಯೆಂದು ಅರೆಗಣ್ಣು ತೆರೆದು ನೋಡುತ್ತ, ಅವಳ ಒಂದೊಂದು ಚಲನವಲನದ ಮೇಲೂ ಗಮನವಿಟ್ಟು, ವೀಕ್ಷಿಸುತ್ತಿದ್ದರು. ಸುಮಾರು ಸಮಯ ಹೀಗೆ ಸಂದಿರಬೇಕು. ಇದು ಕೇವಲ ತಮ್ಮ ಕಲ್ಪನೆ ಇರಬೇಕೆಂದೂ ಈ ಚಿಲ್ಲರೆ ವಿಷಯಕ್ಕೆ ವಿಶೇಷಾರ್ಥ ಕಲ್ಪಿಸುವುದು ಅಸಾಧುವೆಂದೂ ಅವರು ತಮ್ಮ ಮನಸ್ಸಿಗೆ ಹೇಳಿಕೊಳ್ಳುತ್ತ, ಇನ್ನೇನು ನಿದ್ರಾದೇವಿಗೆ ವಶವಾಗುವುದರಲ್ಲಿದ್ದರು. ಅಷ್ಟರಲ್ಲಿ–ನಡುಮನೆಯಿಂದ ಹೊರಬಂದ ಒಂದು ಬೆಳಕು ಅವರ ಮುಚ್ಚಿದ ರೆಪ್ಪೆಗೂ ಚುರುಕು ಮುಟ್ಟಿಸಿದಂತಾಗಿ ಕಿರುಗಣ್ಣು ತೆರೆದು ಸೂಕ್ಷ್ಮವಾಗಿ ನಿರುಕಿಸಿದರು. ನಡುಮನೆಯಿಂದ ಹೊರಬಂದ ಸುಶೀಲ ದೀವಿಗೆ ಹಿಡಿದು ರುಕ್ಮಿಣಿ ಸರಸಿಯರು ಮಲಗಿದ್ದ ಕೋಣೆಯತ್ತ ಕಳ್ಳ ಹೆಜ್ಜೆಯಿಡುತ್ತ ಸಾಗಿದ್ದಳು. ಅವಳು ಅಲ್ಲಿಗೆ ಯಾಕಾದರೂ ಹೋಗುತ್ತಿದ್ದಾಳೆ ಎಂಬ ಚಿಂತೆ ಶಾಸ್ತ್ರಿಗಳನ್ನು ಕವಿಯಿತು. ಕಣ್ಣುಗಳನ್ನು ಪೂರ್ಣ ತೆಗೆದಾಗ ಅವರು ಕಂಡ ದೃಶ್ಯ ಅವರನ್ನು ಸೋಜಿಗಗೋಳಿಸಿತ್ತು... ಸುಶೀಲಳ ಒಂದು ಕೈಯಲ್ಲಿ ಸಣ್ಣ ದೀವಿಗೆ, ಇನ್ನೊಂದು ಕೈಯಲ್ಲಿ ಕತ್ತರಿ!– ಯಾಕೆ ಈ ಸಂಭ್ರಮ? ಕತ್ತರಿ ಹಿಡಿದು ಈ ನಿಶಿರಾತ್ರಿಯಲ್ಲಿ ಆ ಕೋಣೆಗೆ ಹೋಗಿ ಇವಳು ಮಾಡುವುದಾದರೂ ಏನು? ನೋಡೋಣ– ಎಂದು ಸದ್ದಾಗದಂತೆ ಎದ್ದು ಅವಳನ್ನು ಹಿಂಬಾಲಿಸಿದರು. ರುಕ್ಮಿಣಿಯ ಕೋಣೆಯ ಒಳಬಾಗಿಲಿನ ತಾಪಾಳು ಎಂದೋ ಮುರಿದುಹೋಗಿತ್ತು. ಅದನ್ನು ಒರಟಾಗಿ ಹಾಕಲು ಹೋಗಿ ಮುರಿದಿದ್ದವನು ತಮ್ಮ ಮಗ ವಿಶ್ವೇಶ್ವರ!– ಅದನ್ನು ರಿಪೇರಿ ಮಾಡಿಸಬೇಕು ಎನ್ನುವಷ್ಟರಲ್ಲಿ ಅವನೇ ತೀರಿಕೊಂಡಿದ್ದ. ಅನಂತರ ಅದರ ರಿಪೇರಿಯ ಅಗತ್ಯ ಹಿಂದೆ ಸರಿದಿತ್ತು... ಆದ್ದರಿಂದಲೆ ಸುಶೀಲೆ ಮೆಲ್ಲನೆ

ಸೂಕಿದೊಡನೆಯೆ ಆ ಬಾಗಿಲು ಸದ್ದಿಲ್ಲದೆ ತೆರೆಯಿತು. ಈಗಲೀಗ ಸುಶೀಲ ಅತ್ತ ಇತ್ತ ಕಣ್ಣು ಹೊರಳಿಸದೆ, ಕುರಿ ಕತ್ತಿರಿಸುವವರ ಏಕಾಗ್ರತೆಯಿಂದ ಬಲಮಗ್ಗುಲಾಗಿ ಮಲಗಿದ್ದ ರುಕ್ಮಿಣಿಯತ್ತ ಸಾಗಿದಳು. ಕೋಣೆಯ ಒಂದು ಮೂಲೆಗೆ ಇನ್ನೊಂದು ದೀವಿಗೆ ಉರಿಯುತ್ತಿದ್ದರೂ, ಅದರ ಬೆಳಕು ಸಾಲದೆಂದೇನೊ ಸುಶಿಲೆ ತಾನು ತಂದಿದ್ದ ದೀವಿಗೆಯನ್ನು ರುಕ್ಮಿಣಿಯ ತಲೆಯ ಹಿಂಭಾಗದ ಸನಿಯದಲ್ಲೆ ಇರಿಸಿದಳು. ಆನಂತರ ರುಕ್ಮಿಣಿಯ ಬೆನ್ನ ಮೇಲೆ ಚೆಲ್ಲಿವಂತೆ ಹರಡಿದ್ದ ತಲೆಗೂದಲನ್ನು ಉಪಾಯವಾಗಿ ನೀವಿ ಒಂದುಗೂಡಿಸಿ, ಎಡಗೈ ಮುಷ್ಟಿಯಲ್ಲಿ ಹಿಡಿದು, ಇನ್ನೊಂದು ಕೈಲಿದ್ದ ಕತ್ತರಿಯನ್ನು ಇನ್ನೇನು ಆ ಕೂದಲಿನ ಬುಡಕ್ಕಿಡಬೇಕು. ಅಷ್ಟರಲ್ಲಿ–

"ಹಾ.ಹಾ–ಸುಶೀ...ಏನ್ಮಾಡ್ತಿದೀಯ?" ಗರ್ಜನೆ ಕೇಳಿ, ಬೆಚ್ಚಿ ಹಾಗೆಯೇ ನೆಲಕ್ಕೆ ಕುಕ್ಕರಿಸಿದಳೂ!... ಈ ಗದ್ದಲದಲ್ಲಿ ಅವಳ ಕೈಲಿದ್ದ ಕತ್ತರಿ ಜಾರಿ ರುಕ್ಮಿಣಿಯ ಕುತ್ತಿಗೆಯ ಹಿಂಭಾಗಕ್ಕೆ ಬಿದ್ದು, ಅದರ ಭಾರ ಹಾಗೂ ತಣ್ಣನೆಯ ಸ್ಪರ್ಶ ರುಕ್ಮಿಣಿಯನ್ನು ಎಚ್ಚರಗೊಳಿಸಿತು. ಶಾಸ್ತ್ರಿಗಳು ಕೋಪವನ್ನು ಬಹು ಪ್ರಯಾಸದಿಂದಲೆ ನುಂಗಿದ್ದರು. ನಿಧಾನವಾಗಿ ಬಾಗಿ ಕತ್ತರಿಯನ್ನು ತಮ್ಮ ಕೈಗೆ ಎತ್ತಿಕೊಂಡಿದ್ದರು. ರುಕ್ಮಿಣಿಗೆ ಏನಾಗುತ್ತಿದೆ ಎನ್ನುವುದರ ಕಲ್ಪನೆ ತಟ್ಟನೆ ಹೊಳೆಯಲಿಲ್ಲ... ಮಾವಯ್ಯನಿಗೆ ಅತ್ತೆಯ ಮೇಲೆ ಅದೇಕೋ ಕೋಪ ಬಂದಿದೆ. ಅದಕ್ಕೇ ಕತ್ತರಿ ಹಿಡಿದು ಇಲ್ಲಿಗೆ ಓಡಿಸಿ ಬಂದಿರಬೇಕು!...

"ಬೇಡಿ, ಮಾವಯ್ಯ, ಸುಶೀಲತ್ತೆ ಎಂಥದೇ ಘೋರ ಅಪರಾಧ ಮಾಡಿದ್ದರೂ ದಯಮಾಡಿ ಕ್ಷಮಿಸಿ. ಅತ್ತೆಗೆ ಕೊಂಚ ಮುಂಗೋಪ. ನಾನೂ ಒಪ್ತೀನಿ. ಆದರೆ ಅವಳ ಹೃದಯ ಒಳ್ಳೇದು" ಎನ್ನುತ್ತ ರುಕ್ಮಿಣಿ ಶಾಸ್ತ್ರಿಗಳ ಕಾಲಿಗೆ ಬಿದ್ದಳು...

"ಅಯ್ಯೋ, ನೀನೇಕೆ ಕಾಲಿಗೆ ಬಿದ್ದೆ. ಏಳು, ಏಳು..." ಶಾಸ್ತ್ರಿಗಳು ಅವಳ ಭುಜ ಹಿಡಿದೆತ್ತಿದರು.

ಮತ್ತೆ ಶಾಸ್ತ್ರಿಗಳ ದೃಷ್ಟಿ ಸುಶೀಲಳಲ್ಲಿ ಕ್ಷಣಕಾಲ ನೆಟ್ಟಿತು. ಆ ದೃಷ್ಟಿಯಲ್ಲಿ, ತಮ್ಮ ತಂಗಿಯಾದವಳು ಇಂಥ ಹೇಯಕಾರ್ಯಕ್ಕೆ ಇಳಿಯಬಹುದೆ? ಎಂಬ ಅಪಾದನೆಯನ್ನು ಸುಶೀಲ ಗುರುತಿಸಿರಬಹುದು! ನಾಚಿಕೆ ಮತ್ತು ಅವಮಾನಗಳಿಂದ ಅವಳು ತಲೆತಗ್ಗಿಸಿದ್ದಳು. ಶಾಸ್ತ್ರಿಗಳು ಅಲ್ಲಿಂದ ದೃಷ್ಟಿ ಕಿತ್ತು ನಿರ್ಭಾವದಿಂದ ಎಂಬಂತೆ ಕೋಣೆಯಿಂದ ಹೊರಗೆ ನಡೆದಿದ್ದರು...

ಯಾಕೆ ಹೀಗೆ?– ಎಂದು ಆ ರಾತ್ರಿ ಪೂರಾ ರುಕ್ಮಿಣಿ ತಲೆ ಕೆಡಿಸಿಕೊಂಡೇ ಇದ್ದಳು... ಮಾರನೆಯ ಪ್ರಾತಃಕಾಲ ಎದ್ದವರೇ ಶಾಸ್ತ್ರಿಗಳು ರುಕ್ಮಿಣಿಗೆ ಹೇಳಿದ್ದರು, ಸುಶೀಲೆ ಕಿವಿಗಳಿಗೂ ಬೀಳುವಷ್ಟು ಗಟ್ಟಿಯಾಗಿ:

"ರುಕ್ಮಿಣಿ, ನಿನಗೂ ಸುಶೀಲೆಗೂ ದುರದೃಷ್ಟವಶಾತ್ ಹೊಂದಾಣಿಕೆ ಆಗ್ತಿಲ್ಲ. ಕೊಂಚಕಾಲ ನೀನು ನಿಮ್ಮ ತೌರಿಗೆ ಹೋಗಿ ಇದ್ದರೆ ಕ್ಷೇಮ."

ರುಕ್ಮಿಣಿ ಚಿಂತಾಕ್ರಾಂತಳಾದಳು...ಮಾವಯ್ಯ ಯಾಕೆ ಹೀಗೆ ಹೇಳುತ್ತಿದ್ದಾರೆ?... ತನ್ನದೇನು ತಪ್ಪು ಇದರಲ್ಲಿ?... ಇನ್ನು ಮುಂದೆ ಅತ್ತೆ ಹೇಳಿದಂತೆ ಕೇಳಿಕೊಂಡು ಬಿದ್ದಿರುವುದಾಗಿ ಹೇಳಬೇಕೆಂದು ತವಕಿಸಿದವಳು. ಆದರೆ ಬಾಯೇ ಹೊರಡಲಿಲ್ಲ!...

ಮುಂದೆ ಸ್ನಾನ, ಸಂಧ್ಯಾವಂದನೆ, ಪೂಜೆಪುನಸ್ಕಾರಗಳನ್ನು ಅವಸರವಸರವಾಗಿ ಮುಗಿಸಿ, ಆಳುಮಗ ಸೊಸಿಯನಿಗೆ ಲಕ್ಕನನ್ನು ಕರೆತರಲು ಅಪ್ಪಣೆ ಮಾಡಿದರು. ತಾನೂ ಸಹ ಜಾಗ್ರತೆ ಜಾಗ್ರತೆ ಸನ್ನದ್ಧಳಾಗಿ, ಅಡಿಗೆಕೋಣೆಯಲ್ಲಿ ಸೌದೆಯ ಸಣ್ಣ ಸಣ್ಣ ಸಿಗರುಗಳನ್ನು ಒಲೆಗೆ ಒಟ್ಟುತ್ತಿದ್ದ ಸುಶೀಲತ್ತೆಗೆ ಒಳಗಿನ ತಾಪವನ್ನೆಲ್ಲ ಹೇಗೊ ಬದಿಗೊತ್ತಿ,

"ಹೋಗಿ ಬರ್ತೀನಿ, ಸುಶೀಲತ್ತೆ" ಎಂದಳು. ಒಲೆಯ ಒಳಗಿನ ಸೌದೆಯ ಕೊಳ್ಳಿಗಳನ್ನು ರಭಸವಾಗಿ ಅತ್ತಿಂದಿತ್ತ ಹೊರಳಿಸುತ್ತ ರುಕ್ಮಿಣಿಯ ಮುಖವನ್ನು ಸಹ ನೋಡದೆ, 'ಸರಿ' ಎಂದಷ್ಟೆ ಕೊಸರಿ, "ನಾನೇನು ನಿನ್ನ ಹೋಗು ಎಂದೆನೆ?... ತಲೆ ಬೋಳಿಸಿ ಈಗಲೂ ಮಹಾರಾಯಿತಿ ಹಾಗಿರು" ಎಂದಳು.

ಆದರೆ ಅಡಿಗೆ ಮಾಡುವುದರಲ್ಲಿ ಸುಶೀಲ ಬಲು ಚೂಟಿ. ಅವರಿಗೆಲ್ಲ ಬೆಳಗಿನ ಉಪಾಹಾರದ ಜೊತೆಗೆ ದಾರಿಗೆಂದು ಆಗಲೆ ಬುತ್ತಿಯನ್ನೂ ಸಿದ್ಧಗೊಳಿಸಿದ್ದಳು... ಯಾವ ಮಾತೂ ಇಲ್ಲದೆ ಉಪಾಹಾರ ಮುಗಿದಿತ್ತು!...

ಗಾಡಿಗೆ ಕಮಾನು ಬೀಸುವುದರಲ್ಲಾಗಲಿ, ಗಾಡಿ ಹೊಡೆಯುವುದರಲ್ಲಾಗಲಿ ಆಳು ಸೊಸಿಯ, ಇನ್ನೂ ಚಿಕ್ಕ ವಯಸ್ಸಿನವನಿದ್ದು, ಅಷ್ಟು ಪರಿಣತಿ ಪಡೆದಿರಲಿಲ್ಲ. ಆ ಕಾರಣಕ್ಕಾಗಿಯೆ ಶಾಸ್ತ್ರಿಗಳು ಲಕ್ಕನನ್ನು ಕರೆಸಿದ್ದರು. ಲಕ್ಕ ಲವಲವಿಕೆಯಿಂದ ಕಮಾನು ಬಿಗಿಯುವುದನ್ನು ಮಾವಯ್ಯನೊಂದಿಗೆ ರುಕ್ಮಿಣಿಯೂ ನಿರೀಕ್ಷಿಸುತ್ತ ನಿಂತಿದ್ದಳು. ಕಮಾನು ಸಿದ್ಧವಾಗುತ್ತಲೂ ಆಳಿಗ ದನಕರು, ಎಮ್ಮೆಗಳ ಯೋಗಕ್ಷೇಮ ನೋಡಿಕೊಳ್ಳುವಂತೆ ಆಜ್ಞಾಪಿಸಿ, ಲಕ್ಕನನ್ನೇ ಗಾಡಿ ಹೊಡೆಯಲು ನೇಮಿಸಿದ್ದರು...

ರುಕ್ಮಿಣಿಯಿನ್ನೂ ಗಾಡಿಗೇ ಹತ್ತಿಲ್ಲ. ತಾನೂ ಅವರೊಡನೆ ಬರುವುದಾಗಿ ಸರಸಿ ಗಂಟುಬಿದ್ದಳು. ಶಾಸ್ತ್ರಿಗಳು ಮತ್ತು ರುಕ್ಮಿಣಿ ಪರಿಪರಿಯಲ್ಲಿ ರಮಿಸಿ ಬೇಡವೆಂದರೂ ಕೇಳದೆ ರಾಗರಾಗವಾಗಿ ರೋದಿಸತೊಡಗಿದಳು. ಕಡೆಗೆ ಕಟ್ಟೇಪುರದಿಂದ ಊರಿಗೆ ಮರಳಿದ್ದ ವೆಂಕಣ್ಣ ಜೋಯಿಸರ ಹೆಣ್ಣುಮಕ್ಕಳು ನಾಗಲಕ್ಷ್ಮಿ, ವಾಸಂತಿ, ಶಾಂತಿ ಮೂವರೂ ಸೇರಿ ಉಪಾಯವಾಗಿ "ಅವರು ಹೋದರೆ ಹೋಗ್ತಾರೆ ಬಾರೆ. ನಾವು ಆಟ ಆಡೋಣ" ಎಂದು ಪುಸಿ ಮಾಡಿ

ಅವಳನ್ನು ಶಾಂತಗೊಳಿಸಲು ಯತ್ನಿಸುತ್ತಿದ್ದರು. ಆದರೆ ಅವರ ಗಾಡಿ ಬ್ರಾಹ್ಮಣಕೇರಿಯ ಅವರ ಮನೆಯ ಮುಂದಿನ ಬೀದಿಯನ್ನು ದಾಟುವವರೆಗೂ ಸರಸಿಯ ಬಿಕ್ಕು ಕೇಳಿಸುತ್ತಲೇ ಇತ್ತು...

ಎತ್ತಿನ ಬಂಡಿ ದರುಮನಹಳ್ಳಿಯ ಗಡಿ ದಾಟುತ್ತಲೆ, ಮಾವಯ್ಯ ದನಿ ತಗ್ಗಿಸಿ ಹೇಳಿದರು:

"ಕೊಂಚಕಾಲ ಸಹಿಸಿದರೆ ಎಲ್ಲವೂ ಸರಿಹೋಗುತ್ತೆ. ತಂಗಿಯ ಸ್ವಭಾವ ಚಿಕ್ಕಂದಿನಿಂದಲೂ ಅಂಥದೇ. ಊಟಕ್ಕೆ ಕುಳಿತಾಗ ಇವರ ಅಕ್ಕನಿಗಿನ್ನ ಇವಳಿಗೇ ಮುಂಚೆ ಇಡಬೇಕು...(ಯಾವುದೋ ಕಾಯಿಲೆಯಿಂದ ತೀರಿಕೊಂಡಿದ್ದ ಹಿರಿಯ ಮಗಳ ನೆನಪಾಗಿ ಭುಜದ ಮೇಲಿನ ವಲ್ಲಿಯಿಂದ ಕಣ್ಣೊರೆಸಿಕೊಂಡು ಮಾತು ಮುಂದುವರಿಸಿದರು) ಇಲ್ಲದಿದ್ದರೆ ಮುನಿಸು. ಬಟ್ಟೆ ಬರೆ ವಿಷಯದಲ್ಲೂ ಅಷ್ಟೆ – ಇವಳ ಅಕ್ಕನಿಗೆ ಲಗ್ನವಾದಾಗ ಇವಳಿನ್ನೂ ಚಿಕ್ಕವಳು. ಧಾರೆಗೆ ತಂದ ಸೀರೆಯನ್ನು ಮೊದಲು ತನಗೆ ಉಡಿಸಿ, ಆಮೇಲೆ ಅಕ್ಕನಿಗೆ–ಎಂದು ಹಟ ಹಿಡಿದ್ದಳು...ಇಂಥ ಸಣ್ಣಪುಟ್ಟ ದುರ್ಗುಣಗಳನ್ನು ಬಿಟ್ಟರೆ, ಉಳಿದ ವಿಷಯಗಳಲ್ಲಿ ಸುಶೀಲೆ ಅಂಥ ಕೆಟ್ಟವಳೇನಲ್ಲ. ಮೊದಲು ದುಡುಕಿ, ಅನಂತರ ಪಶ್ಚಾತ್ತಾಪ ಪಡ್ತಾಳೆ–ನಿನ್ನ ವಿಚಾರದಲ್ಲೂ ಅಷ್ಟೆ..."

ಮಿಕಿ ಮಿಕಿ ಕಣ್ಣು ಬಿಡುತ್ತ,

"ನೀವು ಹೇಳೋದೊಂದೂ ನನಗರ್ಥವಾಗ್ತಾ ಇಲ್ಲ" ಎಂದಳು.

ಶಾಸ್ತ್ರಿಗಳು ಹಿಂದಿನ ರಾತ್ರಿ ನಡೆದುದನ್ನೆಲ್ಲ ಸಾಂಗವಾಗಿ ವಿವರಿಸಿದರು:

"ಅವಳಿಗೆ ಕೋಪ ಬಂದದ್ದು ನೀನು ಎಲ್ಲರಂತೆ ವಿಧವೆಯಾದ ಕೂಡಲೆ ಮಂಡೆ ಕೂದಲು ತೆಗೆಸಲಿಲ್ಲ ಎಂಬ ಕಾರಣಕ್ಕಾಗಿ, ಅಷ್ಟೆ, ಆ ಕ್ರಿಯೆಯೊಂದು ನಡೆದುಹೋಗಿದ್ದರೆ ಎಲ್ಲವೂ ಸಲೀಸಾಗ್ತಿತ್ತು ಅಂತ ಕಾಣುತ್ತೆ."

ಕನಸಿನಲ್ಲಿ ಮಾತಾಡುವವಳಂತೆ, "ಇರಬಹುದು" ಎಂದಳು ರುಕ್ಮಿಣಿ.

ಅವಳ ಮನಸ್ಸೆಲ್ಲ ನೆನ್ನೆ ರಾತ್ರಿ ಕತ್ತರಿ ಹಿಡಿದ ಅತ್ತೆಯ ಭಯಾನಕ ಚಿತ್ರವನ್ನು ಕಲ್ಪಿಸಿಕೊಳ್ಳುವುದರಲ್ಲಿಯೇ ತಲ್ಲೀನವಾಗಿತು... ಆದರೆ ಅವಳ ಅಂತರ್ಮುಖತೆ ಬಹುಕಾಲ ಉಳಿಯಲಿಲ್ಲ. ದಾರಿಯುದ್ದಕ್ಕೂ ಅಕ್ಕಪಕ್ಕದ ಹೊಲಗಳಲ್ಲಿ ಹಳದಿ ವರ್ಣದ ಹುಚ್ಚೆಳ್ಳಿನ ಹೂವು ಅರಿಶಿನ ಗೊಂಡೆಗಳನ್ನು ಚೆಲ್ಲಿದಂತೆ ಆ ಬಯಲನ್ನೆಲ್ಲ ಸುಂದರಗೊಳಿಸಿತ್ತು. ಆ ಹೂವುಗಳನ್ನು ವೀಕ್ಷಿಸುತ್ತಿದ್ದಂತೆ, ರುಕ್ಮಿಣಿಯ ಮನಸ್ಸು ಬೇರೆತ್ತಲೊ ಹರಿಯಿತು...ಕಾರ್ತಿಕಮಾಸ. ಊರಿಗೆ ಆಗಲೆ ದೀಪಾವಳಿ ಬಂದು ಹೋಗಿ ಕೇವಲ ಕೆಲ ಸಮಯ ಕಳೆದಿತ್ತು...

ದೀಪಾವಳಿಯ ನೆನಪು ಅವಳ ಸ್ಮೃತಿಪಟಲದ ಮೇಲೆ ಹಾದುಹೋದಂತೆ, ಆ ರಾತ್ರಿ ದರುಮನಳ್ಳಿಯ ಮನೆಮನೆಯ ಮುಂದೆಯೂ ಬೆಳಗಿದ ಹಣತೆಯ ಸಾಲು ತೊಡರುಗಳು, ಹೊತ್ತಿಸಿದ ಪಂಜು ಹಿಡಿದು ಊರಿನೊಳಗೆ ಹಾಡುತ್ತ ಸಾಗುವ ಯುವಕರ ತಂಡ, ಪಾಣವಾಳದ ಬೆಂಡುಗಳನ್ನು ಬೆಂಕಿಯಿಂದ ಕಾಯಿಸಿ ಆ ಬೆಂಡುಗಳನ್ನು ಕುಟ್ಟಿ ಕಿಡಿಯೇಳಿಸುತ್ತ ಓಲಾಡಿ ಓಲಾಡಿ ಊರಿನ ನಡುವೆ ಹಾಡುತ್ತ ಕೂರುವ ಬಾಲೆಯರು–ಎಲ್ಲರೂ ಎಲ್ಲವೂ ಅವಳ ಕಣ್ಣಿಗೆ ಕಟ್ಟಿ ನಿಂತವು. ಆ ರಾತ್ರಿ ಊರಿಗೆ ಊರೇ ಧಿಗಿಧಿಗಿ ಉರಿಯುತ್ತ ಬೆಳಕಿನ ಒಂದು ಮೋಹಕ ಜಾತ್ರೆಯನ್ನೇ ಸೃಷ್ಟಿಸಿದಂತಿತ್ತು. ಇವೆಲ್ಲದರ ಜೊತೆಗೆ ಮುದ್ದಿನ ಬಾಣಬಿರುಸುಗಳೂ ಸೇರಿ, ಊರು ಒಂದು ಕಿನ್ನರನಗರಿಯೇ ಆಗಿತ್ತು. ಊರಿನಲ್ಲಿ ಎಲ್ಲೆಲ್ಲೂ ಉತ್ಸಾಹ, ಸಡಗರ, ಆನಂದ... ಆದರೆ ಅಂದು ಅವಳ ಅಂತರಾಳದೊಳಗೆ ಮಾತ್ರ ಕಗ್ಗತ್ತಲು. ತನ್ನ ನೆಲನಿಲ್ಲದ ಆ ಬೆಳಕಿನ ಹಬ್ಬ ಅವಳ ಎದೆಯೊಳಗೆ ಸಂಭ್ರಮದ ಹಣತೆ ಹಚ್ಚಲು ಅಸಮರ್ಥವಾಗಿತ್ತು!...

## ೭

ರುದ್ರಪಟ್ಟಣ ರುಕ್ಮಿಣಿಯಿಲ್ಲದ ಮೂರು ವರ್ಷದಲ್ಲಿ ಅಂಥ ಬದಲಾವಣೆಯನ್ನೇನೂ ಕಂಡಿರಲಿಲ್ಲ. ಅದೇ ಕಾವೇರಿ ನದಿ, ನದೀತೀರದ ಅದೇ ಶ್ರೀ ಪ್ರಸನ್ನ ರಾಮೇಶ್ವರ ಗುಡಿ, ಊರೊಳಗಿನ ಅದೇ ಶ್ರೀ ಚೆನ್ನಕೇಶವ ದೇವಾಲಯ ಮತ್ತು ರಾಮಮಂದಿರ. ಊರ ಹೊರಗೆ ನದಿಗೆ ಅನತಿ ದೂರದಲ್ಲಿ ರಕ್ತರಂಜಿತ ವರ್ಣದಲ್ಲಿ ರೌದ್ರಾವತಾರಿಯಾಗಿ ನಿಂತ ಬೃಹದ್ಗಾತ್ರದ ವೀರಾಂಜನೆಯ ಮೂರ್ತಿ. ಸಮೀಪದಲ್ಲೆ ಮಾರಿಗುಡಿ. ಆದರಿಂದ ಕೊಂಚ ದೂರಕ್ಕೆ ತಲೆಪೊಟರಾಯ. ಹೆಂಚು ಕೌಚಿದ, ಒಳಗೆ ಉಯ್ಯಾಲೆ ತೂಗುವ ಅದೇ ಬ್ರಾಹ್ಮಣರ ತೋಟ್ಟಿಮನೆಗಳು. ಅದೇ ಗಡಾರಿಗೌಡರ ಮಾರ. ಅವೇ ಗಂಗಡಕಾರರ, ಮುಸಲ್ಮಾನರ, ಗಂಗಮತದವರ, ಮರಾಠಿಗರ, ಹರಿಜನರ, ಮತ್ತಿತರರ ಕೇರಿಗಳು. ಅವು ಯಾವುದರಲ್ಲೂ ಆಗ್ಗೂ ಈಗ್ಗೂ ಅಂಥದೇನೂ ವ್ಯತ್ಯಾಸ ಕಾಣದು– ಹೆಚ್ಚೆಂದರೆ, ತನಗೆ ಪರಿಚಿತರೂ ಆಪ್ತರೂ ಆದವರಲ್ಲಿ ಕೆಲವರು ಈಗ ಅಲ್ಲಿಲ್ಲ. ಕೆಲವರು ಮೃತರಾಗಿದ್ದರು. ಇನ್ನು ಕೆಲವರು ಊರು ಬಿಟ್ಟು ಮೈಸೂರು, ಬೆಂಗಳೂರು, ಬೊಂಬಾಯಿ, ದೆಹಲಿ ನಗರಗಳಲ್ಲಿ ತೆರಳಿ ಅಲ್ಲೇ ನೆಲೆಸಿದ್ದಾರೆ. ಹಾಗೆ ನೆಲೆಸಿದವರಲ್ಲಿ ಸಂಗೀತಶಿಖಾಮಣಿಗಳಾಗಿ ಮೆರೆದವರು ಕೆಲವರು, ಸರ್ಕಾರಿ ನೌಕರಿ ಹಿಡಿದು ವಿಖ್ಯಾತರಾದವರು ಹಲವರು...

ಮುಖ್ಯವಾಗಿ ಅವಳನ್ನೇ ಲಗ್ನವಾಗಬೇಕೆಂದು ಅಪೇಕ್ಷಿಸಿದ್ದ ವೀಣೆ ಶ್ಯಾಮರಾಯ ಮೈಸೂರಿನಲ್ಲಿ ನೆಲೆಸಿ, ಹೆಣ್ಣುಮಕ್ಕಳಿಗೆ ವೀಣೆ ಪಾಠ ಹೇಳಿಕೊಡುತ್ತ ಉದರಂಭರಣೆ ಮಾಡುತ್ತಿದ್ದ. ಅವಳಿಗೂ ಅವನೇ ವೀಣೆ ಕಲಿಸಿದ್ದು... ಶ್ಯಾಮ ಅಷ್ಟು ಎತ್ತರದ ಆಳಲ್ಲ; ಕುಳ್ಳ ಎಂದು ಹೇಳಿದರೂ ತಡೆಯುತ್ತದೆ. ನೋಡಲು ಅಂತ ರೂಪಸ್ಥನೇನೂ ಅಲ್ಲದಿದ್ದರೂ ಕಣ್ಣು ಮೂಗು ನೇರ ಅಂತಾರಲ್ಲ– ಹಾಗಿದ್ದ. ಆದರೆ ವೀಣೆಯ ತಂತಿಗಳ ಮೆಲೆ ಅವನು ಬೆರಳಾಡಿಸುತ್ತ ಕುಳಿತಾಗ ಮಾತ್ರ, ಅವನು ಇರುವುದಕ್ಕಿನ್ನ ಎತ್ತರವಾಗಿ, ತೋರುವುದಕ್ಕನ್ನ ಲಕ್ಷಣವಾಗಿ ಕಾಣುತ್ತಿದ್ದ. ಆ ವೀಣಾನಾದದಲ್ಲಿ ಒವ್ಮೊಮ್ಮೆ ತಲ್ಲೀನನಾಗಿ ಅವನು ಪುಳಕಿತನಾಗುತ್ತಿದ್ದುದು ಅವನ ವ್ಯಕ್ತಿತ್ವದ ಮೇಲೆ ಒಂದು ವಿಶೇಷ ಪ್ರಭೆಯನ್ನು ಹರಡುತ್ತಿದ್ದಿತು. ಆ ಕ್ಷಣಗಳಲ್ಲಿ ತಾನೂ ಅವನಿಗೆ ಮಾರುವೋಗುತ್ತಿದ್ದುಂಟು. ಲಗ್ನವಾಗಬೇಕೆಂದೇನಲ್ಲ, ಲಗ್ನವಾಗಬಾರದು ಎಂದೂ ಅಲ್ಲ... ಶ್ಯಾಮರಾಯ ಮಾತ್ರ ರುಕ್ಮಿಣಿಯ ಅಣ್ಣನ ಸಂಗಡ 'ಈ ನನ್ನ ಜೀವಿತದಲ್ಲಿ ನಾನು ಮದುವೆಯಾಗುವುದಾದರೆ, ಅದು ನಿನ್ನ ತಂಗಿ ರುಕ್ಮಿಣಿಯೊಡನೆ ಮಾತ್ರ ಸಾಧ್ಯ. ಅವಳನ್ನುಳಿದು ಬೇರೆ ಹೆಂಗಸರನ್ನು ನನ್ನ ಅಕ್ಕತಂಗಿಯರೆಂದು ಭವಿಸುತ್ತೇನೆ" ಎಂದು ಹೇಳಿಬಿಟ್ಟಿದ್ದ!...

ರುಕ್ಮಿಣಿಯ ಅಣ್ಣ ಅಶ್ವತ್ಥನಾರಾಯಣ ಒಬ್ಬನೆ ಇದ್ದಿದ್ದರೆ ಪ್ರಾಯಶಃ ಶ್ಯಾಮನ ಆಸೆಗೆ ಒಪ್ಪಿಗೆಯ ಅಂಕಿತ ಬೀಳುತ್ತಿತ್ತೊ ಏನೊ. ಆದರೆ ಅತ್ತಿಗೆ ಸಾವಿತ್ರಿ ಮುಖ ಮುರಿಯುವ ಹಾಗೆ, 'ಸಂಗೀತ ಹೇಳಿ ಹೊಟ್ಟೆಹೊರೆಯುವವರಿಗೆ ನನ್ನ ನಾದಿನಿಯನ್ನು ಕೊಟ್ಟು ಪಾಪ ಕಟ್ಟಿಕೊಳ್ಳಲ್ಲ'– ಹೇಳಿ, ಶ್ಯಾಮನ ಅಹವಾಲನ್ನು ನಿರಾಕರಿಸಿದ್ದಳು!... ಅಂದಿನಿಂದ ವೀಣೆಯ ಅಭ್ಯಾಸಕ್ಕೆ ಶ್ಯಾಮನ ಮನೆಯ ಹೊಸ್ತಿಲನ್ನು ಕೂಡ ಮೆಟ್ಟಬಾರದೆಂದು ಅತ್ತಿಗೆಯಿಂದ ರುಕ್ಮಿಣಿಗೆ ಕಟ್ಟಾಜ್ಞೆಯಾಯಿತು!...

ಅಶ್ವತ್ಥ ಅಂಥ ಸಂಗೀತಪ್ರಿಯನಲ್ಲದಿದ್ದರೂ ಸಂಗೀತದ್ವೇಷಿಯೇನಲ್ಲ. ಸಂಗೀತಕ್ಕೆ ಬಹು ಹಿಂದಿನಿಂದಲೂ ತೌರು ಎಂದು ಖ್ಯಾತಿ ಪಡೆದದ್ದು ರುದ್ರಪಟ್ಟಣ. ನಾಡಿನಾದ್ಯಂತ ಹೆಸರು ಮಾಡಿರುವ ವೈಣಿಕರು ಹಾಗೂ ಗಾಯಕರಲ್ಲಿ ಅನೇಕರು ರುದ್ರಪಟ್ಟಣದವರೆ! ಅವರ ಮನೆಯ ಎದುರುಸಾಲಿನಲ್ಲಿ ಎಡಕ್ಕೆ ಎತ್ತರದ ಪಡಸಾಲೆ ಇರುವುದೇ ಹಿಂದೆ ಪ್ರಸಿದ್ಧ ವೈಣಿಕರೆನಿಸಿದ್ದ ಬುರುಡೆ ಗೋವಿಂದರಾಯರ ಮನೆ! ಎಷ್ಟಾದರೂ ಆ ನೆಲದ ಮಣ್ಣಿನಿಂದಲೆ ಹುಟ್ಟಿ ಬಂದವನಲ್ಲವೆ ಅಶ್ವತ್ಥ?... ಆದರೆ ಅವನನ್ನು ಸೇರಿದ ಸಾವಿತ್ರಿ ಅರಕಲಗೂಡಿನವಳು. ಅವಳಿಗೆ ಸಂಗೀತವೆಂದರೆ

ತಲೆಚಿಟ್ಟು, ಅಕ್ಕಪಕ್ಕದ ಮನೆಗಳಿಂದ ಅಥವಾ ಎದುರು ಸಾಲಿನ ಮನೆಗಳಿಂದ ಯಾರಾದರೂ ಹಾಡುವ ಧ್ವನಿಯಾಗಲಿ, ನುಡಿಸುವ ವೀಣೆಯ ಇಂಚರವಾಗಲಿ ತೇಲಿ ಬಂದರೆ ಒಡನೆಯೆ ತಮ್ಮ ಮನೆಯ ಕಿಟಕಿ ಬಾಗಿಲುಗಳನ್ನು ಮುಚ್ಚವಳು!... ಒಮ್ಮೆ ಅವಳೆದುರಿಗೆ ಯಾರೋ ಅಂದರು: "ಕಾವೇರಿ ನದಿಯ ದಡದಾಚೆಗೆ ಇರುವ ಬಸವಾಪಟ್ಟಣ ವೇದಾಧ್ಯಯನಕ್ಕೆ ಘನಪಾಠಿಗಳಿಗೆ ವಿಖ್ಯಾತವಾಗಿದ್ದರೆ, ನಮ್ಮ ರುದ್ರಪಟ್ಟಣ ಸಂಗೀತಕ್ಕೆ ಅದರಲ್ಲೂ ವೈಣಿಕರಿಗೆ ಮತ್ತು ಗಾಯಕರಿಗೆ– ಹೆಸರುಗಳಿಸಿದೆ." ಸಾವಿತ್ರಿಗೆ ಈ ಹೊಗಳಿಕೆ ಪ್ರಿಯವೆನಿಸಲಿಲ್ಲ. "ಏನು ಮಾತು ತೆಗೀರಿ. ಈ ಊರಿನಲ್ಲಿ ಬಾಯಿ ಅಗಲಿಸಿ ಕಿರುಚೋರೆಲ್ಲ ಗಾಯಕರು! ಬೆರಳು ಬಗ್ಗಿಸಿ ತಂತಿ ಮೀಟೋರೆಲ್ಲ ವೈಣಿಕರು!... ನನಗೇನೋ ನಮ್ಮ ಮನೆಗೆಲಸ ಮಾಡಿಕೊಂಡು ಹೋಗೋದೇ ವೇದಾಧ್ಯಯನ. ನನ್ನ ಮಕ್ಕಳ ಮಾತು ಕೇಳ್ತಾ ಇರೋದೇ ಸಂಗೀತ!"

ಇವರ ಮನೆಯಲ್ಲಿ ಎಲ್ಲ ವಿಷಯಗಳಲ್ಲೂ ಸಾವಿತ್ರಿಯದೇ ಮೇಲುಗೈ ಆಗಿದ್ದರೂ ಭೋಜನದಲ್ಲಿ ಮಾತ್ರ ಅಶ್ವತ್ಥ ನಿಸ್ಸೀಮನಾಗಿದ್ದ. ಅಚ್ಚರಿಯ ಮಾತೆಂದರೆ ಅವನು ಊಟ ಮಾಡುವಷ್ಟು ಗ್ರಾಸವನ್ನು ಇಡೀ ರುದ್ರಪಟ್ಟಣದಲ್ಲಿ ಬೇರೆ ಯಾರೂ ಮಾಡಲಾರರೆಂದೇ ಊರಿನಲ್ಲೆಲ್ಲ ಪ್ರತೀತಿಯಾಗಿತ್ತು. ಒಂದು ಮದುವೆ ಭೋಜನಕೂಟದಲ್ಲಿ ಬಾಳೆಲೆ ತುಂಬ ಬಡಿಸಿದ ಬಿಳಿ ಅನ್ನವನ್ನು ತೊವ್ವೆಯಲ್ಲಿ ಕಲೆಸಿ ಊಟ ಮಾಡಿ, ಅನಂತರ ಮಜ್ಜಿಗೆಹುಳಿಯಲ್ಲಿ ಮತ್ತೆ ಎಲೆ ತುಂಬ ಅನ್ನವನ್ನು ಹೊಟ್ಟೆಗೆ ಸೇರಿಸಿ, ಬಳಿಕ ಗೋಪುರಾಕಾರದಲ್ಲಿ ಇಟ್ಟ ಚಿತ್ರಾನ್ನವನ್ನು ಕಬಳಿಸಿ, ಸುಮಾರು ಇಪ್ಪತ್ತೈದು ಅಂಬೊಡೆಗಳು, ಹೆಸರು ಬೇಳೆ ಕಡಲೆಬೇಳೆ ಕೋಸಂಬರಿಗಳು, ಎರಡು ಬಗೆಯ ಪಲ್ಯಗಳು, ಗೊಜ್ಜು, ಕೇಳಿ ಕೇಳಿ ಹಾಕಿಸಿಕೊಂಡ ಹಪ್ಪಳ ಸೆಂಡಿಗೆಗಳು ಇತ್ಯಾದಿಗಳನ್ನು ಹೊಟ್ಟೆಗೆ ತುಂಬುತ್ತ ಆರು ದೊಡ್ಡ ದೊನ್ನೆಗಳ ಭರ್ತಿ ಶ್ಯಾವಿಗೆ ಖೀರು ಸುರಿದು ಕೊಳ್ಳುತ್ತ, ಇಪ್ಪತ್ತ ಲಾಡುಗಳನ್ನು ತಿಂದು ಮುಗಿಸುತ್ತಿದ್ದಂತೆ, ಇನ್ನೂ ಇಪ್ಪತ್ತು ಲಾಡು ತಿಂತೀಯೆನೋ ಎಂದು ಚೆಷ್ಟೆಯಿಂದ ಯಾರೋ ಆಹ್ವಾನಿಸಿದಾಗ, "ತಿಂದರೆ ಏನು ಕೊಡ್ತೀಯೆ?– ನೂರು ರೂಪಾಯಿ ಬಾಜಿ ಕಟ್ತೀಯಾ?" ಎಂದು ಕೆದಕಿ, ಆತ ಆ ಪಂಥಕ್ಕೆ ಒಪ್ಪಿ ಆಗಬಹುದು ಎಂದಾಗ, ಮತ್ತೆ ಇಪ್ಪತ್ತು ಲಾಡುಗಳನ್ನು ಸಲೀಸಾಗಿ ತಿಂದು ತೇಗಿ, ಒಂದು ಚೆಂಬು ನೀರು ಕುಡಿದು, ಪಂಥದ ಒಂದು ನೂರು ರೂಪಾಯಿಗಳನ್ನು ಗಿಟ್ಟಿಸಿದ್ದನಂತೆ!– ಅದರಿಂದ ರಾತ್ರಿಯ ಭೋಜನಕ್ಕೇನೂ ತೊಂದರೆಯಾಗಲಿಲ್ಲವಂತೆ!... ಹೀಗೆ ಅದೆಷ್ಟೇ ಊಟಮಾಡಿದರೂ, ಅಶ್ವತ್ಥನ

ಶರೀರ ಮಾತ್ರ ಯಾವಾಗಲೂ ನರಪೇತಲನಂತೆ ಕೃಶವಾಗಿಯೇ ಇರುತ್ತಿತ್ತು. ಅದಕ್ಕೇ ಊರಿನ ಕೆಲವು ಗೆಳೆಯರು ಅಶ್ವತ್ಥ ಎಂದು ಕರೆಯುವ ಬದಲು ಹಾಸ್ಯವಾಗಿ 'ಅಸ್ವಸ್ಥ' ಎಂದೇ ಗೇಲಿ ಮಾಡುತ್ತಿದ್ದರು...

ಈ ಮನೆಯಲ್ಲಿ ಹಿಂದೆ ಹಲವಾರು ವರ್ಷ ಅನುಭವಿಸಿದ್ದುದೇ ರುಕ್ಮಿಣಿಗೆ ಸಾಕೆನಿಸಿತ್ತು. ಈಗ ಮತ್ತೆ ಇದೇ ಮನೆಯಲ್ಲಿ ತನ್ನ ವಾಸ!– ಈ ಸೆರೆ ತಪ್ಪಲು ಇನ್ನೆಷ್ಟು ಕಾಲ ಹಿಡಿಯುವುದೊ!... ಮಾವನವರು ಕೆಲಕಾಲ ಎಂದಿದ್ದಾರೆ. ಸುಶೀಲತ್ತೆಗೂ ದೇವರು ಒಳ್ಳೆಯ ಬುದ್ಧಿ ಕೊಡಬಹುದು– ಈ ನಿರೀಕ್ಷೆಯಲ್ಲೇ ರುಕ್ಮಿಣಿ ಕಾಲ ದೂಡುತ್ತಿದ್ದಳು.

ಈಚೆಗೆ, ತಾನು ರುದ್ರಪಟ್ಟಣಕ್ಕೆ ಹೋದ ತರುಣದಲ್ಲಿ, ಸಾತು ಹರಟೆ ಹೊಡೆಯಲು ನೆರೆಮನೆಗೆ ತೆರಳಿದ್ದಳು. ಅಶ್ವತ್ಥಣ್ಣ ಯಾವುದೊ ಕಾರ್ಯಾರ್ಥವಾಗಿ ಹೊಳೆಯಾಚೆಗಿನ ಬಸವಾಪಟ್ಟಣಕ್ಕೆ ಹೋಗಿದ್ದ. ಶಾಲೆಯಲ್ಲಿ ಕಲಿಯುತ್ತಿದ್ದ ಇವರ ಹಿರಿಯ ಮಗಳು ಜಾನಕಿಯೂ, ರುದ್ರಪಟ್ಟಣದಲ್ಲಿ ಇನ್ನೂ ಮಿಡಲ್ ಸ್ಕೂಲ್ ಇಲ್ಲದ್ದರಿಂದ, ಹಿಂದೆ ತಾನು ಹೋಗುತ್ತಿದ್ದಂತೆ, ಬಸವಾಪಟ್ಟಣಕ್ಕೇ ಹೋಗಿದ್ದಳು. ಇವರ ಎರಡನೇ ಮಗ ಶೇಷನ ವಿದ್ಯಾಭ್ಯಾಸ ನಡೆಯುತ್ತಿದ್ದುದೂ ಬಸವಾಪಟ್ಟಣದಲ್ಲೆ. ಆದರೆ ಅಲ್ಲಿಗೆ ಹೋಗುವೆನೆಂದು ಹೇಳಿ, ಮೇಲಿಂದ ಮೇಲೆ ಅವನು ದೇವಾಂಗದ ಬೈಸೆಟ್ಟಿ, ಮರಾಠಿಗರ ಹಿರೋಜಿ, ಅಂಬಿಗರ ಸಂಜೀವ, ಮುಸಲ್ಮಾನರ ಸಾಬೂಲಾಲ್, ಗುಡಿವಠಾರದ ರಾಮಸ್ವಾಮಯ್ಯಂಗಾರರ ಮಗ ಶಿನ ಮೊದಲಾದವರ ಜೊತೆಗೂಡಿ ಶಾಲೆಗೆ ಚಕ್ಕರ್ ಹೊಡೆದು ಪೋಲಿ ಅಲೆಯುತ್ತಿದ್ದ. ಮಗನ ಈ ಚರ್ಯೆ ಅತ್ತಿಗೆಯ ಕಿವಿಗೆ ಬಿದ್ದಿರಲಿಲ್ಲವೆಂದೇನಲ್ಲ –ಅವಳು ಅವನನ್ನು ಮನೆಯಲ್ಲಿ ಕಟ್ಟಿಹಾಕಿ ಕೋಲಿನಿಂದ ಥಳಿಸಿ ನೋಡಿದ್ದಳಂತೆ–ಕೋದಂಡ ಎತ್ತಿ ಮೆಣಸಿನಕಾಯಿ ಘಾಟು ಕೊಟ್ಟು ನೋಡಿದ್ದಳಂತೆ. ಆದರೆ ಆ ಪ್ರಚಂಡ ಇಂಥ ಯಾವ ಶಿಕ್ಷೆಗೂ ಮಣಿದಿರಲಿಲ್ಲ. ಪ್ರತಿಯಾಗಿ ಅವನ ಹಟಮಾರಿತನ, ವಿರೋಧಗಳು ಇನ್ನೂ ಪ್ರಬಲವಾಗುತ್ತ ನಡೆದಿದ್ದವು. ಹೀಗಿದ್ದೂ ಯಾರಾದರೂ ಅವನ ಪುಂಡಾಟಿಕೆಯ ಬಗ್ಗೆ ದೂರು ತಂದರೆ ಸಾತು ಮಗನನ್ನು ಸುಲಭವಾಗಿ ಬಿಟ್ಟುಕೊಡುತ್ತಿರಲಿಲ್ಲ. "ಏನೋ ಎಡಹುವ ಕಾಲು. ಎಡವಿದ, ಬೆಳೆದಂತೆ ಸರಿಹೋಗುತ್ತಾನೆ" ಎಂದು ಜಾರಿಸಿ ಬಿಡುತ್ತಿದ್ದಳು...

ಈ ಶೇಷ ತಾನು ರುದ್ರಪಟ್ಟಣಕ್ಕೆ ಬಂದಾಗಿನಿಂದಲೂ ತನ್ನ ಮೇಲೆ ಗುರ್ ಎನ್ನುವುದೇ ಆಗಿತ್ತು. ಇದಕ್ಕೆ ಕಾರಣ ಇಷ್ಟೆ: ಒಂದು ಸಂಜೆ ರವೆ ಉಂಡೆ, ಕೋಡುಬಳೆ ತಯಾರಿಸಿ ಬುಟ್ಟಿಯಲ್ಲಿ ತುಂಬಿ ಸಾತು ಎಲ್ಲೋ ಹೊರಗೆ ನಡೆದಿದ್ದಳು.

ಆಗ ಶೇಷ ಹಾಜರಾಗಿ ಆ ತಿಂಡಿ ತುಂಬಿದ ಬಿದಿರುಬುಟ್ಟಿಗೆ ಕೈಯಿಡಲು ಯತ್ನಿಸಿದ್ದ. ಅವನು ಅಲ್ಲೇ ಕುಳಿತು ತಾನೊಬ್ಬನೆ ತನಗೆ ಬೇಕೆನ್ನುವಷ್ಟು ತಿಂದಿದ್ದರೆ ನಾನೇನೂ ಆಕ್ಷೇಪಿಸುತ್ತಿರಲಿಲ್ಲ. ಆದರೆ ಅವನು ಒಂದು ಬಟ್ಟೆ ಕೈಚೀಲ ತಂದು, ಬುಟ್ಟಿಯಲ್ಲಿದ್ದ ತಿನಿಸನ್ನೆಲ್ಲ ಅದರೊಳಗೆ ಸುರಿದು ತನ್ನ ಸ್ನೇಹಿತರಿಗೆಂದು ಕೊಂಡುಹೋಗುತ್ತಿರುವಾಗ ನಾನು ಅಡ್ಡ ನಿಂತು– "ಹೀಗೆ ಮಾಡಬೇಡವೊ ಶೇಷ, ನೀನಿದ್ದೂ ಈ ದಾಂಧಲೆಗೆ ಹೇಗೆ ಅವಕಾಶ ಕೊಟ್ಟೆ? ಎಂದು ಅಮ್ಮ ಕೇಳಿದರೆ ಆಗ ನಾನೇನು ಹೇಳಬೇಕು?" ಎಂದೆಲ್ಲ ಬೇಡಿದೆ. ಅವನು ಕುಪಿತನಾಗಿ ಅಡ್ಡನಿಂತ ನನ್ನನ್ನು ಜೋರಿನಿಂದ ತಳ್ಳಿ ಹೊರ ನಡೆದಿದ್ದ. ಸಾತು ಬಂದಾಗ ನಡೆದುದನನೆಲ್ಲ ವಿವರಿಸಿದೆ. ಅವಳು ಅದಕ್ಕೆ ಏನು ಹೇಳಬೇಕು?–

"ಏನೇ, ನನ್ನ ಮಗನ ಮೇಲೆ ಚಾಡಿ ಹೇಳಲಿಕ್ಕೆ ಶುರು ಮಾಡಿಬಿಟ್ಟಿಯೇನೆ?– ಅವನೆಲ್ಲೊ ತನ್ನ ಸ್ನೇಹಿತರಿಗೆ ಎಂದು ಕೊಂಚ ತಗೊಂಡುಹೋಗಿರಬಹುದು. ನಾ ಇಲ್ಲ ಅನ್ನಲ್ಲ. ಆದರೆ ಆ ನೆಪದಲ್ಲಿ ನೀನೇ ಎಷ್ಟು ಸ್ವಾಹಾ ಮಾಡಿರಬಹುದು? – ಅದನ್ನೇಕೆ ಹೇಳಲ್ಲ?"

ಯಾರಾದರೂ ಅನ್ಯಾಯ ಮಾತಾಡಿದಾಗ ನನಗೆ ಯಾಕೆ ಹೀಗೆ ಕಣ್ಣನಲ್ಲಿ ನೀರು ತುಂಬುತ್ತೋ, ಹಾಳು!– ಗಟ್ಟಿಯಾಗಬೇಕು... ಸಮಾಧಾನ ಮಾಡಿಕೊಳ್ಳುತ್ತ, ಕಂಬನಿಯನ್ನು ಸೀರೆಯ ಸೆರಗಿನಿಂದ ಒತ್ತಿ,

"ಇಲ್ಲ, ಸಾತು. ನಾನು ನಿನಗೆ ಹೇಳಿದ್ದರಲ್ಲಿ ರವೆಯಷ್ಟೂ ಸುಳ್ಳಿಲ್ಲ. ಬೇಕಾದರೆ ಗೋಡೆಗೆ ನೇತುಹಾಕಿರುವ ಆ ಕೋದಂಡರಾಮನ ಪಟ ತೆಗೊ. ಅದನ್ನು ಮುಟ್ಟಿ ಪ್ರಮಾಣ ಮಾಡ್ತೀನಿ" ಎಂದೆ.

"ಹೋಗೆ, ಹೋಗೆ. ದನ ತಿನ್ನೋನಿಗೆ ಗೊಬ್ಬರದ ಆಣೆ ಅನ್ನೋ ಹಾಗೆ, ನಿನ್ನ ಪ್ರಮಾಣ ಒಂದು ಕೇಡು"– ಸಾತು ಹೀಗೆ ನನ್ನ ಮಾತನ್ನು ಒಪ್ಪಲೇ ಇಲ್ಲ...

ಇದೇ ಚಿಂತೆಯಲ್ಲಿ ಮುಳುಗಿದ್ದಾಗ ತನ್ನ ದೌರ್ಬಲ್ಯಕ್ಕಾಗಿ ತನ್ನ ಮೇಲೆ ತನಗೇ ಕೋಪ ಬಂದಿತು. ಥೂ, ಮಾವಯ್ಯನ ನೋಡಿಯಾದರೂ ತಾನು ಕಲಿಯಬಾರದೆ? ಎಂತಹ ಸನ್ನಿವೇಶದಲ್ಲೂ ಅವರದು ಅದೇನು ಧೀರಗಂಭೀರ ನಿಲುವು!... ಇನ್ನು ಮುಂದೆ ತಾನೂ ಸಹ–ಹೇಳಿಕೊಳ್ಳುತ್ತಿದ್ದಂತೆ, ಅಯ್ಯೊ ಸಿಂಹಸದೃಶರಾದ ಅವರ ವ್ಯಕ್ತಿತ್ವಕ್ಕೂ ತನಗೂ ಎಲ್ಲಿಯ ಹೋಲಿಕೆ? ಎಂದೆನ್ನಿಸಿ, ನಿಸ್ತೇಜಳಾಗಿ ನಕ್ಕಿದ್ದಳು...

ಯೋಚನೆ, ಯೋಚನೆ, ಯೋಚನೆ. ಇದರಿಂದ ಮುಕ್ತಳಾಗುವುದಾದರೂ ಹೇಗೆ?... ಮನಸ್ಸನ್ನು ಈ ಯೋಚನೆಗಳಿಂದ ಕಿತ್ತು ಬೇರೆ ಏನಾದರೂ ಕೆಲಸದಲ್ಲಿ

ತೊಡಗುವಂತೆ ಇದು ಸಾಧ್ಯವಾಗಬಹುದೊ ಏನೊ?... ಆದರೆ ಈ ಹೊತ್ತಿನಲ್ಲಿ ಮಾಡುವ ಕೆಲಸವಾದರೂ ಈ ಮನೆಯಲ್ಲಿ ಏನು ಉಳಿದಿದೆ? ಎದ್ದು ಕಸ ಗುಡಿಸಲೇ?– ಒಂದು ಯೋಚನೆ ಬಂತು. ಆದರೆ ಅದಕ್ಕೂ ಒಂದು ಸಮಯ ದಮಯ ಬೇಡವೆ?– ಈ ವೇಳೆಯಲ್ಲಿ ಪೊರಕೆ ಹಿಡಿದರೆ ನೋಡಿದವರು ನಕ್ಕಾರು!... ಹಾಗಾದರೆ ಏನು ಮಾಡುವುದು?... ಮನಸ್ಸಿಗೆ ಬೇರೇನು ಯೋಚಿಸುವುದೂ ಅಶಕ್ಯವಾಗಿ ಶೂನ್ಯದ ತೆರೆ ಅದನ್ನು ಆವರಿಸುತ್ತಿರುವಂತೆ, ದಟ್ಟೈಸಿದ ಸಂಜೆಮೋಡದ ಅಂಚಿನಲ್ಲಿ ಒಮ್ಮೊಮ್ಮೆ ಹಟಾತ್ತನೆ ಪ್ರತ್ಯಕ್ಷವಾಗುವ ಬೆಳಕಿನ ಗೆರೆಯಂತೆ, ಅಟ್ಟದ ಮೇಲಿರಿಸಿದ ವೀಣೆಯ ನೆನಪಾಯಿತು. ಹಿಂದೆ ತಾನು ಅಭ್ಯಾಸ ಮಾಡುತ್ತಿದ್ದ ವೀಣೆ ಗೋಪಾಲಯ್ಯನವರು ಅಭ್ಯಾಸ ಮಾಡುತ್ತಿದ್ದುದಂತೆ. ಅದು ಈಗ ಧೂಳು ಹೊದೆದು ಅಟ್ಟ ಸೇರಿದೆ. ತಟ್ಟನೆ ಎದ್ದಳು. ಏಣಿಯ ಮೇಲೇರಿ ಹೋಗಿ ಜೋಪಾನವಾಗಿ ವೀಣೆಯನ್ನು ಅಟ್ಟದಿಂದ ಇಳಿಸಿ ತಂದಳು– ಹಳೆಯ ಬಟ್ಟೆಯ ತುಂಡಿನಿಂದ ಅದರ ಮೇಲೆ ಹರಡಿದಂತೆ ತುಂಬಿದ್ದ ಧೂಳು, ಸತ್ತ ಜಿರಲೆ, ಇಲಿಯ ಪಿಕ್ಕೆ, ಎಲ್ಲವನ್ನೂ ತೊಡೆದುಹಾಕುತ್ತ, ನನಗೆ ಕೊಡದಿದ್ದರೆ ಪರವಿಲ್ಲ, ಇದಕ್ಕೆ ಒಂದು ಬಟ್ಟೆ ಗೌಸು ಮುಚ್ಚುವ ವಿವೇಕವಾದರೂ ಬೇಡವೆ? ಎಂದು ತನ್ನಲ್ಲೆ ಗೊಣಗಿದಳು. ಅನಂತೆ ಬಿರಡೆಗಳನ್ನು ತಿರುಗಿಸಿ ತಂತಿಗಳನ್ನು ಹದಗೊಳಿಸುವ ಕೆಲಸ. ಬೆರಳಿನಲ್ಲಿ ಮೀಟಿ ನಾದ ಹದವಾಗಿ ಹೊಮ್ಮುತ್ತಿದೆ ಎಂದೆನಿಸಿದಾಗ, ವೀಣೆಯನ್ನೆತ್ತಿ ತೊಡೆಯ ಮೇಲಿಟ್ಟು, ತಂತಿ ಮೀಟಿ ಎಡಗೈ ಬೆರಳುಗಳನ್ನು ತಂತಿಗಳ ಮೇಲೆ ಸುಮ್ಮನೆ ಆಡಿಸಿದಳು– ಕಲಿತದ್ದೆಲ್ಲ ಮರೆತಿರಬೇಕೆಂಬ ಭ್ರಮೆ... ಎಲ್ಲಿಂದ ಹೇಗೆ ಆರಂಭ ಮಾಡುವುದು?– ಏನೂ ಹೊಳೆಯದೆ ಸ ರಿ ಮಾ ಗ ರಿ ಸ ರಿ ಸ ನುಡಿಸಿದಳು. ನಕ್ಕಳು. ಕಳೆದು ಹೋದ ಒಡವೆ ಸಿಕ್ಕಿದಷ್ಟು ಸಂತೋಷವಾಗಿತ್ತು. ಇಲ್ಲಿಯವರೆಗೆ ಅಭ್ಯಾಸ ಮುಂದುವರಿಸಿದ್ದರೆ ತಾನು ರಾಮಮಂದಿರದಲ್ಲಿ ವಿದ್ವಾಂಸರೆದುರು ನುಡಿಸುವಷ್ಟು ಪ್ರಾವೀಣ್ಯ ಪಡೆಯಲು ಸಾಧ್ಯವಾಗುತ್ತಿರಲಿಲ್ಲವೆ?... ಶಾಮರಾಯರ ತರಬೇತಿ ಇನ್ನೂ ಕೆಲವು ವರ್ಷ ಸಿಕ್ಕಿದ್ದರೆ, ಆ ಪರಿಣತಿ ಲಭ್ಯವಾಗುತ್ತಿತ್ತೊ, ಏನೊ? ಆದರೆ ಗಂಡಿಸಿಗೆ ಹೆಣ್ಣು ಹೇಳಿ ಕೇಳಿ ಕಾಮದ ಗೊಂಬೆ. ಗುರುಸ್ಥಾನದಲ್ಲಿದ್ದ ಶ್ಯಾಮ ತನ್ನ ಪಾಡಿಗೆ ತಾನು ಘನವಾಗಿ ವೀಣೆಯ ಪಾಠವನ್ನು ಮುಂದುವರಿಸದೆ ತೂಕ ತಪ್ಪಿ ತನ್ನನ್ನು ಲಗ್ನವಾಗುವ ಬಯಕೆಯ ಬೆನ್ನನ್ನೇಕೆ ಏರಬೇಕಿತ್ತು?– ಎಂದು ಗೊಣಗುತ್ತಲೆ ವೀಣೆಯನ್ನು ಮೀಟುತ್ತ ಬೆರಳಾಡಿಸಿದಳು...

ಆ ಗಳಿಗೆಗೆ ನೆನಪಾದ ಯಾವುದೋ ಕೀರ್ತನೆಯನ್ನು ನುಡಿಸುತ್ತ ತಗ್ಗಿದ

ದನಿಯಲ್ಲಿ ಬಾಯಿಯಲ್ಲೂ ಮೈಮರೆತು ಗುನುಗುತ್ತಿರುವಂತೆ, ಮಗುವಿನ ಚೀತ್ಕಾರ ಸ್ವರವೊಂದು ಅವಳನ್ನು ಎತ್ತಿ ಕುಕ್ಕಿದಂತಾಯಿತು. ವೀಣೆಯನ್ನು ಕೆಳಗಿಟ್ಟು ದಡಬಡನೆ ಎದ್ದಳು. ಸಾತು ಅತ್ತಿಗೆಯ ಕೊನೆಯ ಕೂಸು ತೊಟ್ಟಿಲಿನಲ್ಲಿ ತನ್ನ ಪುಟ್ಟ ಪಾದಗಳಿಂದ ಹೊದೆಸಿದ್ದ ಬಿಳಿ ಬಣ್ಣದ ತೆಳುವಾದ ಮಲ್ ಬಟ್ಟೆಯನ್ನು ಝಾಡಿಸಿ ಒದೆಯುತ್ತ ಗಾರ್ ಗಾರ್ ಸದ್ದು ಮಾಡಿ ಆಳುತ್ತಿತ್ತು. ಸರಸರನೆ ಧಾವಿಸಿ ಎತ್ತಿಕೊಳ್ಳುತ್ತ ಹಳ್ಳುಳ್ಳಾಯಿ ಹೇಳಿದಳು. ಹಜಾರದಲ್ಲಿದ್ದ ಬಣ್ಣ ಬಣ್ಣದದ ದೇವರ ಪಟಗಳನ್ನು ತೋರಿಸಿದಳು. ದೇವರ ಕೋಣೆಯ ಗಂಟೆಯನ್ನು ಬಾರಿಸಿದಳು. ರುಕ್ಮಿಣಿ ಹೀಗೆಲ್ಲ ಒಂದು ಗಳಿಗೆ ಅಳು ನಿಲ್ಲಿಸಿ ಮಗು ಸುಮ್ಮನಾಗುವುದು. ಆದರೆ ಮರುಗಳಿಗೆಗೇ ಹಿಂದಿನಂತೆಯೇ ರಂಬಾಟ ಆರಂಭವಾಗುವುದು... ಕೂಸಿಗೆ ಹಸಿವಾಗಿರಬಹುದೆ?... ಹೋಗುವಾಗ ಸಾತು ಕೂಸಿಗೆ ಎದೆ ಕಚ್ಚಿಸಿ ಮಲಗಿಸಲಿಲ್ಲವೆ?.... ಇಷ್ಟು ಜಾಗ್ರತೆ ಈ ಕೂಸಿಗೆ ಹಸಿವಾಗಿರಬಹುದೆ?... ಇರಲಾರದು. ಒಂದು ಸಲ ಸ್ತನ್ಯ ಕೊಟ್ಟು ತೊಟ್ಟಿಲಿಗೆ ಹಾಕಿ ತೂಗುವುದೇ ತಡ ಸುಖವಾಗಿ ನಿದ್ದೆ ಮಾಡಬೇಕು. ಮಧ್ಯೆ ಎಂದೂ ಇತರ ಮಕ್ಕಳಂತೆ ಇದು ಗಲಾಟೆ ಮಾಡಿದ್ದಿಲ್ಲ!...

ಈ ಮನೆಗೆ ಆಗಿಂದಾಗ ಬರುವ ಮಾರಾಠಿಗರ ಸೋನುಬಾಯಿ, ಈ ಮಗು ತೊಟ್ಟಿಲಲ್ಲಿ ತುಂಬಿದಂತೆ ಮಲಗಿರುವುದನ್ನು ನೋಡಿದಾಗಲೆಲ್ಲ, "ಭೂಪತಿ ಕಿಟ್ಟನಂಗೆ ಮಂಗವನೆ. ಮಕ್ಕಳು ಅಂದರೆ ಹಿಂಗಿರಬೇಕು" ಎಂದು ಉದ್ಗಾರ ತೆಗೆಯುವಳು. ಅನಂತರ "ಅಯ್ಯೊ, ನನ್ನ ಕೆಟ್ಟ ಕಣ್ಣು ನನ್ನ ಕಂದನಿಗೆ ಬಡೀಬಾರದು" ಎಂದು ನೀವಾಳಿಸಿ, ತನ್ನ ಕೈ ಬೆರಳುಗಳಿಂದ ಲಟಿಕೆ ತೆಗೆಯುವಳು... ಆ ಸಂದರ್ಭವನ್ನು ನೆನೆಯುತ್ತ, ಅಳುವ ಕೂಸನ್ನು ಎದೆಗೆ ಒತ್ತಿದಂತೆ ಎತ್ತಿರುವಾಗ, ಅವಳೊಳಗೆ ಏನೊ ಹೊಸ ಅನುಭವ... ಏದೆಯೊಳಗೆ ಏನೊ ತುಂಬಿಕೊಂಡಂತೆ! ಇದು ತನ್ನದೇ ಮಗು ಎಂಬಂತೆ! ಅನಿಸಿಕೆ... ಈ ಭಾವ ಎದೆಯೊಳಗೆ ಹರಿದಾಡಿದಂತೆ, ನಾಚಿದಳು. ನಾಚಿಕೆಯ ಬೆನ್ನಿಗೇ ಮಗು ತನ್ನದಲ್ಲ ಎಂಬ ಪ್ರಜ್ಞೆಯೂ ಜಾಗ್ರತವಾಗಿ ವ್ಯಥೆಯೂ ಉಂಟಾಯಿತು ...

ಮಗುವಿನ ಅಳು ಹೆಚ್ಚಿತು. ಕಾಲುಗಂಟೆಯಲ್ಲಿ ಬಂದು ಬಿಡುವೆನೆಂದು ಹೇಳಿ ಹೋದ ಅತ್ತಿಗೆ ಇನ್ನೂ ಯಾಕೆ ಬರಲಿಲ್ಲ?... ನೆರೆಮನೆ ಗಿರಜಮ್ಮನವರ ಜೊತೆ ಕುಳಿತು ಇಷ್ಟು ಹೊತ್ತು ಅದೇನು ಮಾಡುತ್ತಿರಬಹುದು?... ಕೂಸು ಅತ್ತು ಅತ್ತು ಘಾಸಿಪಡುತ್ತಿದೆ! ಇನ್ನು ಇಲ್ಲೇ ಹೀಗೆ ತಾನು ಕಾಲಹರಣ ಮಾಡುತ್ತ ನಿಲ್ಲುವುದು ಅನುಚಿತವೆನ್ನಿಸಿತು...

## ೮

ರುದ್ರಪಟ್ಟಣದ ಸಾತು ಅತ್ತಿಗೆಯ ಮನೆಯಲ್ಲಿ ಆ ದಿನ ಅವಳ ಕೂಸು ಪರಿಪರಿಯಲ್ಲಿ ರಮಿಸಿದರೂ ಶಾಂತವಾಗದೆ ಹೋದುದರಿಂದ, ಇನ್ನು ಕಾಲಹರಣಮಾಡುವುದು ಅನುಚಿತ ಎಂದು ಬಗೆದು, ರುಕ್ಮಿಣಿಯು ಅಳುವ ಕೂಸನ್ನು ಎತ್ತಿದಂತೆಯೇ ಮನೆಯ ಮುಂಬಾಗಿಲನ್ನು 'ಮುಂದೆ' ಮಾಡಿ ಪಕ್ಕದ ಮನೆಗೆ ಹೋಗಿ ನೋಡಿದರೆ, ಸಾತು ಅಚ್ಚುಕಟ್ಟಾಗಿ ಕೂತು ಗಿರಿಜಮ್ಮನವರ ಸಂಗಡ ಹಳ್ಳುಗುಳಿಮಣೆ ಆಟ ಆಡ್ತಿದಾಳೆ!... ಮಗುವಿನ ರೋದನ ಸಮೀಪಿಸಿದಾಗಲೆ ತಾಯಿಗೆ ಎಚ್ಚರ!...

"ಮಧ್ಯೆ ಹೀಗೆ ಯಾವುತ್ತೂ ಎದ್ದು ಚಂಡಿ ಮಾಡ್ತಾ ಇರಲಿಲ್ಲವಲ್ಲ ಈ ತುಂಟ" ಎನ್ನುತ್ತ ಮಗುವನ್ನು ಈಸುಕೊಂಡು ತೊಡೆಯ ಮೇಲಿಟ್ಟು, ತನ್ನ ಮೊಲೆತೊಟ್ಟನ್ನು ಕೂಸಿನ ಬಾಯಿಗಿಟ್ಟಳು. ಒಡನೆಯೆ ಮಂತ್ರ ಹಾಕಿದಂತೆ ಮಗು ಅಳು ನಿಲ್ಲಿಸಿತು. ನೆರೆಮನೆಗೆ ಹಾರುವ ಆತುರದಲ್ಲಿ ಕೂಸಿಗೆ ಪೂರ್ತಿ ಹಾಲು ಕುಡಿಸದೇ ಹೋಗಿರಬಹುದೆಂದು ರುಕ್ಮಿಣಿ ತರ್ಕಿಸಿದಳು. ಮಗು ಅಳು ನಿಲ್ಲಿಸಿದ್ದು ಅವಳಿಗೆ ಸಂತೋಷ. ಆದರೆ ಎಂಥೆಂಥವರಿಗೋ ಕೂಸಿಗೆ ಮೊಲೆಯೂಡುವ ಭಾಗ್ಯವಿದೆ– ಈ ಕೊಳಕಿ ಸಾವಿತ್ರಿಯಂಥವರಿಗೂ!.... ನನಗೆ ಮಾತ್ರ ಯಾಕೆ ಈ ವಂಚನೆ?– ಎನ್ನಿಸುತ್ತಿದ್ದಂತೆಯೇ, ವೃಥಾ ಕೆಚ್ಚಲು ಹೊತ್ತ ಗೊಡ್ಡಿಹಸು ತಾನು ಎಂಬ ಭಾವನೆ ಸುಳಿಯಿತು. ಕಣ್ಣಗಳಲ್ಲೂ ತೆಳ್ಳಗೆ ಹನಿಯಾಡಿತು. ಅದನ್ನು ಗಮನಿಸದೆ,

"ಇದೇನೆ ರುಕ್ಕು, ಸುಮ್ಮನೆ ಇಲ್ಲಿ ನಿಂತುಬಿಟ್ಟೆ? ಮನೇಲಿ ಯಾರೂ ಇಲ್ಲ. ನಡಿ, ನಡಿ. ನಾನೂ ಕೂಸಿಗೆ ಹಾಲೂಡಿ ನಿನ್ನ ಹಿಂದೆಯೇ ಬಂದುಬಿಡ್ತೇನೆ." – ಸಾವಿತ್ರಿ ಬಲಾತ್ಕರಿಸಿದಳು. ರುಕ್ಮಿಣಿ ಮನೆಗೆ ಬಂದಾಗ ತಲೆಬಾಗಿಲಿನಲ್ಲಿ ಇವಳನ್ನು ಕಂಡೊಡನೆಯೆ ವೀಣೆಯನ್ನು ಕೆಳಗಿಟ್ಟು ಮೇಲೆದ್ದ ಶೇಷನನ್ನು ಉದ್ದೇಶಿಸಿ,

"ವೀಣೆ ಬಳಿ ಕುಳಿತು ಅದೇನು ಮಾಡ್ತಿದೀಯೊ, ಶೇಷ?" ಕೇಳಿದಳು.

"ನೀನು ಕಿತ್ತು ಹಾಕಿದ್ದ ವೀಣೆ ತಂತೀನ ರಿಪೇರಿ ಮಾಡೊದೆ ಸಾಧ್ಯವಾ ಅಂತ ಪರೀಕ್ಷೆ ಮಾಡ್ತಿದ್ದೆ. "–ನಿಸೂರಾಗಿ ಹೇಳಿ, ಅಲ್ಲಿಂದೆದ್ದು ಶೇಷ ಮನೆಯಾಚೆಗೆ ದೌಡು ಹೊಡೆದಿದ್ದ...

ರುಕ್ಮಿಣಿಗೆ ದಿಕ್ಕೇ ತೋಚದಂತಾಯಿತು. ವಿಷಣ್ಣಳಾಗಿ ಸಾತು ಬಂದ ಕೂಡಲೆ ಅದೆಷ್ಟು ರಂಪ ಮಾಡುವಳೊ ಎಂದು ಯೋಚಿಸುತ್ತ ನಿಂತಳು. ತಂತಿ ಕಿತ್ತ ವೀಣೆಯನ್ನು ಅಟ್ಟದ ಮೇಲೆ ಎತ್ತಿಟ್ಟರೆ ಸಾತುಗೆ ಅದು ಗೊತ್ತಾಗುವುದೇ

ಇಲ್ಲ. ಅವಳು ಅಟ್ಟಕ್ಕೆ ಒಂದು ವೇಳೆ ಹತ್ತಿಹೋದರೂ ಈ ವೀಣೆಯತ್ತ ದೃಷ್ಟಿಹರಿಯುವುದೊ ಅಪರೂಪವೆ. ಹಾಗೆ ಒಂದು ಪಕ್ಷ ದೃಷ್ಟಿ ಬಿದ್ದು ತನ್ನನ್ನು ಕೇಳಲಿ, ಆಗ ನೋಡಿಕೊಳ್ಳೋಣ– ಎಂಬ ಭಾವನೆ ಬಂದು, ವೀಣೆಯನ್ನು ಕೈಗೆತ್ತಿಕೊಳ್ಳುತ್ತಿರುವಂತೆ–

ಸಾತು ಬಂದಳು. ನಿದ್ದೆ ಹೋಗಿದ್ದ ಕೂಸನ್ನು ತೊಟ್ಟಿಲಿಗಿಟ್ಟು, ಮೃದುವಾಗಿ ಒಂದು ಕೈ ಅದನ್ನು ತೂಗುತ್ತಿರುವಾಗಲೆ ತಿರುಗಿ ನೋಡಿದಳು. ನಿಶ್ಚಲಳಾಗಿ ನಿಂತ ರುಕ್ಮಿಣಿಯನ್ನೊಮ್ಮೆ, ತಂತಿ ಹರಿದ ವೀಣೆಯನ್ನೊಮ್ಮೆ ನೋಡಿದಳು. ನೆತ್ತಿಯಲ್ಲಿ ಉರಿ ಕಾಣಿಸಿದಂತಾಗಿ,

"ಏನೇ ರುಕ್ಕು, ಈ ವೀಣೇನ ಅಟ್ಟದಿಂದ ಕೆಳಕ್ಕೆ ಯಾಕೆ ತೆಗೆದೆ?" ಮೂಗಿನ ಹೊರಳೆಗಳನ್ನು ರೋಷದಿಂದ ಹಿಗ್ಗಿಸುತ್ತ ಕುಗ್ಗಿಸುತ್ತ ಕೇಳಿದಳು.

"ಬೇಸರ ಆಯಿತು. ನುಡಿಸೋಣ ಅಂತ ತೆಕ್ಕೊಂಡೆ." –ರುಕ್ಮಿಣಿಯದು ಶಾಂತವಾದ ಉತ್ತರ.

"ನನ್ನ ಹೇಳದೆ ಕೇಳದೆ ಹೇಗೆ ತಕ್ಕೊಂಡೆ? ಈ ಮನೆ ಯಜಮಾನಿ ನಾನೋ, ನೀನೋ?" ಘಡಿಘುಡಿಸಿದ್ದಳು ಸಾವಿತ್ರಿ.

"ನಾನೇನೂ ಈ ಮನೆಗೆ ಯಜಮಾನಿಕೆ ಮಾಡೋಕೆ ಬರಲಿಲ್ಲ. ಹೇಳಿದೆನಲ್ಲ, ಬೇಸರವಾಯಿತು. ಇದನ್ನ ನುಡಿಸಿದರಾದರೂ ಹೊತ್ತು ಕಳೀಬಹುದು ಅಂತ ಅನ್ನಿಸ್ತು, ಅದಕ್ಕೆ..."

"ಅದಕ್ಕೆ–ನನ್ನ ಹೇಳದೆ ಕೇಳದೆ ಹೇಗೆ ತೆಕ್ಕೊಂಡೆ?" ಸಾವಿತ್ರಿಯದು ಮತ್ತೆ ಅದೇ ಪಲ್ಲವಿ.

"ಆಗ ನೀವು ಪಕ್ಕದ ಮನೇಲಿ ಹಳ್ಳುಗಳಿಮಣೆ ಆಡ್ತಾ ಇದ್ದಿರಲ್ಲ. ಮನೇಲೆ ಇರಲಿಲ್ಲವಲ್ಲ?" ಸಾವಿತ್ರಿಗೆ ಸಿಟ್ಟು ಮೀರಿತು ಮೇರೆ.

"ನಾನು ಬೇಕಾದ್ದು ಮಾಡ್ತೀನಿ. ನೀನು ಯಾರೆ ನನ್ನ ಕೇಳೋಕೆ?" ದಾಪುಗಾಲಿಟ್ಟು ಕೆನ್ನೆಗೆ ತಿವಿದು, "ವೀಣೆತಂತಿ ಕಿತ್ತು ಹಾಕಿ ಈ ದಾಷ್ಟೀಕದ ಮಾತು ಬೇರೆ..."

"ವೀಣೆ ತಂತಿ ಕಿತ್ತಿರೋದು ನಾನಲ್ಲ–ಆ ನಿಮ್ಮ ಮಗರಾಮ" ಎಂದು ಕಳ್ಳ ಹೆಜ್ಜೆಗಳನ್ನಿಡುತ್ತ ಒಳಗೆ ಬಂದ ಶೇಷನತ್ತ ಬೆರಳು ಮಾಡಿದಳು. ಮಗು ಅತ್ತಂತಾಗಿ, ಸಾತು ಧಾವಿಸಿ ತೊಟ್ಟಿಲು ತೂಗುತ್ತ ನಿಂತಳು.

"ಸುಳ್ಳು ಸುಳ್ಳು, ಅಪ್ಪಟ ಸುಳ್ಳು! ನಾನು ಹೊಳೆ ದಡದಲ್ಲಿ ಆಡ್ತಾ ಇದ್ದು, ಮನೆ ಹತ್ರ ಬರ್ತಾ ಇರಬೇಕಾರೆ, ವೀಣೆ ಸದ್ದು ಕೇಳಿಸ್ತು. ಯಾರಪ್ಪ ನಮ್ಮ

ಮನೇಲಿ ವೀಣೆ ನುಡಿಸೋರು ಅಂತ ಆಶ್ಚರ್ಯ ಆಯ್ತು. ಸದ್ದು ಮಾಡದೆ, ಬಾಗಿಲು ಓರೆ ಮಾಡಿ ನೋಡಿದರೆ– ರುಕ್ಮಿಣತ್ತೆ!... ಚನ್ನಾಗಿ ನುಡಿಸ್ತಾ ಇದ್ದಳು. ನಾನೂ ಹಂಗೆ ಕೇಳ್ತಾ ನಿಂತೆ. ಆದ್ರೆ ಸ್ವಲ್ಪ ವೇಳೆ ಕಳೆಯೋದರಲ್ಲಿ ವೀಣೆ ತಂತಿ ಫಟ್ ಅಂತ ಕಿತ್ತೊಯ್ತು!"– ಶೇಷನ ಬಾಯಿಂದ ಹೊರಬಿದ್ದ ತಟವಟ ರುಕ್ಮಿಣಿಯನ್ನೂ ಕುದಿಸಿತು. ರೋಷದಿಂದ ತಾಳ್ಮೆಗೆಟ್ಟ ರುಕ್ಮಿಣಿ ಫಟ್ ಎಂದು ಶೇಷನ ಕೆನ್ನೆಗೆ ಬಿಗಿದು,

"ಭಡವ, ನಿಜ ಹೇಳು, ಇಲ್ಲದಿದ್ದರೆ ನಿನ್ನನ್ನಿಲ್ಲೆ ಸಿಗಿದುಬಿಡ್ತಿನಿ" ಎಂದು ಉಗ್ರರೂಪ ತಾಳಿದಾಗ, ಶೇಷ ಹೆದರಿ ತಟ್ಟನೆ,

"ಹೋಡೀಬೇಡ ಅತ್ತೆ, ನಿಜ ಹೇಳ್ತೀನಿ... ನಾನೇ ನುಡಿಸ್ತೀನಿ ಅಂತ ಹೋದೆ. ತಂತಿ ಕಿತ್ತೋಯ್ತು... "ಕಣ್ಣೀರು ಸುರಿಸುತ್ತ, ಮೂಗು ಸೊರೆಯುತ್ತ ಹೇಳಿದ.

ಸಾವಿತ್ರಿಯ ಮೈಯಲ್ಲಿ ಮುಳ್ಳುಗಳು ಎದ್ದಂತಾಗಿರಬೇಕು. ಅವಳು ಅಡ್ಡ ಬಂದು ಮಗನನ್ನು ಬಿಡಿಸುವುದರೊಳಗೆ ಎಲ್ಲವೂ ನಡೆದುಹೋಗಿತ್ತು. ಅವಳಿಗೆ ಇನ್ನೂ ಹೆಚ್ಚಿನ ವ್ಯಥೆ ತಂದಿದ್ದೆಂದರೆ ಅವಳ ಗಂಡ ಅದೇ ಸಮಯಕ್ಕೆ ಬಸವಾಪಟ್ಟಣದಿಂದ ಬಂದು ಮನೆಯೊಳಗೆ ನಡೆದ ಸಮಸ್ತ ವ್ಯಾಪಾರವನ್ನೂ ನೋಡಿಬಿಟ್ಟಿದ್ದು!

ಸಾವಿತ್ರಿಗೆ ಅಪಮಾನವಾದಂತಾಗಿ ತನ್ನ ಕೋಣೆ ಹೊಕ್ಕು ಮಂಚದ ಮೇಲೆ ಪವಡಿಸಿಬಿಟ್ಟಳು. ಅವಳ ಮನಸ್ಸು ವ್ಯಗ್ರಗೊಂಡಿತ್ತು...

ತಾನು ಬಸವಾಪಟ್ಟಣದಲ್ಲಿ ಊಟ ಮುಗಿಸಿ ಬಂದಿರುವುದಾಗಿ ಹೇಳಿ, ಕಾಫಿ ತಯಾರಿಸುವಂತೆ ಸೂಚಿಸಿ, ಅಶ್ವತ್ಥಣ್ಣ ಮ್ಲಾನವದನನಾಗಿ ಅತ್ತಿಗೆಯ ಬಳಿಗೆ ಹೋಗುವುದನ್ನೆ ನೋಡುತ್ತಿದ್ದು ಭಾರವಾದ ಮನಸ್ಸಿನಿಂದ ರುಕ್ಮಿಣಿ ಅಡಿಗೆ ಕೋಣೆಯತ್ತ ನಡೆದಳು. ಅಲ್ಲಿ ಕಾಫಿ ತಯಾರಿಸುತ್ತ ವಿಚಾರಪರವಶಳಾದಳು.

ಏನು ಜೀವನವೊ! – ಮುಕ್ಕಾಲು ಮೂರು ವೀಸ ಪಾಲು ಸಂಸಾರಗಳಲ್ಲಿ ಈ ದಂಪತಿಗಳ ಹಾಗೆ ಎತ್ತು ಏರಿಗೆಳೆಯೋದು ಕೋಣ ನೀರಿಗೆಳೆಯೋದೇ ಜಾಸ್ತಿ. ಅಪರೂಪಕ್ಕೆ ಪರಸ್ಪರ ಇಂಗಿತ ಅರಿತು ನಡೆಯುವ ದಾಂಪತ್ಯ ಕೂಡಿಬಂದಾಗ ಆ ಜೋಡಿ ಬಹಳ ಕಾಲ ಉಳಿಯದ ಹಾಗೆ ವಿಧಿಯ ಸಂಚು! ಈ ಆಲೋಚನೆ ತನ್ನ ಬದುಕನ್ನೆ ತಟ್ಟಿದಾಗ, ಅವಳ ಕಣ್ಣು ಒದ್ದೆಯಾಯಿತು. ಕಾಫಿ ತಯಾರಿಸುತ್ತಿದ್ದಂತೆ ಪಕ್ಕದ ಕೋಣೆಯಿಂದ ಅಣ್ಣ–ಅತ್ತಿಗೆಯರ ಸಂಭಾಷಣೆ ಸ್ಪಷ್ಟವಾಗಿ ಕೇಳಿಬರುತ್ತಿತ್ತು. ಅಡಿಗೆ ಕೋಣೆ ಮತ್ತು ಅತ್ತಿಗೆಯ ಕೊಠಡಿ ಇವೆರಡರ ನಡುವಿನ ಗೋಡೆ

ತುಂಡುಗೋಡೆಯಾದ್ದರಿಂದ ಇದು ಸಾಧ್ಯವಾಗಿತ್ತು. ಅಲ್ಲದೆ, ತನ್ನ ಮಾತು ಯಾರಿಗಾದರೂ ಕೇಳಿಸೀತು ಎನ್ನುವ ಕಳವಳವಿಲ್ಲದ, ಜೋರಿನಿಂದ ಸಂಭಾಷಿಸುವ ಗತ್ತು ಸಾವಿತ್ರಿಯದು!... ಮೃದುವಾಗಿ ಅಣ್ಣ ಕೇಳುತ್ತಿದ್ದ:

"ನೀನೇ ಅಲ್ಲವೇನೆ ಸಾತು, ರುಕ್ಕೂನ ಇಲ್ಲೆ ಇರಲಿ ಅಂತ ಇರಿಸಿಕೊಂಡದು..."

ಅತ್ತಿಗೆ ನೊಂದ ದನಿಯಲ್ಲಿ ಉಸುರಿತ್ತಿದ್ದಳು:

"ಹೌದು," ನಾನೇ ಆ ತಪ್ಪು ಮಾಡಿದ್ದು. ದರುಮನಳ್ಳಿಯಿಂದ ಕೃಷ್ಣಶಾಸ್ತ್ರಿಗಳು ಈ ರುಕ್ಮಿಣಿನ ಕರೆದು ತಂದ ದಿನ ನನಗೆ ಮಹದಾನಂದವೇ ಆಗಿತ್ತು. ಸುಳ್ಳಲ್ಲ. ನಾನು ಬಾಣಂತಿ. ಇವಳು ಸ್ವಲ್ಪ ಕಾಲ ಇದ್ದರೆ ನನಗೂ ಉಪಕಾರವಾಗುತ್ತೆ ಅಂತ ಒಪ್ಪಿದೆ. ನಮ್ಮ ಅಮ್ಮನೂ ಕೂಡ ನನ್ನ ತಂದೆಗೆ ಹುಶಾರಿಲ್ಲದ ಪ್ರಯುಕ್ತ, ಇಲ್ಲಿಗೆ ಬಂದು ಒಂದು ತಿಂಗಳು ಪೂರ್ತಾ ಇರಲಾರದೆ ಅರಕಲಗೂಡಿಗೆ ಹೊರಟು ಹೋದದ್ದು ನಮಗೂ ಗೊತ್ತೇ ಇದೆಯಲ್ಲ!... ಅಂಥ ಸಂದರ್ಭದಲ್ಲಿ ಒಪ್ಪದೆ ನಾನೇನು ಮಾಡಬಹುದಿತ್ತು?"

ಅತ್ತಿಗೆಯ ಸ್ವಭಾವ ತಿಳಿದೂ ತಿಳಿದೂ ತಾನು ಇಲ್ಲಿಗೆ ಬರಬಾರದಾಗಿತ್ತು ಎನ್ನಿಸಿದರೂ ತನ್ನ ಬಾಳ್ವೆಯ ಸಂದಿಗ್ಧದ ಅರಿವಾಗಿ, ಇದೊಂದು ತಾಣವಲ್ಲದೆ ಬೇರೆ ಯಾವ ಜಾಗ ತನಗೆ ಆಶ್ರಯ ನೀಡುತ್ತಿತ್ತು ಎಂದು ಸ್ಮರಿಸುತ್ತ, ಸೌದೆಯ ಸೀಳುಗಳ ಮೇಲೆ ಯಾಂತ್ರಿಕವಾಗಿ ಕೈಯಾಡಿಸಿದ್ದಳು ರುಕ್ಮಿಣಿ... ಅತ್ತ ದಂಪತಿಗಳ ಸಂಭಾಷಣೆ ಮುಂದುವರೆದಿತ್ತು...

"ಇನ್ನೂ ಎರಡು ಮೂರು ತಿಂಗಳು ಅರಕಲಗೂಡಿನಲ್ಲೆ ಇದ್ದು ಬರಬಹುದಿತ್ತಲ್ಲ. ನಾನೂ ಹೇಗೋ ಮಕ್ಕಳಿಗೆ ಬೇಯಿಸಿ ಹಾಕಿ, ನೀನು ಬರುವವರೆಗೂ ಕಾಲಯಾಪನೆ ಮಾಡುತ್ತಿದ್ದೆ..."

ಅಣ್ಣನಿಗೆ ಕೆಲ ಜನರಂತೆ ಹೇಳಿದ್ದನ್ನೆ ಹೇಳುವುದು ರೂಢಿ. ಅತ್ತಿಗೆಗೆ ಈ ಸಮಜಾಯಿಷಿಯನ್ನು ಅದೆಷ್ಟು ಬಾರಿ ಹೇಳಿದ್ದನೊ, ಲೆಕ್ಕ ಹಿಡಿಯೋದು ಕಠಿಣ.

"ಅಲ್ಲಿ ನನ್ನ ತಂಗಿ ಸರೋಜ ಬೇರೆ ತುಂಬುಗರ್ಭಿಣಿಯಾಗಿ ತೌರು ಸೇರಿದ್ದಳು. ನನ್ನ ತಂದೆಯ ಉಬ್ಬಸದ ಕಾಯಿಲೆ, ನನ್ನ ತಂಗಿಯ ಬಸಿರು, ಇಷ್ಟೆಲ್ಲ ಕೋಟಲೆಗಳಿದ್ದರೂ ಕೂಡ ತಮ್ಮ ಮನೇಲಿ ನನ್ನನ್ನ ಒಂದೂವರೆ ತಿಂಗಳು ಇರಿಸಿಕೊಂಡು ಬಾಣಂತಿಖಾರ ಲೇಹ್ಯ ಎಲ್ಲವನ್ನೂ ನನ್ನ ತಾಯಿಯೇ ಸ್ವತಃ ತಯಾರಿಸಿ ಉಪಚರಿಸಿದ್ದು ಏನು ಕಡಿಮೆಯೆ?... ನೀವೂ ಕಂಡ ಹಾಗೆ, ನಮ್ಮ ತಾಯಿಯೇನು ಈವೊತ್ತಿನವರೆ? ಅವರಿಗೂ ಹೋದ ಗೌರಿಗೆ ಎಪ್ಪತ್ತು

ತುಂಬಿತು. ಅಂಥಾದ್ದರಲ್ಲೂ ಇಲ್ಲಿಗೂ ಬಂದು ಇಪ್ಪತ್ತು ದಿನ ಪರ್ಯಂತ ಇದ್ದು ಉಪಚಾರ ಮಾಡಿ ಹೋಗಿದ್ದಾರಲ್ಲ?"

"ಹಾಗಾದರೆ ಈಗೇನು ಮಾಡೋಣ ಅಂತೀ?– ಕೃಷ್ಣಶಾಸ್ತ್ರಿಗಳಿಗೆ ಹೇಳಿ ಕಳಿಸಿ, ರುಕ್ಮಿಣಿಯನ್ನ ಇಲ್ಲಿಂದ ಸಾಗಿಹಾಕಿಬಿಡೋಣವೆ?"

"ಛೆ, ಛೆ. ನಾನು ಹಾಗೆಂದೆನೆ?... ಅವಳು ಮಹಾರಾಯಿತಿಯ ಹಾಗೆ ಇನ್ನೂ ಮೂರು ನಾಲ್ಕು ತಿಂಗಳು ಇಲ್ಲೇ ಇರಲಿ. ಆದರೆ ನೀವು ಅವಳಿಗೆ ವಿವೇಕ ಹೇಳಿ, ಆ ಹರಾಮಿಯನ್ನು ಕೊಂಚ ಹತೋಟಿ ಮಾಡಿದರೆ ಸಾಕು, ಅಷ್ಟೆ."

ರುಕ್ಮಿಣಿಗೂ ಎಲ್ಲ ಅರ್ಥವಾಗಿತ್ತು. ತನ್ನನ್ನು ಸದ್ಯದಲ್ಲೆ ಕಳಿಸಿಬಿಡಲು ಅತ್ತಿಗೆಗೆ ಸುತರಾಂ ಇಚ್ಛೆಯಿಲ್ಲ. ಬೇಕೆಂದಾಗ ತಮ್ಮ ತೋಟತುಡಿಕೆಗೆ ಅಲೆದಾಡುತ್ತ, ಬೇಸರ ಕಳೆಯಲು ಹರಟೆಯಲ್ಲೊ ಹಳ್ಳುಗುಳಿಮಣೆ ಆಡ್ತಾನೊ ಕಾಲಯಾಪನೆ ಮಾಡಲು ಪುರಸೊತ್ತು ಬೇಕಲ್ಲ!– ಆದ್ದರಿಂದ ಮನೆಯಲ್ಲಿ ಅಡಿಗೆ ಮಾಡುವುದಕ್ಕೆ, ದನಕರು ನೋಡುವುದಕ್ಕೆ ಮಗು ಸ್ವಲ್ಪ ದೊಡ್ಡದಾಗುವವರೆಗೂ ಅದನ್ನು ಎತ್ತ ಆಡಿಸುವುದಕ್ಕೆ, ಇಂಥವೇ ಸಣ್ಣಪುಟ್ಟ ಚಾಕರಿ ಮಾಡುವುದಕ್ಕೆ ತನ್ನಂಥವಳೊಬ್ಬಳ– ಗತಿಗೆಟ್ಟವಳೊಬ್ಬಳ ಅವಶ್ಯಕತೆ ತೀರ ಅಗತ್ಯವಾಗಿತ್ತು!...

ಅಣ್ಣನೂ ಸಮಯ ನೋಡಿ ತನಗೆ ಬುದ್ಧವಾದ ಹೇಳಿದ್ದ:

"ಹೇಗೋ ಸಹಿಸಿಕೊಂಡು ಹೋಗಮ್ಮ....."

ರುಕ್ಮಿಣಿಗೂ ಬಾಯಿಗೆ ಬಂದಿತ್ತು:

"ನೀನು ಸಹಿಸಿಕೊಂಡು ಹೋಗ್ತಿದೀಯಲ್ಲ– ಹಾಗಾ?'

ಆದರೆ ಹಾಗೆ ಚುಚ್ಚಿ ಅಣ್ಣನನ್ನು ಇನ್ನೂ ಹೆಚ್ಚು ನೋಯಿಸಲು ಅವಳಿಗೆ ಮನಸ್ಸು ಬರಲಿಲ್ಲ.... ಆ ಪ್ರಸಂಗ ನಡೆದ ನಂತರ ಸಾತುವಿನಲ್ಲಿ ಸ್ಪಷ್ಟವಾದ ಬದಲಾವಣೆಯನ್ನು ರುಕ್ಮಿಣಿ' ಗುರುತಿಸಿದ್ದಳು. ಒಳ್ಳೆಯ ಮಾತುಗಳನ್ನು ಅಡಿ ಉಪಾಯವಾಗಿ ತನ್ನ ಕೈಯಿಂದ ಕೆಲಸ ಮಾಡಿಸಿಕೊಳ್ಳಲು ಅತ್ತಿಗೆ ಪಡುತ್ತಿದ್ದ ಪಾಡನ್ನು ಕಂಡು ತಾನೂ ಒಳಗೇ ನಕ್ಕಿದ್ದುಂಟು. ಶೇಷನಿಗೂ ಆಕೆ ಬೆದರಿಸಿರಬೇಕು. ಬಹುಶಃ ಅದರಿಂದಲೇ ತನ್ನ ಬಳಿ ಅವನು (ತಾನು ತಾಯಿಯ ಮೇಲೂ ಸಿಡುಕಿದಾಗಲೂ) ಬಾಲ ಮುದುರಿದ ನಾಯಿಯಾಗಿ ತೆಪ್ಪಗಿರುತ್ತಿದ್ದ!... ಹಾಗೇ ಚಿಂತಿಸುತ್ತಿರುವಾಗ ಯಾರೋ ಮಹಾತ್ಮ ಆಡಿದ ಮಾತನ್ನ ತನ್ನ ಪತಿ ತನ್ನೊಡನೆ ಹಂಚಿಕೊಂಡಿದ್ದರ ನೆನಪಾಯಿತು– ಒಂದೊಂದು ಸಮಯ ಕಚ್ಚಬೇಕಾಗಿಲ್ಲ ಆದರೆ ಬುಸ್ ಎನ್ನಲೇಬೇಕು!...

ಮುಂದಿನ ಹದಿನೈದು ಇಪ್ಪತ್ತು ದಿನಗಳಲ್ಲಿ ಹೇಳಿಕೊಳ್ಳುವಂಥ ವಿಶೇಷವೇನೂ ನಡೆಯಲಿಲ್ಲ. ಸುಮಾರು ಇಪ್ಪತ್ತು ದಿನ ಕಳೆದ ಬಳಿಕ ಒಂದು ಪ್ರಾತಃಕಾಲದಲ್ಲಿ ವೈಣಿಕ ಶ್ಯಾಮರಾಯ ಹಾಜರಾಗಿ "ನನಗೂ ಕಾಫಿ ಸಿಕ್ಕುತ್ತೋ?" ಎಂದಾಗ, ಸಾತು ಕೂಡ ಏನುತ್ತರ ಕೊಡಬೇಕೊ ತಿಳಿಯದೆ ತಬ್ಬಿಬ್ಬಾದಳು. ಅಶ್ವತ್ಥಣ್ಣನೆ, "ಓಹೊ–ಶ್ಯಾಮ!... ಮೈಸೂರಿನಿಂದ ಯಾವಾಗ ಬಂದೆಯಪ್ಪ?..... ಬಾ, ಬಾ–ಕೇವಲ ಕಾಫಿಯನ್ನು ಮಾತ್ರ ಕೇಳ್ತಿದೀಯಲ್ಲ. ನಮ್ಮ ರುಕ್ಕು ಉಪ್ಪಿಟ್ಟನ್ನೂ ತಯಾರಿಸಿದ್ದಾಳೆ. ಒಳ್ಳೆ ಸಮಯಕ್ಕೆ ಬಂದೆ. ಬಾ, ಕೂತುಕೊ" ಎಂದು ಆಹ್ವಾನಿಸಿದ್ದ.....

ಸಾತು ಅಡಿಗೆಮನೆಗೆ ಬಂದಿದ್ದಳು. ರುಕ್ಮಿಣಿ ತಯಾರಿಸಿದ ಉಪ್ಪಿಟ್ಟನ್ನು ತಟ್ಟೆಗಳಿಗೆ ವಿಂಗಡನೆ ಮಾಡಿ ಹಂಚಿ, "ತೆಗೊಂಡುಹೋಗಿ ಕೊಡಮ್ಮ" ಎನ್ನಬೇಕೆ?... ರುಕ್ಮಿಣಿ ಒಪ್ಪಲಿಲ್ಲ. ಸಾತು ಒಂದೇ ಸಮನೆ ಒತ್ತಾಯಿಸುತ್ತಿದ್ದಳು. "ನಾನು ಹೋಗಲ್ಲ. ನೀವೇ ತೆಗೊಂಡು ಹೋಗಿ" ಎಂದು ರುಕ್ಮಿಣಿ. "ಪರವಿಲ್ಲ, ಹೋಗಮ್ಮ" ಎಂದು ಅತ್ತಿಗೆ...

ಒಳಗೆ ಏನೋ ನಡೆಯುತ್ತಿದೆ. ಘರ್ಷಣೆಯಾಗುವುದಿದ್ದರೆ ತಪ್ಪಿಸಬೇಕು ಎಂದೇನೊ ಅಣ್ಣ ಕೂಗಿದ:

"ರುಕ್ಮಿಣಿ ಎಷ್ಟು ಹೊತ್ತಮ್ಮ ಕಾಯಿಸೋದು. ಶ್ಯಾಮ ಹಸಿದಿರಬೇಕು. ಜಾಗ್ರತೆ ತೆಗೊಂಡು ಬಾ–ಉಪ್ಪಿಟ್ಟು–ಮೊಸರು ಎರಡನ್ನೂವೆ..."

ತನಗೆ ಇನ್ನು ಗತ್ಯಂತರವಿಲ್ಲ ಎಂದು ಮನದಟ್ಟಾಯಿತು. ಉಪ್ಪಿಟ್ಟಿನ ಒಂದೊಂದು ತಟ್ಟೆಯನ್ನೂ ಒಯ್ದು ಅಣ್ಣ ಮತ್ತು ಶ್ಯಾಮನ ಕೈಲಿಟ್ಟು ತಾನು ಸೌಟಿನಲ್ಲಿ ಮೊಗೆದು ಮೊಸರನ್ನು ಬಡಿಸುವಾಗ ಶ್ಯಾಮನ ಕಣ್ಣು ತೇವಗೊಂಡಿತು. ಅದನ್ನು ತೋರಗೊಡದೆ,

"ಎಲ್ಲಿ ಜಾನಕಿ, ಶೇಷ ಇಬ್ಬರೂ ಕಾಣ್ತಾ ಇಲ್ಲ?" ಎಂದು ಹೊರಳು ಮಾತಿನಲ್ಲಿ ಅದನ್ನು ಅದುಮಿಡುವ ಯತ್ನ ನಡೆಸಿದ್ದ.

"ಇವೊತ್ತು ಬುಧವಾರ ಅಲ್ಲವೆ? ಅವರಿಬ್ಬರಿಗೂ ಶಾಲೆಯಿದೆ. ಬಸವಾಪಟ್ಟಣಕ್ಕೆ ಹೋಗಿದ್ದಾರೆ." ಅಶ್ವತ್ಥಣ್ಣ ವಿವರಿಸಿದ್ದ.

ತಾನು ಒಳಗೇ ನಕ್ಕಿದ್ದಳು. ಜಾನಕಿ ಹೋಗಿರುವುದೇನೋ ಸಹಜ. ಆದರೆ ಶೇಷ?– ಯಾರಿಗೆ ಗೊತ್ತು? ಒಂದೊಂದು ದಿನ ಅವನು ಹೋಗುತ್ತಿದ್ದುದೂ ಉಂಟಲ್ಲ–ಅಲ್ಲಿ ಉಪಾಧ್ಯಯರನ್ನು ಕಿಚಾಯಿಸಲಿಕ್ಕೆ! ಈ ದಿನ ಹೋಗಿದ್ದರೂ ಹೋಗಿರಬಹುದು.....

ಈಗೀಗ ರುಕ್ಮಿಣಿಗೆ ಧೈರ್ಯ ಬಂದಿಬಿಟ್ಟಿದೆ. ಅತ್ತಿಗೆ ಹೇಳಿದ ಎಲ್ಲ

ಕೆಲಸಗಳನ್ನೂ ಮಾಡುತ್ತಾಳೆ. ನಮ್ರತೆಯಿಂದ ಮಾಡುತ್ತಾಳೆ. ಹೊಳೆಯಲ್ಲಿ ಬಟ್ಟೆ ಒಗೆದು ತರುವುದರಿಂದ ಹಿಡಿದು ಮುಸುರೆ ಪಾತ್ರೆ ತಿಕ್ಕುವುದು, ಕಸ ಗುಡಿಸುವುದು, ಅಡಿಗೆ ಮಾಡುವುದು, ಹಾಲು ಕರೆಯುವುದು, ಮಗುವನ್ನು ನೋಡಿಕೊಳ್ಳುವವರೆಗೆ ಇಂತಿಷ್ಟೂ ಗೊಣಗದೇ ಪ್ರೀತಿಯಿಂದಲೇ ಮಾಡುತ್ತಾಳೆ. ಆದರೆ ಸಂಜೆಯ ವೇಳೆ ಒಮ್ಮೊಮ್ಮೆ ತನಗೂ ಬೇಸರವಾಗುತ್ತದೆ, ರಾಮಮಂದಿರದಲ್ಲಿ ನಡೆಯುವ ಸಂಗೀತವನ್ನೊ ಹರಿಕತೆಯನ್ನೊ ಕೇಳುವ ಆಸೆ ತನಗೂ ಆಗುತ್ತದೆ ಎಂದು ಹಟ ಹಿಡಿದು, ಸಾತುವಿನ ವಿರೋಧವನ್ನು ಉಲ್ಲಂಘಿಸಿ, ಅಲ್ಲಿಗೆ ನಡೆದುಬಿಡುತ್ತಾಳೆ. ಸಾವಿತ್ರಮ್ಮ ಕುಪಿತಳಾಗಿ ಏನಾದರೂ ಬೈದರೆ, “ನಿಮಗೆ ಅಷ್ಟು ಹಿಂಸೆಯಾದರೆ ನನ್ನ ದರುಮನಹಳ್ಳಿಗೇ ವಾಪಸ್ಸು ಕಳಿಸಿಬಿಡಿ. ನಮ್ಮ ಮಾವಯ್ಯ ಬಂದು ನನ್ನನ್ನು ಕರೆದೊಯ್ಯುವವರೆಗೆ ನೀವೇನೂ ಕಾಯಬೇಕಾಗಿದಿಲ್ಲ” ಎಂಬ ನಿಷ್ಠುರದ ನುಡಿ ಸಾವಿತ್ರಮ್ಮನನ್ನು ತಣ್ಣಗೆ ಮಾಡುತ್ತದೆ. ರುಕ್ಮಿಣಿಯ ಬೆನ್ನಿನ ಹಿಂದೆ ಅವರಿವರ ಸಂಗಡ ಹೀಯಾಳಿಸಿ ಸಮಾಧಾನಪಟ್ಟುಕೊಳ್ಳುವುದು ಒಂದೇ ಅವಳಿಗೀಗ ಉಳಿದಿರುವ ದಾರಿ!...

“ಏನು ಗಯ್ಯಾಳಿಯಾಗಿಬಿಟ್ಟಿದ್ದಾಳೆ ರೀ–ಅದೇನು ಬಾಯಿ! ಏನು ಕಥೆ... ಹಿಂದೆ ಹೀಗಿರಲಿಲ್ಲಮ್ಮ. ಆ ವೀಣೆ ಶ್ಯಾಮ ಊರಿಗೆ ಬಂದ ನೋಡಿ, ಇವಳು ಹೀಗೆ ಬದಲಾಗಿಬಿಟ್ಟಿದ್ದಾಳೆ. ಬಟ್ಟೆ ಒಗೆಯಲಿಕ್ಕೆ ಹೊಳೆಗೆ ಹೋಗುವಾಗ ಅವನ ಮನೆಗೂ ಹೋಗ್ತಾಳಂತೆ. ಅಲ್ಲಿ ಏನೇನು ನಡೆಯುತ್ತೊ” ಎಂದು ಕಣ್ಣು ತೇಲಿಸುತ್ತಿದ್ದಳಂತೆ!

ನೆರೆಮನೆ ಗಿರಿಜಮ್ಮನವರೇ ತಾವೂ ಒಮ್ಮೆ ಹೊಳೆಯ ದಡಕ್ಕೆ ಬಟ್ಟೆ ಒಗೆಯಲು ಬಂದಾಗ, ಆ ಕಡೆ ಈ ಕಡೆ ನೋಡಿ, ಯಾರೂ ಹತ್ತಿರದಲ್ಲಿಲ್ಲ, ಯಾರ ಕಿವಿಗೂ ತಮ್ಮ ಮಾತು ಬೀಳುವ ಸಂಭವವಿಲ್ಲ ಇನ್ನುವುದನ್ನು ಖಾತರಿಪಡಿಸಿದ ನಂತರ, ಗೋಪ್ಯವಾಗಿ ಅಂದಿದ್ದರು:

“ಸಾತು ಗುಣ ನನಗೂ ಒಪ್ಪಲಿಲ್ಲಮ್ಮ. ಮೂರು ದಿನದ ಹಿಂದೆ ನಮ್ಮ ಮನೆಗೆ ಬಂದು, ಸ್ವಲ್ಪ ದಿನ ತಾನು ಹುಟ್ಟಿ ಬೆಳೆದಿರುವ ಊರಿನಲ್ಲಿ ಇದ್ದು ಹೋಗಲಿಕ್ಕೆ ಬಂದಿರುವ ಶ್ಯಾಮನಿಗೂ ನಿನಗೂ–ಥೂ, ಹೊಗಲಿ ಬಿಡು. ಬೇಸರಪಟ್ಟುಕೊ ಬೇಡ. ಅವಳದ್ದು–ಹಾರುವ ಹಕ್ಕಿಗೆ ಹಾದರ ಕಟ್ಟುವ ಜಾತಿ!” ಎಂದು ಹೇಳಿ ತನ್ನ ಮನಸ್ಸನ್ನು ಕಲಕಿದ್ದಳು...

ಒಂದು ಬುಧವಾರ ಶಾಲೆಯಿಂದ ಇಳಿಹೊತ್ತನಲ್ಲಿ ಹಿಂದಿರುಗುತ್ತಿದ್ದ ಜಾನಕಿ ಇಂದೇಕೊ ಸುಮಾರು ಹನ್ನೆರಡು ಗಂಟೆಯ ಸಮಯಕ್ಕೇ ಹಿಂದಿರುಗಿದ್ದು

ಕಂಡು ವಿಸ್ಮಯಪಟ್ಟೆ. ಸದಾ ಖುಷಿಯಾಗಿ ಹಕ್ಕಿಯಂತೆ ಯಾವುದಾದರೂ ಹಾಡು ಗುನುಗುತ್ತ (ಜಾನಕಿಯದು ಮಧುರವಾದ ಕಂಠ. ಅವಳಿಗೆ ಸಂಗೀತ ಪಾಠ ಹೇಳಿಸದೆ ಸಾತು ಅನ್ಯಾಯ ಮಾಡಿದ್ದಳು) ಬರುತ್ತಿದ್ದ ಹುಡುಗಿ. ಈ ದಿನ ತಲೆಗೂದಲೆಲ್ಲ ಕೆದರಿ ಅಸ್ತವ್ಯಸ್ತವಾದ, ಬೆದರುಗಣ್ಣು ಬಿಡುತ್ತಬಂದುದು ನನ್ನನ್ನು ಇನ್ನೂ ಅಧಿಕ ಆತಂಕದಲ್ಲಿ ಕೆಡವಿತ್ತು.

"ಯಾಕಮ್ಮ ಜಾನಿ, ಹೀಗಿದ್ದೀಯ?.... ಏನಾಯಿತು?.... ಯಾಕಿಷ್ಟು ಗಾಬರಿಗೊಂಡಿದೀಯೆ?" ಅತ್ಯಾತುರವಾಗಿ ಕೇಳಿದ್ದೆ.

ಜಾನಕಿ ನಿರುತ್ತರಳಾಗಿ ನನ್ನನ್ನು ತಬ್ಬಿ ನನ್ನೆದೆಗೆ ತನ್ನ ತಲೆಯಾನಿಸಿ ಗಳ ಗಳ ಅತ್ತಳು. ನನಗೆ ದಿಕ್ಕೇ ತೋಚದಾಯಿತು... ಜಾನಿ ಯಾಕೆ ಮಾತು ಆಡುತ್ತಿಲ್ಲ?.... ಯಾಕೆ ಹೀಗೆ ಸುಮ್ಮನೆ ಕಣ್ಣೀರ್ಗರೆಯುತ್ತಿದ್ದಾಳೆ?... ಇವಳಿಗೆ ಆಗಿರುವುದಾದರೂ ಏನು?...

ಅವಳ ಬೆನ್ನು ಸವರುತ್ತ, "ಅಳಬೇಡ, ತಾಯಿ. ಏನಾಗಿದೆ ಹೇಳು" ಎಂದು ಸಂತೈಸುತ್ತಿರುವಂತೆ, ಅವಳ ಹಿಂದಿನಿಂದ ಶ್ಯಾಮನೂ ಅವಳ ಪುಸ್ತಕದ ಕೈಚೀಲ ಹಿಡಿದು ಒಳಗೆ ಕಾಲಿಟ್ಟಿದ್ದು ರುಕ್ಮಿಣಿಗೆ ಮತ್ತೂ ಸೋಜಿಗವೆನಿಸಿತು. ಶ್ಯಾಮ ಬಂದವನೆ, ಕೈಚೀಲವನ್ನು ಮರದ ಸಂದೂಕಿನ ಮೇಲಿಟ್ಟು ಸನ್ನೆಮಾಡಿ, ಅವಳನ್ನು ಬೇಗ ಮಲಗಿಸು ಎಂದಷ್ಟೆ ಹೇಳಿದ. ಬಿಕ್ಕಿ ಬಿಕ್ಕಿ ಅಳುತ್ತಿದ್ದ ಜಾನಿಯನ್ನು ತಬ್ಬಿದಂತೆಯೆ ಮೃದುವಾಗಿ ಕರೆದೊಯ್ದು ಅವಳೂ ಶೇಷನೂ ಮಲಗುವ ಕೊಠಡಿಯಲ್ಲಿ ಹಾಸಿಗೆ ಬಿಡಿಸಿ ಮಲಗಿಸಿದೆ. ನಾನು ಹೊರಗೆ ಬಂದಾಗ ನನ್ನನ್ನು ಒಂದು ಪಕ್ಕಕ್ಕೆ ಕರೆದು ನಡೆದ ಸಂಗತಿ ಎಲ್ಲವನ್ನೂ ಶ್ಯಾಮ ವಿವರಿಸಿ ಹೇಳಿದ್ದ. ವಿವರಸುತ್ತಿರುವಂತೆ ಅವನೇ ಗದ್ಗದಿತನಾಗುತ್ತಿದ್ದ:

ನೆನ್ನೆ ರಾತ್ರಿಯೇ ಶ್ಯಾಮ ಬಸವಾಪಟ್ಟಣಕ್ಕೆ ತೆರಳಿ ನೆಂಟರ ಮನೆಯಲ್ಲಿ ತಂಗಿದ್ದನಂತೆ. ಅಲ್ಲಿಂದ ತಿಂಡಿ ಮುಗಿಸಿ, ರುದ್ರಪಟ್ಟಣದ ಹಾದಿ ಹಿಡಿಯುವಾಗ ಹತ್ತಿರ ಹತ್ತಿರ ಹನ್ನೊಂದಾಗಿತ್ತಂತೆ. ದಾರಿಯಲ್ಲಿ ಪುರಂದರದಾಸರ ನೀನ್ಯಾಕೊ ನಿನ್ನ ಹಂಗ್ಯಾಕೊ' ಪದವನ್ನು ಗುನುಗುತ್ತ ಬರುತ್ತಿದ್ದನಂತೆ. ಆಗ ಹೊಳೆಯ ದಡದಲ್ಲಿ ಉದ್ದಕ್ಕೂ ಹರಡಿದಂತಿದ್ದು ಕೆಲವು ಕಡೆ ದಟ್ಟವಾಗಿದ್ದ ಭಾರಿ ಮರಗಳ ಸಾಲಿನಲ್ಲಿ ಹರಿಗಲು ನಿಲ್ಲುವ ಜಾಗಕ್ಕೆ ಸುಮಾರು ದೂರದಲ್ಲಿ ಯಾರನ್ನೊ ಜೋರು ಜೋರಾಗಿ ಗದರಿಸುತ್ತಿರುವ ಗಂಡು ಧ್ವನಿಗಳನ್ನು ಕೇಳಿ, ಏನೋ ಜಗಳವಿರಬಹುದೆಂದು ಭಾವಿಸಿ ಕುತೂಹಲದಿಂದ ಆ ಕಡೆಗೆ ಹೆಜ್ಜೆಯಿಟ್ಟಂತೆ. ಶ್ಯಾಮ ಕಣ್ಣಿಗೆ ಬಿದ್ದೊಡನೆಗೆ ಆ ಇಬ್ಬರು ಹುಡುಗರು ಅಲ್ಲಿಂದ ಸರ್ರನೆ ಫೇರಿ

ಕಿತ್ತರಂತೆ... ಅವರಿಬ್ಬರೂ ಹಾಗೆ ಓಡಿದ್ದೇಕೆ? ಹುಡುಗಿಯೊಬ್ಬಳೇ ಅಳುತ್ತ ಆ ಮರದ ಬುಡದಲ್ಲಿ ಕುಳಿತಿರುವುದಾದರೂ ಯಾಕೆ?– ಎಂಬ ಸಂಶಯ ಹುಟ್ಟಿ ಶ್ಯಾಮ ಮುಂದೆ ಬಂದಂತೆ, ಆ ಹೆಣ್ಣು ಮಂಡಿಗಳನ್ನು ಕೊಕ್ಕರಿಸಿ ಕುಳಿತು ಅವುಗಳ ನಡುವೆ ಮುಖ ಹುದುಗಿಸಿ, ಅಳುವಾಗಲೂ ಹೆದರಿ ಹೆದರಿ ಬಿಕ್ಕುವುದನ್ನು ಗಮನಿಸಿ, "ಯಾರಮ್ಮಾ ನೀನು? ಭಯಪಡಬೇಡ" ಎನ್ನುತ್ತ ಅವಳ ಹತ್ತಿರ ಹೋಗಿ ನೋಡಿದರೆ ನಮ್ಮ ಜಾನಕಿ!...

ಶ್ಯಾಮ ಹುಡುಗಿಯನ್ನು ರಮಿಸಿ,

"ಏನಾಯಿತು ಕಂದ? ಅವರಿಬ್ಬರೂ ಯಾರು ಹಾಗೆ ಓಡಿಹೋದವರು?" ಎಂದು ಕೇಳಲಾಗಿ, ಇನ್ನೂ ಗಟ್ಟಿಯಾಗಿ ರೋದಿಸುತ್ತ,

"ನಾನು–ನಾನು ಹೇಳಿ–ದ–ರೆ ನನ್ನ... ನನ್ನ ಕೊಂದು ಹಾಕ್ತೀವೀಂತ" ಹೇಳಿ, ಬಿಕ್ಕುವುದರಲ್ಲೇ ಮಾತು ನಿಲ್ಲಿಸಿದ್ದಳಂತೆ.

"ಹೆದರಬೇಡ, ನಾನಿದೀನಿ. ಯಾರಿಗೂ ಹೇಳಲ್ಲ" ಎಂದು ಬಗೆಬಗೆಯಾಗಿ ಧೈರ್ಯ ತುಂಬಿದ ಬಳಿಕ, ಪಾಪ ಆ ಹೆಣ್ಣು, ನಡೆದ ಸಂಗತೀನ ಅಳುತ್ತಳುತ್ತಲೆ ತುಂಡು ತುಂಡು ವಾಕ್ಯಗಳಲ್ಲಿ ತೊದಲಿದ್ದಳಂತೆ:

ಎಂದಿನಂತೆ ಶಾಲೆಗೆ ಹರಿಗರಲಿನಲ್ಲಿ ಹೊಳೆ ದಾಟಿ ತಾನೊಬ್ಬಳೇ ಬಸವಾಪಟ್ಟಣದ ಹಾದಿ ಹಿಡಿದಿದ್ದಳಂತೆ. "ಆಗ ಬೈಸೆಟ್ಟಿ, ಹೀರೋಜಿ... ಇಬ್ಬರೂವೆ... ಅಲ್ಲೆ... ಬಿಲುವಾರ ಮರದ ಬುಡದಲ್ಲಿ ನಿಂತಿದ್ದೋರು... ನಿನ್ನ ತಮ್ಮ... ಶೇಷನಿಗೆ ಮರದಿಂದ ಬಿದ್ದು ಕಾಲು ಮುರಿದಿದೆ..."

"ಬೈಸೆಟ್ಟಿ, ಹೀರೋಜಿ ಅಂದರೆ ನಿನ್ನ ತಮ್ಮ ಆ ದಾಂಡಿಗ ಸ್ನೇಹಿತರು ತಾನೆ?" ಶ್ಯಾಮ ಕೇಳಿದ್ದನಂತೆ.

"ಹೂ... ಹೌದು–ಅವರೇನೆ...."

"ಆಮೇಲೆ?"

"ನಾನು... ಅವರು ಹೇಳೋದು... ನಿಜ ಇರಬಹುದು... ಅಂತ... ಹದರಿ... ಅವರ ಜೊತೇಲಿ... ಅಲ್ಲಿ ಕಾಣುತ್ತಲ್ಲ ಆ ಮುರುಕು ಮಂಟಪದೊಳಕ್ಕೆ ಹೋದೆ... ಅಲ್ಲಿ ಶೇಷ ಇರಲಿಲ್ಲ... ನನಗೆ ಭಯ ಆಗಿ... ಅಲ್ಲಿಂದ ಓಡಲಿಕ್ಕೆ ಪ್ರಯತ್ನಪಟ್ಟೆ... ಆಗ ಅವರಿಬ್ಬರೂ ನನ್ನ ತಬ್ಬಿ ಮತ್ತೆ... ಮತ್ತೆ... ಕೆಳಕ್ಕೆ ಕೆಡವಿ..."

ಮುಂದೆ ಅವಳು ಹೇಳುವಂತಿರಲಿಲ್ಲ. ಹೇಳಬೇಕಾಗಿಯೂ ಇರಲಿಲ್ಲ... ಆ ಪುಂಡರು ನಡೆಸಿದ ಅತ್ಯಾಚಾರದಿಂದ ಶ್ಯಾಮನ ನರನರದಲ್ಲಿಯೂ ರೋಷ ಹರಿದಾಡಿತಂತೆ... ಅವರೆಲ್ಲಿ ತಪ್ಪಿಸಿ ಹೋಗ್ತಾರೆ? ಊರಿನವರು ತಾನೆ? ಇಂದಲ್ಲ

ನಾಳೆ ಸಿಕ್ಕೇ ಸಿಗ್ತಾರೆ. ತಾನು ಮೈಸೂರಿಗೆ ಹಿಂದಿರುಗುವುದರ ಒಳಗೆ ಅವರನ್ನ ಹಣ್ಣುಗಾಯಿ ನೀರುಗಾಯಿ ಆಗುವ ಹಾಗೆ ಬಡಿದು, ಅವರು ಊರಿನಲ್ಲಿ ಇನ್ನು ಎಂದೆಂದಿಗೂ ಇಂಥ ದುಷ್ಕೃತ್ಯ ನಡೆಸದ ಹಾಗೆ ಮಾಡಬೇಕು, ಎನ್ನಿಸಿತಂತೆ. ಆದರೆ ತಕ್ಷಣ ವಿವೇಕ ಉದ್ರೇಕಕ್ಕೆ ಕಡಿವಾಣ ಹಾಕತಂತೆ... ಹೌದು, ಅವರನ್ನು ಶಿಕ್ಷಿಸಲು ಹೋಗಿ, ಅನ್ಯಾಯವಾಗಿ ಆ ಬಾಲಕಿಯ ಮಾನ ಕಳೆದಂತಾಗುವುದಿಲ್ಲವೆ? ಎಂಬ ಚಿಂತೆ ಹುಟ್ಟಿ, ಯಾರಿಗೂ ಪ್ರಕಟಿಸುವುದಿಲ್ಲವೆಂದು ಜಾನಕಿಗೆ ಧೈರ್ಯ ತುಂಬಿ, ಉಪಾಯವಾಗಿ ಹೊಳೆಯ ಆಚೆಯ ದಡದಲ್ಲಿ ಹರಿಗಲು ನಿಲ್ಲುವ ತಾಣದವರೆಗೂ ಅವಳನ್ನು ಕರೆದು ತಂದಿದ್ದನಂತೆ. ಆ ಬಳಿಕೆ ಹೊಳೆಯ ಮಧ್ಯದಲ್ಲಿ ಹರಗಲು ದಡ ಮುಟ್ಟವವರೆಗೂ ಕಾದಿದ್ದು, ಅವಳನ್ನು ಅದರೊಳಗೆ ಹತ್ತಿಸಿ ಕುಳ್ಳಿರಿಸಿದನಂತೆ. ಹರಿಗಲು ಈಚೆ ದಡ ಸೇರುವವರೆಗೂ ಶ್ಯಾಮನಿಗೆ ಆತಂಕ–ಎಲ್ಲಿ ಜಾನಕಿ ಹರಿಗಲಿನಿಂದ ಹೊಳೆಗೆ ಹಾರಿಬಿಡುವಳೊ ಎಂದು!... ಅಂತೂ ಹೀಗೆ ಮೈಯೆಲ್ಲ ಕಣ್ಣಾಗಿ ಕಾವಲಿದ್ದು, ಹರಿಗಲು ಅವರನ್ನು ಈಚೆ ದಡದಲ್ಲಿ ಇಳಿಸಿದಾಗ, ವೀರಾಂಜನೆಯ ಗುಡಿ ಸಮೀಪ, ಯಥಾಪ್ರಕಾರ ಶಾಲೆಗೆ ಚಕ್ಕರ್ ಹೊಡೆದು, ಶೇಷ ಇನ್ನೂ ಕೆಲವರು ಹುಡುಗರೊಂದಿಗೆ ಚಿನ್ನಿ ಆಡುತ್ತಿದ್ದುದು ಕಾಣಿಸಿತಂತೆ. ಹಾಳಾದವನು ಇವನಾದರೂ ಜೊತೆಗೆ ಇದ್ದಿದ್ದರೆ ಈ ಅನಾಹುತ ತಪ್ಪುತ್ತಿತ್ತಲ್ಲ ಎಂದು ಶ್ಯಾಮನಿಗೆ ಅನ್ನಿಸಿತ್ತಂತೆ.

ನಡೆದ ಸಂಗತಿಯನ್ನೆಲ್ಲ ನನಗೆ ಈ ಪರಿಯಲ್ಲಿ ವರ್ಣಿಸಿ, ಶ್ಯಾಮ ಕೊನೆಯದಾಗಿ–

"ಹುಡುಗಿಗೆ ತುಂಬಾ ಘಾಸಿಯಾಗಿದೆ. ಎಲ್ಲಿ ಅವಳು ಪ್ರಾಣ ಕಳೆದು ಕೊಳ್ತಾಳೊ ಎನ್ನುವ ಚಿಂತೆ ನನ್ನನ್ನು ಬಾದಿಸ್ತಾ ಇದೆ, ರುಕ್ಮಿಣಿ. ನಿಮ್ಮ ಅತ್ತಿಗೆಗೂ ಅಣ್ಣನಿಗೂ ಹೇಳು– ಈ ವಿಚಾರ ಬಹಿರಂಗ ಮಾಡದೆ ಗೋಪ್ಯವಾಗಿಟ್ಟು, ಹುಡಿಗೀನ ಆದಷ್ಟು ಜಾಗ್ರತೆ ಲಗ್ನಮಾಡಿ ಕಳಿಸುವ ಏರ್ಪಾಡು ಮಾಡಬೇಕು" ಎಂದ.

ಶ್ಯಾಮ ಹೊರಟುಹೋಗುತ್ತಲೂ ಎಣ್ಣೆನೀರು ಎರದುಕೊಳ್ಳುತ್ತಿದ್ದ ಅತ್ತಿಗೆ ಬಚ್ಚಲು ಕೋಣೆಯಿಂದ ಹೊರಬರುವವರೆಗೂ ನಾನು ಉದ್ವೇಗದಿಂದಲೇ ಕಾದಿದ್ದೆ. ಅವಳು ತಲೆಗೂದಲ ತೇವವನ್ನು ಒತ್ತಿ ತೆಗೆಯುತ್ತಿರುವಾಗ, "ಕೊಂಚ ಹೀಗೆ ಬರ್‍ತೀರ, ಅತ್ತಿಗೆ?" ಅಂದೆ. ನನ್ನ ದನಿಯಲ್ಲಿದ್ದ ಆತಂಕವನ್ನು ನನ್ನ ಪಿಸು ಮಾತನ್ನು ಗಮನಿಸಿ, ಕಳವಳಗೊಂಡ ಅತ್ತಿಗೆ ಸದ್ದಿಲ್ಲದೆ ನನ್ನೊಂದಿಗೆ ಬಂದಳು. ನಾವಿಬ್ಬರೂ ಸಾತು ಮಲಗುವ ಕೋಣೆ ಸೇರುತ್ತಲೂ ನಡೆದ ವಿಚಾರವನ್ನು

ಕಣ್ಣೀರು ಸುರಿಸುತ್ತಲೇ ತಿಳಿಸಿದ್ದೆ... ಕೇಳುತ್ತ. ಸಾತು ಹುಚ್ಚಿಯಂತೆ ಆದಳು...

"ಎಲ್ಲಿದ್ದಾಳೆ ನನ್ನ ಮಗಳು– ಎಲ್ಲಿದ್ದಾಳೆ?" ಎಂದು ಕೂಗುತ್ತ ಎದೆ ಎದೆ ಬಡಿದು ಹಜಾರಕ್ಕೆ ನುಗ್ಗಲು ಯತ್ನಿಸಿದಳು ಆಗ ನಾನು ಅಡ್ಡಗಟ್ಟಿ,

"ಹೀಗೆ ರಂಬಾಟ ಮಾಡಿದರೆ, ಜಾನಕಿ ಪ್ರಾಣ ತೆಗೆದುಕೊಳ್ಳುವ ಅಪಾಯವಿದೆ, ಅದರೊಟ್ಟಿಗೆ ಮಾನಾಪಹರಣದ ಸುದ್ದಿಯೂ ಡಾಣಾಡಂಗುರವಾಗುತ್ತದೆ" ಎಂದು ಎಚ್ಚರಿಸಿದೆ. ಆಗಲೂ ಸಾತು ಗೋಳುಗರೆಯುತ್ತ.

"ನನಗೆ ದಾರಿ ಬಿಡು, ರುಕ್ಕು. ನನಗೆ ದಾರಿ ಬಿಡು" ಎಂದು ಚಡಪಡಿಸುತ್ತಲೆ ಇದ್ದಳು.

ಮುಂದೆ ತುಸು ವೇಳೆಯಲ್ಲಿ ಅಣ್ಣನೂ ಬಂದು, ನನ್ನ ಮಾತನ್ನೆ ಸಮರ್ಥಿಸಿದ್ದರಿಂದ, ಸಾತು ನಮ್ಮಿಂದ ದೂರ ಸರಿದು ಮಂಚದ ಮೇಲೆ ಬಿದ್ದು ಹೊರಳಾಡುತ್ತ ಗೋಳುಗೆರೆಯುತ್ತಲೇ ಇದ್ದಳು. ಅವಳ ಹುಚ್ಚು ಉದ್ವೇಗ ಸಮಾಧಾನ ಸ್ಥಿತಿ ತಲುಪದವವರೆಗೆ ಅವಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವಂತೆ ಅಣ್ಣನನ್ನು ಪ್ರಾರ್ಥಿಸಿ, ರುಕ್ಮಿಣಿ ಜಾನಕಿಯ ಕೋಣೆಗೆ ಬಂದಿದ್ದಳು. ಹುಡುಗಿ ಅತ್ತು ಅತ್ತು ದಣಿದು ಪ್ರಜ್ಞೆ ಹೊದವಳಂತೆ ಮಲಗಿದ್ದಳು. ರುಕ್ಮಿಣಿಯು ಅವಳ ಬಳಿಯೇ ಬಹಳ ಕಾಲ ಮೌನವಾಗಿ ಕುಳಿತಿದ್ದಳು. ಇದ್ದಕ್ಕಿದ್ದಂತೆ ಬೆಚ್ಚಿ 'ಅಮ್ಮಾ' ಎಂದು ಕೂಗುತ್ತ ಜಾನಕಿ ಎದ್ದು ಕೂತಳು. ಅವಳನ್ನು ತಬ್ಬಿ ಎದೆಗೆ ಒತ್ತಿದಂತೆ ಆನಿಸಿಕೊಂಡು,

"ಹೆದರಬೇಡ, ಜಾನಿ, ಅದದ್ದು ಆಯ್ತು. ಈ ಸುದ್ದಿ ಯಾರಿಗೂ ತಿಳಿಯದ ಹಾಗೆ ನಾನು, ಅಮ್ಮ, ಅಪ್ಪ, ಶ್ಯಾಮ ಎಲ್ಲರೂ ಜಾಗರೂಕತೆ ವಹಿಸ್ತೇವೆ" ಎಂದು ರುಕ್ಮಿಣಿ ಆಶ್ವಾಸನೆ ಕೊಡುತ್ತಿದ್ದರೂ ಆ ಹುಡುಗಿ ಮಂಕು ಕವಿದಂತೆ ಎದಿರು ಗೋಡೆಯಲ್ಲೇ ದೃಷ್ಟಿ ನೆಟ್ಟು ಮೌನವಾಗಿ ಕಣ್ಣೀರು ಸುರಿಸುತ್ತಲೆ ಇದ್ದಳು. ತನ್ನೊಬ್ಬಳಿಂದಲೆ ಅವಳನ್ನು ಸುಧಾರಿಸುವುದು ಸಾಧ್ಯವಾಗದೆಂದು ಮನಗಂಡ ರುಕ್ಮಿಣಿ, ಎದ್ದು ಹೋಗಿ ಅಣ್ಣನನ್ನೂ ಅಷ್ಟರಲ್ಲಿ ಕೊಂಚ ಸಮಾಧಾನಸ್ಥಿತಿಗೆ ಬಂದಿದ್ದ ಸಾತು ಅತ್ತಿಗೆಯನ್ನೂ ಕರೆದು ತಂದಿದ್ದಳು. ಅವರಿಬ್ಬರೂ ಜಾನಕಿಯನ್ನು ಪರಿಪರಿಯಾಗಿ ಸಂತೈಸಿದರು. ನಾನು ಬಿಸಿಬಿಸಿ ಕಾಫಿ ತಯಾರಿಸಿ ತಂದಿತ್ತೆ. ಒಲ್ಲೆ ಒಲ್ಲೆ ಎಂದು ತಲೆಯಾಡಿಸಿದಳು, ನಾವೆಲ್ಲರೂ ಮಹತ್ತಾಗಿ ಪ್ರಯತ್ನ ನೆಡಸಿದ ಬಳಿಕ, ಚಿಕ್ಕಮಕ್ಕಳಂತೆ, ಗುಟುಕು ಗುಟುಕಾಗಿ ಕಾಲು ಲೋಟ ಕುಡಿಯಲು ಅವಳಿಗೆ ಅರ್ಧಗಂಟೆಯೇ ಹಿಡಿಯುತು...

ಮೂರು ತಿಂಗಳ ಹಿಂದೆಯೇ ಜಾನಿಕಿ ಮೈನೆರೆದಿದ್ದರೂ ಸಾತು ಆ ವಿಷಯವನ್ನು ಊರಿನವರಿಂದ ಮುಚ್ಚಿಟ್ಟಿದ್ದಳು. ಆಗಲೆ ಹತ್ತಿರದ ಸಂಬಂಧಿಕರ ಒಂದು ವರ ವರ್ಷದ ಹಿಂದೆಯೇ ಬಂದಿದ್ದರೂ ಆ ಹುಡುಗಿನ ಮನೆಯವರು ಬಡವರು, ತನ್ನ ಮಗಳು ಲಕ್ಷಣವಾಗಿದ್ದಾಳೆ, ಸ್ವಲ್ಪ ತಡೆದರೆ ಹಣಕಾಸಿನಲ್ಲಿ ಇನ್ನೂ ಉತ್ತಮವಾದ ವರ ಬಂದೇ ಬರುತ್ತದೆಂದು ನಂಬಿ, ಆ ವರನನ್ನು ತಿರಸ್ಕರಿಸಿದ್ದಳು ಸಾವಿತ್ರಿ!.... ಅಲ್ಲದೆ ಮಗಳು ಇಷ್ಟು ಜಾಗ್ರತೆ ಮೈನೆರೆಯುವಳೆಂದೂ ಅವಳು ಎಣಿಸಿರಲಿಲ್ಲ. ಇನ್ನೊಂದೆರಡು ವರ್ಷಗಳಾದರೂ ತಡೆಯುತ್ತದೆ. ಅಷ್ಟರಲ್ಲಿ ಯಾವುದಾದರೂ ಉತ್ತಮ ಸಂಬಂಧ ಕುದುರಿಸಿ ಲಗ್ನ ಮಾಡುವುದು ಎಂದೂ ಎಣಿಕೆಹಾಕಿದ್ದಳು. ಆದರೆ ಲೆಕ್ಕಾಚಾರ ತಪ್ಪಿ, ಮಗಳು ಮೈನ್ರೆರೆದು ನಿಂತಾಗ ಅದನ್ನು ಮುಚ್ಚಿ ಮುಂದಿನ ಸಾಲಿಗೆ ಲಗ್ನ ಮಾಡಿಬಿಡುವುದೆಂದು ಲೆಕ್ಕಹಾಕಿದಳು. ಈಗ ಅದು ಏರುಪೇರಾಗಿ ಸಾವಿತ್ರಿಗೆ ದಿಕ್ಕೇತೋಚದಂತಾಗಿತ್ತು.

ಸಾವಿತ್ರಿ, ಮಗಳು ದೊಡ್ಡವಳಾದ ವಿಷಯವನ್ನು ಊರಿನವರಿಂದ ರಹಸ್ಯವಾಗಿಡಲು ಕೆಲಕಾಲ ಯಶಸ್ವಿಯಾದರೂ, ಶೇಷನ ಮುಖೇನ ಅವನ ಪೋಲಿಗುಂಪಿಗೆ ಇದು ತಿಳಿಯಲು ಬಹುದಿನ ಬೇಕಾಗಿಲಿಲ್ಲ. ಆ ಗುಂಪಿನಲ್ಲಿದ್ದ ಕೆಲವು ಹುಡುಗರಿಗೆ ಮೀಸೆ ಮೊಳೆಯುತ್ತಿದ್ದು ಅದರಂತೆಯೆ ಹೆಣ್ಣಿನ ಬಗ್ಗೆ ಕುತೂಹಲವೂ ಬೆಳೆಯತೊಡಗಿತ್ತು. ಇಂಥ ದುಷ್ಟ ಕುತೂಹಲವೇ ಈ ಅನರ್ಥಕ್ಕೆಲ್ಲ ಕಾರಣ ಎಂದು ರುಕ್ಮಿಣಿ ತನ್ನಲ್ಲೆ ತರ್ಕಿಸಿದ್ದಳು. ಇದರ ಜೊತೆಗೆ ಯಾವಾಗಲೂ ಜಾನಕಿಯೊಡನೆ ತಪ್ಪದೆ ಶಾಲೆಗೆ ಹೋಗುತ್ತಿದ್ದ ಗಿರಿಜಮ್ಮನ ಮಗಳು ಸುಮಿಗೆ ಕಳೆದೆರಡು ದಿನಗಳಿಂದಲೂ ಜ್ವರ ಬಂದು ಹಾಸಿಗೆ ಹಿಡಿದದ್ದು, ಜಾಕಿಯ ದುರ್ದೈವ!

ಆ ದಿವಸ ಮನೆಯಲ್ಲಿ ಯಾರೂ ಊಟ ಮಾಡಲಿಲ್ಲ–ಶೇಷ ಒಬ್ಬನನ್ನು ಉಳಿದು!... ಮನೆಗೆ ಸತ್ತ ಮನೆಯ ಛಾಯೆ ಬಡಿದಿತ್ತು. ತಾನೊಬ್ಬನೇ ಊಟ ಮಾಡುವಾಗ ಮನೆಯವರೆಲ್ಲರಿಗೂ ಈ ದಿನ ಏನಾಗಿದೆ, ಎಂದು ತಿಳಿದುಕೊಳ್ಳುವ ಚಪಲ ಶೇಷನಿಗೆ! ಆದರೆ ಅವನಿಗೆ ಗುಟ್ಟು ಎಂದು ಹೇಳುವುದೂ ಒಂದೆ, ಪತ್ರಿಕೆಗಳಿಗೆ ಜಾಹೀರಾತು ಕೊಡುವುದೂ ಒಂದೆ!– ಎಂದು ಶ್ಯಾಮ ಎಚ್ಚರಿಕೆ ಕೊಟ್ಟಿದ್ದರಿಂದ, ಜಾನಕಿ ಹುಷಾರು ತಪ್ಪಿದ್ದಾಳೆ, ವಿಪರೀತ ಜ್ವರ ಬಂದಿದೆ, ಎಂದಷ್ಟೆ ತಿಳಿಸಿದೆವು... ಶೇಷನಿಗೆ ಮನೆಯಲ್ಲಿ ಇದ್ದ ಆಸಕ್ತಿಯೆಲ್ಲ ತಾನು ತಿಂಡಿ, ಊಟ ಮುಗಿಸುವವರೆಗೆ ಮಾತ್ರ. ಅದು ಒಮ್ಮೆ ಮುಗಿಯಿತೆಂದರೆ. ಆ ಮನೆಗೂ ಅವನಿಗೂ ಯಾವ ಸಂಬಂಧವೂ ಇದ್ದಂತೆ ತೋರುತ್ತಿರಲಿಲ್ಲ. ಶೇಷನಲ್ಲಿ ಮನೆಯ

ಬಗ್ಗೆ ಹೀಗೆ ಅನಾದರ ಬೆಳೆಯಲು ಸಾತುವೂ ಬಹುಮಟ್ಟಿಗೆ ಕಾರಣ ಎಂದರೂ ತಪ್ಪಾಗಲಾರದು...

ಒಂದು ದಿನ ಅತ್ತಿಗೆ ತೋಟಕ್ಕೆ ಹೋಗಿದ್ದಾಗ ಆಶ್ವತ್ಥಣ್ಣ ಹೇಳಿದದ್ದ:

"ನೋಡು ರುಕ್ಕು, ಯಾವಾಗ ಮಕ್ಕಳೆದುರಿಗೆ ಹೆಂಡತಿಯಾದವಳು ಗಂಡನಿಗೆ ಮರ್ಯಾದೆ ತೋರದೆ ಉದ್ಧಟನದಿಂದ ವರ್ತಿಸುತ್ತಾಳೊ, ಆಗ ಆ ಮಕ್ಕಳೂ ಕೂಡ ಯಾರ ಅಂಕೆ ಅಂಕುಶವಿಲ್ಲದೆ ಬೆಳೆಯಲು ಆರಂಭಿಸುತ್ತವೆ. ಶೇಷನಿಗೆ ಆಗಿರುವುದೂ ಅಷ್ಟೇಯೆ... ಮದುವೆಯಾದ ದಿನದಿಂದಲೂ ಸಾತು ನನ್ನನ್ನು ಹೀನಾಯವಾಗೇ ಕಾಣುತ್ತ ಬಂದಿದ್ದಾಳೆ. ಈಗಲೂ ಮಾತುಮಾತಿಗೂ ನನ್ನನ್ನವಳು ಧಿಕ್ಕರಿಸುವುದನ್ನ ನೀನೂ ಕಂಡೇ ಇದ್ದೀಯೆ. ಆರಂಭದಲ್ಲಿ ಶೇಷ ಏನಾದರೂ ತಪ್ಪು ಮಾಡಿ ನಾನು ಅವನನ್ನು ಗದರಿಸಿದರೆ, 'ಅಯ್ಯೋ ಪಾಪ, ನಮ್ಮ ಶೇಷ ಇನ್ನೂ ಚಿಕ್ಕೋನು. ಸಣ್ಣಪುಟ್ಟ ತಪ್ಪನ್ನೆಲ್ಲ ಒಂದು ಭಾರಿ ಪರ್ವತ ಮಾಡಿ, ಕಂದನ ಮನಸ್ಸನ್ನ ನೋಯಿಸಬೇಡಿ" ಎಂದು ಅವನನ್ನ ವಹಿಸಿಕೊಳ್ಳುತ್ತಲೆ ಇದ್ದಳು. ಈ ಪಕ್ಷಪಾತದಿಂದ ತಂದೆಯಾದ ನನ್ನಲ್ಲಿ ಅವನಿಗಿದ್ದ ಭಯ, ಗೌರವ ಎಲ್ಲವೂ ಮಾಯವಾದವು. ತಾನೂ ಏನೇ ಅಪರಾಧವೆಸಗಿದರೂ ತಾಯಿಯ ಬೆಂಬಲ ತನ್ನ ಕಡೆಗಿದೆ ಎನ್ನುವ ಭಾವನೆ ಅವನಲ್ಲಿ ಬಲವಾಗಿ ಬೇರೂರಿತು... ಗಾಡಿ ಚಕ್ರದ ಒಂದು ಕಡಾಣಿ ಕಿತ್ತ ಬಳಿಕ ಇನ್ನೊಂದು ಕಡಾಣಿ ಕಿತ್ತುಬೀಳಲು ಎಷ್ಟು ಕಾಲ ಬೇಕು?– ಶೇಷನಿಗೆ ಯಾವಾಗ ನನ್ನ ಹತೋಟಿ ತಪ್ಪಿ ಸ್ವೇಚ್ಛೆಯ ರುಚಿ ಕಂಡನೊ ಅಂದಿನಿಂದ ತನ್ನ ತಾಯಿಯ ಹತೋಟಿಯಿಂದಲೂ ತಪ್ಪಿಸಿಕೊಳ್ಳಲು ಹವಣಿಸಿದ. ಊರು ಸೂರೆಹೋದಬಳಿಕ ಕೋಟೆಬಾಗಿಲು ಹಾಕುವ ಯತ್ನ ನಡೆಸಿದಳು ನಿಮ್ಮತ್ತಿಗೆ. ಆಗ ಶೇಷ ಬಗ್ಗುತ್ತಾನೆಯೆ? ಮರದ ಕಾಂಡದೊಳಗೆ ಚೇಗು ಆಗಲೆ ವಿಪರೀತವಾಗಿ ಬೆಳೆದುಹೋಗಿತ್ತು. ತಾಳ್ಮೆಗೆಟ್ಟು ಸಾತು ಮಗನಿಗೆ ಅತ್ಯುಗ್ರ ಶಿಕ್ಷೆಗಳನ್ನೆಲ್ಲ ವಿಧಿಸಿದಳು. ಅನುಭವಿಸಿದಷ್ಟೂ ಅವನಿಗೆ ಈಗ ಜಡ್ಡು ಕಟ್ಟುತ್ತ ಬಂತು. ಕೊನೆಗೆ ಅವಳೇ ಸೋತು ಅವನ ಸ್ವೇಚ್ಛೆಗೆ ಅವನನ್ನು ಬಿಟ್ಟು ಬಿಟ್ಟಳು... ಬಾಲ್ಯದಲ್ಲಿ ನೀನು ಕಂಡ ಹಾಗೆ ಶೇಷ ವಿಧೇಯನಾಗೇ ಇದ್ದ, ಒಳ್ಳೆಯ ಸ್ವಭಾವದವನೂ ಆಗಿದ್ದ. ಆದರೆ ಈಗ?"– ಎನ್ನುತ್ತಿರುವಂತೆ ದುಃಖ ಒತ್ತಿರಿಸಿ ಬಂದು ವಲ್ಲಿಯ ತುದಿಯಿಂದ ಕಣ್ಣುಗಳನ್ನೊರೆಸುತ್ತ, "ಡಿಂಬನಂಥದೆ ಕಥೆಯನ್ನು ಮಾಡಿಟ್ಟಳಲ್ಲ. ಮಹಾತಾಯಿ!..." ಎಂದು ಉದ್ಗರಿಸಿದ. ಒಂದೊಂದು ಮಾತೂ ತ್ವೇಷದಿಂದಲೆ ಹುಟ್ಟಿ ಬಂದಂತಿತ್ತು. ಆದರೆ ಮಾಡುವುದೇನು? ಕಾಲ ಮಿಂಚಿತ್ತು. ಅಲ್ಲದೆ, ಹೆಂಡತಿಯನ್ನು ಮೊದಲಿನಿಂದಲೂ ಹತೋಟಿಮಾಡದೆ,

ಈಗ ಪ್ರಲಾಪ ಮಾಡಿದರೆ ಬಂದ ಭಾಗ್ಯವೇನು?– ಇದು ಒಂದು ರೀತಿಯ ಪಂಡ ರೋಷವಲ್ಲವೆ? ಎಂದೆನ್ನಿಸದೇ ಇರಲಿಲ್ಲ ರುಕ್ಮಿಣಿಗೆ. ಮರುಗಳಿಗೆಯಲ್ಲೇ, ಅಯ್ಯೊ ಸಾತುವಿನಂತಹ ಬಜಾರಿ ಹೆಂಗಸನ್ನು ಅಂಕೆಯಲ್ಲಿಟ್ಟು ಆಳಬೇಕಾದರೆ, ನಮ್ಮಣ್ಣನಂತಹ ಬಡಪಾಯಿ ಸಾಧುಪ್ರಾಣಿಯಿಂದ ಸಾಧ್ಯವೆ? ಅದಕ್ಕೆ ಬಲು ಹಮ್ಮೀರ ಗಂಡೇ ಆಗಿರಬೇಕಿತ್ತು. ಎಂದುಕೊಂಡಳು...

ಮುಂದೆ ಜಾನಕಿಯು ಮುಟ್ಟಾಗುವ ದಿನಗಳನ್ನೆ ನಾವೆಲ್ಲರೂ ರಹಸ್ಯವಾಗಿ ಲೆಕ್ಕ ಹಾಕುತ್ತಿದೆವು. ಒಂದು ವೇಳೆ ಜಾನಕಿ ಬಸಿರಾದರೆ, ಗರ್ಭವನ್ನು ಯಾರಿಂದ ತೆಗೆಸಬಹುದು?– ಸಾತಾನಿ ವಜ್ರಮ್ಮನೋರೆ? ಅಥವಾ ಮೇಲ ಕಟ್ಟುವವರ ಜಾತಿ ತಾಯಕ್ಕನ ಕೇಳಲೆ?– ಕೂತರೆ ನಿಂತರೆ ನನ್ನ ಸಂಗಡ ಇದೇ ಪಲ್ಲವಿ ಸಾತು ಅತ್ತಿಗೆಯದು!...

"ತಾಳಿ ಅತ್ತಿಗೆ, ಈಗಲೆ ಯಾಕೆ ಆ ಮಾತೆಲ್ಲ?... ಇನ್ನೂ ದಿನ ಇದೆಯಲ್ಲ. ಕಾದು ನೋಡೋಣ"

ಇಲ್ಲ. ನನ್ನ ಯಾವ ಸಮಾಧಾನದ ಮಾತೂ ಅವಳಿಗೆ ಪಥ್ಯವಾಗಿರಲಿಲ್ಲ. ಕಾದು ಮರಳುವ ನೀರಿನಂತೆ ಅವಳು ಪ್ರತ್ಯಕ್ಷವಾಗಿ ಕುದಿಯುತ್ತಿದ್ದಳು. ಎಲ್ಲೂ ನಿಲ್ಲಲಾರಳು, ಕೂರಲಾರಳು, ರಾತ್ರಿ ಮಲಗಿದಾಗಲೂ ಸಹ ಸ್ವಲ್ಪ ಹೊತ್ತಿಗೆಲ್ಲ ಎದ್ದು ಕುಳಿತು, ಅಣ್ಣನ ಮಾತಿನಲ್ಲಿ ಹೇಳುವುದಾದರೆ– ಇದೇ ರಾಗ, ತಾನ, ಪಲ್ಲವಿ ಆರಂಭಿಸಿ, ಅಣ್ಣನಿಗೂ ನಿದ್ರೆ ಕೊಡದೆ ಅವನನ್ನು ಇಡೀ ರಾತ್ರಿ ಜಾಗರಣೆ ಕೆಡುವುತ್ತಿದ್ದಳಂತೆ!....

ಜಾನಕಿಗೆ ಹದಿನೈದು ದಿನಗಳ ಪರ್ಯಂತ ಜ್ವರ ಕಾದಿರಬೇಕು. ಈಗ ಜ್ವರ ನಿಂತಿದೆ, ಆಹಾರವನ್ನೂ ಕೊಂಚಕೊಂಚವಾಗಿ ಸೇವಿಸುತ್ತಿದ್ದಾಳೆ. ಅವಳಿಗೆ ಬೇಸರ ಕಳೆಯಲೆಂದು, ಗಿರಿಜಮ್ಮನವರ ಮನೆಯಿಂದ ಹಳ್ಳುಗುಳಿಮಣೆ ತಂದು, ಅವಳ ಮುಂದುಗಡೆಯೇ ಕುಳಿತು ಸಾತುವಿನೊಂದಿಗೆ ರುಕ್ಮಿಣಿ 'ಕಟ್ಟುವ ಮನೆ' ಆಟ ಆಡುವಳು. ಹಳ್ಳುಗುಳಿಮಣೆಯನ್ನು ಗಿರಿಜಮ್ಮನವರ ಮನೆಯಿಂದ ಈಸಿ ತರುವಾಗ, ಅವರು–

"ಇದೇನೆ ಸೋಜಿಗೆ?... ಸಾತು ನಿನ್ನ– ಹಗಲುಹಾದರಗಿತ್ತಿ, ಶ್ಯಾಮನ ಹಟ್ಟಿಯಲ್ಲಿ ಯಾರೂ ಇಲ್ಲದೇ ಇರುವಾಗ, ಹೊಲೆಗೆ ಬಟ್ಟೆ ಒಗೆಯಲು ಹೋಗುವ ನೆವದಲ್ಲಿ, ಹಗಲು ಹೊತ್ತೇ ಅವನ ಜೊತೆ ಮಲಗಿದ್ದು ಬರ್ತಾಳಮ್ಮ ಅಂತ ದನಿ ಸಣ್ಣಗೆ ಮಾಡಿ, ಕಣ್ಣು ಮೂಗು ತಿರುಗಿಸ್ತ ಹೇಳ್ತ ಇದ್ದಳಲ್ಲ ನನ್ನ ಸಂಗಡ? ಈಗೇನು ಇಂಥ ಬದಲಾವಣೆ?... ಈಗ ನಮ್ಮ ಹಟ್ಟಿಕಡೆ ಹರಟೆಗೂ ಬರಲ್ಲ.

ತಿರುಗಿಯೂ ನೋಡಲ್ಲ!... ಅದು ಸರಿ. ಒಟ್ಟಿಗೆ ಹಳ್ಳುಗುಳಿಮಣೆ ಆಡುವ ಮಟ್ಟಿಗೆ ನೀವಿಬ್ಬರೂ ಹೇಗೆ ಹೊಂದಿಕೊಂಡಿರಿ?... ಈ ಕಲಿಗಾಲದಲ್ಲಿ ಹುಲಿ, ಗೋವು ಎರಡೂ ತಮ್ಮವೈರ ತ್ಯಜಿಸಿ ಒಂದಾಗುವುದೂ ಉಂಟೆ?– ಈಗ ಮಾತು ನಿನ್ನ ಮೇಲಣ ದ್ವೇಷ ಬಿಟ್ಟಿರೋದು ಗಮನಿಸಿದರೆ, ಅದೂ ಸಂಭವಿಸೋದು ಸಾಧ್ಯ ಅನ್ನೋದರಲ್ಲಿ ನನಗೆ ಯಾವ ಅನುಮಾನವೂ ಉಳಿದಿಲ್ಲಮ್ಮ!" ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದರು...

ಆಗೀಗ ಶ್ಯಾಮನೂ ವೀಣೆಯನ್ನು ಇಲ್ಲಿಗೇ ತಂದು ತಲ್ಲೀನತೆಯಿಂದ ನುಡಿಸಿ ನಡೆದುಹೋದ ಸಂಗತಿಯನ್ನು ಕೆಟ್ಟ ಕನಸೊ ಎಂಬಂತೆ ಜಾನಕಿ ಅದನ್ನು ಮರೆಯುವಂತೆ ಮಾಡಲು ಪ್ರಯತ್ನಿಸುತ್ತಿದ್ದ. ಅಂಥ ಸಮಯಗಳಲ್ಲಿ ನಮ್ಮ ಸಾವಿತ್ರಿ ತನ್ನ ಸಂಗೀತದ ದ್ವೇಷವನ್ನು ಲವಲೇಶವೂ ಪ್ರಕಟಿಸಿಸದೆ ತಾನೂ ಮೆಚ್ಚುವೆನೆಂದು ತೋರಲು ಆಗಾಗ ತಲೆದೂಗುತ್ತಿದ್ದುದು ಅಣ್ಣನಿಗೂ ನನಗೂ ಬಲು ಮೋಜಿನ ಸಂಗತಿಯೇ ಆಗಿತ್ತು!...

ಆದರೆ ದೈವ ಜಾನಕಿಯ ಪರವಾಗಿತ್ತೆಂದೇ ಹೇಳಬೇಕು. ಮಾಮೂಲಿಗಿನ್ನ ಎರಡು ದಿನ ತಡವಾಗಿ ನಮ್ಮೆಲ್ಲರನ್ನೂ ಆತಂಕದಲ್ಲಿ ಕೆಡವಿದರೂ ಜಾನಕಿ ಮುಟ್ಟಾಗಿ ನಮ್ಮೆಲ್ಲರ ಎದೆಯ ಮೇಲಿನ ಭಾರವನ್ನೂ ಇಳುಕಿದ್ದಳು!– ಸಾತು ಸಂಭ್ರಮದಿಂದ ದೇವರ ಕೋಣೆಯ ನಂದಾದೀಪಕ್ಕೆ ಹಸುವಿನ ತುಪ್ಪವನ್ನೇ ಸುರಿದು ದೀಪ ಹಚ್ಚಿದ್ದಳು...

## ೯

ರುದ್ರಪಟ್ಟದಲ್ಲಿ ಆ ದಿನ ರುಕ್ಮಣಿ ಇದ್ದಿಲ್ಲದ ನೆಮ್ಮದಿಯಿಂದ ಕಾವೇರಿ ನದಿಯಲ್ಲಿ ಬಟೆ ಒಗೆಯುತ್ತಿದ್ದಳು. ಪಾಪ ಏನೂ ಅರಿಯದ ಮುಗ್ಧ ಬಾಲೆ ಜಾನಕಿಯು ಭೀಕರವಾದ ದುರಂತದಿಂದ ಪಾರಾದುದು ಅವಳ ನೆಮ್ಮದಿಗೆ ಒಂದು ಕಾರಣವಾದರೆ, ಸಾತು ಅತ್ತಿಗೆ ಹಿಂದಿನಂತೆ ಕುಳಿತರೆ ನಿಂತರೆ ತಪ್ಪು ಹುಡುಕಿ ತನ್ನ ಮೇಲೆ ಹರಿಹಾಯುವುದನ್ನು ನಿಲ್ಲಿಸಿದ್ದುದು ಮತ್ತೊಂದು ಕಾರಣವಾಗಿತ್ತು. ಆದರೆ ಆ ಬಾಲಕಿಗೆ ದುರಂತ ಸಂಭವಿಸಿ, ಅದರಿಂದ ನನಗೆ ನೆಮ್ಮದಿ ದೊರಕಿದ್ದುದು, ರುಕ್ಮಿಣಿಗೆ ಭರಿಸಲಾಗದ ಕಸಿವಿಸಿಯಾಗಿತ್ತು...

ಕಾವೇರಿ ತನ್ನ ಅಗಲವಾದ ಪಾತ್ರದಲ್ಲಿ ಗಂಭೀರವಾಗಿ ನೆಮ್ಮದಿಯೆಂಬಂತೆ ಹರಿಯುವುದನ್ನೂ ಅದರ ಮೇಲೆ ದಡದಿಂದ ದಡಕ್ಕೆ ಹರಿದಾಡುವ ಹರಿಗಳನ್ನೂ ರುಕ್ಮಿಣಿ ಬಟ್ಟೆಯೊಗೆಯುತ್ತಲೇ ಗಮನಿಸುತ್ತಿದ್ದಳು. ಆಗ, ಹಿಂದೆ ಜಾನಕಿಯಂತೆ

ತಾನೂ ಕೂಡ ಹರಿಗಲಿನಲ್ಲಿ ಕುಳಿತು ಬಸವಾಪಟ್ಟಣದ ಶಾಲೆಗೆ ಹೋಗಿ ಬರುತ್ತಿದ್ದುದು ನೆನಪಾಯಿತು...

ಆಗ ತಾನಿನ್ನೂ ಚಿಕ್ಕವಳು, ಮೈನೆರೆದಿರಲಿಲ್ಲ. ಆದರೂ ಮೈ ಕೈ ತುಂಬಿ ದುಂಡುದುಂಡಾಗಿದ್ದೆ. ನೋಡಿದವರಿಗೆ ಮೈ ನೆರೆದಿರಬಹುದು ಎನ್ನುವಂತೆಯೆ ಕಾಣುತ್ತಿದ್ದೆ. ಆಗ ನಮ್ಮ ತಾಯಿ ಇನ್ನೂ ಬದುಕಿದ್ದರು!– ನನ್ನ ಆಗಿನ ಆರೋಗ್ಯ ನನ್ನ ತಾಯಿಯ ಆರೈಕೆಯ ಫಲವಿರಬೇಕು...

ಹೀಗಿರುವಾಗ ಒಂದು ದಿನ ಅಂಬಿಗರ ಹನುಮ, ಸಂಜೆಹೊತ್ತು ಆಚೆ ದಡದಿಂದ ನಾನೊಬ್ಬಳೆ ಹರಿಗಲ ಹತ್ತಿದ್ದು ಕಂಡು, ಒಂದು ಥರಾ ನಕ್ಕಿದ್ದ. ಆ ಮೇಲೆ ಹುಟ್ಟು ಹಾಕುವಾಗ– ಥೂ, ನೆನೆಸಿಕೊಳ್ಳೋಕು ನಾಚಿಕೆ ಆಗುತ್ತೆ– ಚಡ್ಡಿ ಗುಂಡಿಯನ್ನೆ ಹಾಕಿರಲಿಲ್ಲ... ಆದರೆ ಅವನು ಬೇಕೆಂದು ಹಾಗೆ ಮಾಡಿದ್ದನೊ, ಇಲ್ಲ ಅವನ ಬೇಜವಾಬುದಾರಿಯಿಂದ ಹಾಗಾಗಿತ್ತೊ, ಈಗಲೂ ನನಗೆ ಸಂದೇಹವೆ!... ಹನುಮ ಕಡ್ಡಿಯ ಹಾಗೆ ಬೆಳೆದಿದ್ದ. ಆಳು ಸೆಣಕಲ. ಅವನ್ನು ಮದುವೆಯಾಗಿದ್ದ ಎಂಕಟಿ ನಾನು ರುದ್ರಪಟ್ಟಣಕ್ಕೆ ಹೋದ ಹೊಸದರಲ್ಲೆ ಸಿಕ್ಕಿದ್ದಳು. ಯಾವುದೊ ಮಾತು ಬಂದು, "ನಿನ್ನ ಗಂಡ ಚೆನ್ನಾಗಿದ್ದಾನೇನೆ?" ಕೇಳಿದ್ದೆ. "ಯಾವ ಗಂಡನ್ನ ನೀವು ಕ್ಯಾಳಾದು?" ಅಂತ ಕೇಳಿ ನನ್ನನ್ನೆ ಬೆರಗುಗೊಳಿಸಿದ್ದಳು. ಎಂಕಟಿ ನನ್ನ ವಾರಗೆಯುವಳು. ನಮ್ಮ ತೋಟಕ್ಕೆ ಅವಳು, ಅವಳ ತಾಯಿ ಇಬ್ಬರೂ ಕೂಲಿಕಂಬಲಕ್ಕೆ ಬರುತ್ತಿದ್ದುದುಂಟು ಆಗೊಮ್ಮೆ– "ನಿನ್ನ ಮಗಳನ್ನ ಯಾರಿಗೆ ಕೊಟ್ಟು ಲಗ್ನಮಾಡ್ತೀಯೆ?" ಎಂದು ಎಂಕಟಿಯ ತಾಯಿಯನ್ನ ಅಣ್ಣ ಕೇಳಿದ್ದ.

"ಬ್ಯಾರೆ ಯಾಕೆ ಉಡುಕ್ಕಂಡೋಗ್ಲಿ, ಅಯ್ಯಾರೆ?– ನಮ್ಮ ಅನುಮನೆ ಇಲ್ವ?... ಅವಂಗೇ ಕೊಡಾದು" ಎಂದಿದ್ದಳು. ಅದೇ ಮಾತು ನೆನಪಿನಲ್ಲಿ ಉಳಿದಿದ್ದುದರಿಂದ ಎಂಕಟಿಯನ್ನು ಕೇಳಿದ್ದೆ:

"ಹಾಗಾದ್ರೆ ಹನುಮನ್ನೆ ನೀನು ಲಗ್ನ ಆದದ್ದು ಅಲ್ಲವಾ?... ಮತ್ತೆ ಯಾವ ಗಂಡನ್ನ ನೀವು ಕೇಳೋದು ಅಂದೆಯಲ್ಲ ಯಾಕೆ?"

"ಚು, ಆಗಿದ್ದೆ ಕನ್ರವ್ವ. ಅವನ್ನೇ ಆಗಿದ್ದ. ಇಲ್ಲಾಂತ ಯಾವ ಬಾಯ್ನಲ್ಲಿ ಯೋಳ್ಲಿ?– ಆದ್ರೆ ಯಾವ ಸೀಮೆ ಗಮಡಸ ಅವ್ನು?... ಮಗ್ಗಲಲ್ಲಿ ಮನಗಿಸಿಕಂಡ್ರೆ, ಒಂದು ಎಲೆ ಕೂಸ ತಬ್ಕಂಡು ಮನಕ್ಕಂಡಗಾಯ್ತಿತ್ತು. ಅದರಾಗೆ ಯಾವ ಸುಕ, ತಗೀರಿ. ಬರಿ ನೀರಿಗೆ ಬೆಟ್ಟ ಅದ್ದಿ ಚೀಪಿದಂಗೆ, ಅಷ್ಟೇಯ!... ನಾನೂವೆ ಒಂದು ಒಂದೂವರೆ ವರ್ಸದ ತಂಕ ಎಂಗೊ ಸೈಸಿಕಂಡಿದ್ದೆ..."

ಎಂದು ಸ್ವಲ್ಪ ತಡೆದಳು. ತರುವಾಯ, "ಅಯ್ಯೊ, ಪರ್ಪಂಚಕೇ ಗ್ವತ್ತಿರ್ವಾಗ ನಿಮ್ಮ ತಾವು ಮುಚ್ಚಕ್ಕೆ ಹ್ವಾದರೆ, ತಿಕ ಬುಟ್ಟು ಸ್ಯಾಲೆ ಸುತ್ತಿಗಂಡಂಗೆ ಆಯ್ತದೆ... ಕ್ಯಾಳಿ. ನಿಮ್ಮ ತಾವು ಯೋಳಕ್ಕೇನು– ನಂದೂ ಎಣ್ಣು ಜಲ್ಮ. ತಡೀನಿಲ್ಲ. ಅವನ್ನ ಬುಟ್ಟುಬುಟ್ಟು ಬ್ಯಾರೆ ಒಬ್ನ ಮಡೀಕಂಡಿವ್ನಿ."– ನೀರು ಕುಡಿದಷ್ಟು ಸಲೀಸಾಗಿ ನುಡಿದಿದ್ದಳು!...

ಬಸವಾಪಟ್ಟಣದ ಬಳೆಗಾರ ಜಗಸೆಟ್ಟಿ ಬಳೆಮಲಾರವನ್ನು ತನ್ನ ಹೆಗಲಿನಿಂದ ಹಿಂದೆಮುಂದೆ ತೂಗಿಬಿಟ್ಟ ಬಟ್ಟೆಗಂಟಿನಲ್ಲಿ ಹೊತ್ತು ಹರಿಗಲಿನಿಂದ ಈಚೆ ದಡದಲ್ಲಿ ಇಳಿದಾಗ ಬಿಸಿಲಿನ ಪ್ರಭೆಗೆ ಫಲಫಲ ಹೊಳೆಯುವ ರಂಗುರಂಗಿನ ಬಳೆಗಳು ನನ್ನೊಳಗೆ ಬತ್ತಿಹೋಗಿದ್ದ ಬಯಕೆಯನ್ನು ಮೀಟುತ್ತಿದ್ದವು. ನನ್ನ ಸನಿಹದಲ್ಲೆ ಕುಳಿತು ಬಟ್ಟಗಳಿಗೆ ಸಾಬೂನು ಹಚ್ಚಿತ್ತಿದ್ದ ನಮ್ಮ ಮನೆಯ ಹಿಂದಿನ ಸಾಲಿನಲ್ಲಿ ವಾಸಿಸುವ ನಾಗಪ್ಪನವರ ಸೊಸೆ ಲಕ್ಷ್ಮಿದೇವಿಯ ಎರಡೂ ಮುಂಗೈಗಳ ತುಂಬ ಎರಡೆರಡು ಚಿನ್ನದ ಬಳೆಗಳ ಕಣ್ಣು ಕೋರೈಸುವ ಗಾಜಿನ ಕೆಂಪು ಹಸಿರು ಬಳೆಗಳ ಮೇಲೆ ನನ್ನ ದೃಷ್ಟಿ ಹರಿದಿತ್ತು. ನನಗರಿವಿಲ್ಲದಂತೆಯೆ ಅಸೂಯೆ ಬೆರೆತ ನಿಟ್ಟುಸಿರುಬಿಟ್ಟಿದ್ದೆ. ಲಕ್ಷ್ಮೀದೇವಿಗೂ ನನ್ನಂತೆ ಗಂಡ ಜೊತೆಗಿಲ್ಲ ವ್ಯತ್ಯಾಸ ಇಷ್ಟೆ. ನನ್ನ ಪತಿ ಸತ್ತು ಸ್ವರ್ಗ ಸೇರಿದ್ದರೆ, ಅವಳ ಗಂಡ ಅವಳನ್ನು ತೊರೆದು ಬೇರೆ ಜಾತಿಯ ಗಂಡನುಳ್ಳ ಗರತಿಯೊಡನೆ ಬೊಂಬಾಯಿಗೆ ಓಡಿಹೋಗಿದ್ದಾನೆ... ಆದರೂ ಅವಳಿಗೆ ತನ್ನ ಮುಂಗೈಗಳಿಗೆ ಬಳೆ ಹಾಕಿಕೊಳ್ಳುವ ಆದಿಕಾರವುಂಟು. ನನಗೆಮಾತ್ರ– ಎಂದು ವಿಷಣ್ಣಳಾಗಿ, ಒಗೆ ಬಟ್ಟೆಗಳನ್ನು ನೀರಿನಲ್ಲಿ ಜಾಲಿಸುತ್ತಿರುವಾಗ, ಅವಳ ಬೆನ್ನಿನ ಹಿಂದೆಪರಿಚಿತ ದನಿಯೊಂದು " ಅಮ್ಮಾರೆ– ಅಮ್ಮಾರೆ..." ಎಂಬ ಕೂಗು ಕಿವಿಗೆ ಬಿದ್ದು ಚಕಿತಳಾದಳು. ಕುಕ್ಕರಗಾಲಿನಲ್ಲಿ ಕುಳಿತಂತೆಯೆ ಹಿಂದಿರುಗಿ ನೋಡಿದಳು... ದರುಮನಳ್ಳಿಯ ಲಕ್ಕ!– ಸಂತೋಷವಾಯಿತು. ಅವನ ಪಕ್ಕದಲ್ಲೆ ಅವನನ್ನು ಎಂದೂ ಎಡೆಬಿಡದ ಅವನ ಬಾಳ ಸಂಗಾತಿ– ನಾಲಿಗೆ ಹಿರಿದು ನಗರುತ್ತ ನಿಂತ, ಬೊಡ್ಡ!...

"ನೀನು ಯಾವಾಗ ಬಂದೆಯೊ, ಲಕ್ಕ?" ಕೇಳಿದೆ.

"ಇದೇ ಬಂದೆ ಕನ್ರವ್ವ"– ಅವನು ಅಂದಾಗ, ಅವನ ಮುಖ ಅಳುಅಳು ಸುರಿಯುತ್ತಿತ್ತು.

ನನಗೆ ಮತ್ತೂ ಅಚ್ಚರಿಯಾಯಿತು. ಲಕ್ಕನದು ಯಾವಾಗಲೂ ನಗು ನಗುತ್ತ ಇರುವ ಲವಲವಿಕೆಯ ಸ್ವಭಾವ. ಖುಷಿ ಹೈದ. ನಮ್ಮ ಹಟ್ಟಿಗೆ ಬರವಾಗಲೆಲ್ಲ ಮುಖದಲ್ಲಿ ಸದಾ ಸಂತೋಷವನ್ನು ತುಳುಕಿಸುತ್ತ ಬರುತ್ತಿದ್ದ. ಏನೇ ಕಷ್ಟ

ಬಂದರೂ 'ಮನುಸನಿಗೆ ಬರದೆ ಮರಕ್ಕೆ ಬಂದಾತ?' ಎಂದು ತಾಳಿಕೊಳ್ಳುವ ಪ್ರವೃತ್ತಿ. ಇಂಥವನು ಯಾಕೆ ಈ ದಿನ ಅಳುಮೂಂಜಿಯಾಗಿ ಈ ರೀತಿ ಸಪ್ಪೆ ಮೋರೆ ಹಾಕಿ ನಿಂತಿದ್ದಾನೆ?– ಏನಾಗಿರಬಹುದು?...

"ಲಕ್ಕ. ನಿನೊಬ್ಬನೆ ಬಂದೆಯೇನು?" ಅಂದುದಕ್ಕೆ, ಸುಮ್ಮನೆ ಹೌದು ಎನ್ನುವಂತೆ ತಲೆ ಕುಣಿಸಿದ್ದ.

"ನಡೆದೇ ಬಂದಿಯೇನು?" ಅಂತ ಕೇಳಿದಾಗ, "ಗಾಡೀಲಿ ಬಂದೆ" ಎಂದಷ್ಟೇ ಹೇಳಿ ನಿಲ್ಲಿಸಿದ್ದ. ನನಗೆ ಸೋಜಿಗವೆನಿಸಿ, "ಗಾಡಿ ಯಾಕೆ?" ಎಂದೇ.

"ನಿಮ್ಮ ಊರಿಗೆ ಕರ್ಕಂಡೋಗಕೆ" ಅಂದಾಗ– ಸ್ನಾನಘಟ್ಟದಲ್ಲಿ ಬಟ್ಟೆ ಒಗೆಯುತ್ತಿದ್ದ, ಪಾತ್ರೆಗಳನ್ನು ಬೆಳಗಿ ಹಿತ್ತಾಲೆ ಮತ್ತು ತಾಮ್ರದ ಬಿಂದಿಗೆಗಳಲ್ಲಿ ನೀರು ತುಂಬುತ್ತಿದ್ದ ಮಹಿಳಾವೃಂದದ ಕಿವಿಗಳು ನೆಟ್ಟಗಾದವು.

"ಈಗ– ಅದೇನು ಉರಿಗೆ?"– ಆಶ್ಚರ್ಯಪಡುತ್ತಲೆ ಕೇಳಿದ್ದಕ್ಕೆ.

"ಅಟ್ಟಿ ತಾವಿಕೆ ಬನ್ನಿ, ಯೋಳ್ತೀನಿ"– ಅಂದ.

ಲಕ್ಕ ಪರವಾಗಿಲ್ಲ; ಈಚೀಚೆಗೆ ಪೂರಾವಿಚಕ್ಷಣೆ ಬಂದಿದೆ– ಎಂದುಕೊಳ್ಳುತ್ತ ಬಟ್ಟೆಗಳನ್ನು ಹಿಂಡಿ, ಕುಕ್ಕೆಗೆ ತುಂಬಿ, ಅದನ್ನು ಹೊತ್ತು, ಎದ್ದಳು.

ಮನೆ ತಲುಪಿದ ತರುವಾಯವೆ ಲಕ್ಕ ಬಾಯಿ ಬಿಚ್ಚಿದ್ದು:

ನಮ್ಮ ಸುಶೀಲತ್ತೆ ದರುಮನಹಳ್ಳಿಯ ನಮ್ಮ ತೋಟದ ಕೊಳದ ಹಾಸುಗಲ್ಲಿನ ಮೇಲೆ ನೆನ್ನೆ ಬಟ್ಟೆ ಒಗೆಯುತ್ತಿದ್ದರಂತೆ. ಆಗ ಏನೊ ಅವರ ಕಾಲು ಕಡಿದ ಹಾಗೆ ಆಯ್ತಂತೆ. ಯಾವುದೊ ಹುಳು ಇರಬೇಕು ಅನ್ನಿಸಿ, ಅತ್ತ ಗಮನ ಕೊಡದೆ, ಸರಸಿಯ ಲಂಗಕ್ಕೆ ಸಾಬೂನು ಹಚ್ಚುವುದರಲ್ಲಿ ನಿರತರಾಗಿದ್ದರಂತೆ. ಅಲ್ಲೆ ಸಮೀಪದಲ್ಲೆ ತನ್ನ ಪಾಡಿಗೆ ತಾನು ಆಡುತ್ತಿದ್ದ ಸರಸಿ ಚಿಟ್ಟನೆ ಚೀರಿ, 'ಹಾವು– ಹಾವು' ಎನ್ನುತ್ತ ತನ್ನ ತಾಯಿಯ ಬಳಿಗೆ ಓಡಬಂದಳಂತೆ... 'ಎಲ್ಲೆ ಹಾವು?' ಎಂದು ಸುಶೀಲತ್ತೆ ತಿರುಗಿ ನೋಡಿದರಂತೆ ದೂರದಲ್ಲಿ ಬಿಸಿಲಿನ ಝಳಕ್ಕೆ ಮಿರಿಮಿರಿ ಮಿಂಚುವ ಭಾರಿ ಗೋಧಿನಾಗರ ಹಾವು ಹರಿದುಹೋಗುತ್ತಿತ್ತಂತೆ. ತನ್ನ ಕಾಲನ್ನು ನೋಡಿಕೊಂಡಳಂತೆ. ಬಲಗಾಲನಿನ ಕಿರುಬೆರಳಿನಲ್ಲಿ ಗಾಯವಾಗಿ ರಕ್ತ ಸೋರುತ್ತಿತ್ತಂತೆ! ಪುನಃ ಕಣ್ಣೆತ್ತಿ ಸರಸರನೆ ನುಲಿನುಲಿದು ಸಾಗುವ ಘಟಸರ್ಪವನ್ನು ಇನ್ನೊಮ್ಮೆ ನೋಡಿದರಂತೆ. ಮತ್ತೆ ಅದರಿಂದ ಕಣ್ಣು ಕಿತ್ತು ರಕ್ತ ಬಸಿಯುತ್ತಿರುವ ಬೆರಳಿನ ಗಾಯದತ್ತ ದೃಷ್ಟಿ ನೆಟ್ಟರಂತೆ. ಆ ಗಳಿಗೆಯಲ್ಲೆ ಅವರ ಪ್ರಾಣಪಕ್ಷಿ ಹಾರಿಹೋಗಿತ್ತಂತೆ!... ಸಮೀಪದ ಅಡಿಕೆಮರಕ್ಕೆ ಒರಗಿಸಿದ್ದ ಬಿದಿರೇಣಿಯಿಮದ ಇಳಿಯುತ್ತಿದ್ದ ಮಾವನವರು, ಸರಸಿ ಕಿರಚಿದಾಗ ಮಾತ್ರ ಆ

ಕಡೆ ಗಮನ ಹರಿಸಿದ್ದುದಂತೆ. ಅವರು ಕೆಳಗಿಳಿದು ಧಾವಿಸಿ ಬರುವುದರಲ್ಲಿ ಅವರ ತಂಗಿ ಕುಳಿತು ಸ್ಥಳದಲ್ಲೇ ಪ್ರಾಣ ಬಿಟ್ಟದ್ದರಂತೆ!...

ಕೇಳಿ ನನಗೆ ಹೌಹಾರಿದಂತಾಯಿತು. ಸುಶೀಲತ್ತೆ ಎಂಥ ಧೈರ್ಯಗಾತಿ! ಹಾವು–ಎಲ್ಲಿ ಸಿಕ್ಕಲಿ ಅಲ್ಲಿ ಸದೆಬಡಿಯುತ್ತಿದ್ದವಳು!... ಅವಳಿಗೆ ಇಂಥ ಗತಿಯೆ? ಎಂದು ನಾನು ವಿವಶಳಾದೆ... ತಟ್ಟನೆ ಹಿಂದೆ ಸುಶೀಲತ್ತೆ ಹಾವನ್ನು ಎದುರಿಸಿದ ಪ್ರಸಂಗವೊಂದು ನೆನಪಾಗಿ ರುಕ್ಮಿಣಿಯ ಮೈ ಜುಮ್ಮೆಂದಿತು:

ಒಂದು ರಾತ್ರಿ ದರುಮನಳ್ಳಿಯ ನಮ್ಮ ಮನೆಯಲ್ಲಿ ಎಲ್ಲರಿಗೂ ಊಟ ಮುಗಿದಿತ್ತು. ಸರಸಿಯೊಡನೆ ಮಲಗುವ ಕೋಣೆಗೆ ಕಾಲಿಟ್ಟೆ. ಒಳಗೆ ಸರಸರ, ಭುಸ್‌ಭುಸ್ ಸದ್ದಾಯಿತು. ದಿಗ್ಭ್ರಾಂತಳಾದೆ. ಸರಸಿಯಂತೂ ಕಿಟಾರನೆ ಕಿರಚಿ, ನನ್ನನ್ನು ಬಲವಾಗಿ ತಬ್ಬಿದಳು. ಇಬ್ಬರೂ ಹೊರಕ್ಕೆ ಓಡಿಬಂದು 'ಹಾವು–ಹಾವು!' ಎಂದು ಕೂಗಿದೆವು. ಮಾವಯ್ಯ ಓಡಿ ಬಂದಿದ್ದರು. ಸುಶೀಲತ್ತೆ ಲಾಟೀನು ತಂದಿದ್ದರು. ಆ ಬೆಳಕಿನಲ್ಲಿ ಸರ್ಪ ಸ್ಪಷ್ಟವಾಗಿ ಗೋಚರಿಸಿತು. ಎಂದು ಬಾರದ ಸರ್ಪ ಎಷ್ಟು ಒಳಬಾಗದಲ್ಲಿ ಇರುವ ಕೋಣೆಯೊಳಗೆ ಹೇಗೆ ಬಂದಿತು?– ಎಂದು ಎಲ್ಲರಿಗೂ ವಿಸ್ಮಯ–ಲಾಟೀನಿನ ಬೆಳಕು ಕೋಣೆಯಲ್ಲಿ ಬಿದ್ದಾಗ ಸರ್ಪ ಬಾಗಿಲಿಗೆ ಎದಿರಾಗಿ ಹೆಡೆಯೆತ್ತಿ ಬುಸುಗುಡುತ್ತಿತ್ತು. ಸರ್ಪವನ್ನು ಹೊಡೆಯಬಾರದು ಎಂದು ಮಾವಯ್ಯ. ನಾವು ಸ್ವಲ್ಪ ದೂರ ನಿಂತು ಅವಖಾಸ ಮಾಡಿಕೊಟ್ಟರೆ ಸಾಕು, ಅದು ಹೊರಟುಹೋಗುತ್ತೆ. ಬೇಕಾದರೆ ಕೋಲಿನಿಂದ ತಾನು ಅದನ್ನು ಹೆದರಿಸುತ್ತ. ಬೀದಿಬಾಗಿಲಿನಿಂದ ಅದು ಹೊರಗೆ ಹೋಗುವಂತೆ ಮಾಡ್ತೇನೆ– ಎಂಬುದು ಮಾವಯ್ಯನ ವಾದ. ಸುಶೀಲತ್ತೆಗೆ ಆ ವಾದ ಹಿಡಿಸಲಿಲ್ಲ.

"ಹೋಗಣ್ಣ, ನೀನೂ ಸರಿ. ಮಂತ್ರಿಸಿದರೆ ಮಾವಿನಕಾಯಿ ಉದುರುತ್ತೆ? ನೀನು ಅದನ್ನ ಓಡಿಸ್ತೀನಿ ಎಂದು ಹೋಗಿ, ಅದು ಉಗ್ರವಾಗಿ ನಿನ್ನ ಮೇಲೇ ತಿರುಗಿಬಿದ್ದು ನಿನ್ನನ್ನೆ ಕಚ್ಚಿಬಿಟ್ಟರೆ?– ಆಗೇನು ಮಾಡೋದು?... ಅದೆಲ್ಲ ಆಗಲ್ಲ. ಆ ಕೋಲು ತಾ ಇಲ್ಲಿ!" ಎಂದು ಸುಶೀಲತ್ತೆ ಅಣ್ಣನಿಂದ ಕೋಲು ಪಡೆದು, ತನ್ನ ಕೈಲಿದ್ದ ಲಾಟೀನನ್ನು ಮಾವಯ್ಯನ ಕೈಗಿತ್ತು, "ಲ್ಯಾಟೀನಿನ ಬೆಳಕನ್ನು ಇನ್ನೂ ದೊಡ್ಡದು ಮಾಡಣ್ಣ" ಎಂದು ಸೂಚಿಸಿದಳು...

ಸರಸಿ, ನಾನು ಇಬ್ಬರೂ ಹೆದರಿ ಹಜಾರದ ಒಂದು ಮೂಲೆಗೆ ಹೋಗಿ ನಿಂತೆವು...ಕೈಯಲ್ಲಿ ಕೋಲು ಹಿಡಿದು ಸುಶೀಲತ್ತೆ, ಸರ್ಪ ಕೋಣೆಯ ಹೊರಗೆ ಬರುವುದನ್ನೇ ಕಾಯುತ್ತ ನಿಂತಿದ್ದಳು. ಲಾಟೀನಿನ ಬೆಳಕನ್ನು ದೊಡ್ಡದು ಮಾಡಿ, ಕೋಣೆಯೋಳಗೆ ಪ್ರಕಾಶ ಬೀಳುವಂತೆ ಮಾಡುವ ನಿರ್ವಾಹವಿಲ್ಲದ ಕೆಲಸ

ಮಾವನ ಪಾಲಿಗೆ ಬಂದಿತು. ಸರ್ಪ ಬಹಳ ಸಮಯ ಕೋಣೆಯೊಳಗೆ ಬುಸುಗುಡುತ್ತ. ಆಗಾಗ ಹೆಡೆಯತ್ತಿ ನಿಲ್ಲುತ್ತ, ಅಲ್ಲಲ್ಲೆ ಸುತ್ತುತ್ತಿತ್ತೇ ಹೊರತು, ಹೊರಗೆ ಮಾತ್ರ ಅದು ಬರಲೇ ಇಲ್ಲ. ಅತ್ತೆಗೂ ರೋಸಿತು. "ಎಲ್ಲಿ, ಬೆಳಕನ್ನು ಇನ್ನೂ ಕೊಂಚ ಹತ್ತಿರ ತಾ" ಎಂದು ಅಣ್ಣನಿಗೆ ಹೇಳಿದಳು. ಮಾವಯ್ಯ ನಾಲ್ಕು ಹೆಜ್ಜೆ ಮುಂದೆ ಹೋಗಿ ಲಾಟೀನನ್ನು ಎತ್ತಿ ಹಿಡಿದರು. ಲಾಟೀನಿನ ಪ್ರಕಾಶ, ತನ್ನೆದುರು ನಿಂತು ತನ್ನ ಚಲನೆಗೆ ಅಡ್ಡಿ ಮಾಡುತ್ತಿರುವ ಜನ, ಇವೆಲ್ಲದರಿಂದಲೂ ಕುಪಿತಗೊಂಡ ಸರ್ಪ ಭಯಂಕರವಾಗಿ ಮೊರೆಯುತ್ತ, ತನ್ನ ಹೆಡೆಯನ್ನು ಅತ್ತಿಂದಿತ್ತ ಭೀಕರವಾಗಿ ಆಡಿಸುತ್ತ, ಇನ್ನೂ ಹತ್ತಿರ ಬಂದರೆ ಮೇಲೆಬೀಳಲು ಸಿದ್ಧತೆ ನಡೆಸಿದಂತಿತ್ತು. ಆದರೆ ಸುಶೀಲತ್ತೆ ಮಹಾ ಎದೆಗಾತಿ. ಕೋಲನ್ನು ಮೇಲೆತ್ತಿ ಧೈರ್ಯವಾಗಿ ಕೋಣೆಯೊಳಗೆ ನುಗ್ಗಿ, ಒಕ್ಕಣೆಯಲ್ಲಿ ರೈತರು ಕೋಲಿನಿಂದ ತೆನೆಗಳನ್ನು ಬಡಿಯುವಂತೆ ಆ ಸರ್ಪವನ್ನು ಸಡೆಬಡಿಸಿದ್ದಳು!...

ಅಂಥವಳಿಗೆ ಕೇವಲ ಹಾವು ಕಚ್ಚಿತು ಎಂಬ ಅರಿವು ಮೂಡಿದೊಡನೆಯೆ ಪ್ರಾಣ ಹೋಗಬೇಕೆ?... ಎಂಥ ವಿಚಿತ್ರ–ಹಾವಿನ ಬಗ್ಗೆ ಅಷ್ಟು ನಿರ್ಲಕ್ಷ್ಯದಿಂದಿದ್ದವಳು, ಅದು ಕಚ್ಚಿತೆಂದು ತಿಳಿದ ಮರುಕ್ಷಣದಲ್ಲೇ ಭೀತಿಯಿಂದ ಕಣ್ಮುಚ್ಚಿದಳಲ್ಲ!...

ಅಂದಿನಿಂದ ಆ ಕೋಣೆಯಲ್ಲಿ ಮಲಗುವುದೆಂದರೆ ಸರಸಿಗೂ ನನಗೂ ಎಲ್ಲಿಲ್ಲದ ಭಯ. ಆದರೆ ಸುಶೀಲತ್ತೆ ಬಿಡಬೇಕಲ್ಲ:

"ಯಾಕೆ ರುಕ್ಕು, ಇಷ್ಟು ಭಯ ಬೀಳ್ತೀಯ?– ನಿನ್ನನ್ನು ನೋಡಿ, ನಮ್ಮ ಸರಸಿಗೂ ಪುಕ್ಕಲು ಬಂದುಬಿಟ್ಟಿದೆ. ಈ ಪುಕ್ಕಲು ಬಿಡಬೇಕು. ಕಚ್ಚಿಸಿಕೊಂಡು ಸಾಯಬೇಕೂಂತ ನಮ್ಮ ಹಣೇಲಿ ಬರೆದಿದ್ದರೆ, ಅದನ್ನ ನಾವು ತಪ್ಪಿಸಿಕೊಳ್ಳಲಿಕ್ಕೆ ಆಗುತ್ಯೆ?– ಹುಚ್ಚಿ, ಆ ಮಗೂಗು ಧೈರ್ಯ ಹೇಳಿ, ಸುಮ್ಮನೆ ಹೋಗಿ ಮಲಕ್ಕೊ" ಎಂದು ಒತ್ತಾಯಿಸಿದ್ದಳು

ಅತ್ತೆಯ ಬಲವಂತಕ್ಕೆ ಆ ಕೋಣೆಗೆ ಹೋಗಿ ಮಲಗಿದ್ದಾಯಿತು. ಆದರೆ ಮಾವಯ್ಯ ಆ ಕೋಣೆ ಮೂಲೆಯಲ್ಲಿ ದೀಪಾಲೆ ಕಂಬ ಇಡಿಸಿ, ಅದರ ಮೇಲೆ ಹಣತೆ ತಂದಿರಿಸಿ, ಉಪಕಾರ ಮಾಡಿದ್ದರು. ಆ ದೀಪ ಬಂದ ಬಳಿಕವೆ ಸ್ವಲ್ಪ ಧೈರ್ಯದಿಂದ ನಾವಿಬ್ಬರೂ ನಿದ್ರೆ ಮಾಡುವುದು ಸಾಧ್ಯವಾಗಿತ್ತು. ಆದರೂ ಒಂದೊಂದು ಸಲ ನಡುರಾತ್ರಿಯ ವೇಳೆ ಎಚ್ಚರವಾದಾಗ, ಯಾವುದಾದರೂ ಹಾವು ಬಂದು ಪಕ್ಕದಲ್ಲಿ ಮಲಗಿದೆಯೊ ಹೇಗೆ, ಎಂದು ತಡಕಾಡಿ ನಡುಗಿದ್ದೂ ಉಂಟು!...

ಇಷ್ಟಾದರೂ ಲಕ್ಕ ಹೇಳಿದ ಸುದ್ದಿಯನ್ನು ಇನ್ನೂ ತಾನು ನಂಬುವುದೇ

ಕಠಿಣವಾಗಿತ್ತು.... 'ದಾವಾಯ್ತದೆ, ವಸಿ ಮಜ್ಜಿಗೆ ಕ್ವಡಿ" ಎಂದು ಕೇಳಿ ಲಕ್ಕ ಮಾತು ನಿಲ್ಲಿಸಿದ. ಮಜ್ಜಿಗೆ ತರಲು ರುಕ್ಮಿಣಿಯೆ ಎದ್ದು ಹೋಗಿದ್ದಳು. "ಗಟ್ಟಿ ಮಜ್ಜಿಗೆ ಬ್ಯಾಡಿ. ಈರುಳ್ಳಿ ಕತ್ತಿರಿಸಾಕಿ, ವಸಿ ಉಪ್ನೂವೆ ಕದ್ರಿ, ಕಣ್ಣೇರ್ನಂಗೆ ಮಜ್ಜಿಗೆ ಮಾಡಿಕಂಬನ್ನಿ. ಫಕತ್ತಾಗಿ ಒಂದು ಚೊಂಬು ಮಜ್ಜಿಗೆ ತರಬೇಕು" ಎಂದಿದ್ದ. ರುಕ್ಮಿಣಿ ಅವನು ಬಯಸಿದಂತೆಯೇ ನೀರು ಮಜ್ಜಿಗೆ ತಯಾರಿಸಿ, ಅದಕ್ಕೆ ಅವನು ಹೇಳದಿದ್ದ ಕರಿಬೇವಿನ ಸೊಪ್ಪು ಹಸಿಶುಂಠಿಗಳನ್ನು ಸೇರಿಸಿದ್ದಳು.

"ಮಜ್ಜಿಗೆ ವೈನಾಗದೆ, ಅಮ್ಮಾರೆ"– ಕೃತಜ್ಞತೆ ಸೂಚಿಸುತ್ತ, ಸಂತೋಷದಿಂದ ಕುಡಿಯುತ್ತಿದ್ದ ಲಕ್ಕ. ರುಕ್ಮಿನಿಯೂ ಬೇಸರಪಡದೆ, ದೊನ್ನೆಗೆ ತಾನು ಸುರಿದ ಮಜ್ಜಿಗೆಯನ್ನು ಅವನು ಖಾಲಿ ಮಾಡಿದಂತೆ ಪುನಃ ಸುರಿತು ಭರ್ತಿ ಮಾಡುತ್ತಿದ್ದಳು. ಹೀಗೆ ಸಂತೋಷವಾಗಿ ಊಟ ಮಾಡುವವರಿಗೆ ಉಣಬಡಿಸುವುದೆಂದರೆ ರುಕ್ಮಿಣಿಗೆ ಬಲು ಪ್ರೀತಿ, ತನ್ನ ಗಂಡನೂ ಲಕ್ಕನಂತೆ ಊಟದಲ್ಲಿ ಅಚ್ಚುಕಟ್ಟು. ಊಟ ಮಾಡುವಾಗ, ಅದು ಚೆನ್ನಿಲ್ಲ, ಇದು ಚೆನ್ನಿಲ್ಲ' ಎಂದು ಕೆಲವರು ಮಾಡಿದ ಅಡಿಗೆಯನ್ನು ಹೀಗಳೆಯುವಂತೆ, ಅವರು ಎಂದೂ ಹೀಗಳೆದವರಲ್ಲ, ತೃಪ್ತಿಯಿಂದ, ಪ್ರೀತಿಯಿಂದ ಎಲೆಯ ಮೇಲೆ ಬಡಿಸಿದುದನ್ನು ದೇವರ ಪ್ರಸಾದವೆನ್ನುವಂತೆ ಸ್ವೀಕರಿಸುತ್ತಿದ್ದರು...

ಲಕ್ಕ ತನ್ನ ಹೇಳಿಕೆಯಂತೆ ಒಂದು ಚೆಂಬು ಮಜ್ಜಿಗೆಯನ್ನೆ ಕುಡಿದಿದ್ದ. ಮಜ್ಜಿಗೆ ಕುಡಿದು ದಾಹ ಪರಿಹಾರವಾದ ಬಳಿಕ, ತನ್ನ ನಿರೂಪಣೆಯನ್ನು ಮುಂದುವರಿಸಿದ್ದ: ಸುಶೀಲತ್ತೆ ದೈವಾಧೀನಳಾದ ಸಂಜೆಯೇ ಕ್ರಿಯಾದಿಗಳಿಗೆ ನೆಂಟರಿಷ್ಟರನ್ನು ಕರೆಸಬೇಕೆಂದು ಮಾವನವರ ಇರಾದೆಯಂತೆ. ಆದರೆ ಗತಿಸಿದ ಗಂಡ ಮನೆವರಿಗೂ ಸುಶೀಲತ್ತೆಗೂ ಬಾಂಧವ್ಯ ಕಡಿದು ಹೋಗಿ ಬಹುದಿನಗಳಾದ ಕಾರಣ, ಅವಳ ಗಂಡನ ಮನೆಯವರು ಯಾರೂ ಕರೆದೂರು ಬರುವಂತಿರಲಿಲ್ಲ. ನಾವು ಇರುವುದಂತೂ ಬಹಳ ದೂರದ ಊರಾದ ರುದ್ರಪಟ್ಟಣದಲ್ಲಿ. ನಮಗೋಸ್ಕರ ಶವವನ್ನು ಎರಡು ದಿನಗಳಾದರೂ ದಹನ ಮಾಡದೆ ಹಾಗೆಯೇ ಇಡಬೇಕಾಗುತ್ತಿತ್ತು. ಆದರೆ ಈ ರೀತಿ ವರ್ತಿಸಿದರೆ ಶಾಸ್ತ್ರಕ್ಕೆ ವಿರೋಧ. ತಂಗಳು ಹೆಣ ಆಗುತ್ತದೆ, ಎಂದು ಕೇರಿಯ ಬ್ರಾಹ್ಮಣರು ಮಾವನವರ ಮೇಲೆ ಒತ್ತಾಯ ಹೇರಲಾರಂಭಿಸಿದರಂತೆ. ಆದರೆ ಬ್ರಾಹ್ಮಣ ಗುಂಪಿನ ಈ ಒತ್ತಾಯದ ಹಿಂದಿದ್ದ ಪ್ರಬಲವಾದ ಕಾರಣವೇ ಬೇರೆ. ಹೆಣವನ್ನು ಸುಟ್ಟು ಗತಿ ಕಾಣಿಸುವವರೆಗೆ ಅವರಲ್ಲಿ ಅನೇಕರು ನೀರನ್ನು ಸಹ ಬಾಯಿಗೆ ಸೋಕಿಸುವಂತಿರಲಿಲ್ಲ!...

ರುಕ್ಮಿಣಿ ಮನಸ್ಸಿನಲ್ಲೇ ನಕ್ಕಳು. ತನ್ನ ಗಂಡ ಸತ್ತಾಗ, ತನ್ನ ತಲೆ ಬೋಳಿಸದೆ,

ಸಕೇಶಿಯನ್ನಾಗಿ ಮಾವ ತನ್ನನ್ನುಳಿಸಿದಾಗ, ಅದೇ ಬ್ರಾಹ್ಮಣಸಮಾಜ ಹಾರಾಡಿದ್ದೆಷ್ಟು! ಬಹಿಷ್ಕಾರ ಹಾಕಿದ್ದೆಷ್ಟು!... ಕಾಲ ಎಲ್ಲವನ್ನೂ ಮರೆಸುತ್ತದೆ. ಅಲ್ಲದೆ, ಸಾವಿನ ಮುಂದೆ ಎಂಥ ಚಿಲ್ಲರೆ ಮನಸ್ತಾಪಗಳೂ ಕರಗಲೇಬೇಕಲ್ಲ!...

ಅಂತೂ ಕಡೆಗೆ ಸಮೀಪದ ಹಳ್ಳಿಗಳಲ್ಲಿ ವಾಸಿಸುವ ನೆಂಟರಿಷ್ಟರನ್ನು ಕರೆಸಲು ಮಾತ್ರ ಸಾಧ್ಯವಾಗಿತ್ತಂತೆ ಮಾವನವರಿಗೂ ಆ ಬ್ರಾಹ್ಮಣರ ವಾದ ಸೂಕ್ತವಾಗಿ ಕಂಡಿದ್ದರಿಂದಲೊ, ಸತ್ತ ಹೆಣದ ಮುಂದೆ ಈ ಜನರ ಕೂಡೆ ವೃಥಾ ಯಾಕೆ ವಾಗ್ವಾದ ಎನ್ನಿಸಿದ್ದರಿಂದಲೊ, “ನಿಮಿಷ್ಟ ಪ್ರಕಾರವೆ ಕಾರ್ಯ ನಡೆಸಿ” ಎಂದು ಒಪ್ಪಿದ್ದರಂತೆ. ಗಂಡನ ಮನೆಯವರು ಬಾರದೆ ಹೋದುದರಿಂದ ಮಾವಯ್ಯನೆ ಕರ್ತೃವಾಗಿ ನಿಲ್ಲಬೇಕಾಯಿತಂತೆ! ಇಷ್ಟು ತಿಳಿಸಿ,

“ತಾಯಿ ಕಳಕಂಡ ಆ ನಿಮ್ಮ ಸರಸಮ್ಮ ಗೋಳಂತೂ ಯೋಳೋ ಅಂಗೇ ಇಲ್ಲ. ಕಣ್ಣ ಗುಡ್ಡೆ ಕಳಚಿ ಬಿದ್ದೋಗೊ ಮಟ್ಟಿಗೆ ಆ ಪಾಯಿ ಸೋಕಮಾಡ್ತಿತ್ತು. ನನ್ನ ವಂದ್ಗೇ ಬತ್ತೀನಿ ಅಂತಾವ ನ್ಯಾತು ಆಕಂಡಿತ್ತು. ಆಗ ನಿಮ್ಮ ಕರಕಂಬರಕ್ಕೆ ವೊಂಟವ್ನೆ, ಅಂಗೆ ಇಂಗೇಂತ ಆ ಮೊಗಾವ ಸಂಜಾಯಿ ಮಾಡಿ ಅಲ್ಲೆ ಉಳುಸಿಕಳಾಕೆ ಅಯ್ಯಾರ ಪಟ್ಟ ಪಾಡು ಬ್ಯಾಡಿ, ಬ್ಯಾಡಿ– ಎಕ್ಕಾಸಿ ಆಗೋಯ್ತು... ಆ ಎಂಕಣ್ಣ ದೋಯಿಸ್ರ ಎಣ್ಣುಗೋಳು ಸಾಸಮಾಡಿ ಎಂಗೊ ತಮ್ಮಟ್ಟಿಗೆ ಕರಕಂಡೋಗಿ ಕೂಡಕಂಡೊ”... ರುಕ್ಮಿಣಿಯ ಸಂಗಡಲೆ ಕುಳಿತು ಲಕ್ಕನ ಮಾತನ್ನು ಸವಿಸ್ತಾರವಾಗಿ ಆಲಿಸಿದ ಅಣ್ಣನೂ ಅತ್ತಿಗೆಯೂ,

“ಈಗ ನಮ್ಮ ಮನೆಯಲ್ಲಿ ಅಸಂದರ್ಭ. ನಮ್ಮ ಜಾನಕಿಯ ಮೈಯಲ್ಲಿ ಅಷ್ಟು ಹರ್ಷ ಇಲ್ಲ. ಈಗ ನೀನು ನಿಮ್ಮ ರುಕ್ಮಿಣಮ್ಮನವರನ್ನು ಕರೆದುಕೊಂಡು ಹೋಗಿ ಬಿಡು. ಅಷ್ಟರಲ್ಲಿ ನಮ್ಮ ಜಾನಕಿ ಚೇತರಿಸಿದರೆ, ನಾವಿಬ್ಬರೂ ವೈಕುಂಠದ ಸಮಯಕ್ಕೆ ಬರ್ತಾರೆ ಎಂದು ಕೃಷ್ಣಶಾಸ್ತ್ರಿಗಳಿಗೆ ತಿಳಿಸಪ್ಪ” ಎಂದು ಹೇಳಿದರು. ಲಕ್ಕ ಒಪ್ಪಲಿಲ್ಲ.

“ಈಟೊತ್ನಲ್ಲಿ ಒಂಟಿಗಾಡಿ ವೊಂಟರೆ ಅಪಾಯ ಕಾದಿಟ್ಟದ್ದೇಯ. ನಮ್ಮ ಸುತ್ತಿನಂಗಲ್ಲ. ನಮ್ಮ ಕಡೆ ಒಬ್ಬರಿಬ್ಬರು ಎಂಗಸರೆ ಕಾಡ್ನಲ್ಲಿ ಓಡಾಡಿದ್ರೂವೆ ಅವ್ರ ಮಂಡೆ ಕೂದ್ಲು ಚುಳ್ ಅನ್ನಕ್ಕಿಲ್ಲ... ಅದರಾಗೂ ನಾವು ವೋಗಬೇಕಾಗಿರೊ ಹಾದೀಲಿ ಕಾಟಗರ ಕಾಟ ಇಪರೀತ. ನಾನೂವೆ ನಮ್ಮೂರ್ನಿಂದ ಸಂದೆ ದನೀಗೆ ಗಾಡಿ ಕಟ್ಗೋನು, ಬ್ಯಾಲಾಳ್ನಲ್ಲಿ ರಾತ್ರೆ ತಂಗಿದ್ದು, ಅಲ್ಲಿಂದ ಕೋಳಿ ಕೂಗಕ್ಕೂ ಮುಂದ್ಯೇ ಇದ್ದು ಇಲ್ಲಿ ಬರಕ್ಕೆ ಮದ್ದಿನನ್ವೆ ಆಯ್ತು. ಇನ್ನು ಒಂಟಿಗಾಡಿ ಅಟ್ಗಂಡು, ರುಃಕ್ಮಿಣವ್ವಾರ ವಬ್ಬರ್ನೆ ಗಾಡ್ಯಾಗೆ ಕುಂದರ್ಸಿಗಂಡು, ನಾನಂತೂ ವೋಗಕ್ಕೆ ತಯ್ಯಾರಿಲ್ಲ.

ನಾ ವಬ್ನೇ ಆಗಿದ್ರೆ ಆ ಮಾತು ಬ್ಯಾರೆ. ನೂರು ಜನ ಬಂದು ಬೀಳ್ಲಿ– ಒಂದು ಕಯ್ಯ ನ್ವಾಡಿಕತ್ತೀನಿ. ಇವ್ರು ಜೊತ್ಗೆ ಇದ್ರೆ ಮಾತ್ರ, ನನ್ನ ಜವಾಬ್ದಾರಿ ಜಾಸ್ತಿ... ಈಗ ಜಾನಕವ್ವನ್ನೂ ಕರಕಂಡು ನೀವೆಲ್ಲರೂ ಸುಮ್ಕೆಹ್ವಂಡಿ. ಯೇನಾರ ಎಚ್ಚುಕಮ್ಮಿ ಆದ್ರೆ, ನಮ್ಮೂರಿನಾಗೆ ಔಸ್ದ ಕೊಡುಸಾನ"...

ಲಕ್ಕನ ಮಾತನ್ನ ಸುಲಭವಾಗಿ ತಳ್ಳಿ ಹಾಕುವ ಹಾಗಿರಲಿಲ್ಲ. ಅದರೆ ಅಣ್ಣ, ಅತ್ತಿಗೆ, ಅವರ ಸಂಸಾರ ಎಲ್ಲಾ ಬಂದರೆ, ಅಸ್ಥಿಸಂಚಯನ ಒಂದೇ ಅಲ್ಲದೆ ವೈಕುಂಠ ಮುಗಿಯುವವರೆಗೂ ದರುಮನಳ್ಳಿಯನ್ನು ಅವರು ಬಿಡುವ ಹಾಗಿಲ್ಲ. ಈ ತರ್ಕ ಹೂಡಿ, ಅಣ್ಣ ಬರಲು ಹಿಂದೇಟುಹಾಕುತ್ತಿದ್ದ. ಆದರೆ ಅತ್ತಿಗೆ.

"ಅಯ್ಯೊ, ಇಲ್ಲಿ ನಮ್ಮ ರೇಜಿಗೆ ಇದ್ದೇ ಇದೆ. ಅದು ಯಾವುತ್ತು ಮುಗಿಯುತ್ತೆ?– ನಡಿರಿ ಹೋಗೋಣ. ಒಂದು ಹತ್ತು ಹದಿನೈದು ದಿವಸ ಇಲ್ಲಿ ಕಾಷ್ಟವ್ಯಸನಗಳನ್ನೆಲ್ಲ ಮರೆತು ಹಾಯಾಗಿದ್ದು ಬರೋಣ. ನಿಮ್ಮ ದಾಯಾದಿ ಸುಬ್ಬಾವಧಾನಿಗಳಿಗೆ ಹೇಳಿದರೆ ನಮ್ಮ ಮನೆ ಕಡೆ ನೊಡಿಕೊಳ್ತಾರೆ. ಅವರಿಗೂ ಮಕ್ಕಳು ಜಾಸ್ತಿ: ಮನೆಯೂ ಕಿಷ್ಕಿಂಧ. ಉಗ್ರಾಣಕ್ಕೂ ನಾವು ಮಲಗುವ ಕೋಣೆಗೂ ಬೀಗ ಹಾಕ್ತೇನೆ. ಅವರ ಮೂರುನಾಲ್ಕು ಮಕ್ಕಳು ಇಲ್ಲೇ ಓದಿ, ಮಲಗಿ ಮನೆ ನೋಡಿಕೊಳ್ಳಬಹುದು. ಅದರಲ್ಲೂ ಅವರ ಹಿರಿಯ ಮಗ ಸುಬ್ಬರಾಮು ಸಂಗೀತರಾಗ. ಅವನು ತಮ್ಮ ಮನೆಯಲ್ಲಿ ಅಭ್ಯಾಸ ಮಾಡೊದನ್ನ ಇಲ್ಲೆ ಮಾಡಿಕೊಳ್ತಾ ಇರಬಹುದು. ಬೇರೆ ಹುಡುಗರು ಆಗಿಂದೀಗ ಮನೆಬಿಟ್ಟು ಓಡಾಡಿದರೂ ಆ ಸುಬ್ಬರಾಮು ಮಾತ್ರ ಮನೆ ಬಿಟ್ಟು ಅಲ್ಲಾಡಲ್ಲ."

ಅತ್ತಿಗೆಯ ಕೊನೆಯ ಮಾತುಗಳು ಆಳದಲ್ಲೆಲ್ಲೊ ಕಚಗುಳಿ ಇಟ್ಟಿದ್ದವು. ಅಜೂಬಾಜೂ ಮನೆಗಳಲ್ಲಿ ಸಂಗೀತ ಸೂಸಿದರೆ, ಬೇಸರದಿಂದ ಮನೆಯ ಕಿಟಕಿ ಬಾಗಿಲುಗಳನ್ನು ಮುಚ್ಚುತ್ತಿದ್ದ ಈ ಸಂಗೀದ್ವೇಷಿ, ತಾನಿಲ್ಲದಾಗ ತನ್ನ ಮನೆಯಲ್ಲೆ ಸುಬ್ಬರಾಮುವಿನ ಸಂಗೀತಾಭ್ಯಾಸಕ್ಕೆ ಅವಕಾಶಮಾಡಿಕೊಟ್ಟದ್ದು ರುಕ್ಮಿಣಿಯ ಒಳಗಡೆ ನಗು ಉಕ್ಕಿಸಿತ್ತು. ಅವಳು–ಜೀವನ ನಮ್ಮ ಕೈಯಲ್ಲಿ ಏನೇನು ಮಾಡಿಸುತ್ತೆ ಎಂದು ಅಚ್ಚರಿಪಟ್ಟಿದ್ದಳು. ಅದರೆ ನಮ್ಮನ್ನು ಒಂದು ಪ್ರಬಲ ಪರೀಕ್ಷೆಗೆ ಒಡ್ಡುವ ಪ್ರಸಂಗ ಬಂದರೆ– ಆಗ ಹೇಗೆ ನಡೆದುಕೊಳ್ಳತ್ತೇವೊ, ನಮಗೆ ಅರಿವಿಲ್ಲದಂತೆ ನಮ್ಮ ಬದುಕಿನ ಕ್ರಮಕ್ಕೇ ವಿರುದ್ಧವಾಗಿ ನಾವೇ ಏನೇನು ಮಾಡಿಬಿಡುತ್ತೇವೋ– ಈಗ ನಮ್ಮ ಅತ್ತಿಗೆ ಮಾಡುತ್ತಿರುವ ಹಾಗೆ!....

ಅತ್ತಿಗೆಯ ಅಭಿಪ್ರಾಯವನ್ನು ಅಣ್ಣ ಒಪ್ಪಿದರೂ ಆ ಸಂಜೆಯ ಪ್ರಯಾಣಕ್ಕೆ ಮಾತ್ರ ಆತ ಸುತರಾಂ ಸಮ್ಮತಿಸಲಿಲ್ಲ.

"ಈಗ ನಾವು ಎಲ್ಲ ಏರ್ಪಾಡು ಮಾಡಿ ಹೊರಟು, ದರುಮನಳ್ಳಿ ಸೇರಲು ಮಧ್ಯರಾತ್ರಿಯೇ ಅಗತ್ತೆ. ದಾರಿಯಲ್ಲಿ ದರೋಡೋಕಾರರ ಅಪಾಯ ಇದೆ ಎಂದು ಲಕ್ಕ ಹೇಳುವ ಮಾತನ್ನು ಯಾರೂ ತೆಗೆದುಹಾಕುವಂತಿಲ್ಲ. ಈ ದಾರಿಯಲ್ಲಿ ರಾತ್ರಿವೇಳೆ ಪ್ರಯಾಣ ಹೊರಟ ಗಾಡಿಗಳನ್ನು ಕಳ್ಳರು ಅಡ್ಡ ಹಾಕಿದ ಪ್ರಕರಣಗಳು ಆಗಾಗ ಜರುಗುತ್ತಲೇ ಇವೆ. ಎರಡು ತಿಂಗಳಿಗೊ ಮೂರು ತಿಂಗಳಿಗೊ ಒಂದು ಸರ್ತಿ ಇಂಥ ಪ್ರಕರಣ ನಡೆದು ರಾತ್ರೆ ಪ್ರಯಾಣಕ್ಕೆ ನಮ್ಮ ಜನ ಹೆದದರ್ತಾರೆ. ಆದ್ದರಿಂದ ಬೆಳಿಗ್ಗೆ ಹೋಗೋದೆ ವಾಸಿ. ಏನಂತೀಯ ಸಾತು?"

ಅತ್ತಿಗೆ ಮನಸ್ಸಿನಲ್ಲಿ ಏನಾದರೂ ಬಂದರೆ ತುದಿಗಾಲಿನ ಆತುರ.

"ಹೋಗೀಂದ್ರೆ ಕೊತ್ತಿ ಸೀತ ಹಾಗೆ ನೀವು ಏನೇನೋ ಹೇಳಿ ನಮ್ಮ ಕೈ ಕಾಲು ಬಿಡಿಸಿದಿರಿ. ನೀವು ಧೈರ್ಯ ಮಾಡಿದ್ರೆ ಲಕ್ಕನೂ ಕೂಡ ಒಪ್ಪೇ ಒಪ್ತಿದ್ದ. ಆ ಕಳ್ಳರು ನಮ್ಮ ಹತ್ತಿರ ಏನಿದೆ ಎಂದು ನಮ್ಮ ಮೇಲೆ ಬೀಳ್ತಾರೆ?.... ನೀವು ಬಿಡಿ, ಮಹಾ ಪುಕ್ಕಲು. ನರಿ ಬಂತು ಅಂದರೆ ಹುಲಿ ಬಂತು ಅನ್ನುವ ಜಾತಿ!"....

ಆದರೆ ರುಕ್ಮಿಣಿಗೆ ಒಳಗೇ ಸಂದೇಹ. ಅಶ್ವತ್ಥಣ್ಣ ಸಂಜೆ ಪ್ರಯಾಣಕ್ಕೆ ತಡೆ ಹಾಕಿದ್ದು ಕಳ್ಳಕಾಕರ ಭೀತಿಯಿಂದಲೊ ಅಥವಾ ಈ ಇಳಿಹೊತ್ತಿನಲ್ಲಿ ಕೇವಲ ಒಂದು ಲೋಟ ಕಾಫಿ ಹೀರಿ ಹೊರಟು ಮಧ್ಯರಾತ್ರಿಯಲ್ಲಿ ದರುಮನಳ್ಳಿ ಸೇರಿದರೆ, ಅಂಥ ಆವೇಳೆಯಲ್ಲಿ ಸಾವಿನ ಮನೆಯಲ್ಲಿ ಹೊಟ್ಟೆ ತಾಳಹಾಕುತ್ತ ಮಲಗಬೇಕಾಗಬಹುದು ಎಂಬ ಭಯದಿಂದಲೊ!... ಇಷ್ಟಾದರೂ ಅತ್ತಿಗೆಯ ಮಾತು ತಾನೆ ನಡೆಯಬೇಕು ಆ ಮನೆಯಲ್ಲಿ!... ಆದರೆ ಲಕ್ಕನೂ ಸಹ ಅಣ್ಣನ ಮಾತನ್ನೆ ಜೋರಾಗಿ ಸಮರ್ಥಿಸಿದ್ದರಿಂದ, ಅತ್ತಿಗೆ ಗೊಣಗುತ್ತಲೇ ಒಪ್ಪಬೇಕಾಯಿತು...

ಬೆಳಿಗ್ಗೆ ಏಳು ಗಂಟೆಗೆ ಹೊರಡಲು ಸಕಲ ಸಿದ್ಧತೆಗಳೂ ಮುಗಿದಿದ್ದವು. ಸುಬ್ಬಾವಧಾನಿಗಳನ್ನು ಒಪ್ಪಿಸಿಯಾಗಿತ್ತು. ಮನೆಯ ಬೀಗದ ಕೀಲಿಯನ್ನು ಸುಬ್ಬಾವಧಾನಿಗಳ ಹಿರಿಮಗ ಸುಬ್ಬರಾಮುವಿನ ವಶಕ್ಕೂ ಕೊಟ್ಟದ್ದಾಯಿತು. ಇನ್ನೇನು ಹೊರಡಬೇಕು. ಎನ್ನುವಾಗ ಅವರ ಮಗ ಶೇಷ ತಾನು ರುದ್ರಪಟ್ಟಣದಲ್ಲೆ ಉಳಿಯುವುದಾಗಿ ರಂಬಾಟ ಮಾಡಿದ. ಮಗಳು ಕೆಡಲು ತನ್ನ ಪೋಲಿ ಸ್ನೇಹಿತರಿಗೆ ಜಾನಕಿ ಮೈನೆರೆದ ವಿಚಾರ ತಿಳಿಸಿದ್ದರಿಂದ ಅಲ್ಲವೆ ಎಂಬ ಬೇಗೆ ಸುಡುತ್ತಿದ್ದರೂ ಆ ಸಮಯದಲ್ಲಿ ಅದೇ ಕಾರಣ ಹೇಳಿ ದಂಡಿಸಿದ್ದರೆ ಗುಟ್ಟು ರಟ್ಟಾಗಬಹುದು ಎಂಬ ಭಯದಿಂದ ಸಾವಿತ್ರಿ ಹಿಂದೆ ನಡೆದ ಪ್ರಸಂಗದಲ್ಲಿ ಸುಮ್ಮನಾಗಿದ್ದುಂಟು. ಆದರೆ ಈಗ ಒಳಗೊಳಗೇ ಅವಳನ್ನು ದಹಿಸುತ್ತಿದ್ದ ಕಿಚ್ಚಿಗೆ ಒಂದು ಹೊರದಾರಿ

ಸಿಕ್ಕಿದಂತಾಯಿತು. ಶೇಷನ ಕೆನ್ನೆಗೆ ರಪರಪ ತೀಡಿ, ಬೆನ್ನಿಗೆ ಗುದ್ದಿ, ಮುಂಗೂದಲು ಜಗ್ಗಿ, ಕೆಳಕ್ಕೆ ತಳ್ಳಿ, ತನ್ನ ಆಕ್ರೋಶವನ್ನೆಲ್ಲ ತೀರಿಸಕೊಂಡಳು... ಶೇಷ ಜಗಮೊಂಡ. ಯಾವ ಶಿಕ್ಷೆಗೂ ಜಗ್ಗಲಿಲ್ಲ. ಅವಳು ತಳ್ಳಿದಾಗ ಕೆಳಗೆ ಬಿದ್ದವನು ಸುಮ್ಮನೆ ಎದ್ದು ನಿಂತಿದ್ದ. ಕಣ್ಣುಗಳಲ್ಲಿ ಒಂದು ಹನಿ ನೀರಿಲ್ಲ. ಕೋಪದಿಂದ ತಾಯಿಯನ್ನು ದುರುದುರು ನೋಡುತ್ತ ನಿಂತಿದ್ದ... ಸಾವಿತ್ರಿಗೆ ಕಿಚ್ಚು ಮತ್ತೂ ಪ್ರಜ್ವಲಿಸಿತು. "ರುಕ್ಕು ಅಟ್ಟಕ್ಕೆ ಹತ್ತಿ, ಬೆತ್ತದ ಕೋಲು ತೆಕ್ಕೊಂಡು. ಇವನಿಗೆ ಇಷ್ಟೇ ಸಾಲದು. ಹುಟ್ಟಿದ ದಿನ ಕಾಣಿಸ್ತೀನಿ!"– ಕಿಡಿ ಕಾರಿದಳು. ಆದರೆ ಹೊರಗಿನಿಂದ ಲಕ್ಕ,

"ನೀವು ಇಂಗಾಡಿ ಅಂಗಾಡಿ ವೊಂಡೋದ ಏಳು ಮದ್ದಿನ್ನ ಮಾಡಿ, ನಾವು ಅಸವಾಳು ತಲಪೋವೋತ್ಗೆ ಕಾವುಳ ಕವುಚಿಗತ್ತದೆ. ಆಗ ಕಳ್ಳರು ಬಂದು ಬಿದ್ರೆ, ಆ ದ್ಯಾವರೆ ನಮ್ಮ ಕಾಪಾಡ್ಕಬೇಕು" ಎಂದು ಬೆದರಿಸಿದ್ದು, ಸಾತುವಿನ ಕಿಚ್ಚಿಗೆ ತಣ್ಣೀರೆರಚಿತು. ಆದರೂ ಶೇಷನನ್ನು ಮನಸ್ವೀ ಬೈಯುತ್ತಲೆ ಗಾಡಿ ಹತ್ತಿದ್ದಳು. ಅಶ್ವತ್ಥಣ್ಣ ಮಾತ್ರ ಸುಬ್ಬರಾಮುವನ್ನು ಒಂದು ಪಕ್ಕಕ್ಕೆ ಕರೆದು,

"ನಮ್ಮ ಶೇಷ ಅಂಥ ಕೆಟ್ಟ ಹುಡುಗ ಏನಲ್ಲ. ಪೋಲಿ ಸಹವಾಸ. ಏನೂ ಮಾಡಲಿಕ್ಕಾಗುತ್ತೆ. ಗಾದೆ ಕೇಳಿಲ್ಲವೆ– ಸಹವಾಸದಂಥ ಬುದ್ಧಿ, ಆಹಾರದಂಥ ಲದ್ದಿ... ಬೇಳೀತ ಬೇಳಿತ ಸರಿಹೋಗ್ತಾನೆ. ನಾವು ಬರೋವರೆಗೂ ಅವನ ಊಟೋಪಚಾರ ನೀನೇ ನೋಡಿಕೋಬೇಕು. ತಗೊ" ಎನ್ನುತ್ತ ಇಪ್ಪತ್ತು ರೂಪಾಯಿಗಳನ್ನು ಕೈಗಿಡಲು ಹೋದ.

"ಇದೇನು, ನೀವು ಮಾಡ್ತಿರೋದು?... ಚೆನ್ನಾಗಿದೆ. ಶೇಷ ಒಬ್ಬನಿಗೆ ಕೇವಲ ಹತ್ತು ಹದಿನೈದು ದಿವಸ ಊಟ ಹಾಕಲಿಕ್ಕೆ ನಿಮ್ಮಿಂದ ಹಣ ತೆಗೋಬೇಕೆ?... ಸುಮ್ಮನೆ ನಿಮ್ಮ ಪಾಡಿಗೆ ನೀವು ಹೋಗಿ, ಅವನ ಯೋಗಕ್ಷೇಮ ನಿಮಗಿರಲಿ" ಎಂದು ಸುಬ್ಬರಾಮು ನಿರಾಕರಿಸಿದ್ದ.

ಎಲ್ಲರೂ ಕುಳಿತಿದ್ದು ಖಾತರಿಯಾದ ತರುವಾಯ ಲಕ್ಕನೂ ಬಲಗೋಲು ಎತ್ತನ್ನು ಚಿಗಿಸಿ ದಾರಿಮಾಡಿಕೊಳ್ಳುತ್ತ ಗಾಡಿಯ ಮುಂಭಾಗಕ್ಕೆ ನೆಗೆದು ಕುಳಿತಿದ್ದ. ಹಗ್ಗವನ್ನು ಕೈಯಲ್ಲಿ ಹಿಡಿದು ಅವನು ಹುಶ್‌ಹುಶ್ ಸದ್ದು ಮಾಡಿ, ಎತ್ತುಗಳ ಕುಂಡಿಬಳೆಗೆ ಕೈಯಿಟ್ಟೊಡನೆಯ ಎತ್ತಿನ ಬಂಡಿಯು ಮುಂದಕ್ಕೆ ಹೊರಟಿತು.

"ಲಕ್ಕ, ನಿಮ್ಮ ನಾಯಿ ಬೊಡ್ಡ ಎಲ್ಲಿ ಕಾಣ್ತಾನೆ ಇಲ್ಲವಲ್ಲ? ಊರಿನೊಳಗೆ ಎಲ್ಲಾದರೂ ಉಳಿದುಬಿಟ್ಟತೇ ಹೇಗೆ?"– ಉದ್ಗಾರ ತೆಗೆದಿದ್ದವಳು ರುಕ್ಮಿಣಿ.

"ಅಯ್, ನೀವು ಸರಿ. ನಿಮ್ಮ ಬುತ್ತಿ ವಾಶಣ ಗಮ್‌ಗಮ್‌ನೆ ಗಾಳಿ ಮೈಯೊಳಗಾಗೆಲ್ಲ ತಂಬುಕಂಡಿರ್‍ವಾಗ, ಬೊಡ್ಡ ಅದೆಲ್ಲಿ ತಾನೆ ಹ್ವಾದಾತುಬುಡಿ...

ಅದು ವಂದಿಗೆ ಬತ್ತಾ ಅದೆ– ನಮ್ಮ ಗಾಡಿ ಕೆಳಾಗಡೆ, ಏಡೂ ಚಕ್ರಗಳ ನಡೂಮದ್ಯ! ಬೆಳುಗ್ನಲ್ಲಿ ಅದ್ಕೆ ನೀವು ಗಡದ್ದಾಗಿ ಬೋನೆ ಆಕ್ನಿಲ್ಲವಾ?– ಬಯಾರೆ ತಾವಕೆ ಯಾಕಾರು ವೋಗಬೇಕು ಅದು?"–

ಲಕ್ಕ ಮಾತಾಡುತ್ತಿರುವಂತೆ ಬಂಡಿ, ಗುಡಿಯನ್ನೂ ಗುಡಿ ವಠಾರದವರ ಮನೆಗಳನ್ನೂ ದಾಟುತ್ತಿರುವಾಗ, ಗುಡಿಯ ಹಿಂಭಾಗದಲ್ಲಿ ಕಾಣುವ ಕೋಟೆಯ ಅವಶೇಷಗಳನ್ನೇ ನೋಡುತ್ತ ಆಶ್ವತ್ಥಣ್ಣ,

"ಪಿರಿಯಾಪಟ್ಟಣದ ಪಾಳೆಯಗಾರರ ಕಾಲದಲ್ಲಿ ಈ ಊರಿಗೆ ಕೋಟೆ ಕಟ್ಟಿಸಿ ರುದ್ರನಾಯ್ಕ ಅನ್ನೋನು ಇಲ್ಲಿ ಆಳಿದನಂತೆ. ಅವನ ಹೆಸರಿನ ಮೇಲೇ ಈ ಊರಿಗೆ ರುದ್ರಪಟ್ಟಣ ಎಂದು ಹೆಸರು ಬಂದಿತಂತೆ. ಆ ನಾಯಕನ ಕಾಲದಲ್ಲಿ ಈ ಊರು ಎಂಥ ವೈಭೋಗದಿಂದ ಮೆರೆದಿರಬೇಕು. ಅಲ್ಲವೇ?..." ಎಂದಾಗ,

"ಈಗ ಈ ಮಾತು ತೆಕ್ಕೊಂಡು ಯಾವ ಪುರಷಾರ್ಥ ಅಂತೀನಿ?" ವೀಳೆಯದೆಲೆಗೆ ಸುಣ್ಣ ಹಚ್ಚುತ್ತ ಸಾವಿತ್ರಿ, "ಅದಿರ್ಲಿ, ತೋಟದ ವ್ಯವಸ್ಥೆ ಏನು ಮಾಡಿ ಬಂದಿದೀರಿ?– ಆದಾದರೂ ಪುಸ್ತುತಕ್ಕೆ ಬಂದದ್ದು. ಆ ವಿಚಾರ ಹೇಳಿ." ರಸ್ತೆಗೇ ಕಾಣುತ್ತಿದ್ದ ತಮ್ಮ ತೋಟವನ್ನೇ ನೋಡುತ್ತ ಸಾತು ಕೇಳಿದಳು.

"ಅದನ್ನೆಲ್ಲ ಬಂದೋಬಸ್ತು ಮಾಡಿ ಬಂದಿದೀನಿ. ನೀನು ಏನೂ ತಲೆ ಕೆಡಿಸಿಕೊಳ್ಳಬೇಕಿಲ್ಲ. ಕಾವಲಿಗೆ ಸಾಬೂಲಾಲ್ ಹಾಕಿದೀನಿ. ಅವನಿಗೆ ಎಷ್ಟು ಎಂದು ಮಾತಾಡಿ, ಹೊಸ ಅಡಿಕೆ ಸೊಸಿಗಳಿಗೆ ನೀರು ಹಾಕಲಿಕ್ಕೂ ಏಪಾಡು ಮಾಡಿದೀನಿ. ನಮ್ಮ ಸುಬ್ಬಧಾನಿಗಳೂ ನಮ್ಮ ಪಕ್ಕದ ತೋಟದವರೇ ಆದ್ದರಿಂದ ಬಾಳೆಹಣ್ಣಿನ ಮಾರಾಟವನ್ನೂ ಅವರಿಗೆ ವಹಿಸಿಬಿಟ್ಟಿದೀನಿ."

ಗಾಡಿ ರುದ್ರಪಟ್ಟಣದ ಬಂಡಿ ಹಾದಿಯಿಂದ ಹನ್ಯಾಳು ಬಳಿ ಎಡಕ್ಕೆ ಹೊರಳಿ ದೊಡ್ಡ ಮಾರ್ಗವನ್ನು ಹಿಡಿಯಿತು. ಅಶ್ವತ್ಥನಿಗೆ ಮಾತಿನ ಚಪಲ, ಹನ್ಯಾಳು ದಾಟುತ್ತಿರುವಂತೆ ಹನ್ಯಾಳಿನ ಬಗ್ಗೆ ವಿವರಣೆ ಕೊಡುತ್ತಿದ್ದ:

"ಹನ್ಯಾಳು ಅಂದರೆ ಹಸುಳೆಯ ಹಾಲು. ಹಿಂದೆ ಈ ಊರಿನಲ್ಲಿ ಹಾಲು ಮೊಸರು ಧಂಡಿಯಾಗಿದ್ದ ಕಾರಣ ಈ ಗ್ರಾಮಕ್ಕೆ ಈ ಹೆಸರನ್ನು ಇಟ್ಟರಂತೆ."

ಸಾವಿತ್ರಿಗೆ ತಲೆಚಿಟ್ಟು, "ಸಾಕು ನಿಲ್ಲಿಸ್ರಿ" ಸಿಡುಕಿ, ಗಂಡನ ಬಾಯಿ ಮುಚ್ಚಿಸಿ,

"ರುಕ್ಕು, ನಿಮ್ಮಣ್ಣ ಹಾಡಿದ್ದನ್ನೇ ಹಾಡುವ ಕಿಸಬಾಯಿದಾಸರು. ಇವರ ವರ್ಣನೆ ಕೇಳಿ ಕೇಳಿ ನನ್ನ ಕಿವಿ ಕಿವುಡಾಗಿದೆ ಉಳಿದಿರೋದೆ ನನಗೆ ಪರಮಾಶ್ಚರ್ಯ!" ಎಂದಳು.

ರುಕ್ಮಿಣಿ ನಕ್ಕಿದ್ದಳು. ಅದು ಸದ್ದಿಲ್ಲದ ನಗು. ಗಟ್ಟಿಯಾಗಿ ನಕ್ಕರೆ ಅಣ್ಣನಿಗೆ

ನೋವು–ಅತ್ತಿಗೆಯ ಹಾಸ್ಯಕ್ಕೆ ಓಗೊಟು ನಗದಿದ್ದರೆ ಅತ್ತಿಗೆಗೆ ನಿಷ್ಠುರ.

ಅಲ್ಲಿಂದ ಮುಂದೆ ತಮ್ಮ ಊರಿನ ಹಾಗೂ ಬಸವಾಪಟ್ಟಣದ ಕೆಲವು ಮನೆಗತನಗಳ ಸುರುಳಿ ಬಿಚ್ಚಿ ಅವನ್ನು ಆದಷ್ಟು ಕೆಟ್ಟದು ಮಾಡಿ ಹರಟಿದಳು ಸಾವಿತ್ರಿ. ರುಕ್ಮಿಣಿಗೆ ವಿಸ್ಮಯ. ತನ್ನ ಪಕ್ಕದಲ್ಲೆ ಕುಳಿತ ಮಗಳು ಜಾನಕಿಯ ದೃಷ್ಟಾಂತವೆ ಇನ್ನೂ ಹಸಿಹಸಿಯಾಗಿರುವಾಗ ಇನ್ನೊಬ್ಬರನ್ನು ಹಳಿಯುವ ದಾಷ್ಟೀಕ ಅತ್ತಗೆಗೆ ಹೇಗಾದರೂ ಬಂತು? ಎಂಬ ಪ್ರಶ್ನೆ ಉದ್ಭವಿಸಿ, ಉತ್ತರ ಸಿಗದೆ ಅಲ್ಲೇ ಕಮರಿ ಹೋಯಿತು...

ಸಾತು ಅತ್ತಿಗೆಯ ರಂಬಾಟದಲ್ಲಿ ರುದ್ರಪಟ್ಟಣವನ್ನು ಬಿಡುವಾಗ ಸುಮಾರು ಎಂಟು ಗಂಟೆಯೇ ಸಂದಿರಬೇಕು. ರಾಮರೂರು, ಹಳಗನಹಳ್ಳಿ ದಾಟಿ ಅವರು ಬೆಟ್ಟದಪುರ ಸೇರುವ ವೇಳೆಗೆ ಮಧ್ಯಾಹ್ನ ಒಂದು ಗಂಟೆಗೂ ಮೀರಿರಬೇಕು. ಅಲ್ಲಿ ಗಾಡಿ ನಿಲ್ಲಿಸಿ, ಎತ್ತುಗಳನ್ನು ಅಟ್ಟಿಕೊಂಡು ಹೋಗಿ ತಾವರೆಕೆರೆಯಲ್ಲಿ ನೀರು ಕುಡಿಸಿ, ಪಕ್ಕದ ಮರದ ತೋಪಿಗೆ ತಂದು ಅವಕ್ಕೆ ಲಕ್ಕ ಹುಲ್ಲು ಹಾಕಿದ್ದ. ಅಷ್ಟರಲ್ಲಿ ಅವರೆಲ್ಲರೂ ಕೆರೆಯಲ್ಲಿ ಕೈಕಾಲು ತೊಳೆದು ಬಂದು ತೋಪಿನಲ್ಲಿ ಅಡಿಕೆಪಟ್ಟೆಯ ಬುತ್ತಿ ಬಿಚ್ಚಿದೆವು. ಮೊದಲು ಅಶ್ವತ್ಥನಿಗೆ ಬಲು ಪ್ರಿಯವಾದ ಅಕ್ಕಿ ರೊಟ್ಟಿ, ಅದಕ್ಕೆ ನೆಂಚಿಕೊಳ್ಳಲು ಕೊಬ್ಬರಿ ಖಾರ, ಹಸುವಿನ ಬೆಣ್ಣೆ– ಇವನ್ನು ಬಾಳೆಯೆಲೆಯ ಮೇಲಿಟ್ಟು ಸಾವಿತ್ತಿ ಎಲ್ಲರಿಗೂ ವಿನಿಯೋಗ ಮಾಡಿದಳು. ತರುವಾಯ ಸಣ್ಣ ಸಣ್ಣ ಈರುಳ್ಳಿಗಳಲ್ಲಿ ಹುಳಿ ಮಾಡಿ ಅದರಲ್ಲಿ ಕಲೆಸಿದ ಅನ್ನ, ಗಟ್ಟಿಮೊಸರಿನಲ್ಲಿ ಕಲೆಸಿದ ಅನ್ನ, ನೆಲ್ಲಿಕಾಯಿ, ಮಾಗಳಿಬೇರು ಉಪ್ಪಿನಕಾಯಿಗಳು ಇವಿಷ್ಟನ್ನೂ ರುಕ್ಮಿಣಿ ಸರಬರಾಜು ಮಾಡಿದ್ದಲು. ಊಟ ಮುಗಿಯುತ್ತಿದ್ದಂತೆ ರಸಬಾಳೆ ಹಣ್ಣುಗಳನ್ನು ಎಲ್ಲರೂ ಸೇವಿಸಿದ್ದಾಯಿತು. ಲಕ್ಕ ಎಲ್ಲರಂತೆ ಅಷ್ಟಿಷ್ಟು ಹುಳಿ ಅನ್ನ ಮೊಸರನ್ನ ಎರಡು ರೊಟ್ಟಿಗಳಿಗೇ ತೃಪ್ತನಾಗಿದ್ದರೆ, ಆಶ್ವತ್ಥ ನಾಲ್ಕು ರೊಟ್ಟಿಗಳನ್ನು ತಿಂದುದಲ್ಲದೆ, ಈರುಳ್ಳಿ ಹುಳಿ ಅನ್ನ ಮೊಸರನ್ನಗಳನ್ನು ಪುಷ್ಕಳವಾಗಿ ಸವಿರಿಸಿ, ದಾರಿಯಲ್ಲಿ ಒಂದು ಚಿಪ್ಪು ರಸಬಾಳೆಹಣ್ಣುಗಳನ್ನೂ ಹೊಟ್ಟೆಯೊಳಗೆ ಇಳಿಸಿದ್ದ! ಲಕ್ಕ ರುಕ್ಮಿಣಿಯ ಬಲಾತ್ಕಾರಕ್ಕೆ ನಾಲ್ಕು ಬಾಳೆಹಣ್ಣು ತಿಂದಿದ್ದ. ಕೆರೆಯ ನೀರಿನಲ್ಲಿ ಈಜಾಡಿ ಬಂದ ಬೊಡ್ಡನ ಯೋಗಕ್ಷೇಮವನ್ನು ರುಕ್ಮಿಣಿಯೇ ನೋಡಿಕೊಂಡಿದ್ದಳು...

ಊಟ, ವಿಶ್ರಾಂತಿಗಳಲ್ಲಿ ಮುಕ್ಕಾಲು ಗಂಟೆಯೇ ಕಳೆದುಹೊಗಿತ್ತು. ಸಾವಿತ್ರಿಗೆ ತೋಪು ಬಿಟ್ಟು ಏಳುವ ಮನಸ್ಸೇ ಇರಲಿಲ್ಲ. ಲಕ್ಕ–

"ಇಲ್ಲಿ ನೀನು ಇಂಗೆ ವೊತ್ತು ಮಾಡ್ತಾ ಕುಂತಿದ್ರೆ ನಾವು ಅಸವಾಳು

ತಲಪೋವೊತ್ತಿಗೆ ಸರಿನಾತ್ರೇನೆ ಆಯ್ತದೆ. ಆಮ್ಯಾಕೆ ಕಳ್ಳಕಾಕರು ಮ್ಯಾಲೆ ಬಿದ್ದು ಎಚ್ಚುಕಮ್ಮಿ ಆದರೆ ನನ್ನ ತೆಪ್ಪಿಲ್ಲ" ಅನ್ನುತ್ತಲೂ ಸಾವಿತ್ರ ದಡಬಡನೆ ಎದ್ದಿದ್ದಳು...

ಎತ್ತಿನ ಗಾಡಿಯು ಪುನಃ ಚಲಿಸಲು ಆರಂಭಿಸಿತು.

ರುದ್ರಪಟ್ಟಣದಿಂದ ಹೊರಟಾಗಿನಿಂದಲೂ ದೂರದಲ್ಲಿ ಕಾಣುತ್ತಿದ್ದ ಸಿಡಿಲು ಮಲ್ಲಿಕಾರ್ಜುನ ಬೆಟ್ಟ, ಬೆಟ್ಟದಪುರವನ್ನು ಸಮೀಪಿಸಿದಂತೆ ಹತ್ತಿರ ಹತ್ತಿರವಾಗುತ್ತಿದ್ದು, ಬೆಟ್ಟದಪುರಕ್ಕೆ ಬಂದ ಕೂಡಲೇ ಎದಿರಿಗೇ ನಿಂತ ಅದರ ಎತ್ತರ ಕಂಡು ಎಲ್ಲರೂ ಬೆರಗಾದರು. ಹಿಂದೆ ಅದನ್ನು ರುಕ್ಮಿಣಿ ನೋಡಿರಲಿಲ್ಲವೆಂದಲ್ಲ. ತಾನು ತೌರಿಗೂ ಗಂಡನ ಮನೆಗೂ ಹೋಗಿ ಬರುತ್ತ ಈ ಬೆಟ್ಟವನ್ನು ಕೆಲವು ಸಲ ನೋಡಿದ್ದಳು. ಆದರೂ ನೋಡಿದಾಗಲೆಲ್ಲ ಈ ಬೆಟ್ಟವನ್ನು ಇದೀಗ ಹೊಸದಾಗಿ ನೊಡಿದಂತೆಯೇ ಅನ್ನಿಸುವುದಲ್ಲ, ಯಾಕೆ ಹೀಗೆ?– ಎಂದು ರುಕ್ಮಿಣಿಗೆ ಕೌತುಕ. ಮೈಸೂರಿನ ಚಾಮುಂಡಿಬೆಟ್ಟಕ್ಕೆ ಎರಡರಷ್ಟು ಎತ್ತರವಿರುವ ಆ ಬೆಟ್ಟವನ್ನು ಬಳಸಿ, ಲಕ್ಕ ಬೆಟ್ಟದ ಪಕ್ಕದಲ್ಲೆ ಬಾರಸೆಯ ಕಡೆಗೆ ಗಾಡಿಯನ್ನು ದೌಡಾಯಿಸಿದ.

ಬಾರಸೆ ಮಠದ ಮಂಟಿಗಳನ್ನು ದಾಟಿ, ಆಯಿಚನ ಹಳ್ಳಿ, ರಾಮನಾಥ ತುಂಗಗಳು ಹಿಂದಾದಂತೆ ಮಲ್ಲಿಕಾರ್ಜುನ ಬೆಟ್ಟವೂ ದೂರು ಸರಿಯಿತು. ಸೂರ್ಯಾಸ್ತವಾಗಿ ಅಸವಾಳು ಸಮೀಪಿಸುತ್ತಿದ್ದಂತೆ, ಲಕ್ಕ ಗಾಡಿ ನಿಲ್ಲಿಸಿ, ಅದರ ಕೆಳಗಡೆ ಹಿಂದೆ ಮತ್ತು ಮುಂದೆ ತೂಗಿ ಹಾಕಿದ್ದ ಲಾಟೀಗಳನ್ನು ಹೊತ್ತಿಸಿದ್ದ.

"ಮಬ್ಬುಬೆಳಕು ಇನ್ನೂ ಇದೆ. ಈಗಲೆ ಯಾಕೆ ಲಾಟೀನು ಹಚ್ಚಿದೆಯೊ, ಲಕ್ಕ?" ಸಾವಿತ್ರಿ ಕೇಳಿದ್ದಳು

"ಅಸವಾಳು ಇನ್ನೇನು ಬಂದುಬುಡ್ತದೆ. ಒಂದು ಅರ್ಧಗಂಟೆ ಪಯಣ. ಆ ತಾವೆ ಕಳ್ಳರ ಕಾಟ ಎಚ್ಚು. ಅದ್ಕೆ ನಾನು ಚೆಂದಾಕಿ ಬೆಳುಕಿರಾವಾಗ್ಲೆ ಆ ಈಚಲುಗುತ್ತಿ ದಾಟಾವ ಅಂತ ಮಾಡ್ಕಂಡಿದ್ದದ್ದು. ಆದ್ರೆ ನೀವು ಕಜೆ ಆಡ್ಕಂಡು ವೊಂಡೊದ ತಡ ಮಾಡಿದಿರಿ. ವೋಗ್ಲಿ ಅಂದರೆ ಬೆಟ್ಟದಪುರ ತೋಪಿನಾಗೂವೆ ಮಂಟಾಡಿಕಂಡೇ ಕುಂತಿದ್ರೆ... ಉಂ, ಈಗೇನ ಮಾಡಕ್ಕಾದಾತು?– ದ್ಯಾವರ ಮೇಲೆ ಭಾರ ಆಕಾದು, ವೋಟೆಯ." ಬೇಸರದಿಂದ ನುಡಿದು, ಎತ್ತುಗಳನ್ನು ಲಕ್ಕ ಉಚಾಯಿಸಿದ್ದ...

ಈಚಲುಗುತ್ತಿ, ಕಳ್ಳರು ಎಂದೊಡನೆಯೇ, ಎಲ್ಲರ ಬಾಯಿಗಳಿಗೂ ಬೀಗ ಬಿದ್ದಿತ್ತು. ಒಂಟಿಗಾಡಿಯ ಚಕ್ರಗಳು ಆ ನುರುಜುಗಲ್ಲಿನ ಹಾದಿಯಲ್ಲಿ ಉರುಳುವಾಗ ಎಬ್ಬಿಸುತ್ತಿದ್ದ ಗಡಲ್ ಗಡಕ್ ಶಬ್ದವನ್ನುಳಿದು ಗಾಡಿಯೊಳಗೆ ಮೃತ್ಯಮೌನ ಹೊರಗೆ ಹಕ್ಕಿಗಳು ಗುಂಪುಗುಂಪಾಗಿ ರಸ್ತೆಯ ಇಕ್ಕೆಲದ ಸಾಲುಮರಗಳ ತಮ್ಮ ತಮ್ಮ

ಗೂಡುಗಳಿಗೆ ಹಿಂದಿರುಗುತ್ತಿದ್ದವು. ಅಸವಾಳದ ಈಚಲುಗುತ್ತಿ ಸಮೀಪಿಸುತ್ತಿರುವಂತೆ ಜಾನಕಿ ಭಯದಿಂದಲೊ ಏನೋ ದೊಡ್ಡದಾಗಿ ಕೆಮ್ಮಿದ್ದಳು. ಸಾವಿತ್ರಿ ಗಾಬರಿಗೊಂಡು ಕಣ್ಣು ಅಗಲಿಸಿ ತನ್ನ ಬಾಯಿಗೆ ಬೆರಳಿಟ್ಟು, ಸದ್ದು ಮಾಡಕೂಡದೆನ್ನುವಂತೆ ಸೂಚಿಸುವ 'ಶ್' ಮಾಡಿದ್ದಳು. ಪರ್ವತಕ್ಕಿಗಳು ಒಂದರ ಹಿಂದೆ ಒಂದು ಸಾಲುಗಟ್ಟಿ ಕರ್ಕಶವಾಗಿ ಸದ್ದು ಮಾಡುತ್ತ ಗಾಡಿಯ ಮುಂದುಗಡೆಯ ಎತ್ತರದಲ್ಲಿ ಸಾಗುತ್ತಿದ್ದವು. ಇದ್ದಕ್ಕಿದ್ದಂತೆ ಗಾಡಿಯ ಕೆಳಗೆ ಇಷ್ಟು ಸಮಯವೂ ಮೌನವಾಗಿ ಬರುತ್ತಿದ್ದ ಬೊಡ್ಡ ಕೆಟ್ಟದಾಗಿ ಬಗಳತೊಡಗಿತ್ತು. ಪಕ್ಕದ ಸಾಲು ಮರವೊಂದರಲ್ಲಿ ಮರಗಿಳಿಗಳು ಚಿಲಿಪಿಲಿಗುಡುತ್ತಿದ್ದಂತೆಯೆ, ತಟ್ಟನೆ ಯಾರೊ ಒಬ್ಬಾತ ಈಚಲು ಗುತ್ತಿಯಿಂದ ನೆಗೆದು ಬಂದು ಗಾಡಿಯ ಮುಂದೆ ನಿಂತು, ಗಾಡಿಯ ಮೂಕಿಯನ್ನು ಹಿಡಿದು ನಿಲ್ಲಿಸಿದ. ಮತ್ತೊಬ್ಬ ಲಕ್ಕನ ಬಲಪಾರ್ಶ್ವಕ್ಕೆ, ನಿಂತು, "ಒಂದೇಡು ಚಿಟಕಿ ನಸ್ಯಕ್ವಡಪ್ಪ..." ಎಂದ. ಅಷ್ಟರಲ್ಲಿ ಇನ್ನಿಬ್ಬರು ಕಮಾನುಗಾಡಿಯ ಹಿಂದೆ ಬಂದು ನಿಂತಿದ್ದರು. ಗಾಡಿಯಲ್ಲಿ ಕುಳಿತ ನಾವೆಲ್ಲರೂ ಭಯಭ್ರಾಂತರಾದೆವು. ಸಾವಿತ್ರಿ ಅದದ್ದಾಯಿತು, ಒಡವೆಗಳನ್ನಾದರೂ ಉಳಿಸಿಕೊಳ್ಳುವ ಎಂಬ ಚಪಲದಿಂದ ಸರಸರನೆ ಕುತ್ತಿಗೆಯಿಂದ ಎರಡು ತೊಲ ಬಂಗಾರದ ಅವಲಕ್ಕಿ ಮಾದರಿಯ ಸರವನ್ನು ತೆಗೆದು, ಕಿವಿಗಳಿಂದ ವಜ್ರ ಓಲೆಗಳನ್ನು ಕಳಚಿ, ತಾನು ಕುಳತ ಮೆತ್ತೆಯ ಕೆಳಗೆ ಬಚ್ಚಿಟ್ಟಳು. ರುಕ್ಮಿಣಿ, ಕಳ್ಳರು ಏನು ಬೇಕಾದರೂ ಕೊಂಡೊಯ್ಯಲಿ, ನಮ್ಮ ಮಾನಹಾನಿ ಮಾಡದಿದ್ದರೆ ಸಾಕು ಎಂದುಕೊಳ್ಳುತ್ತಿದ್ದಳು. ಜಾನಕಿಯ ಪ್ರತಿಕ್ರಿಯೆ ವಿಚಿತ್ರವಾದುದಾಗಿತ್ತು. ಇಬ್ಬರು ದುಷ್ಟರು ತನ್ನ ಮೈಮೇಲೆ ಬಿದ್ದು ಘಾಸಿಗೊಳಿಸಿದ ಘಟನೆಯಿಂದ ಅವಳ ಮನಸ್ಸು ಇನ್ನೂ ಮುಕ್ತವಾಗಿರಲಿಲ್ಲ. ಅದಕ್ಕಿನ್ನ ಹೆಚ್ಚಿನ ದುರಂತ ಏನು ಸಂಭವಿಸೀತು, ಎನ್ನುವ ಒಂದು ರೀತಿಯ ವಿಷಣ್ಣಭಾವದ ಛಾಯೆ ಅವಳ ವದನವನ್ನು ಆವರಿಸಿದಂತಿತ್ತು. ಅಶ್ವತ್ಥ ಗಾಯತ್ರಿ ಜಪ ಮಾಡಲು ಶುರುಹಚ್ಚಿದ...

"ವಸಿ ತಡಕಪ್ಪ, ನಸ್ಯ ತಕ್ಕಟ್ಟೇನು..." ಎಂದವನೇ, ದೊಣ್ಣೆ ಹಿರಿದು, ಗಾಡಿಯ ಎಡಗೋಲು ಎತ್ತಿನ ಕಡೆಯಿಂದ ಕೆಳಕ್ಕೆ ಧುಮುಕಿ, ಲಕ್ಕ ಗಾಡಿಯ ಮುಂದೆ ಮೂಕಿ ಹಿಡಿದವನ ಮೇಲೆ ದೊಣ್ಣೆ ಬೀಸಿದ. ಹಟಾತ್ತನೆ ಎರಗಿದ ಆ ಬಿರುಸಿನ ಹೊಡೆತಕ್ಕೆ ತತ್ತರಿಸಿ ಆ ವ್ಯಕ್ತಿ ನೆಲಕ್ಕುರುಳಿದ. ತನ್ನ ಯಜಮಾನನ್ನು ಅನುಸರಿಸಿ ಗಾಡಿಯ ಕೆಳಗಿದ್ದ ಬೊಡ್ಡ, ಬಲಪಾರ್ಶ್ವದಲ್ಲಿ ನಿಂತವನ ಮೇಲೆ ನುಗ್ಗಿ ನೆಗೆದು ಅವನ ಬಲತೊಡೆಯನ್ನು ಕಚ್ಚಿದಾಗ ಆತನೂ ನೆಲಕ್ಕೆ ಕುಸಿದು ತನ್ನ ಕೈಯಲ್ಲಿದ್ದ ದೊಣ್ಣೆಯನ್ನು ನಾಯಿಯತ್ತ ಬೀಸುತ್ತಿದ್ದ. ಆದರೆ ಅತ್ತ ಇತ್ತ

ನೆಗೆಯುತ್ತ ಬೊಡ್ಡ ಏಟಿಗೆ ಸಿಕ್ಕದೆ ತೊಪ್ಪಿಸಿಕೊಳ್ಳುತ್ತಿರುವಂತೆ, ಲಕ್ಕ ಮೊದಲು ತನ್ನಿಂದ ಏಟು ತಿಂದವನಿಗೆ ಮೇಲೆ ಏಳದಂತೆ ಇನ್ನೂ ಒಂದೆರಡು ಏಟು ಬಿಗಿದು, ನಾಯಿಯಿಂದ ಕಚ್ಚಿಸಿಕೊಂಡು ಕೆಳಗೆ ಬಿದ್ದವನ ಮೇಲೆ ಹರಿಹಾಯ್ದು, ದೊಣ್ಣೆಯಲ್ಲಿ ಬಾರಿಸಿ, ಒದ್ದು ಉರುಳಿಸಿದ. ಅಷ್ಟರಲ್ಲಿ ಗಾಡಿಯ ಹಿಂದುಗಡೆ ಬಂದು ನಿಂತ ಇಬ್ಬರಲ್ಲಿ ಒಬ್ಬಾತ ಅಶ್ವತ್ಥನ ಕೈಯಿಂದ ಬೆಳ್ಳಿಯ ನಶ್ಯದ ಡಬ್ಬಿಯನ್ನು ಕಸಿದಿದ್ದ. ಇನ್ನೊಬ್ಬ ಜಾನಕಿಯ ಕೊರಲಿನಿಂದ ಚಿನ್ನದ ಒಂದೆಳೆ ಸರವನ್ನು ಕಿತ್ತಿದ್ದ. ಮುಂದಿನವರಿಬ್ಬರೂ ಪೆಟ್ಟು ತಿಂದು ಕೆಳಗುರುಳಿದ್ದನ್ನು ಕಂಡು ಹಿಂದಿದ್ದ ಇವರಿಬ್ಬರೂ ಕೆರಳಿ, ಲಕ್ಕನ ಮೇಲೆ ನುಗ್ಗಿ ಆಕ್ರಮಣ ಮಾಡಿದರು. ಲಕ್ಕ ಬೊಡ್ಡ ಒಂದು ಕಡೆ, ಇವರಿಬ್ಬರೂ ಇನ್ನೊಂದು ಕಡೆ– ಹೀಗೆ ಹೋರಾಟ ನಡೆಯುತ್ತಿರುವಂತೆ, ಆ ಜಾಗದಲ್ಲಿ ನಡೆಯುತ್ತಿದ್ದ ಗದ್ದಲ ಎದಿರುಗಡೆಯಿಂದ ಅನತಿದೂರದಲ್ಲೆ ಬರುತ್ತಿದ್ದ ನಾಲ್ಕು ಗಾಡಿಗಳ ಜನರಿಗೆ ಕೇಳಿ ಅವರು, ಈಚಲುಗುತ್ತಿಯ ಸಮೀಪ ಕಳ್ಳರು ಯಾವುದೋ ಗಾಡಿಯ ಮೇಲೆ ಆಕ್ರಮಣ ಮಾಡಿರಬಹುದೆಂದು ಊಹಿಸಿ,

"ಬಂದೊ, ಬಂದೊ–ಹೆದರಬ್ಯಾಡಿ, ಹೆದರಬ್ಯಾಡಿ..." ಎಂದು ಜೋರಿನಿಂದ ಕೂಗಿದ್ದು ಕೇಳಿಸಿತು. ಆ ಕೂಗನ್ನು ಕೇಳಿ, ಕಳ್ಳರು ಅಲ್ಲಿಂದ ದೌಡು ಹೊಡೆದು ಈಚಲುಗುತ್ತಿಯ ಕತ್ತಲಲ್ಲಿ ಮರೆಯಾದರೆ.

ಎದಿರು ಗಾಡಿಗಳ ಕೆಲವು ಗಂಡಸರು ಕೆಳಗಿಳಿದು ಬಂದರು., ಲಕ್ಕನ ಕಾಲಿಗೆ, ಬೆನ್ನಿಗೆ ಪೆಟ್ಟು ಬಿದ್ದಿತು. ಬೊಡ್ಡ ಮಾತ್ರ ಅತ್ತ ಇತ್ತ ನೆಗೆದು ಹೇಗೋ ಹೆಚ್ಚು ಜಖಂ ಆಗದೆ ಉಳಿದಿತ್ತು!... ಎದಿರು ಗಾಡಿಯವರು ನಮ್ಮನ್ನುದ್ದೇಶಿಸಿ ಹೇಳಿದ್ದರು:

"ಇಷ್ಟು ಬೇಗ ಸಾಮಾನ್ಯವಾಗಿ ಕಳ್ಳರು ಬೀಳೋದು ಅಪರೂಪ. ಏನಿದ್ದರೂ ಒಂಬತ್ತು ಗಂಟೆ ಕಳೆದ ಮ್ಯಾಲೇ ಇಲ್ಲಿ ಅವಾಂತ್ರ. ಈ ಮುಚ್ಚಂಜೇಲಿ ನಿಮ್ಮ ಒಂಟಿಗಾಡಿ ನೋಡಿ ಧೈರ್ಯ ಮಾಡಿರೋಹಂಗೆ ಕಾಣ್ತದೆ. ಸದ್ಯಕ್ಕೆ, ದ್ಯಾವರು ನಿಮ್ಮ ಇಸ್ಟಕ್ಕೇ ಪಾರು ಮಾಡಿದ. ನಿಮ್ಮ ಪುಣ್ಯ ಚೆಂದಾಗಿತ್ತು. ಅವರು ಏನು ಮಾಡಕ್ಕೂ ಹೇಸದೇ ಇರೋ ಜನ!"

"ನೀವೆಲ್ಲಗೆ ಹೊರಟಿರೋದು?" –ಅಶ್ವತ್ಥ ಕೇಳಿದ್ದ.

"ಬೆಟ್ಟದಪುರಕ್ಕೆ" ಎಂದಿದ್ದರು.

ಲಕ್ಕ ಕುಂಟುತ್ತಲೆ ಗಾಡಿಯನ್ನು ಹತ್ತಿ ಕುಳಿತಿದ್ದ. ಅಶ್ವತ್ಥ ಆ ಗಾಡಿಗಳ ಮುಂದಾಳುಗಳಿಗೆ–

"ದೇವರೇ ನಿಮ್ಮನ್ನು ಈ ಹೊತ್ತಿನಲ್ಲಿ ಇಲ್ಲಿಗೆ ಕರೆದು ತಂದ. ನೀವು ಬಂದ್ದರಿಂದ ಒಂದು ಗಂಡಾಂತರದಿಂದ ನಾವು ಪಾರಾದೆವು. ನಿಮಗೆ ನಾವು ಸರ್ವದಾ ಋಣಿಗಳು" ಎಂದು ಕೃತಜ್ಞತೆಯ ಮಾತುಗಳನ್ನಾಡಿದ್ದ.

"ಇನ್ನು ಮುಂದೆ ಹಾದಿ ಸುಗಮ. ನಿರಾತಂಕದಿಂದ ನೀವು ಮುಂದಿನ ಪಯಣ ಬೆಳುಸಬೌದು" ಎಂದು ಆಶ್ವಾಸನೆ ನೀಡಿ, ಅವರೆಲ್ಲರೂ ತಮ್ಮ ತಮ್ಮ ಗಾಡಿಗಳನ್ನೇರಿ ಬೆಟ್ಟದಪುರದತ್ತ ಸಾಗಿದರು... ನಮ್ಮ ಗಾಡಿಯ ಆ ಜಾಗವನ್ನು ಬಿಟ್ಟು ಕದಲಿದಂತೆ, ನಾವು ಸರಾಗವಾಗಿ ಉಸಿರಾಡುವಂತೆ ಆಯಿತು.

ದೊಡ್ಡ ಬೇಲಾಳಿಗೆ ಬರುವವರೆಗೂ ಇದೇ ಸುದ್ದಿ ಅವರೆಲ್ಲರ ಮಾತಿಗೆ ಗ್ರಾಸ ಒದಗಿಸಿತ್ತು. ಬೇಲಾಳು ಮುಟ್ಟಿದಂತೆ, ಅಶ್ವತ್ಥನಿಗೆ ಹೊಟ್ಟೆಯ ಕಡೆ ಗಮನ ಹರಿಯಿತು.

"ಅದೆಲ್ಲ ಸರಿಯೆ. ದೇವರು ಹೇಗೂ ಪಾರು ಮಾಡಿದನಲ್ಲ. ಆ ವಿಷಯ ಎಷ್ಟು ಸಮಯ ಮಾತಾಡಿದರೂ ಅಷ್ಟೆ. ಈಗ ನನಗೆ ವಿಪರೀತ ಹಸಿವು. ನೀನು ತಂದಿರುವ ರವೆಉಂಡೆ, ಕೋಡುಬಳೆಗಳನ್ನ ಹೊರಕ್ಕೆ ತೆಗೆಯೆ, ಸಾತು" ಎಂದು.

ಅವನ ಇಚ್ಛೆಯಂತೆ ಸಾವಿತ್ರಿ ರವೆ ಉಂಡೆ, ಕೋಡುಬಳೆಗಳ ಸಂತರ್ಪಣೆಯನ್ನು ಅವರಿಗೆಲ್ಲರಿಗೂ ನಡೆಸಿದಳು. ಅದರಲ್ಲಿ ಬಹುಭಾಗ ವಿನಿಯೋಗವಾದದ್ದು ಅಶ್ವತ್ಥನಿಗೆ!...

ಬೇಲಾಳನ್ನು ದಾಟಿ ಎತ್ತಿನಗಾಡಿಯು ಮುಂದುವರಿದಂತೆ, ಗಾಡಿಯ ಗಡಲ್ ಗಡಕ್ ಜೋಗುಳಕ್ಕೆ ರುಕ್ಮಿಣಿಗೆ ಮಂಪರ ಬಂದಂತಾಗಿ ಎಂದೋ ಮುಳುಗಿ ತಳ ಸೇರಿದ್ದ ಸಂಗತಿಗಳು ಮೇಲೆರಿ ಬರತೊಡಗಿದ್ದವು:

ತನ್ನ ಪತಿ ಗತಿಸಿ ಹದಿನೈದು ಹದಿನಾರು ದಿನಗಳಾಗಿರಬೇಕು. ದುಃಖದ ಆವೇಗದಲ್ಲಿ ತಾನೆಲ್ಲಾದರೂ ಪ್ರಾಣಹರಣ ಮಾಡಿಕೊಳ್ಳಬಹುದೆಂದು–ಅಲ್ಲಿಯವರೆಗೆ ಹಗಲಿರುಳು ಎಚ್ಚರವಹಿಸಿದ್ದ ಮಾವಯ್ಯ ಮತ್ತು ಸುಶೀಲತ್ತೆ ಇಬ್ಬರೂ–ತಾನು ತೋರಿಕೆಗೆ ಶಾಂತಳಾಗಿ ಕಾಣುತ್ತಿದ್ದುದರಿಂದ, ಮೋಸಹೋಗಿದ್ದರು. ಆದರೆ ತನ್ನೆದೆಯೊಳಗೆ ಒಂದು ಅಗ್ನಿಕುಂಡವೆ ಉರಿಯುತ್ತಿತ್ತು... ಅವರು ಎಂತಹ ವ್ಯಕ್ತಿ! –ಲೋವರ್ ಸೆಕೆಂಡರಿವರೆಗೆ ಓದಿದ್ದ ತನ್ನಿಂದ ಕನ್ನಡ ಕಾವ್ಯಗಳನ್ನು ಓದಿಸಿ, ಅರ್ಥ ಹೇಳಿಕೊಟ್ಟು, ತನ್ನ ವಿದ್ಯಾಭ್ಯಾಸವನ್ನು ಹೆಚ್ಚಿಸಿದ್ದರು. ಜೊತೆಗೆ ಸಂಸ್ಕೃತ ಕಾವ್ಯನಾಟಕಗಳನ್ನು ಓದಿ ವಿವರಿಸಿ ತನ್ನ ಸಂಸ್ಕೃತಿಯನ್ನು ವರ್ಧಿಸಿದ್ದರು. ಇದು ಎಲ್ಲಕ್ಕೂ ಮಿಗಿಲಾಗಿ ಅವರ ಒಂದೊಂದು ನಡೆನುಡಿಯಲ್ಲೂ ರಸಿಕತೆ ತುಂಬಿರುತ್ತಿತ್ತು. ಅವರ ಸಂಗಡ ಕಳೆದ ಒಂದೊಂದು ಕ್ಷಣವೂ ಒಂದೊಂದು

ರಸನಿಮಿಷವೇ ಆಗಿರುತ್ತಿತ್ತು. ಅಂಥ ಮಹಾನುಭಾವವನನ್ನು ಕಳೆದುಕೊಂಡು ತಾನಾದರೂ ಯಾಕೆ ಬದುಕಿರಬೇಕು?– ತಾನೊಬ್ಬಳೇ ಏಕಾಂತದಲ್ಲಿರುವಾಗ ತಟ್ಟನೆ ಮುಖಾಮುಖಿಯಾಗಿ ಎದಿರು ನಿಲ್ಲುತ್ತಿದ್ದ ಪ್ರಶ್ನೆಯಿದು... ಸದಾ ಬಾಧಿಸುತ್ತಿದ್ದ ಈ ಪ್ರಶ್ನೆ ಒಂದು ರಾತ್ರಿ ಅವಳಿಂದ ಸ್ಪಷ್ಟ ಉತ್ತರವನ್ನೇ ಬೇಡಿತ್ತು...

ರುಕ್ಮಿಣಿಯು ಮೆಲ್ಲನೆ ಮೇಲೆದ್ದಿದ್ದಳು. ಪಕ್ಕದಲ್ಲಿ ಮಲಗಿದ್ದ ಸರಸಿಯನ್ನೊಮ್ಮೆ ತಾಯ್ತನದ ಕಂಬನಿದುಂಬಿ ದೃಷ್ಟಿಸಿದಳು. ತನ್ನನ್ನು ತನ್ನ ಸ್ವಂತ ತಾಯಿಗಿಂತಲೂ ಅತಿಶಯವಾಗಿ ಹಚ್ಚಿಕೊಂಡಿರುವ ಈ ಬಾಲೆಯನ್ನು ಬಿಟ್ಟು ಹೋಗುವುದಾದರೂ ಹೇಗೆ?– ಎಂದು ಪರಿತಪಿಸಿದಳು. ಆದರೆ ಈ ಮೋಹವನ್ನು ಕಡಿದುಕೊಳ್ಳದಿದ್ದಲ್ಲಿ, ಕುಟ್ಟೆಹುಳುವಾಗಿ ಕೊಪರೆಯುವ ಭರಿಸಲಾಗದ ಈ ಚಿಂತೆಯಿಂದ ತನಗೆ ಮುಕ್ತಿಯುಂಟೆ?...

ಕ್ಷಣಕಾಲ ಅಂತಃಕರಣ ಹೊಯ್ದಾಡಿತು. ಕೊನೆಗೊಮ್ಮೆ ಮನಸ್ಸು ಕಲ್ಲುಮಾಡಿ ಹೇಗೋ ಆ ಕೋಣೆಯಿಂದ ಹೊರನಡೆದಿದ್ದಳು. ತಲೆಬಾಗಿಲು ತೆರೆಯುವಾಗ ತಾನೆಷ್ಟು ಆಸ್ಥೆ ವಹಿಸಿದ್ದರೂ ಹೊನ್ನೆಮರದ ದಪ್ಪನೆಯ ಹಳೆಯದಾದ ಬಾಗಿಲು ಕಿರ್ ಅನ್ನದೆ ಇರಲಿಲ್ಲ. ಆ ಗಳಿಗೆಯಲ್ಲಿ ಅವಳಿಗೆ ಅವಳ ಹೃದಯದ ಬಡಿತವೇ ನಿಂತಂತಾಗಿತ್ತು!– ಪುಣ್ಯಕ್ಕೆ ಆ ಶಬ್ದದಿಂದ ಮನೆಯವರ್‍ಯಾರೂ ಎಚ್ಚರಗೊಳ್ಳಲಿಲ್ಲ!...

ಹೊಸಿಲು ದಾಟಿದ್ದಳು... ಏನೋ ಕಳವಳ... ಮಾವಯ್ಯ, ಸುಶೀಲತ್ತೆ ಇಬ್ಬರೂ ತನ್ನ ಬೆನ್ನು ಹಿಂದೆಯೇ ತಡೆಯಲು ಬರುತ್ತಿರುವ ಹಾಗೆ!... ಸರಸಿ ತನ್ನ ಪುಟ್ಟ ಕೈಗಳೆರಡನ್ನೂ ಬಾಚಿ ಅಡ್ಡನಿಂತು, ತಾನು ಮುಂದೆ ಅಡಿಯಿಡದಂತೆ ತಡೆಯುತ್ತಿರುವ ಹಾಗೆ!...

ನಿದ್ರೆಯಲ್ಲಿ ನಡೆಯುವವಳಂತೆ ಮನೆಯ ಮುಂದಿನ ಮೆಟ್ಟಿಲುಗಳನ್ನು ಒಂದೊಂದಾಗಿ ಇಳಿದಿದ್ದಳು. ಮೆಟ್ಟಿಲುಗಳಿಗೂ ಕತ್ತಲು ಮೆತ್ತಿದಂತಿತ್ತು. ಜಾಗರೂಕತೆಯಿಂದ ಮೆಟ್ಟಿಲಿಳಿದು ಕತ್ತಲು ಹಾಸಿದ ಬೀದಿಗೆ ಕಾಲಿಟ್ಟಳು.

ಆಚೆಮನೆಯ ಬಾಣಂತಿಕೋಣೆಯ ದೀಪ ಹೊರಗಿನ ಕತ್ತಳನ್ನು ಕೆಣಕಲಾರದೆ ಒಳಗೇ ಅಡಗಿ ಕುಳಿತಿತ್ತು...

ನಿಂತಳು. ಯಾರಾದರೂ ಈ ಸರಿಹೊತ್ತಿನಲ್ಲಿ ಎದ್ದಿರಬಹುದೆ?... ತರ್ಕಿಸಿದಳು... ಇಲ್ಲ, ಯಾರು ಕಾಣುತ್ತಿಲ್ಲ. ದೂರದ ಮನೆಯಲ್ಲಿ ಯಾವುದೊ ಹಸುಕಂದ ಅಳುವ ಸದ್ದು! ತಾಯಿ ಸ್ತನ್ಯಕೊಡುತ್ತಿರಬಹುದು!.... ಈಗ ಆ ಸದ್ದೂ ನಿಂತದೆ... ಊರು ಮಲಗಿದಂತೆ, ಶಬ್ದವೂ ನಿದ್ದೆಯಲ್ಲಿ ಮುಳುಗಿದಂತಿತ್ತು... ಬಾವಿ ಇರುವುದು ತಮ್ಮ ಮನೆಯಿಂದ ನಾಲ್ಕು ಮನೆಯ ಆಚೆಗೆ. ರುಕ್ಮಿಣಿ

ಅಂದಾಜಿನಲ್ಲಿ ಹೆಜ್ಜೆಯಿಡುತ್ತಿದ್ದಳು.....

ಏನದು ಸದ್ದು?– ಅತಿ ದೂರದಿಂದೇನಲ್ಲ !.... ನಮ್ಮ ಕೇರಿಯಿಂದ ಕೊಂಚ ಆಚೆಗಿರಬೇಕು... ಈಗ ಸ್ಪಸ್ಟವಾಗುತ್ತಿದೆ– ಇದು ನಾಯಿ ಬೊಗಳುವ ಸದ್ದೆ!... ಪುನಃ ನಿಂತಳು. ನಿಂತು ಕಿವಿಗೊಟ್ಟಳು–ಸಂಶಯವೆ ಬೇಡ, ಇದು ಲಕ್ಕನ ನಾಯಿ ಬೊಡ್ಡನೆ!... ಹಾಗಾದರೆ ಅದರ ಹಿಂದೆ ಲಕ್ಕ ಬರುತ್ತಿರಬೇಕು!.... ಅರ್ಥವಾಯಿತು–ಅವನ ದೊಡ್ಡಪ್ಪ ಕುಂದೂರಯ್ಯ ತಾನೆ ಊರಿನ ಕುಳವಾಡಿ. ಅವನ ಒಬ್ಬನೇ ಮಗ ಪುಟ್ಟಾರಿಗೆ ಈ ಕುಳವಾಡಿ ಕೆಲಸದಲ್ಲಿ ಆಸಕ್ತಿಯೇ ಇರಲಿಲ್ಲ. ಅನೇಕ ವೇಳೆ ಕುಂದೂರಯ್ಯನಿಗೆ ಹುಶಾರು ತಪ್ಪಿದರೆ, ಅಥವಾ ಅಸಂದರ್ಭ ಆದರೆ, ಆ ಕೆಲಸ ಲಕ್ಕನಿಗೇ ಗಂಟು ಬೀಳುತ್ತಿದ್ದುದು ತನಗೆ ತಿಳಿದಿಲ್ಲವೆ?...

ಹಾಗಾದರೆ ಇದು ಲಕ್ಕನೆ!– ಸಂದೇಹವೇ ಇಲ್ಲ.... ಅಯ್ಯೋ, ಲಕ್ಕ ಬಂದುಬಿಟ್ಟರೆ?– ಆಗ ತನ್ನ ನಿರ್ಧಾರಕ್ಕೆ ಅವನು ಅಡ್ಡಿ ಮಾಡುವುದಂತೂ ಶತಸ್ಸಿದ್ಧ!... ಇನ್ನು ತಡಮಾಡಬಾರದು....

ನಡಿಗೆಯನ್ನು ತ್ವರೆಗೊಳಿಸಿದಳು. ಬ್ರಾಹ್ಮಣರ ಕೇರಿಯ ತಿರುವಿನಲ್ಲಿ ಬೆಳಕು ಚೆಲ್ಲಿ, ಆ ಬೆಳಿನಲ್ಲಿ ಬೊಡ್ಡನ ಆಕೃತಿಯು ಸ್ಪಷ್ಟವಾಗತೊಡಗಿತು. ಹಿಂದೆಮುಂದಾಡುವ ಲಾಟೀನಿನ ಬೆಳಕು ನಮ್ಮ ಬೀದಿಗೆ ತಿರುಗಿ, ತನ್ನತ್ತಲೆ ಹರಿದು ಬರುತ್ತಿರುವಂತೆ ಕಂಡಿತು. ಆ ಬೆಳಕಿನ ಹಿಂದೆ ನಿಸ್ಸಂಶವಾಗಿ ಲಕ್ಕ ಇದ್ದಿರಬೇಕು!... ಮುಂದೇನು ಗತಿ? ಎಂದು ಚಿತ್ತಕ್ಷೋಭೆಗೊಳಗಾಯಿತು...

ನಡಿಗೆ ಓಟಕ್ಕಿಟ್ಟಿತು... ಬೊಡ್ಡ ಬೊಗಳಲು ಶುರು ಹೆಚ್ಚಿತು. ಲಕ್ಕನಿಗೆ ಸಂದೇಹವಾಗಿರಲೇಬೇಕು. "ಯಾರು–ಯಾರದು?" ಕೂಗುತ್ತ, ಅವನೂ ಓಡುತ್ತಲೆ ಬಂದ...

ತಾನೂ ಓಡಿದ್ದಳು. ಲಕ್ಕನಿಗಿನ್ನ ಮುಂದೆ ಬಂದ ಬೊಡ್ಡ ಇನ್ನೇನು ತನ್ನನ್ನು ಮುಟ್ಟಬೇಕು ಎನ್ನುವಷ್ಟರಲ್ಲಿ ತನಗೆ ಬಾವಿ ಸಿಕ್ಕಿತ್ತು. ತಾನು ಬಾವಿಕಟ್ಟೆಯನ್ನೇರಿ ನಿಂತಂತೆ, ಲಕ್ಕನೂ ಓಡಿಬರುತ್ತ, ತನ್ನನ್ನು ಗುರುತಿಸಿ "ಓ, ರುಕ್ಮಿಣವ್!... ನೀವು... ಇದ್ಯಾಕೆ?... ಬ್ಯಾಡಿ... ಬ್ಯಾಡಿ" ಕೂಗುತ್ತಲೇ ಇದ್ದ. ಅವನ ಧ್ವನಿ ಸಮೀಪವಾಗುತ್ತಿದ್ದದಷ್ಟೆ ತನಗೆ ನೆನಪು. ತಾನು ಬಾವಿಯೊಳಕ್ಕೆ ಹರಿ ಬಿಟ್ಟಿದ್ದಳು!...

ಮುಂದೆ ನಡೆದುದ್ದನ್ನು ಲಕ್ಕನೇ ತನಗೆ ವಿವರಿಸಿದ್ದ:

ನಾಯಿ ಬೊಗಳಿದಾಗ ಮೊದಮೊದಲು ಯಾರೊ ಕಳ್ಳ ಊರಿನಲ್ಲಿ ಠಳಾಯಿಸುತ್ತಿರಬೇಕು. ಅನ್ನಿಸಿತಂತೆ. ಹತ್ತಿರ ಬಂದಂತೆ ಸೀರೆಯುಟ್ಟ ಹೆಂಗಸಿನ

ರೂಪ ಅಸ್ಪಷ್ಟವಾಗಿ ಕಾಣಿಸಿತಂತೆ. ಬಾವಿಕಟ್ಟೆಯನ್ನು ಸಮೀಪಿಸಿದ ಹಾಗೆ ಕಟ್ಟೆಯ ಮೇಲೆ ನಿಂತಿದ್ದ ಹೆಂಗಸು ತಾನೆ ಎಂದು ಗುರುತಿಸಿ ಕೂಗುವಷ್ಟರಲ್ಲಿ ತಾನು ನೀರಿಗೆ ಧುಮುಕಿದ್ದೆನಂತೆ!...

ತಕ್ಷಣ ಲಕ್ಕ ಹುಯಿಲೆಬ್ಬಿಸಿದಾಗ ಮೊದಲು ಓಡಿಬಂದವರು ಬಾವಿಗೆ ಸಮೀಪದ ಮನೆಯುವರು. ಅನಂತರ ಅಕ್ಕಪಕ್ಕದ ಮನೆಯುವರು ಕೂಡಿಕೊಂಡಿರಬೇಕು. ಮಾವಯ್ಯ ಯಾವಾಗ ಬಂದರೋ ಅವನಿಗೆ ತಿಳಿಯದು. ಮೊದಲು ಬಂದ ಮನೆಯವರೇ ಬಾವಿಯ ಹಗ್ಗವನ್ನು ತಂದಿತ್ತು ಲಕ್ಕನನ್ನು ಬಾವಿಯೊಳಗೆ ಇಳಿಸಿದವರು. ಬೆಳಕಿಗಾಗಿ ಸ್ವಲ್ಪಮೇಲುಗಡೆಗೆ ಕಟ್ಟಿದ ಲಾಟೀನಿನೊಡನೆ ಹಗ್ಗ ಹಿಡಿದು ಲಕ್ಕ ಬಾವಿಗಿಳಿಯುತ್ತಿರುವಂತೆ, ತಾನು ನೀರನಿಲ್ಲಿ ಮುಳುಗಿ ಸತ್ತಿರಬೇಕೆಂಬ ಶಂಕೆಯೇ ಅವನನ್ನು ಬಾಧಿಸುತ್ತಿತ್ತಂತೆ!– ಮೇಲೆ ಬಾವಿಯ ತುದಿಗೆ ಜಮಾಯಿಸಿದ್ದ ಜನಕ್ಕೂ ಅದೇ ಭಾವನೆ ಇದ್ದಿರಬೇಕು... ಆದರೆ ನೀರಿಗೆ ನೇರವಾಗಿ ಬಿದ್ದಿದ್ದೆ. ಎರಡು ಸಲ ನೀರಿನಲ್ಲಿ ಮುಳುಗಿ ಮೇಲೇಳುವಾಗ, ಅತ್ತ ಇತ್ತ ಬಡಿಯುವ ಕೈಗೆ ನೀರಿನ ಅಂಚಿಗೆ ಒತ್ತಿದಂತಿದ್ದ ಚಾಚುಗಲ್ಲೊಂದು ಸಿಕ್ಕಿತ್ತು. ಅದನ್ನು ಭದ್ರವಾಗಿ ಹಿಡಿದು ತಾನು ನೀರಿನಲ್ಲಿ ಮುಳುಗಿ ತೇಲುತ್ತಿದ್ದೆ...

ತಾನು ಸಾಯಬೇಕೆಂದು ನೀರಿಗೆ ಬಿದ್ದವಳು. ಈಗ ನೆನೆದರೆ ಅಶ್ಚರ್ಯವಾಗುತ್ತದೆ. ಆ ಗಳಿಗೆಯಲ್ಲಿ, ಬೇರೆ ಯಾವುದರ ಪರಿವೆಯೂ ಇಲ್ಲದೆ, ಹೇಗಾದರೂ ಸರಿಯೇ ಜೀವವನ್ನು ಉಳಿಸಿಕೊಳ್ಳಬೇಕು ಎಂಬುದೊಂದೇ ಉಗ್ರವಾಗಿ ತನ್ನೊಳಗೆ ತುಡಿಯುತ್ತಿದ್ದ ಬಯಕೆ!... ಆಗ ತಾನು ಅಸ್ಫುಟವಾಗಿ ಚೀರಿರಬೇಕು. ತನ್ನ ಚೀತ್ಕಾರ ಬಾವಿಯೊಳಗೆ ಅರ್ಧಕ್ಕಿಂತ ಕೆಳಗೆ ಇಳಿದಿದ್ದಾಗಲೆ ಲಕ್ಕನಿಗೆ ಕೇಳಿಸಿ, ತನಗಿನ್ನೂ ಜೀವ ಹೋಗಿಲ್ಲ –ಎಂದು ಅವನಿಗೆ ಮನವರಿಕೆಯಾಗಿತ್ತಂತೆ!...

ಅವನು ತಳ ಮುಟ್ಟಿದಾಗ, ಆಗಲೆ ಭುಜಮಟ್ಟ ಮುಳುಗಿ ಚಾಚುಗಲ್ಲಿನಿಂದ ಇನ್ನೇನು ಹಿಡಿತ ಕಳೆದುಕೊಳ್ಳುವುದರಲ್ಲಿದ್ದ ತನ್ನನ್ನು ತಬ್ಬಿ ಹಿಡಿದು, ಲಕ್ಕ ನೀರಿನಲ್ಲಿ ಈಜುತ್ತಲೆ ಇದ್ದ. ಅನಂತರ ಹಗ್ಗ ಕಳಚಿ, "ರುಕ್ಕಮ್ಮಾರು ಬದುಕವ್ರೆ–ಬದುಕವ್ರೆ!" ಎಂತಲೂ ಕೂಗಿದ್ದ... ಬಾವಿಯ ಮೇಲುಗಡೆ ಹತ್ತಾರು ಲಾಟೀನುಗಳು ಕನಸಿನ ಲೋಕದವೋ ಎಂಬಂತೆ ಹೊಳೆಯುತ್ತಿದ್ದವು. ಅಷ್ಟರಲ್ಲಿ ಲಕ್ಕನನ್ನು ಇಳಿಸಿದ್ದ ಹಗ್ಗವನ್ನು ಎಳೆದುಕೊಂಡಿರಬೇಕು. ತುಸು ವೇಳೆಯಾದ ಬಳಿಕ, "ಬಿದಿರುತೊಟ್ಟಿಲಿಗೆ ಹಗ್ಗ ಕಟ್ತಾ ಇದ್ದೀವಿ, ಇನ್ನೇನು ಬಿಡ್ತೀವಿ"– ಅನೇಕ ಧ್ವನಿಗಳ ಕೂಗು. ಆ ಕೂಗು

ಮಂಪರದಲ್ಲಿದ್ದ ತನಗೆ ದೇವತೆಗಳು ಆ ರೂಪದಲ್ಲಿ ಅಭಯವೀಯುತ್ತಿದ್ದಂತೆ ಭಾಸವಾಗಿತ್ತು. ಇನ್ನೂ ಸ್ವಲ್ಪ ಸಮಯ ಕಳೆಯುವುದರಲ್ಲಿ ಲಾಟೀನುಸಹಿತ ಹಗ್ಗ ಕಟ್ಟಿದ್ದ ಬಿದಿರುಗೊಟ್ಟಿಲನ್ನು ಮೇಲಿನಿಂದ ಇಳಿಬಿಟ್ಟಿದ್ದರು. ಲಕ್ಕ ಬಲು ಪ್ರಯಾಸದಿಂದ ತನ್ನನ್ನು ಬಿದಿರುತೊಟ್ಟಿಲಿನೊಳಗೆ ಸೇರಿಸಿದ್ದ. ಮೇಲಿನವರು ತನ್ನನ್ನು ಹೊತ್ತ ಬಿದಿರುತೊಟ್ಟಿಲನ್ನು ಮೇಲ್ಕೆ ಎಳೆದುಕೊಳ್ಳುತ್ತಿರುವಂತೆ ತನ್ನ ಪ್ರಜ್ಞೆ ಮಂದವಾಗುತ್ತ, ಬಾವಿಯ ಮೇಲೆ ಕಪ್ಪು ಮಸಿಯ ಗುಂಡುಹಲಗೆಯ ಹಾಗೆ ಕಾಣುವ ಆಕಾಶ, ಅದರ ಕೆಳಗೆ ಬಾವಿಯ ಸುತ್ತಲೂ ಬೆಳಕು ಹಿಡಿದು ನಿಂತ ಜನ–ಇವೆಲ್ಲ ಕ್ರಮಕ್ರಮವಾಗಿ ಕರಗಿ ಇಲ್ಲವಾದವು!... ಮುಂದೆ ನಡೆದುದೇನೂ ನನಗೆ ತಿಳಿಯದು. ಈ ವಿಚಾರವನ್ನೂ ಸಹ ಮುಂದೊಂದು ದಿನ ಲಕ್ಕನ ಕೊಟ್ಟಿಗೆಯಲ್ಲಿ "ಹಿಂಗಾಯ್ತು ಅಮ್ಮಾರೆ" ಎಂದು ಕತರೆ ಮಾಡಿ ಹೇಳಿದ್ದ.

ಬಿದಿರುತೊಟ್ಟಿಲಿನಿಂದ ತನ್ನನ್ನ ಇಳಿಸಿದ್ದ ಬಳಿಕ ಲಕ್ಕನಿಗೂ ಪುನಃ ಹಗ್ಗ ಬಿಟ್ಟಿದ್ದರಂತೆ. ಹಗ್ಗದ ಆಶ್ರಯದಲ್ಲಿ ಅವನು ಮೇಲೆ ಬಂದಾಗ, ಮಾವನವರು ತನ್ನುನ್ನು ಮಕಾಡೆ ಮಲಗಿಸಿ ದೇಹವನ್ನು ಎರಡೂ ಕೈಗಳಿಂದ ಬಲವಾಗಿ ಅದುಮಿ ತಾನು ಬಾವಿಯಲ್ಲಿ ಮುಳುಗಿದಾಗ ಕುಡಿದಿದ್ದ ನೀರನ್ನು ಹೊರಕ್ಕೆ ಕಡೆಸುತ್ತಿದ್ದರಂತೆ!...

–ಇದೇ ಚಿಂತನೆಯಲ್ಲಿ ಮುಳುಗಿದ್ದ ರುಕ್ಮಿಣಿಯನ್ನು "ಕಂಪಲಾಪುರ ಬಂತು" ಎಂಬ ಅಶ್ವತ್ಥನ ಮಾತು ಎಚ್ಚರಗೊಳಿಸಿತ್ತು. ಗಾಡಿ ಕಂಪಲಾಪುರವನ್ನು ದಾಟಿ ದರುಮನಳ್ಳಿಯನ್ನು ಸೇರುವ ವೇಳೆಗೆ ಕೋಳಿಗಳು ಕೂಗಿ ಅವರನ್ನು ಎಚ್ಚರಗೊಳಿಸುತ್ತಿದ್ದವು. ಮನೆಯಲ್ಲಿ ಸುತ್ತಮುತ್ತಲಿನ ಹಳ್ಳಿಗಳಿಂದ ನೆರೆದ ನೆಂಟರು ಆಗಲೆ ಎದ್ದಿದ್ದು, ಹಟ್ಟಿ ಗಿಜಗುಡುತ್ತ ಸಾವಿನ ಮನೆ ಎಂಬ ಅಂಶವನ್ನು ಮರೆಸುವಂತಿತ್ತು. ಪ್ರೀತಿಯ ತಂಗಿಯನ್ನು ಕಳೆದಕೊಂಡವರಂತೆ ಶಾಸ್ತ್ರಿಗಳು ತಮ್ಮ ಎಂದಿನ ಲವಲವಿಕೆಯನ್ನೂ ಚಿತ್ತಸ್ಥೈರ್ಯವನ್ನೂ ಕಳೆದುಕೊಂಡವರಂತೆ ತೋರುತ್ತಿದ್ದರು. ಮಗ ತೀರಿಹೋದಾಗ ಇಂಥದೇ ಸ್ಥಿತಿಯಲ್ಲಿ ಶಾಸ್ತ್ರಿಗಳು ಪರಿತಾಪಪಡುತ್ತಿದ್ದುದನ್ನು ರುಕ್ಮಿಣಿ ಹಿಂದೆ ಕಂಡಿದ್ದಳು. ಮಂಕುಹಿಡಿದವರಂತೆ ಕುಳಿತ ಅವರನ್ನು ನೋಡಿದಾಗ ಅಯ್ಯೋ ಎನ್ನಿಸದಿರಲಿಲ್ಲ...

ಅಸ್ಥಿಸಂಚಯನವಾಗಿ, ವೈಕುಂಠ ಮುಗಿಯುವುದನ್ನೆ ಕಾದಿದ್ದ ನೆಂಟರು ಇಷ್ಟರು ತಮ್ಮ ತಮ್ಮ ಊರುಗಳಿಗೆ ಹೊರಟು ನಿಂತರು. ಅಶ್ವತ್ಥ, ಸಾವಿತ್ರಿ ಮತ್ತು ಜಾನಕಿಯನ್ನು ರುದ್ರಪಟ್ಟಣಕ್ಕೆ ಹಿಂದಿರುಗಿಸುವ ಕಾರ್ಯಭಾರವು ಲಕ್ಕನ ಪಾಲಿಗೇ ಬಿದ್ದಿತ್ತು. ರುಕ್ಮಿಣಿಯನ್ನೂ ಇನ್ನೂ ಎರಡು ಮೂರು ತಿಂಗಳುಗಳವರೆಗಾದರೂ

ಕಳಿಸಿಕೊಡಬೇಕೆಂದು ಸಾವಿತ್ರಿ ಶಾಸ್ತ್ರಿಗಳಿಗೆ ನಿವೇದಿಸಿದಳು. ಅವರು ಒಪ್ಪಲಿಲ್ಲ. ಸರಸಿಯ ಕಡೆ ಕೈಮಾಡಿ,

"ಇಲ್ಲಿ, ಇವಳನ್ನು ಯಾರು ನೋಡಬೇಕು?" –ಪ್ರಶ್ನೆ ಹಾಕಿದರು.

"ಇವಳನ್ನೂ ಕಳಿಸಿ, ತಾಯಿಯನ್ನು ಕಳೆದುಕೊಂಡಿರುವ ಹುಡುಗಿ. ಸ್ಥಳ ಬದಲಾವಣೆಯಿಂದ ಅವಳಿಗೂ ದುಃಖ ಶಮನವಾಗಲು ಅನುಕೂಲವಾಗುತ್ತೆ." –ಸಾವಿತ್ರಿ ವಾದಿಸಿದಳು.

ಶಾಸ್ತ್ರಿಗಳು ನಿರುಪಾಯರಾದವರಂತೆ ಕೈಚೆಲ್ಲಿ,

ಅವಳನ್ನೆ ಕೇಳಿ. ಅವಳು ನಿಮ್ಮೊಡನೆ ಬರುವುದಾದರೆ ನನ್ನದೇನೂ ಅಭ್ಯಂತರವಿಲ್ಲ" ಎಂದರು.

ಸಾವಿತ್ರಿ ಸರಸಿಯನ್ನು ಅತಿಶಯವಾಗಿ ಮುದ್ದಿಸುತ್ತ,

"ನಮ್ಮ ರುದ್ರಪಟ್ಟಣ ನಿಮ್ಮ ಹಳ್ಳಿಯ ಹಾಗಲ್ಲ. ಅಲ್ಲಿ ಜುಳುಜುಳು ಹರಿಯುವ ಹೊಳೆಯಿದೆ. ಅದರಲ್ಲಿ ನೀನು ಮುಳುಗುಹಾಕಿ ಆಟ ಆಡ್ತ ಸ್ನಾನ ಮಾಡಬಹುದು... ಅಮೇಲೆ ಹೊಳೆ ದಡದಲ್ಲಿ ಹರಗಲು ನಿಂತಿರುತ್ತೆ. ನೀನು ಆ ಹರಿಗಲಿನಲ್ಲಿ ಕುಳಿತು ಬೇಕಾದ ಹಾಗೆ ಹೊಳೆಯ ಆಚೆ ದಡದಿಂದ ಈಚೆ ದಡಕ್ಕೆ ಅಡ್ಡಾಡಬಹುದು..." ಎಂದೆಲ್ಲ ಅಮಿಷ ಒಡ್ಡಿ, "ನೋಡು ನಮ್ಮೂರಲ್ಲಿ ಇಷ್ಟೆಲ್ಲ ಇದೆ. ನಮ್ಮ ಜೊತೆಗೆ ಬರ್‍ತೀಯ, ಸರಸು?" ಎಂದು ಕರೆದಳು. ಜಾನಕಿಯೂ "ಬಾರೆ, ಸರಸು" ಎಂದು ರಮಿಸಿದಳು.

ಸರಸಿಯದು ಒಂದೇ ಖಡಕ್ಕಾದ ಉತ್ತರ:

"ನಾ ಬರಲ್ಲ."

ಸಾವಿತ್ರಿ ಪೆಚ್ಚಾದಳು. ಅಶ್ವತ್ಥ ಪಾತುವಿನ ಕಡೆ ತಿರುಗಿ "ನೀನಾದರೂ ಬಾಮ್ಮ –ನೀನೂ ನಿನ್ನ ಯಜಮಾನರೂ ನಮ್ಮ ಊರಿಗೆ ಬಂದು ಬಹಳ ಕಾಲವೇ ಸಂದಿದೆ. ನೀವೆಲ್ಲ ಈಗಲಾದರೂ ಬನ್ನಿ. ಹಾಯಾಗಿ ಒಂದೆರಡು ತಿಂಗಳವರೆಗೆ ಇದ್ದು ಬೇಸರ ಕಳೆದು ಹೋಗುವಿರಂತೆ" ಎಂದು ಆಹ್ವಾನಿಸಿದ್ದ.

"ಯಜಮಾನರೇ ಇದಾರಲ್ಲ, ಕೇಳಿ. ಅವರು ಒಪ್ಪಿದರೆ ನನ್ನದೇನೂ ಅಭ್ಯಂತರವಿಲ್ಲ. ನಾನು ಕೇವಲ ಬಸವನ ಹಿಂದಿನ ಬಾಲ. ಅವರು ಹೇಗೆ ಹೇಳಿದರೆ ಹಾಗೆ", ಎಂದು ಪಾರ್ವತಿ, ಚಂದ್ರಶೇಖರಯ್ಯ ನವರತ್ತ 'ಏನಪ್ಪಣೆ'? ಎನ್ನುವ ಹಾಗೆ ನೋಟ ಬೀರಿದ್ದಳು. ಚಂದ್ರಶೇಖರಯ್ಯ ನಗುತ್ತ.

"ಭಾವ ಇಷ್ಟು ಪ್ರೇಮದಿಂದ ಕರೆಯುವಾಗ, ಯಾಕೆ ಹೋಗಬಾರದು?... ನಡಿಯೆ ಪಾತು. ರುದ್ರಪಟ್ಟಣವನ್ನು ನಾನೂ ನೋಡಿ ತುಂಬಾ ಸಮಯಾನೆ

ಆಯಿತು... ಹೇಗೂ ಇಷ್ಟು ದೂರ ಬಂದಿದೀವಿ. ಹೀಗೇನೇ ಭಾವ ಅತ್ತಿಗೆ ಜೊತೆಗೆ ಹೋಗಿ ನಾಲ್ಕು ದಿನ ಇದ್ದು ಬರೋಣ" ಎಂದಿದ್ದರು.

"ನೀವು ಬರಲು ಒಪ್ಪಿದ್ದು ಬಹಳ ಸಂತೋಷ. ಬನ್ನಿ, ಬನ್ನಿ. ನಾಲ್ಕು ದಿನ ಯಾಕೆ, ರುದ್ರಪಟ್ಟಣ ನಿಮಗೆ ಬೇಸರ ಹಿಡಿಸುವವರೆಗೂ ಇದ್ದುಬರುವಿರಂತೆ" ಎಂದು ಸಾವಿತ್ರಿಯೂ ಕಳಕಳಿಯಿಂದಲೆ ಆಹ್ವಾನಿಸಿದ್ದಳು... ಜಾನಕಿಗೆ ಆಗಿದ್ದ ಆಘಾತವನ್ನು ಮರೆಸಲು ಮತ್ತು ತಾನೂ ಮರೆಯಲು, ಚಂದ್ರಶೇಖರಯ್ಯನಂಥ ಋಷಿ ಮನುಷ್ಯ ಸ್ವಲ್ಪ ಕಾಲ ಜೊತೆಗಿದ್ದರೆ ವಾಸಿ ಎಂಬ ಭಾವನೆಯನ್ನು ಸಾವಿತ್ರಿಯ ಆಹ್ವಾನದಲ್ಲಿ ರುಕ್ಮಿಣಿ ಗುರುತಿಸಿದ್ದಳು!....

ಅವರೆಲ್ಲರೂ ರುದ್ರಪಟ್ಟಣಕ್ಕೆ ತೆರಳಿದ ಬಳಿಕ ಸರಸಿ ಕೆಲ ಸಮಯ ಪೆಚ್ಚಾದಂತೆಯೇ ಇರುತ್ತಿದ್ದಳು. ಆದರೆ ವೆಂಕಣ್ಣ ಜೋಯಿಸರ ಹೆಣ್ಣುಮಕ್ಕಳು, ತೋಟ ಇವುಗಳ ಸಂಭ್ರಮದಲ್ಲಿ ಆ ಕೊರಗನ್ನು ಬಹುಜಾಗ್ರತೆ ಮರೆತಿದ್ದಳು

## ೧೦

ಇತ್ತಾಗಿ ಲಕ್ಕ, ಅಸ್ವತ್ತಪ್ಪಾರು–ಚಮದ್ರಸೇಕರಪ್ಪಾರು ಇಬ್ರ ಮನೆಯೋರನೂವೆ ರುದ್ರಪಟ್ಟಣಕ್ಕೆ ಸೇರುಸಿ ಊರಿಗೆ ಮರಳಿದ್ದ. ಈ ಸರ್ತಿ ವೋಗೋವಾಗ್ಲೂ ಆಸ್ಟೇಯ, ಬರೂವಾಗ್ಲೂ ಅಸ್ಟೆಯ. ಲಕ್ಕನ ಅದ್ರುಸ್ಟಕ್ಕೆ ಉದ್ದಕೂವೆ ಜೊತೆ ಗಾಡಿಗಲೆ ಸಿದ್ದಬೇಕ!... ಅದಕೇ ಇರಬೈದು ಹಾದೀಲಿ ಯಾತಾವೂ ಕಳ್ಳರು ಕನಸ್ಗೂ ಸೈತ ಬೀಳ್ನಿಲ್ಲ... ಇದ್ನೆ ಯೋಚ್ಣೆಗೆ ತಂದ್ಕೊತ್ತ, ಲಕ್ಕ ತಮ್ಮ ವೊಲಗೇರಿಯ ಗುಡ್ಲು ತಾವಿಕೆ ಬಂದಿದ್ದ. ತನ್ನ ಯಜಮಾನ ಮಾತಿಲ್ದೆ ಕತಿಲ್ದೆ ಕಾಲೆಳೀತ ಬತ್ತಿದ್ದ ಕಂಡು ಬೊಡ್ಡನೂ ಬೊಗಳದೆ ಮತ್ತಗೆ ಬತ್ತಾ ಇದ್ದದ್ದು, ತನ್ನ ಬೆನ್ನ ಹಿಂಚೋರಿ ಕುಂತು ಕಡಿಯಕ್ಕೆ ಮುಟ್ಟಿಗಂಡ ತೋಣಚೀಯ ಬಗ್ಗಿ ಬಗ್ಗಿ ಕಚ್ಚುತಾ ಒದ್ದಾಡ್ತ ಇತ್ತು...

ತಮ್ಮ ಗುಡ್ಲು ಇನ್ನೇನು ಸಿಕ್ತು ಅನ್ನೊವಾಗ, ಅವದ ವಳಾಗಡೆ ಎದ್ದ ಗುಲ್ಲು ಆ ಗುಡ್ಲ ನೆರಿಕೆ ವಳುಗೆಲ್ಲ ಬಡಿದಾಡಿ ತಡಕಾಡಿ ವೋರಗಡೀಗೂ ಮೊಖ ಆಕಿ ಲಕ್ಕನ ಕಿವಗಳ್ನೂವೆ ತಟ್ಟಿ, ಅವನ ಕಾಲ್ಗೆ ಗೂಟ ವೊಡುದು ನಿಲ್ಲುಸ್ತು:

"ಯಾಕಮ್ಮಿ ವೋಟೋತ್ನಿಂದ ಬಾಯಿಬಿಚ್ಚದೆ ಲಿಪಿ ಕುಂತಂಗೆ ಕುಂತಿದ್ದೀ?"

ಈ ಗರ್ಜನೆ ಅಯ್ಯಂದೇಯ!... ಅಯ್ಯ, ಒಂದೊಂದು ದಪ ಊಂಕರಿಸದ್ರೆ ಆನೆ ಅಂತದು ಲದ್ದಿ ಆಕಾಬೇಕು!... ಆದ್ರೆ ಅಯ್ಯಂಗೆ ಕ್ವಾಪ ಹತ್ತಾದೆ ಅಪುರ್ಪ.

ಹಾಳು ಕುಡ್ತ ಪಾಟ ಅದೇನಿಂದ ಮಂಕಾಗೇ ಇರಾದು.

"ಅಸ್ಸಿ ಜಟಜಟ್ನೆ ಅದ್ಯಾನಿದ್ರುವೆ ಕ್ವಸರಾಡ್ದೆ ಯೋಳಿಬುಡು. ಮೂಗು ದೆವ್ವದಂಗೆ ಅದ್ಯಾವ ಚೆಂದಾಕೆ ಅತ್ತೀಯೆ?..."

ಅಯ್ಯನ ಬಾಣ ಬಿರುಸ್ಗೆ ಯಾರೊ ಅತ್ತಂಗೆ ಅಗ್ನಿಲ್ವ?... ಲಕ್ಕಂಗೆ ಯಾಕೆ ಅನುಮನಸು–ವಳುಗೆ ಕಾತುರಿಕೆ. ಒಂದು ಕಿವ್ಯ ಪೂರ್ತಾ ಆತ್ತಾಗಿ ತಿರುಗಿಸ್ದ–ಮಾತು ಇನ್ನೂ ವಳುಕ್ಕೆ ತಕ್ಕಳಕ್ಕೆ!...

ಎಂಗಸಿನ ಕೊರಳಂಗೇ ಅದೆ!... ಅವಂಗೂ ಪರಿಚಯ ಇರಾ ಕೊರಳೇಯ!... ಅವ್ವನ ಕೊರಳಂತೂ ಅಲ್ಲ... ಎಂಗಸಿನ ಕರುಳು ಜೋರು ಜೋರ್ನಿಂದ ಕಿತ್ತುಗಂಡಂಗೆ ವೊಂಡತಿತ್ತು–ಎಲ್ಲಾ, ಇದು ನಂಜನಗೂಡು ಸೀಮ್ಗೆ ಕ್ವಟ್ಟಿರಾ ನನ್ನ ತಂಗಿ ಸಿವುನಿ ಅಲ್ವ?... ಮತ್ತೇನಪ್ಪ ವಕ್ರಸ್ತು?

ಮಳೆ ಸುರೀತಿರೊ ವೊತ್ನಲ್ಲಿ ಬಿಸಿಲು ನುಸಿದಂತೆ ಸಿವುನಿ ಅಳ್ತಾಅಳ್ತಾನೆ ಮಾತ ಕಡೆಸಿದ್ದಲು:

"ನಂಗೂವೆ ತಡುದೂ ತಡುದೂ ಸಾಕಾಯ್ತು... ಅವಯ್ಯ ತನ್ನಾಟ ಬುಡನಿಲ್ಲ–ವಯಸಾದ ಎಣ್ಣುಗಳೇನೊ ವೋಗ್ಲಿ ಅಂದ್ರೆ, ಇನ್ನೂವಿ ವಯಸಿಗೆ ಬರದಿರಾ ಎಣ್ಣುಗಳ ಲಂಗದ ಮ್ಯಾಲೂ ಅವಯ್ನ ಕಣ್ಣು ಓಡಡುದ ಕಂಡು ನಂಗೆ ಸೈಸನಿಲ್ಲ..."

ಕೂಸು ಅಳಕ್ಕೆ ಮುಟ್ಟುಗಂಡು ಸಿವುನಿ ಮಾತು, ವೊಸ್ಟಕ್ಕೆ ಸೊರಸೊರಗುಟ್ಟ ನಿಂತಿತು. ಆಲಾ ಕೂಸ್ಗೆ ಎದೆ ಕಚ್ಚುಸ್ತಿರಬೈದು, ಅಂದುಕತ್ತಿದ್ದ ಲಕ್ಕ.

ಕೂಸಿನ ಅಳ ನಿಂತು, ಸಿವುನಿಯ ಮಾತು ವಳುಗೇಯ ಸೊರಸೊರಗುಟ್ಟ ಇರೂವಾಗ, ಅವ್ವ–

"ಹಯ್ಯೊ, ತೆಗಿ ತೆಗಿ. ಈ ಹಾಳು ಗಂಡಸಿನ ಜಾತ್ಯ ಅಣಾಬರಾವೆ ಅಸ್ಟುಕನ" ಅಂತ ತತ್ವಯೋಳೋಳಂಗೆ ಅದು "ಯೇನ ಮಾಡಾದು–ಬ್ರಮ್ಮಗಂಟು ಬಿದ್ದ ಮ್ಯಾಲೆ ಯಲ್ಲಾನೂವೆ ಸೈಸಕನೆಬೇಕು... ಈಗ ನಿಮ್ಮಯ್ಯ ದುಡಿಯಾ ದುಡ್ನೆಲ್ಲ ಆ ರಾಚನ ಎಂಡದ ಬುಂಡೆಗೆ ಸುರುದು ಇಲ್ಲಿ ಬಂದು ನನ್ನ ಮ್ಯಾಲೆ ಮಾಡಾದಿಲ್ವ ವಾಂತ್ಯ?"

ಲೇ ಲೇ ಲೇ ಲೇ, ಅಂತ ಅಯ್ಯ ಗುರುಕಾಯಿಸ್ತಾನೇ ಇದ್ದ.

ಅವ್ವ ಗಂಟ್ಲ ದಪ್ಪ ಮಾಡಿ–

"ನೀ ಯಾಕೆ ಇಂಗೆ ಅರಚಾಡಿ?– ಮೊದ್ಲೆ ಉಸಾರು ತೆಪ್ಪದೆ. ಗಮ್ಮನೋಗಿ ಮನಕ್ಕೊ" ಅಂದೋಳು, "ನಿಂಗೊಸಿ ಗಂಜೀನಾರ ಕಾಯಿಸವ ಅಂದ್ರೆ, ವಳೂಗೆ

ಮೂರು ಅಕ್ಕಿಕಾಳೂ ಇಲ್ವಲ್ಲ!..." ಕರುಳು ಕಿವುಚಿದಂಗೆ ಅಂದು, "ನಮ್ಮ ಲಕ್ಕ ಅದೇಟೊತ್ತಿಗೆ ಬತ್ತಾನೊ ಯಾನೊ.... ಅವ್ನು ಯಾನಾರ ತಂದ್ರೆ, ಇವತ್ತು ನಾವು ವಂದೀಟು ಉಣ್ಣಾವರು. ಅವ್ನು ತರ್ನಿಲ್ಲ–ವೊಟ್ಟೆಗೆ ವದ್ದೆ ಪಾವುಡೆ ಇಕ್ಕಂಡು ಉಪಾಸ ಬಿದ್ದು ನಾವೆಲ್ಲ ಸಾಯಾದೆ!..."– ತನ್ನೊಟ್ಟಿಗೆ ತಾನು ಯಾಳಿಕಂಡು, "ಊ. ಆಮ್ಯಾಕೆ?" ಅಂತ ತಾಕೀತು ಮಾಡಾಳಂಗೆ ಮಗಳ ಕ್ಯಾಳಿದಳು–ಸಿವುನಿ ತಡುದಿದ್ದ ಮಾತ ಪುನಾ ಉಳ್ಳಿಸಿದ್ಲು.

"ಅದ್ನೂ ನಾ ಸೈಸಿಕಂಡಿ ಕನವ್ವ... ಕುಡಿಯಾದು, ಅಲ್ಲಿ ಬಂದು ದನ ಬಡಿದಂಗೆ ನನ್ನ ಬಡಿಯಾದು–ಅದ್ನೂ ನಾ ಸೈಸಿಕಂಡಿ. ಆದ್ರೆ ಆ ಮಿಂಡಗಾತಿ ಕಯ್ಯಿಗೆ ನಮ್ಮಟ್ಟಿ ವಗುತನಯಲ್ಲಾನೂವಿ ಕ್ವಟ್ಟು ನನ್ನ ಅವಳ ಜೀತಗಾತಿ ಮಾಡಕ್ಕೆ ಯತ್ನ ಮಾಡ್ದಾಗ ಮಾತ್ರ, ನನ್ನ ಆತುಮಕೆ ವಗ್ಗನಿಲ್ಲ– ಅಲ್ಲಿಂದ ಕಡದು ಬಂದಿ..."

ತಂಗೆಮ್ನ ಮಾತುಗಳ ಆತುಗತ್ತ ಆತುಗತ್ತ ಲಕ್ಕ ಗುಡ್ಲು ಬಾಗಿಲ್ಗೆ ಅಡ್ಡಾಡಿ ಬಂದು ನಿಂತ. ಬಿಸುಲ್ನ ಜಳದಿಂದ ಬಂದು ನಿಂತೋನ್ಗೆ, ಕತ್ತಲು ಎಪ್ಪೆಪ್ಪಾಗಿ ವಳುಗ್ನಿಂದ ಎದ್ದು ಬಂದು ಕಣ್ಣಿಗೆ ಮೆತ್ತಿಗತ್ತು. ಗುಡ್ಲು ವಳುಚೂರಿ ಕುಂತೋರು ಯಾರೂವೆ ಅವಂಗೆ ಕಾಣಿಸನೇ ಇಲ್ಲ. ಒಂದು ದಪ ಅಂತೂ ಕತ್ತಲು ಕಯ್ಯಿಟ್ಟು ಹಿಂದ್ಕೇ ದಬ್ಬಿದಂಗಾಯ್ತು...

"ಓ–ಲಕ್ಕಣ್ಣ!..." ಸಿವುನಿ ಬೇರುದ್ದು.

ಮಗನ ಹೆಸರು ಕರ್ನದೊಳಗೆ ಇಳೀತಿರೋನೂವೆ ಕಲ್ಯಾಣಮ್ಮನ ಮೈಯ್ಯ ಎಲೆಬಿಸಲು ತಬ್ಬಿದ ಹಂಗೆ ಬೆಚ್ಚಗೆ ಮಾಡ್ತು.

"ಬಂದ್ಯಾ–ಮೊಗ?" ಅಂತ ಸೊರದಲ್ಲೆ ತನ್ನ ಮಗನ ಬಾಜಿ ಮುದ್ದಾಡಿದ್ದಲು. ಆಮ್ಯಾಲೆ, "ಇದ್ಯಾಕೆ ಪ್ವರಚ್ಚಿಗೆ ನಿಂತೆ? ಬಾ ವಳೀಕೆ... ಇಲ್ನೋಡಿದ್ಯಾ– ನಿನ್ನ ತಂಗೆಮ್ಮ ಕೂಸು ತತ್ತುಗಂಡು ನಂಜನಗೂಡ್ನಿಂದ ನಮ್ಮ ಗುಡ್ಲಾಗೆ ಇರಕ್ಕೆ ಬಂದವ್ಳೆ. ಇವಳ ಗಂಡ ಆದ್ಯವಳೋ ತಲೆಮಾಸಿದೋಲ ಕಟ್ಟಿಗಂಡು, ಇವಳ್ನ ಅಲ್ಲಿಂದ ಗಡೀಪಾರು ಮಾಡವ್ನೆ... "–ಚುಟುಕದಲ್ಲಿ ತನ್ನ ಮಗಳ ಬದುಕು ಹೈರಾಣಾದ ಕತೆಯ ಯೋಳಿ ಮುಗಿಸಿದ್ಲು.

ಲಕ್ಕ ನ್ವಾಡ್ತಿದ್ದಂಗೆ, ಅವನ ದ್ರುಸ್ಟೀಯ ಮುಚ್ಚಗಮಡಿದ್ದ ಕಾವಳ ವಸಿವಸ್ಯಾಗಿ ಹಾದಿ ಕ್ವಟ್ಟು, ಮೊಗೀಗೆ ಮೊಲೆ ಉಣ್ಣಿಸ್ತಿದ್ದ ಸಿವುನಿ; ಒಂದು ಕಾಲ ನೀಡಿ ಕೊಕ್ಕರಿಸ್ಥ ಇನ್ನೊಂದು ಕಾಲ್ಮ್ಯಾಲೆ ಮೊಣಕಯ್ಯೂರಿ, ಮೊಡಚಿದ ಹಸ್ತಕ್ಕೆ ಕೆನ್ನೆ ಆಂತು ಸಿವುನಿ ವತ್ತಿಗೇ ಕುಂತ ಅವ್ವ; ಅಸ್ಪೊತ್ತಿಗಂಟ ಮುದಿ ಹುಲಿಯಂಗೆ ಅರಚಾಡ್ತಿದ್ದೋನು ಗುಡ್ಲ ಒಂದು ಮೂಲೆ ಸೇರಿ, ಕರಿಕಂಬಳಿ ವೊದ್ದ ಕುಂತಿರೋ

ಅಯ್ಯ–ಯೆಲ್ಲಾರೂವೆ ಚಿತ್ತಾರದ ಗೊಂಬೆಗಳಂಗೆ ಮೂಡಿದ್ರ...

ಲಕ್ಕ ತಂಗ್ಯಮ್ಮನ ನ್ವಾಡಿದ. ಸಿವುನಿ ಅಣ್ಣನ ನ್ವಾಡಿದ್ಲು. ಈ ಕಣ್ಣು ಆ ಕಣ್ಣಲ್ಲಿ ನೀರ ಕಚ್ಚುಸ್ತು. ಲಕ್ಕ ಸಾವುರ್ಸಿ,

"ಅವ್ವ, ಸಾಸ್ತ್ರಿಗಳ ಅಟ್ಟಿ ನೆಂಟರ ಬುಟ್ಟು ಬತ್ತಾ ಇರ್ವಾಗ, ನಾ ನಂಬೇ ಇರ್ಲಿಲ್ಲ. ಆ ಜೇನಿ ಜಿಪುಣಮ್ಮ ರುಕ್ಮಿಣವ್ವಾರ ಅಣ್ಣನ ಎಡತಿ–ನ್ವಾಡು, ನಾಕು ಬಳ್ಳರಾಗಿ, ಏಡು ತೆಂಗಿನಕಾಯಿ ಕ್ವಟ್ಟು, ನನ್ನ ಕಯ್ಯಾಗು ಒಂದು ರೂಪಾಯಿ ಮಡಗಿದರು" ಎಂದು ಬೆನ್ನ ಮ್ಯಾಲೆ ಹ್ವತ್ತಿದ್ದ ಹಸಿಬೆ ಚೀಲವ ಅವಳ ಮುಂದ್ಕೆ ಇರಿಸಿದ. ಮೊಖದಲ್ಲಿ ಸಂತೋಸವ ನಲದಾಡುಸ್ತ ಅವ್ವ–

"ನ್ವಾಡೊ ಲಕ್ಕ, ನೀ ಕೂಲಿ ಕಂಬಳಕೆ ವೋಗೊ ಅಟ್ಟಿಗಳಿಗೆಲ್ಲ, ಆ ರುಕ್ಮಿಣವ್ವನಟ್ಟಿ, ಬುಂಡಮ್ಮಾರ ಅಟ್ಟಿಯೋರೇಯ ವಸಿ ಕಯ್ಯಿ ಬಿಚ್ಚಿ ಕಂಬಳ ಕ್ವಡೋರು. ಅವೇಡು ಅಚ್ಚೀನು ತಂಪೋತ್ನಲ್ಲಿ ನೆನೀಬೇಕು" ಅಂತ ಇರ್ವಾಗ, ಮಾಯದ ನಿದ್ದೆ ಕಣ್ಣ ಮುಚ್ಚಿದ್ದ ಕೂಸ ಅವ್ವನ ಕಯ್ಯಿಗಿಡ್ತ ಸಿವುನಿ,

"ಇದ್ನ ಅಂಗ ಮನಗಿಸವ್ವ. ನಾನು ವೋಟರಲ್ಲಿ ರಾಗಿ ಬೀಸಿ ಲಡಿಮಾಡ್ತೀನಿ" ಅಂದ ಸಡಗಾರ ಮಾಡ್ತ ದುಡುದುಡು ಯೆದ್ದೋದ್ದಲು.

ಲಕ್ಕ ಅವ್ವನ ವತ್ತಿಗೆ ಬಂದು ಕುಂತ. ಅವ್ವನ ತೊಡೆ ಮ್ಯಾಗ್ನಿಂದ ಮೊಗಾವ ಜ್ವಾಪಾನಾಗಿ ತನ್ನ ತೊಡೆ ಮ್ಯಾಕ್ಕೆ ವರ್ಗಾಯಿಸಿ, ಅದರ ಮೊಖದ ಮ್ಯಾಲೆಲ್ಲ ಕಣ್ಣಾಡಿಸಿ, ಅದರ ತುಟಿ ಮುಟ್ಟಕ್ಕೆ ಇಂಜರೀತ ಇಂಜರೀತ ತನ ಕಯ್ಯಿ ಬೆಳ್ಳ ತಕ್ಕಂಡೋಗುತ ಇದ್ದಾಗ–

"ಇದ್ಯಾಕಪ್ಪು, ತೆಗಿ ಕಯ್ಯ... ಮೊಗ ಅರೆನಿದ್ದೇಲಿ ಯೆದ್ದು ಚಂಡಿ ತೆಗುದ್ರೆ ಆಮ್ಯಾಕೆ ಸಿವುನಿ ಆ ರಚ್ಚೆ ತೀರುಸಕ್ಕೆ ರಾಗಿ ಬೀಸೋದ್ನೂ ಅರ್ದಕೇ ಬುಟ್ಟು ಬಟ್ಟಾಡಬೇಕಾಯ್ತದೆ!..."

ಅಂದ ಕಲ್ಯಾಣಿ–ಮೊಗಾವ ಮನಗಿಸಕ್ಕೆ ಈಚಲು ಚಾಪೆ, ಆ ಚಾಪೆ ಮ್ಯಾಲೆ ಕಂಬಳಿ, ಆ ಕಮಬಳಿ ಮ್ಯಾಲೆ ಒಂದು ಹಳೆ ಸ್ಯಾಲೆ ತುಂಡು, ಹಿಂಗೆ ಅಣಿ ಮಾಡುತ್ತ,

"ನೀನೂ ಒಬ್ಬಳ ಬ್ಯಾಗ ಬ್ಯಾಗ ಕಟ್ಕೊ. ಇಂಗೆ ಚೆಂದೂಳ್ಳಿ ಮೊಗಾವ ತತ್ತಿಗಂಡು. ಹವಳದ ಕುಡಿಯಂಗಿರೋ ಅದರ ತುಟಿಗೆ ಮುತ್ತಿಕ್ಕಬ್ಯೆದು!" ಎಂದು ಗೇಲಿ ಮಾಡುತ್ತ ನಕ್ಕು, ತಯಾರಿಸಿದ ಮೆತ್ತೆ ಮ್ಯಾಲೆ ಕೂಸನ ಮನಗಿಸೊ ವ್ಯಾಳ್ಯದಲ್ಲಿ, ಸಿವುನಿ ರಾಗಿ ಕಲ್ಲಿನ ಗರ್‌ಗರ್‌ರ್‌ಗರ್ ಸದ್ದೆ ತನ್ನ ಕೊರಳಿನ ಹಾಡನೂ ಸೇರುಸಿ, ಮಕ್ಕಳೆ ಯಾಕೆ, ದೊಡ್ಡೋರಿಗೂ ನಿದ್ದೆ ಅತ್ತೋವಂಗೆ

ಮಾಡುತ್ತ ಇದ್ಲು.

ಅಂಗಾಡಿ ಇಂಗಾಡಿ, ಆ ಮಾತು ಈ ಮಾತ್ನಲ್ಲಿ ಸಂಜೆಗಪ್ಪು ಗುಡ್ಲುಮ್ಯಾಲೆಲ್ಲ ಕವೀತು.

"ಸೊಡ್ಲುಯೆಲ್ಲಿಟ್ಟೀದಿಯೋಳವ್ವ. ದೀವಿಗೆ ಕತ್ತಿಸ್ತೀನಿ" ಅಂತ ಸಿವುನಿ ಅಂದಾಗ ಹಣೆ ಚೆಚ್ಚಿಗೊತ್ತ,

"ಹಯ್ಯೊ, ಬರಿ ಸೊಡ್ಲ ಕಟ್ಟಿಗಂಡು ಯೇನ ಮಾಡಾದು! ಎಣ್ಣೆಲ್ದೆ ಮೊನ್ನೆ ನಾತಿಂದ್ರ ನಾನೂವೆ ಚೋಪಾರು ಅತ್ತದ್ದೆ ಅತ್ತದ್ದು. ಯಾರ್ಯ್ಯಾರ ಅಟ್ಟಿಗೊ ವೋಗಿ ಗ್ವಾಗರ್ದೆ. ಯಾತಾವೂ ದ್ವರೀನಿಲ್ಲ" ಅಂತ ಕಲ್ಯಾಣಮ್ಮ ಉಸುರು ಬುಟ್ಲು.

ಅವ್ವ ಇಂಗೆ ಯೇಳುತ್ತಲೆ, ಲಕ್ಕ ದಿಗ್ಗನೆದ್ದು,

"ಇದ್ಯಾಕವ್ವ ಬಟ್ವಾಡಿಯೇ? —ಎಂಗೂ ನನ್ನತ್ರ ಒಂದು ರೂಪಾಯಿ ಇಲ್ವ?...ಅಮ್ಮದ್ ಕಾಕನ ಅಂಗಡೀಲಿ ಸೀಮೆಎಣ್ಣೆ ಬುಡಿಸಿ ತತ್ತೀನಂತೆ. ಆ ಖಾಲಿ ಸೀಸೆ ಕ್ವಡು" ಅಂದು ಈಸಿಕೊಂಡು ಎಣ್ಣೆ ತರಕ್ಕೆ ತೆರಳ್ದ.

ಸಿವುನಿ ಉರೀತಿದ್ದ ಒಲೆಗೆ ಮತ್ತೆ ನಾಕೈದು ಸೀಳು ಸೌದೆ ಒಟ್ಟಿ, ಉರುಬಿ, ದೊಡ್ಡುರಿ ಮಾಡಿದ್ಲು. ಅನಂತ್ರ ಉರಿಯೊ ಕೊಳ್ಳಿಗಳ ಒಲೆ ಈಚೆ ಹಿರದು, ಕೆಲವು ಸೀಳು ಮೊರಗಡೆಗೂ ಉರಿಯುವಂಗೆ ಮಾಡಿದ್ಲು. ಆ ಬೆಳಕು ಗುಡಿಸಿಲ್ನವಳಗೆ ಸೊಲ್ಪ ಭಾಗದಿಂದ ಕತ್ತಲು ಫೇರಿ ಕೀಳೊವಂಗೆ ಮಾಡಿತ್ತು. ಕುದಿಯೊ ನೀರಿಗೆ ರಾಗಿ ಹಸಿಟ್ಟಾಕಿ ತಿರುವಿ, ಅದು ಹದವಾಗಿ ಬೆಂದ ಬಳಿಕ, ಹಿಟ್ಟಿನ ಮಡಕೆಯ ಒಲೆ ಮ್ಯಾಲಿಂದ ಕೆಳಕ್ಕಿಳಿಕಿ, ಕಾಲ್ನಿಂದ ವದೆ ಕ್ವಟ್ಟ, ಅಡಕೆ ದಬ್ಬಿಂದ ಹಿಟ್ಟು ಜಡೀತ ಇದ್ದಂಗೆ, ಲಕ್ಕ ಕಾಕನ ಅಂಗಡಿಂದ ಸೀಮೆಯೆಣ್ಣೆ ಬುಡಸಿ ತಂದು ತಗಡಿನ ಸೀಮೆಎಣ್ಣೆ ಬುಡ್ಡಿ ಹೊತ್ತಸ್ದ. ಸಿವುನಿ ರಾಗಿಮುದ್ದೆಗಳ ಕಟ್ಟಿಟ್ಟು, ಒಲೆ ಮ್ಯಾಲೆ ಇನ್ನೊಂದು ಮಡಕೇಲಿ ನೀರಿಟ್ಟು, ರಾಗಿ ಅಂಬಲಿ ಕಾಯಿಸಿ, ಹೋಗ್ನಲ್ಲಿ ಹುರುಳಿ ಎಸರ್ನೂ ತಯಾರ್ಸಿ,

"ಅವ್ವ, ಇಟ್ಟು ಆಗದೆ. ಅಯ್ನ ಇಬ್ಬರಿಸಿಗಂಬಾ. ಅವರಿಗೆ ರಾಗಿ ಅಂಬಲೀನೂ ಲಡಿಮಾಡಿವ್ನಿ" ಅಂದ್ಲು.

ಎಲ್ಲಾರೂವ ಒಲೆ ಮುಂದ್ಕೆ ಬಂದು ಉಣ್ಣಕ್ಕೆ ಕುಂತರು. ನಿಂಗಯ್ಯನೂ ಸೀಟಾಡ್ತ ಸೀಟಾಡ್ತ ಬಂದು ಕುಂತ. ಎಲ್ಲಾರ ತಣಿಗೆಗೂವೆ ಕಟ್ಟಿದ ಮುದ್ದೆ ಇಕ್ಕಿ, ಹುರುಳಿ 'ಉದಕ' ಬುಟ್ಟಳು. ಬಳಿಕ ಬೆಂದ ಹುರುಳಿ ಕಾಳನೂವೆ ಎಲ್ಲಾರ ತಣಿಗ್ಗೂ ಇಟ್ಟು, ತನ್ನ ತಣಗ್ಗೆ ಮಗಳು ಅಂಬಲಿ ಸುರಿಯಕ್ಕೆ ಬಂದಾಗ,

"ಯಾಕಮ್ಮಿ, ನಂಗೇನಾಗದೆ ಅಂತ ರಾಗಿ ಅಂಬಲಿ ನೀಡುತ್ತಿದ್ದೀ?... ತತ್ತ

ಮುದ್ಯ. ನಂಗ್ಯಾವ ರ್‍ವಾಗವೂ ಇಲ್ಲಕನ. ಇರಾ ರ್‍ವಾಗವೆಲ್ಲ ವೊಟ್ಟೆಗಿಲ್ದೆ ಇರೋದ್ಕೇಯ" ಅಂದು ವೊಟ್ಟೆ ಬಡಿದ. ಕಲ್ಯಾಣಿ ತನ್ನ ಕೆಂಪು ಹರಳಿನ ಮೂಗುನತ್ತ ಬಲಗೈಯಿಂದ ತಿರುವ್ತ.

"ಊ ಊ,. ಸಾಜ. ಸಾಜ ಈವಯ್ಯಗೆ ವೊಟ್ಟೆಗಿಲ್ದೆ ಇರೋದೆ ಕಾಯ್ಲೆ ಅನ್ನೂದ ನಾನೂವೆ ವಪ್ಪುತೀನಿ... ಅಲ್ಲ ಕನೆ ಸಿವುನಿ, ಬದ್ರಾಗಿ ಕೇಮಿ ಮಾಡುದ್ರೆ ತಾನೆ ವೊಟ್ಟೆ ತುಂಬಾದು?... ನಿಮ್ಮಯ್ಯ ಅನ್ನಸಿಗಂಡ ಈ ಗ್ರಾಸ್ತ ಇತ್ತಿತ್ತಾಗಿ ಗ್ಯಾನ ಬಂದ ಗಿರಾಕಿಯಾಗವ್ನೆ. ಮನಸಿಗೆ ಬಂತಾ, ಗೇಯಕ್ಕೆ ವೊಂಟ. ತೆವಲು ತಿರುಗ್ತ ತಾನು ಗೇದ ದುಡ್ಡು ವಕ್ಕಡೀಕಿರ್‍ಲಿ, ನನ್ನತ್ರ ಇದ್ದ ಬದ್ದ ದುಡ್ಡನೂವೆ ವೊಡದೂ ಬಡದು ಕಿತ್ತುಗಂಡೋಗಿ ರಾಚನ ಆ ಹಾಲು ಎಂಡಕೆ ಸುರಿಯಾದು. ಇಂಗಾಡಿದ್ರೆ, ವೊಟ್ಟೆ ತುಂಬು ಅಂದ್ರೆ ಯಾ ತಾವುಣಿಂದ ತುಂಬಾತು?" ಆಪಾದಿಸಿದ್ಲು. ನಿಂಗಯ್ಯ ತಣಿಗೆ ಅಲ್ಲಾಡಿಸತ.

"ಇವಳು ಮಾತು ಒಂದು ಮಂತ್ರ ಅಂತ ಕ್ಯಾಳಿಕಂಡು ಕುಂತುಗವ್ವ, ನೇರ್ಪಾಯ್ದದೆ!... ವೊದ್ಲೆ ಕ್ವಾಳಿಲ್ವ ಗಾದ್ಯ–ಕುಟುಗಲು ಮಳೆ ಬ್ಯಾಡ, ಲೋಟಗಾಲೆ ಎಡತಿ ಬ್ಯಾಡ, ಅಂತಾವ?... ತತ್ತ, ತತ್ತ" ಅಂತ ಆತುರಿಸ್ದ.

"ಇದು ಸರಿಕನವ್ವ. ನಂಗೇ ತಿರುಗಿಸಿಬುಟ್ನಲ್ಲ ಗಾದ್ಯ!.... ಅದು ಇರಾದು– ಕುಟುಗಲು ಮಳೆ ಬ್ಯಾಡ, ಲೊಟಗಾಲೆ ಗಂಡ ಬ್ಯಾಡ, ಅಂತಾವ" ಕಲ್ಯಾಣಿ ಜಯಬೇರಿ ವೋಡೀತಾ ನುಡಿದ್ಲು. ಆಗ ನಿಂಗಯ್ಯ.

"ಈಗ್ಯಾರು ಲೋಟಗಾಲೆ ವೊಡೀತಿರಾದು? –ಸುಮ್ಕೆ ಉಣ್ಣು" ಅನ್ತಾ ಇರೋವಾಗ ಕೋಳ್ಳಿಯ ಉರಿ ಆಡಿದಂಗೆ, ಒಂದು ದಪ ಕತ್ತಲಲ್ಲಿ ಬಾಡಿ, ಇನ್ನೊಂದು ದಪ ಬೆಳಕ್ನಲ್ಲಿ ಮೂಡ್ತಿದ್ದ ತನ್ನ ಅಯ್ಯನ ಮೊಕವ ಲಕ್ಕ ತನ್ನ ಕಣ್ಣಲ್ಲಿ ತುಂಬಿಕೊತ್ತ ನ್ವಾಡಿದ. ಎಲ್ಲರೂ ಉಂಡು ಎದ್ದಾಗ ಬೊಡ್ಡಂಗೂ ಅರ್ಧ ಮುದ್ದೆ ದಕ್ಕಿತ್ತು.

*           *           *           *

ಮನಗಿದಾಗ ಲಕ್ಕ ಆ ಕಡಿಂದ ಈ ಕಡೀಕೆ ವೊಳ್ಳಾಡುತಲೆ ಇದ್ದ. ಹಿಂದೊದ ದಿನಗಳ ಗ್ಯಾಪಕ ಅವನ್ನ ಗಾಳ ಅಕಿ ಎಳೀತಿತ್ತು... ಎಂಗಿದ್ದ ಆಳು ಅಯ್ಯ, ಎಂಗಾಗಿಬುಟ್ಟವ್ನೆ?– ಇತ್ತಿತ್ತಾಗಿ ಹಿಂದುಕಿದ್ದ ಕ್ವಾಪವೂ ಕಾಣುಸ್ತಿಲ್ಲ!... ಹಿಂದ್ಕೆ, ಅಯ್ಯನ ಕ್ವಾಪಕ್ಕೆ ಮೊಖ ಕೊಟ್ಟು ನಿಂತೋರೆ ಕಮ್ಮಿ. ಆದರೆ ಆ ಕ್ವಾಪ ಆ ಕ್ಷಣಕ್ಕೆ ಉಗ್ರ ನರಸಿಂಹ ಆದರೂವೆ, ಬಾಳ ಸಮಯ ಉರಿದಾಡೊ ತರದ್ದಲ್ಲ. ಇಂಗೆ ಬಂದು ಅಂಗೆ ವೊಂಟೋಗೋದು... ಒಂದು ದಪ ಅಯ್ಯ ಕುಡುದು

ಬಂದುಬುಟ್ಟವನೆ. ಗುಡ್ಲು ವಳೀಕೆ ಬಂದೋನೆ ಬಂದ. ತಣಿಗೆ ಮಡಿಕ್ಕಂಡು ಕುಂತ. 'ಕಲ್ಯಾಣಿ' ಅಂತ ಗರ್ಜುಸ್ದ. ಕಾದು ಕಾದು ಸುಸ್ತಾಗಿ ವಕ್ಕಡೆ ಮೂಲೆಗೆ ಬಿದ್ದಿದ್ದ ಅವ್ವ, ಮಯ್ಯ ಮುರುದು ಯೇಳ್ತ.

"ರೋಜಿನ ಇದೇ ಕೊಳೆ ಪಂಚಾತಿ ಆಗೋಯ್ತು. ಒಂಜಿನ ಆದ್ರೂವೆ ಗ್ರಾಸ್ತರಂಗೆ ಬಂದು ವೊತ್ತಿಗೆ ಮುಂಚೆ ಉಂಡು ಮನಗಾನ ಅನ್ನಾ ಬುದ್ಯ ಕ್ವಡ್ನೇ ಇಲ್ವಲ್ಲ ಆ ದ್ಯಾವರು?" ಅಂದುಕೊತ್ತ ಬಂದು ಇಟ್ಟಿನ ಮುದ್ದ ಅಯ್ಯನ ತಣಿಗೆಗೆ ನೀಡಿದಳು. ಲಕ್ಕನೂ ಅಯ್ಯನ ಎದರಾಬದುರು ಉಣ್ಣಕ್ಕೆ ಕುಂತಿದ್ದ. ಅವ್ವನ ಮಾತು ಹಸಿಗಂಡು ಬಂದಿದ್ದ ಅಯ್ಯನ ಕಚ್ಚಿದಂಗಾಗಿ ಕ್ಯಾಣ ಇಸ ಏರಿದಂಗೆ ಅವನ ಮೊಖದಲ್ಲಿ ಮುಕ್ಕಳುಸ್ತು.

"ಉದಕ ಯಾತರದ?–ಬಾಡಿನ ಎಸರ?" ಕ್ಯಾಳಿದ ಅಯ್ಯ.

"ಊ, ಬಾಡಿನೆಸರ ರೋಜಿನ ಮಾಡಕ್ಕೆ ನೀನು ತಂದು ಮಡಗಿದ್ದೀಯಲ್ಲ ಗೆಪ್ಯ?... ಸಮ್ಕೆ ಉಣ್ಣು. ವಳುಗಿಲ್ಲ ಮಗಳ ದೊಗದಿಕ್ಕು ಅಂದ್ರೆ, ನಾ ಇನ್ಯಾವ ಬೂಮಂಡಲದಿಂದ ತಂದು ವದುಗಿಸ್ಲಿ? ಅನ್ತಾ ಅನ್ತಾ ಉಪ್ಪು ಸಾರ ತಂದು ನೀಡಿದ್ಲು.

ಇಟ್ಟಿನ ಮುದ್ದೆ ಮ್ಯಾಲೆ ಕಯ್ಯಾಡಿಸ್ತಿದ್ದ ಅಯ್ಯ, ಉಪ್ಪು ಸಾರ ಮರದ ಸೊಟಗದಿಂದ ಬುಡುವಾಗ ಬಕ್ಕಂಡಿದ್ದ ಅವ್ವನ ಕೆನ್ನೆಗೆ ಚಟ್ಟನೆ ಅಯ್ದು ಬೆಳ್ಳೂ ಮೂಡೊ ತರ ಬಡ್ದ.

"ಕೆಟ್ಟೆನೆಲ್ಲಪ್ಪೊ" – ಚಿರಿ, ಕುಕ್ಕನೆ ಕುಂತು, ಅವ್ವ ಎದೆ ಎದೆ ಬಡುಕುತ್ತ, "ನಾ ನಿನ್ನೆದುರ್ಗೆ ಇರೆ ತಾನೆ ನಿಂಗೆ ಕ್ಯಾಣಸರ. ನಾ ಕಣ್ಮುಚ್ಚಿಗಂಡ್ರೆ, ಆಗೇನ ಮಾಡೀ?... ಆಗ ನಿನ್ನ ಕ್ಯಾಣ ಒಂದೆ ಕುಂತು ಈ ಗುಡ್ಲು ನೆರಿಕೆ ಪಸೀಬೇಕು, ವೋಟೇಯ" ಅಂದೋಳೆ, ಜಟ್ಟನೆದ್ದು ಗುಡ್ಲು ಮಂಚೂರಿ ತಡಿಕೆ ಕದಾವ ತಳ್ಳಿ, ಕೆರೆ ದಿಕ್ಕ ನಡೀತಿದ್ಲು.

ತಾನೆದ್ದು ಮುಲುಕಾಡೊ ವೋಟ್ರಲ್ಲಿ, ಅಯ್ಯ ದಡ್ಡನೆದ್ದ–

"ನಿಂತುಗಣೆ... ಕಲ್ಯಾಣಿ–ನಿಂತುಗಣೆ..." ಕೂಗ್ತ, ಅವ್ವನ ಇಂದಿಂದೆ ಓಡ್ದ. ತಾನು ಗುಡ್ಲು ಮುಂದಕೆ ಬಂದು ನಿಂತೋನು, ತಾನು ಅವರ ಹಿಂದೆ ವೋಗೋದೊ ಬ್ಯಾಡದೊ ಚಿಂತಿಸ್ತಾ ಇರೋನೂವೆ–

ಕೆರೆ ಓಣಿ ತಲೆಕೊಟ್ನಲ್ಲೆ ಅವನ್ನ ಇಡುದು ನಿಲ್ಲುಸಿ, ದಮ್ಮಯ್ಯ ಅಂದು, ದತ್ತಯ್ಯ ಅಂದು, ನಾ ಇನ್ನು ಕ್ವಾಪ ಮಾಡಿಕಂಡ್ರೆ ನಿನ್ನ ಅಳೆ ಪಾಪಾಸ ತಕ್ಕಂಡು ಹ್ವಡಿ– ಅಂತ ಬೆಣ್ಣೆ ಮಾತಾಡಿ, ಅಯ್ಯ ಅವ್ವನ್ನ ಇಂದ್ಕೆ ಕರಕೊಂಬಂದಿದ್ದ.

ಗುಡ್ಲು ವಳೀಕೆ ಏಡೂ ಆಳೂವೆ ಬಂದೋರು ಒಬ್ಬರಿಗೊಬ್ರು 'ನಂಗೆ ಅಸೀತಾ ಇಲ್ಲ, ನೀ ಮೊದ್ಲು ಉಣ್ಣು–ಉಹ್ಞು, ನೀ ಮೊದ್ಲು ಉಣ್ಣು, ಆಮ್ಯಾಕೆ ನಾ ಉಣ್ಣುತೀನಿ'– ಇಂಗೆ ಸರಸ ಆಡಕ್ಕೆ ಮುಟ್ಟುಗಂಡದ್ದು ಲಕ್ಕಂಗೆ ಬೋ ಮೋಜು ತಂದಿತ್ತು!...

ಮಾರನೆ ಸಂದೆ ದನೀಗೆ ತಾನು ಕೇಮೆ ಮುಗುಸಿ ತಮ್ಮಗುಡ್ಲಿಗೆ ವಾಪಸಾಗಿದ್ದ. ಆ ಜಿನ ಪೂರ್ತ ಕ್ವಾಟೆ ಬುಳ್ಳಪ್ಪನ ಇತ್ತಲ ಬೇಲಿ ಲಿಪೇರೀಲೆ ತಾನು ತ್ವಡಗಿದ್ದದ್ದು. ಬುಳ್ಳಪ್ಪನ ಜೊತ್ಗೆ ಗಾಡಿ ಅಟ್ಟಿಗಂಡು ಕಾಡಿಗೋಗಿ ಬಾಯಿಬಡಿಕೆ ಬರಲ ಹೇರಿಕಂಬಂದು ಹಳೇ ಬೇಲಿಗೆ ಅಂಟಿಸಿದ್ದ. ಆಳುಗಳು ತಾವಿಬ್ಬರೇಯ. ಆ ಜಿನ ಬ್ಯಾರೆ ಜನಾವ ನೇಮುಸಿಕಂಡೇ ಇರ್ನಿಲ್ಲ. ಅದ್ಕೆ ನಾಕು ಜಿನದಲ್ಲಿ ಆಗೊ ಕೆಲಸ ಎಂಟು ಜಿನಗಂಟ ಎಳುದಿತ್ತು... ಈವೊತ್ತೆ ಬೇಲಿ ಕೆಲಸ ಮುಗುಸಿ ಬಂದೋನು,

"ನ್ವಾಡವ್ವ, ಇನ್ನೊಂದು ಜಿನ ಅವಯ್ನ ಅಟ್ಟಿ, ಕೆಲಸಕೆ ವೋಗೂಂತ ಯೋಳಿದ್ರೆ, ನಾ ಸುಮ್ಕಿರಕ್ಕಿಲ್ಲ. ಇಕಾ, ಅವಯ್ಯ ಕ್ವಟ್ಟಿರೋ ಕೂಲಿ. ಹಿಡಿ ಕಯ್ಯಾ" ಅಂತ ತಾನು ಅವ್ವನ ಬಿಚ್ಚಿದ ಅಂಗೈಗೆ ದುಡ್ಡು ಸುರುದಾಗ, ಅವಳ ಅಂಗೈಲಿ, ಒಂದು ಎಣ್ಣಾಳಿಗೆ ಕ್ವಡೊ ಕೂಲಿಗಿಂತ ಜಾಸ್ತಿ ಇರೋದ ಕಂಡು,

"ಇದೇನವ್ವ ಈ ಜಿನ ಆಚರ್‍ಯ–ನೀ ಯಾವ ಗನಂದಾರಿ ಕೇಮೆ ಮಾಡ್ದೇಂತ ಈಟು ದುಡ್ಡು ಕ್ವಟ್ಟವ್ರೆ?" ಅಂತ ತಾನು ಕ್ಯಾಳಿದ್ದ.

ದುಡ್ಡು ಎಣಿಸ್ತಾ ನಮ್ಮವ್ವ,

"ಊ. ನಾ ಮಾಡೋ ಕೇಮೆಗೆ ಈಟು ದುಡ್ಡು ಕ್ವಟ್ಟರೆ, ಆ ಮನೆ ಚೊಕ್ಕಟ್ವಾಗಿ ತ್ವಳಕಂಡೋಗೋದೇಯ" ಅಂದ್ಲು–ಅವ್ವನ ಮಾತ್ನ ಜಾಡು ಅರ್ತ ಆಗದೆ ತಾನು,

"ಮೆಂತೆ?" ಅಂತ ಕ್ಯಾಳುತ್ತ, ತಾನು ಹುಬ್ಬ ಮ್ಯಾಕ್ಕೇರಿಸಿದ್ದ.

ಅವ್ವ, ಹಣದ ಪೂರ್ತ ಎಣಿಸೋವರ್ಗೂವೆ ಸುಮಕಿದ್ದು, ಅದು ಮುಗುದ ಮ್ಯಾಲೆ, ತನ್ನ ಕಡೀಕೆ ತಿರುಗಿ,

"ಹಯ್ಯೊ, ಇದು ನನ್ನ ಸಂಬಳದ ದುಡ್ಡು ವೊಸ್ಟೆ ಅಂತ ತಿಳೀಬ್ಯಾಡಕನೊ, ಲಕ್ಕ, ಇದರಾಗೆ ನಿಮ್ಮಯ್ಯ ಈ ಜಿನ ಕ್ವಟ್ಟ ದುಡ್ಡೂ ಬೆರಕಂಡಂದೆ" ಅಂತ ಇವರಣೆ ಕ್ವಟ್ಟಿದ್ಲು.

ತಾನು ಬೆಕ್ಕಸ ಬೆರಗಾಗಿ,

"ಇದ್ಯಾನವ್ವ ಚೋಜಿಗದ ಸುದ್ದಿ ನೀ ಯೋಳ್ತಿರಾದು?" ಅಂದಾಗ, ಅವ್ವ,

"ನೆನ್ನೆ ನಾತ್ರೆನಾಗ ಬಾಡಿನೆಸರ ಮಾಡ್ನಿಲ್ಲಾಂತ ನನ್ನ ವಂದಿಗುಟ್ಟೆ ಕದ್ನ ಮಾಡ್ನಿಲ್ಲ ನಿಮ್ಮಯ್ಯ?– ಈಗ ಆ ಪುಣ್ಯಾತ್ಮನಿಗೆ ಅದ್ಯಾವ ಮಾರಕ್ಕ ತಾಯಿ ಗ್ಯಾನ ಕ್ವಟ್ಟಳೊ ಕಾಣೆ. ಬೋ ಜಿನದ ಮ್ಯಾಗೆ, ಈ ದಿವ್ಸ ಗೇದ ದುಡ್ಡ ಪೂರ್ತ ನನ್ನ ಕಯ್ಯಿಗೆ ಹಟ್ಟಿ 'ಕಲ್ಯಾಣಿ–ನಾಳಿಕೆ ಈ ದುಡ್ಡು, ನಿನ್ನ ಕಂಬಳದ ದುಡ್ಡು, ಲಕ್ಕ ಗೇದು ತಂದ ದುಡ್ಡು ಯೆಲ್ಲಾನೂವೆ ಜಮಾಯ್ಸಿ ಪಸಂದಾಗಿ ಬಾಡೀನ ಸಾರು ಮಾಡು ಮತ್ತೆ. ರಾಗಿ ಮುದ್ದೆಗೂವೆ ಬಾಡಿನ ಸಾರಿಗೂವೆ ವೈನಾಯ್ತದೆ. ಸುಮಾರು ಜಿನವೇ ಆಯ್ತು ನಿನ್ನ ಕಯ್ಯಿನ ಬಾಡಿನ ಸಾರು ರುಚಿ ನ್ವಾಡಿ. ಆ ರಾಚನ ಹಳು ಹುರಿ ಬಾಡು ತಿಂದು ಬಾಯೆಲ್ಲ ಕೆಟ್ಟೋಗದೆ, ಅಂದೋನು 'ಜಪ್ಪಯ್ಯನ ಮಟದ ಅಯ್ನೋರು ಯೋಳಿ ಕಳಿಸವ್ರೆ. ನಾಳೀಕೆ ಅವರ ಮಠದ ಜಮೀನಿನ ಕೇಮೆ ಇರಬೈದೇನೊ. ಕ್ಯಾಳಿಕಂಬತ್ತೀನಿ' ಅಂತೇಳಿ, ಅಯ್ಯ ಆ ಕಡಿಕೋದ. ನೀ ಈ ಕಡೀಕೆ ಬಂದೆ" ಅಂದ್ಲು.

ಅಂಗಂದು, ಸೊಂಟದಿಂದ ಇಮ್ಮಣಿ ಚೀಲವ ತಗದ ಅದರೊಳಿಕೆ ಅಂಗೈ ದುಡ್ನೆಲ್ಲ ಸುರುದು, ಮತ್ತೆ ಇಮ್ಮಣಿ ಚೀಲವ ಸೊಂಟಕೇ ಸಿಕ್ಕುಸ್ತ.

"ಲಕ್ಕ, ನಿಮ್ಮಯ್ಯನ ಕ್ವಾಪ–ಆದ್ರಿ ಮಲೆ ಇಲ್ವ, ಅಂಗೆ. ಅದು ಬಂದು ಬೀಳೋ ಬಿರುಸ್ನಲ್ಲಿ –ಹಾಳು ಗಂಡಸಿನ ಜಲ್ಮ ಎಂಗಸಾಗಾರೂವೆ ಉಟ್ಟಬಾರದಾಗಿತ್ತ– ಅನ್ನುಸಿ, ಅದೇ ಬಿರುಸ್ನಲ್ಲಿ ನಿಂತೋಗಕ್ಕಿಲ್ಲ, ಅಂಗೆ!'

*  *  *  *

ಚಾಪೆ ಮ್ಯಾಲೆ ವೊಳ್ಕಾಡ್ತ ಮನಗಿದ್ದ ಲಕ್ಕ ಯೋಚ್ನೆ ಮಾಡ್ತಾನೆ ಇದ್ದ...

ಅಯ್ಯನಲ್ಲಿ ಇಂದಕಿದ್ದ ಕ್ವಾಪ ಬತ್ತಾಬತ್ತಾ ಯೆತ್ತಾಗಿ ವೊಂಟೋಯ್ತು... ಈಗ್ಲೂವೆ ಬರಕ್ಕಿಲ್ಲ ಅಂತಲ್ಲ. ಬತ್ತದೆ, ಮಾತ್ರ, ಆ ಕ್ವಾಪದಲ್ಲಿ ಇಂದ್ಕೆ ಇದ್ದಂತಾ ಊರಣ ಇವತ್ತಿಲ್ಲ...ಯಾಕೆ?... ಹಯ್ಯೊ, ಯಾಕೆ ಅಂತ ಈ ಇಚಾರವ ಐಗಂಚಿ ಪಟ್ಲಕ್ಕೋಗಿ ಉಡುಕಬೇಕ?... ನಮ್ಮಣ್ಣ ಬದುಕಿರಾ ಕಾಲದಾಗೆ ನಮ್ಮಯ್ಯ ಕುಸಾಮತ್ತೆ ಕುಸಾಮತ್ತು! ಅಣ್ಣ ಜ್ವೊತೆಗಿದ್ದಾಗ ಅಯ್ಯ ಆಕಾಸದಾಗೆ ನಡೀತಿದ್ದ. ಆಸೇ ವೊರತು, ಆಗೇನು ಅಯ್ಯ ಯಾರ ಮ್ಯಾಲೂವೆ ತಟಕ್ನೆ ಕ್ವಾಪ ಮಾಡಿಕತ್ತಿರ್ನಿಲ್ಲ– ಮಾತ್ಮಾತಿಗೂ ಸಿಣಿಸಿಣೀಂತಿರನಿಲ್ಲ. ತಾನೂ ನಗೋದು, ಬ್ಯರೆಯೋರ್ನು ಕುಸಿ ಮಾಡಿ ನಗಸೋನು... ನಮ್ಮಣ್ಣ ವೋದ, ಇಂದುಗುಟ್ಲೆ ಅಮರಿಕತ್ತು ಕ್ವಾಪ ನಮ್ಮಯ್ಯ!...

ಗೆಜ್ಜುಗಣ್ಣ, ಅಯ್ಯಂಗೆ ಇರೀ ಮಗ. ನಡೂವೆ ಅವಳಿ ಜವಳಿ ಮಕ್ಕಳು– ಒಂದು ಗಂಡು, ಒಂದು ಎಣ್ಣು. ಇದಾದ ನಾಕೈದು ವರುಸಕೆ ಉಟ್ಟಿದೋನಂತೆ

ನಾನು......ನಾನು ಬೂಪತನಾದ ಏಡೇ ವರುಸಕೆ ಈ ಪ್ರತುವಿಗೆ ನಮ್ಮವ್ವ ಕ್ವಟ್ಟ ಕೊನೇ ಫಸಲು–ನನ್ನ ತಂಗಿ ಸಿವುನಿ!....

ಉಟ್ಟಿರೋದು ಎಸರಿಗೆ ನಾಕು ಕುಳ ಆದರೂವೆ, ಈಗ ಉಳಿದಿರೋದು–ಸಿವುನಿ, ನಾನು ಇಬ್ಬರೇಯ!... ಅವಳಿ ಗಂಡು ಸಣ್ಣಕೆ ಕಡ್ಡಿಯಾಗೆ ಉಟ್ಟಿ, ಬದುಕಿರಾ ಅತ್ತುತಿಂಗಳೂವೆ ನವದೂ ನವದೇ ಸತ್ತೊಯ್ತಂತೆ. ಈಗಳೂವೆ ಅವ್ವಂಗೆ ಗಾಳಿ ಬಿಸಿದಂಗೆ ಯಾವಾಗಲಾರೂ ಆ ಕೂಸಿನ ಗ್ಯಾಪನ ಬರಾದುಂಟು. ಆಗ "ಇದಿಯಮ್ಮ ಆ ಕೂಸಿನ ಕಣ್ಣು ಮೂಗ ಬೋ ನೀಟಾಗಿ ತಿದ್ದಿದ್ಲು ಕನೋ, ಲಕ್ಕ. ಅದ್ನ ದಕ್ಕಿಸಿಕಳಾಕೆ ಮುಕ್ಯ ನಾವು ಅದ್ರುಸ್ಟ ತಂದಿರನಿಲ್ಲ."– ಯೋಳ್ತ ಯೋಳ್ತ, ಕಣ್ಣೀರ ಚೆಲ್ಲಾಡಿಸಿದ್ಲು ಅವ್ವ!...

ಇನ್ನೊಂದು ಅವಳಿ ಎಣ್ಣು–ಅವಳೇನೂ ಉಲುಮಲವಾಗಿ ಬೆಳುದು ಒಳ್ಳೆ ಕಡೀಕೆ ಲಗ್ನಾಗಿದ್ರೂವೆ, ಮೊದಲ್ನೆ ಕನ್ನೆರಿಗೇಲೆ ಮೊಗೀನ ಸೈತ ಪ್ರಾಣ ಬುಟ್ಟಿದ್ದು... ಅವಳು ಸತ್ತದ್ದೆ ಸತ್ತದ್ದು ಬ್ಯಾರೆ ಊರಿನ ನಮ್ಮ ಭಾವಂಗೂ ನಮ್ಗೂವೆ ಹೊಕ್ಕಳ ಸಮ್ಮಂದವೇ ಕಡುದೋಯ್ತು. ಅವ್ನು ಬ್ಯಾರೆ ಲಗ್ನ ಆದಾಗ್ಲೂ ಬೂಪ ನಮ್ಗೆ ಯೋಳಿ ಕಳಿಸನೇ ಇಲ್ಲ!.... ಗೆಜ್ಜುಗಣ್ಣ ಮಾತ್ರ ಇರೋವರೆಗೂವೆ ನಮ್ಮ ಗುದ್ಲ ತಾಳಗಂಬದ ತರ ನಮ್ಮ ಸಂಸಾರಕ್ಕೆ ಬಲಭುಜವಾಗಿದ್ದ!–

ಲಕ್ಕನ ಆಲೋಚ್ನೆಯ ಒಂದು ತಿಗಣೆ ಕಚ್ಚಿ ತುಸ ಬ್ಯಾಳ್ಯ ಅಡ್ಡಗಟ್ಟೆ ಆಕಿತ್ತು. "ಹಾಳುಗೇರಿ ತಿಗಣೆ ತಾನೆ ಯಾಪಾಟ ಎಚ್ಚವೆ ಈ ಗುಡ್ಲಲ್ಲಿ!" ಗೊಣಗಿ, ಚಡ್ಡಿ ಒಳಗೆ ಹರಿದಾಡೊ ತಿಗಣೆಯಮ್ಯಾಲಿನಿಂದಲೆ ಹೊಸಗಾಕ್ದ. ಪೂನಾ ನಿಂತೋದ ಅವನ ಆಲೋಚ್ನೆ ಚಾಲೂ ಆಯ್ತು...

ಅಣ್ಣನ ಕುರುತೇ ಮನಸು ಸುತ್ತಾಡ್ತ ಇದ್ದದ್ದು, ಗೆಜ್ಜುಗಣ್ಣನ ರೂಪವ ಲಕ್ಕನ ಮುಂಡ್ಕೆ ಕಡೆದು ನಿಲ್ಲಸಿದಂಗಾಯ್ತು: ಗಣೆಮರ ಬೆಳುದಂಗೆ ಬೆಳಿದಿದ್ದ ಎತ್ತರದ ಆಳು, ಮೊಖದಾಗೆ ಮಾರಮ್ಮ ಕಳ್ಳುಮುಳ್ಳು ಹೂದು ಅಲ್ಲಲ್ಲಿ ಸಣ್ಣಸಣ್ಣಗುಳಿ ಬಿದ್ದಿದ್ರೂವೆ, ಗೆಜ್ಜುಗಣ್ಣನೆ, ತನಗಿಂತಲೂವೆ ಎಚ್ಚಾಗಿ ಅಯ್ಯನ ವೋಲಿಕೆ ವೊತ್ತೋನು. ನಗಸಾರ ಮಾಡಾದರಲ್ಲೂ ಥೇಟ್ ಅಯ್ಯನೆ! ಯಾವ ಕೇಮೆ ಅದ್ರೂ ಸೈ, ಅಯ್ಯನ್ನೆ ಒಂದು ಕೈ ಮೀರಿಸೋನು!... ಅದುಕೇ ಊರಿನ ದೊಡ್ಡ ದುಳಗೊಳೆಲ್ಲ ಯಾವ ಕೇಮೆ ಬಿದ್ದರೂ ಮೊದ್ಲು ಉಡುಕ್ತಾ ಇದ್ದದ್ದು ಗೆಜ್ಜುಗಣ್ಣನ್ನೆ!...ಪಸಂದಾಗಿ ಗೇಯೊ ಎತ್ತು ಯಾರಿಗೆ ಬ್ಯಾಡದು?...

ನಮಗೂ ನಾಕು ಎಕರೆ ಕುಸ್ಕಿ ಜಮೀನಿತ್ತು. ಅಯ್ಯನ ಲಗ್ನದಲ್ಲೆ ಕೆಂಗಣ್ಣಪ್ಪನ ಅತ್ರ ಮಾಡ್ದ ಸಾಲಕೆ ಬಡ್ಡಿ ಯೇರಿ ಯೇರಿ ಅಪ್ಪಾರ ಆಗಿ, ಅಯ್ಯ ಅಣ್ಣ

ಏಡಾಳೂವೆ ಮೂಗ್ನಲ್ಲಿ ಕವಡೆ ಕಟ್ಟಿ ಗೇದರೂವೆ, ಆ ವೊರೆ ಬಾರಕ್ಕೆ ನಮ್ಮ ನೇರಳೆ ಮರದ ಪಾಲಿನ ಜಮೀನ ಆವುತಿ ತಕ್ಕಂಡಿತ್ತು!... ನಮ್ಮಯ್ಯ ಹೊಲದಂಚಿಗಿದ್ದ ಜಮ್ಮುನೇರಳೆ ಮರದ ಬುಡದಲ್ಲಿ ಕುಂತು, ಗೆಜ್ಜುಗಣ್ಣನ ಕೊಳ್ಳ ತಬ್ಬಿ, ನಮ್ಮೊಲದ ಕೆಬ್ಬೆಮಣ್ಣಿಗೆ ಕಣ್ಣೀರು ಸುರುಸ್ದ. ನಮ್ಮವ್ವ ಆ ಕೆಂಪಾನೆ ಮಣ್ಣ ಕಯ್ಯಿ ಬೊಗಸೇಲಿ ಯೆತ್ತಿ ಯೆತ್ತಿ ತನ್ನ ತಲೆಮ್ಯಾಕ್ಕೆ ಸುರುಕತ್ತ "ಕೆಟ್ಟೆವಲ್ಲಪ್ಪೊ..."ಅಂತ ಗೋಳಾಡುದ ಕಂಡೋರೆಲ್ಲ ಕಣ್ಣೀರಾಕ್ತ ವೋಯ್ತಿದ್ರು... ನಂಗಿನ್ನೂ ಹೈಲಾಟದ ವಯಸ. ನಮ್ಮ ಜಮೀನು ಬ್ಯಾರೆಯೋರ ವಸಕ್ಕೆ ವೊಂಟೋದರೆ, ಇನ್ನು ಈ ನೇರಿಳೆ ಮರದ ತಕ್ಕೆ ಬರಾದು ಬಂದಾಯ್ತದೆ ಅನ್ನಾದು ಗ್ವತ್ತಾಗಿ, ಆಗ್ಲೆ ಆದೋಟು ನೇರಿಳೆ ಅಣ್ಣ ಕಮಾಯಿಸುವ ಅಂತ, ಕಲ್ಲು ತಕ್ಕಂಡು ಬೀರಿ, ಉದುರ್ದ ನೇರಿಳೆ ಅಣ್ಣ ಆರುಸಿ ಆರುಸಿ ಚಡ್ಡಿ ಜೋಬಿಗೆ ತುಂಬುಕತ್ತಿದ್ದೆ.....

ಆಗ ನಾನು ಮಟಕೋಯ್ತಿದೆ. ನಮ್ಮಯ್ಯ ಕೆಂಗಣ್ಣಪ್ಪನ ತಾವು ಮತ್ತೆ ಅಯಿವತ್ತು ರೂಪಾಯ ಈಸುಗಂಡು ಅವನಟ್ಟಿಗೆ ಜೀತಕ್ಕೆ ಸೇರುಸಿದ್ದ. ಅಲ್ಲಿಂದ ಮಾರನೆ ವರುಸ ಕೆಂಗಣ್ಣಪ್ನ ಅಯಿವತ್ತು ರೂಪಾಯಿ ಸಾಲ ತೀರುಸಿ, ಬುಂಡಮ್ಮಾರು ಅದರ ಮ್ಯಾಲೆ ಅಯಿವತ್ತು ರೂಪಾಯಿ ಕ್ವಟ್ಟು ತಮ್ಮ ಅಟ್ಟೀಲೆ ಜೀತಕಿರುಸಿಕಂಡ್ರು...

ನನ್ನ ಕಂಡರೆ, ಗೆಜ್ಜುಗಣ್ಣಂಗೆ ಪಂಚಪ್ರಾಣ. ಅಯ್ಯ ನನ ಮಟ ಬುಡಸಿ ಕೆಂಗಣ್ಣಪ್ನ ತಾವು ಜೀತಕ್ಕೆ ಇರುಸಿದ್ದೆ ಅಣ್ಣಂಗೆ ತಾಪ ಆಗಿತ್ತು. ಈಗ ಬುಂಡಮ್ಮಾರ ಅಟ್ಟಿ ಸೇರುಸಿದ್ದು ಅವಂಗೆ ಇನ್ನೂ ಬ್ಯಾಸರಾಯ್ತು.

"ನಂಗೇನೂ ವೋದು ಬರಾವು ಕಲಿಯಾ ಪುಣ್ಯ ನನ್ನಣೇಲಿ ಬರೀನಿಲ್ಲ....ತಮ್ಮಂಗೂ ಮಟದಿಂದ ದೂರ ಮಾಡಿ ಬುಟ್ಯಲ್ಲ?" – ಅಂತ ಅಯ್ಯನ ಕುಟ್ಟೆ ಕದ್ನಕ್ಕೆ ಬಿದ್ದಿದ್ದ....

ಆದ್ರೆ ಬುಂಡಮ್ಮಾರ ಅಟ್ಟಿ ಬುಡಿಸಬೇಕಾದರೆ ಒಂದು ನೂರು ರೂಪಾಯಿ ಜಮಾ ಆಗಬೇಕು. ಯಲ್ಲಿಂದ ವೋಟು ದುಡ್ಡ ವೊಂದಿಸಾದು?– ಅದೇ ಕೊರಗ್ನಲ್ಲಿ ಕಾಲ ತಳ್ತಾ ಇದ್ದ ಅಣ್ಣ... ಇಂಗೇ ಇರೋನೂವೆ ಪುಣ್ಯಕ್ಕೆ ಎಡತೊರೆ ಸೀಮಿಂದ ಎಣ್ಣು ಕ್ವಡ್ತೀವಿಂತ ಯಾರೊ ಬಂದರು. ಅಯ್ಯ,

"ವಳ್ಳಿ ಸಮ್ಮಂದ. ನಿಂಗೂ ವಯಸ ಜಿನಾ ಜಿನಾ ಕಳುದಂಗೆ ಕಮ್ಮಿ ಆದಾತ, ಗೆಜ್ಜುಗ?– ಸುಮ್ಕೆ ವಪ್ಪುಗಯ್ಯಾ" ಅಂತ ಮೀಟ್ದ.

ಅವ್ವನ ವರಾತವೂ ಕಮ್ಮಿ ಇರನಿಲ್ಲ. ಲಕುಸಣದಲ್ಲಿ ಎಣ್ಣು ಅಂತಾ ತಗದಾಕೊ ಬಾಬತ್ತಿಂದಲ್ಲ. ಆದರೂವೆ ಅಣ್ಣ ಅಳದೂ ಸುರದೂ ತೊಂಟಿತಕರಾರು ತಗದು, ಒಂದು ದೀವಳಿಗೆ ದಾಟಿಸಿದ್ದ....

ಇನ್ನೊಂದು ದೀವಳಿಗೇನೂ ಕಳೀತು. ಈಗ ಮಾತ್ರ ಅಯ್ಯನೂ ಅವ್ವನೂ ಒಕ್ಕಡೆ ಅವ್ವು ಇನ್ನೊಕ್ಕಡೆ. ಇವಳು, ಜಪ್ಪಯಾಂದ್ರು ಜಗ್ಗಾಡ್ದೆ ಗೆಜ್ಜುಗಣ್ಣಂಗೆ ಪಚಂಡಿ ಗಂಟಾಕಿ ವಪ್ಪುಸಿದ್ರು...

ವಪ್ಪಿಗಂಡಮ್ಯಾಲೇ ಬಂದದ್ದು ಗೋಳು... ಲಗ್ಣ ಅಂದ್ರೆ ಬಾಯಿ ಮಾತ? –ಬಡಸ್ತನದ ಲಗ್ಣ ಅಂದರೂವೆ ಮುನ್ನೂರು ಮುನ್ನೂರೈವತ್ತು ಇಲ್ದೆ ನಡೀತದ?... ವೋಸ್ಸು ಅಣವ ಯಾವ ಮುಲಾಜೂ ಇಲ್ದೆ ಯಾರ ಕ್ವಡಾರು?... ಜಪ್ಪಯ್ಯನ ಮಠದ ಸ್ವಾಮಿಗಳೇನೊ ಅಯ್ಯನ ಕಯ್ಲಿ ಒಂದು ಜತೆ ಕೆಂಪು ಕಡ್ಡಿ ಪಂಚ್ಯ ವರನಿಗೇಂತ ಮುಪತ್ತಾಗಿ ಕ್ವಟ್ಟಿದ್ದಂತೆ. ರಾವಳಾಸುರನ ವೊಟ್ಟೆಗೆ ಅರೆಕಾಸಿನ ಮಜ್ಜಿಗೇಂತ ಅದ್ಯಾವ ಮೂಲ್ಗೆ ಎಟಕಾತು?... ಲಗ್ಣಾದ ಮ್ಯಾಲೆ ಗೆಜ್ಜುಗಣ್ಣನ ಜೀತಕಿರುಸ್ತೀನಿ ಅಂತವಾ ಕೆಂಗಣ್ಣಪ್ಪನ ಅತ್ತಿರೆವೆ ಅಯ್ಯ ಆರು ನೂರು ರುಪಾಯ ಈಸಗಂಡು ಅದರಾಗೆ ಒಂದು ನೂರು ರೂಪಾಯ ಬುಂಡಮ್ಮಾರಿಗೆ ಕ್ವಟ್ಟು ನನ್ನ ಜೀತ ಬುಡಸಿದ್ದ. ಉಳಿಕೆ ಅಣವ, ಲಗ್ಣದ ಜಿನ ಬರಾವರ್ಗೂ ಜಾಪಾನಾಗಿಡು ಅಂತ ಅವ್ವನ ಕಯ್ಲಿ ಕ್ವಟ್ಟಿದ್ದ... ಅಣ್ಣಂಗೆ ಆ ಅಣದಲ್ಲಿ ತನ್ನ ಲಗ್ಣಕ್ಕಿಂತ ಒಂದು ಏಡು ತುಂಡು ಹೊಲಾನಾರ ಕ್ವಂಡುಕಳಾವ ಅನ್ನಾ ಆಸೆ. ಅಯ್ಯನ ಮನಸಿನಾಗೂ ಈಚೀಚ್ಗೆ ಅದೇ ಇರಾದೆ ಇಣುಕಕ್ಕೆ ಸುರು ಮಾಡಿತ್ತು. ಆದ್ರೆ ಅವ್ವ ಬುಡಬೇಕಲ್ಲ;

"ಈ ಅಣ, ಗೆಜ್ಜುಗನ ಲಗ್ಣಕೇ ಮುಡುಪು... ಬ್ಯಾರೆ ಯಾತಕೂ ಇದ್ನ ಮುರುಸಕ್ಕೆ ನಾ ವಪ್ಪುನಾರಿ." –ಉಡ ಇಡಿದಂಗೆ ಒಂದೆ ಪಟ್ಟು, ಇಡಿದ್ಲು!...

ಇಂಗೆ ಅಟ್ಟೀಲಿ ಲಟಾಪಟಿ ನಡದು, ಕಡೀಕೆ ಆ ಅಣವ ಗೆಜ್ಜುಗಣ್ಣನ ಲಗ್ಣಕೇ ಬಳಸೋದೂಂತ ಯೆಲ್ಲಾರ್ದು ವಪ್ಪುಗೆ ಆದಮ್ಯಾಗೆ, ಅವ್ವ ನಮ್ಮ ಕೇರಿಯ ಪರ್ತಿ ಗುಡ್ಲುಗುಡ್ಲಿಗೂ ವೋಗಿ – "ಅತ್ತಿಗೆಮ್ಮ, ನನ್ನ ಇರೀ ಹೈದ ಗೆಜ್ಜುಗ ಇಲ್ವ–ಅವಂಗೆ ಲಗ್ಣ ಯೇರ್ಪಾಡು ಮಾಡ್ತಾ ಇವಿ. ಎಣ್ಣ ಎಡತೊರೇದು" ಅನ್ನಾದು, ಇನ್ನೊಂದು ದಪ ಅಂಗೇ ಗಾಳಿ ಬೀಸದಂಗೋಗಿ, "ಮಾತ್ರ, ನೀವೆಂದ್ಗೂ ಲಗ್ಣಕ್ಕೆ ತೆಪ್ಪಿಸ್ಕೊಬ್ಯಾಡದು" ಅನ್ನಾದು... ಇಂಗೇಯೆ ಅವಳ್ಗೆ ಸಸಾರ ಇದ್ದ ಕೆಲವು ಉತ್ತುಮರ ಅಟ್ಟಿಗಳ್ಗೂ ವೋಗಿ ತನಗೆ ಗೆಲವು ತಂದಿದ್ದ ಚಮಾಚಾರ್ವ ಬಿತ್ತಿ ಬಂದಿದ್ಲು...

ವೊಸ್ಪರಲ್ಲಿ ಕೆಂಗಣ್ಣಪ್ಪ ತಲಕಾಡಿಗೆ ಅವರ ಸಮ್ಮಂದೀಕರ ಅಟ್ಟಿಗೆ ವೋಂಟಿದ್ದ. ಕೆಂಗಣ್ಣಪ್ನ ಅಜ್ಜನ ಕಾಲಕೊ ಮುತ್ತಜನ ಕಾಲಕೊ ಅವರ್ದು ತಲಕಾಡೇ ಮೂಲವಂತೆ. ಇಂದ್ಕೆ ಇವರ ಅಜ್ಜಂಗೂ ಮುತ್ತಜ್ಜಂಗೂ ದಾಯಾದಿಗೊಳು ಕೋಲ್ಪು ಯವಾರ ನಡುಸಿ ಇವ್ರ ಗದ್ದೆಗಳ್ನೆಲ್ಲ ಲಪಟಾಯಿಸಿದ್ರಂತೆ. ಇಲ್ಲಿಗೆ ಬಂದಮ್ಯಾಲೆ ಇವರಜ್ಜ

ಇಲ್ಲಿ ಆಸ್ತಿ ಕ್ವಂಡಿದ್ದು, ಆ ಅಸ್ತ್ಯ ಇವರಯ್ಯ ರುದ್ದಿ ಮಾಡಿದ್ನಂತೆ. ಈಗ ಆ ಯವಾರವೆಲ್ಲ ಹಳೆಮರಸೋಗಿ ತಲಕಾಡ್ನ ಈಗಿನ ತಲೆಯೋರು ನಮ್ಮ ದರುಮನಳ್ಳಿಗೆ, ಇಲ್ಲಿಯೋರು ತಲಕಾಡಿಗೆ, ವೋಗಿ ಬತ್ತಾ ಇಂದ್ನ ಸುಮ್ಮಂದವ ಮತ್ತೆ ರೂಡಿ ಮಾಡಿಕಂಡವ್ರೆ. ಇಂಗಿರುವಾಗ, ಒಂದು ಜಿನ ತಲಕಾಡ್ನಿಂದ ಒಂದು ಕಾಗಜ ಬಂದಿತ್ತಂತೆ. ಇವರ ನಂತರ ಉಡುಗೀದು ಲಗ್ಣ ಯೇರ್ಪಾಡಾಗಿ, ಈಳ್ಯದ ಸಾಸ್ತ್ರಕ್ಕೇ ಬರಬೇಕು ಅಂತಾವ... ಕೆಂಗಣ್ಣಪ್ಪ ಈಳ್ಯದ ಸಾಸ್ತ್ರಕ್ಕೆ ವೋಗೋದು ಅಸಂದರ್ಭಾಗಿ ದಾರಾಮೂರ್ತಕೆ ವೊಂಟೋನು, ನಮ್ಮ ಗೆಜ್ಜಗಣ್ಣನ ಕರದು–

" ಗೆಜ್ಜುಗ, ತಲಕಾಡ್ಗೆ ಮದುವೆಗೆ ವೊಂಟಿವ್ನಿ ಕನೆ. ನನ್ನ ಜ್ವತ್ಗೆ ನೀನೂ ಬಾರ್ಲ. ನಂಗೊಬ್ಬಂಗೇ ವೋಗಕ್ಕೆ ಸಿಬ್ರಿ" ಅಂದು, ಗೆಜ್ಜುಗಣ್ಣ ತೆಪ್ಪಾಕಕ್ಕೆ ಯೇಟೇಟು ಪರ್ಯತ್ನ ಮಾಡಿದ್ರೂ ಬುಡದೆ, ವಂದಿಗೇ ಕರಕಂಡು ನಡುದಿದ್ದ!...

ಈಗ ನಮ್ಮಯ್ಯ ಗುಡ್ಲು ವಳುಗೇ ಮುಲುಕಾಡಿದ್ದ:

"ಇದೇನ ಈವಯ್ಯ ಕೇವು?... ಲಗ್ಣಾಗೋ ಉಡುಗ್ನ ಅವನ ಪಾಡಿಗೆ ಬುಡದೆ, ಕಾಸಿ ರಾಮೇಸ್ವರಕೆ ವೊಂಟೋರಂಗೆ ಊರೂರ ಸುತ್ತಿಸಾದು?... ಈ ವಯ್ಯಂಗೆ ಕೇಮಿದ್ರೆ, ಅವನೊಬ್ಬನೇ ವೊಗಲೇಳು. ಅಣ ಈಸುಗಂಡಾಕ್ಷಣ ಈಗ್ಲೆ ಜೀತಕೆ ಕ್ವಟ್ಟೆವಾ ಹೈದ್ನ?... ಇನ್ನೇನ ತಿಂಗಳೊಪ್ಪತ್ನಲ್ಲಿ ಲಗ್ಣಯದ್ದೇಯೇಳ್ತದೆ. ಅಮ್ಯಾಕೆ ಮಾರಾಯನಂಗೆ ಕರಕಂಡೋಗ್ಲಿ ಯಾರು ಬ್ಯಾಡ ಅನ್ನಾರು?"...

ಆದ್ರೆ ಕೆಂಗಣ್ಣಪ್ಪ ನಮ್ಮ ಗೆಜ್ಜುಗಣ್ಣನ ಕರಕಂಡೋದ ಕಾರಣವೆ ಬ್ಯಾರೆ. ಅದು ಊರಿನೋರಿಗೂ ತಿಳುದಿದ್ದ ಇಸ್ಯಾನೆ–ಗೆಪ್ತಿ ಆಯ್ತಿದ್ದಂಗೆ, ಕತ್ತಲೇಲೆ ನಾನು ನಗಾಡ್ದೆ...

ಕೆಂಗಣ್ಣಪ್ಪಂಗೆ ದೊಡ್ಡ ದೊಡ್ಡ ಗುಳ್ಳೆ ಇರೊ ಕೆಂಜರಗಣ್ಣು. ಅವನು ಕಣ್ಣ ಮೆಡರಿಸಿದಾಗ, ಯೆಂತೋರ್ಗೂ ಎದೆ ಜಲ್ ಅನ್ನುದೆ ಇರಕ್ಕಿಲ್ಲ. ಆದ್ರೆ ವಳಾಗಡೆ ಅವನು ಪುಕ್ಕಲ ಅಂದ್ರೆ ಪುಕ್ಕಲ!...ಕಿವ್ಯಾಗೆ ಬಿಳಿ ಅಳ್ಳು ಮೆಟ್ಟಿರೊ ಅತ್ತಗಡಕು, ಕಯ್ಲಿ ಬಂಗಾರದ ಕಪ್ಪ–ಇವು ಅವ್ನು ಬೆಳುಕ್ನಲ್ಲಿ ನಡದಾಗ ಫಳಾರ್ ಫಳಾರ್ ವೋಳೀತಿರ್ತವೆ. ಇವ್ನ ಆಕ್ಕಂಡು ದೂರದ ಸೀಮೆಗೆ ಒಬ್ಬೊಂಟ್ಯಾಗಿ ಪಯ್ಣ ವೋದಾಗ ಅಲ್ಲಿ ಯಾರಾರು ದಾರೀಲಿ ಅಡ್ಡಾಕಿ, ನಾಕು ಜಡ್ಡು ಇವ್ನ ಕಿತ್ತುಗಂಡ್ರೆ– ಅನ್ನಾ ಬಯ!... ಅದುಕೆ, ಪರವೂರಿಗೆ ವೊಂಟಾಗ, ಜ್ವತ್ಗೆ ಯಾರಾರ ಇರಲೇಬೇಕು... ಅದೇ ಕಾರಣಕ್ಕೆ ನಮ್ಮ ಗೆಜ್ಜುಗಣ್ಣನ ಇಕ್ಮತ್ತು ಮಾಡಿ ತನ್ನೊಂದಿಗೆ ವಯ್ದಿದ್ದ... ಉಣಸೂನರಿವರ್ಗೂ ಎತ್ತಿನ ಗಾಡಿ ಪಯ್ಣ. ಅಲ್ಲಿಂದಾಚ್ಗೆ ಮಯಸೂರು, ಮೈಸುರ್ನಿಂದ ತಲಕಾಡಿಗೆ ಬಸ್ಸಿನಲ್ಲೆ ಮುಟ್ಟಿದ್ದರು...

ಇವರು ವೋದ ಮಾರನೆ ಜಿನಕೆ ಧಾರೆ. ಮೂರ್ತ ಮದ್ದಿನ ಒಂದೂವರೆ ಗಂಟೆಗೆ ಅಂದಿದ್ರಂತೆ. ಗೆಜ್ಜುಗಣ್ಣ ಯೋಚ್ನೆ ಮಾಡಿರಬೇಕು... ಈ ಸುಭ ಕಾರ್ಯವೆಲ್ಲ ಮುಗುದು, ಈ ಉತುಮರಿಗೆಲ್ಲ ಗಂಡಸರ ಪಂಕ್ತಿ ಎಂಗಸರ ಪಂಕ್ತಿ ಊಟ ಮುಗುದು, ನಮಗೆ ವೊರಗಿನೋರ್ಗೆ ಉಣ್ಣಕ್ಕೆ ಇಕ್ಕಬೇಕಾದ್ರೆ ಮುಚ್ಚಂಜೆಗೆ ಮುಂಚೆ ಅಂತೂ ಸಾದ್ಯವೇ ಇಲ್ಲ. ಅಲ್ಲೀಗಂಟ ತಾನ್ಯಾಕೆ ಗುರುತು ಪರಿಚಿತ ಇಲ್ಲದಿರೋ ಈ ಊರಿನಾಗೆ ಒಬ್ನೆ ಲಗ್ನದ ಅಟ್ಟಿ ಮುಂದ್ಕೆ ವಾಲಗದೋರ ತಾವು ಮೂಗುದೆವ್ವದಂಗೆ ಕುಂತಿರಾನೆ? – ಅನ್ನುಸಿರಬೇಕು. ಅಂಗೇ ತಿರುಗಾಡಿಕಂಡು ಬರಾನೆ ಅಂತ ವೊಂಟನಂತೆ. ವೈದ್ಯೇಸ್ವರ ಸ್ವಾಮಿ ಗುಡಿ ಇಂದುಗಡೇಲಿ ಉದ್ದಕ್ಕೂ ಬೆಟ್ಟದಂಗೆ ಹೇರಿಕಂಡಿದ್ದ ದಪ್ಪ ದಪ್ಪ ಗುಡ್ಡೆ ಮರಳು ರಾಸೀಲಿ ಊರಿನ ಹೈಕಳು ಗುಂಪುಗುಂಪಾಗಿ ಮರಳು ರಾಸಿ ಮ್ಯಾಗ್ನಿಂದ ಕೆಳುಕ್ಕೆ ಜಾರಾದು ಪುನಾ ಆ ಮರಳು ಗುಡ್ಡೇನೆ ಅತ್ತೋಗಿ ಕೆಳುಕ್ಕೆ ಜಾರಾದು–ಇಂಗೇ ಆಡ್ತಾ ಇದ್ವಂತೆ!... ನಮ್ಮಣ್ಣಂಗೂ ಆ ಹೈಕಳ ಆಟ ನ್ವಾಡಿ ಆಸ್ಯಾಗಿ, ಅವನೂ ವಸಿ ವ್ಯಾಳ್ಯ ಅಲ್ಲೆ ಅವರೊಂದಿಗೆ ಮರಳಿನಲ್ಲಿ ಜಾರಿ ಜಾರಿ ಕುಸಪಟ್ನಂತೆ!... ಆಗ ಪೂಜೆ ಮುಗುಸಿ ವೊರೀಕೆ ಬಂದ ಗುಡಿ ಪುರೋಯಿತರು, ಚಿಕ್ಕ ಚಿಕ್ಕ ಹೈಕಳ ಜ್ವತ್ಗೆ ಜಾರತಿದ್ದ ನಮ್ಮ ಧಾಂಡಿಗ ಅಣ್ಣನ ನ್ವಾಡಿ,

"ಯೇನೊ, ಮೀಸೆ ಬಂದ ಗೆಣ್ಯ–ಮರಳಿನಲ್ಲಿ ಜಾರಕ್ಕೆ ನಿಂಗೂ ಆಸೆ ಆಯ್ತೇನೊ?... ನಮ್ಮೂರ್ಗೆ ವೊಸನಂಗೆ ಕಾಣ್ತೀ. ಯಾವ್ದು ನಿಮ್ಮೂರು?" – ಕ್ಯಾಲಿದರಂತೆ

"ನಮ್ಮೂರು ದರುಮನಳ್ಳಿ, ಸೋಮಿ. ಇಲ್ಲಿ ನಡೀತಿರೋ ಮದ್ವೆಗೆ ಬಂದಿರೋ ನೆಂಟರ ಜ್ವತ್ಗೆ ಬಂದಿವ್ನಿ" ಅಂದೋನು, ಪುರೋಯಿತರು "ಸರಿ, ಸರಿ"ಅಂತ ಎಜ್ಜೆ ಕೀಳ್ತಿರಬೇಕಾದರೆ,

"ಸೋಮಿ, ಸೋಮಿ, ಈ ಮರಳು ದಿಬ್ಬ ದಾಟಿ ವೋದರೆ, ಆಚ್ಗೆ ಇರಾದೇನು – ವಸಿ ಯೋಳಿ–ಸೋಮಿ" ಅಂತ ಬೇಡಿದ್ನಂತೆ.

"ಈ ಮರಳು ದಿಣ್ಣೆ ಆಚ್ಗೆ ಇರೋದು ನದಿ. ಕಾವೇರಿ ನದಿ. ಈ ನದಿಯ ಆಚ್ಗೆ ದಡದಾಗಿರೋ ಊರೇ ಮಾಲಂಗಿ..."

ಪುರೋಯಿತರು ಇನ್ನೂವೆ ಮಾತ ಮುಗಿಸ್ನೇ ಇಲ್ಲ. ನದಿ ಅದೆ, ಅನ್ನಾ ಸುದ್ಧ ಕರ್ನಕೆ ತಲುಪ್ದ ಕೂಡ್ಲೆ, ಬಿದ್ದಂ ಬೀಳ ಅಲ್ಲಿಂದ ವಾಟ ವೋಡದ್ನಂತೆ ನಮ್ಮಣ್ಣ!...

ಹೊಳೆ ತಲುಪತ್ಲೂ ನೀರು ಕಂಡು ಅಣ್ಣ ಕುಣುದಾಡಿದನಂತೆ... ನೀರು

ಒಂದಿದ್ರೆ ಗೆಜ್ಜುಗಂಗೆ ಈ ಪರ್ಪಂಚದಾಗೆ ಬ್ಯಾರೆ ಯಾವ್ದೂ ಬ್ಯಾಡ. ನೀರು ಕಂಡ ಕಡೆ, ಅದರೊಳೀಕೆ ಬಿದ್ದು ಈಜು ವೊಡಿಯೊ ತೆವಲು. ಈ ತೆವಲು ಕಂಡೇ ನೆಮ್ಮೂರಿನೋರು" ಇವನೆಲ್ಲೊ ಇಂದಿನ ಜನ್ಮದಲ್ಲಿ ಎಮ್ಮೆ ಕ್ವಾನ ಆಗಿರಬೇಕು!" ಅಂತಿದ್ರು.... ಬೇಕಾರೆ–ಮೂಡ್ಲಲ್ಲಿ ಸ್ವಾಮಿ ಉದಯವಾಗಿ, ಸಂದೆ ಕತ್ತಲ್ನಲ್ಲಿ ಕರಗೋಗುಂಟ ನೀರಿನಲ್ಲಿ ಬಿದ್ದಿರ್ತಿಯೇನ್ಲ ಅಂದರೆ, ಓ–ಸೈ, ಬಿದ್ಕಂಡೇ ಇರ್ತೀನಿ, ಅನ್ನಾ ಬೂಪ!...

ಈಚೆ ದಡದಲ್ಲಿ ಮೂರು ನಾಕು ಜನ, ಆಚೆ ದಡದಲ್ಲಿ ಏಡೊ ಮೂರೊ ಆಳು ನ್ವಾಡ್ತಿದ್ದಂಗೇಯ ಅಂಗಿ ಕಳುಚಿ ದಡದ ಮರಳಿನಲ್ಲಿ ಎಸ್ದು, ಹೊಳೆ ನೀರಿಗೆ ದುಢುಂನೆ ಬಿದ್ದಿದ್ದೆ ಬಿದ್ದಿದ್ದು!... ಇವನು ಈಜ ವೊಡೆಯೊ ಕುಸಾಲು ನ್ವಾಡ್ತ ಏಡೂ ಕಡೆಗಿದ್ದ ಜನ,

"ಯಾವೋನಪ್ಪ ಇವನು? –ಈಟು ಸೊಕ್ಯಾಗಿ ಈಜ ವೋಡೀತಾ ಅವ್ನಲ್ಲ?"... ಅಂತ ಬೆರುಗಾಗಿ ಮೂಗಿನ ಮ್ಯಾಲೆ ಬೆಳ್ಳಿಟ್ಟುಗಂಡು ಗೊಂಬೆಗಳ ತರ ನಿಂತಿದ್ರಂತೆ!...

ಅರ್ದ ಮುಕ್ಕಾಲು ಗಂಟೆ ಸ್ವೇಚ್ಚಾಗಿ ಈಜುತಾ ಇದ್ದೋನು, ಮೀನಿನಂಗೆ ನೀರಿನಲ್ಲಿ ಇಲ್ಲಿ ಮುಳುಗಿ ಅಲ್ಲೆದ್ದು, ಪುನಾ ಮುಳುಗಿ ವಸಿ ಸಮಯ ಯಲ್ಲೂ ಕಾಣಿಸ್ದೇ ಇರ್ವಾಗ, ಆಚೆ ಈಚೆ ದಡದ ಜನ ಮುಳುಗೋದ್ನೋ ಯೇನೊ ಅಂತ ಗಾಬರಿ ಆಗಿದ್ರಂತೆ, ದೂರದಲ್ಲಿ ಪುನಾ ನೀರಿನಿಂದ ಮ್ಯಾಕ್ಕೆ ಕಾನುಸ್ದ ಅವನ ತಲೆ ಕಂಡು ಅವ್ರಿಗೆ ಸಮಾಧಾನ ಆಯ್ತಂತೆ... ಮತ್ತೆ ಈ ಮಾರಾಯ ನೀರಿನಲ್ಲಿಯೆನೇನೊ ಕಸರತ್ತು ಮಾಡ್ತಿದ್ದು, ವಸಿ ವೊತ್ತು, ಸತ್ತ ಹೆಣದಂಗೆ ಅಂಗಾತ್ತ ನೀರಿನ ಮ್ಯಲೆ ತೇಲ್ತಿದ್ದನಂತೆ... ಕಡೀಕೆ ಪುನಾ ಮಕಾಡೆ ಆಗಿ, ಕಯ್ನಲ್ಲಿ ನೀರು ಬಡೀತ ಜೋರು ಜೋರ್ನಿಂದ ಈಜಕ್ಕೆ ಸುರುಮಾಡಿದ್ನಂತೆ...

ಇಂಗೆ ಕುಸಾಮತ್ನಿಂದ ಈಜುತಾ ಈಜುತಾ ಮುಂದು ಮುಂದ್ಕೆ ವೋಯ್ತಾ ಇದ್ದೋನಿಗೆ ಇದ್ದಕ್ಕಿದ್ದಂಗೆ ಏಡೂ ದಡದ ಕಡೆಗಿದ್ದ ಮಂದಿ ಕೂಗಿಕಂಡ್ರಂತೆ:

"ಅದು ನಿರಿನ ಮಡು. ಅಲ್ಲಿ ಸೆಳುತ ಅದೆ. ಆ ಕಡೀಕೆ ವೋಗಬ್ಯಾಡ..."

ಅವರು ಕೂಗು ಆಕದ್ದು ಅಣ್ಣಂಗೆ ಕ್ಯಾಳಿತೊ, ಇಲ್ಲವೊ... ಗಾಚಾರ, ಅಂಗೇ ಮಯ್ಯಿಮ್ಯಾಲೆ ಗ್ಯಾನ ಇಲ್ಲದೇಯ ಈಜುತ ಈಜುತ ಮಡು ಇದ್ದ ಜಾಕ್ಕೇ ವೋಗಿ, ಅಲ್ಲಿ ನೀರಿನ ಸೆಳುತಕ್ಕೆ ಸಿಕ್ಕಿ, ಅದು ಅವನ್ನ ವಳೀಕೆ ಎಳಕಂಡತಂತೆ. ಜಾಗ ಹ್ವಸದು. ಅಣ್ಣಂಗೆ ತಿಳೀನಿಲ್ಲ. ಎಂತಾ ಸುಳೀಗೆ ಸಿಕ್ಕಿದ್ರೂ ಪಾರಾಗೊ ಗಂಡೇಯ. ತಟ್ಟನೆ ಕಾಲ ಇಡುದು ಎಳದಂಗಾಗಿರಬೇಕು. ವಳೀಕೆ ವೊಂಟಡೋಗಿರಬೇಕು...

ಜನ ನ್ವಾಡುತ್ತಲೆ ಇದ್ರಂತೆ. ಈಗ ಹ್ವರೀಕೆ ಬತ್ತಾನೆ, ಆಗ ಹ್ವರೀಕೆ ಬತ್ತಾನೆ ಅಂತ ಬೋ ವೊತ್ತಿಗಂಟ ಆಸೆ ಇಟ್ಟುಗಂಡೆ ನಿಂತಿದ್ರಂತೆ. ಆದ್ರೆ ಏಟೋತ್ತಾದ್ರೂವೆ ಮ್ಯಾಕೆ ಅವನು ಬರದೇ ವೋದೆ ಮ್ಯಾಲೆ, ಗಂಗಮ್ಮ ತಾಯಿ ಅವನ್ನ ವಳೀಕೆ ಎಳಕಂಡ್ಲು ಅಂತ ಖಾತ್ರಿ ಆಯ್ತಂತೆ!

ಆ ಕಿವಿಂದ ಈ ಕಿವಿಗೆ ಸುದ್ದಿ ಓಡಾಡಿ, ಮದ್ವೆ ಅಟ್ಟಿಗೂವೆ ಸುದ್ದಿ ಮುಟ್ಟಿತಂತೆ. ತಕ್ಷಣ ಕೆಂಗನ್ನಪ್ಪ, ಅವ್ನ ನೆಂಟರುಯೆಲ್ಲಾರು ಓಡಾಡಿಕಂಡು ಪೊಲಿಸು ಟೇಸನ್ಗೆ ಕಂಪ್ಲಿಂಟು ಕ್ವಡಾದರ ಜ್ವತ್ಗತೆ, ನಮ್ಮೂರ್ಗೂ ಒಬ್ಬ ಆಳ ಓಡಿಸಿದ್ರು... ಮಾರನೆ ಜಿನ, ನಮ್ಮ ಅತ್ತಿರದ ನೆಂಟರು ಇಸ್ಟರುಯೆಲ್ಲಾರ್ನು ಕರಕಂಡು ತಲಪೋದು ಏಳು ಮದ್ದಿನ್ನವೇ ಆಗಿತ್ತು. ಆವೊತ್ತೆಲ್ಲ ಸಂದೆವರ್ಗೂ ಉಡುಕಿದ್ದಲ್ದೆ, ನಾತ್ರಿನಾಗೂ ಲಾಟೀನು ಬೆಳುಕಿನಲ್ಲೆ ಹೊಳೆ ಉದ್ದಕೂ ಉಡುಕಿ ಉಡುಕಿ ಸಾಕಾಗೊಯ್ತು. ಅದರ ಮಾರನೆಗೆ ಸಿವನಸಮುದ್ರದಿಂದ ತಲಕಾಡ್ನ ವೋಲೀಸು ಟೇಸನ್ಗೆ ಸುದ್ದಿ ಬಂದಿತ್ತು. ನಮ್ಮ ಗೆಜ್ಜುಗಣ್ಣನ ದೇಯಾವ ಕಾವೇರಿ ಹೊಳೆ ನೀರು ಮಾಲಂಗಿ ಮಡುವಿನಿಂದ್ಲೂ ವಳುಗೇ ಉಲ್ಲಿಸಿಕಂಡೋಗಿ, ಸಿವನಸಮುದ್ರದ ಕಟಕಟೇಲಿ ಸಿಕ್ಕಾಕಿಸಿತ್ತು!... ಇಲ್ಲಿ ಟೇಸನ್ನೋರು ನಮಗೆ ಇಸ್ಯ ತಿಳಿಸುದ್ರು. ಆ ಸುದ್ದಿ ವಂದಿಗುಟ್ಟೆ ನಾವಲ್ರೂವೆ ಸಿವನಸಮುದ್ರಕ್ಕೋಗಿ, ಪೊಲೀಸು ಮಾಜರು ಮುಗುದು ಅಣ್ಣನ ದೇಯವ ಅವರು ನಮಗೊಪ್ಪಿಸ್ದ ಮ್ಯಾಲೆ, ಹೊಳೆ ತೀರದಲ್ಲೇಯ ಗುಂಡಿ ತಗುದು, ಅದ್ನ ಅಲ್ಲೆ 'ಒಪ್ಪ' ಮಾಡಾಯ್ತು!... ಅವ್ವ ತನ್ನೆದೆ ಬಡಕತ್ತ,

"ಹಯ್ಯೊ, ನನ್ನ ಕಂಡಂಗೆ ಇಂತಾ ಅಪಮುರ್ತ್ಯು ಕಾದಿತ್ತ... ಕಾವೇರಿ ತಾಯಿ, ಅವನ್ನ ನಿನ್ನೊಳೀಕೆ ತಕ್ಕಂಡು ತುರುಪ್ತಿ ಪಟ್ಯಾ?" ಗೋಳುಗರೀತಿದ್ರೂವೆ, ಅಯ್ಯನ ಕಣ್ಣಲ್ಲಿ ಒಂದು ತೊಟ್ಟುನೀರು ಬಂದಿರನಿಲ್ಲ!... ಅಯ್ಯ ಇಗ್ರದಂಗೆ ಕುಂತೇಇದ್ದ. ಯೆಸ್ಟೊ ವ್ಯಾಳ್ಯ ಕಳುದಮ್ಯಾಲೆ,

"ನನ್ನ ಕಣ್ಣಲ್ಲಿ ಒಂದನಿ ನೀರಾದ್ರೂ ಸುರೀತಾ ಇಲ್ವಲ್ಲ–ಹಯ್ಯೊ, ಈ ಆಳುಗೇರಿ ಕಣ್ಣಾದ್ರು ಯಾಕಿರಬೇಕು–ಬಿರ್ರನೆ ಇಂಗೋಗಬಾರ್ದ?"– ಬೇಲುಗರೆದದ್ದು ಬೇಳುಗರೆದದ್ದೇಯ!...

ಅಣ್ಣನೆ ಇಲ್ಲದಿದ್ದ ಮ್ಯಾಲೆ, ಇನ್ನು ಅವನ ಲಗ್ಣಕ್ಕೆ ಅಂತ ಕೆಂಗಣ್ಣಪ್ನ ಆತ್ರ ಸಾಲ ಮಾಡ್ದ ದುಡ್ನಲ್ಲಿ ನುರು ರಾಪಾಯ ಬುಂಡಮ್ಮಾರಿಗೆ ಕ್ವಟ್ಟು ಮೊದ್ಲೇ ನನ್ನ ಜೀತ ಬುಡಿಸದ್ದಾಗಿತ್ತು. ಇನ್ನೊಂದು ನೂರು ರೂಪಾಯಿ ನಮ್ಮಣ್ಣನ ಸೊರ್ಗ ಸೇರುಸಕ್ಕೆ ಕರ್ಚಾಯ್ತು. ಬುಂಡಮ್ಮಾರಿಗೆ ಅಣ ಇಂದಿರುಗಿಸ್ದಾಗ, ಬುಂಡಮ್ಮಾರದು ಒಂದೇ ವಾಕ್ಸ:

"ನಿನ್ನ ಅಣ ತಕ್ಕಂಡು ನಾಯೇನು ಮಡಿಕೊಳ್ಳಲೊ, ನಿಂಗ?... ನಂಗೆ ಬೇಕಾಗಿರುದು ನಿನ್ನ ಹೈದ–ಲಕ್ಕ... ಇದ್ನ ಈಟು ಜಿನದಿಂದ್ಲೂವೆ ನನ್ನೊಟ್ಟೇಲಿ ಉಟ್ಟಿದ ಕೂಸಿನಂಗೇ ಸಾಕಿವ್ನಿ ಕನೊ. ಸಪ್ಪಟೆ ಮಾತಲ್ಲ. ಬೇಕಾದರೆ ನಿನ್ನ ಹೈದ್ನೇ ಕ್ಯಾಳು" ಅನ್ತಾ ಅನ್ತಾ ಇನ್ನೊಸಿ ಹೊಗೆಸೊಪ್ಪನ್ನೂ ಈಳೆದೆಲೇನೂ ದವಡೆಗೆ ವತ್ತುರಿಸಿಕೊಂಡ್ರು. ಅಯ್ಯನೂವೆ ಅವನು ಕಲಿತ ಬುದ್ದೀನೆಲ್ಲ ಯೆಚ್ಚ ಮಾಡಿದ್ದ. ಅವರ ಅತ್ರ ಆದಾವುದೂ ಬೇಯ್ಲಿಲ್ಲ. ಕಡೀಕೆ ತೊಪ್ಪೆ ತಾರಿಸಿದ ನೆಲದ ಮ್ಯಾಲೆ ಹಾಸಿ ಉದ್ದುದ್ದಕೆ ಬುಂಡಮ್ಮಾರ ಮುಂದೆ ಮನಗಿ, ಕಯ್ಯ ಮುಕ್ಕಂಡು–

"ನನ್ನ ಕಣ್ಣಾಣ್ಗೂವೆ ನಿಮ್ಮಟ್ಟಿ ಬುಡಸ್ತಿರನಿಲ್ಲ, ಬುಂಡಮ್ಮಾರೆ. ಈ ನಮ್ಮುಡುಗನೂ ಇವನ ಅವ್ವನ ಕುಟ್ಟೆ ಯೋಳ್ತಾನೆ ಇರ್ತಾನೆ. 'ಬುಂಡವ್ವಾರು ನನ್ನ ನೀ ನ್ವಾಡಿಕಳಾಕಿಂತ ಸಂದಾಗಿ ನ್ಯಾಡಿಕತ್ತಾರೆ ಕನವ್ವ ಅಂತ! ಅದಕಲ್ಲ ನಾ ಕ್ಯಾಳ್ತಿರಾದು. ನನ್ನ ಇರೀ ಹೈದ ಗೆಜ್ಜುಗನ್ಗೆ ಇರೋದು ಒಂದೆ ಚಪಲ, ಬುಂಡುಮ್ಮಾರೆ. ತಾನಂತೂ ಇದ್ಯ ಕಲೀನಿಲ್ಲ. ತನ್ನ ತಮ್ಮ ಆದ್ರೂವೆ ನಾಕು ಅಕ್ಸರ ಕಲ್ತು ಮುಂದಕೆ ಬರಲಿ, ಅಂತಾವ...ನನ್ನ ಇರೀ ಹೈದ್ನ ಆಸ್ಯ ನೆರವೇರಿಸಿಕಡಾದು ನಿಮ್ಮ ಕಯ್ಯಿಲಿ ಅದೆ..." ಅಯ್ಯ ಬೇಡುತಾನೆ ಇದ್ದ...

ಇದ್ಯ ಕಲಿಯಕ್ಕೆ ಅವರ ಅಟ್ಟಿ ಜೀತದಿಂದ ನನ್ನ ಬುಡಿಸಬೇಕೂಂತ ಇರಾದು ಅನ್ನಾ ಕಾರಣ ಕ್ಯಾಳಿ, ಬುಂಡಮ್ಮಾರ ಉಬ್ಬಿನ ಗಂಟು ಬುಟ್ಟೋಯ್ತು.

"ಓ, ಇದ್ಯ ಕಲುಸಕ್ಕೆ ಇವ್ನ ಜೀತ ಬುಡಸ್ತಾ ಇದ್ದೀಯ?... ಈ ಮಾತ ಮೊದ್ಲೆ ಯಾಕೆ ಯೋಳ್ನಿಲ್ಲ?... ಈಟು ಸಣ್ಣ ಇಸ್ಯಕ್ಕೆ ನಿನ್ನ ದೊಡ್ಡ ಸರೀರವ ಕುಗ್ಗುಸಿ, ತಗ್ಗುಸಿ, ಹ್ಯಾಪಾಯಾಗಿ, ಅಲ್ಲುಕಿರುದು ನೆಲದ ಮ್ಯಾಲೆ ಅಡ್ಡಡ್ಡ ಬಿದ್ದುಕಾಬೇಕಾಗಿತ್ತ?... ಮೊದ್ಲೆ ನ್ಯಾರವಾಗಿ ಯೋಳಿದ್ರೆ ಸಂತೋಷವಾಗಿ ವಪ್ಪುಗತ್ತಿದ್ದೆ. ಈಟೊಂದು ಸತಾಯಿಸ್ತಾನೆ ಇರ್ನಿಲ್ಲ. ಯೇಳೇಳು. ಗಂಡಸು ಅನ್ನುಸಿಕೊಂಡೋನು ಯಾವುದೇ ಇಸ್ಯ ಆದರೂವೆ ಎಣ್ಣೆಂಗಸ್ಗೂ ಕಡ್ಯಾಗಿ ಇಂಗೆ ಬೇತುಕೊಬ್ಯಾಡದು" ಅನ್ತಾ ಅನ್ತಾನೆ ಕ್ವಾಣೆ ವಳಕ್ಕೊದ ಬುಂಡಮ್ಮಾರು ಎಲೇನೂ ಅಡಿಕೇನೂ ತಂದು ನಮ್ಮಿಬ್ಬರ್ಗೂ ಕ್ವಟ್ಟು, "ತತ್ತ ಇಲ್ಲಿ ದುಡ್ಡ" ಅಂತ ಈಸಿಗೊಂಡು, ಅದ್ನ ಎಣಿಸ್ದೇಯ ನಡೀಗೆ ಸೆಕ್ಕಿದ್ದ ಇಮ್ಮಣಿ ಚೀಲಕೆ ತುರುಕ್ತ ಇರಾದ ಕಂಡು, ನಮ್ಮಯ್ಯ–

"ಇದೇನ ಅವಮ್ಮಾರೆ–ದುಡ್ಡ ಲೆಕ್ಕ ವಾಡ್ದೇಯು ಚೀಲಕ್ಕೆ ತುರುಕ್ತಿದ್ದೀಯಲ್ಲಿ?" ಅಂದುದಕೆ ಆ ಮುದಿಕಿ–

"ಸರಿ ಕನೊ, ನಿಂಗ. ನೀ ಯೋಳೋ ಮಾತ ನಾನೂ ವಪ್ಪುದಿ. ಆದ್ರೆ

ನಂಗೆ ಲೆಕ್ಕಾಚಾರ ಮಾಡಕ್ಕೆ ಬರೋಲ್ಲದಲ್ಲ?" – ಅಂದು, ನನ್ನ ಕಡೀಕೆ ತಿರುಗಿ, ಕಣ್ಣಿ ಕಿವುಕಿ, ತುಂಟಾಟದ ನಗ ನಕ್ಕು, ಅಮ್ಯಾಕೆ ಮೊಖ ಬಿಕ್ಕಂಡು ಗಂಬೀರ್‍ವಾಗಿ–

"ನ್ವಾಡೋ ನಿಂಗ. ನಿಯತ್ತಿರೋರ ತಾವು ಈ ಲೆಕ್ಕಾಚಾರ ಗಿಕ್ಕಾಚಾರ ಯಾವುದೂವೆ ಬೇಕಾಗೇ ಇಲ್ಲ. ನೀಯತ್ತಿಲ್ದೆ ಇರೋರತ್ರ ಮಾತ್ರ ಮಯ್ಯೆಲ್ಲ ಕಣ್ಣಾಗಿ ಲೆಕ್ಕ ಮಾಡ್ಟಾಬೇಕಾಯ್ತದೆ... ಒಂದು ಮಾತು ಯೋಳ್ತೀನಿ ಕ್ಯಾಳು. ಸಾಚ ಯಾವಾನು, ನಸ್ಲಹರಾಮ್ ಯವಾನು ಅನ್ನೋದ ಪತ್ತೆ ಮಾಡಾದು ಒಬ್ಬ ಗನಂದಾರಿ ಇಸ್ಯಾವ?... ಒಬ್ಬ ಮನುಸ ನಡದಾಡೋ ರೀತೀಲಿ, ಯದುರ್‍ನಲ್ಲಿ ನಿಂತುಗಂಡು ಮಾತಾಡೋ ವರಸೇಲಿ, ಅವ್ನ ಯೋಗ್ತೇಯ ಅಳೆಯಕ್ಕಾಗಕ್ಕಿಲ್ವ? ಈಗ ತತ್ವ ತಕರಾರು ತಕ್ಕಂಡೇನ? – ನಿನ್ನ ಹೈದ್ನ ನೀ ಕರದಂಡು ವೋಗು. ಅವ್ನು ಇದ್ಯ ಕಲ್ತು ಸಂಪನ್ನಾಗಿ ಬದುಕ್ಲಿ"– ಹರಸಿ, ನಾವಿಬ್ರೂವೆ ಕಯ್ಯಿ ಮುಕ್ಕೊಂಡೆ ಬೀದಿಗೆ ಇಳಿತಿರೋನೂವೆ ಅಟ್ಟಿ ಮುಂಬಾಗಿಲವರ್‍ಗೂ "ಅದ್ರೂವೆ, ನಿನ್ನ ಕಾಣದೆ ಇದ್ರೆ ಸಿಬ್ರಿ ಆಯ್ತದೆ ಕನೊ, ಲಕ್ಕ... ಒಗ್ಗಿದ ಪದಾರ್ತವ ಬುಟ್ಟು ಕಳುಸೋದು ಪರಮ ಕಸ್ಟ.. ಆಗಿಂದಾಗ ಬತ್ತಾ ಇರು. ಈ ಮುದುಕಿ ಬಿದ್ದೋಗೊ ಮರ, ಬೀಸೋಗೊ ಗಾಳಿ ಅಂತ ಮರ್‍ತು ಗಿರ್‍ತು ಬುಟ್ಟೀಯೆ, ಜ್ವಾಕೆ.. ಆಗೀಗ ಬಿಡುವು ಆದಾಗ ಬಂದು, ನನ್ನ ಕಯ್ಯಿ ಕೆಲುಸ ಕಿತ್ಕಂಡು, ಸಾಯ ಮಾಡು–ನಾನೂವೆ ನೀ ಮಾಡ್ದ ಕೇಮ್ಗೆ ಅಸ್ಟೊ ಇಸ್ಟೊ ಕ್ವಟ್ಟೇ ಕ್ವಡ್ತೀನಿ" ಅಂದಿದ್ದರು...

ಕೆಂಗಣಪ್ಪ ಕ್ವಟ್ಟಿದ್ದ ಆರುನೂರು ರೂಪಾಯ್ನಲ್ಲಿ ನುರು ರೂಪಾಯಿ ಅಂಗೋಯ್ತು. ಇನ್ನುಳಿಕೆ ಐನೂರು ರೂಪಯ್ನಲ್ಲಿ ನುರು ರೂಪಾಯಿ ಅಣ್ಣ ಸತ್ತಾಗ ಅದಕೆ ಇದಕೆ ಕರ್ಚಾಗೋಗಿತ್ತು – ಇನ್ನು ಅವ್ವನ ತಾವು ಉಳಿದದ್ದು ನಾನೂರು ರೂಪಾಯಿ. ಅದ್ನ ತಕ್ಕಂಡು, ಅಯ್ಯ ನನ್ನೂ ಕರ್‍ಕಂಡು, ಕೆಂಗಣ್ಣಪ್ನ ಅಟ್ಟಿ ತಾವಿಕೊಕೋಗಿ,

"ಸೋಮಿ–ಕೆಂಗಣಪ್ಪಾರೆ... "ಅಂತ ಅವರ ಅಟ್ಟಿ ಆಚ್ಗೇ ನಿಂತು ಕರೆದಾಗ,

"ಯಾಕೆ ಬಂದ್ಯೋ, ನಿಂಗ?" ಅಂತ ವೊರೀಕೆ ಬಂದೋಳು ಅವ್ನ ಎಡತಿ ಸಿದ್ದಮ್ಮ.

ಕೆಂಗಣಪ್ಪಂಗೆ ಸರ್‍ಯಾದ ಎಡತಿ ಕ್ವಟ್ಟದ್ದ ದ್ಯಾವರು. ಕೆಂಗಣ್ಣಪ್ನ ಸೇರಿಗೆ ಅವಳು ಸವ್ವಾಸೇರು! ಅವಳ ಮುಂದೆ ಅವನೇನಾರ ಬಾಯಿ ಬಿಚ್ಚಕ್ಕೆ ಅಪ್ಪಣೆ ಉಂಟ?– ಯಾವತ್ತೂವಿ ಒಳ್ಳೆ ಉಲಿ, ಉಲಿ ಬಿದ್ದಂಗೆ ಬಿದ್ದು ಬುಡೋಳು!..

ಅವಳ ಕಂಡು, ಈ ಎಂಗಸಿನ ಕುಟ್ಟೆ ಯಾಕೆ ಮಾತು, ಇವಳತ್ರ ಯವಾರ ಸುದ್ದಿಲ್ಲ, ಅಂದುಕಂಡೋಯಾನೊ–

"ಇಂಗೇ ಬಂದೆ, ಸಿದ್ದಮ್ಮಾರೆ..." ಆಡಬೇಕಾಗಿದ್ದ ಮಾತ ಆಯ್ಯ ಇರುಕಿಸಿಕಂಡಿದ್ದ.

ಅವರ ಅಟ್ಟೀಲಿ ಜೀತಕಿದ್ದು, ಈ ಎಂಗಸಿನ ಘಾಟಿನ ಅನುಭೋಗ ಸಂದಾಗಿ ಆಗ್ರಿದ್ರಿಂದ, ನಾನು ಅವಳ್ಗೆ ಮೊಖ ಕ್ವಡದೆ, ಅಯ್ಯನ ಇಂದ್ಕೆ ಅವುತುಗಂಡಿದ್ದೆ. ಬೆಳ್ಳಿ ಡಬ್ಬಿಯಿಂದ ಮೂಗಿನ ಹೊಳ್ಳೆಗಳಿಗೆ ನಸ್ಯ ಯೇರುಸ್ತ,

"ಯಾರೂ ಕೇಮಿಲ್ದೆ ಸುಮ್‌ಸುಮ್ಕೆ ಬರಕ್ಕಿಲ್ಲ ಕನ, ಅದೇನು ಗಂಡರತ್ರ ಯೋಳಬೇಕೂಂತ ಬಂದ್ಯೊ, ಅದ್ನ ನನ್ನ ಕುಟೇ ಯೋಳು, ಪರವಿಲ್ಲ" ಅಂದ್ಲು.

ಅಯ್ಯಂಗೆ ಒಂದು ಚಣ ಯೇನ ಯೋಳಕ್ಕೂ ತೋಚ್ದೆ, ಬಾಯಿ ವೊಲದಿರೋನಂಗೆ ನಿಂತ. ಸಿದ್ದಮ್ಮ ಚೌಕದಿಂದ ಮೂಗ ವರುಸ್ತ,

"ಅದೇನ ಇಸ್ಯ, ಯೋಳಬ್ಯಾಡದ?" ಮನಾ ಕ್ಯಾಳಿದ್ಲು.

ಅಯ್ಯ ತಲೆ ಕೇರಿತ ನಿಂತೇ ಇದ್ದೆ.

ಈಪಾಟಿ ಚಂಡಿಸಿದ್ರು ಸೊಲ್ಲುಯೆತ್ತದೆ, ಯೇನ ಯೋಳಕ್ಕೂ ತಿಳೀದೆ, ಕಣ್ಣು ಕಣ್ಣು ಬುಡ್ತ ನಿಂತಿದ್ದ ಅಯ್ಯನ ಮೊಖ ನ್ವಾಡ್ತ ನ್ವಾಡ್ತ, ಮುದ್ದಿನ್ನದ ವ್ಯಾಳ್ಯದಲ್ಲಿ ನೆತ್ತಿಗೆ ಏರ್ತಾ ಬರೋ ಸ್ವಾಮಿ ತರ, ಕ್ಯಾಣ ಸಿದ್ದಮ್ಮನ ತಲೆಬುಂಡೆಗೆ ಜಟಜಟ್ನೆ ಏರ್ತಾ ವೋಯ್ತು.

"ಅಸ್ಸಿ, ಯೋಳೊ ಇಸ್ಯ ಯಾನೂ ಇಲ್ದೆ ಇದ್ದಮ್ಯಾಗೆ, ಬ್ಯಾತಾಳನಂಗೆ ಇಲ್ಲಿ ಮೊಕ ಮೊಕ ನ್ವಾಡ್ತ ನಿಂತು ಯೇನ ಪರ್ಯೋಜ್ನ?– ಸುಮ್ಕೆ ಬುಡು ನಿನ್ನ ಗಾಡ್ಯ" ಅಂತೇಳಿ, ಇಂದ್ಕೆತಿರುಗ್ತಿರೋನೂವೆ, ಕಳ್ಳಕೊತ್ತಿ ಅಂಗೆ, ಮೆತ್ತಗೆ ಕದೀನ ಮರಿಂದ ಈಚೆಗೆ ಕಡುದ, ಕೆಂಗಣಪ್ಪ.

"ಯಾಕ್ಲ ನಿಂಗ, ಅಮ್ಮಾರು ಕ್ಯಾಳಿದ ಮ್ಯಾಗೆ ಅದೇನು ಇಸ್ಯ ಯೋಳಿಬುಡು" ಅಂದ.

ಎಡತಿ ಮುಂದುಗಡೆ ಕೆಂಗಣ್ಣಪ್ಪ ಕೊತ್ತಿಮರಿ ಆಯ್ತಿದ್ದದ್ದ ನಾನು ನ್ವಾಡಿದ್ದು ಇದೇ ಮೊದಲ ಸರ್ತಿಯೇನಲ್ಲ. ಇಂದ್ಕೆ ಇವರ ಅಟ್ಟೀಲೆ ಜೀತಕಿದ್ದಾಗ, ಈ ನಾಟಕವ ನಾನು ಪರ್ತಿನಿತ್ಯ ನ್ವಾಡ್ತಿದ್ದದ್ದೆ ಅಲ್ವ?...ಎಡತಿ ಎದುರಿಗಿಲ್ದೆ ಇದ್ದಾಗ, ಸಿಕ್ಕುಸಿಕ್ಕುದೊರ ಮ್ಯಾಲೆಲ್ಲ ದಪ್ಪಾನೆ ಮೀಸೆ ತಿರುವ್ತ, ಕಣ್ಣ ಮೇಡರಿಸ್ತಿದ್ದ ಮನುಸ, ಎಡತಿ ಅಟ್ಟಿ ವಳುಗಡೆ ಇದ್ದಾಗ, ವೊರಗಿನ ಜಗಲೀಲಿ ಕುಂತು, ಪರವೂರಿನೊರು ಯಾರಾರ ಬಂದ್ರೆ, ಅವರ ಕುಟ್ಟೆ, ತನ್ನ ಆಸ್ತಿ, ತನ್ನೆತ್ತು ಎಮ್ಮೆ ದನಕರ, ಇವೆಲ್ಲಾದರ ಇಚಾರಾನು ತಪಸೀಲಾಗಿ ಊದಿ, ಕಡೀಕೆ ಗಟ್ಯಾಗಿ ವಳುಗಡೇಲಿರೋ ತನ್ನ ಎಡತಿಗೆ ಕ್ಯಾಳಿಸೋವಂಗೆ, ತನ್ನೆಡತಿ ವಗೆತನದ ಅಚ್ಚುಗಟ್ಟಿ ವೊಗಳ್ತ, ಅವಳು–

"ರಾಜಧಾನಿಯಂತಾ ಎಂಗಸಲು"– ಅಂತ ಬೇತುಕತ್ತಿದ್ದದ್ದ ತಾನು ಅದೇಟು ಸಲ ಕೇಳಿರನಿಲ್ಲ?...

ಸಿದ್ಧಮ್ಮ ಕೆಂಗಣಪ್ಪಂಗೆ ಏಡನೆ ಸಮ್ಮಂದವಂತೆ. ಮೊದಲ್ನೆ ಎಡತಿ ಒಳ್ಳೆಯೋಳಂತೆ. ಆ ಪುಣಾತಿಗ್ತಿತಿ ಇವ್ನ ಜ್ವತೇಲಿ ನೆಟ್ಟಗೆ ನಾಕು ವರುಸ ಸಂಸಾರ ಮಾಡ್ನಿಲ್ಲವಂತೆ. ಈ ಮಾರಾಯನೊ ಊರಿನಾಗೆ ಒಂದು ಪಡ್ಡೆ ಎಣ್ಣು ಕಂಡುದ್ದೆ ತಡ, ಅದರ ತಿಕ ಮೂಸಿಗಂಡು ಓಡಾಡೂ ಜಾತಿ!... ಈವಯ್ಯನ ಚರ್ಯೆ ಕಂಡು ಅಯಮ್ಮ ಕ್ವರತಿ, ಕಡ್ಯಾಗಿ ಮೈಸೂರ್ನ ಚಯದ ಆಸ್ಪತ್ರೆ ಸೇರಿ, ಯಾವತ್ತೊ ಒಂದು ಜಿನ ಸಿವನ ಪಾದ ಸೇರಿಕಂಡಿದ್ದು– ಈ ಯೆಲ್ಲ ಚಮಾಚಾರ್ವ ಅಯ್ಯನೆ ಒಂದು ನಾತ್ರೆ, ನಾನು ನಿದ್ದೆ ಮಾಡ್ತಾ ಅವ್ನೆ ಅಂತ ತಿಳುದು, ಅವ್ವನ ಕುಟ್ಟೆಗುಟ್ಟಾಗಿ ಯೇಳ್ತಿದ್ದದ್ದು ಈಗ ಗ್ಯಾಪನ ಆಗಿತ್ತು...

ಕೆಂಗಣಪ್ಪ ನಸುಗುನ್ನಿ ಅಂಗೆ,

"ಯಾಕ್ಲ ನಿಂಗ, ಅಮ್ಮಾರು ಕ್ಯಾಳಿದ ಮ್ಯಾಲೆ ಬಂದ ಇಸ್ಯ ಅದೇನು ಯೋಳಿಬುಡು" ಅಂದಾಗ, ಅಯ್ಯ ತಡರುಸ್ತ ಬಾಯಿ ಬಿಚ್ಚದ.

"ಕೆಂಗಣಪ್ಪಾರೆ, ನನ್ನ ಇರಿ ಹೈದ್ನ ಲಗ್ನಕ್ಕೇಂತ ನಿಮ್ಮತ್ರ ಸಾಲನೇನೊ ಮಾಡ್ದೆ. ಆದ್ರೆ ಆ ಬಿಸಿಲಮಾರಮ್ಮ ತಾಯಿಗೆ ನಮ್ಮ ವಂಸದ ಮ್ಯಾಲೆ ಅದೇನು ಕ್ವಾಪವೊ ಕಾಣೆ. ತಲಕಾಡ್ಗೆ ನಿಮ್ಮ ಜ್ವತೆ ಬಂದಿದ್ದೋನ್ನ ಆ ಕಾವೇರಿ ವೋಲೆ ತಿಂದಕತ್ತು..." ಅಂತಿದ್ದುದ ಅಲ್ಲಿಗೆ ತುಂಡುಮಾಡಿ,

"ಅದೆಲ್ಲ ಗ್ವತ್ತೆ ಅದಲ್ಲೊ, ನಿಂಗ... ಅದು ಅವನ ನಶೀಬು... ಮುಂದ್ಕೆ ನಮ್ಮ ಅಣದ ಇಸ್ಯ ಯೆಂಗೆ ಚುಕ್ತಾ ಮಾಡಬೇಕು ಅಂತೀಯೆ, ಅದು ಹ್ಯಾಳಪ್ಪ–" ಕೆಂಗಣಪ್ಪ ಬ್ಯಾರೆ ಮಾತ ಕಿವಿಗೆ ಅಕ್ಕಳ್ಳದೆ ಮುಖ್ಯ ಇಸ್ಯಕ್ಕೇ ಇಳುದಿದ್ದ...

ಅಯ್ಯ ನಾನೂರು ರೂಪಾಯಿ ಅಂಗಿ ಸಿಕ್ಕಿದ್ದ ಕಿಸ್ಯಿಂದ ತಗದು ಎಣಿಸಿ ಎಣಿಸಿ ದೂರದಿಂದ ಕೆಂಗಣಪ್ನ ಕಯ್ಯಿಗೆ ಆಕಕ್ಕೊದಾಗ, ಉಬ್ಬ ಗಂಟಾಕಿ, ಉರಿಮಾರಿಯಾಗಿ ನಿಂತಿದ್ದ ಅವ್ನ ಎಡತಿ ಸಿದ್ದಮ್ಮ ಸುಮ್ಕೆ ಬಿಗಿಯಾಗಿ ಕಯ್ಯ ನೀಡುದ್ದೇ ಸಮ, ಕೆಂಗಣಪ್ಪ ಮೊಖ ಸುಂಡೋಗಿ ತನ್ನ ಕಯ್ಯ ಕೆಳುಕ್ಕಿಳುಸ್ದ...

ಕಯ್ಯಿಗೆ ಬಿದ್ದ ನೋಟುಗಳ ತಾನೂ ಒಂದು ಸರ್ತಿ ಎಣುಸಿ,

"ಇದ್ಯಾನೋ ನಿಂಗ– ನಮ್ಮೋರು ನಿಂಗೆ ಕ್ವಟ್ಟಿರಾದು ಆರುನೂರು ರೂಪಾಯಿ ಅಲ್ವೇನ್ಲ?" ಸಿದ್ದಮ್ಮ ಉಬ್ಬ ಎತ್ಕಂಡು ಕ್ಯಾಳಿದ್ಲು...

"ಸಾಜ ಕನ್ರವ್ವ. ನಿಮ್ಮೇಜಾನ್ರು ನಂಗೆ ಕ್ವಟ್ಟಿದ್ದು ಆರುನೂರು ರೂಪಯೇಯ. ಕ್ವಟ್ಟಿದ್ದ ದುಡ್ಡು ಇಲ್ಲ ಅಂತ ಅದ್ಯಾವ ಬಾಯ್ಲಿ ಯೋಳ್ಲಿ? ಆದ್ರೆ,

ಈ ನಮ್ಮಸಣ್ಣ ಹೈದ್ನ..." ಅನ್ತಾ, ಅವ್ನ ಇಂದ್ಕೆ ನಾಯಿಮರಿಯಾಗಿ ನಿಂತಿದ್ದ ನನ್ನ ಮುಂಡ್ಕೆಳುದು ತೋರುಸ್ತ "ಬುಂಡಮ್ಮಾರ ಆಟ್ಯಿಂದ ಜೀತ ಬುಡಸಕ್ಕೆ ಅವ್ರು ಕ್ವಟ್ಟಿದ್ದ ಸಾಲದ ದುಡ್ಡು ನೂರು ರೂಪಾಯಿ ವಾಪ್ಸು ಮಾಡಬೇಕಾಯ್ತಲ್ಲ" ಅಂದುದೆ ತಡ, ಸಿದ್ದಮ್ಮ ಹಳ್ಳುಬೀಜ ಸಿಡಿಯೋ ಪರಿ ಸಿಡಿದ್ದು:

"ನೀನೂ ಒಳ್ಳೆ ಮನೆತಾನಸ್ತ ಕನೊ... ಅಲ್ಲ, ನಮ್ಮತ್ರ ಜೀತಿಕಿದ್ದ ಉಡುಗ್ನ ಅಯಿವತ್ತು ಎಚ್ಚಾಗಿ ಕ್ವಟ್ಲೂಂತ ನಮ್ಮಟ್ಟಿ ಬುಡುಸಿ ಅವಳಟ್ಟಿಗೆ ಕೂಡ್ದೆ. ಈಗ ಲಗ್ಣಕೇಂತ ರೂಪಾಯ ನಮ್ಮತ್ರ ಕಿತ್ಕಂಡು ಅವಳಟ್ಟಿ ಬುಡುಸ್ದೆ– ಇದ್ಯಾವ ಯವಾರ್ವ?... ತಗಿ, ತಗಿ: ನಾ ವಪ್ಪನಿಲ್ಲ." ಅಯ್ಯ ಜರ್ರನೆ ಇಳುದೋಗಿ,

"ಯಾನ ಮಾಡಲ್ವ?– ಸತ್ತು ಸೊರ್ಗ ಸೇರ್ದ ನಮ್ಮ ಇರಿ ಹೈದಂದು ಒಂದೇ ಅಸೆ. ತಾನಂತೂ ಓದು ಬರಾವು ಕಲೀನಿಲ್ಲ. ನಮ್ಮ ವಂಸದಾಗೆ ತನ್ನ ತಮ್ಮಂಗಾದ್ರೂವೆ ಇದ್ಯ ಕಲಿಸುವಾಂತ ಅಪೇಕ್ಸೆ ಪಟ್ಟ... ಆ ಗಂಗಾಬವಾನಿ ಅವನ್ನೇ ನುಂಗಾಕಿ ಆಸೆ ಮ್ವಾಸ ಮಾಡಿದ್ಲು... ಈ ಹಾಳು ಲೋಕದಲ್ಲಿ – ಇದ್ದರೂ ಕರ್ಚು ವೋದರೂ ಕರ್ಚು... ಯನ ಮಾಡೀರಿ?– ನಾನು ನಂಟ್ರು ಇಸ್ಟ್ರು ಯೆಲ್ಲಾರನೂವೆ ತಲಕಾಡ್ಗೆ ಕರಕಂಡೋದ್ದು, ಅಲ್ಲಿ ಹೈದ್ನ ಒಪ್ಪ, ಅಲ್ಲಿಂದ ಇಂದ್ಕೆ ಬಂದು ನೆಂಟರಿಸ್ಟರ್ಗೆ ಊಟ... ಒಂದ, ಏಡ... ಕರ್ಚಿನ ಮ್ಯಾಲೆ ಕರ್ಚಾ ಒಂದು ನೂರು ರೂಪಾಯಿವರ್ಗೂವೆ ಕಯ್ಯಿ ಬುಡ್ತು... ಒಟ್ಟು ಯೆಲ್ಲಾ ಜಮಾ ಮಾಡುದ್ರೆ ಇನ್ನೂರು ರೂಪಾಯಿ ಆಗ್ನಿಲ್ಲ?– ನೀವೇ ಕೂಡಿ ನ್ವಾಡಿ..." ಅಂದದ್ದು ಕ್ಯಾಳಿ, ಮೊಖವ ಒಂದು ತರಾಗತ್ನಲ್ಲಿ ಯೆತ್ಕಂಡು,

"ಯಾವ ಘನಂದಾರಿ ಲೆಕ್ಕಚಾರ್ವ ಇಲ್ಲಿರಾದು?... ಉಡುಗ್ನ ಜೀತದ ದುಡ್ಡು ತಿರುಸಕ್ಕೆ ನೂರು ರೂಪಾಯಿ. ನಿನ್ನಿರೀ ರೈದ್ನ ಸಾವಿನ ಕರ್ಚಿಗೆ ನೂರು ರೂಪಾಯಿ... ಏಡೂ ಸೇರಿ ಇನ್ನೂರು ಆಯ್ತಲ್ಲ... ಊ, ಅದಿರ್ಲಿ. ಈಗ ನನ್ನ ಕಯ್ಯಿಗೆ ನೀನಿಕ್ಕಿರಾದು ನಾನೂರೆ ರೂಪಾಯಿ. ಇನ್ನುಳುಕೆ ಇನ್ನೂರು ರೂಪಾಯ ಯೆಂಗೆ ತೀರುಸದೂಂತ ಮಾಡ್ಕಂಡಿದ್ದೀ?" –ಕೊಸಾರ್ನೆ ಕ್ಯಾಳಿದ್ಲು ಸಿದ್ದಮ್ಮ. ಅದ್ಕೆ ತಲೆ ಕೆರೀತ ಅಯ್ಯ ದನಿಯ ಮೆತ್ತಗೆ ಮಾಡಿ ಉಸುರ್ದ:

"ಇಲ್ನೋಡಿ. ನಾನಿನ್ನೂ ಗಟ್ಟಿಮುಟ್ಟಾಗಿವ್ನಿ. ಇನ್ನುಳುಕೆ ಇನ್ನೂರು ರೂಪಾಯ್ಗೂವೆ ಅದೇನು ದರುಮದ ಬಡ್ಡಿ ಆಕ್ಕತೀರೊ ಅಕ್ಕನ್ನಿ. ನಾನು ಮಯ್ಯಿ ಮುರುದು ಕುಲಿ ಕಂಬಳ ಮಾಡಿ ಗೇದು ನಿಮ್ಮ ಅಣಕೆ ಚೆಕ್ಕಾಸೂ ಲೋಪ ಬರದಂಗೆ ತೀರುಸ್ತೀನಿ."

ಈ ತಾವಿಗಂಟ ಸುಮ್ಕೆ ಕ್ಯಾಳ್ತ ನಿಂತಿದ್ದ ಕೆಂಗಣಪ್ಪ,

"ಅದೆಲ್ಲಾದಾದೊ ನಿಂಗ, ಆ ತಾವಿಗಂಟ ಕಾಯಕ್ಕಾದಾತ?" ಅಂದ.

ಸಿದ್ದಮ್ಮನಂತೂ ಗುಡುಸಾಗೇಯ,

"ಕಾಯೊ ಗೀಯೊ ಮಾತೆಲ್ಲ ಯಾಕ?... ಗಮ್ಮನ ಈಗ್ಲೆ ಯೆಂಗೆ ಫೈಸಲ್ ಮಾಡ್ಬೇಕು ಅನ್ನಾದು ವಸಿ ಯೋಚ್ನೆ ಮಾಡು." ತಾಕೀತು ಮಾಡಿದ್ಲು.

"ನಾನಿನ್ನೇನ ಯೋಚ್ನೆ ಮಾಡಾನೆ?... ಇದ್ನೆ ಯೋಚ್ನೆ ಮಾಡ್ತ ಕುಂತುಗಳಾಕೆ ನನ್ನ ತಾವು ನಿಮ್ಮ ಅಳೆ ಎಕ್ಕಡವೂ ಉಳುದಿಲ್ಲ"– ಅಯ್ಯ ಪೇಚಾಡ್ದ.

ಆಗ ಕೆಂಗಣಪ್ಪ ಚುಕಾಯ್ಸಿ,

"ಒಂದು ಕೆಲ್ಸ ಮಾಡೋ, ನಿಂಗ. ನುರು ರೂಪಾಯ್ಗೆ ನಿಮ್ಮೀ ಹೈದ್ನ ನಮ್ಮ ತಾವು ಚೀತಕ್ಕಿಡು. ಉಳಿಕೆ ನುರು ರೂಪಾಯಿ ನೀನು ಕೂಲಿ ಕಂಬಳ ಮಾಡಿ ತೀರುಸು" ಅಂದುದಕ್ಕೆ, ಸಿದ್ದಮ್ಮ ಸಿಡಾರ್ನೆ–

"ಅಸ್ಸಿ, ಇದ್ಯಾವ, ಇದ್ಯಾವ ಚಂದಕೆ ಮಾತಾಡಿ?,,,, ಈವಯ್ಯಂಗೆ ಯಾವಾಗ ನ್ವಾಡು, ಸಣ್ಣ ಹೈಕಳೇ ಆಗಬೇಕು!.... ಅದ್ಯಲ್ಲ ಬ್ಯಾಡಕನೊ ನಿಂಗ. ನೀನೆ ನಮ್ಮ ತಾವು ಇದ್ದುಬುಡು, ವರ್ಸಕೆ ನೂರೈವತ್ತರಂಗೆ ತೀರುಸ್ಕತ್ತೀನಿ" ಅಂದುಬುಟ್ಲು.

ನಾನು ತಿರುಕ್ಕಂಡು ಅಯ್ಯನ ಮೊಖ ನ್ವಾಡ್ದೆ. ಅದು ಸಟ್ನನೆ ಸೊರಗೊಗಿತ್ತು. ಕಣ್ತುಂಬ ಬೆಪ್ಪು ಮೆತ್ತಿಗಂಡಿತ್ತು. ಆ ಅನ್ನದೆ ಊ ಅನ್ನದೆ ಗೊಂಬ್ಯಾಗಿ ನಿಂತಿದ್ದ.

"ಬ್ಯಾಗ ಬ್ಯಾಗ ಯೋಳಪ್ಪ. ವಳುಗೆ ನಂಗೆ ಅಟ್ಟಿ ಕೆಲ್ಸ ಮಸ್ತಾಗಿ ಇಟ್ಟಾಡ್ತದೆ." –ಸಿದ್ದಮ್ಮ, ಆತುರಿಸಿದ್ಲು.

ಅಯ್ಯ, ಯೇನೋ ಯೋಳಕ್ಕೊಯ್ತಾನೆ, ಸುಮ್ಮಕಾಯ್ತಾನೆ, ಯೇನೋ ಯೋಳಕ್ಕೊಯ್ತಾನೇ, ಸುಮ್ಮಕಾಯ್ತಾನೆ...

ಪುನಾ ಸಿದ್ದಮ್ಮ–

"ಅದೇನು ಬಾಯಿ ಬುಡಪ್ಪ..." ಪುಸಲಾಯಿಸಿದ್ಲು.

"ಉ. ಇನ್ನೇನ ಮಾಡಾದು?– ನಾನೇ ಇರ್ತೀನಂತೆ. ವರುಸಕೆ ಇನ್ನುರು ಮಾಡುಕನ್ನಿ."– ಅಯ್ಯ ಬಿಕ್ಕಟ್ನಿಂದ ಈ ಮಾತ ವೊರಾಕಿದ್ದ.

ಆದರೆ ಸಿದ್ದಮ್ಮ ವಪ್ಪಬೇಕಲ್ಲ... ತನ್ನ ಕಯ್ಲಿ ಆಗಿದ್ದ ಬಂಗಾರದ ಪೌಚಿ ತಿರುವ್ತ,

"ನನ್ನ ತಾವು ಇರಾದು ಒಂದೇ ಮಾತು– ಒಂದು ತುರುಬಿಗೆ ಒಂದೇ

ಊವು ಅನ್ತಾರಲ್ಲ, ಅಂಗೆ!.... ಸುಮ್ಕೆ ವಪಿಗಂಬುಡು" ಅಂದ್ಲು.

ಅಯ್ಯನ ಕಣ್ಣಲ್ಲಿ ನೀರು ಕಿತ್ತುಗತ್ತು

"ನಾ ವಪ್ಪಿಗಂಡ್ರೆ, ಇನ್ನೂ ಆಯಿವತ್ತು ರೂಪಯಿ ಕೊರೆ ಉಳುದೇ ಉಳುಕತ್ತದೆ. ಆ ಮ್ಯಾಕೆ ನನ್ನ ಹೈದ್ನ ಮಟಕ್ಕೆ ಸೇರಿಸಾದು ಯೆಂಗೆ?" =– ತನಗೆ ತಾನೆ ಮಾತಾಡೋನ ತರ ಅಂದ.

ಸಿದ್ದಮ್ಮ ಬೇಜಾರ್ನಿಂದ ಆಕಳಿಸ್ತ,

"ಹಯ್ಯೋ, ನಿಂಗೊಂದು ಉಚ್ಚು. ಇವಂಗೆ ಇದ್ಯ ಕಲುಸಿ, ಇವ್ನು ಅದ್ಯಾವ ರಾಜ್ಯ ಆಳಬೇಕಾಗಿದ್ದದು?... ಬ್ರಾಂತು ಬ್ರಾಂತು... ಇವುನ್ನೂ ಯಾವುದಾರೂ ಅಟ್ಟಿಗೆ ಸೇರುಸಿ, ಆ ಉಳುಕೆ ಅಯಿವತ್ತ ತಂದ್ವಕಡು. ನಿನ್ನ ಸಾಲವೂ ಒಂದೇ ವರುಸಕೆ ತೀರೋಯ್ತದೆ." –ಖಡಕ್ಕಾಗಿ ಅಂದು, ಇನ್ನೊಂದು ಅರೆಗಳಿಗ್ಯೂ ಅಲ್ಲಿ ನಿಲ್ದೆ ಅಟ್ಟಿ ವಳೀಕೆ ನಡೀತಿದ್ಲು. ಕೆಂಗಣಪ್ಪನೂವೆ "ಅಂಗೇ ಮಾಡ್ಲ" ಅಂದೋನು ಎಡತಿ ಇಂದಿಂದೇಯ ವೊಂಟೋದ.

ಅಯ್ಯ, ಮುಂದ್ಕೇನು ಮಾಡೋದು ತೋಚ್ದೆ ಕಲ್ಲುಪ್ರತುಮ್ಯಾಗಿ ನಿಂತೇ ಇದ್ದ. ಕಣ್ಣಿಂದ ಗಡಿಗೆ ನೀರ ಬೊಗ್ಗಿಸ್ದಂಗೆ ಲೊಳಲೊಳ್ನೆ ನೀರು ಸುರಿಯಕ್ಕೆ ಮುಟ್ಟುಗತ್ತು. ನಂಗೂ ಅಳ ಬಂತು. ಜೋರ್ನಿಂದ ಅಳಕ್ಕೆ ಸುರು ಮಾಡ್ದೆ. ಅಯ್ಯ, ನನ್ನ ತಬ್ಬಿಕಂಡು–

"ಹಯ್ಯೋ, ನನ್ನ ಕಂದ–ನೀನು ಓದು ಬರಾವು ಕಲ್ತು, ದೊಡ್ಡ ಮನುಸ ಅನ್ನಿಸಿಕಾಬೇಕು– ಅಂತ ನಿನ್ನಣ್ಣ ನಿನ್ನ ಮ್ಯಾಲೆ ಇಟ್ಟುಕಂಡಿದ್ದ ಆಸೆಯೆಲ್ಲಾನೂವೆ, ನಿಮ್ಮಣ್ಣನ ಜ್ವತೆಗೇಯ ಆ ಹಾಳು ಹೊಳೆ ಕ್ವಚ್ಚಿಗಂಡೋಯ್ತಲ್ಲೊ..." –ದುಕ್ಕುಡಿಸಿ ದುಕ್ಕುಡಿಸಿ ಅತ್ತ...

ಗುಡ್ಲಿಗೆ ಬಂದು ಅವ್ವಂಗೆ ನಡುದ ಸಂಗ್ತಿ ತಿಳುಸ್ದಾಗ–ಚೌಡಿ, ಬಿಸಿಲ ಮಾರಮ್ಮ, ಜಡೆಮಾನಿ, ಈ ಯೆಲ್ಲಾ ದ್ಯಾವರಗಳ್ಗುವೆ ಅವಳು ಸ್ಯಾಪ ಆಕಿದ್ದೂ ಆಕಿದ್ದೇ:

"ಈ ಹಾಳು ದ್ಯಾವರುಗಳ ನಂಬುಕಂಡು ನಾವು ಕೆಟ್ಟೋ... ನಮ್ಮ ವೊಟ್ಟೆ ಮೂಟ್ಟೆ ಕಟ್ಟಿ, ಈ ಹಾಳು ದ್ಯಾವರುಗಳ ತುರುಪ್ತಿಗೆ ಅದೇಟು ಕೋಳಿ ಕುರಿಗಳ ಕಡ್ದು ಆಕಿದೋ, ಯಾನು ಕತೆ?... ಅವ್ನೆಲ್ಲ ತಿಂದು ತೇಗಿ, ಈಗ ಸುಮ್ಕೆ ಕಣ್ಮುಚ್ಚಿ ಕುಂಡಾಗಿ ಕುಂತವ್ರಲ್ಲ?.... ನಮ್ಮ ಕಸ್ಟಕೆ ಆಗದೇ ಇದ್ದಮ್ಯಾಗೆ, ಈ ಹಾಳು ದ್ಯಾವರುಗಳ ಸಾವಾಸ ಇನ್ನು ನಮಗ್ಯಾಕ?..." ಅಂತ ಪ್ರಲಾಪ ಮಾಡ್ತಾ ಇದ್ಲು. ಆಗ ಅಯ್ಯ,

"ನಾವು ಇಂಗೆ ಅಳ್ತಾ ಕುಂತರೆ, ಯವ ಸುಕವ?... ನಾನು ಜೀತಕೆ ಇರಬೇಕಾಯ್ತಲ್ಲ ಅಂತಾನ ನಾ ಚಿಂತೆ ಮಾಡಕ್ಕಿಲ್ಲ, ಆದ್ರೆ, ನಮ್ಮ ಲಕ್ಕನ ಇಂದ್ಕೆ ಆ ಮಟದ ಉಪಾದಯ್ ಯಾನೋ ನೆಪ ತಕ್ಕಂಡು ಮಟ ಬುಡಸಿದ್ದ. ಈಗ ಪುನಾ ಮಟ್ಟಕ್ಕೆ ಸೇರುಸಾವ, ಬ್ಯಾರೆ ಉಪಾದ್ಯ ಬಂದವ್ನೆ ಅಂದರೆ– ಈಗ ಅನದ ಉಪಾದಿ ಅಗುತುಕಂಡದೆ!... ಇದೇ ನನ್ನ ಮಿದ್ಲೆ ಕೆಡುಸ್ತಾ ಇರಾದು" ಅಂತ ನನ್ನ ಇಸ್ಯ ತಕ್ಕಂಡ.

ಅವ್ವ, ಉಸ್ ಅಂತ ಉಸುರು ಬುಟ್ಟು–

"ಬಾಳಾಟ– ಉದ್ದಕ್ಕೂ ನಮ್ಮಿಬ್ಬರ್ಗೂವೆ ಯಾರಂತರಲ್ಲೂ ನಸೀಬ ತರನಿಲ್ಲ. ಅದು ಯೆಲ್ಲಾರ ಹಾಳುಬಿದ್ದೋಗ್ಲಿ ಅಂದ್ರೆ, ಈ ಎಲೆ ವಯಸ್ನಲ್ಲೆ ನಮ್ಮ ಲಕ್ಕನ ಅಣೇಲಿ ಇಂಗು ಬರದು ಬುಡಾದ..." ಅಂತ ಸೋಕ ಮಾಡ್ತಾನೆ ಇದ್ಲು

ಏಡು ನಾತ್ರಿ–ಯಾನು ಮಾಡಾದು? ಯಾನು ಮಾಡಾದು? ಅನ್ನಾ ಚಿಂತ್ಯೆ ನಮ್ಮೆಲ್ಲಾರ ನಿದ್ದೆ ಕೆಡುಸಿತ್ತು. ಅಳ್ತ ಅಳ್ತಾನೆ ಅವ್ವ,

"ಬ್ಯಾರೆ ಉಪಾಯ ಯಾನ ಈಗಿರಾದು?... ಆ ಸಿದ್ದಮ್ಮಾರ ಮತನೂ ತಗದಾಕೊ ಅಂಗಿಲ್ಲ. ಅಂಗೇ ಯೋಚ್ಣೆ ಮಾಡುದ್ರೆ, ನಮ್ಮ ಲಕ್ಕದ ದೊಡ್ಡ ಚಾಕರಿ ಸಿಕ್ಕೊವೊಟು ಓದಿಸಕ್ಕೆ ನಮ್ಮ ತಾವೇನು ಗೆಪ್ಪೆ ಇದ್ದಾತ?... ಆ ಇದ್ಯದ ಮನೆ ಕಿಸಾಂತರಾಯ್ತು. ಈಗ ಆ ಅಯಿವತ್ತು ರೂಪಾಯ ವೊಂದಿಸಾದೆಂಗೆ?"– ಪ್ರಸ್ನೆಯೆತ್ತಿದ್ಲು.

ಅಯ್ಯನ ಬುದ್ಧಯೂ ವೊಟು ದೂರ ವೋಗಿ ನಿಂತೋಗಿತ್ತು.

"ಇನ್ನೇನ ಮಾಡಾದು?– ಲಕ್ಕನ ಬುಂಡಮ್ಮಾರ ಅಟ್ಟೀಲೆ ಪುನಾ ಜೀತಕಿರುಸಿ, ಅಯಿವತ್ತು ರೂಪಾಯಿ ಈಸ್ಕಂಡು ಆ ಕೊರೆ ತೀರುಸಿಬುಡಾದು" ಅಂದಿದ್ದ ಅಯ್ಯ.

ಅವ್ವಂಗೆ ವಪ್ಪಿತ ಅಗ್ನಿಲ್ಲ ಆ ಮಾತು.

"ತಿರುಗ ನನ್ನ ಮಗನ ಜೀತಕಿರುಸಕ್ಕೆ ವಪ್ಪಕ್ಕಿಲ್ಲ ನಾನು...." ಅಟಾನೆ ಮಾಡಿದ್ಲು!

"ಯಾರ ಮುಂದ್ಯಾ ನಿನ್ನಟ? –ಅಣದ ಯೆದುರ್ಗೆ ನಿಂತು ಗುದ್ದಾಡಕ್ಕೆ ಯಾವ ಬಡ್ಡೀ ಹೈದನಿಗೆ ಸಾದ್ಯ?... ಸುಮ್ಕೆ ಯಾಕ ಚಪಲ?– ನಾಳೆ ಸಂದೆಗೆ ಬುಂಡಮ್ಮಾರ್ನೆ ವೋಗಿ ಕ್ಯಾಳಿಬುಡಾದು"– ಅಯ್ಯ ಈ ಸಲ ಕೋಲ್ಪಿನಲ್ಲಿ ತೀರ್ಪು ಕ್ವಟ್ಟಂಗೆ ಯೋಳ್ದ...

ಆ ತೀರ್ಮಾನಕ್ಕೆ ನಮ್ಮ ಗುಡ್ಲೆಲ್ಲ ತಲೆಬಾಗಿ ವಪ್ಪಿಗಂಡಿತ್ತು...

ಮಾರ್ನೆ ಬೆಳಿಗ್ಗೆ ನಾನು ಕಿಸ್ಣಸಾಸ್ತ್ರಿಗಳ ತ್ವಾಟಕ್ಕೆ ಕಂಬಳಕ್ಕೊಗಿದ್ದೆ... ಬುಂಡಮ್ಮಾರ ಅಟ್ಟಿ ಜೀತ ತೆಪ್ಪಿದ ಜಿನದಿಂದ್ಲೂವೆ ನಾನು ಸಾಸ್ತ್ರಿಗಳ ತ್ಯಾಟಕೇ ಇಸೇಸ್ವಾಗಿ ಕೂಲಿಕಂಬಳಕ್ಕೆ ವೋಯ್ತಿದ್ದದ್ದು. ಸಾಸ್ತ್ರಿಗಳೂವೆ, ನಾನು ಕೆಲುಸದಲ್ಲಿ ತೋರ್ತಿದ್ದ ಮುತುವರ್ಜಿ ಕಂಡು ತ್ವಾಟಕೆ ಬಂದೋರನ ಸಂಗಾಟ "ಈ ಹೈದ್ನ ಕೆಲ್ಸ ನಂಗೆ ತುಂಬಾ ಇಡುಸ್ತು... ದಾನ ಧಡಿಯರೂ ಇವನ ಸಮ ಕೆಲ್ಸ ಮಾಡನಾರ್ರು"– ಅಂತ ಯೋಳಿ, ನನ್ನ ಮೆಚ್ಚಿಗಂಡಿದ್ರು...

ಅವೊತ್ತು ಕೆಲ್ಸಕ್ಕೆ ಬತ್ತೀನಿ ಅಂದಿದ್ದ ಕೂಲಿ ಆಳುಗಳು, ಬ್ಯಾರೆ ತಾವು ಕಂಬಳಕೋಗಿ ಸಾಸ್ತ್ರಿಗಳ್ಗೆ ಗಸ್ತು ಕ್ವಟ್ಟಿದ್ರು, ಆಗ ತ್ವಾಟದಲ್ಲಿ ಸಾಸ್ತ್ರಿಗಳು ನಾನು ಏಡು ಆಳೇಯ. ಅವೋತ್ತೆ ಮೂರು ವರುಸಕೆ ಅತ್ತತ್ರ ಬೆಳುದ ಈಳ್ಯದೆಲೆ ಹಂಬ, ಅಡಿಕೆಮರದ ಕೆಳುಗೆ ಗುಂಡಿ ತೋಡಿ, ಅದರೊಳೀಕೆ ಆಕಬೇಕು ಅನ್ನಾದು ಸಾಸ್ತ್ರಿಗಳ ಇರಾದೆ... ಮನಸ್ಸಿಗೆ ಬಂದ್ದ ಯೇನೇ ತೊಂಟಿ ಬಂದರೂವೆ ಮಾಡೇ ಮುಗಸ್ತೀನಿ ಅನ್ನಾ ಸೊಬಾವ ಅವರದ್ದು!...

"ಈ ಅಡಿಕೆಮರದ ಬೊಡ್ಡೆಗೆ ಗುಂಡಿ ತೋಡ್ತೀಯೇನ್ಲ?" ಕ್ಯಾಳಿದ್ರು.

"ಆಗ್ಲಿ" ಅಂದಿದ್ದೆ ನಾನು.

"ಹಂಗಾರೆ ಅಡಿಕೆಮರದಿಂದ ಹಂಬ ನಾನಿಳುಸ್ತೀನಿ. ನೀನು ಒಂದಡಿ ಆಳಕೆ ಗುಂಡಿ ತೋಡು ಮತ್ತೆ" ಅಂದ್ರು.

"ನಾನು ಹಲ್ಲೇಕರ ಆಗಿ ಓಡಾಡ್ತ, ಗುದ್ಲಿ ಹಾರೆ ತಕ್ಕಂಬಂದು ಗುಂಡಿ ಅಗೆಯಕ್ಕೆ ಸುರುಮಾಡ್ದೆ. ಸಾಸ್ತ್ರಿಗೊಳು–ನನ್ನೊಂದಿಗೆ ಅಂದಂಗೆ ಬಿದಿರೇಣಿ ತಂದು ಹಂಬ ಇಳುಸ್ದೆ– ಇನ್ನೊಂದು ಅಡಿಕೆಮರದ ಅಡೀಲಿ ತಾವೋವೆ ಗುಂಡ ತಗಿಯಕ್ಕೆ ಮುಟ್ಟುಗಂಡ್ರು...

ನಾವು ಏಡಾಳು ಸೇರಿ ಏಳೆಂಟು ಗುಂಡಿ ತಗುದಾಗಿತ್ತು. ಸಾಸ್ತ್ರಿಗಳು ನನ್ನ ಕರುದು,

"ಲಕ್ಕ, ಬಾರೊ ಇಲ್ಲಿ, ಆ ಬಿದಿರೇಣಿ ತಲ್ಲಿಕಂಡು ಬರಾವ" ಅಂದಿದ್ರು.

ಏಡು ಆಳೂವೆ ಕಯ್ಯಾಕಿ ವೋಟು ದೂರದಲ್ಲಿದ್ದ ಬಿದಿರೇಣಿಯ ನೂಕ್ತ ನೂಕ್ತ ಅವರು ಯೋಳ್ದ ಜಾಕ್ಕೆ ತಂದೊ. ಸುಮಾರು ಇಪ್ಪತ್ತು ಇಪ್ಪತ್ತೈದು ಅಡಿ ಎತ್ತರ ಇತ್ತು ಆ ಬಿದಿರೇಣಿ. ಅದ್ರ ಇಂದ್ಕೆ ತಿಕಡಿ ಕಾಲು. ಆ ಬಿದಿರೇಣಿಗೆ ಒಂದೊಂದು ಮೊಳ ಅಂತರ್ಕೆ ಒಂದೊಂದು ಕಾಲು. ಅದರ ಮ್ಯಾಕ್ಕೆ ಸರಸರ ಏರೋದ ಸಾಸ್ತ್ರಿಗೋಳು ಬಲಿತಿದ್ದ ಹಂಬ ಇಳುಕಿದಾಗ, ಅಸುರು ಹಂಬು ಜಾರದಂಗೆ, ಬಾಳೆ ನಾರ್ನಿಂದ ಅರ್ದಡೀಗೆ ಒಂದು ಕಟ್ಟು, ಇನ್ನೊಂದೆರ್ದ

ಅಡೀಗೆ ಇನ್ನೊಂದು ಕಟ್ಟು–ಇಂಗೆ ಅಡಿಕೆಮರಕೆ ಬಿಗೀತಾ ಬಂದ್ರು... ಬಲಿತಿರೊ ಕಡ್ಡಿ ಕಾಣೆಡ್ತು. ಕಟ್ಟು ಬಿಗುದು ನಿಲಿಸಿದ್ರು ಅಲ್ಲಿಂದಾಚೆ ಹಂಬಿನ ತುದಿಗೆ ಮೂರು ನಾಕು ಅಡಿ ಬುಟ್ಟು, ಹಗ್ಗ ಕಟ್ಟಿದ್ರು... ಯಾಕೆ ಹಂಗೆ ಹಗ್ಗ ಕಟ್ಟಿದಿರಿ ಅಯ್ಯ ಅಂತ, ಯೆಲ್ಲ ಮುಗುದಮ್ಯಾಲೆ, ನಾ ಕ್ಯಾಲಿದ್ದಕೆ– ಅಂಗೆ ಹಗ್ಗದ ಕಟ್ಟ ಆಕದೆ ವೋದ್ರೆ, ಹಗ್ಗ ಕಟ್ಟದೆ ಅಂಗೇಯ ಹಂಬ ಇಳುಕಿದ್ರೆ, ಯೆಲ್ಲ ಹಂಬೂವೆ, ಅಸುರಂಬು ಸೈತವಾಗಿ, ಮೊಗಚಿಕಳ್ಳಕ್ಕಿಲ್ಲವೇನ್ಲ? ಅಂತ ಇವರಿಸಿದ್ರು... ಹಂಬಿನತುದಿಗ ಮೂರು ನಾಕಡಿ ಬುಟ್ಟು ಹಗ್ಗ ಕಟ್ಟಿದ ಮ್ಯಾಗೆ, ಅಡಿಕೆ ಮರವ ಕಚ್ಚಿಗಂಡಿದ್ದ ಪಲ್ಲಿಗಳ್ನೂವೆ, ಅಂಗೇಯ ಬಾಳೆನಾರ್ನ ಕಟ್ಟುಗಳ್ನೂವೆ ಸಡುಲಿಸಿದ್ರು. ಜಾರುಸ್ದ ಹಂಬಿನ ಕಡ್ಡಿಗಳ, ಅಲ್ಲಿಂದ ಕೆಳುಕ್ಕೆ ಉಪಾಯ್ದಲ್ಲಿ ಇಳುಕಿದ್ರು. ಇಳುಕ್ದ ಕಡ್ಡಿಗಳ ಗುಂಡಗೆ ಮೊಡಚಿ ತೆಕ್ಕೆ ಮಾಡಿದ್ರು. ವೋಟರಲ್ಲಿ ತೋಡಿದ್ದ ಗುಂಡಿಗೆ ನಾನು ಗೊಬ್ಬರ ತಂದಾಕಿದ್ದೆ. ಅದರೊಳೀಕೆ ತೆಕ್ಕೆ ಮಾಡಿದ್ದ ಹಂಬಿನ ಕಡ್ಡಿಗಳ ಸಾಸ್ತ್ರಿಗೋಳು ತುರುಕಿದ್ರು. ಅದರ ಮ್ಯಾಲೆ ಮಣ್ಣ ತಳ್ಳಿ ಆ ಗುಂಡಿ ಮುಚ್ಚದ್ರು. ನಾನು ನೆಲಬಾವಿಂದ ಏಡು ಮಣ್ಣಿನ ಗಡಿಗೆ ತುಂಬ ನೀರ ವೊತ್ತು ತಂದು, ಜೀವ ನೀರ ಬುಟ್ಟಿದೆ...

ಮದ್ದಿನ್ನ ಸ್ವಾಮಿ ನೆತ್ತಿ ಬುಟ್ಟು ಕೆಳುಕ್ಕೆ ಇಳುದು ಆಗ್ಲೆ ಪಡುವ್ಲಲ್ಲಿ ಭೂಮಿ ಅಂಚ ಮುಟ್ತಾ ಇದ್ದ... ಇಂಗೆ ಸಾಗಿತ್ತು ನಮ್ಮ ಕೆಲ್ಸಸಾಸ್ತ್ರಿಗಳು ಹಂಬು ಇಳುಕಾದು, ತೆಕ್ಕೆ ಮೊಡಚಿ ಗುಂಡಿ ವಳೀಕಾಕಿ ಮಣ್ಣ ತಳ್ಳಾದು ನಾನು ಗಡಿಗೇಲಿ ನೀರ ವೊತ್ತುಗಂಬಂದು ಆ ಹಂಬಿಗೆ ಜೀವ ನೀರ ಎರಯಾದು...

ಸಾಸ್ತ್ರಿಗೊಳು ಇನ್ನೊಂದು ಮರದ ಹಂಬ ಇಳುಕಕ್ಕೆ, ಬಿದಿರೇಣಿ ಇಡುದು ಇನ್ನೇನು ಅತ್ತಬೇಕು ಅನ್ನಾದ್ರಲ್ಲಿ, ಅವ್ರಿಗೆಯೇನನ್ನುಸ್ತೊ, ನನ್ನ ಕಡೀಕೆ ತಿರುಗಿ–

"ಆಸಿವಾಯ್ತದೇನ್ಲ ಲಕ್ಕ?... ವೊತ್ತಾರೆ ವೊಟ್ಟೆಗೇನು ತಕ್ಕಂಡಿದ್ದೆ?" ಕ್ಯಾಳಿದ್ದರು.

"ತಂಗಳಿಟ್ಟು ತಿಂದಿದ್ದೆ ಕನ್ರಯ್ಯ. "–ನಾ ಯೋಳ್ತ ಇದ್ದಂಗೆ,

"ಚ್, ಚ್... ಕೆಲ್ಸದ ಗ್ಯಾನದಲ್ಲಿ ಊಟವೆ ಮರುತೊಯ್ತು. ನಿಂಗೂ ಬಾಳ ಅಸಿವಾಗಿರಬ್ಯೆದು... ಇದೇ ಕೊನೇ ಮರ, ಈವೊತ್ತಿಗೆ. ಇದು ಮುಗಿಸಿ, ವೊಂಟುಬುಡಾವ." ಯೋಳಿ, ಅತ್ತಕ್ಕೆ ಸುರು ಮಾಡಿದ್ರು... ನಾನು ತಲೆ ಕೆರೀತ,

"ಅಯ್ಯ..." ತ್ವದಲ್ದೆ.

"ಯೇನ್ಲ?..." ಚೋಜಿಗ ಪಡ್ತ ಕ್ಯಾಳಿದ್ರು.

ಬಲದಾ ಕಾಲ ಯೆಬ್ಬೆಟ್ನಿಂದ ನೆಲ ಮೀಟ್ರ, ನಾನು–

"ಈ ಮರದ ಹಂಬ ನಂಗೇ ಬುಡಿ. ನಾನು ಇಳುಕ್ತೀನಿ ಕನ್ರಯ್ಯ" ಅಂತ ತಡ್ವರಿಸಿದ್ದೆ. ಸಾಸ್ತ್ರಿಗೊಳು ನಗಾಡ್ತ.

"ಈ ಹಂಬು ಇಳುಕೊ ಕೆಲ್ಸ ಬಾಳ ಸೂಕ್‌ಸ್ಮದ್ದು. ಇಂಗೇ ಬಂದು ಬಂದು ನ್ವಾಡ್ತ ಕಲ್ತುಕೊ. ನೀನು ಬೆಳುದು ದೊಡ್ಡೋನಾದಂಗೆ, ನೀನೂ ಒಂದು ಜಿನ ನನ್ನಂಗೆ ಏಣಿ ಅತ್ತಿ ಹಂಬ ಇಳುಕೀವಂತೆ." ಯೋಳಿ, ಬಿದಿರೇಣಿ ಅತ್ತೋಗಿದ್ರು...

ಕೊನೆ ಗುಂಡಿಗೆ ಮಣ್ಣು ತಳ್ಳಿ, ನೀರುಣ್ಣುಸಿ ಆಗಿತ್ತು, ಕೊಳದಾಗಿ ಕೈಕಾಲು ತೊಳುದು ಸಾಸ್ತ್ರಿಗೊಳು ಊರು ದಿಕ್ಕೆ ಮೊಖ ಮಾಡಿದ್ರು. ಹಾದೀಲಿ,

"ನಿಮ್ಮ ಮಗಾರು ಎಲ್ಲಿ ಅಯ್ಯಾರೆ?" ಕುತೂಹಲವಾಗಿ ಕ್ಯಾಳಿದ್ದೆ.

"ಅಡಿಕೆ ಯಾಪಾರಕೆ ಸಿವಮೊಗ್ಗದ ಕಡೆ ಶಾಂಪಲ್ ತಕ್ಕಂಡೋಗವ್ನೆ. ಮೊನ್ನೆ ತಾನೆ ವೊದ್ದು. ಬರಾದು ಇನ್ನೂ ಅಯಿದರು ದಿನವೇ ಆಗಬ್ಯೆದು" ಅಂದಿದ್ರು.

ಮುಂದ್ಕೆ, ಹಾದಿ ಉದ್ದಕ್ಕೂ ಏಡು ಆಳಿನದೂ ಮಾತಿಲ್ಲ. ಅಟ್ಟಿ ತಲುಪುತಿಒದ್ದಂಗೆ, ಸಾಸ್ತ್ರಿಗಳು,

"ಈವೊತ್ತಿಗಾಯ್ತಲ್ಲ, ನಾಳೀಕೂ ಬಂದುಬುಡು. ಇವೊತ್ತಿಂದೂ ನಾಳೆದೂ ಯೆಲ್ಲಾನೂ ಸೇರುಸಿ, ಒಟ್ಟಿಗೇ ಕೂಲಿ ಕ್ವಟ್ಟು ಬುಡ್ತೀನಿ" ಅಂದ್ರು.

ನನ್ನ ಮುಖ ಸಪ್ಪಗಾಯ್ತು.

"ನಾಳೀಕೆ ನಾ ಯೆಂಗೆ ಬರಾನೆ?" –ಪ್ರಸ್ನೆ ಎಸುದು ಆಕಾಸ ನ್ವಾಡುದಾಗ, ಸಾಸ್ತ್ರಿಗಳು,

"ಅಂಗಂದ್ರೆ ಯೇನೋ ಅರ್ತ?" –ಕ್ಯಾಳಿದ್ರು.

ನಡುದದ್ನೆಲ್ಲಾನೂವೆ ತುದಿಬಾಲ ಒಂದನೂ ಬುಡದೆ ನಾ ಯೋಳಿಕಂಡಾಗ,

"ವಸಿ ಇಲ್ಲೆ ನಿಂತುಗೊ" ಅಂದೋರು, ದಾಪುಗಾಲು ಆಕ್ತ ಅಟ್ಟೀವಳಿಕೆ ವೋಗಿ, ತುಸ ವ್ಯಾಳ್ಯದಲ್ಲೇ ವೋರೀಕೆ ಬಂದು, ಇಡೀಂತ ಆಯಿವತ್ತು ರೂಪಾಯಿ ನನ್ನ ಕಯ್ಯಾಗಿಡ್ತ.

"ಈ ಅಣವ ನಿನ್ನ ಜೀತಕೆ ಕ್ವಡ್ತಾ ಇಲ್ಲ. ಈಗ ಬಂದಿರೊ ದರದು ತೀರುಸ್ಕೊ. ನಮ್ಮ ತ್ವಾಟಕ್ಕೆ ನೀನು ಬಂದೂ ಬಂದೂ ಕಂಬಳ ಮಾಡದಂಗೆ ಈ ಅಣವ ಕಳೆ ಆಕ್ತ ವೋಯ್ತಿನಿ. ಯಾವೊತ್ತೂ ಒಂದು ಜಿನ ತೀರ್ತದೆ. ಯೋಚ್ನೆ

ಮಾಡಬ್ಯಾಡ" ಅಂದಿದ್ರು...

ನನ್ನ ಗುಡ್ಲು ಕಡೀಕೆ ಎಜ್ಜೆ ಆಕ್ತ ನಂಗೊಂದೇ ಯೋಚ್ನೆ:

"ಈ ಮಾರಾಯ್ರು ಯೇನೋ ಜೀತ ತಪ್ಪುಸಿದ್ರ. ಆದರೆ ನಾ ಇದ್ಯ ಕಲಿಯಾದು ಇನ್ನು ತಿಂಗಳಮಾವನಿಗೆ ಮದ್ವೆ ಆದಂಗೆ ಅಲ್ವ?

ನಾನು ನಮ್ಮ ಗುಡ್ಲ ತಲುಪಕ್ಕೂ ಆ ಕಡಿಂದ ಅಯ್ಯ, ಅವ್ವ ಏಡೂ ಆಳೂವೆ ಬರೋದಕ್ಕೂ ಒಂದೇ ಆಯ್ತು. ಏಡು ಅಳಿನ ಮೊಖವೊವೆ ಉಪ್ಪಾಕದ್ರೆ ಉಪ್ಪೊ ಬೇಯದೆ, ಇರೋವಸ್ಟು ಜೋಲು ಬಿದ್ದಿತ್ತು. ಮೊದ್ಲು ಉಸುರು ಕಡುಸಿ, ಮಾತ ತಗುದೋಳು ಅವ್ವ:

"ಬುಂಡಮ್ಮಾರ ಅತ್ರವೂ ಅಣ ದೊರೀನಿಲ್ಲ ಕನೊ... ಅವರೂವೆ ನಾವು ಕ್ವಟ್ಟ ನೂರು ರೂಪಾಯ ಯಾತಯಾತಕೊ ಬಳಸಿಬುಟ್ಟು, ಅದಿನೈದು ರೂಪಾಯಿ ಉಳುದದೆ, ಕೊಡಾನ ಅಂತ ಕ್ಯಾಳಿದ್ರು... ಅದು ತಕ್ಕಂಡು ನಾವ್ಯಾನ ಮಾಡಾದು ಬ್ಯಾಡಿ, ಅಂದೊ. ಬೋ ಪೆಚಾಡಿಕಂಡ್ರು..."

ಅಯ್ಯ ತನಗೆ ತಾನೆ ಮಾತಾಡ್ಕಳೊ ಅಂಗೆ ಅಂದ:

"ಈಗ ಇನ್ಯಾರ್ನ ವೋಗಿ ಕೇಳಾದು?"

ನಾನು ಕಯ್ಯ ಬಿಚ್ಚಿ ಅಣ ತೋರ್ತ.

"ತಕ್ಕನ್ನಿ, ಕಿಸ್ಣಸಾಸ್ತ್ರಗೊಳು ಕ್ವಟ್ಟರು" – ಅವ್ವನ ಕಯ್ಯಿಗಿಟ್ಟು, ನಡುದ ಇಸ್ಯ ಯೋಳಿದೆ.

ಅವ್ವ, ಅಯ್ಯ ಏಡಾಳೂವೆ ಯೇನ ಇದರರ್ತ ಅನ್ನಾ ಅಂಗೆ ಮೊದ್ಲು ಮೊಖಮಾಡಿದೋರು, ನಾನು ಇವರಿಸಿದ್ದ ಕ್ಯಾಳಿ, ಬ್ಯಾಸರಪಟ್ಟರು. ಅವ್ವ ಅಂತೂವೆ–

"ಸರಿಕನ ಬುಡು, ಇನ್ನು ಮ್ಯಾಲೆ ಸಾಸ್ತ್ರಿಗೊಳ ಅಟ್ಟಿಯಾಗೆ ನಮ್ಮ ಹೈದನ ಜೀತ ಕಾಯಂ ಆದಂಗಯ್ತು" ಅಂದು ಅಣ ಎಣಿಸಕ್ಕೆ ಸುಮಾಡಿದ್ಲು.

"ಯೆಂಗೊ ಈ ಸವುಳದಲ್ಲಿ ಆ ಪುಣಾತ್ಮ ಬಂದು ಆತುಗಂಡರಲ್ಲ– " ಅಂತ, ಕಡೀಕೆ ಅಯ್ಯ ಸಮಾಧಾನ ಮಾಡ್ಕಂಡ...

* * * *

ಲಕ್ಕ ತಮ್ಮ ಗುಡ್ಲಿನೊಳಗೆ ಮನಗಿದ್ದಂಗೆ, ಹಿಂದೆ ನಡೆದದ್ನೆಲ್ಲ ಮೆಲುಕಾಕಿದ್ದ. ಕಾಲ ಏಟು ಬ್ಯಾಗ ಬ್ಯಾಗ ಓಡೋಯ್ತದೆ ಅಂತ ಇಸ್ಮಯ ಪಡ್ತಿದ್ದ.

ಒಂದು ವರುಸ ಅನ್ನಾದು ಆಡಾಡ್ತ ಮುಗುದೋಗಿತ್ತು. ಅಯ್ಯ, ಗಡುವು ಮುಗುದು ಜೀತ ಕಳೀತಲೆ ಗುಡ್ಲಿಗೆ ವಾಪಾಸಾಗಿದ್ದ. ಆದ್ರೆ ನಮ್ಮ ಆಯಿವತ್ತು

ರೂಪಾಯಿ ಸಾಲ ಮಾತ್ರ ಇನ್ನೂವೆ ತೀರಿರನಿಲ್ಲ!... ನಾನು ಏಟು ದುಡಿದ್ರೂವೆ, ಅವ್ವನ ದುಡಿಮೇಲಿ ತಾನೆ ನಮ್ಮ ಗುಡ್ಲು ಭಂಗ ಸಾಗ್ತಿದ್ದದ್ದು!... ಇದ ತಿಳುಕಂಡು ಸಾಸ್ತ್ರಿಗೊಳು ನಾ ಮಾಡ್ದ ಕೆಲುಸಕೆ ಆ ಆ ದಿನದ ಕೂಲ್ಯ ಆ ಆ ದಿನವೇ–ನಾನು ಬ್ಯಾಡಿ ಬ್ಯಾಡಿ ಅಂದರೂವೆ ಕ್ವಟ್ಟು ಬುಡ್ತಾ ಇದ್ರು...

ಇಂಗಾಡಿ ಅಂಗಾಡಿ ಒಂದು ವರುಸ ಪೂತ್ ಕೆಲಸ ಮಾಡಿದ್ಕೆ, ಅಯಿವತ್ತು ರೂಪಾಯಿ ಸಾಲದಲ್ಲಿ ನಾನು ತೀರುಸಕ್ಕಾದ್ದು ಅತ್ತೇ ರೂಪಾಯಿ! ಇನ್ನೂ ನಲವತ್ತು ರೂಪಾಯಿ ಸಾಲ ಉಳುಕಂಡಿತ್ತು. ಆದ ತೀರುಸಕ್ಕೆ ಪೂನಾ ನಂಗೆ ಸಾಸ್ತ್ರಿಗೊಳ ತ್ವಾಟದಲ್ಲೆ ದುಡುಮೆ!...

ಮುಂದಿನ ದಿನಗೊಳಲ್ಲಿ, ಅಯ್ಯ, ಅವ್ವ, ನಾನೂ ಮೂರಾಳೂವೆ ಮೊಗ್ಗೆ ಕವಡೆ ಕಟ್ಕಂಡೇ ದುಡುದ್ರೂವೆ, ಸಾಸ್ತ್ರಗೊಳ ಸಾಲ ವರ್ಷಾನುಗಟ್ಲೆ ಉಳುದುಬುಡ್ತು. ಯಕೆ ಅಂದ್ರೆ, ನಮ್ಮಯ್ಯ ಇರಿ ಮಗ ವೊದ್ದ ಮರಿಯಕ್ಕೆ ಕುಡುತ ಪಾಟ ಮಾಡ್ಕಂಡ. ರಾಚನ ಎಂಡದಂಗಡಿಗೇ ಅವ್ನ ಸಂಪಾದ್ನೇಲಿ ಮುಕ್ಕಾಲು ಮೂರುವೀಸ ಪಾಲು ವೋಗೋದ್ರ ಜ್ವತ್ಗೆ, ಒಂದೊಂದು ಸರ್ತಿ ನಮ್ಮವ್ವ ದುಡುವ ದುಡ್ನೂ ಅವ್ನು ಕಿತ್ಕಂಡೋಗಿ ರಾಚನ ಗಲ್ಲಕೆ ಎಸೀತಿದ್ದ!...

ನಾನು ಎದ್ದೋನೆ ಇತ್ತಿಲ ಕಡೀಕೋಗಿ, ಕೈಕಾಲು ಮೊಖ ತೊಳುದು, ತಂಗಳ ಉಂಡು, ರೋಜಾದಂಗೆ ಕಂಬಳಕೊಂಟೆ. ನಾನಂಗೇ ವೋಯ್ತಾ ಇರೋನೂವೆ ಉಪಾದ್ಯರ ಮಠ ಸಿಕ್ತು. ಆ ಮಠವ ತಟಾಯ್ತಿದ್ದಮಗೆ, ನನ್ನ ವಳುಗಡೆ ಸತ್ತೋದೋರ ಮುಂದೆ ತಮಟೆ ಬಾರುಸ್ದಂಗಾಯ್ತು!– ಮಠದ ವಳೀಕೊಯ್ತಿದ್ದ ಉಡುಗರ್ನೇ ಕಣ್ಣೀರು ತುಂಬಿ ನ್ವಾಡ್ತಿದ್ದಂಗೆ, ನನ್ನ ಮನಸು ಇಂದ್ಕೆ ಅದೇ ಜಾಗ್ದಲ್ಲಿ ನಡುದೊಂದು ಸಂಗ್ತ್ಯ ನೆನಸಿಕತ್ತಿತ್ತು:

ನಾನೂವೆ ಆಗ ಇದೇ ಮಠದಲ್ಲಿ ಓಡ್ತಾ ಇದ್ದೆ. ಒಂದು ಜಿನ ನಾನು ಮಠಕೆ ವೊಂಡೋವೊತ್ಗೆ ಮಳೆಯೂವೆ ಮಂಟಾಡಿಕಂತು ಬತ್ತು. ಬ್ಯಾಡ ಬ್ಯಡ ಅಂದ್ರೂವೆ, ಅವ್ವ ಗೊರಗು ತಂದು ಕ್ವಟ್ಟಿದ್ಲು. ತಲೆ ಮ್ಯಾಲೆ ನೂಲುನೂಲಾಗಿ ಮ್ವಾಡದಿಂದ ಇಳುದು, ಮಾಡ್ನ ಸೂರ್ಗಗಳಿಂದ ಲೊಳ್ಳೋಂತ ಸುರಿಯಾ ಪರಿಯ– ನ್ವಾಡ್ತ ನ್ವಾಡ್ತ ನಾನು ಕುಸಿಪಡ್ತಿದ್ದೆ... ವೋಟರಾಗೆ,ಇಂದುಗಡಿಂದ,

"ಲಕ್ಕ ಲೋ – ಲೋ ಲಕ್ಕ..." ಅಂತ ಯಾರೊ ಕುಗಿದಂಗಾಗಿ ತಿರುಗಿ ನ್ವಾಡುತ್ತೆ– ಸಿವಾಚಾರದ ಗಂಗಿ!...

ಗಂಗಿ ಅಟ್ಟಿಯೂವೆ ವೊಲಗೇರಿಗೆ ಸಮೀಪ ಇದ್ದದ್ರಿಂದ, ಮಠ್ಕೆ ವೋಗ್ವಾಗ ಬರ್ವಾಗ ಅವಳು ನನ್ನ ಜ್ವತ್ಗೇ ಇರ್ತಿದ್ದಲು. ಮಾತ್ರ ಅವಳು ನಂಗಿಂತ

ದೊಡ್ಡೋಳಾದ್ರಿಂದ ಏಡು ಕಿಳಾಸು ಮುಂದು!...

ಗಂಗಿ ನನ್ನ ಸಮೀಪ ಬಂದೇಟ್ಗೆ, ಅವಳು ನೆನೀತಿದ್ದ ಕಂಡು, ನಂಗೆ ಪಾಪ ಅನ್ನುಸಿ–

"ಇದ್ಯಾಕರವ್ವ, ಗೊರಗು ತರಬಾರದಾಗಿತ್ತು?"– ಅಂತ ಅವಳ ಕ್ಯಾಳಿದ್ದೆ.,

"ಅಯ್ಯೋ ನಮ್ಮಟ್ಟೀಲಿ ಇರಾದು ಒಂದೇ ಗೊರಗು. ಇನ್ನೊಂದ ಯಾರೊ ಕದ್ದುಕಂಡೋಡ್ರಂತೆ. ನಿಂಗೊತ್ತದಲ್ಲ ನಮ್ಮವ್ವಂಗೆ ಗೂರ್ಲು. ಅದ್ಕೆ – ನೀನೇ ತಕ್ಕಂಡೋಗು ಅಂದು, ಅಂಗೇ ಬಂದೆ ಕನೊ, ಲಕ್ಕ" ಅಂದಿದ್ದಲು ಗಂಗಿ.

ಗಂಗಿ ಅಂಗಂದದ್ದೆ ತಡ, ನಾನು ನನ್ನ ಗೊರಗ ತಗುದು "ಆಕ್ಕಳಿ" ಅಂತ ಕ್ವಡಕ್ಕೋಡ್ರೆ,

"ಬ್ಯಾಡ ಬ್ಯಾಡ. ನೀ ವೋಬ್ನೆ ಯಾಕೆ ನೆನೀಬೇಕು?... ತಾಳು, ಇಬ್ಬರೂ ಸೇರಿದಂಗೆ ಇದ ವೊದ್ದಕಳಾವ" ಅಂದು, ಗಂಗಿ ತಲೆ ಮ್ಯಾಲೆ ಗೊರಗು ಆಕ್ಕಂಡು ನನ್ನ ಆದರೊಳೀಕೆ ಸೇರಿಸ್ಕಂಡ್ಲು! ನಾ ಯೆಸ್ಟೋ ಪರೀಲಿ ಬ್ಯಾಡಿ ಬ್ಯಾಡಿ ಅಂದರೂ ಅವೆಣ್ಣು ಕ್ಯಾಳನೇ ಇಲ್ಲ. ಸದ್ಯಕೆ ಆಗ್ಲೆ ಊರು ಇಂದ್ಯಾಕಾಗಿತ್ತು...

"ಇದ್ಯಾಕ್ಲ ಅಪ್ಪಯ್ಯ ಇಂಗಾಡಿ. ಈಗ ಇಲ್ಯಾರಿದ್ದಾರು?– ಮಠ ಸಮೀಪಿಸ್ತಿದ್ದಂಗೆ ನೀನು ಗೊರಗ್ನಿಂದ ಆಚ್ಗೆ ಚಿಗುದುಬುಟ್ರೆ ಅಯ್ತಪ್ಪ" ಅಂದ್ಲು ಗಂಗಿ.

ಬ್ಯಾರೆ ದಾರಿ ಕಾಣದೇಯ, ನಾನು ಗೊರಗಿನೊಳಗೆ ಗಂಗಿ ಜ್ವತೇಲಿ ಯೆದುರ್ತ ಯೆಜ್ಜೆ ಆಕ್ದೆ. ಇಸ್ಕೂಲು ಇನ್ನೇನು ಅತ್ತು ದಾಪು ಇರೋವಂಗೆ, ನಾನು ಗೊರಗ್ನಿಂದ ಗುಡುಕ್ನೆ ವೊರೀಕೆ ಬಂದದ್ಕೂ ಉಪಾದಯ್ ಎಂಕಟೇಸಯ್ಯಾರು ನಸ್ಯದ ಮೂಗ್ನಿಂದ ಸೀನ್ತಾ ಸೀನ್ತಾ ಇಸ್ಕೂಲಿನ ವೊರ ಜಗಲಿಗೆ ಬಂದು ಗೊಣ್ಣೆ ಸೀಟ್ತ ನನ್ನ ನ್ವಾಡಿಬುಟ್ಟಿದ್ಕೂ ಒಂದೇ ಆಯ್ತು!...

ಬಾಕಿ ಇಸ್ಯದಲ್ಲಿ ಉಪಾದ್ಯ ಎಂಕಟೇಸಯ್ಯಾರು ವಳ್ಳೆಯೋರೇಯ. ಮಾತ್ರ ಕೀಳು ಜಾತ್ಯೋರು ಮೇಲು ಜಾತ್ಯೋರು ಸಮಸಮ ಇರಾದು, ಮೇಲು ಜಾತ್ಯೋರ ನಮ್ಮಂತೋರು ಮುಟ್ಟಿಸ್ಕಳಾದು, ಇಂತದ್ನ ಒಂದ್ನೂ ಸೈಸ್ತಿರಲಿಲ್ಲ. ನಮ್ಮಂತೋರು ಅವರು ಇಸ್ಕೂಲ ವಳಗಡೆ ಉಳುಕೆ ಹೈಕಳ ಜ್ವತ್ಗೆ ಕುಂಡರಿಸ್ತಿರ್ನಿಲ್ಲ. ವೊರಗಡೆ ಜಗುಲೀಲಿ ಕುಂಡರಿಸೇ ಪಾಟ ಹೇಳ್ತಿದ್ರು.

ಈಗ ಉತ್ತುಮರ ಎಣ್ಣ ಮುಟ್ಟುಸ್ಕಂಡು ಒಂದೇ ಗೊರಗಿನೊಳ್ಗೆ ಬತ್ತಾ ಇದ್ದ ಕಂಡು, ಅವರ ಮಯ್ಯಾಗೆಲ್ಲ ಕೆಂಡ ಕಾದಿರಬೇಕು. ಗೊಣ್ಣೆ ಚೌಕದಲ್ಲಿ

ಮೂಗು ಸೀಟ್ತ.

"ಲಕ್ಕ, ಬಾರ್ಲ ಇಲ್ಲಿ..." ಗರ್ಜಿಸಿದ್ರು.

ನಡುಗ್ತ ನಡುಗ್ತ ನಾನು ಅತ್ರ ವೋದಾಗ, ಕ್ವಾಪ ನುಂಕಂಡು,

"ಈಗ ನೀನು ವಾಪಸೋಗು, ನಾತ್ರೆಗೆ ನಿಮ್ಮಯ್ನ ಗುಟ್ಟಾಗಿ ನನ್ನಟ್ಟಿಗೆ ಕರಕಂಬಾ" ಅಂದ್ರು.

ನಾತ್ರೆನಾಗ ಅವರಟ್ಟಿ ತಾವಿಕೆ ನನ್ನಯ್ನೂ ನಾನೂವೆ ವೋದ್ವೊ. ಅವರು ನನ್ನಯ್ನಂಗೆ ತಾವು ಕಂಡದ್ನೆಲ್ಲ ಇವುರಿಸಿ.

"ಮೇಲು ಜಾತಿ ಯಜಮಾನ್ರಿಗೆ ಈ ಇಸ್ಯ ಗ್ವತ್ತಾದ್ರೆ, ಈ ಉಡುಗ ಚಮಡ ಸುಲಿದು ಬುಡ್ತಾರೆ. ಇಂತಾ ಹೈಕಳು ಆಡೋ ಆಟಾನೆಲ್ಲ ಮುಚ್ಕೊ ಉಪಾದ್ಯಾಂತ ನನ್ನೂವೆ ನಿಮ್ಮೂರ್ನಿಂದ ಗಡೀಪಾರು ಮಾಡ್ತಾರೆ. ಈಗ ಇದ್ನ ಯಾರ ಕುಟ್ಟೂ ಯೇಳೋದು ಬ್ಯಾಡ. ನಿಮ್ಮುಡುಗ ಇಲ್ಲಿಗಂಟ ಕಲ್ತಿರಾದೆ ಸಾಕು. ಮುಂದುಕೋದಿ ಅವನ್ಯಾವ ದಿವಾನಗಿರಿ ಮಾಡಬೇಕಾಗಿದ್ದಾತೊ, ನಿಂಗ?... ಸುಮ್ಕೆ ಇವ್ನ ಯಾರ ಅಟ್ಟೀಲಾರು ಜೀತಕಿರುಸು. ನಿಂಗೂ ನಾಕೂ ಕಾಸ್ನು ಕೈಸೇರಿ, ಉಪ್ಪುಗೊ ಸೊಪ್ಪುಗೊ ಅಯ್ತದೆ"– ಅಂತ ಬುದ್ಧವಾದ ಯೋಳಿದ್ರ... ಆಗ ನನ್ನ ಕಣ್ಣಲ್ಲಿ ಚಿಲ್ಲನೆ ನೀರು ಕಿತ್ತುಗಂಡಿತ್ತು.

ಆ ಸಂಗ್ತಿಯ ಈಗ ನೆನೀತಿದ್ದಮಗೆ, ಆ ಇಸ್ಕೂಲ ಮುಂದೆ ಇನ್ನೊಂದು ಚಣವೂ ನಿಂತ್ಕೊನಾರ್ದೆ, ಅಲ್ಲಿಂದ ನಾನು ಜೋಲು ಮ್ವಾರೆ ಆಕ್ಕಂಡು ನಡೀತಿದ್ದೆ...

ಮುಂದೆ ತಿಂಗಳೊಪ್ಪತ್ನಲ್ಲಿ. ಅವಳ ತಮ್ಮ ಸತ್ತೋಗಿ ಎಮ್ಮೆ ಕಾಯೋರಿಲ್ಲಾಂತ, ಗಂಗೀನು ಅವಳ ಅಟ್ಟಿಯೋರು ಮಠ ಬುಡಸಿದ್ರು...

## ೧೧

ಇಪ್ಪತ್ತು ದಿನ ರುದ್ರಪಟ್ಟಣ ಮತ್ತು ಅದರ ಸುತ್ತಮುತ್ತಿನ ನೆಂಟರಿಷ್ಟರ ಊರುಗಳಲ್ಲಿ ಸುತ್ತಾಡಿ ಕಾಲಕಳೆದ ಚಂದ್ರಶೇಖರಯ್ಯನ ಸಂಸಾರ, ರುಕ್ಮಿಣಿ ನಿರೀಕ್ಷಿಸಿದಂತೆ ದರುಮನಳ್ಳಿಗೆ ವಾಪಸಾಗದೆ, ಮೈಸೂರಿನಗೆ ಪ್ರಯಾಣ ಬೆಳೆಸಿತ್ತು. ಮೈಸೂರಿನಲ್ಲಿ ಚಂದ್ರಶೇಖರಯ್ಯನ ಅಣ್ಣ ಮಂಜುನಾಥಯ್ಯ ಬ್ಯಾಂಕಿನಲ್ಲಿ ಗುಮಾಸ್ತೆ. ಮಂಜುನಾಥಯ್ಯನ ಮನೆಯಲ್ಲಿ ಸುಮಾರು ಹದಿನೈದು ದಿನಗಳ ಬಿಡಾರ. ಮತ್ತೆ ಅವರೆಲ್ಲರೂ ದರುಮನಳ್ಳಿಗೆ ಹಿಂದಿರುಗಿ, ಇಲ್ಲೂ ಸಹ ರುಕ್ಮಿಣಿಯ ಒತ್ತಾಯಕ್ಕೆ ಮಣಿದು ಒಂದು ವಾರ ಉಳಿದಿದ್ದರು. ಚಂದ್ರಶೇಖರಯ್ಯನಿಗೆ ದರುಮನಳ್ಳಿಯಲ್ಲಿ ಅನೇಕರ ಸ್ನೇಹ. ಹೀಗಾಗಿ ಅವನು ಮನೆಯಲ್ಲಿ ಇರುತ್ತಿದ್ದುದೇ

ಅಪರೂಪ. ರುಕ್ಮಿಣಿಗೆ ಪಾರ್ವತಿಯು ಅಕ್ಕ ಮಾತ್ರ ಆಗಿರದೆ ಅತ್ಮೀಯ ಗೆಳತಿಯಂತೆ ನಡೆದುಕೊಳ್ಳುತ್ತಿದ್ದಳು. ಊರಿನಲ್ಲಿ ಯಾರೋಬ್ಬರೂ ಅಕ್ಕತಂಗಿಯರೆಂದರೆ ಹೀಗಿರಬೇಕು ಎನ್ನುತ್ತಿದ್ದರು. ಸರಸಿ. ಗಿರಿಜೆಯರಂತು ಅವಳಮಕ್ಕಳಂತೆ ಊರಿನ ಬೀದಿಬೀದಿಗಳಲ್ಲೂ ಓಡಾಡಿ ನೋಡಿದವರ ಕಣ್ಣಿಗೆ ಆಹ್ಲಾದ ತುಂಬುತ್ತಿದ್ದರು.

ವಾರ ಕಳೆಯುತ್ತಲೂ ಚಂದ್ರಶೇಖರಯ್ಯನ ಸಂಸಾರ ತಮ್ಮ ಊರಿಗೆ ಹೊರಟು ನಿಂತಿತು. ಅವರನ್ನು ದರುಮನಳ್ಳಿಗೆ ಕರೆದು ತಂದಿದ್ದ ಅವರ ಗಾಡಿ ಹಿಂದೆಯೇ ಅವರ ಹಳ್ಳಿಗೇ ಹಿಂದಿರುಗಿ ಹೋಗಿದ್ದದರಿಂದ, ಕೃಷ್ಣಶಾಸ್ತ್ರಿಗಳು ಲಕ್ಕನಿಗೇ ಹೇಳಿಕಳುಹಿಸಿ ತಮ್ಮ ಎತ್ತಿನ ಗಾಡಿಯನ್ನೆ ಹೊಡಿಸಿದರು.

ಹೊರಡುವ ವೇಳೆ ಬಂದಾಗ ಪಾರ್ವತಿಯು ಸರಸಿಯನ್ನಪ್ಪಿ,

"ಸರಸು, ನೀನೂ ನಮ್ಮೂರಿಗೆ ಬರ್ತೀಯೇನೆ?" ಎಂದು ಪ್ರೀತಿಯಿಂದ ಕರೆದಳು.

ಸಾವಿತ್ರಿಗೆ ಅಷ್ಟು ಖೈಡಾಗಿ "ಬರಲ್ಲ" ಎಂದು ಉತ್ತರಿಸಿದ್ದ ಬಾಲೆ. ಪಾರ್ವತಿಯು ಕರೆಯುತ್ತಲೂ "ಓ ಬತ್ತೀನಿ" ಎಂದು ಅತಿ ಸುಲಭವಾಗಿ ಒಪ್ಪಿದ್ದಳು!.... ಈ ಸಮ್ಮತಿಗೆ ಮುಖ್ಯ ಕಾರಣ. ಪಾರ್ವತಿಯ ಮಗಳು ಗಿರಿಜೆ! ಅವರಿಬ್ಬರಿಗೂ ಹೆಚ್ಚು ಕಡಿಮೆ ಒಂದೇ ವಯಸ್ಸು, ಯಾವಾಗಲೂ ಸರಸಿ ಅವಳನ್ನು ಗಿಜ್ಜಿ ಗಿಜ್ಜಿ ಎಂದು ಪೂರಾ ಹಚ್ಚಿಕೊಂಡಿದ್ದಳು, ಜತೆಗೇ ಊಟ, ಮಲಗುವುದೂ ಒಂದೇ ಹಾಸಿಗೆಯಲ್ಲಿ. ಹೀಗಾಗಿ ಪಾರ್ವತಿ ಕರೆದುದೇ ತಡ. ಎಳೆಗರುವಿನಂತೆ ಸಡಗರದಿಂದ ಓಡಾಡುತ್ತ ತನ್ನ ಲಂಗ ಜಂಪರುಗಳನ್ನು ಪುಟ್ಟ ಟ್ರಂಕೊಂದರೊಳಗೆ ತಾನೇ ತುಂಬುತ್ತಿದ್ದಳು. "ಟವಲ್ಲು ಬೇಡವೇನೆ?" ಎಂದು ರುಕ್ಮಿಣಿ ಕೇಳಿದ್ದಕ್ಕೆ, "ಅಲ್ಲಿ-ಗಿಜ್ಜಿ ಟವಲ್ಲು ಎರಲ್ವ?" ಎಂದು ಅವಳು ರಾಗ ಎಳೆದಾಗ ಆ ಶೋಕದ ಮನೆಯಲ್ಲೂ ನಗು ಬುಗ್ಗೆ ಬುಗ್ಗೆಯಾಗಿ ಚಿಮ್ಮಿತ್ತು.

ಎತ್ತುಗಳನ್ನು ಹೂಡಿ ಸಿದ್ದವಾಗಿದ್ದ ತಮ್ಮ ಕಮಾನು ಗಾಡಿಯ ಮುಂಭಾಗಕ್ಕೆ ಇಬ್ಬರು ಬಾಲಕಿಯರನ್ನೂ ಎತ್ತಿ ಕೂರಿಸಿದ್ದವಳು ರುಕ್ಮಿಣಿಯೆ! ಉಳಿದವರೂ ಒಬ್ಬೊಬ್ಬರಾಗೆ ಹತ್ತಿ ಕುಳಿತು, ಲಕ್ಕ ಎತ್ತುಗಳನ್ನು ಮುಟ್ಟಿ ಹುರಿ ಹುರಿದುಂಬಿಸಿದೊಡನೆ, ಗಾಡಿ ಚಲಿಸತೊಡಗಿತು.

ರುಕ್ಮಿಣಿಯು ಜಗಲಿಯ ಕಂಬವನ್ನೊರಗಿ ನಿಂತಿದ್ದಳು. ಗಾಡಿಯು ತಮ್ಮ ಕೇರಿಯ ತಿರುವಿನಲ್ಲಿ ಮರೆಯಾಗುವವರೆಗೂ ಲಕ್ಕನಿಗಿನ್ನ ಮಿಗಿಲಾಗಿ ಇಬ್ಬರು ಬಾಲಕಿಯರೂ "ಹುಚ್ ಹುಚ್.... ಹುಚ್ ಹುಚ್" ಎಂದು

ಸಂಭ್ರಮಿಸುತ್ತಿದ್ದದನ್ನೆ ಆಲಿಸುತ್ತ ಬಹುಸಮಯ ಅವಳು ನಿತೇ ಇದ್ದಳು.

## ೧೨

ಚಂದ್ರಸೇಕರಯ್ಯಾರ ಸಂಸಾರವ ಅವರೂರಿಗೆ ತಲುಪ್ಸಿ ಬಂದ ಲಕ್ಕನಿಗೆ, ತನ್ನ ಗಂತೆಮ್ಮನ ಒಂದೊಂದು ಕೇಮೆಯೂ ತಾರೀಪು ತಂದಿತ್ತು... ಸಿವುನಿ ಕಾಲಿಟ್ಟದ್ದೆ ಕಾಲಿಟ್ಟದ್ದು ಆ ಗುಡ್ಲಿಗೆ ಒಂದು ವಪ್ಪ ವಾರಣ ಬೆಳಕತ್ತು–ಕಲ್ಯಾಣಿ ಅತ್ತರಾಗಿತ್ತಾಗಿ ಚೆಲಾಡ್ತಿದ್ದ ಮಡಿಕೆಕುಡಿಕೇನಲ್ಲ ಅವು ಎಲ್ಲೆಲ್ಲಿರಬೇಕೊ ಅಲ್ಲಲ್ಲಿ ಜೋಡಿಸಿದ್ಲು. ಸಿವುನಿ. ಗುಡ್ಲ ವಳುಗಿನ ನೆಲಕೆಲ್ಲ ಆಗಾಗ ತೊವ್ವೆ ತಾರಿಸ್ತಿದ್ದಲು. ಪರ್ತಿ ಜಿನ ಬೆಳುವಾದರೆ ತೆಪ್ಪದೆ ಗುಡ್ಲು ಮುಂದಕೆ ರಂಗೋಲಿ ಚಿತ್ತಾರವ ತರಾವರಿ ಬುಡುಸ್ತಿದ್ಲು. ಅವೆಲ್ಲಕೂ ಮಿಗಿಲಾಗಿ ಅವಳಯ್ಯಂಗೆ ಬೇಸ್ ಅನಿಸುದ್ದು ಅಂದರೆ, ಅವಳು ನಂಜನಗೂಡು ಸೀಮೆಲಿ ಕಲ್ತುಗಂಬಂದು ಅಡುಗೆ ಮಾಡಾದರಲ್ಲಿ ತೋರಿಸ್ತಿದ್ದ ಕಯ್ಯಿ ಚಳಕ!... ಅಯ್ಯಂಗೆ ನೆಗಡಿ ಆಯ್ತು ಅನ್ನಾದೆ ತಡ ಸೀಗಡಿ ಸಾರು ತಯಾರು ಮಾಡಿ ಇಕ್ಕುತಿದ್ದಲು. ಏಳೆಂಟು ಜಿನ ಸುರುದಾಡಿ ನೆಗಡಿ ವೊಂಟೋದಾಗ,

"ನನ್ನ ಮಗಳು ಸಿವುನಿ ಮಾಡಿ ಇಕ್ದ ಸೀಗಡಿ ಮೀನಿನ ಸಾರೇ ನನ್ನ ಸೀತ್ವ, ವೊಡದದ್ದು"– ಅಂತ ಸಿಕ್ಕಸಿಕ್ಕದೋರ ಕುಟ್ಟೆ ನಿಂಗಯ್ಯ ಸಾರ್ತಿದ್ದ. "ಕಲ್ಯಾಣಿ, ನೀನಿ ಯೇನಿದ್ರೂವೆ ವೊರಗಿನ ಕೇಮ್ಗೇ ಲಾಯಕ್ಕು. ಅಡುಗೇಲಿ ನಿನ್ನ ಮಗಳ ಕರಾಮತ್ತೇ ಕರಾಮತ್ತು!" ಅಂದು ಮಗಳ್ನ ಮೇಲು ಮಾಡಿ, ಎಡತಿಯ ಆಳೀತಿದ್ದ. ಆಗ ಕಲ್ಯಾಣಿ,

"ಬಾಯದೆ ಅಂತ ಬೋಮಾನದ ಮಾತಾಡಬುಟ್ರೆ ಯೇನ ಬಂದದ್ದು? ನಾನು ನನ್ನ ದುಡ್ನಲ್ಲಿ ಸೀಗಡಿ ತಂದು ಕ್ವಟ್ಟುದ್ದಕ್ಕೆ ಅಲ್ವ ನಿನ್ನ ಮಗಳು ಸಾರು ಮಾಡಕ್ಕಾಯ್ತು" ಅಂದು ಬಾಯಿ ಮುಚ್ಚುಸ್ತಿದ್ಲು.

ನಿಂಗಯ್ಯಂಗೆ ಸೋಸಲು ಮೀನು ಮೇಲೋಗರ ಅಂದರೆ ಬಲು ಇಚ್ಚೆ. ಒಂದು ಜಿನ ಮಗಳಿಗೆ,

"ಸೋಸಲು ಮೀನು ಉದಕ ಮಾಡಮ್ಮಿ" ಅಂದಾಗ, ಸಿವುನಿ–

"ಅದ್ಕೆ–ದುಡ್ಡು?" ಕೇಳಿದಳು.

"ಅಯ್ಯಂಗೇಳಿ ತರಸು" ಅಂತ ಇದ್ದಂತೆ, ಕಲ್ಯಾಣಿ–

"ಊ. ದೊರೆ ಮೊಮ್ಮಗ ಯೋಳುಬುಟ್ಟ!... ಯೆಲ್ಲಿಂದ ಉದುರಾದೊ ಕಾಣೆ ದುಡ್ಡು?... ನಾನು ನನ್ನ ಮಗ ಗೇಯೋದು ನಮ್ಮ ಇಟ್ಟು ಸೊಪ್ಗೆ

ಸಾಲಕ್ಕಿಲ್ಲ. ಈ ಪುಣಾತ್ಮ ಗೇದ ದುಡ್ನೆಲ್ಲ ತಕ್ಕಂಡೋಗಿ ಆ ರಾಚನ ಎಂಡಕೇ ಮುಳುಗುಸ್ತವನೆ!... ಇವ್ನಿಗೆ ಸೋಸಲು ಬೇಕು, ಸೀಗಡಿ ಬೇಕು. ಯಲ್ಲೆಆ ರುತಿ ರುತಿ ಅಡುಗೇನೆ ಆಗಬೇಕು!... ತಗಿ, ತಗಿ ಇವ್ನ ಮಾತ್ನೂ ಒಂದು ಲಿಂಗ ಅಂತ ಕಟ್ಕಂಡೋಗು, ನೇರ್ಪಾಯ್ತದೆ!... ಕ್ವಡಾದು ಮೂರು ಕಾಸು ಕ್ವಾಣೆ ತುಂಬ ಹಾಸು, ಅನ್ನಾ ಗೆಣೆಕಾರ ನಿನ್ನಯ" –ಕಟಕಟನೆ ಯೋಳಿಬುಟ್ಟಾಗ, ಎಡತಿ ಮಾತ ತೆಳ್ಳಾಕನಾರದೆ, ನಿಂಗಯ್ಯ ತೆಪ್ಪಗಾಗಿದ್ದ. ಮಾತ್ರ ಸೊಸಲು ಮೀನು ಅತ್ವಾ ಕರಿಮೀನಿನ ಸೆ ಅವನ್ನ ಬಲವಾಗಿ ತಬ್ಬಿಕತ್ತು. ಎಂಡ ಕಮ್ಮಿ ಮಾಡಿ, ಹುಣಸೂರಿನ ಬೇಸ್ತವಾರ ಸಂತೇಲಿ ವೋಸ್ಟು ಕರ್ಮಿನ ಖರೀದಿ ಮಾಡಿ ತಂದು ಮಗಳ ಕಯ್ಯಗಿಡ್ತ.

"ತಕಮ್ಮಿ ಕರ್ಮಿನ...ನಾ ಅಟ್ಟೀಗೆನು ತರಕಿಲ್ಲ ಅಂತಾವ ನಿಸೂರು ಕೊಸೀತಿದ್ದಲ್ಲ ನಿಮ್ಮವ್ವ–ನ್ವಾಡು, ಏಟೊಂದು ತಂದಿವ್ನಿ?" –ಇತ್ತಲಲ್ಲಿ ಚಾಪೆ ಎಣೆಯಕ್ಕೆ ಅಂತ ಒಣಾಕಿದ್ದ ಈಚಲು ಗರಿಗಳ ಗುಡ್ಲು ವಳೀಕೆ ತತ್ತುಗಂಬತ್ತಿದ್ದ ಕಲ್ಯಾಣಿಗೆ ಕೇಳೂವಂಗೆ ಧಿಮಾಕ್ನಿಂದ ಯೋಳಿ, ವೊದ್ದಿದ್ದ ವಸ್ತ್ರದ ತುದೀಲಿ ಗಂಟಾಕಿದ್ದ ಸೊಸಲು ಮೀನಿ ಸುರುದು ಗುಡ್ಡೆ ಮಾಡಿದ.

ಈ ಗುಡ್ಡೇಲಿ ಅರ್ಧ ತಕ್ಕಂಡು, ರುಕ್ಮಿಣ್ಣವ್ವಾರು ಲಕ್ಕನ ಕಯ್ಲಿ ಕ್ವಟ್ಟು ಕಳಿಸಿದ್ದ ಮೊಗರು ಒದ್ನೆಕಾಯಿನೂವೆ ಸೇರುಸಿ, ಸಿವುನಿ ಮೆಲೋಗರ ಮಾಡಿದಳು. ಅದರೊಳಿಕೆ ಹಿಟ್ಟು ಹೊರಳಿಸಿ ನುಂಗ್ತ ನುಂಗ್ತ ನಿಂಗಯ್ಯ ತಾನು ಕಂಗಣ್ಣಪ್ವಾರ ಅಟ್ಟೀಲಿ ಜೀತಕಿದ್ದಾಗ ಅವರ ಹೆಂಡತಿ ಸಿದ್ದಮ್ಮ ಮಾಡ್ತಿದ್ದ ಮೇಲೋಗರದಂಗೇ ಅದೆ ಅಂತ ನೆನೆಸಿಕೊತ್ತಿದ್ದ. ಏಡು ಜಿನ ಬುಟ್ಟು ಉಳಿದಿದ್ದ ಕರ್ಮಿನಿನಲ್ಲಿ ಗೊಜ್ಜು ಮಾಡಿದ್ದಲು ಸಿವುನಿ. ಅದನಂತೂ ನಿಂಗಯ್ಯ ವೊಗಳದ್ದೂ ವೊಗಳದ್ದೆ!–

"ತೆಗಿ, ತಗಿ. ಗಂಗಡಕಾರರೂ ನಿನ್ನ ಜಪಾತಿಮಾಂವುಸದ ಅಡುಗೆ ಮಾಡನಾರ್ರು ಕನ... ಮುಕ್ಯ, ಆ ನಿನ್ನ ಗಂಡ ಅನ್ನುಸಿಕಂಡ ನಂಜನಗೂಡ್ನ ಆ ತಲೆ ಮಾಡಿಸದೋನ್ಗೆ ನಿನ್ನ ಕಯ್ಯಿ ರುತಿ ಉಣ್ಣಾಕೆ ಅದ್ರುಸ್ಟಪಡೀನಿಲ್ಲ" ಅಂತಿದ್ದಮಗೆ ಅವನ ಕಣ್ಣಲ್ಲಿ ನೀರಾಡಿದ್ದು ಉಂಟು.

ದರುಮನಳ್ಳಿಯ ಗಿಡಗೆಂಟ, ಅಳ್ಳಕೊಳ್ಳ, ಅಟ್ಟಿಗುಡ್ಲುಗಳ್ನೆಲ್ಲ ಗಕುಮ್ಮನೆ ಕತ್ತಲು ಮುಚ್ಚುಗತ್ತಾ ಬತ್ತಿತ್ತು... ಉಂಡು ತಡಿಕೆಬಾಗಿಲ ತಳ್ತಾ ಈಚೆಗೆ ಬಂದ ಲಕ್ಕ, ಗುಡ್ಲ ಬಾಜೂನಲ್ಲೆ ಇದ್ದ ಸೊಂಟದೆತ್ತರದ ಬಂಡೆ ಅತ್ತಿ ಕುಂತು ಬೀಡಿ ಕತ್ತಿಸ್ದ. ಇನ್ನೂ ಉರೀತಿದ್ದ ಬೆಂಕಿಕಡ್ಡಿಯ ಉಫ್ ಅಂದು ಆರುಸಿ, ವಕ್ಕಡೆ ಎಸದು, ಕತ್ತೆತ್ತಿದ– ಯಾರೋ ತಳಗಡಿಂದ ಮೀಟಿದ ತರ, ಒಂದು ಕೆಂಡದ

ಉಂಡೆ ವಸಿ ವಸ್ಯಾಗಿ ಚಿಮ್ಮಿ ಮೂಡಲ ಬಾನಿನಲ್ಲಿ ತಳತಳಗುಟ್ಟಕ್ಕೆ ಸುರು ಮಾಡಿತ್ತು!... ಅದ್ನೇಯ ಹೊಸದಾಗಿ ನೋಡೋನಂಗೆ ಬುಟ್ಟ ಕಣ್ಣು ಬುಟ್ಟ ಬಾಯಾಗಿ ನ್ವಾಡ್ತ ಕುಂತ ಲಕ್ಕ, "ಇವೊತ್ತೆ ಉಣ್ಣಿಮೆ ಇರಬೈದ?" ಯೋಚಿಸ್ತ ಇರ್ವಾಗ, ಕುಂಡಿಮಾದಿ ಇವರ ಗುಡ್ಲ ಮುಂಚೋರಿಕೆ ಬಂದು,

"ಕಲ್ಯಾಣವ್ವ, ಕಲ್ಯಾಣವ್ವ–ನಾವೆಲ್ಲಾರೂವೆ ದ್ಯಾವಾಜಮ್ಮನ ಗುಡ್ಲು ಮುಂಚೊರಿ ಸೇರ್ತಾ ಇವಿ– ಚಾಪೆ ಎಣೆಯಾಕೆ. ಜಟ್ನೆ ವೊಂಟು ಬನ್ನಿ. ಬೆಳದಿಂಗ್ಳು ಚೆಲ್ಲಾಡ್ತ ಬಿದ್ದದೆ" ಎಂದು ಒಂದೇ ಉಸುರಿಗೆ ಯೋಳಿ, ಇನ್ನೊಂದು ಗುಡ್ಲು ತಾವಿಕೆ ಚಿಗಿದ್ಲು.

ಹಿಂದೆಯೇ ಒಣಾಕಿದ ಈಚಲು ಗರಿ ಸೊಗೆಗಳ್ನ ಸಿಗದು ಕಂತೆಗಳ ಮಾಡಿ, ಆ ಕಂತೆಗಳ್ಗೆ ತ್ಯಾವದ ಪಾವುಡೆ ಸುತ್ತಿ, ಆ ಕಂತೆಗಳ ಸೈತ ಕಲ್ಯಾಣಿ, ಜತ್ಗೆ ಕೂಸು ತತ್ತುಗಂಡ ಸಿವುನಿ ಇಬ್ಬರೂವೆ ಗುಡ್ಲಿಂದ ವೊಂಟು ದ್ಯಾವಾಜಮ್ಮನ ಗುಡ್ಲು ಮುಂದಕೋದರು.

ಆ ಗುಡ್ಲು ಮುಂದಕೆ ಒಬ್ಬೊಬ್ಬರಾಗಿ ಇಬ್ಬಿಬ್ಬರಾಗಿ ಎಂಗಸರು ಬಂದು ಹಾಸಿದ ಚಾಪೆಗಳ ಮೇಲೆ ಕುಂತರು. ಕುಂತು ತಂತಮ್ಮ ಕಂತೆಗಳ ಬಿಚ್ಚುತಿದ್ದಂಗೆ ಅವರವರಲ್ಲಿ ಮಾತೂ ಬಿಚ್ಚಗತ್ತು.

ಗೋಟಡಿಕೆ ಬಾಯಿಗೆಸೆದು, ವೀಳೆಯದೆಲೆಗೆ ಸುಣ್ಣ ಹಚ್ಚುತ್ತ, ಮೊದ್ಲು ಮಾತಿನ ಬೋಣಿ ಉಳ್ಳಿಸಿದೋಳು ದ್ಯಾವಾಜಮ್ಮ:

"ಲೇ ಸಿವುನಿ, ನಿಮ್ಮಯ್ಯ ಯಾವತ್ತೂವೆ ನಿನ್ನ ಕಯ್ಯಿ ರುತಿಯ ನಮ್ಮೊರತ್ರ ಆಡ್ತಾನೆ ಇರ್ತವ್ನಂತೆ... ಇವೊತ್ತು ಯಾವ ಮಾಡಿದ್ಯಣೆ ನಂಜಕ್ಕೆ?"

ಕಂತೆಗೆ ಸುತ್ತಿದ್ದ ಒದ್ದೆ ಪವುಡೆ ಆಳೀತ ಸಿವುನಿ,

"ಬೇಸ್ತವಾರ ಸಂತಿಂದ ನಮ್ಮಯ್ಯ ತಂದಿದ ಕರ್ಮಿನ್ನಲ್ಲಿ ವಸಿ ತಕ್ಕಂಡು, ಬದನೆಕಾಯಿ ಜ್ವತ್ಗೆ ಕುದ್ಸಿ ಆ ಜಿನವೆ ಮ್ಯಾಲೋಗರ ಮಾಡಿದ್ದಿ. ಇನ್ನುಳುಕೆ ಸೋಸಲು ಬತ್ತಿಸಿ ನಂಜಕ್ಕೆ ಗೊಜ್ಜು ಮಾಡಿದ್ದೆ ಕನತ್ತೆ" ವರದಿ ಮಾಡಿ, ಬೆಲ್ಲಗೆ ಮೆತುವಾಗಿದ್ದ ಈಚಲುಗರಿಗಳ ಚಾಪೆ ಇಣೆಯಕ್ಕೆ ಅಣಿಯದ್ಲು.

ದ್ಯಾವಾಜಿ ಮಾತಿನ ಮಲ್ಲಿ, ವೀಳ್ಯದೆಲೆಯ ದವಡೆಗೆ ವತ್ತರುಸಿ ಹೊಗೆಸೊಪ್ಪ ಅಂಗಯ್ಯಲಿ ತೀಡಿ, ಬಾಯಿಗೆಸೆದು, ಸರಸವಾಗಿ ಕಣ್ಣ ವೊರಳುಸಿ, ತನ್ನ ಗಲ್ಲವ ಕಯ್ಯಲಿ ಹಿಡಿದು,

"ಕ್ಯಾಳಿದಿರೇನವ್ವ, ಈ ಎಣ್ಣು ಯೋಳಿದ ಮಾತ?... ಅವತ್ತು ಕರ್ಮೀನ್ನೂ ಬದ್ನೆಕಾಯ್ನೂವೆ ಬೆರುಸಿ, ಮ್ಯಾಲೋಗ್ರ ಮಾಡಿದ್ಲಂತೆ. ಇವತ್ತು ಉಳುಕೆ ಕರ್ಮಿನ

ಬತ್ತಿಸಿ ಗೊಜ್ಜು ಮಾಡಿದ್ಲಂತೆ... ಅದ್ಯಾಕೆ, ನನ್ನೂವೆ ಕರದಿದ್ರೆ ನಾ ಯೇನ ವಲ್ಲೆ ಅಂತದ್ಯಾ?– ಕರ್ಮೀನು ನಂಗೇನು ಸೆಡೀದೆ ಇತ್ತ?" ಅಂದುದಕೆ ಅಲ್ಲಿ ನೆರೆದಿದ್ದ ಎಂಗಸರೆಲ್ಲಾರು ಗೋಲ್ ಗೊಳ್ ನಗಾಡಿದರು. ಅಂಗೇಯ ಚಾಪೆ ಎಣೆಯಾಕೆ ತಂತಮ್ಮ ಬೆರಳುಗಳ ತೊಡಗಿಸಿದ್ರು.

ಎಣೀತ ಎಣೀತ ಚೌಡಿ ಮೆತ್ತಗೆ ಉಸಿರೆತ್ತಿದ್ಲು:

"ನ್ವಾಡ್ರಾಕ್ಕ, ನಮ್ಮ ಕಿರಿಹೈದ ಇಲ್ವಾ, ಅವುನ್ಗೆ ಈ ಊರ್ನಲ್ಲಿ ಯಾವಳೊ ಮೂಳಿ ಮದ್ದು ಆಕಿದ್ಲು. ಮೊದಮೊದ್ಲು ನಮಗ್ಯಾರಿಗೂವೆ ಇದ್ರ ಸುಳೂವೇ ಅತ್ತನಿಲ್ಲ. ಉಡುಗ ದಿನದಿನ್ಕೆ ನವೀತ ಬತ್ತಿದ್ದ. ಅನುಮನಸಾಯ್ತು. ಸಂತೆಗೋಗಿದ್ದಾಗ ಜವುಳಿ ಅನಂತ ಸೆಟ್ಟರು ಯೋಳಿದ್ರು. ಇದ್ಕೆ ಮದ್ದ ಅಕಿರೂವಂಗೆ ಕಾಣ್ತದೆ. ಈ ಮದ್ವ ತಗಿಯೊ ವಬ್ಬಳು ಬೂಬಮ್ಮ ಅವ್ಳೆ. ಅವಳತ್ರ ಕರಕಂಡೋಗಿ ತೊರುಸು, ಅಂದ್ರ. ಅವಳೆಸರು ಕಾಸಿಂಬೀ. ಸಂತೆಮಾಳದಾಗೆ ಅವ್ಳ ಮನೆ. ಅಲ್ಲಿಗೆ ನಮ್ಮುಡುಗ್ನ ಕರಕಂಡೋದೆ. ಅವ್ಳು ಅದ್ಯಾನೊ ವಮನ ಮಾಡೊ ಅವುಸ್ದ ಕುಡಿಸ್‌ದ್ಲು. ವಸಿ ವೊತ್ನಲ್ಲೆ ಹೈದ ವಮನ ಮಡಿಕತ್ತು–ಈಟು, ಒಂದು ತಣಿಗೆ ತುಂಬ!... ಆಚರ್ಯದ ಸಂಗ್ತಿ ಅಂದ್ರೆ, ಆ ಬೊಬಮ್ಮ ತಣಿಗೆ ವಳುಗಿನ ವಮನದಲ್ಲಿ ಕಯ್ಯಾಡಿ ಗೆಜ್ಜುಗದ ಗಾತ್ರದ ಒಂದು ಉಂಡೆ ತಗದು, ನ್ವಾಡು. ಇದೇ ಇಕ್ಕಮದ್ದು. ಇದ್ನ ಕಡಬ್ನಲ್ಲಿ ಸೇರ್ಸಿ ಕ್ವಟ್ಟವ್ರೆ. ಸುಮಾರು ಜಿನ ಆಗ್ಯೆತೆ. ಇಲ್ನೋಡು, ಆಗ್ಲೆ ಇದರಾಗೆ ಕೂದಲೂ ಬೆಳುದು ಬುಟ್ಟಿದೆ" ಅಂತ ತೋರಿಸಿದ್ಲು... ಸದ್ಯಕೆ, ಪುಣಾತಿಗಿತ್ತಿಂದ ನನ್ನ ಕಂದ ಬದುಕ್ಕತ್ತು."

ಚೌಡಿ ಮಾತ ಮುಗಸ್ತಿದ್ದಂಗೆ,

"ಅವ್ವಿ, ಇದ್ಯಾವ ಚಾಳಿ ಕಲ್ತಿದ್ದಾರು, ಈ ರಂಡೇರು?" ಖಾರ್ವಾಗಿ ಕಲ್ಯಾಣಿ ಅಂದುದಕ್ಕೆ, ದ್ಯಾವಾಜಿ,

"ಹಯ್ಯೊ, ಅಸ್ಟೇ ಯಾಕೆ–ಯಾರೂ ದ್ವರೀದೆ ಇದ್ರೆ, ಕೂಡಿದ ಗಂಡನ್ಗೇ ಆಕು ಅನ್ನುಸ್ತದಂತೆ ಈ ಚಾಲಿ ಕಲುತೋರ್ಗೆ!" ಅಂದಾಗ.

"ಅಸ್, ಇವರ ಮನೆ ಎಕ್ಕುಟ್ಟೋಗ" ಅಂತ ಯಾರೊ ಒಬ್ಬಳಂದ್ಲು.

"ಊರ್ನಲ್ಲಿ ಇಂತೋರು ಕೆಲವು ಎಂಗಸರು ಅವರೆ. ಉತ್ತಮರಲ್ಲೂ ಅವರೆ ಅಂತಾನು ಕ್ಯಾಳಿವ್ನಿ" ಇನ್ನೊಬ್ಬಂದ್ಲು.

ಇಕ್ಕು ಮದ್ದಿನ ಸುದ್ದಿ ಇಂಗೆ ಒಬ್ಬರಿಂದೊಬ್ಬರಿಗೆ ಉರುಟ್ಲೆ ಆಡ್ತಾ ಇರೋನೂವೆ, ಕುಂಡಿಮಾದಿ,

"ಹಯ್ಯೊ, ಇಕ್ಕ ಮದ್ದು ಇಕ್ಕಬುಟ್ಟರಾರೂ ಸೈಸಕಬೈದು. ಆದ್ರೆ ಈ ಚಿತ್ರ

ಇಂವುಸೆ ಪಡಕ್ಕಿಂತ ಆ ಜಡೆಮುನಿ ತನ್ನ ತಾವಿಕೆ ಬ್ಯಾಗ ಕರಕಂಬುಟ್ರೆ ನಿಶ್ಚಿಂತಿಂದ ವೊಂಟೋಗಬೈದು..." ಇಸ್ಟು ಯೋಳಿ ಉಸುರುಗರುದ್ಲು.

ಎಂಗಸರೆಲ್ಲಾರೂವೆ ಒಂದೇ ಉಸುರ್ಗೆ,

"ಯಾನವ್ವ ಅಂತಾದ್ದು? ಯಾನಾಯ್ತು? ಬುಡುಸಿ ಯಾಳವ್ವ..." ಗಂಟಲು ದ್ವಡ್ಡದು ಮಾಡಿ ಕ್ಯಾಳಿದರು.

ಕುಂಡಿಮಾದಿ ಚಾಪೆ ಎಣೆಯೋದ ನಿಲ್ಲುಸದೆ,

"ಹಯ್ಯೊ, ಯಾನಂತ ಯೋಳಲವ್ವ..." ಅಂದು, ನಿಟ್ಟುಸುರು ಎಳೀತಾನೆ ಇರ್ವಾಗ, ದ್ವಾವಾಜಿ,

"ಹಯ್ಯೊ, ಎಂಗವ್ವ ಯೋಳಲಿ?..." ಪೇಚಾಡ್ತಾನೆ ಇದ್ಲು.

ದ್ಯಾವಜಿಗೆ ರೇಗ್ತು.

"ಯೋಳಕ್ಕೆ ಈಟು ಕಸ್ಟ ಆದ್ರೆ, ಬಾಯಿ ಮುಚ್ಕಂಡು ಗಮ್ಮನೆ ಕುಕ್ಕರುಸು" ಅಂತ ತುಟಿ ಬಿರುವಿದ್ಲು. ಆಗಲಾರು ಕುಂಡಿಮಾದಿ ಬಾಯಿ ಮುಚ್ಚಕಳನಿಲ್ಲ. ಪುನಾ ಉಸುರೇಳಿತ,

"ಒಂದು ಚೆಂದುಳ್ಳಿ ಪದಾರ್ತ ನಮ್ಮತ್ರ ಇದ್ರೆ, ಯೇನಾಯ್ತದೆ ನೀವೆ ಯೋಳಿ?" ಕ್ಯಾಳಿಬುಟ್ಲು.

ಕಲ್ಯಾಣಿಗೆ ತಡೀನಿಲ್ಲ.

"ಇದ್ಯಾಕಮ್ಮಿ. ಮಾತ್ನೆಲ್ಲ ಇಂಗೆ ಒಂಟು ಮಾಡೀಯೆ?" ಅಂದ್ಲು.

ದ್ಯಾವಾಜಿ ಫೈಡ್ ಅನ್ನೋ ಅಂಗೆ ಸಿಡಿದ್ಲು:

"ಒಂದು, ಒಂದು ಒಂಟು! ಯಾಕೆ ಇಂಗೆ ಮಾತ್ನೆಲ್ಲ ಒಂಟು ಮಾಡಿ ಮಾತಾಡೀ– ಒಂಟೊಂಟು ವಡೇರ ಗಂಟು ನಿಮ್ಮಪ್ಪನ ಕೊರಳೆಲ್ಲ ಸರಗಂಟು, ಅಂತಾವ?"

ಈಗಲೀಗ ಕುಂಡಿಮಾದಿ ಇಸ್ಯಕ್ಕೆ ಬಂದ್ಲು.

"ಹಯ್ಯೊ, ಯಾಕ್ರವ್ವ ಇಂಗೆ ಕ್ವಾಪುಸ್ಕಂಡೀರಿ–ಬುಡಸೇ ಯೋಳ್ತೀನಿ ಕ್ಯಾಳಕನ್ನಿ...ನಮ್ಮೆಣ್ಣು ಸಾವಂತ್ರಿ ಇಲ್ವ?–ಅವಳಿನ್ನೂ ರುತುಮತ್ಯೆ ಅಗ್ನಿಲ್ಲ ಅನ್ನಾದು ನಿಮಗೆಲ್ಲಾರ್ಗೂ ಗ್ವತ್ತೇ ಅದಲ್ಲ... ಆ ಕೆಂಗಣ್ಣಪ್ಪಾರೆ ಹೊಗೆಸೊಪ್ನ ಚಪ್ಪರದ ಗಳುಗಳ್ಗೆ ಹೊಗೆಸೊಪ್ನ ಮಾಲೆಗಳ ನ್ಯಾತಾಕಿ ಇನ್ನೇನು ಮುಗುದಿತ್ತಂತೆ. ಯೆಲ್ಡೋ ವಸಿ ಮಾಲೆ ಉಳುಕಂಡಿದ್ವಂತೆ. 'ಇವ ನಾನು ಈವೆಣ್ಣು ಏಡಾಳೂವೇ ಆಕತ್ತೀವಿ. ನೀವೆಲ್ಲಾರೂ ವೊಗರಮ್ಮಿ 'ಅಂತ ಕಳಸುಬುಟ್ಟು–ಊರ ಆಚೆಗಿರೊವುರ ಇತ್ತಲಲ್ಲಿ, ಒಂಟಿ ಸಿಕ್ಕಾಕಂಡ ನಮ್ಮೆಣ್ಣಿನ ಮ್ಯಾಲೆ ಬಿದ್ಕಂಡು ಹ್ವಸಕಾಡಿದ್ರಂತೆ... ಇಂಗೂ

ಉಂಟೇನ್ರವ್ವ?– ಒಂದು ಪಕ್ಕಸ ನಮ್ಮ ಸಾವಂತ್ರಿ ರುತುಮತಿಯೇ ಆಗಿದ್ರೆ, ಯಾನ ಗತಿ?"

ಕುಂಡಿಮಾದಿ ಇವರಿಸಿದ ಆ ಸಂಗ್ತಿ ಅಲ್ಲಿ ನೆರೆದಿದ್ದೋರು ಎಲ್ಲಾರನೂ ದಿಗ್ಭ್ರಮೆಗೊಳಿಸಿದ್ರೂ ದ್ಯಾವಾಜಿ ಮಾತ್ರ "ಇಸ್ಟೇಯ?" ನಗಾಡ್ತ, ಬೆಪ್ಪಾಗಿ ಕುಂತಿದ್ದ ಆ ಎಂಗಸರ ಇನ್ನೂ ಬೆಪ್ಪುಗುಡಿದಳು. ಎಲ್ಲಾರು ತಂತಮ್ಮ ಚಾಪೆ ಎಣೆಯಾದ ನಿಲ್ಲುಸಿ, ದ್ಯಾವಾಜಿ ಮೊಖಾನೆ ಒಂದು ಚಣ ನೋಡದ್ರು, ದ್ಯಾವಾಜಿ ನಗಾಡಾದ ನಿಲ್ಲುಸಿ,

"ಹಯ್ಯೋ, ಇದರಾಗೆ ಯಾವ ಅತಿಸಯ ಇದ್ದದು ತಗಿ... ಆವಯ್ಯ ಸರಕಾರಿ ಗೂಳಿ ಅಂಗೆ ಕಂಡ ಕಂಡ ಅಮ್ಮೀರು ಮ್ಯಾಲೆಲ್ಲ ಹಾರಿ, ತನ್ನ ಪುರುಸತ್ವಾನೆಲ್ಲ ಕಳಕಂಡು ಭಾಳ ಕಾಲ ಆಗೋಯ್ತು, ಈಗ ಮ್ಯಾಲೆ ದಬ್ಬನೆ ಬೀಳಾದು, ಹ್ವಸಕಾಡಾದು, ಈಟೇಯ ಆವ್ನ ಕಯ್ಲಿ ಕಿಸಿಯಾದು! ಅವ್ನು ಮಡಕ್ಕಂಡಿದ್ದ ಮರಸು ವಕ್ಕಲಿಗರ ದ್ಯಾವೀನೆ ನನ್ನ ಕುಟ್ಟೆ ನಗಾಡ್ತ ಯೋಳಿದ್ಲು... ಈಗ ನಿನ್ನ ಸಾವಂತ್ರಿ ರುತುಮತಿ ಆಗದಿದ್ರೂ ವೋಟೇಯ, ಆಗಿದ್ರೂ ವೋಟೇಯ– ನಿಂಗ್ಯಾಕಮ್ಮಿ ಬಯ?... ನೀನೊಂದ ಪೆದ್ದುಗರ. ಸಾವಂತ್ರಿಗೆ ಯೋಳುಕಡು. ಇನ್ನೊಂದು ದಪ ಇಂಗೇನಾರ ಆಡುಕ್ಕೆ ಬಂದ್ರೆ ಮೊದ್ಲು ದುಡ್ಡು ಮಡಗು ಅನ್ನಲಿ" ಅಂದೋಳು, ಇನ್ನೋಟು ಹೊಗೆಸೊಪ್ಪ ಇಮ್ಮಣಿಚೀಲದಿಂದ ತಗದು ದವಡೆಗೆ ವತ್ತರುಸ್ತ, "ಈವಯ್ಯ ಆಡೋ ಆಟಕೆ ದ್ಯಾವರು ಐನಾತಿ ಎಡತೀನೆ ಗಂಟಾಕವ್ನೆ, ತಕೋ.... ಇವ್ನು ಕದ್ದು ಮಾಡಾದ, ಅವಳು ರಾಜಾರೋಸವಾಗೆ ಮಾಡ್ತವಳಲ್ಲ?... ಈ ಮುಂಡೇದೇನಾರ ತುಟಿಪಿಟಕನ್ನಾಕೆ ಅಪ್ಪಣೆ ಉಂಟ?– ನಮ್ಮೂರ್ನಲ್ಲಿ ಆಡೋ ಯಕ್ಷಗಾನದಲ್ಲಿ ಮರದ ಅಟ್ಟ ನಡಗಿಸಕ್ಕಿಲ್ವ, ತೊಂಡಾ ನೂರು ರಕ್ಕಸಿ, ಅವ್ಳಂಗೆ ಒಂದು ದಪ ಅಬ್ಬರಿಸುದ್ರೆ ಮುಗಿದೊಯ್ತು, ಇಂದುಗಡೆ ಸ್ಯಾವಿಗೆ ಒತ್ತಿಗತ್ತದೆ ಅಯ್ಯನಿಗೆ!..." ರಸ್ವತ್ತಾಗಿ ಇಂಗೆ ಯೋಳಿದಾಗ ಎಂಗಸರೆಲ್ಲ ಬಿದ್ದು ಬಿದ್ದು ವೊಟ್ಟೆ ಉಣ್ಣಾಗೊ ವರ್ಗ್ಗವೆ ನಗಾಡಿದರು ಹುಚ್ಚು ಬೋರಿಯಂತೂ "ಅವ್ವಯ್ಯ! ನಾ ಇನ್ನು ನಗನಾರಿ..." ಅಂತ ತನ್ನ ಪಕ್ಕೇನೆ ಏಡು ಕಯ್ಲೂ ಇಡಕಂಡ್ಲು.

ದೂರದಿಂದ್ಲೆ, ಲಕ್ಕನೂ ನಕ್ಕ. ಕುಸಾಮತ್ತಿನ ಮಾತುಗಾರಿಕೇಲಿ, ನಿಮ್ಮ ಹೊಲಗೇರಿಗೆಲ್ಲ ದ್ಯಾವಾಜೀನೆ ಒಂದನೆ ನಂಬ್ರೂಂತ ಕೇಸವಯ್ಯಾರು ಯೋಳ್ತಿದ್ದದ್ದು ಸಪ್ಪಟ್ಟೆ ಮಾತೇನಲ್ಲ!... ಲಕ್ಕಂಗೆ ತಾನೂವೆ ಆ ಎಂಗಸರ ಜ್ವತೆ ಸೇರಿ ಚಾಪೆ ಎಣೆಯೊ ಚಪಲ. ಆದ್ರೆ, ಈ ದಿನ ದೇಸವಯ್ಯರು ತಮ್ಮ ತ್ವಾಟದಲ್ಲಿ ಮಯ್ಯಿ

ಮುರಿಯೊ ಕೇಮೆ ಮಾಡಿಸಿದ್ರು. ಅದುಕೆ ಯಾರೋ ಯಾನು ಮಾಡಕ್ಕೂ ಉಮ್ಮಸ್ಸೇ ಬತ್ತಾ ಇಲ್ಲ. ಮಯ್ಯಿ ಕಯ್ಯೆಲ್ಲ ಯಾತಾವು ಹುಣ್ಣು ನೋಯೂವಂಗೆ ನೋಯ್ತಾ ಅವೆ... ಈಗ ಕಿಸ್ಟಸಾಸ್ತ್ರಿಗಳ ಅತ್ರ ತಕ್ಕಂಡಿದ್ದ ಸಾಲ ತೀರೋಗಿ, ತಾನು ಊರ್ನಲ್ಲಿ ಬ್ಯಾರೆಬ್ಯಾರೆಯೋರ ತ್ವಾಟತುಡಿಕೆಗೂ ಕೂಲಿಕಂಬಳಕೆ ವೋಗಕ್ಕೆ ಅವಕಾಸ ಸಿಕ್ಕಿತ್ತು. ಆದ್ರೂವೆ ಸಾಸ್ತ್ರಿಗಳ ತ್ವಾಟಕೇ ಈಗಲೂ ಎಚ್ಚಾಗಿ ವೋಯ್ತಿದ್ದದ್ದು. ಒಂದೊಂದು ಜಿನ ಸಾಸ್ತ್ರಿಗಳ ತ್ವಾಟದಲ್ಲಿ ಅಪ್ಪರ ಕೆಲ್ಸ ಇಲ್ಲಿದ್ದ ಜಿನ, ಅವರೇನು 'ನಾಳೆ ಬ್ಯಾರೆ ಯೆಲ್ಲಾರು ಕೂಲೆ ನ್ವಾಡಿಕಳ್ಳಿ' ಅಂದುಬುಡ್ತಿದ್ದರು. ಅಂಗಾಗಿ, ತಾನೂವೆ ಈಚೀಚ್ಗೆ ಅವರಿವರ ತ್ವಾಟಕೂ ವೋಗೋದ ಪಾಟಮಾಡ್ಕಂಡಿದ್ದ. ಅದೇ ಕಾರಣಕೆ ಈ ಜಿನ ಕೇಸವಯ್ಯಾರ ತ್ವಾಟಕೋಗಿದ್ದ... ಆ ಕೇಸವಯ್ಯ ಕೆಲಸ ತಗಿಯಾದ್ರಲ್ಲಿ ಬೋ ನಿಪುಣ! ಮಾತಿನ ಸಂದೀಲೇ ಅವರೇಕಾಯಿ ಕುಯ್ಯೊ ಆಸಾಮಿ. ವಳ್ಳಿ, ಮಾತಾಡ್ತ ಮಾತಾಡ್ತಾನೆ, ನಾವು ಏಟು ಕೇಮೆ ಮಾಡ್ದೊ ಅನ್ನಾದೆ ಗ್ವತ್ತಾಗದ ತರ, ಮಂಕುಬೂದಿ ಯೆರಚುಬುಡ್ತಾನೆ!–" ಲೋ ಲಕ್ಕ, ಈ ದರುಮನಳ್ಳಿ ಬಡ್ಡಿ ಮಕ್ಕಳೆಲ್ಲ ಊಟುಕೆ ಮುಂದು, ಕೆಲುಸಕ್ಕೆ ಇಂದು... ಸೋಂಬೇರಿ ಇಸಂಗಳು... ನಾನ್ವಾಡಿದ್ರಲ್ಲಿ ನೀನೋಬ್ನೆ ಮಯ್ಯಿಗಳ್ತನ ಮಡ್ದೆ ನಿರ್ವಂಚನ್ಯಾಗೆ ಕೆಲ್ಸ ಮಾಡೋನು. ನಾವು ಕ್ವಡೋ ದುಡ್ಡಿಗೆ ನೀನೆಂದೂ ಮ್ವಾಸ ಮಾಡಕಿಲ್ಲ. ಅದೇ ನಂಗೆ ತಾರೀಪು. ಅದುಕೆ ನಾನು–ಬಾಳೆ ಗುಣಿ ತೋಡೋದು, ನೀರು ಹರಿಯೊ ಹಿಕ್ಕಲು ಸೋಸೊದು, ಇಂತಾ ದೊಡ್ಡ ಕೆಲ್ಸ ಕಾರ್ಯಗಳ್ಗೆಲ್ಲ ನಿನ್ನೇ ಕರೆಯೋದು!... ಬಾಕಿಯೋವು ಬತ್ತವ–ಮೂದೇವಿ ಮುಕ್ಕಗಳು!... ಹಾರೆ ಇಳುಕಿ ನೆಟ್ಟಗೆ ಒಂದು ಮೊಳ ಗುಂಡಿ ತೋಡ್ನಿಲ್ಲ, ಗುದ್ದಲಿ ಆಡ್ಸಿ ನೆಟ್ಟಗೆ ಮೂರು ಮೊಳ ಹಿಕ್ಕಲು ಸೋಸನಿಲ್ಲ–ನಡ ಬಿದ್ದೋದೊರಂಗೆ ಉಸ್ ಅಂದುಕುಂತುಗಂಡು ಬುಡೋದೇಯ!... ಅಂತಾ ಹೊಳ್ಳಂದೊಳ್ಳೆ ಆಸಾಮಿಗೊಳ ಕಂಡರೆ ನಂಗೆ ಉಂಗುಸ್ಟದಿಂದ ಇಡಿದು ನಡುವೆತ್ತಿ ತನಕ ಉರಿ ಕಿತ್ತುಗತ್ತದೆ, ನ್ವಾಡಪ್ಪ... ಚ್, ಅವರ ಮಾತು ಈಗ್ಯಾಕೆ ಬುಡು. ನೀ ಎಸ್ಟಾದರೂ ವಸಿ ಓದ್ದೋನು. ಅ–ಆ–ಇ–ಈ ಅನ್ನಕ್ಕಾರೂ ಬತ್ತದೆ. ಬಣ್ಣ ಒಂದೇ ಅಂತ ಕಾಗೇನೂ ಕೋಗಿಲೆನೂವೆ ಒಂದೇ ಅನ್ನಕಾದಾತ?– ನೀನೇ ಯೋಳು...' ಇದೇ ತರ ತನ್ನ ಕೆಲ್ಸ ಸಾಧಿಸಬೇಕಾದ್ರೆ ಮಾತ್‌ಮಾತ್ಗೂ ಬೆಣ್ಣೆ ಸವುರ್ತಾನೆ ಇರ್ತಾನೆ...

ಲಕ್ಕನ ಯೋಚ್ನೆ ಇಂಗೆ ಗಾಣ ವೋಡೀತಿರ್ವಾಗ, ಕೆರೆ ಓಣಿ ತಿರುವಿನಲ್ಲಿ ಬೊಡ್ಡ ಒಂದೇ ಸಮಕೆ ಬೋಗುಳ್ತ ಇದ್ದದ್ದ ಕೇಳಿ, "ಯಲ, ಇಲ್ಲೆ ನನ್ನ ಕಾಲು

ಬುಡದಲ್ಲೆ ನೆಕ್ಕುತಾ ಕುಂತಿದ್ದದ್ದು ಅದ್ಯಾವ ಮಾಯದಲ್ಲಿ ಅತ್ತಾಗಿ ಹಾರ್ತು"?

ಗಕ್ಕನೆ ಎದ್ದು ನಿಂತ.

ಸಾದಾರಣಾವಾಗಿ ಬೊಡ್ಡ ಬೊಗುಳೋದೆ ಒಂದು ರೀತ. ಅದಕೆ ಬೆದೆ ಬಂದು ಎಣ್ಣುನಾಯಿ ಕಂಡಾಗ ಬೊಗುಳೋದೆ ಬ್ಯಾರೆ ತರ. ಇನ್ನೊಂದು ನಾಯಿ ಕುಟ್ಟೆ ಕದ್ನಕ್ಕ ನಿಂತಾಗ ಗುರುಕಾಯಿಸ್ತಾ ಮಾಡೊ ಸದ್ದೇ ಬ್ಯಾರೆ. ವೊಟ್ಟೆ ಅಸಿದು, ಇಟ್ಟು ರೊಟ್ಟಿ ಬಾಡು ಬೇಕು ಅನ್ನುಸಿದಾಗ ಸುತ್ತ ತಿರುಗ್ತ ಬೇಡೊ ಮಕ್ಕಳಂಗೆ ಹೊಂಡಿಸೊ ರಾಗಾನೆ ಬ್ಯಾರೆ. ತ್ವಾಳನ್ನೊ ಕಿರುಬನ್ನೊ ಕಮಡು ನಡುಗ್ತ ಅರಚಿಕಳ ಸೊಲ್ಲೇ ಬ್ಯಾರೆ...

ಕಿವಿಕ್ವಟ್ಟು ಆಲಿಸ್ದ.

ಇಲ್ಲ, ಇದರಾಗೆ ಸಂಸಯ ಇಂಕರಾನು ಇಲ್ಲ. ಇದು ಯಾನ್ನೊ ಕಂಡು ಹೆದುರದೆ, ನೋಡವ–ಅಂತ ಕೆರೆ ಓಣಿ ತಿರುವಿಗೋದ.

ಅಲ್ಲಿ ಅವ್ನ ಕಣ್ಣಿಗೆ ಬಿದ್ದ ನ್ವಾಟ, ಅವ್ನ ಎದೆಯ ನಡುಗುಸ್ತು, ತಟಕ್ನೆ ನಾಕೆಜ್ಜೆ ಇಮ್ಮೆಟ್ಟಿ ನಿಂತ. ಅಲ್ಲಿ ಒಂದು ಕೀರನ್ಗೂ ಒಂದು ನಾಗರಹಾವಿಗೂವೆ ವೋರಾಟ ನಡೀತಿತ್ತು... ಇಂತಾದೊಂದು ನಡೀತದೆ, ಇವು ಏಡು ಪ್ರಾಣಿಗಳ್ಗೂ ಹುಟ್ಟಾ ವೈರ ಅನ್ನಾದನೇನೊ ಇವ್ನೂ ಕೇಳಿದ್ದ. ಮಾತ್ರ ಇಲ್ಲೀಗಂಟ, ಇವ್ನ ಜೀವಮಾನ್ದಲ್ಲಿ ಕಣ್ಣಾರ ಕಂಡೀರನಿಲ್ಲ...

ವೋಟಗಲ ಹೆಡೆ ಬಿಚ್ಚಿ ಕಡು ರೋಸದಿಂದ ಮೊರೆದಾಡ್ತ ನಾಗರಹಾವು ರೊತ್ ರೊತ್ನೆ ಹೆಡೆ ಅಪ್ಪಳಸಿ ಕೀರನ್ನ ಕಚ್ಚಕ್ಕೆ ಪರ್ಯತ್ನ ಮಾಡ್ತಿತ್ತು, ಕೀರ ಕುಣುಕುಣಕಂಡ ಅತ್ತಿಂದಿತ್ತಾಗಿ ಕುಪ್ಪುಳುಸ್ತ ತಪ್ಪಿಸಕತ್ತಿತ್ತು. ಆರಂಬದಲ್ಲಿ ನಾಗರಹಾವಿನ ಅಬ್ಬರವೆ ಜೋರ್ನಲ್ಲಿ ನಡುದಿತ್ತು. ಅದ್ಕೆ ವಸಿ ದಣಿವು ಕಾಣಿಸಂಗೆ ಆಯಿತ್ಲೂವೆ, ಕೀರ ಮ್ಯಾಲೆ ಬಿದ್ದು ಹಾವಿನ ಕುತ್ತಿಗೆ ಕಚ್ಚಿತು. ಆದರೆ ಹಾವು ಸರಕ್ನೆ ತೆಪ್ಪು ಸಿಕಂಡು ಕೀರನ ಬೆನ್ನಿಗೆ ಬಲವಾಗಿ ಬಡುದು ಕಚ್ಚಿಬುಡ್ತು. ಆ ಗಳಗ್ನಿಂದ ಅವೇಡೂವೆ ಅತಿಸಯ ಪರಕ್ರಮದಿಂದ ಹೋರಟ ನಡುಸ್ದೊ. ಒಂದನ್ನೊಂದು ಕಚ್ಚಿ, ಕಡುದು ಬಿಸಾಕ್ತಿದ್ದೊ... ಕಡೀಕೆ ಹಾವು ಕೀರನ ಮುಯ್ಯಿ ಸುತ್ತಲೂವೆ ಉಡಕಂಡು ಕಚ್ಚಿಕಚ್ಚಿ ಇಡ್ತಾ ಇರ್ವಾಗ, ಹೊಂಚುಗಾರ ಕೀರ ಸಮಯ ಕಾದು ಹಾವಿನ ಬಾಯ್ನೆ ಗಪ್ಪನೆ ಹಿಡುದು, ಕಚ್ಚಿ ಕಡಿದಾಕಿಬುಡ್ತು!... ಕೀರನ ಮಯ್ಯ ಸುತ್ತಾಕಿದ್ದ ಸರ್ಪದ ಹಿಡುತ ಮೆತ್ತಮೆತ್ತಗೆ ಬುಟ್ಹೋಯ್ತ ಇದ್ದು, ಆಮ್ಯಾಕೆ ಕೀರ ಒಂದು ಸಲ ತನ್ನ ಮಯ್ಯ ವದುರ್ತ ಕುಣಿದಾಡಿದಾಗ, ಹಾವು ಸತ್ತು ಕೆಳುಕ್ಕೆ ಬಿತ್ತು...

ಆ ಕ್ಷಣದಲ್ಲಿ ಕೀರ ಆ ಜಾಗ ಖಾಲಿಮಾಡಿ, ಗುಡುಗಡ್ಡೆ ವಾಟ ಹ್ವಡಿಯಕ್ಕೆ ಸುರು ಮಾಡ್ತು. ಆದ ಕಂಡು ಲಕ್ಕನ ಆಸಕ್ತಿ ಕೆರಳ್ತು. ಅವ್ನು ಕೇಳಿದ್ದ– ಹಾವ್ನಿಂದ ಕಚ್ಚಿಸಿಕೊಂಡ ಕೀರ ತಕ್ಷಣದಲ್ಲಿ ಯಾವುದೊ ಮೂಲಿಕೆ ತಿಂತದೆ, ಅದರಿಂದ ಅದಕೆ ಹಾವಿನ ಇಸ ಅಂತಕ್ಕಿಲ್ಲ, ಅಂತಾವ... ಜನದ ಮಾತ ಪರೀಕ್ಷೆ ಮಾಡಬೇಕು ಅನ್ನುಸಿ, ಅದರ ಇಂದಿಂದೇನೆ ದೌಡಾಯಿಸ್ದ. ಆದರೆ ಅ ಕೀರ ಅಲ್ಲಿ ನುಗ್ಗಿ ಇಲ್ಲಿ ನುಗ್ಗಿ, ಅಲ್ಲಿ ನುಸುದು ಇಲ್ಲಿ ನುಸುದು, ವೋಟು ದೂರದವರ್ಗೂ ಕಣ್ಣಿಗೆ ಕಾಣಿಸ್ತಿದ್ದದ್ದು, ಲಾಜಾದಲ್ಲಿ ಎತ್ತಾಗೊ ಪರಾರಿಯಾಯ್ತು.

"ಬಡ್ಡಿ ಹೆತ್ತದ್ದು ಗಸ್ತು ಕ್ವಟ್ಟುಬುಡ್ತಲ್ಲ!" –ಬಾಯಿ ತುಂಬ ಸ್ಯಾಪ ಆಕ್ತ ಬತ್ತಾ ಇರೋನೂವೆ, ಕೆರೆ ಓಣೀಲಿ, ವೋಟು ದೂರದಲ್ಲಿ ಸವುದೆ ತುಂಬಿದ ಗಾಡಿಗೋಳು ಊರ ದಿಕ್ಕೇ ಇರಾದು ಮಂದಟ್ಟಾಗಿ, ಲಕ್ಕ, "ಯಾರ ಗಾಡಿಗಳು ಇವು?... ಈಟು ನತ್ರೀಲಿ ಸವುದೆ ತಕ್ಕಂಬರ ಬಂಜರ ಯೇನ ಇದ್ದದ್ದು?... ಇದರಾಗೆ ಯೇನಾರ ಇಕಮತ್ತು ಇರಬ್ಯೆದ?"... ತರ್ಕ ಮಾಡ್ಕತ್ತ, ಹಲಸಿದ ಮರದ ಮರೆಗೆ ಹೊಳ್ಳಿ ನಿಂತ. ಗಾಡಿಗಳು ಸಮೀಪಿಸ್ತ ಸಮೀಪಿಸ್ತ ಮಾರಿಗುಡಿ ಅಣ್ಣದೀರು–ಬೈಲಿಗರಂಗ, ಗುರುಮಲ್ಲು, ರುದ್ರ, ರಾಚೇವಾರದ ಕಾಳೂರ, ಕೊಪ್ಪಲು ಚೆನ್ನ–ಒಬ್ಬೊಬ್ಬರೂವೆ ಒಂದೊಂದು ಗಾಳ ವೋಡೀತ ಇದ್ದದ್ದು ಕಾಣುಸ್ತು. ಭರ್ತಿ ಗಾಡಿಗಳು. ಅವುಗಳ ತುಂಬ ಸವುದೆ!... ಗಾಡಿಗೊಳು ಊರ ವಳೀಕೆ ಬರದೆ, ಕೊಪ್ಪಲು ಓಣಿ ಚೋರೀಕೆ ತಿರುಕ್ಕಂಡೊ. ತಿರುಕ್ಕಂಡೋವ ಅಂಗೆ ನಿಂತೊ... ಯಾಕಪ್ಪ ನಿಂತೊ ಅಂತ ಲಕ್ಕ ಅಂತು ನ್ವಾಡುದ್ರೆ, ಎದುರ್ಗೆ ನಂಜೇಗೌಡರು ನಿಂತವ್ರೆ!– ಅವರು ಎಲಡಿಕೆ ರಸವ ಪಿಚಕ್ನೆ ಉಗದು,

'ಏನ್ರಲ್ಲ, ಹುಚ್ಚುಕಳ್ಳಿ ಸರ್ರ್ಯಾಗಿ ತುಂಬಿಕಂಡು ಬಂದಿದೀರೇನ್ರಲ?" – ಕೇಳಿದ್ದಕ್ಕೆ ಬೈಲಿಗ ರಂಗನ ದನಿ ಮುಂದಾಗಿ, ಉಳಿಕೆಯೋರ ದನಿಗಳೂ ಜ್ವತೆಯಾಗಿ,

"ಊ, ಸರ್ರ್ಯಾಗೆ ತುಂಬಿಕಂಬದಿವಿ ಕನ್ರಯ್ಯ" ಅಂದರು.

"ಆ ಫಾರೆಸ್ಟ್ ಗಾರ್ಡು ರಾಮಯ್ಯನ, ನೀವು ಅಲ್ಲಿದ್ದಾಗ, ಫಾರೆಸ್ಟಿಗೆ ವೋಗದಂಗೆ ತಡೀಬೇಕಾದ್ರೆ ನಂಗೂವೆ ಇನ್ನೊಂದು ಸಲ ತಾಯಿ ವೋಟ್ಟೇಲಿ ಉಟ್ಟಿ ಬಂದಂಗಾಯ್ತು. ಗಡದ್ದಾಗಿ ಊಟ ಆಕಿಸ್ದೆ. ಕಯ್ಯ ಬೆಚ್ಚಗೂ ಮಾಡ್ದೆ. ಆದ್ರೆ ಅವಯ್ಯಂಗೆ ಗ್ವಾಮಾಳೆಯೇ ಇಲ್ಲ. ಪರ್ತಿ ಸಲಾನೂ ಸುಲುದು ಬುಡ್ತನೆ" ಅಂದು, "ಊ, ಅದು ನನ್ನ ಅಣೆಬರಾವು. ಈಗ ಬುಡಿ ಗಾಡ್ಯ... ಪೊಲೀಸನೊರತ್ರ, ಮೈಸೂರು ತೋಲ್‌ಗೇಟ್ನಲ್ಲಿ ಜ್ವಾಪಾನ. ಈಟು ಜಿನದಂಗೇಯ ಆ ಪಿಶಾತಿಗಳ್ಗೆ

ಕ್ವಡೊ ಮಾಮೂಲ ಬಿಸಾಕಿ, ಈ ಮಾಲ ತಟಾಯಿಸೊ ಬಾರ ನಿಮ್ಮದು!... ಮೈಸೂರ್‍ನ ಶ್ರೀನಿವಾಸಯ್ನ ಕೋಠೀಲಿ ಶ್ರೀಗಂಧದ ತುಂಡುಗಳ ಇಳುಕಿ, ಆಳಿಗೆ ಐದೈದು ರೂಪಾಯಿ ಈಸುಗನ್ನಿ– ಮೈಸೂರಿಗೋದಾಗ ನಾನು ಲೆಕ್ಕ ಚುಕ್ತಾ ಮಾಡ್ಕತ್ತೀನಿ. ಅಂಗೇಯ ಮೈಸೂರು ಪಟ್ಟಣದಲ್ಲಿ ಗಾಡಿಮೇಲೆ ಹೇರಿರೊ ಸವುದೆ ಮಾರಿ ಬಂದ ದುಡ್ನಲ್ಲಿ, ಮೂರು ಮೂರು ರೂಪಾಯಿ ತಕ್ಕಂದು ಮಜಾ ಮಾಡ್ಕಂಬನ್ನಿ... ಉಂ" – ನಂಜೇಗೌಡರು ಅನ್ನಾದೆ ತಡ,

"ಅಂಗೇ ಆಗ್ಲಿ. ನಾವಿನ್ನು ಬತ್ತೀವಿ ಕನ್ರಯ್ಯ" ಅಂದು ಮಾರಿಗುಡಿ ಅಣ್ಣಂದೀರು ಗಾಡಿಗಳ ದೌಡಾಯಿಸಿದ್ರು. ಗಾಡಿಗಳು ವೋಟು ದೂರ ವೋಗೋದ್ನೇ ನ್ವಾಡ್ತಿದ್ದು, ನಸ್ಯ ಮೂಸಿ, ನಂಜೇಗೌಡರು ಊರ ದಿಕ್ಕೆ ವೊಂಟರು...

ಅಪ್ಪೊಯ್, ಯೇನೇನು ಕರಾಮತ್ತು ನಡೀತದೆ ಈ ಊರ್‍ನಲ್ಲಿ! – ಇಂಗೆ ನಡೀತದೆ ಅಂತ ಯಾರ್‍ಯಾರೊ ಗುಸುಗುಟ್ಟೋದ ಲಕ್ಕನೂ ಕೇಳಿದ್ದ. ಮಾತ್ರ ತನ್ನ ಕಣ್ಣಾರ ಕಂಡಿರನಿಲ್ಲ... ತಲೆ ತೂಗ್ತ, ಲಕ್ಕ ಹಲಸಿನ ಮರದ ಸಂದಿನಿಂದ ವೋರಿಕೆ ಬಂದು ಕೆರೆ ಓಣೀಗೆ ಇಳಿದ. ಕಳ್ಳಿ ಬೇಲಿ ಒತ್ತಿನಲ್ಲಿ ಸತ್ತು ಬಿದ್ದಿದ್ದ ಹಾವಿನ ಅತ್ರವೆ ಕುಂತು ಬೊಡ್ಡ ತಲೆ ಕೆಟ್ಟೋದಂಗೆ ವಸಿ ವೊತ್ತು ಬುಟ್ಟೊ ಬುಟ್ಟು ಬೊಗಳ್ತಾನೆ ಇತ್ತು. ಲಕ್ಕ ಕಣ್ಣಿಗೆ ಬಿದ್ದೇಟಿಗೆ, ಅದು ಅವನ ಸಮೀಪ ಬಂದು ನಿಂತು, ಸತ್ತು ಬಿದ್ದ ಹಾವನೆ ನ್ವಾಡ್ತ ಪುನಾ ಜೋರಾಗಿ ಬೊಗಳ್ತು. ಲಕ್ಕ, ಅದಕ್ಕೊಂದು ಒತ್ತ ಕ್ವಟ್ಟು, "ಬಾ ಬಾ–ನೀ ಇಂಗೆ ಬೊಗಳ್ತಾ ಕುಂತಿದ್ರೆ, ಇದ್ಯಾವ ತಿಕ್ಲು ಅಂದಾರು" ಸಿಡುಕಿ, ಮುಂದುಮುಂದಕೆ ಸಾಗ್ತಾ ಇದ್ದಂಗೆ ಬೊಡ್ಡ ಉರುಳಾಡ್ತ ಎದ್ದು, ಅವನೆ ಇಂಬಾಲಿಸ್ತು. ಆದ್ರೆ ಹೊಲಗೇರಿ ತಿರುವುಗಂಟ ತುಸ ತುಸ ದೂರಕೆ ವೋದಂಗೆಲ್ಲ ತಿರುತಿರುಗಿ ಬೊಗಳೋದು ಬುಡನೇ ಇಲ್ಲ!

ಲಕ್ಕ ಮತ್ತೆ ಬಂದು ಗುಡ್ಲ ಬಾಜೂನಲ್ಲಿದ್ದ ಬಂಡೆ ಏರಿ ಕುಂತ. ಚಾಪೆ ಎಣೆಯೊ ಎಂಗಸರು–ಮಾತು, ಪರಸಂಗ ಎಲ್ಲಾನು ನಿಲ್ಲುಸಿ ಪದ ಯೋಳಕ್ಕೆ ಸುರು ಮಾಡಿದ್ರು. ಆಗಲೆ ಒಬ್ಬೊಬ್ಬರೂವೆ ಅತ್ರ ಅತ್ರ ಅರ್ದದಷ್ಟು ಚಾಪೆ ಎಣೆದಿದ್ರು. ಬಾಣದಲ್ಲಿ ತಿಂಗಳ ಮಾವ ಆಗಲೆ ಮ್ಯಾಕ್ಕೆ ಬಂದು ಗುಂಡಗೆ ಥಳಥಳ ತೂಗ್ತಿದ್ದ. ಆ ಚಂದ್ರನ ಬೆಳಕು ಅರ್ದ ಎಣೆದ ಬೆಳ್ಳನೆ ಚಾಪೆಗೊಳ ಮ್ಯಾಲೆ ಬೆಳಗಿ ಅವುನ್ನ ಇನ್ನೂ ಬೆಳ್ಳಗೆ ಮಾಡಿತ್ತು. ಕಯ್ಯಲ್ಲಿ ಇಡುವ ನಾಕು ನಾಕು ಗರಿಗಳ, ತಮ್ಮ ಬೆರಳುಗಳಿಮದ ಮದ್ಯಕ್ಕೆ ನುಗ್ಗುಸಿ ನುಗ್ಗುಸಿ ತಗೀತ ಇದ್ದ ಆ ಎಂಗಸರ ಕಯ್ಯಿ ಚಳುಕದಲ್ಲಿ ಚಾಪೆಗಳು ನಿರುಮಾಣ ಆಯ್ತಿದ್ದುದ

ನಿರುಕಸ್ತ ಇದ್ದ ಲಕ್ಕಂಗೆ, ಆ ಈಚಲು ಗರಿಗಳ ತರಕ್ಕೆ ಅವ್ವ ಪಡ್ತಿದ್ದ ಪರಿಪಾಟ್ಲು ಗೆಪ್ತಾಗಿ, ಅವನ ಮನ ನೊಂದಿಕತ್ತು...

ಆ ಈಚಲು ಗರಿಗಳ ತರಕ್ಕೋದಾಗ ಏಟೋ ಸರ್ತಿ ಅವ್ವ, ಜತ್ಗೆ, ಅನೇಕ ಈಚಲು ಪ್ಯಾಟೆಗಳ ತಾವಿಕೆ, ಲಕ್ಕನೂ ವೋದ್ದುಂಟು. ವೋದೂರು ಈಚಲು ಪ್ಯಾಟೆ, ಮಾಕೋಡು ಈಚಲು ಪ್ಯಾಟೆ, ಮಲ್ಲಾಡಿ ಈಚಲು ವನ– ಇಂಗೇ ಇನ್ನೂ ಏಟೇಟೋ ದೂರದರದ ಈಚಲು ಪ್ಯಾಟೆಗಳನ್ನ ಅವ್ವನ್ನ ಜ್ವತ್ಗೆ ಬಳಿಸದ್ದುಂಟ. ಒಂದೊಂದು ಸಲು ಈಚಲು ಗರಿಗಳ್ಗಾಗಿ ಅದಿನಯದು ಇಪ್ಪತ್ತು ಮೈಲಿ ದೂರಕೆ ವೊದ್ದೂ ಉಂಟು. ದರುಮನಳ್ಳಿ ಹ್ವರಚ್ಚಿಗಿರೊ ಈಚಲು ವನಕ್ಕೆ ವೋಗಿ ಬಂದದ್ಕೆ ಲೆಕ್ಕಾನೇ ಇಲ್ಲ. ಅಯ್ಯ, ಬಾಕಿ ಈಚಲು ಪ್ಯಾಟೆಗಳಗಿಂತಲೂವೆ ದರುಮನಳ್ಳಿ ಈಚಲು ವನಕ್ಕೆ ಬಿಜಮಾಡಾದ್ರಲ್ಲೆ ತನ್ನ ಆಯುಸ್ನೆಲ್ಲ ಕಳುದಿದ್ದ. ಅಯ್ಯ ಅಲ್ಲಿಗೆ ವೋಗಿ ಬತ್ತ ಇದ್ದದ್ದು ಗರಿ ಸಂಪಾದ್ನೆಗಿಂತ ಮುಕ್ಯವಾಗಿ ದರುಮನಳ್ಳಿ ಈಚಲು ಪ್ಯಾಟೇಲಿ ರಾಚ ಇಟ್ಟಿದ್ದ ಅಂಗಡಿ ಎಂಡಕಾಗಿ!... ಅಯ್ಯ ಬಾಕಿ ಈಚಲು ಪ್ಯಾಟೆ ಬುಟ್ಟು ರಾಚನ ಸರಾಪಿನ ಅಂಗಡಿಗೇ ವೊಯ್ತಿದ್ದಕ್ಕೆ, ಅವ್ವ ಕ್ವಡ್ತಿದ್ದ ಕಾರಣವೆ ಬ್ಯಾರೆ: ಆ ರಾಯ ಯಾವನೋ ಮಲಯಾಳದ ಮಂತ್ರಗಾರ್ನಿಂದ ಮಾಟ ಮಾಡಿಸಿ, ನನ್ನ ಗಂಡನ ತಲೆ ಕೆಡುಸವ್ನೆ!...

ಅವ್ವ, ಏಳೆಂಟು ಎಂಗಸರ ಜ್ವತ್ಗೆ ವೊತ್ತಿಗೆ ಮುಂಚೆ ವೊಂಟುಬುಡಾದು. ಯಾವುದಾದರೂ ಈಚಲು ಪ್ಯಾಟೆಗೆ ವೋಗೋದು. ಅಲ್ಲಿ ಒಂದೊಂದು ಈಚಲು ಮರದಲ್ಲಿ ಅವರೆಲ್ಲಾರು ಸೇರಿ ಅತ್ತೊ ಅದಿನ್ನೈದೊ ಎಳುಸಾಗಿರೊ ಗರಿಗಳ ಉದ್ದಾನೆ ಲೋಟಿಗಳಗಳಲ್ಲಿ ಕುಯ್ಯೋದು. ಇಂತೋವ ಅದಿನೆಂಟೊ ಇಪ್ಪತ್ತೊ ಈಚಲು ಮರಗಳಲ್ಲಿ ಕುಯ್ದರೆ ಆ ಏಳೆಂಟು ಎಂಗಸರ್ಗೂವೆ ಒಂದೊಂದು ಹ್ವರೆ ಅಯ್ತದೆ. ಒಂದು ಹ್ವರೆಗೆ ಇಪ್ಪತ್ತೊ ಇಪ್ಪತ್ತೈದೊ ಗರಿ ಕಟ್ಟೋದು. ಇಂಗೆ ಹ್ವರೆ ಕಟ್ಟಿದ ಮ್ಯಾಗೆ, ಈಚಲು ಪ್ಯಾಟೆ ವಳಾಗಡೆ ಯಾವಾಗ್ಲೂ ನೀರು ಅರೀತಿರೊ ಅಳ್ಳದತ್ರ ಕುಂತು ಬುತ್ತಿ ಬಿಚ್ಚಿ, ಉಣಕಂಡು, ಅಳ್ಳದಾಗಿ ಅರಿಯೊ ನೀರು ಕುಡುದು, ಕುಂತು ಈಳ್ಯದೆಲೆ ಅಕ್ಕತ್ತ ಸುದ್ರಾಯಿಸ್ಕಂಡು, ಅಮ್ಯಾಕೆ ಹ್ವರೆವೊತ್ತು ಬತ್ತಾ ದಾರೀಲಿ ವೋಟೋಟು ದೂರಕೆ ಹಿಂದ್ನ ಪುಣಾತ್ಮರು ಯಾರೊ ನೆಡುಸಿದ್ದ ಹ್ವರೆಗಲ್ಲಿನ ಮ್ಯಾಲೆ ಇಳುಕಿ, ಮತ್ತು ಮತ್ತೂ ಸುದ್ರಾಯಿಸ್ಕತ್ತಿದ್ದು ಸಂದೆ ದನಿಗೆಲ್ಲ ಊರು ಸೇರೋದು...

ಚಿಕ್ಕೋನಾಗಿದ್ದಾಗ, ಅವ್ವನ ಜ್ವತ್ಗೆ ಮೊದಲ ಸಲ ಈಚಲು ಪ್ಯಾಟೆಗೆ ವೋದಾಗ, ಲಕ್ಕಂಗೆ ಎಲ್ಲಿಲ್ದ ಸುಮಾನ! ಅವ್ವ ಬ್ಯಾಡ ಬ್ಯಾಡ ಅಂದರೂವೆ,

ಲೋಟಿಗೆಳದಲ್ಲಿ ಅತ್ತಾರು ಗರಿಗಳ ಕಿತ್ತಿದ್ದ. ಅವ್ರಲ್ಲಿ ಮೂರು ಗರಿಗಳು ಮತ್ರ ಬಲಿತಿದ್ದೊ. ಉಳಿಕೆಯೋವೆಲ್ಲ ಎಳುಸು. ಅಂತಾ ಎಳುಸಿನ ಗರಿಗಳ ಕುಯ್ದದ್ಕೆ ಅವ್ವ ಚೀಮಾರಿ ಆಕಿದ್ಲು. ಆದ್ರೆ ಬೈದಲಲ್ಲಾಂತ ಲಕ್ಕ ಕ್ವರಗಿದ್ದು ಒಂದೇ ಗಳಿಗೆ, ಆ ಗಳಿಗೆ ಮುಗೀತು. ಲಕ್ಕನ ಕುಸಿ ಮುಗುಲ್ನೆ ಮುಟ್ಟಿತ್ತು. ಎಲ್ಲಾರು ಹ್ವರೆಗಳ ಕಟ್ಟಿ ಮುಗುದು, ಉಣ್ಣಕ್ಕೆ ಕುಂತಾಗ, ಲಕ್ಕನ ವೊಖ ಜೋಲು ಬಿದ್ದಿತ್ತು. ಅನೂಕೂಲವಾಗಿದ್ದೊರು ರಾಗಿ ರೊಟ್ಟಿ, ನಂಜಕ್ಕೆ ಹುಳ್ಳಿ ಜಿಯಕ ತಂದಿದ್ರೆ, ಅವ್ವ ನೆಂಜಕ್ಕೆ ಬರೀ ಹಸಿಮೆಣಸಿನಕಾಯಿ ತರಾದ?...

ಅವ್ವ ಒಂದು ದಪ ಉಸಾರುದಪ್ಪಿದಾಗ, ಅಯ್ಯನ ಜ್ವತೇಲೂವೆ ಲಕ್ಕ ವೋಗಿದ್ದುಂಟು. ಆಗ ಅಯ್ಯ ಕರಕಂಡೋದ್ದು ದರಮನಳ್ಳಿ ಈಚಲುವನಕೇಯ!... ಈಚಲು ಗರಿಗಳ್ನೂ ಕಡಿದಾಯ್ತು. ಹ್ವರೇನೂ ಕಟ್ಟಾಯ್ತು. ಬುತ್ತೀನು ಉಂಡಾಯ್ತು. ವಂದಿಗುಟ್ಟೆ ಬಂದಿದ್ದ ಮಂದಿ ತಂತಮ್ಮಹ್ವರೆ ವೊತ್ತು ಊರುದಿಕ್ಕೆ ಕಾಲಾಕಿದ್ದೂ ಆಯ್ತು. ಗ್ರಾಸ್ತ ನಮ್ಮಯ್ಯ, ಉಳಿದೋರಂಗೆ ಜ್ವತ್ಗೇ ವೋಂಡಬಾರದ?– ಉಹ್ಹು. ಅವ್ನ ಕಾಲೆಳೆದದ್ದು ರಾಚನ ಎಂಡದಂಗಡಿಗೇಯ!...

ಲಕ್ಕ ರಾಚನ ಸೇಂದಿ ಅಂಗಡಿಗೆ ಕಾಲಿಟ್ಟದ್ದು ಅದೇ ಪ್ರತುಮ. ವಲ್ಲೆ ವಲ್ಲೇಂತ ಏಟೇ ಆಟ ಮಾಡಿದ್ರೂ ಅಯ್ಯ ಬುಡಬೇಕಲ್ಲ!... ಅಂಗಡಿ ಅಂದರೆ ಸುತ್ತಾಲು ಮಣ್ಣಿನ ಗ್ವಾಡ. ಅದುಕ್ಕೆ ಸುಣ್ಣ ತುಂಬದೆ. ಯಾವ ದ್ವಾಪುರದಾಗೆ ತುಂಬುದ್ದೊ ಆ ಸುಣ್ಣ!– ಈಗ ಬಿಳುಪು ಕಳದೋಗಿ ಯಾತಾವು ಮಾಸ್ಲು ಮಾಸ್ಲು. ಆ ಅಂಗಡಿ ಮ್ಯಾಗಡೆ ಕವುಚಿರಾದು ನಾಡೆಂಚು. ವಳೀಕೋದರೆ, ಇದ್ಕೆ ಗ್ವಾಡೆ ವತ್ತಿಗೆ ಎತ್ತಿರಿಸಿದ ಗದ್ದುಗೆ. ಗದ್ದುಗೆ ಸುತ್ತಾಲೂ ತುಂಡುಗ್ವಾಡೆ. ಆ ಗದ್ದುಗೆ ಮ್ಯಾಲೆ ನಟಕದ ದರ್ಬಾರ್ ಸೀನಿನಲ್ಲಿ ರಾಜನಂಗೆ ಸೋಕ್ಯಾಗಿ ಕುಂತಿರೋನೆ ಆ ಅಂಗಡಿ ಮಾಲೀಕ ರಾಚ!... ಅವನ ಹ್ವದೆ ಗಿರಲು ಮೀಸೆ, ಗುಡ್ಡಗಣ್ಣು, ಗುಜ್ಜಾನೆ ಮರಿಯಂಗಿರೊ ದೇಹ, ಇವ ಕಂಡು ಎಂತೋರ ಎದೆಯೂ ನಡುಗಬೇಕು!... ಅವುನ ಮುಂದೆ ಏಡು ಮರದ ತೊಟ್ಟಿ, ಮುವ್ವತ್ತು ನಲವತ್ತು ಸುರಬಿ ಎಂಡ ಇಡಿಸೊವು. ಈಚಲು ಮರದಿಂದ ಎಂಡ ಎಳುಸೋರ್ಗೆ ಒಂದೊಂದು ಸುಬ್ಬಿ ಎಂಡ ಕ್ವಡ್ತಾನಂತೆ ರಾಚ. ಎಂಡಾವ ವೊತ್ತು ತರಾರ್ಗೆ ಬ್ಯಾರೆ. ಅದ್ನೆಲ್ಲ ತಂದು ಮರದ ತೊಟ್ಟಿಗಳ್ಗೆ ತುಂಬುದ ಮ್ಯಾಲೇ ರಾಚ ಬಂದು ಗಲ್ಲ ಏರಿ ಕುಂತುಗಳಾದು!... ಅವುನ ಪಕ್ಕದಾಗೆ ವೋಟು ದೂರಕೆ ಕುಂತು ಚೋರ್ ಚೊರ್ ಅಂತ ಹುರಿ ಬಾಡು, ಚಾಪೀಸುಗಳ ದಾದೆಣ್ಣೇಲಿ ಕರೀತ ಕುಂತಿರೋಳು ಗಂಡ ಬುಟ್ಟ ಅವುನ ಅಕ್ಕನಂತೆ!... ಬೋದೆ ಮಯ್ಯಿನ ಎಂಗಸು.

ತಲೆ ತುಂಬ ಕಯ್ಯೆಣ್ಣೆ. ಅಣೆಗೆ ಪಾವಲಿ ಅಗಲಕೆ ಕುಂಕುಮ ತ್ವಡುದವಳೆ ಈ ಚಮಾಚಾರನೆಲ್ಲಾ ಅಯ್ಯನ ಬೆಂಟಿ ಬೆಂಟಿ ವಸಿವಸ್ಯಾಗಿ ಲಕ್ಕ ಜಮಾಯಿಸಿದ್ದ. ಆ ಪಡಖತೆ ವಳುಗಡೆ ಜಮಾಯಿಸಿರೊ ಅತ್ತಾರು ಮಂದೀಲಿ ಸುತ್ತಾಮುತ್ನ ಊರ್‍ನೋರೆ ಜಾಸ್ತಿ. ಆ ಕುಡಿಯೊರ ಗುಂಪ್ನಲ್ಲಿ ನಾಕಾರು ಎಂಗಸರೂ ಇದ್ದರು. ವಸಿ ಜನ ಸ್ವಾರೆ ಬುಂಡೆ, ಸಣ್ಣ ಸಣ್ಣ ಗಡಿಗೇಲಿ ತುಂಬಿಸಿಕತ್ರಿದ್ರೆ, ಇನ್ನೊಸಿ ಜನ ಮುತ್ತುಗದ ಎಲೇಲಿ ಹಿರಿಬಾಡು, ಚಾಪೀಸು, ಬೇಯ್ಸಿದ ಮೊಟ್ಟೆ–ಇವ ಅಕಿಸಿಕತ್ತಿದ್ರು. ಇವು ತಿಂದು ಎಸ್ದ ಮೂಳೆ ಚೂರುಗಳ ನಾಯಿಗಳು ಬೊಗಳ್ತ ಒಂದರ ಮ್ಯಾಲೊಂದು ಬಿದ್ದು ಕಚ್ಚಾಡಿ ತಿಂತಿದ್ದೊ...

"ನೀವಿಟ್ಟಿರಾ ಲಾಟೀನ ಬೆಳಕು ಯಾತಯಾತಕು ಸಾಲ್ದು. ಇನ್ನೊಂದು ಏಡು ಲಾಟೀನ ತಂದಿಡಪ್ಪೊ" ಅಂತ ರಾಚನಿಗೆ ತೂರಾಡ್ತ ಯೋಳ್ದ ಚೊಳ್ಳೆ ಒಂದು ಎಂಗಸಿನ ತಾವಿಕೋಗಿ "ತಕ್ಕ, ಕುಡಿಯಮ್ಮಿ" ಅಂದು ಎಡತಿಗೂ ಮಿಂಡಗಾತಿಗೊ ಸಣ್ಣ ಗಡಿಗೆ ತುಂಬ ಎಂಡ ನೀಡುದ್ದೆ ತಡ, ಅವುಳು ಅದ್ನ ಒಂದೇ ಸಲಕೆ ಗಟಗಟ್ನೆ ಈರಿಬುಟ್ಲು...

ಅಯ್ಯ ಸಿನೇಯಿತಗಾರ್‍ರ ಜ್ವತೇಲಿ ಹಕಳೆ ವೊಡೀತ ರಾಚ ಸ್ವಾರೆ ಬುಂಡೇಲಿ ವೊಗದು ಕ್ವಟ್ಟ ಎಂಡವ ಸೊಲ್ಪಸೊಲ್ಪಾಗಿ ಹೀರ್‍ತ, ಒಂದಾಣ್ಗೆ ಅವನಕ್ಕ ಹಸಿ ಮುತ್ತುಗದೆಲೇಲಿ ಆಕ್ಕೊಟ್ಟ ಹುರಿಬಾಡ ನೆಂಜಕತ್ತ, "ನೀನೂ ಒಂದೀಟು ರುತಿ ನ್ವಾಡ್ತೀಯೇನ್ಲ, ಮೊಗ?" ಅಂತ ಲಕ್ಕನ್ನ ಕೇಳ್ದ.

ಎಂಡದ ದುರ್ವಾಸಣದ ಸೈಸನಾರ್‍ದೆ ಮೂಗು ಮುಚ್ಚುತ್ತಿದ್ದ ಲಕ್ಕ "ವಲ್ಲೆ, ವಲ್ಲೆ" ಅಂತಿದ್ದಂಗೆ "ವೋಗ್ಲಿ, ವಸಿ ಹುರಿಬಾಡ್ನಾರೂ ತಿನ್ನು" ಅಂದು, ಅಯ್ಯ ಆರು ಕಾಸಿಗೆ ಹುರಿಬಾಡ ತಗುದು ಕ್ವಟ್ಟಿದ್ದ. ಲಕ್ಕ ಆದ ಬಾಯಿಗೆ ಅಕ್ತ ಇರೋನೂವೆ, ಮಾರಿಗುಡಿ ಅಣ್ಣದೀರು ಆಗ್ಲೆ ಕುಡುದು ಮುಗಿಸಿ, ಸ್ವಾರೆ ಬುಂಡೆಗಳ ತುಂಬ ಪುನಾ ಎಂಡ ಸುರುಸ್ಕಂಡು ಊರ ದಿಕ್ಕೆ ವೊಂಟಿದ್ದರು...

ಸೇಂದಿ ಮನೇಲಿ ಗುಲ್ಲೊ ಗುಲ್ಲು. ಒಬ್ಬರಿಗೊಬ್ರು ವಾಕ್ವಾದ ಮಾಡಾದೇನು! ಯಾವದೊ ಚಿಲ್ಲರೆ ಮಾತ ತಕ್ಕಂಡು ಕದ್ನ ಮಾಡಾದೇನು! ಗಮ್ಮತ್ನಿಂದ ಪದ ಯೋಳಾದೇನು!... ಅದರಲ್ಲೂ ಒಬ್ಬ ಯೋಳ್ತಿದ್ದ ಪದ ಲಕ್ಕಂಗೆ ಇನ್ನೂ ಗ್ಯಾಪಕ. ಅದ ಯೋಳ್ತಿದ್ದೋನು ಚೊಳ್ಳೆಯೇ ಇರಬೈದು!– ಗಟ್ಯಾಗಿ ಪಕ್ಕದಾಗೆ ಇದ್ದ ಅಮ್ಮಿ ತೊಡೆ ತಟ್ಟಿಕೊಂಡು ಯೋಳ್ತಿದ್ದ:

ಹಳ್ಳಿವಾಸ
ನಾನೂ ಸಂತೋಸ

ನನ್ನೆತ್ತೂ ಸಂತೋಸ
ಪ್ಯಾಟೇ ವಾಸ
ಜಂಖಾನ ಹಾಸ
ನನ್ನೆತ್ತೂ ಉಪಾಸ
ನಾನೂ ಉಪಾಸ

–"ಇದೇನ ಇಂಗ ತಟ್ಟಾದು, ನನ್ನ ತೊಡೆಯೇನು ಮದ್ಲೆ ಕೆಟ್ಟೋಯ್ತು? – ತಗಿ, ತಗಿ" ಅಂತು ಆ ಎಂಗಸು. ನಿಶಾ ಏರ್ತ ಕೆಲವ್ರುಏರ್ತ ಊಊಊ ಅಂತ ಎಲೆ ಮಕ್ಕಳಂಗೆ ಅಳಕ್ಕೆ ಸುರು ಮಾಡಿದ್ರು...

ಮನೆ ಖಾಲಿ ಆಗೊವೋತ್ಗೆ ನಾತ್ರೆಗೆ ಸುಮಾರು ವಯಸೇ ಆಗಿತ್ತು. ಸಕುನಿಕೊಪ್ಪಲ ಗೋಡು ಸಾಬ್ರು, ಅಂಗೇಯ ಇನ್ನು ಮೂರು ನಾಕಾಳ ಹ್ವರೀಕೆ ವೊಂಡಸಬೇಕಾದ್ರೆ ರಾಚ ತಾನು ಕಲತ ಬುದ್ದೀನೆಲ್ಲ ಯಚ್ಚ ಮಾಡಬೇಕಾಯ್ತು!

*   *   *   *

"ಅಲ್ಲಿ ವೋಟೋತ್ನಿಂದ ರುಸಿ ಅಂಗೆ ಕುಂತು ಅದ್ಯಾನ ಮಾಡ್ತಿದ್ದೀಲ ಲಕ್ಕ?... ಗಮ್ಮನೆ ಎದ್ದು ಬಂದು ಚಾಪೆ ಎಣಿಸಯಾದು ಕಂಡಿವ್ನಿ –ಕುಂತುಬುಟ್ಟ ಅಲ್ಲಿ ಗಡ್ಡದಯ್ಯನಂಗೆ!– ಬಾ, ಬಾ..." ದ್ಯಾವಾಜಿಯ ಈ ಮಾತು ಲಕ್ಕನ ಆಲೋಚ್ನೆ ಜಾಡ ತಟಕ್ನೆ ಕಡುದಾಕ್ತು.

"ಇಲ್ಲ ಕನತ್ತೆ, ಇವೊತ್ತು ನಂಗ್ಯಾಕೋ ಮಯ್ಯಿಕಯ್ಯಿ ವಡುತ. ಕುಂತುಕಳಾಕು ಆಯುತಾ ಇಲ್ಲ. ಗುಡ್ಲು ವಳೀಕೋಗಿ ಬಿದ್ದುಕತ್ತೀನಿ" ಅಂದು ಲಕ್ಕ ಎದ್ದೋಯ್ತ ಇರ್ವಾಗ, ದ್ಯಾವಾಜಿ– "ಬಾರ್ಲ ಅಪ್ಪಯ್ಯ. ಒಂದು ಕತೆ ಯೋಳಿಕೊಟ್ಟೇನು. ಅದ ಕ್ಯಾಳ್ತಿದಂಗೆ ನಿನ್ನ ಮಯ್ಯಿಕಯ್ಯಿ ವಡುತ ಗಿಡುತ ಯೆಲ್ಲ ಚಟ್ ಆಗೋದೆ" ಅಂತ ಆಸೆ ತೋರಿದ್ಲು. ಅದಕ್ಕೆ ಲ್ಕಕ– "ವೋಗತ್ತೆ, ನಿನ್ನ ಕತೆಯೂ ಬ್ಯಾಡ, ಯಾನೂ ಬ್ಯಾಡ, ಸದ್ಕೆ ನಾ ಗುಡ್ಲ ವಳೀಕೋಗಿ ಬಿದ್ದಕಂಡ್ರೆ ಸಾಕಾಗದೆ" ಅಂದು ಗುಡ್ಲು ವಳೀಕೆ ಅವನು ನುಸೀತಿದ್ದಂಗೆ, ದ್ಯಾವಾಜಿ– ಎಂಗಸರ ಕಡೀಕೆ ತಿರುಗಿ, "ಇದ್ಯಾನ ಇವತ್ತು ನಮ್ಮ ಲಕ್ಕ ಒಳ್ಳಿ ಬವಾಳಿ ಬಂದೋನಂಗೆ ಅಡ್ತವನಲ್ಲ?... ಲೇ ಕಲ್ಯಾಣಿ, ನಿನ್ನ ಹೈದಂಗೆ ಬ್ಯಾಗ ಒಂದು ಎಣ್ಣ ನ್ವಾಡು. ಈ ಗ್ಯಾನಗೆಟ್ಟಾಟ ಸಾಜವಾಗಿ ಬುಟ್ಟೋಯ್ತದೆ!" ಅಂದು ಇನ್ನೋಟು ಹೊಗೆಸೊಪ್ಪು ತಗುದು ದವಡೆಗೆ ವತ್ತರಿಸಿದ್ಲು.

"ಯಾರನ್ನಾಕೆ ಉಡುಕ್ತ ವೋಗಬೇಕು?– ನಮ್ಮ ಹುಚ್ಚುಬೋರಿ ಎಣ್ನು ಚಲುವೀನೆ ಇಲ್ವ?" – ಚೊಳ್ಳೆ ಎಡತಿ ಅವರ ಮಾತಿನ ಮದ್ಯಕೆ ಅಗ್ರಣೆ ಆಕಿದ್ಲು...

## ೧೩

ಇತ್ತ ಗುಡುಗುಡು ಓಡಾಡುತ್ತ ಮುದ್ದಮುದ್ದಾಗಿ ಲಲ್ಲೆಗರೆಯುತ್ತ ತನ್ನ ಮನೆ, ಮನಗಳೆರಡನ್ನೂ ಮುದಗೊಳಿಸುತ್ತಿದ್ದ ಪುಟ್ಟ ಸರಸಿಯ ಸಹವಾಸ ಅನೇಕ ದಿನಗಳಿಂದಲೂ ತಪ್ಪಿಹೋಗಿ, ರುಕ್ಮಿಣಿ ಮಂಕುಕವಿದವಳಂತೆ ಯಾಂತ್ರಿಕವಾಗಿ ಮನೆಗೆಲಸವನ್ನು ನಿರ್ವಹಿಸುತ್ತಿದ್ದಳು. ಯಾವ ಕೆಲಸ ಮಾಡುತ್ತಿದ್ದರೂ ಸರಸಿಯ ನೆನಪೇ ಮರುಕಳಿಸುವುದು...

ಸರಸಿ ಊರಿನಲ್ಲಿ ತನ್ನ ಸಮವಯಸ್ಕ ಗೆಳತಿಯರ ಒಂದು ದಂಡನೆ ಕೂಡಿಹಾಕಿದ್ದಳು. ಆ ಮಕ್ಕಳ ಆಟಪಾಟ, ಕುಣಿತ ಲಲ್ಲೆಗಳು ವಿಶೇಷವಾಗಿ ಮನೆಯ ಹೊರಗೆ ಕೇರಿಯ ಬೀದಿ ಬಯಲುಗಳಲೊ ನಡೆಯುತ್ತಿದ್ದರೂ ಕೆಲಸಮಯ ತಮ್ಮ ಮನೆಯೊಳಗೂ ಅವು ನಡೆಯುತ್ತಿದ್ದುದುಂಟು. ಮನೆಯೊಳಗಂತೂ ಅವರ ಹಾಡು, ಕುಣಿತ, ಜೂಟಾಟಗಳ ಸಂಭ್ರಮ ಮನೆಯ ಹೊರಗಿದ್ದವರಿಗೆ ಒಳಗಡೆ ಒಂದು ಬಾರಿ ಜಾತ್ರೆಯೇ ನಡೆದಿದೆಯೇನೊ ಎಂಬ ಭ್ರಮೆಯನ್ನು ಹುಟ್ಟಿಸುವಂತಿರುತ್ತಿತ್ತು. ಒಮ್ಮೊಮ್ಮೆ ಸರಸಿಯು ರುಕ್ಮಿಣಿಯನ್ನೂ ಬಿಡದೆ ಈ ಸಂಭ್ರಮದಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತಿದ್ದುದೂ ಉಂಟು. ಆ ಮಕ್ಕಳು ಕಣ್ಣಾಮುಚ್ಚಾಲೆ ಆಟವಾಡುವಾಗ ರುಕ್ಮಿಣಿಯೇ ಸರದಿಯ ಪ್ರಕಾರ ಒಂದೊಂದು ಮಗುವಿನ ಕಣ್ಣನ್ನೂ ಮುಚ್ಚಿ, ಇತರೇ ಮಕ್ಕಳು ಅವಿತುಕೊಂಡ ತರುವಾಯ ಆ ಮಗುವಿನ ಕಣ್ಣು ಮುಚ್ಚಿದ ಕೈಯನ್ನು ತೆಗೆದು ಬಿಡುತ್ತಿದ್ದಳು. ಬಚ್ಚಿಟ್ಟು ಕೊಂಡವರನ್ನು ಹಿಡಿದುಬಿಟ್ಟಳೆಂದರೆ ಸರಸಿಯ ಕೇಕೆ, ನಗು, ಸಡಗರಗಳು ಮನೆಯ ಛಾವಣಿಯನ್ನೂ ಹಾರಿಸಿಬಿಡುವಂತೆ ಇರುತ್ತಿತ್ತು. ಆಡುತ್ತ ಆಡುತ್ತ ಒಂದು ಬಾರಿ ಶೇಷಪ್ಪನವರ ಮಗಳು ನಳಿನಿಯನ್ನು ಹಿಡಿದುಬಿಟ್ಟ ಆನಂದದಲ್ಲಿ ಸರಸಿ ಓಡಿಬಂದು ರುಕ್ಮಿಣಿಯನ್ನು ತಬ್ಬಿದ್ದಳು. ರುಕ್ಮಿಣಿಯೂ ಅವಳ ಸಂತೋಷದಲ್ಲಿ ಭಾಗಿಯಾಗಿ ಅವಳ ಪುಟ್ಟ ತುಟಿಗಳಿಗೆ ಮೇಲಿಂದ ಮೇಲೆ ಮುತ್ತಿಟ್ಟಳು... ಆಗ–

"ಮಕ್ಕಳ ತುಟಿಗೆ ಮುತ್ತಿಟ್ಟಂಗೆ ಅಂತಾವ ಮೊದ್ಲೆ ಗಾದೆ ಯೋಳಕಿಲ್ವ?– ಅದರಾಗ್ಯಾವ ರುಚಿ ಇದ್ದದು?" –ಅಂದು, ಕುಹಕವಾಗಿ ನಗುತ್ತ ಬಂದ ನಂಜೇಗೌಡನನ್ನು ಕಂಡು, ಅವನಾಡಿದ ನುಡಿಗಳಿಂದ ಕ್ರುದ್ಧಳಾಗಿ, "ಅದರ ರುಚಿಯನ್ನು ಬಲ್ಲವರೇ ಬಲ್ಲರು" ಎಂದು ಹೇಳಲು ಹೋಗಿ, ಈ ನೀಚನ ಸಂಗಡ ಮಾತು ಬೆಳೆಸುವುದೂ ಉಚಿತವಲ್ಲವೆಂದು ಮನಗಂಡು, ಸರಸಿಯನ್ನು ಆಡಲು ಬಿಟ್ಟು, ಅಡಿಗೆ ಕೋಣೆಯತ್ತ ಅಡಿಯಿಟ್ಟಳು. ನಂಜೇಗೌಡ ಮೀಸೆಯ ಮರೆಯಲ್ಲೆ ನಗುತ್ತ,

"ಸಾಸ್ತ್ರಿಗೋಳು ತ್ವಾಟದಿಂದ ಬರನಿಲ್ವ, ರುಕ್ಮಿಣವ್ವ?" ಕೇಳಿದ. ಅವ್ವ ಎಂದು ನಂಜೇಗೌಡ ತನ್ನನ್ನು ಸಂಬೊಧಿಸಿದ್ದು ರುಕ್ಮಿಣಿಯ ಕ್ರೋಧವನ್ನು ಇಮ್ಮಡಿಸಿತು.

"ಹೊರಗೆ ಅವ್ವ ಅನ್ನೋದು, ಒಳಗೆ ಮಗ್ಗುಲಿಗೆ ಮಲಗಿಸಿಕೊಳ್ಳಲು ಬಾಯಿ ಬಾಯಿ ಬಿಡೋದು!... ಜನ ಅನ್ನೋ ಹಾಗೆ, ಈ ಗೌಡ ಹೀನಸುಳಿ. ಇವನ ಬಗ್ಗೆ, ಹೆತ್ತ ತಾಯ ಲಾಡಿ ಬಿಚ್ಚೊ ಬಡ್ಡಿಹೈದ ಅಂತ ಬುಂಡಮ್ಮ ಹೇಳೋ ಮಾತು ಸಂಪೂರ್ಣ ಸತ್ಯ!" ಎಂದು ಸಿಡಿಮಿಡಿಗುಡುತ್ತ ಒಳನಡೆದಿದ್ದಳು.

ರಾತ್ರಿ ಮಲಗುವಾಗ ಸರಸಿಯದೇ ನೆನಪು. ಮಲಗುವ ಮುನ್ನ ಮಾವಯ್ಯ ಬಾಯಿಪಾಠ ಮಾಡಿಸಿದ್ದ, ರಾಮಂ ಸ್ಕಂದಂ ಹನೂಮಂತಂ– ಶ್ಲೋಕವನ್ನು ತಪ್ಪುತಪ್ಪಾಗಿಯಾದರೂ ಅವಳು ಹೇಳಿ ಮುಗಿಸಲೇಬೇಕು. ಪ್ರಾತಃಕಾಲ ಏಳುವಾಗಲೂ ಅಷ್ಟೆ. ಎರಡು ಹಸ್ತಗಳನ್ನೂ ಉಜ್ಜಿ ನೋಡಿಕೊಳ್ಳುತ್ತ –ಕರಾಗ್ರೇ ವಸತೇ ಲಕ್ಷ್ಮೀ, ಕರಮಧ್ಯೆ ಸರಸ್ವತಿ, ಶ್ಲೋಕ ಹೇಳಬೇಕು.

ಮಲಗುವ ಮುನ್ನ ಯಾವುದಾದರೂ ಕಥೆ ಹೇಳೆಂದು ಗಂಟು ಬೀಳುತ್ತಿದ್ದುದೂ ಉಂಟು. ಅದರಲ್ಲೂ "ಬುಡ ಬೆಳ್ಳಿ, ನಡುಚಿನ್ನ, ಎಲೆ ಪಚ್ಚೆ, ಗೊನೆ ಮುತ್ತು ಎನ್ನುವ ಬಾಳೆಕಂಬದ ಕಥೆ" ಅವಳಿಗೆ ಬಹಳ ಮೆಚ್ಚು... ಈ ರಾತ್ರಿ ಎಷ್ಟು ಪ್ರಯತ್ನಿಸಿದರೂ ನಿದ್ರೆ ಬಾರದೆ ಹೊರಳಾಡುತ್ತಿರುವಾಗ, ಸರಸಿ ಪಕ್ಕದಲ್ಲೆ ಮಲಗಿ ಕಥೆ ಕೇಳುತ್ತಿರುವಂತೆಯೂ ತಾನು ಅವಳನ್ನು ಮೃದುವಾಗಿ ತಟ್ಟುತ್ತ ಆ ಕಥೆಯನ್ನು ಮತ್ತೊಮ್ಮೆ ಹೇಳುತ್ತಿರುವಂತೆಯೂ ಭಾಸವಾಯಿತು:

ಎಲ್ಲಾ ಅಡಸಗೊಲಜ್ಜಿ ಕಥೆಯಂಥದೆ ಒಂದು ಕಥೆ ಅದು. ಒಬ್ಬ ರಾಕ್ಷ ಒಬ್ಬಳು ರಾಜಕುಮಾರಿಯನ್ನು ಹೊತ್ತುಕೊಂಡು ಹೋಗಿ ಘೋರಾರಣ್ಯದ ನಡುವೆ ಇದ್ದ ಒಂದು ಭಾರಿ ಬೆಟ್ಟದಲ್ಲಿದ್ದ ಗುಹೆಯೊಳಗೆ ಸೇರಿಸಿ, ತನ್ನನ್ನು ವರಿಸುವಂತೆ ಆ ರಾಜಕುಮಾರಿಯನ್ನು ಒತ್ತಾಯಿಸುತ್ತಿರುತ್ತಾನೆ. ಎಲ್ಲಾ ಕಥೆಗಳ ರಾಜಕುಮಾರಿಯಂತೆ ಆ ರಾಜಕುಮಾರಿಯೂ ಮಹಾಚೆಲುವೆಯಾಗಿದ್ದುದ್ದೇ ಅಲ್ಲದೆ, ತುಂಬಾ ಜಾಣೆಯೂ ಆಗಿರುತ್ತಾಳೆ. ತಾನೊಂದು ವ್ರತ ಆಚರಿಸುತ್ತಿರುವುದಾಗಿಯೂ ನಲವತ್ತೆಂಟು ದಿನಗಳ ಆ ವ್ರತ ಮುಗಿಯುತ್ತಲೂ ತಾನು ಅವನ ವಶಳಾಗುವುದಾಗಿಯೂ ತಂತ್ರ ಹೂಡುತ್ತಾಳೆ. ಅವಳ ಮಾತಿಗೊಪ್ಪಿ ಒಂದು ದಿನ, ಯಾವಾಗಲೂ ಹೊರಗೆ ಹೊರಡುವಾಗ ಮಾಡುತ್ತಿದ್ದಂತೆ ಒಂದು ಬಂಡೆಯನ್ನು ಆ ಗುಹೆಯ ಬಾಯಿಗಿಟ್ಟು ಮುಚ್ಚಿ ತರುವಾಯ ಅವನು ಆಹಾರವನ್ನರಸಿ ತೆರಳಿರುವ ವೇಳೆಯಲ್ಲಿ, ಬೇಟೆಗೆಂದು ಬಂದ

ರಾಜಕುಮಾರನೊಬ್ಬ ಕಾಡುಹಂದಿಯ ಬೆನ್ನುಹತ್ತಿ ತನ್ನ ಸಿಬ್ಬಂದಿಯಿಂದ ಬೇರ್ಪಟ್ಟು, ಆ ಗುಹೆಯ ಬಳಿ ಬರುತ್ತಾನೆ. ಕಿಂಡಿಯಿಂದ ನೋಡಿದೊಡನೆಯೆ ಆ ರಾಜಕುಮಾರನಲ್ಲಿ ವಿಶ್ವಾಸ ಹುಟ್ಟಿ ತನ್ನ ದುಃಖದ ವೃತ್ತಾಂತವನ್ನು ಹೇಳಿಕೊಳ್ಳುತ್ತಾಳೆ, ರಾಜಕುಮಾರಿ. ಆಗ ಆ ರಾಜಕುಮಾರ ಅವಳಿಗೆ ಒಂದು ಉಪಾಯವನ್ನು ಹೇಳಿಕೊಡುವನು... ರಾಕ್ಷಸ ಬಂದೊಡನೆಯ, ಇನ್ನೇನು ತಾನು ಕೈಗೊಂಡ ವ್ರತ ಮುಗಿಯುತ್ತಿರುವದರಿಂದ ತಾನೇನೋ ಅವನಿಗೆ ಶರಣಾಗುವುದಾಗಿಯೂ ಆದರೆ ಆಗಿಂದಾಗ ಏಕಾಂಗಿಯಾಗಿ ಕಾಡಿನಲ್ಲಿ ಅಲೆಯುವಾಗ ಯಾರಿಂದಲಾದರೂ ಅವನ ಪ್ರಾಣಕೆ ಹಾನಿ ಸಂಭವಿಸಿದರೆ ತನ್ನ ಪಾಡೇನೆಂದು ಕೇಳಬೇಕೆಂಬುದೇ ಆ ಉಪಾಯ!– ಅದನ್ನು ಹೇಳಿಕೊಟ್ಟು, ದೂರದ ಮರವೊಂದನ್ನೇರಿ ರಾಜಕುಮಾರ ಅವಿತಿರುತ್ತಾನೆ...

ಆ ಸಂಜೆ ಆಹಾರ ಸಂಗ್ರಹಿಸಿ ಮರಳಿದ ರಾಕ್ಷಸ ಚಿಂತಾಕ್ರಾಂತಳಾಗಿದ್ದಂತೆ ಕಂಡ ರಾಜಕುಮಾರಿಯನ್ನು ಅದರ ಕಾರಣವೇನೆಂದು ಕೇಳುವನು. ಆಗ ರಾಜಕುಮಾರ ಹೇಳಿಕೊಟ್ಟಂತೆ ಅವಳು ನಟನೆ ಮಾಡಿ ಕಣ್ಣೀರಿಡುವಳು. ರಾಕ್ಷಸ ಅವಳ ಕಣ್ಣೀರನ್ನು ಒರಸುತ್ತ, ತನ್ನನ್ನು ಕೊಲ್ಲಲು ಇಡೀ ಭೂಮಂಡಲದಲ್ಲಿ ಯಾರಿಂದಲೂ ಶಕ್ಯವಿಲ್ಲವೆಂದು ಹೇಳಿ, ಸಪ್ತಸಾಗರದ ನಡುವೆ ಇರುವ ದ್ವೀಪದೊಳಗಿನ ಬುಡ ಬೆಳ್ಳಿ ನಡು ಚಿನ್ನ ಎಲೆ ಪಚ್ಚೆಗೊನೆ ಮುತ್ತು ಅನ್ನುವ ಬಾಳೆಕಂಬದಲ್ಲಿ ತನ್ನ ಪ್ರಾಣ ಜೋಪಾನವಾಗಿ ಅಡಗಿರುವುದೆಂದು ತಿಳಿಸುತ್ತಾನೆ...

ಮಾರನೆಯ ದಿನ ರಾಕ್ಷಸರು ಆಹಾರಸಂಗ್ರಹಣೆಗೆ ತೆರಳಿದ ಸಮಯದಲ್ಲಿ, ಗುಹೆಯ ಬಳಿ ಬಂದ ರಾಜಕುಮಾರನಿಗೆ ರಾಕ್ಷಸನ ಜೀವನದ ರಹಸ್ಯವನ್ನು ಅವಳು ಅರಹುತ್ತಾಳೆ. ಒಡನೆಯೇ ಆ ದ್ವೀಪಕ್ಕೆ ತೆರಳಿ, ಆ ಬಾಳೆಕಂಬವನ್ನು ಕಡಿದುಹಾಕುವುದಾಗಿ ಶಪಥ ಮಾಡಿ ಹೊರಟ ರಾಜಕುಮಾರನಿಗೆ ದಾರಿ ಕ್ರಮಿಸಿದಂತೆ ಸಪ್ತಸಾಗರಗಳ ನಡುವಿನ ಆ ದ್ವೀಪಕ್ಕೆ ತಾನು ಹೋಗುವುದಾದರೂ ಹೇಗೆ? ಎಂಬ ಚಿಂತೆ ಆಕ್ರಮಿಸುತ್ತದೆ. ಕ್ರಮಕ್ರಮೇಣ ಅದು ತನ್ನಿಂದ ಸಾಧ್ಯವೇ ಇಲ್ಲವೆಂದು ಮನಗಂಡಾಗ, ಮಗ್ಧಳಾ ರಾಜಕುಮಾರಿಗೆ ಅಷ್ಟೆಲ್ಲ ಭರವಸೆಯಿತ್ತು ಅನರ್ಥ ಮಾಡಿದೆ. ತನ್ನಂಥ, ಪಾಷಂಡಿಯು ಇನ್ನು ಈ ಲೋದಲ್ಲಿ ಬದುಕಿರಬಾರದೆಂದು ನಿಶ್ಚಯಿಸಿ, ಖಡ್ಗವನ್ನು ಒರೆಯಿಂದ ಹಿರಿದು, ಸಮೀಪದಲ್ಲೆ ಕಾಣಿಸಿದ ಕಾಳಿಕಾಮ್ಮನ ಗುಡಿಯ ಮುಂದೆ ನಿಂತು, ಆ ತಾಯಿಗಾದರೂ ಪ್ರೀತಿಯಾಗಲಿ ಎಂದುಕೊಳ್ಳುತ್ತ, ತಲೆ ಕಡಿದುಕೊಳ್ಳಲು ಖಡ್ಗವನ್ನೆತ್ತಿದಾಗ, ಕಾಳಿಯು ಪ್ರತ್ಯಕ್ಷಳಾಗಿ ಕೆಲವು ಭಸ್ಮದ ಪೊಟ್ಟಣಗಳನ್ನೂ ಮಂತ್ರಾಕ್ಷತೆಯನ್ನೂ ಕೊಟ್ಟು,

ಅವನ್ನು ಹೇಗೆ ಉಪಯೋಗಿಸಬೇಕೆಂಬುದನ್ನು ಹೇಳಿಕೊಟ್ಟು, ಅವನ ಇಷ್ಟಾರ್ಥ ಸಿದ್ಧಿಯಾಗುವುದೆಂದು ಆಭಯವಿಟ್ಟು ಅಂತರ್ಧಾನಳಾಗುತ್ತಾಳೆ...

ದೇವಿಯ ಸೂಚನೆಗಳನ್ನು ಅನುಸರಿಸಿ ಒಂದೊಂದು ಸಾಗರದ ಮೇಲೂ ಆ ರಾಜಕುಮಾರನು ಒಂದೊಂದು ಪಟ್ಟಣದಿಂದ ಭಸ್ಮವನ್ನು ಎರಚಿದಂತೆ, ಒಂದೊಂದು ಸಾಗರದ ನಡುವೆಯೂ ಸರಾಗವಾಗಿ ನಡೆದುಕೊಗುವಂತೆ ದಾರಿ ನಿರ್ಮಾಣವಾಗುತ್ತದೆ. ಅವನು ದ್ವೀಪಕ್ಕೆ ಕಾಲಿಟ್ಟೊಡನೆಯೆ ಏಳು ಹೆಡೆಯ ಘಟಸರ್ಪವೊಂದು ಮೇಲೇರಿ ಬರುತ್ತದೆ. ಮಂತ್ರಾಕ್ಷತೆಯ ಸ್ವಲ್ಪ ಭಾಗವನ್ನು ಅದರ ಮೇಲೆ ಎಸೆಯುತ್ತಾನೆ. ತಟ್ಟನೆ ಆ ಸರ್ಪಕ್ಕೆ ಗಾಢನಿದ್ರೆ ಬಂದು ಮಲಗಿಬಿಡುತ್ತರದೆ. ಅಲ್ಲಿಂದ ಮುಂದೆ ಸಾಗಿದಂತೆ ಮುಗಿಲೆತ್ತ ಉರಿಯುವ ಅಗ್ನಿಯ ಜ್ವಾಲೆಗಳು ಅವನಿಗೆ ಅಡ್ಡವಾಗುತ್ತವೆ. ಧೈರ್ಯಗೆಡದೆ ಉಳಿದಿದ್ದ ಮಂತ್ರಾಕ್ಷತೆಯನ್ನು ಆ ಜ್ವಾಲೆಗಳ ಮೇಲೆ ಸುರಿಯುತ್ತಾನೆ. ತಕ್ಷಣ ಜ್ವಾಲೆಗಳು ಶಮನವಾದಂತೆ ಬುಡವೆಲ್ಲ ಬೆಳ್ಳಿಯಾಗಿ ನಡುವೆಲ್ಲ ಚಿನ್ನವಾಗಿ ಎಲೆಯೆಲ್ಲ ಪಟ್ಟೆಯಾಗೊ, ಗೊನೆ ಮುತ್ತಾಗಿ ಥಳ ಥಳಿಸುವ ಬಾಳೆಯ ಕಂಬ ಕಣ್ಣಿಗೆ ಬೀಳುತ್ತದೆ!... ಅನವಶ್ಯಕವಾಗಿ ಕಾಲ ವಿಳಂಬಮಾಡದೆ ಅವನು ಬಾಳೆಯ ಕಂಬವನ್ನು ಖಡ್ಗದಿಂದ ಬುಡಸಹಿತ ಕತ್ತರಿಸಿ, ಅದರೊಡನೆ ಸರಸರನೆ ಹಿಂದೆ ನಿರ್ಮಾಣವಾದ ಮಾರ್ಗದಲ್ಲೆ ದಾರಿ ಕ್ರಮಿಸಿ, ಭೂಸ್ಪರ್ಶ ಮಾಡುತ್ತಾನೆ...

ರಾಜಕುಮಾರ ಹಿಂದಿರುಗಿ ಭೂಸ್ಪರ್ಶ ಮಾಡಿದ ಕೂಡಲೆ, ಸಹಸ್ರಾರು ಸಿಡಿಲುಗಳು ಏಕಕಾಲದಲ್ಲಿ ಎರಗಿದ ಹಾಗೆ ಭೀಕರವಾಗಿ ಅಬ್ಬರಿಸುತ್ತ, "ಮೊಸವಾಯ್ತು... ಮೋಸಹೋದೆ...' ಎಂದು ಮೊರೆಯುತ್ತ 'ಆದರೂ ನಿನ್ನನ್ನ ಸುಮ್ಮನೆ ಬಿಡುತ್ತೀನೇನೊ' ಎಂದು ಘುಡುಘುಡಿಸುತ್ತ, ಆ ರಾಕ್ಷಸ ಏರೇರಿ ಬಂದ...

ಸರಸಿ ಬೆದರಿ 'ಅಮ್ಮಾ...' ಎಂದು ಚೀರಿದ್ದಳು. ರುಕ್ಮಿಣಿಯು ಅವಳನ್ನು ಸಂತೈಸುತ್ತ,

"ಆಗ ಆ ರಾಜಕುಮಾರನು ಕೊಂಚವೂ ಅದೀರನಾಗದೆ ದೇವಿಯು ಹೇಳಿಕೊಟ್ಟಿದ್ದ ಪ್ರಕಾರ, ಪಚ್ಚೆಯ ಎಲೆಗಳನ್ನು ಮೊದಲು ಕತ್ತರಿಸಿದ. ಆಗ ರಾಕ್ಷಸನ ಕೈಗಳು ಕತ್ತಿರಿಸಿಬಿದ್ದವು. ಕೈಗಳು ಬಿದ್ದ ಆ ರಾಕ್ಷಸ ಹೋ ಎಂದು ಎಬ್ಬಿಸಿದ ಹುಯಿಲಿನಿಂದ ಧೈರ್ಯವಂತನಾದ ರಾಜಕುಮಾರನ ಎದೆಯೂ ಸಹ ತಲ್ಲಣಗೊಂಡಿತ್ತು. ಹೇಗೋ ಚೇತರಿಸಿಕೊಂಡು, ಬಿರುಗಾಳಿಯ ಹಾಗೆ ಮುನ್ನುಗ್ಗಿ ಬರುತ್ತಿದ್ದ ಆ ದೈತ್ಯನನ್ನು ಇನ್ನೂ ಹತ್ತಿರ ಬರಲು ಬಿಡಬಾರದೆಂದು

ಬಾಳೆಕಂಬದ ಬೆಳ್ಳಿಬುಡವನ್ನು ಕತ್ತಿರಿಸಿ ಹಾಕಿದ. ಆಗ ಆ ರಾಕ್ಷಸನ ಕಾಲುಗಳೂ ಕಡಿದು ಬಿದ್ದವು. ಅಷ್ಟಾದರೂ ಆ ದೈತ್ಯ ಬೋರ್ಗರೆಯುವ ಸಾಗರದಂತೆ ಉರುಳುತ್ತುರುಳುತ್ತಲೆ ಬರುತ್ತಿದ್ದ. ಇನ್ನೇನು ಹತ್ತಿರ ಹತ್ತಿರ ಬಂದ ಎನ್ನುವಾಗ, ಚಿನ್ನದ ನಡುವಿನ ಭಾಗವನ್ನೂ ಕೊಚ್ಚಿದ. ರಾಕ್ಷಸನ ಸೊಂಟದ ಪ್ರದೇಶವೂ ಕತ್ತಿರಿಸಿ ಬಿತ್ತು. ಅಂಥ ಸ್ಥಿತಿಯಲ್ಲೂ ಕೂಡ ಆ ದೈತ್ಯನ ಹೂಂಕಾರ ಕಡಿಮೆಯಾಗಲಿಲ್ಲ. ಶಿರಸ್ಸೂ ಸೇರಿದಂತೆ ಅವನ ಸೊಂಟದ ಮೇಲ್ಭಾಗದ ಶರೀರವು ಇನ್ನೂ ಮಿತಿಮೀರಿದ ಠೇಂಕಾರದಿಂದ ಅವನತ್ತ ನುಗ್ಗಿ ಬಂತು ಆಗಲೀಗ ರಾಜಕುಮಾರ ಮುತ್ತಿನ ಗೊನೆಯನ್ನೂ ಸಹ ಕೊಚ್ಚಿ ಕೆಡವಿದ. ದೈತ್ಯನ ಶಿರಸ್ಸು ಎದೆಯ ಭಾಗದಿಂದ ಪ್ರತ್ಯೇಕಗೊಂಡು ರಾಜಕುಮಾರನ ಪಾದದ ಬಳಿ ನಿರ್ಜೀವವಾಗಿ ಬಂದು ಬಿತ್ತು.

ಅಬ್ಬಬ್ಬ ಸದ್ಯ ತೊಲಗಿತಲ್ಲ ಪಿಶಾಚಿ!" ಎಂದು ನಿಟ್ಟುಸಿರುಟ್ಟು, ಆನಂದದಿಂದ "ಆಮೇಲಿನ್ನೇನು?... ನೀನು ಹೇಳೊ ಎಲ್ಲಾ ಕತೇಲೂ ಇರೋ ತರ, ಆ ರಾಜಕುಮಾರ ಆ ರಾಜಕುಮಾರೀನ ಮದ್ವೆ ಆಗ್ತಾನೆ ಅಲ್ವಾ?" ಎಂದು ತನ್ನ ಜಾಣತವನ್ನು ಪ್ರದರ್ಶಿಸಿದ್ದಳು...

ಹೌದೆಂದು ಒಪ್ಪಿ, ಆ ಕಥೆಯ ಗುಂಗಿನಲ್ಲೆ ಪರವಶಳಾದಂತಿದ್ದ ಸರಸಿಯನ್ನು ರುಕ್ಮಿಣಿಯು ಪ್ರಶ್ನಿಸಿದ್ದಳು:

"ಒಂದು ಪಕ್ಷ ಈ ಹೊತ್ತಿನಲ್ಲಿ ಅಂಥ ರಾಕ್ಷಸ ಇಲ್ಲಿಗೆ ಬಂದ ಅಂತ ಇಟ್ಟುಕೊ, ಆಗ ನೀನೇನು ಮಾಡ್ತಿದ್ದೆ, ಸರಸಿ"?

ತಟ್ಟನೆ ಆವೇಶ ಬಂದವಳಂತೆ, ರುಕ್ಮಿಣಿಯ ಕುತ್ತಿಗೆಯನ್ನು ಎರಡು ಕೈಗಳಿಂದಲೂ ಅಮುಕತ್ತ.

"ಹಿಂಗೆ, ಹಿಂಗೆ ಅವನ ಕುತ್ತಿಗೇನ ಹಿಚುಕಹಾಕ್ತಿದ್ದೆ" ಎಂದಳು. ಆ ಗಳಿಗೆಯಲ್ಲಿ ಸರಸಿ ಅಡಗೂಲಜ್ಜಿ ಕಥೆಯ ರಾಜಕುಮಾರನೆ ಆದಂತಿತ್ತು!...

"ಬಿಡೆ, ಬಿಡೆ ನನ್ನ ಕುತ್ತಿಗೇನ ಯಾಕೆ ಹೀಗೆ ಹಿಚುಕ್ತ ಇದ್ದೀಯೆ!... ನಾನೇನು ಆ ರಾಕ್ಷಸ ಅಲ್ಲ– ನಾನು ನಿನ್ನ ಅಕ್ಕ..." ಎಂದು ರುಕ್ಮಿಣಿಯು ಹೇಳುತ್ತಿದ್ದಂತೆ ಕಿಲಕಿಲನೆ ನಗುತ್ತ, ಅವಳ ಕುತ್ತಿಗೆಯಿಂದ ಸರಸಿ ತನ್ನ ಕೈಗಳನ್ನು ತೆಗೆದಿದ್ದಳು!...

## ೧೪

ಗುಡ್ಲ ವೊಳೀಕೆ ಮನಗಕ್ಕೋದ ಲಕ್ಕ ಬೆಳಗ್ಗೆ ಏಳಕ್ಕೆ ಹ್ವಳ್ಳಾಡ್ತಾನೆ. ಹ್ವಳ್ಳಾಡ್ತಾನೆ ಆಯ್ತಾನೇ ಇಲ್ಲ... ಅವ್ವ ಬಂದು ಅಣೆ ಮುಟ್ಟಿ ನ್ವಾಡುದ್ಲು. ಕುದ್ಯೋಯ್ತ ಇತ್ತು...

"ಸಿವುನಿ, ಅಣ್ಣಂಗೆ ಜೋರು ಜೊರ ಬಂದದೆ. ಕುಂಡಿಮಾದಿ ಅಟ್ಟೀಲಿ ನಾಕು ಮೆಣಸಿನ ಕಾಳ ಈಸುಗಂಬಂದು ಕಸಾಯ ಕಾಯ್ಸಿ ಕ್ವಡು."– ಇತ್ಲಲ್ಲಿ ಇದ್ದೋಳ್ಗೆ ಕೂಗಿ ಯೋಳಿ," ಮಠದ ಅಯ್ನೋರು ಕಂಬಳಕೆ ಯೋಳಿಕಳುಸವ್ರೆ, ನಾ ವೋಯ್ತಾ ಇವ್ನಿ" ಅಂದು, ಗುಡ್ಲಿನ ಕದವ ಮುಂದುಕೆಳುದು ಕಲ್ಯಾಣಿ ಹ್ವರೀಕೆ ವೊಂಟ್ಲು.

ಇತ್ಲಲ್ಲಿ ಮೋಗೀಗೆ ನೀರುಯ್ತಿದ್ದ ಸಿವುನಿ, ತನ್ನಸ್ಯಾಲೆ ಸೆರುಗ್ನಲ್ಲೆ ಆ ಮೊಗೀಗೆ ಮಯ್ಯಿ, ತಲೆಗೂದ್ಲು ಯಲ್ಲಾನು ವರುಸ್ತ, ಅದ್ನ ಗುಡ್ಲೊಳೀಕೆ ತತ್ತುಗಂಬಂದು, ಚಂಡಿ ತಗುವ ಮೋಗೀಗೆ ಎದೆ ಕಚ್ಚುಸ್ತ, ಅಣ್ಣನ ಪಕ್ಕದಾಗೆ ಕುಂತು, ಅಣೆ ಮುಟ್ಟಿ "ಆವ್ವಿ, ಯೇಟೊಂದು ಜೊರ ಬಂದುಬುಟ್ಟಿದೆ?" ಅಂದು, ಹಾಲು ಕುಡೀತಿದ್ದಂಗೆ ತೊಡೆ ಮ್ಯಾಲೆ ನಿದ್ದೆ ಬಂದ ಮೊಗಾವ ನೆರುಕೆ ಮೊಗ್ಗಲೆ ಹಾಸ್ದ ದುಪಟಿಮ್ಯಾಲೆ ಉಳ್ಳಾಕಿ, ಕುಂಡಿ ಮಾದಿ ಗುಡಿಲಿಗೆ ವೊಂಟು ಅಣ್ಣನ ಕಾಲುದಸೀಲಿ ಮಯ್ಯಿಚಾಚಿ ಮನಗಿದ್ದ ಬೊಡ್ಡನ ಕಾಲ ತುಣುದ್ಲು. ಕೂಡ್ಲೆ ಆ ಚೋರದ ತಾಪದಾಗೂವೆ ಅಣ್ಣ ಮೊಖದ ತುಂಬ ವೊದ್ದಿದ್ದ ದುಪಟ ಸರುಸಿ, "ಯೇನಾಯ್ತಣೆ ಸಿವುನಿ?– ಬೊಡ್ಡ ಯಾಕಂಗೆ ಅರಚುಗತ್ತು?" ಅಂತ ಕೇಳಿದ್ದ. ಸಿವುನಿಗೆ ಚೋಜಿಗೆ ಅನ್ನುಸಿತ್ತು. ಈ ನಾಯಿಗೂ ನಮ್ಮಣ್ಣಂಗೂ ಯಾವ ನಂಟು? ಅಂದುಕೊತ್ತ.

"ಯಾನಿಲ್ಲ ಮನಕ್ಕಣ್ಣ. ಕುಂಡಿಮಾದಿ ಆಟ್ಟೀಲಿ ವಸಿ ಮೆಣಸಿನ ಕಾಳ ತಂದು ನಿಂಗೆ ಕಸಾಯ ಕಾಯ್ಸಿಕ್ವಡು ಅಂದ್ಲು ಅವ್ವ. ಅದುಕೆ ಕುಂಡಿಮಾದಿ ಅಟ್ಟಿಗೆ ವೋಯ್ತಿದ್ದೋಳು ಕಾಣ್ದೆ ಬೊಡ್ಡನ ಕಾಲ ತುಣದಿ. ಅದುಕೆ ವೋಟು ರಾವುಟ ಅದರ್ದು?– ನೀ ಮನಕ್ಕೊ" ಅಂದು ಸಿವುನಿ ಅಚ್ಗೆ ನಡುದ್ಲು.

ಕುಂಡಿಮಾದಿ ಅಗ್ಲೆ ಕೆಲುಸಕ್ಕೆ ವೊಂಟೋಗಿದ್ಲು. ಸಾವಂತ್ರೀನೂ ವೋಂಟೋಗಿತ್ತು. ಕುಂಡಿ ಮಾದಿ ಗಂಡನೂವೆ ಗುಡ್ಲ ಕದ ಎಳುದು ಕಂಬಳಕೆ ವೋಂಡತಿದ್ದ ಕಂಡು ಸಿವುನಿ, ನಿಂತ ಕಾಲ ಮುಂದಕೆಳೆಯಾ ಸಮಯದಲ್ಲಿ, ಆ ದ್ಯಾವರಗುಡ್ಡ–

"ಯಾನು ಬೇಕಾಗಿತ್ತು?" ಕ್ಯಾಳ್ದ.

"ಇವುನ ಕ್ಯಾಳಿ ಸುಕವೇನ?" –ಅಂದು, ಸಿವುನಿ ಮಾತಾಡದೆ ಮುಂದಾದ್ಲು. ಆಗ ಆ ಗ್ರಾಸ್ತ,

"ಯಾಕಮ್ಮಿ?... ಯಾಕ ಬಂದದ್ದು?... ವಳೀಕೆ ಬಾ... ಅದ್ಯಾನು ಬೇಕಿದ್ರೂ ಯೋಳು, ಕ್ವಟ್ಟೇನು" ಅಂತ ಕರೆಯೋದ?– ಕ್ವಾಪ ಬಂದು ಸಿಡಾರನೆ,

"ಯಾನೂ ಬೇಕಾಗಿರ್ನಿಲ್ಲ. ಮಾದಮ್ಮ ಮಾತಾಡುಸಿ ವೋಗಾವಾಂತ ಬಂದಿ" ಅಂದ್ಲು ಸಿವುನಿ.

ಗುಡ್ಲಕದವ ಇಂದುಕೆತಳ್ಳಿ, ತಾನೂ ವಳುಕ್ಕೋಗಿ ನಿಂತಿದ್ದ ದ್ಯಾವರಗುಡ್ಡ,

"ವೋಟೇಯ,..." ಅಂದ್ರು, ಮೊಖವ ಆನೆದಡಿ ಕಾಯ್ನಂಗೆ ಇಳಿಬುಟ್ಟ!

ಸಿವುನಿ ಅಲ್ಲಿಂದ ನಡುದು ದ್ಯಾವಾಜಿ ಗುಡ್ಲು ತಾವಿಕೋದ್ರೆ, ಅವುಳೂ ಇರ್ಲಿಲ್ಲ. ಹುಚ್ಚಬೋರಿ ಗುಡ್ಲತ್ರ ವೋದ್ರೆ ಅವುಳೂ ಇಲ್ಲ!... ಇಪರೀತ ಸಿಬ್ರಿ ಆಗಿ, ಅಲ್ಲಿಂದ ಮುಂದ್ಕೋಯ್ತ ಇರೋನೂವೆ, ಎದುರುಗಂಡಿದ ಹುಚ್ಚುಬೋರಿ ಮಗಳು ಚೆಲುವಿ ಬತ್ತಾ ಇದ್ಲು.

"ಯೆತ್ತಾಗಿ ಬಂದಿದ್ರಿ, ಅತ್ತಿಗೆಮ್ಮ?... ನಮ್ಮ ಗುಡ್ಲ ತಾವು ನಿಂತಂಗಿತ್ತು... ಅವ್ವ ಕಂಬಳಕೋಗದೆ. ನಾ ಇಲ್ಲೆ ದೋಳ್ಳಪ್ಪಾರ ಅಟ್ಟೀಲಿಹಾಳೊತ್ತಿಗೆ ಕರುದಿದ್ರು, ವೋಗಿದ್ದೆ." ಒಂದೆ ಉಸುರ್ತಗೆ ಯೋಳಿದ್ಲು. ಚೆಲುವಿ.

"ಯಾನೂ ಇಲ್ಲ. ನಮ್ಮಣ್ಣಂಗೆ ಜೊರ ಬಂದದೆ. ನಿಮ್ಮ ತಾವು ಮೆಣಸಿನಕಾಳಿದ್ರೆ ವಸಿ ಈಸುಗಂಡೋಗಾಗವ ಅಂತ ಬಂದಿ. ಆದ್ರೆ ನಿಮ್ಮವ್ವನೇ ಇಲ್ವಲ್ಲ... "ಸಿವುನಿ ಅಂತಿದ್ದಂಗೆ,

"ಅವ್ವ ಇಲ್ದಿದ್ರೆ ನಾನಿಲ್ವ?... ನಾಕು ಮೆಣಸಿನ ಕಾಳ ಕ್ವಡಕ್ಕೆ ಅವ್ವನ್ನೆಕ್ಯಾಳಬೇಕ?– ಬನ್ನಿ, ಬನ್ನಿ" ಅಂದು ಚಲುವಿಹುಲ್ಲೆಕರುವೆಆಗಿನೆ ಕ್ಕಂಡುನೆಕ್ಕಂಡೋಗಿಗುಡ್ಲಕದವ ಬಿಚ್ಚಿ ವಳೇಕೋದ್ನೆ ನಿರುಕುಸ್ತಿದ್ದ ಸಿವುನಿ–

"ನಮ್ಮಣ್ಣಂಗೆ ಈವೆಣ್ಣು ಲಾಯಕ್ಕಾಗದೆ. ಗುಣದಲ್ಲೂ ವೋಟೆಯ– ಅಪರಂಜಿ ಮುರುಕು!... ಅವ್ವಂಗೂ ಇವುಳ ತರೋ ಅಪೇಕ್ಸೆ ಇರೋವಂಗದೆ. ಒಂದು ಜಿನ ದ್ಯಾವಾಜಿಯೂ ನಮ್ಮ ಗುಡ್ಲಿಗೆ ಬಂದು, ನಿಮ್ಮ ಹೈದಂಗೆ ನಮ್ಮ ಹುಚ್ಚುಬೋರಿ ಎಣ್ಣು ಚೆಲುವಿ ತಂದುಕೊಂಡರೆ ಯೆಂಗೆ?" ಅಂದಾಗ, 'ಎಣ್ಣೇನೋ ವೈನಾಗದೆ. ಆದ್ರೆ ನಮ್ಮ ಕಯ್ಯಿಲಿ ಯಾನವ್ವ ಇದ್ದದು?–ಯೆಲ್ಲ ಆ ಬಿಸುಲು ಮಾರಮ್ಮ ತಾಯಿ ಇಚ್ಚೆ ಅಂದು ತನ್ನ ಮನವ ಬಿಚ್ಚಿಕಂಡಿದ್ಲು..." – ಇಂಗೆ ಚಿಮತುಸ್ತ ಇರ್ವಾಗ, 'ತಕ್ಕನ್ನಿ' ಅಂತ ಹ್ವರೀಕೆ ಬಂದ ಚಲುವಿ, ಏಡು ಮೆಣಸಿನ ಕಾಳ ಎಚ್ಚಾಗ ಕ್ವಟ್ಟಿತ್ತು.

ಆದ ತಂದು ಕಸಾಯ ಮಾಡಿ ಅಣ್ಣಂಗೆ ಕುಡಿಸುದ್ಲು. ಯೇನೇನ ಮಾಡುದ್ರೂವೆ ಜೊರ ಮೂರು ಆಗಲು ಮೂರು ನಾತ್ರೆ ಕುಟ್ಟಿ ಬಜಾಯಿಸ್ತು. ನಾಕನೆ ಜಿನವೇ ಲಕ್ಕ ಎದ್ದು ಕುಂತು,

"ಸಿವುನಿ, ವಸಿ ರಾಗಿ ಅಂಬಲಿ ಕಾಯಿಸೀಯ?" ಅಂದುದ್ದು.

ಅಲ್ಲೀಗಂಟ ಅವನ್ಗೇ ಯೇನು ಕ್ವಟ್ಟರೂ ಸೆಡೀದು... ಅಣ್ಣ ಚೇತರಿಸಿಕೊಂಡುದಕೆ ಸಂತೋಸ್ನಾಗಿ ಸಿವುನಿ ಓಡಾಡುತ ಅಂಬಲಿ ಕಾಯ್ಸಿ ತಂದು ಕುಡುಸುದ್ಲು.

ಆದಾದ ಮಾರನೆ ಜಿನಕೆ ಲಕ್ಕ ಕುಡ್ಲ ತಕ್ಕಂಡು ಕೆಲ್ಸಕ್ಕೆ ತಯಾರಾದ್ದ ಗಮನ್ಸಿ, ಸಿವುನಿ ಮುಂಚೋರಿ ಕದಕೆ ಅಡ್ಡಾಗಿ ನಿಂತು,

"ನೀ ಕಂಡ್ತಾ ವೋಗಕೊಡದು. ಇನ್ನಂದು ನಾಕು ಜಿನಾನಾರು ಸೊದಾರಿಸ್ಕೊ"– ಆಟ ಮಾಡಿದ್ಲು. ಲ್ಕಕಂಗೆ ಚಿಕ್ಕೋನಾಗಿದ್ದ, ತಾವಿನಿಂದಲೂವೆ ಇರೋಳೆ ಒಬ್ಬಳು ತಂಗಿ ಅಂತಾವ, ಸಿವುನಿ ಕಂಡರೆ ಪ್ರಾಣ ಬುಡುಸ್ಕತ್ತಿದ್ದ. ಈಗ ಅವಳ ಮಾತ ಯಂಗೆ ತಗುದಾಕೋದು?– ಕುಡ್ಲ ವಕ್ಕಡಿಕೀಟ್ಟು ತೆಪ್ಪಗೆ ಕುಂತ.

ಆದ್ರೆ ನಾಕು ಜಿನ ಕೇಮೆ ಇಲ್ಲದೆ ಕುಂತುಗೊಳೋದು ಲಕ್ಕನ ಜಾಯಮಾನಕ್ಕೇ ಬಂದದ್ದಲ್ಲ... ಮುಂದೇ ಏಡೇ ಜಿನದಲ್ಲಿ ಸಿವುನಿ ಏಟೇಟು ತಡದ್ರೂವೆ,

"ನೀ ತಡೀಬ್ಯಾಡ, ಬುಡು. ಕುಂತು ಕುಂತು ನನಗೆ ಸಿಬ್ರಿ ಆಗದೆ." ಯೋಳಿ, ದಾಪುಗಾಲು ಆಕ್ತ ಅಣ್ಣ ಹ್ವಂಟಿದ್ದ. ತಲೆಬಾಗ್ಲಲಿ ನ್ವಾಡ್ತ ನಿಂತ ಸಿವುನಿ.

"ಗಂಡಸು ಇಂಗಲ್ವ ಇರಬೇಕು!" –ಅಂತ ಅಣ್ಣನ ಬಗ್ಗೆ ಹೆಮ್ಮೆಪಡ್ತ ಇರೋನೂವೆ, ಅವಳ ಏಡು ಎದೆ ವಳುಗಡೇಲೂ ಲೊಳ್ಳನೆ ಹಾಲು ತುಂಬಿಕೊಂಡ ಹಂಗಾಯ್ತು!

ನಾಕು ವಾರ ವಪ್ಪತ್ತು ಹಿಂಗೇ ಕಳಿತು. ಬುಧವಾರ ಕಳೆದಮ್ಯಾಲೆ ಬೇಸ್ತಾವಾರ ಬರಬೇಕಲ್ಲ...ಹಂಗೆ, ಇನ್ನೊಂದು ಬೇಸ್ತವಾರ ಬಂದಿತ್ತು.

"ಈ ಜಿನ ನಾನೇ ಸಂತೆಗೆ ವೋಯ್ತೀನಿ ಕನವ್ವ. ವಸಿ ನೀನೆ ಮೊಗ ನ್ವಾಡುಕೊ." –ಸಿವುನಿ ಆಂದಾಗ, ಕಲ್ಯಾಣಿ ಬಾಣಂತಿಯಾಗಿ ಗುಡ್ಲಲ್ಲಿ ಒಬ್ಬಳೆ ಕುಂತು ಎಣ್ಣೆಂಗೂ ಬ್ಯಾಸರ ಆಗಿರಬೈದು, ಅಂದುಕತ್ತ

"ಅದಕೇನ, ವೋಗಿ ಬಾ. ನಾನು ನ್ವಾಡುಕತ್ತೀನಿ ಮೊಗಾವ. ರುಕ್ಮಿಣವ್ವಾರು ಎಂಗಿದ್ರೂವೆ ಲಕ್ಕನ ಕಯ್ಲಿ ಯಾವತ್ತಾರು ಕಳುಸ್ತಾರಲ್ಲಗೆ ಇವೋತ್ತೂವೆ ಹಸೀನ ಹಾಲ್ನೇ ಕಳುಸವ್ರೆ, ಮೊಗೀಗೆ ಅಂತಲೇಯ!– ಅತ್ತರೆ, ವಳ್ಳೇಲಿ ಅದ್ನೆ ಉಯ್ತೀನಿ, ಮನಗುಸ್ತ್ರೀನಿ. ಆದ್ರೂವೆ, ನೀ ವೋಗಕ್ಕೆ ಮುಂಚೆ ಸಮದಾಗಿ ಮೊಲೆ ಉಣ್ಣೀಸಿ ವೋಗು" ಎಂದಿದ್ಲು.

ಅವ್ವನ ಮಾತನಿ ಪರ್ಕಾರವೇ ಮನೆಗೆಲಸ ಮುಗಿಸಿ, ಮೊಗೀಗೆ ಮೊಲೆ ಉಣ್ಣಿಸಿ, ಸಿವುನಿ ದರುಮನಳ್ಳಿ ಬುಡುವಾಗ ಆಳುದ್ದ ವೊತ್ತಾಗಿತ್ತು. ಇವಳ ಜೊತೆ

ಹುಣಸೂರವರೆಗೆ ನಡದೋರು, ದ್ವಾವಾನಿ, ಕುಂಡಿಮಾದಿ, ಕುರುಬರ ಸಣ್ಣೆ, ಕುಂಬಾರರ ಲಕುಸ್ಮಿ, ಅವಳ ಗಂಡ ಮಾದಸೆಟ್ಟಿ, ಮತ್ತೆ ಸಕುನಿ ಕೊಪ್ಪಲ ಗೋಸು ಸಾಬರ ಮಗ ಬುಡನ್.

ದ್ಯಾವಾಜಿ ವಂದಿಗಿದ್ದರೆ ಹೊತ್ತೋಗೋದು ತಿಳಿಯಕ್ಕಿಲ್ಲ... ಯಾರನಾದರ ತೀಟೆ ಮಾಡಬೇಕು. ಜ್ವತೇಲಿದ್ದೋರ ನಗಾಡಿಸಬೇಕು. ತಾನೂವೆ ನಗಾಡಬೇಕು. ಸಸನೆ ಹಾದೀಲಿ ವೋಗೋದು ಅವಳ ಜಾಯಮಾನಕ್ಕೆ ಬಂದಿರನಿಲ್ಲ.

"ಯಾನು ಕುಂಬಾರಸೆಟ್ಟರೆ, ನಿಮ್ಮ ಲಗ್ಣಾಗಿ ಏಟು ವರ್ಸ್ ಆಯ್ತು?" —ಮಾದಸೆಟ್ಟಿಯ ಕೆಣಕಿದ್ಲು.

"ಯಾಕ ದ್ಯಾವಾಜಿ, ಎಂಟೊಂಬತ್ತು ವರ್ಸ ಆಗಿರಬೈದು"– ನಾಚುತ ಯೋಳಿದ ಮಾದ– ಸೆಟ್ಟಿ.

"ಚ್, ಚ್, ಚ್!– ಎಂಟೊಂಬತ್ತು ವರ್ಸ!... ಈಟು ವರುಸಕೆ ನಾಕೈದು ಮಕ್ಕಳಾರು ಆಗರಬೇಕು... ವೋಗ್ಲಿ ಬೊಡ್ಡಮಗಂದು ಒಂದಾದರೂ ಬ್ಯಾಡದ?" ಅಂದಾಗ, ಮಾದಸೆಟ್ಟ ನಾಚಿ ತಲೆತಗ್ಗಿಸ್ದ. ಸಿವುನಿ ಹ್ವಾಡ್ತಾನೆ ಇದ್ಲು. ಅವನ ಎಡತಿ ಮೊದ್ದಲೇ ಕೆಂಪಿನಿ ಎಣ್ಣು. ಈ ಮಾತ ಕೇಳ್ತಿದ್ದಂಗೆ ಮೊಖದ ತುಂಬ ಕುಂಕುಮ ಎರುಚಿದಂಗಾಯ್ತು... ಉದ್ದಕ್ಕೂ ಇಂಗೇ ಏನಾರ ತೀಟೆ ಮಾಡ್ತ, ಪರಸಂಗ ಯೋಳ್ತ, ಲಲ್ಲೆ ವೊಡೀತ, ಹುಣಸೂರು ಹತ್ರ ಆಯ್ತಿದ್ದಂಗೆ, ಸಿವುನಿಯ ವಕ್ಕಡೆ ಕರದು, ಯಾರಿಗೂ ಕೇಳಿಸದಂತೆ ಕಿವೀಲಿ,

"ಸಿವುನಿ, ನೀನು ನಮ್ಮೂರಿಗೆ ಬಂದು ಏಟು ಕಾಲ ಆಯ್ತು?"– ಪಿಸುಗುಟ್ಟಿದ್ದು.

"ಯಾಕತ್ತೆ?– ಏಡೋ ಮೂರೋ ತಿಂಗ್ಳ ಆಗಿರಬೈದು."

"ಅವ್ವಿ, ಏಟೊಂದ ಜಿನ ಆಗೋಯ್ತು!... ನಾ ಒಂದು ಮಾತ ಕೇಳುದ್ರೆ ಕ್ವಾಪ ಮಾಕ್ಕಂಡೀಯ?"

"ಅದೇನು ಕ್ಯಾಳತ್ತೆ?"

"ಅಲ್ಲ ಕನೆ ಸಿವುನಿ, ನಿಂಗಿನ್ನೂ ಚಿಕ್ಕ ಪ್ರಾಯ. ನೆಲ ಗುದ್ದಿದ್ರೆ ನೀರು ಕಡುಸೊ ವಯಸ್, ಗಂಡ ಇಲ್ದೆ ಈಟು ಕಾಲ ಒಬ್ಬಳೀಯ ಎಂಗೆ ಸೈಸಿಕಂಡಿದ್ದೀ?"– ಕ್ಯಾತೆ ಮಾಡದಾಗ, ಸಿವುನಿಗೆ ಸಾಜವಾಗೂ ಮೆಯ್ಯೆಲ್ಲ ಉರೀತು.

"ಆಲಾದೋಳೆ..." ಅಂದು. ಇನ್ನೂ ಏನೇನೋ ಮಸ್ತಾಗಿ ಬಯ್ಯಬೇಕು ಅನ್ನೂ ವಸ್ಟರಲ್ಲಿ ದ್ಯಾವಾಜಿ ಕುಂಡಿಮಾದಿ ತಕ್ಕೆ ಜಾರಿ, "ನಿನ್ನ ಎಣ್ಣಿಗೆ ಗಂಡೆಲಿ ನ್ವಾಡಿದ್ದೀ, ಮಾದಿ?– ನಮ್ಮ ಕಲ್ಯಾಣಿ ಮಗ ಲಕ್ಕ ಆದ್ರೆ ಯೆಂಗೆ?... ಜೋಡಿ

ವೈನಾಗಕ್ಕಿಲ್ವ?"– ಅಂತ ತೀವಿತಿದ್ಲು.

ಹಿಂಗೇ ಹಾದಿ ಸಾಗಿತು. ಏಳು ಮೈಲಿ ನಡದು, ಅವರು ಹುಣಸೂರಿನ ಸೇತುವೆ ಸಮೀಪ ಕೆಳೀಕಿಳಿದು, ಲಕ್ಷ್ಮಣತೀರ್ಥ ಹೊಳೇಲಿ ಬೆವತಿದ್ದ ಮುಖ ತೊಳುದು, ನೀರು ಕುಡಿದು, ದಾವಾರಿಸಿಕೊಂಡು ಮ್ಯಾಕ್ಕೆ ಬಂದು, ಸೇತುವೆ ದಾಟಿ, ಅವರೆಲ್ಲರೂವೆ ಸಂತೆಬಯಲು ಮುಟ್ಟಿದರು. ಇವರಿಗೆ ಮುಂಚೆಯೇಯ ಹ್ವಂಟಿದ್ದ ನಿಂಗಯ್ಯ, ಲಕ್ಕ ಇಬ್ಬರೂವೆ– ಸಿವುನಿಗೆ "ನೀ ಬ್ಯಾಗ ಬಂದರೆ ಸಂತೆ ಮಾಳದಲ್ಲೆ ಇರ್ತೀವಿ, ನೀ ಬರಾದ ಒಂದು ಪಕ್ಸ ವೊತ್ತಾದರೆ, ರಂಗಪ್ಪಸೆಟ್ಟರ ಅಂಗಡೀಲಿ ಇರ್ತೀವಿ: ನೀ ಅಲ್ಲಿಗೇ ಬಂದುಬುಡು" ಅಂದಿದ್ದರು. ತನ್ನ ಜೊತೆಗೆ ಬಂದೋರ ಸಂತೆಮಾದಳದಲ್ಲೆ ಬುಟ್ಟು ರಂಗಪ್ಪಸೆಟ್ಟರ ಅಂಗಡಿಗೆ ಸಿವುನಿ ಬಂದಿದ್ದಳು. ಆಗಲೆ ಅವರಿಬ್ಬರೂವೆ ಒಂದೊಂದು ಅಂಗಿ, ಚಡ್ಡಿ ಬಟ್ಟೆ ಹರಿಸಿ ಹೊಲಿಯಕ್ಕಾಕಿದ್ರು. ಏಡು ಒಂಟಿ ಪಂಚೆ ತೆಗುದಿದ್ದರು. ಸಿವುನಿ ಬಂದದ್ದು ಕಂಡು,

"ಬಾಣೆ ಸಿವುನಿ, ಬಾ. ನಾವೂನೆ ವರುಸಸ್ಕಾಗೊವೋಟು ಬಟ್ಯ ವೊಲಿಯಕ್ಕಾಕಿವಿ... ಅವಗೂ ನಿಂಗೂಗು ಒಂದೊಂದು ಸ್ಯಾಲೆ ಕುಪುಸದ ಅರಿವೆ ತಗೀಬ್ಯಾಡದ?... ಅವಳ್ನ ಬಾ ಅಂದರೆ ಬರದೇ ವೋದ್ಲು. ಬಟ್ಟೆ ಇಚಾರ ನಂಗೇನು ತಿಳುದಾತು?... ನಿಮ್ಮ ಮಗಳ್ನೆ ಕರಕಂಡೋಗಿ ಅಂದ್ಲು... ಬಾ ಬಾ– ಇಲ್ನೋಡು, ಸ್ಯಾಲೆಗಳು ಗುಡ್ಡೆ ಆಕವೆ. ನಿಂಗ್ಯಾವುದು ವಸಂದಾಯ್ತುದೆ, ಯೋಳು" ಅಂದೋನು ನಿಂಗಯ್ಯ.

"ನಂಗೆ ಸ್ಯಾಲೆ ಗೀಲೆ ಯಾವ್ದೂ ಬ್ಯಾಡ. ಅವ್ವಂಗೆ ಬೇಕಾದ್ರೆ ನ್ವಾಡ್ತೀನಿ" ಅಂದೋಳು, "ಎಲ್ಲಾರು ಉಂಟ?– ನೀ ಒಂದು ಸ್ಯಾಲ್ಯ ತಕ್ಕನೇಬೇಕು" ಅಂತ ನಿಂಗಯ್ಯ ಲಕ್ಕ ಇಬ್ಬರೂ ಅಂದುದ ಕೇಳದೆ ಇದ್ದೋಳಂಗೆ ವಳೀಕೆ ನಡದು, "ತೋರ್ಸಿ ಸೆಟ್ಟರೆ" ಅಂದು, ಸೆಟ್ಟರು ಬಿಳಿಬಟ್ಟೆಯ ನೆಲದ ಮ್ಯಾಲೆ ಹಾಸಿ, ಅದರ ಮ್ಯಾಲೆ ಹರಡಿದ ಸ್ಯಾಲೆಗಳ ತಗತಗದು ಪರೀಕ್ಸೆ ಮಾಡಿ, ಕಡೀಕೆ–ಹಳದಿ, ಒಡಲು, ನೀಲಿ ಅಂಚಿನ ಸ್ಯಾಲೆ ಒಂದ ಕಯ್ಯಿಗೆತ್ತಿಕೊಂಡು, "ಈ ಸ್ಯಾಲೆಗೆ ಏಟ ಸೆಟ್ಟರೆ?"– ಅಂತ ಸಿವುನಿ ಅದರ ಖರೀದಿ ಕೇಳಿದಳು. ರಂಗಪ್ಪ ಸೆಟ್ಟರು.

"ಹತ್ತು ರೂಪಾಯಿ" ಅಂದರು.

"ಪೂರ ಜಾಸ್ತಿ. ಸೆಟ್ಟರ್ಗೆ ಅಪ್ಪಾರ ಆಸೆ" ಅಂದೇಬುಟ್ಟಳು ಸಿವುನಿ.

ಅರ್ಧ ಮುಕ್ಕಾಲು ಗಂಟೆ ಆ ಸೀರೆ ಇಚಾರ ರಂಗಪ್ಪಸೆಟ್ಟರ್ಗೂ ಸಿವುನಿಗೂ ಜಗ್ಗಾಟ ನಡುದು, ಕೊನ್ಗೆ ರಂಗಪ್ಪಸೆಟ್ಟರು ಅದರ ಬೆಲೇಲಿ ಎಂಟಾಣೆ ತಗ್ಗುಸಿ,

"ನಿಂಗಯ್ಯ, ಇನ್ನುಮ್ಯಾಲೆ ಜವುಳಿ ಕರೀದಿ ಮಾಡಕ್ಕೆ ನಿನ್ನ ಈ ಮಗಳನ್ನ ಮಾತ್ರ ಕರಕೊಂಡು ಬರಬೇಡ. ಏನಿದ್ರೂವೆ ನಿನ್ನ ಹೆಂಡತಿ ಕಲ್ಯಾಣೀನೆ ಕರಕೊಂಡು ಬಾ. ಈ ನಿನ್ನ ಮಗಳು ಹೇಳೊ ಬೆಲೆಗೆ ನಾನು ಜವುಳಿ ಕೊಡ್ತಾ ಹೋದರೆ, ನನ್ನ ಅಂಗಡಿ ಬಲು ಬೇಗ ದಿವಾಳಿ ಎದ್ದು, ನಾನು ಪಾಪರ್ ಚೀಟಿ ತಕ್ಕೊಬೇಕಾಗ್ತದೆ" ಅನ್ನುತ್ತ, ಆ ಸೀರೆಗೆ ಲಜತ್ತಾದ ಒಂದು ರವಿಕೆ ಬಟ್ಟೇನೂ ತೋರಿ "ಮುಕ್ಕಾಲು ಗಜ ಸಾಕಾಗ್ತದೆ ಅಲ್ಲವಾ?" ಎಂದು ಕೇಳಿ, ಅದರ ಅಳತೆಗೆ ಚೀಟಿಬಟ್ಟೆ ಕತ್ತರಿಸ್ತಾ ಇರುವಾಗ–

"ಇನ್ನೂ ಒಂದು ಸೀರೆ ತೆಗೀರಿ, ಶೆಟ್ಟರೆ..." ಅಂತ ಯಾರೊ ಅನ್ನುತ್ತಲೂ ಸಿವುನಿ ಗಕ್ಕನೆ ಹೊಳ್ಳಿ ನ್ವಾಡಿದಳು... ನಮ್ಮ ದರುಮನಹಳ್ಳಿ ಕೇಸವಯ್ಯಾರೇಯ! ಬ್ಯಾರೆ ಯಾರೂ ಅಲ್ಲ!

"ತಗೋಮ್ಮ ಸಿವುನಿ–ನೀನು ಒಂದು ಸೀರೆ ತಗೊ" ಕಣ್ಣಿನಲ್ಲೆ ನಗುತ್ತ ಪುಸಲಾಯಿಸಿದ ಕೇಶವಯ್ಯ.

ಸಿವಪೂಜೇಲಿ ಕರಡಿ ಬುಟ್ಟಂಗೆ ಈ ವಯ್ಯ ಯಾತಾವ್ನಿಂದ ಬಂದ?– ಅಂತ ಬೇಸರಿಸಿ,

"ಈ ಬಟ್ಟ ತಕ್ಕತ್ತಿರಾನು ನಮ್ಮಯ್ಯ. ಇದರಾಗೆ ನಿಮ್ಮ ದ್ಯಾನ ಸೋಮಿ ಅಗ್ಗರ್ಣೆ?"– ಖಡಕ್ಕಾಗೆ ಕೇಳಿದಳು. ಸಿವುನಿ.

"ಹಯ್ಯೋ. ಅಂಗನ್ನಬ್ಯಾಡ ಕನೆ, ಸಿವುನಿ. ನಾವೀಗ ತಕ್ಕತ್ತಿರೊ ಬಟ್ಟೆ ಯೆಲ್ಲಾವು ಕಡ"– ನಿಂಗಯ್ಯ ಇವರಣೆಯಿತ್ತ.

"ಸರಿಸರಿ. ಕಡ ಅಂದಮ್ಯಾಲೆ. ಈ ಅಯ್ಯನೋರದು ಯಾನ ಇದರಾಗೆ ಪಾರಪತ್ಯ?"

ನಿಂಗಯ್ಯ ಹಣೆಹಣೆ ಚೆಚ್ಚಿಕೊತ್ತ ಯೋಳಿದ:

"ಹಯ್ಯೋ, ನಮ್ಮ ತೀರು ನ್ವಾಡಿ ಯಾರವ್ವ ಜವುಳಿ ಕಡಾ ಕ್ವಡಾರು?... ಯಾನೊ ಈ ಪುಣಾತ್ಮರು ನಮ್ಮ ಪರ್ವಾಗಿ ವಪ್ಪಿಗಳಾ ವೊತ್ಗೆ, ಸೆಟ್ಟರೂ ನಮಗೆ ಕಡ ಕ್ವಡಕ್ಕೊಪ್ಪುದ್ರು... ಆ ಕಿಸ್ಟ ಸಾಸ್ತ್ರಿಗಳು ಊರನಾಗಿಲ್ಲ. ಸಿಮೊಗ್ಗಕ್ಕೋಗವ್ರಂತೆ. ಬರಾದು ಇನ್ನೂ ವಸಿ ಜಿನ ಆಗಬೈದು ಅಂದರು, ರುಕ್ಮಿಣಮ್ಮ– ಅವರಿದ್ದರ್ಯಾನೊ ಪುಣಾತ್ಮ ನಮ್ಮ ಹಳತಕೆ ಮಾತ್ರ ಯಾವತ್ತೂವೆ ಇಲ್ಲ ಅಂದಿಲ್ಲ!... ಈಗ ಆ ಗಂಗಪ್ನಾರ ನಂಬಿ ಇಲ್ಲೀಗಂಟ ಬರಬೇಕಾಯ್ತು. ಆ ರಂಗಪ್ಪಸೆಟ್ಟರ ಅಂಗಡಿ ತಾವಿರಿ. ನಾ ಬಂದು ಕಡ ಕ್ವಡುಸ್ತೀನಿ ಅಂದೋರು ಈ ತಾವಿಗಂಟ ಬರನೇ ಇಲ್ಲ! ನಂಗೂ ಕಾದೂ ಕಾದೂ ರೋಸೋಯ್ತು. ಲಕ್ಕನೂವೆ, ನಡಿಯಯ್ಯ

ವೋಗಾನೆ, ಬಟ್ಟಿಲ್ಲದಿದ್ರೆ ಸಮಾಸು–ಅಂದ. ಇನ್ನೇನ ಮಾಡಾದು ಅಂತ ನಾವೇಡಾಳೂವೆ ಅಂಗಡಿ ಮುಂಚೊರಿ ಹಬ್ಬುಗೆಗಳ ಇಳೀತಿರೊ ಸಮಯಕೆ ಸರ್‍ಯಾಗಿ ನಮ್ಮೀ ಕೇಸವಯ್ಯಾ ಕಾಣಿಸುದ್ದು. ನಮ್ಮ ಕಂಡು–ಯೇನಲ್ರಾ ಇಲ್ಲಿ ಅಂದ್ರು. ನಾನೂವೆ ಇಸ್ಯಾನೆಲ್ಲ ಯೋಳಬೇಕಾಯ್ತು. ಯೆಲ್ಲಾನು ಕ್ಯಾಳಿ–ಈಟೇಯ? ಇದ್ಯಾವ ಬೋ ಗನಂದಾರಿ ಇಸ್ಯಾಂತ ಚಿಂತೆ ಮಾಡೀರೊ? –ಬನ್ನಿ ಬನ್ನಿ, ನಾನು ಕಡ ಕ್ವಡುಸ್ತೀನಿ. ನೀವಿಬ್ರೂವೆ ಆಗಾಗ ಬಂದು ನಮ್ಮ ತ್ವಾಟದಲ್ಲಿ ಕಂಬಳ ಮಾಡಿ ತೀರಿಸುದ್ರೆ ಆಯ್ತು– ಅಂತ, ಅಂಗಡಿ ವಳುಕ್ಕೆ ಕರಕಂಬಂದು ಕ್ವಡುಸ್ತಾ ಆವರೆ!... ನೀ ಬ್ಯಾಡ ಅನ್ನಬ್ಯಾಡ. ಸುಮ್ಕೆ ನಿಂಗೆ ಪಸಂದು ಅನ್ನುಸ್ದ ಒಂದು ಸ್ಯಾಲ್ಯ ತಕ್ಕಂಡು, ಜ್ವತ್ಗೆ ಒಂದು ರವಿಕೆ ಚೀಟಿನೂವೆ ಆರಿಸು.”

ಸಿವುನಿ “ನಂಗೆ ಯಾನೂ ಬ್ಯಾಡಾಕೆ ಬ್ಯಾಡ” ಅಂದು, ರಂಗಪ್ಪಶೆಟ್ಟರ ಅಂಗಡಿ ಆಚೆಗೆ ಹೊಂಟೇ ವೋದಳು. ಅವಳು ಅಂಗಡಿ ಮೆಟ್ಟಿಲ ಇಳಿಯುವಾಗ ತೂಗಾಡುವ ಅವಳ ಹಿಂಭಾಗದ ಚೆಂದವನ್ನು ನಿಟ್ಟಿಸುತ್ತಿದ್ದ ಕೇಶವಯ್ಯ,

“ಭೇಷ್, ಭೇಷ್. ನಿನ್ನ ಮಗಳ ನಡತೆ ನನಗೆ ತುಂಬಾ ಮೆಚ್ಚಿಕೆಯಾಯ್ತು, ಕಣೊ, ನಿಂಗ... ಅಬ್ಬ. ಎಂಥ ನಿಷ್ಠುರಗಾತಿ. ಹೆಣ್ಣು ಎಂದರೆ ಹೀಗಿರಬೇಕು!... ಬೇಡ, ಬೇಡ. ಅವಳಿಗೆ ಇಷ್ಟವಿಲ್ಲದ್ದನ್ನ ತೆಗೊ ಎಂದು ಜುಲುಮೆ ಮಾಡೋದು ನ್ಯಾಯವಲ್ಲ... ಸಂಸಾರವಂದಗಿತ್ತಿ ಎಂದರೆ ಹೀಗಿರಬೇಕು, ನೋಡು. ನನ್ನ ಹೆಂಡತಿ ಹಾಗೆ ದಂಧರಾಳಿ ಅಲ್ಲ, ಇವಳು!... ಇಂಥ ಮಗಳ ಪಡೆಯೋಕೆ ನೀನು ಬಲು ಪುಣ್ಯ ಮಾಡಿದ್ದೆ ಕಣೊ, ನಿಂಗ!”– ಎಂದು ನುಡಿಯುವಾಗ ಅವನ ಒಂದೊಂದು ಮಾತು ಒಂದೊಂದು ಮುತ್ತಿನಂತೆ ನುಣುಪಾಗಿ ಹೊರಬಿದ್ದಿತ್ತು.

ನಿಂಗಯ್ಯನೂ ಕೇಶವಯ್ಯನ ಅಭಿಪ್ರಾಯವನ್ನು ಒಪ್ಪಿ ಕತ್ತು ಕುಣಿಸಿದ.

“ರವಿಕೆಯನ್ನು ಹೊಳಿಸಬೇಕಾದರೆ, ನಿನ್ನ ಹೆಂಡತೀದೊಂದು ಹಳೆ ರವಿಕೆ ಅಳತೆಗೆ ಬೇಕಲ್ಲಪ್ಪ?” – ಕಟ್ಟಿದ ಜವಳಿಯನ್ನು ನಿಂಗಯ್ಯನ ಕೈಗಿಡುತ್ತ ರಂಗಪ್ಪಶೆಟ್ಟರು ಕೇಳಿದರು. ಅದಕ್ಕೇ,

“ನಾಳೀಕೆ ನಮ್ಮೊರು ಯಾರಾರ ಹುಣಸೂರ್‍ಗೆ ಬರೋರ ಕಯ್ಲಿ ಕ್ವಟ್ಟು ಕಳುಸ್ತೀನಿ” ಎಂದು, ನಿಂಗಯ್ಯ ಜವಳಿ ಗಂಟನ್ನು ಕಂಕುಳಲ್ಲಿ ಇರುಕಿ ಮೆಟ್ಟಿಲುಗಳನ್ನಿಳಿದು ಲಕ್ಕ ಅವನನ್ನು ಹಿಂಬಾಲಿಸಿದ.

ನಿಂಗಯ್ಯ, ಲಕ್ಕ ಇಬ್ಬರೂ ಸಿವುನಿಯನ್ನು ಕೂಡಿಕೊಳ್ಳುತ್ತಲೂ, ನಿಂಗಯ್ಯ

“ಹುಣಸೂರ್‍ನಲ್ಲಿ ಇನ್ನೇನಾರ ಕೇಮೆ ಇದ್ದಾತ?– ಊರ್‍ಗೆ ವೊಂಡಾದು

ತಾನೆ?" –ಎಂದು ಲೋಕಾಭಿರಾಮವಾಗಿ ಕೇಳಿದ.

"ಊ. ಇಲ್ಲಿ ಇನ್ನೇನ ಜಂಬರ?– ನಡೀರಿ. ಅಲ್ಲೊಂದು ಇಲ್ಲೊಂದು ಮ್ವಾಡ ಗುರಕಾಯಿಸ್ತಾ ಅದೆ. ಜಟಜಟ್ನೆ ಊರು ಸೇರುಕಳಾವ" ಎಂದವನು ಲಕ್ಕ.

"ಸಂತೇಲಿ ತುಸ ಕೆಲ್ಸ ಇತ್ತು..." ಸಿವುನಿ ರಾಗ ಎಳೆದಳು.

"ಸಂತೇಲಿ ಇನ್ಯವ ಜಂಬರ ಇದ್ದು?" ಸುಳಿವು ತಿಳಿಯದೆ ನಿಂಗಯ್ಯ ಕೇಳಿದ. ಅದುಕ್ಕುತ್ತರವಾಗಿ ಸಿವುನಿ.

"ಯಾನಿಲ್ಲ. ಒಂದು ಕುರಿ ಕಳ್ಳವಾಂತ..." ಎಂದಳು.

ನಿಂಗಯ್ಯನಿಗೆ ಮೈಯೆಲ್ಲ ಕಿವಿಯಾಯಿತು.

"ಸಾಜವಾಗೂವೆ"? ಅದುಕೆ ದುಡ್ಡು?"

"ನಂಜನಗೂಡ್ನಿಂದ ಬರ್ವಾಗ ವಸಿ ದುಡ್ಡ ತಂದಿದ್ದೆ. ಅಲ್ಲಿ ನಾನು ಕಂಬಳದಲ್ಲಿ ಮಿಗುಸ್ದ ದುಡ್ಡು. ಅದ್ನೆ ಬಳಸಿ ತಕ್ಕಳಾದು" ಎಂದು ಬಿರಬಿರನ ಹೆಜ್ಜೆ ಹಾಕಿದಳು.

ಸ್ವಲ್ಪ ಹಿಂದಕ್ಕಾದ ನಿಂಗಯ್ಯ. ಲಕ್ಕನೊಡನೆ,

"ಕಾಲದಿಂದ್ಲೂವೆ ನಮ್ಮೆಣ್ಣಿನ ಸೊಬಾವಾನೆ ಇಂಗೆ, ಕಸ್ಟದಲ್ಲಿ ರೋರ್ಗೆ ಸಾಯ ಮಾಡಾದು. ತಾನು ಆಸಿಗಂಡಿದ್ರೂವೆ ಇನ್ನೊಬ್ಬರ್ಗೆ ಮಾಡಿದ್ನೆಲ್ಲ ಇಕ್ಕಿ ಸಮತರಿಸಾದು?... ಚಿನ್ನದಂತಾ ಗುಣ. ಆ ದ್ಯಾವರು ಕಡೆಗಾಲ್ದಲ್ಲಿ ಅಯ್ಯನ ಸುಸ್ರೂಸೆ ಮಾಡ್ಲೀಂತ ಕರಕಂಬಂದನೊ ಯಾನೊ ಇಲ್ಲೀಗಿವಳ್ನ!" ಹೇಳುತ್ತ ಹೇಳುತ್ತ ಹಿಗ್ಗಿದ.

ಸಂತೆಮಾಳದಲ್ಲಿ ಅಳೆದೂ ಸುರಿದೂ ಅತ್ತ ಹೋಗಿ ಇತ್ತಬಂದು, ಮಾರುವವನ ಸಂಗಡ ಚೌಕಾಶಿ ಮಾಡಿ, ಒಂದು ಕುರಿಮರಿಯನ್ನು ಎಂಟು ರೂಪಾಯಿಗೆ ಕೆಡವಿಕೊಳ್ಳುವುದರ ಒಳಗೆ ಪಡುವಳಿಂದ ಕತ್ತಲು ತನ್ನ ಸೆರಗನ್ನು ಹೊದ್ದಿಸುತ್ತ ಬರತ್ತಿತ್ತು. ಕೊಂಡು ಮುಗಿದ ಬಳಿಕವೂ ಬೆಲೆ ಜಾಸ್ತಿಯಾಯ್ತೆ, ಹೆಂಗೆ, ಎಂದು ಸಂತೆಗೆ ಬಂದಿದ್ದ ಪರಿಚಯಸ್ಥರನ್ನೆಲ್ಲ ಕೇಳಿ, ಅವರು "ಪರವಿಲ್ಲ, ಕ್ವಟ್ಟ ದುಡ್ಡಿಗೇನೂ ಮ್ವಾಸ ಇಲ್ಲ. ಅಂಗೆ ನೋಡುದ್ರೆ, ಇನ್ನೂ ಏಡು ರೂಪಾಯಿ ಎಚ್ಚಾಗೆ ತಡೀತದೆ ಮುಕ್ಕ" ಎಂದನಂತರವೇ ಸಿವುನಿಗೆ ಸಮಾಧಾನ!

ಇವರ ವ್ಯಾಪಾರ ಮುಗಿದು ಸೇತುವೆ ದಾಟಿ ಬರುವ ವೇಳೆಗೆ ಅವರ ದರುಮನಳ್ಳಿ ಗಾಡಿಗಳೆಲ್ಲ ಆಗಲೆ ಹೊರಟುಹೋಗಿದ್ದವು. ದೊಳ್ಳಪ್ಪನೆ ಗಾಡಿಯೊಂದೆ ಇನ್ನೂ ಹೊರಡದೆ ಉಳಿದಿತ್ತು. ದೊಳ್ಳಪ್ಪನ ಹೆಂಡತಿ ಸಂಪಿಗೆಮ್ಮ ಆನಂತಶೆಟ್ಟರ

ಅಂಗಡಿಯಲ್ಲಿ ಒಂದು ಹಿತ್ತಾಳೆ ಚವುರಿಗೆ ಕೊಂಡು, ತಮ್ಮ ಎತ್ತಿನ ಬಂಡಿಯನ್ನು ಸಮೀಪಿಸುತ್ತಿರುವ ಹಾಗೆ, ಕುರಿಮರಿಯನ್ನು ನೋಡಿ–

"ಏಟು ಕ್ವಟ್ಕಣೆ ಮರೀಗೆ?" ಕೇಳಿ, ಅದಕ್ಕುತ್ತರವಾಗಿ ಸಿವುನಿ,

"ಎಂಟು ರುಪಾಯಿ ಕ್ವಟ್ಟೆ, ಸಂಪಗವ್ವಾರೆ" ಎನ್ನುತ್ತಲೂ

"ಅದ್ಯಾಕಮ್ಮಿ ಈ ಬಡಕಲು ಮರೀಗೆ ವೋಟೊಂದು ಅಣ ಸುರುದೆ?... ಯಾಕೆ, ನಮ್ಮ ತಾವು ಇರನಿಲ್ವ?... ಇದೇ ಜಪಾತಿ ಮರ್‍ಯ, ನೀ ಕ್ಯಾಳಿದ್ರೆ, ಬಡವರೂಂತ ಒಂದು ರೂಪಾಯಿ ಕುಸಿ ಆಕೇ ಕ್ವಡುತಿದ್ದೆ" ಹೇಳಿ, ಸಿವುನಿ ಒಂದು ಗಳಿಗೆ ತಬ್ಬಿಬ್ಬಾಗುವಂತೆ ಮಾಡಿದಳು.

ಆದರೆ ದೊಳ್ಳಪ್ಪನ ಹೆಂಡತಿ, ತನ್ನ ಗಂಡ ಮತ್ತು ಗಾಡಿ ಹೊಡೆಯುವ ಆಳಿನ ಜೊತೆಗೆ ಗಾಡಿಯನ್ನೇರಿ ಕುಳಿತಂತೆ, ನಿಂಗಯ್ಯ

"ದೊಳ್ಳಪ್ಪಾರೆ, ಈ ಮರಿ ಇಡಕಂಡು ಗಾಡಿ ಇಂದುಗಡೆ ನಾ ಕುಂತುಗಳಲಾ?" ಕೇಳಿದ್ದಕ್ಕೆ, "ಹೆಂಗಪ್ಪ ಆದುದು?– ಸುಮಾರು ಸಾಮಾನ ಹೇರಿಕಂಡು ಹೋಯ್ತಾ ಇವಿ. ನಮ್ಮ ಎಡಗೋಲು ಇತ್ತಿಗೆ ಬ್ಯಾರೆ, ಕಾಲುಜರ ಆಗಿ ಇವತ್ತೇ ಗಾಡಿಗೆ ಹೂಡಿರಾದು ಅದ್ನ..." ದೊಳ್ಳಪ್ಪನ ಹೆಂಡತಿ ಸಂಪಿಗೆಮ್ಮ ಗಂಡನ ಕಡೆ ಕಣ್ಣು ಹೊರಳಿಸಿ ನುಡಿದಾಗ, ಗಾಡಿ ಮುಮದಾಗುವುದನ್ನೆ ತುಟಿಪಿಟಿಕ್ಕೆನ್ನದೆ ನಿರುಕಿಸುತ್ತ ನಿಂತಿದ್ದ ಸಿವುನಿ,

"ಊ ಊ, ಇವಳೇ ಕನಯ್ಯ– ಒಂದು ರೂಪಾಯಿ ಕುಸಿ ಆಕ್ತದ್ದ ಗೆಣೆಕಾತಿ! ಗಾಡಿ ಇಂದುಕೆ ಆಟೊಂದು ಜಾಗ ಅದೆ. ನಿನ್ನೂ ಈ ಮರೀನೂ ಅತ್ತಿಸಿಕಂಡಿದ್ರೆ, ಇವಳೆತ್ತು ಸತ್ತೋಗೋದ?.... ನೀ ಯೇನೇ ಹ್ಯಾಳು, ನಂಜನಗೂಡು ಸೀಮಿಂದ ಈ ನಮ್ಮ ದರುಮನಳ್ಳಿ ಸೀಮೆಯವರ್‍ಗೂ ನಾ ನ್ವಾಡ್ದೆ. ಈ ಉತ್ತಮರು ಅನ್ನಿಸಿಕೊಂಡೋರೆಲ್ಲ ಇಂಗೇಯ– ಬರಿ ಮಾತ್ನಲ್ಲಿ ಮರಿಜವುಳಿ ಕಡ್ಯ ನೀವಾಳುಸ್ತ ಇರುತವ್ರೆ... ನಾವು ಮಾತ್ರ ಮೂಗೆತ್ತುಗಳಂಗೆ ಅವರು ಹ್ಯಾಳಿಕ್ಯಾಳಿದಕೆಲ್ಲ ತಾಳ ಅಕ್ಕಂಡು ದುಡಿಯೋದು. ಅವುರ್‍ಗೆ ಯಾನಾರ ಇಂಕರ ಎಚ್ಚು ಕಮ್ಮಿ ಆಗ್ಲಿ ನ್ವಾಡು, ತಕ್ಷಣ "ನಿಂಗಾ–ಕಲ್ಯಾಣಿ–ಲಕ್ಕ..." ಅಂತ ಬೇಳುಗರೀತಿರ್‍ತಾರೆ... ಅದೇಯ ನಮ್ಗೆ ಕಾಯ್ಲೆ ಕಸಾಲೆ ಅನ್ನಾ ಹಂಗಿಲ್ಲ. ಅವರು ಕುರ್ ಅಂದೇಟಿಗೆ ನಾನು ದೌಡು ವೋಡೀತಿರಬೇಕು! ಅನ್ನೆಕಾರ್‍ರು, ನ್ಯಾಯ ಯೆಲ್ಲಿದ್ದಾತ ಅವುರ ತಾವು?..." ಹೀಗೆ ಖಾರಖಾರವಾಗಿ ಸಿಡಿಯುತ್ತಿದ್ದಳು. ನಿಂಗಣ್ಣ–

" ನೀ ಯೋಳೋದೆಲ್ಲ ಸಾಜ. ಈಗ ನಾವೇನ ಮಾಡಾ ಅಂಗಿದ್ದಾತು?... ಸಮಾಸು, ನಾನೇ ವೊತ್ತುಗೊತ್ತೀನಿ ಮರ್‍ಯ... ವೊತ್ತಾಯ್ತಾ ಅದೆ ನಡಿರಿ" ಎಂದು

ಕುರಿಮರಿಯನ್ನು ಎತ್ತಿ ಹೆಗಲಿಗೇರಿಸಿದ.

"ಚಿಕ್ಕ ಪ್ರಯದೊನು ನಾನು ಇಲ್ಲೇ ಇವ್ನಿ. ಮಯಸಾದ ನೀನು ಮರಿ ವೊತ್ತುಗಂಡ ಬತ್ತಿದ್ರೆ, ನ್ವಾಡಿದೊರು ಯೇನು ಅನ್ನಕ್ಕಿಲ್ಲ. ತತ್ತಯ್ಯ ಇಲ್ಲಿ" ಎನ್ನುತ್ತ, ನಿಂಗಯ್ಯನ ಹೆಗಲಿನಿಂದ ಕುರಿಮರಿಯನ್ನು ತನ್ನ ಹೆಗಲಿಗೆ ವರ್ಗಾಯಿಸಿಕೊಂಡ ಲಕ್ಕ...

## ೧೫

ಸರಿಸಿಯ ನೆನಪು ಈಗ ನೂರು ವಿಧಧಲ್ಲಿ ರುಕ್ಮಿಣಿಯನ್ನು ಹೆಜ್ಜೆಹೆಜ್ಜೆಗೂ ಕಾಡುವುದು. ಸರಸಿಯನ್ನು ತನ್ನಕ್ಕ ಪಾರ್ವತಿಯು ತನ್ನೊಡನೆ ಭೀಮನಳ್ಳಿಗೆ ಕರೆದೊಯ್ದು. ಇನ್ನೂ ನೆಟ್ಟಗೆ ಮೂರು ವಾರಗಳೂ ಕಳೆದಿಲ್ಲ. ಆದರೂ ರುಕ್ಮಿಣಿಗೆ ಸರಸಿಯಿಲ್ಲದ ಮನೆ ಕಡುಬೇಸರ ತಂದಿತ್ತು. ಮನೆಗೆಲಸದಲ್ಲಿ ಹೇಗೋ ಮರೆಯಲೂ ಪ್ರಯತ್ನಪಡುವಳು. ಆದರೂ ಆ ಕಂದನ ನೆನಪು ಮತ್ತೆ ಮತ್ತೆ ಎದಿರಾಗಿ ಹಿಂಸಿಸುವುದು. ಒಂದೇ ಸಮಾಧಾನ ಎಂದರೆ ಅವಳು ತನ್ನ ಅಕ್ಕನ ಮನೆಯಲ್ಲಿ ಸೇರು ಪಾವು ಚಟಾಕನಂತಿದ್ದ ಅವಳ ಹಿಂಡು ಮಕ್ಕಳ ಜೊತೆಗೆ, ಅದರಲ್ಲೂ ಅವಳಿಗೆ ಒಗ್ಗೆ ಹೋಗಿದ್ದ ಗಿರಿಜೆಯೊಡನೆ ಆಡವಾಡುತ್ತ, ಭೀಮನಳ್ಳಿ ಹೊಸ ಜಾಗವಾದ್ದರಿಂದ ಇಲ್ಲಿಗಿಂತಲೂ ಹೆಚ್ಚು ಸುಖವಾಗಿ ಕಾಲ ಕಳೆಯುತ್ತಿರಬಹುದು. ಒಂದೇ ಆತಂಕವೆಂದರೆ, ಭೀಮನಳ್ಳಿಯ ಸಮೀಪ ಹರಿಯುವ ಲಕ್ಷ್ಮಣತೀರ್ಥ ನದಿ!... ಎಲ್ಲ ಮಕ್ಕಳಿಗೂ ನೀರಿನ ಆಕರ್ಷಣೆ ಸಾಮಾನ್ಯ ವಾದುದೆಂದರೂ ಸರಸಿಯ ನೀರಿನ ಹುಚ್ಚು ತೀರ ಮಿತಿಮೀರಿದ್ದ! ಬೆಳಗ್ಗೆ ಎದ್ದು ಮುಖ ತೊಳೆಯುವಾಗ ಅಥವಾ ಮನೆಯ ಹೊರಗಿನಿಂದ ಬಂದು ಅಂಗಳದಲ್ಲಿ ಕಾಲು ತೊಳೆಯುವಾಗ, ಯಥೇಚ್ಛವಾಗಿ ನೀರನ್ನು ಸುರಿದುಕೊಳ್ಳುವುದೇ ಅವಳ ಪರಿಪಾಠ, ಮನೆಯವರ ಕಣ್ಣುತಪ್ಪಿಸಿ (ಸುಶೀಲತ್ತೆ ಬದುಕಿದ್ದಾಗಲೂ ಸಹ!) ಒಬ್ಬಳೇ ಬಚ್ಚಲುಕೋಣೆ ಸೇರಿದಳೆಂದರೆ ಮುಗಿಯಿತು. ಅವಳ ಸ್ನಾನಕ್ಕೆ ಹಂಡೆಯ ನೀರಲ್ಲೆ ಖಾಲಿ!... ಒಮ್ಮೆ ನಡೆದ ಸಂಗತಿಯನ್ನು ನೆನೆದರೆ ಈಗಲೂ ಮೈ ಜುಮ್ಮೆನ್ನುತ್ತದೆ. ಒಂದು ಭಾನುವಾರ ಮಧ್ಯಾಹ್ನ ಅವಳೊಡನೆ ಎಂದಿನಂತೆ ತೋಟಕ್ಕೆ ಹೋಗಿದ್ದಾಗ ನಡೆದ ಪ್ರಕರಣ: ತಾನು ವೀಳೆಯದೆಲೆ ಬಿಡಿಸುತ್ತಿರುವಾಗ, ಮಾವಯ್ಯನು ಮಣ್ಣಿನ ಹರಬಿಗಳಲ್ಲಿ ಹೊತ್ತು ತಂದು ಹೊಸದಾಗಿ ನೆಟ್ಟ ಬಾಳೆಯ ಕಂದುಗಳಿಗೆ ನೀರೂಡುತ್ತಿದ್ದರು. ಆಗ ಇನ್ನೊಂದು ಅಡಿಕೆಮರದ ವೀಳೆಯದೆಲೆ ಹಂಬಿನಿಂದ ಎಲೆ ಕೊಯ್ಯುತ್ತಿದ್ದ ಸರಸಿಯು ಯಾವ ಮಾಯದಲ್ಲೊ

ಅಲ್ಲಿಂದ ಜಾರಿ, ಕೊಳದ ಮೆಟ್ಟಿಗಳನ್ನಿಳಿದು, ಕೊನೆಯ ಮೆಟ್ಟಿಲಿನ ಮೇಲೆ ಕುಳಿತು, ಎರಡು ಕಾಲುಗಳನ್ನೂ ಕೊಳದ ನೀರಿನಲ್ಲಿ ಇಳಿಬಿಟ್ಟುಚೆಲ್ಲಾಟವಾಡಲು ಶುರುಮಾಡಿದ್ದಳು, ಹಾಗೆ ಆಡುವಾಗ ಏನಾಯಿತೊ, ಹಿಂದಿನಿಂದ ಮಾವಯ್ಯ "ಅಯ್ಯಯ್ಯೊ, ಅಯ್ಯಯ್ಯೊ –ಅನರ್ಥ ಅನರ್ಥ..." ಎಂದು ಹುಯಿಲಿಟ್ಟಿದ್ದು ಕೇಳಿಸಿ, ರುಕ್ಮಿಣಿಯು ಹಿಂದಿರುಗಿ ನೋಡಿದ್ದಳು, ಮಾವಯ್ಯನು ಹರಬಿಗಳನ್ನು ನಿಂತಲ್ಲಿಯೇ ಕೈಬಿಟ್ಟು ಓಡುತ್ತಹೋಗಿ, ಕೊಳಕ್ಕೆ ಧುಮುಕಿ, ಮುಳುಗಿ ಎದ್ದಿದ್ದ ಸರಸಿಯನ್ನು ಎತ್ತಿತಂದು ಅಪಾಯದಿಂದ ಪಾರುಮಾಡಿದ್ದರು... ಆ ದಿನದಿಂದ ಸರಸಿಯೂ ತನ್ನೊಡನೆ ಬಂದಾಗಲೆಲ್ಲ ರುಕ್ಮಿಣಿಯು ಮೈಯೆಲ್ಲ ಕಣ್ಣಾಗಿ ಅವಳನ್ನು ತುಂಬು ಎಚ್ಚರದಿಂದ ನೋಡಿಕೊಂಡಿದ್ದಳು. ಈಗ ಈ ತುಂಟೆಯು ಆ ಹೊಳೆಗೆ ನಡೆದು ಎಲ್ಲಿ ಅವಿವೇಕ ಮಾಡಿಕೊಳ್ಳುವಳೊ ಎನ್ನುವ ದಿಗಿಲು ರುಕ್ಮಿಣಿಯನ್ನು ಪದೇ ಪದೆ ಬಾಧಿಸುವುದು. ಅದನ್ನು ಮರೆಯಲು ಈಚೀಚೆಗೆ ತನ್ನ ವಾರಗೆಯವರ ಮನೆಗೆ ಕೈ ಬಿಡುವಾದಾಗಲೆಲ್ಲ ಹೆಚ್ಚ ಹೆಚ್ಚಾಗಿ ಹೋಗಿ ಬರಲು ಅವಳ ಆರಂಭಿಸಿದ್ದಳು. ಅವಳು ವಿಶೇಷವಾಗಿ ಹೋಗುತ್ತಿದ್ದ ಮನೆಗಳಲ್ಲಿ ವೆಂಕಣ್ಣ ಜೋಯಿಸರ ಮನೆಯೂ ಒಂದು. ವೆಂಕಣ್ಣ ಜೋಯಿಸರಿಗೆ ಒಬ್ಬ ಮಗ ಮೂವರು ಹೆಣ್ಣುಮಕ್ಕಳು. ಮಗನಿಗೆ ಲಗ್ನವಾಗಿ ಅವನು ಬೆಂಗಳೂರಿನಲ್ಲಿ ಯಾವುದೊ ಖಾಸಗಿ ಕಂಪೆನಿಯಲ್ಲಿ ಮ್ಯಾನೇಜರ್ ಆಗಿ ಕೈ ತುಂಬ ಸಂಬಳ ಪಡೆಯುತ್ತಿದ್ದನಾದರೂ ಮನೆಗೆ ಸಹಾಯಕನಾಗಿರಲಿಲ್ಲ. ಸೊಸೆಗೂ ಅತ್ತೆಗೂ ಸಾಮರಸ್ಯವಿರಲಿಲ್ಲ. ಅದೆಷ್ಟು ವಿರೋಪ ಮುಟ್ಟಿತೆಂದರೆ ಮಗ ಮನೆಯವರ ಸಂಬಂಧವನ್ನೆ ಕಡಿದುಕೊಂಡಿದ್ದ. ವರ್ಷಕ್ಕೊ ಎರಡು ವರ್ಷಕ್ಕೊ ಒಮ್ಮೆ ನೆಂಟ ಬಂದಂತೆ ಬಂದು ಒಂದೊ ಎರಡೊ ದಿನ ಇದ್ದು ನಡೆದು ಬಿಡುತ್ತಿದ್ದ. ಹೆಂಡತಿ ಮಾತ್ರ ಇವನೊಡನೆ ಬಂದುದೇ ಇಲ್ಲ. ಇಷ್ಟೇ ಅಲ್ಲದೆ, ಮನೆಯವರಿಗೆ ತನ್ನ ಸಂಬಳದಲ್ಲಿ ಚಿಕ್ಕಾಸನ್ನೂ ಕಳಿಸುತ್ತಿರಲಿಲ್ಲ. ಹೆಣ್ಣು ಮಕ್ಕಳಲ್ಲಿ ನಾಗಲಕ್ಷ್ಮಿಯೇ ದೊಡ್ಡವಳು. ಅವಳಿಗೀಗ ಹದಿನಾಲ್ಕು. ಇನ್ನೂ ಮೈ ನೆರೆದಿರಲಿಲ್ಲ. ಅವಳೇ ರುಕ್ಮಿಣೀಯನ್ನು ತುಂಬ ಹಚ್ಚಿಕೊಂಡಿದ್ದವಳು. ಮುಟ್ಟಾದಾಗ ಅವಳೇ ಬಂದು ನೀರೆರೆಯುತ್ತಿದ್ದವಳು. ವಾಸಂತಿಗೆ ಹನ್ನೆರಡು, ಶಾಂತಿಗೆ ಹನ್ನೊಂದು. ಈ ಹೆಣ್ಣು ಮಕ್ಕಳೆಲ್ಲರೂ ರುಕ್ಮಿಣಿಯನ್ನು ಒಂದಲ್ಲ ಒಂದು ರೀತಿಯಲ್ಲಿ ಪ್ರೀತಿಸುತ್ತಿದ್ದರು. ಆದರೆ ವೆಂಕಣ್ಣ ಜೋಯಿಸರ ಹೆಂಡತಿ ಮಾತ್ರ ಮನೆಗೆ ಹೋದರೆ ರುಕ್ಮಿಣಿಯನ್ನು ಸರಿಯಗಿ ಮಾತನಾಡಿಸುತ್ತಿರಲಿಲ್ಲ. ರುಕ್ಮಿಮಣಿಯನ್ನೇ ಏಕೆ, ಮಗನಿಗೂ ತಮ್ಮ ಮನೆಗೂ ಸಂಬಂಧ ಹದಗೆಟ್ಟಾಗಿನಿಂದಲೂ ಕೇರಿಯ

ಯಾರನ್ನೂ ಸರಿಯಾಗಿ ಮಾತನಾಡಿಸುತ್ತಿರಲಿಲ್ಲ. ಯಾವಾಗಲೂ ಮಂಕು ಕವಿದಂತೆ ಇರುತ್ತಿದ್ದರು. ಹಿಂದೆ ಗಿಡಿಯಲ್ಲಿ ಹರಿಕಥೆ ಇದ್ದರೆ ಲಗುಬಗೆಯಿಂದ ಧಾವಿಸುತ್ತಿದ್ದರು. ಆದರೆ ಆಗ ಯಾವ ಹರಿಕಥೆಯಲ್ಲೂ ಅಸ್ಥೆ ಕಳೆದುಕೊಂಡು ಸಾಮಾನ್ಯವಾಗಿ ಮನೆ ಬಿಟ್ಟು ಹೊರಗೆ ಕಾಲಿಡುತ್ತಿರಲಿಲ್ಲ. ಹೀಗಾಗಿ ಜೋಯಿಸರ ಹೆಣ್ಣುಮಕ್ಕಳು ತನಗೆ ತೋರುತ್ತಿದ್ದ ವಿಶೇಷ ಪ್ರೀತಿಗಾಗಿ, ರುಕ್ಮಿಣಿ ಅವರ ಮನೆಗೆ ಹೋಗುತ್ತಿದ್ದಳು. ಆದರೆ ಜೋಯಿಸರ ಹೆಂಡತಿಯ ಅನಾದರ ಅವಳನ್ನು ಆಚೆಗೆ ದಬ್ಬಿದಂತಾಗುತ್ತಿತ್ತು. ಈ ಕಾರಣದಿಂದ ಅವಳು ಈ ಕೇರಿಯ ಬೇರೆ ಕೆಲವು ಮನೆಗಳನ್ನು ತನ್ನ ಬೇಸರ ಕಳೆಯಲು ಅರಿಸಿಕೊಂಡಿದ್ದಳು. ಅದರಲ್ಲಿ ಕೇಶವಯ್ಯನ ಮನೆಯೂ ಒಂದು, ಅಲ್ಲಿ ಪಗಡೆಯಾಡುವುದಕ್ಕೂ ಶುರು ಹಚ್ಚಿ. ಲಕ್ಷಮ್ಮನವರಿಂದ–

"ಯಾಕೆ ರುಕ್ಕೂ, ಈ ಚಾಲಿ ನಿನಗ್ಯಾಕೆ ಅಂಟಿತು?... ಕೇಳಿಲ್ಲವೇನೆ ಹಿರಿಯರು ಹೇಳುವ ಮಾತ್ತು?... ಪಗಡೆ ಆಡಿ ಪಾಂಡವರು ಕೆಟ್ಟರು, ಇಸ್ಪೀಟಾಡಿ ಇದ್ದಬದ್ದವರೆಲ್ಲ ಕೆಟ್ಟರು ಅಂದು?... ಇದ್ದಬದ್ದವರ ವಿಚಾರ ಯಾಕೆ?– ನನ್ನ ತಮ್ಮನ ವಿಷಯಾನೆ ತೆಗೆದುಕ್ಕೊ. ಎಡತೊರೇಲಿ ಹೊಟಲಿಟ್ಟು ಭರ್ಜರಿ ಸಂಪಾದ್ನೆ ಮಾಡ್ತಿದ್ದ. ಏತನ್ಮಧ್ಯ ಯಾವತಲೆಮಾಸಿವನು ಹಿಡಿಸಿದನೊ ಹುಚ್ಚನ್ನ– ಅದೇನೊ ಮೂರೆಲೆ ಆಟವಂತಲ್ಲಮ್ಮ, ಆ ಚಟಕ್ಕೆ ಬಲಿಯಾಗಿ ಕೊನೆಗೆ ಸಮಸ್ತ ಆಸ್ತೀನೂ ಕಳೆದುಕೊಂಡೂ ಎಕ್ಕಹುಟ್ಟೋದ!..." ಎಂಬ ಬುದ್ಧಿವಾದದ ಮಾತನ್ನು ಕೇಳಬೇಕಾಗಿ ಬಂದಿತ್ತು. ಆದರೂ ರುಕ್ಮಿಣಿ,

"ಆದರೂ ನಾವೇನು ಪಾಂಡವರ ಹಾಗೆ ಪಣ ಇಟ್ಟು ಆಡ್ತಿಲ್ಲವಲ್ಲ, ಲಕ್ಷಮ್ಮನೋರೆ..." ಎಂದು ಸಮಾಧಾನ, ಹೇಳಿ, ತನ್ನ ಪಗಡೆಯಾಟವನ್ನು ಮುಂದುವರೆಸಿದ್ದಳು.

ಹೀಗೆ ಒಂದು ದಿನ ಕೇಶವಯ್ಯನ ಮಡದಿಯ ಸಂಗಡ ಪಗಡೆಯಾಡುತ್ತಿದ್ದಳು. ಕೇಶವಯ್ಯನ ಹೆಂಡತಿ ಪಗಡೆಯಾಟದಲ್ಲಿ ನಿಸ್ಸೀಮೆ. ದಂತದ ದಾಳಗಳನ್ನು ಹಿಡಿದು ಅವಳು ಉರುಳಿಸುತ್ತಿದ್ದ ವರಸೆಯಲ್ಲಿ, ಅವಳು ಕೇಳಿದ ಲೆತ್ತ ಬೀಳುವುದು. ದುಗ ಎಂದರೆ ದುಗ, ಇತ್ತಿಗ ಎಂದರೆ ಇತ್ತಿಗ. ಪದಿ ಎಂದರೆ ಪದಿ, ಪಗಡೆಕಾಯಿಗಳನ್ನು ನಡೆಸುವದರಲ್ಲಿಯೂ ಆಕೆ ಬಲು ಚೂಟಿ. ಆಟ ಸಾಗಿದಂತೆ ಅವಳದೇ ಮೇಲುಗೈ ಆಗುವುದು ಸ್ಪಷ್ಟವಾಗುತ್ತಿತ್ತು. ಆಗ ತನ್ನ ಹೆಂಡತಿ ದಾಳ ಹಾಕಿದಂತೆ, ಪಗಡೆಕಾಯಿಗಳನ್ನು ರುಕ್ಮಿಣಿಯ ಪರವಾಗಿ ನಡೆಸುವುದರಲ್ಲಿ ಜೊತೆಯಾಗಿದ್ದ ಕೇಶವಯ್ಯನು ಸುಮ್ಮನಿರದೆ, ಇತ್ತಿಗ ಬದ್ದಾಗ, "ಇತ್ತಿಗಂ ಲೆತ್ತನಾಶನಂ" ಎಂದು ಬಿಟ್ಟ!

ತನ್ನ ಗಂಡ ಎದಿರಾಗಿ ಬೇರೋಬ್ಬಳು ಹೆಂಗಸಿನ ಪರ ವಹಿಸಿ, ಆಟವಡುವಾಗ ನಡುನಡುವೆ ಪ್ರವೇಶ ಮಾಡುತ್ತಿದ್ದುದು ಸೀತಾಲಕ್ಷ್ಮಿಗೆ ವಿಪರೀತವಾದ ಕಸಿವಿಸಿಯನ್ನುಂಟುಮಾಡಿತ್ತು. ಈಗ ಗಂಡನ ಬಾಯಿಂದ ಇಂಥ ಮಾತು ಹೊರಟ ಕೂಡಲೆ,

"ಇನ್ನೋಡಿ ಅಂದ್ರೆ, ನೀವು ರುಕ್ಕೂಗೆ ಕಾಯಿ ನಡೆಸಿಕೊಟ್ಟುಬೇಕಾದ ಹಾಗೆ ಸಹಾಯ ಮಾಡಿ. ನಾನೇನು ಬೇಡ ಅನ್ನಲ್ಲ, ಆದ್ರೆ ನಾನು ದಾಳ ಬಿಡುವಾಗಲೆಲ್ಲ ಹೀಗೆ ಏನಾದರೂ ನಾಸಬಾಯಿ ನುಡಿದು ಬೇಸರಪಡಿಸಿದರೆ, ನಾನು ಸಹಿಸಿ ಸುಮ್ಮನೆ ಕೂರಲ್ಲ" ಎಂದಳು.

ಕೇಶವಯ್ಯ ತನ್ನ ಎರಡೂ ಕೆನ್ನೆಗಳಿಗೆ ಹೊಡೆದುಕೊಳ್ಳುತ್ತ,

"ಶಾಂತಂ ಪಾಪಂ, ತಪ್ಪಾಯ್ತು.... ಇನ್ನು ಮುಂದೆ ಬಾಯಿ ಬಿಚ್ಚಲ್ಲ." ಪಶ್ಚಾತ್ತಾಪ ಶಾಂತಂ ಪಾಪಂ–ನಟಿಸಿದ.

ಆದರೆ ಸ್ವಲ್ಪ ವೇಳೆ ಕಳೆಯುವುದರಲ್ಲಿ ಮರೆಮೋಸದಿಂದ ರುಕ್ಮಿಣಿಯ ಕಾಯಿಯೊಂದನ್ನು ಪಗಡೆ ಚಾರಿಯ ಮಧ್ಯದ ಚೌಕುಳಿಯಲ್ಲಿ ಮಲಗಿಸಿ, ಹಣ್ಣುಮಾಡಿಬಿಟ್ಟ– ಆಡುವವರಿಬ್ಬರಿಗೂ ತಿಳಿಯದ ಹಾಗೆ! ಆದರೆ ಆಗತಾನೇ ಒಳಗೆ ಪ್ರವೇಶಿಸಿದ ಲಕ್ಷ್ಮಮ್ಮನವರು ಕೇಶವಯ್ಯನ ಕೈ ಚಳಕವನ್ನು ನೋಡಿಬಿಟ್ಟರು! ನೋಡಿದವರು ಮೌನವಾಗಿಯಾದರೂ ಇರಬಾರದೆ?

"ಇದೇನೆ ಸೀತಾಲಕ್ಷ್ಮ, ಎತ್ತಕಡೆ ನೋಡಿಕೊಂಡು ಆಡ್ತಾ ಇದೀಯೇ?... ಆಟದ ಕಡೆ ಕೊಂಚ ನಿಗಾ ಇರಲಿ" ಎಂದು ಅನುಮಾನ ಹುಟ್ಟಿಸಿದರು

ಆ ಮಾತುಗಳು ಕಿವಿಗೆ ಬೀಳುತ್ತಲೂ ಸೀತಾಲಕ್ಷ್ಮಿಯು ಪಗಡೆ ಚಾರಿಯನ್ನೇ ಸೂಕ್ಷ್ಮವಾಗಿ ಕಣ್ಣಾಡಿಸಿ ವೀಕ್ಷಿಸಿದಳು. ಥಟ್ಟನೆ ಹಣ್ಣಿನ ಮನೆಯಲ್ಲಿ ಮಲಗಿಸಿದ್ದ ರುಕ್ಮಿಣಿಯ ಹಸಿರು, ಕಾಯಿ ಕಣ್ಣಿಗೆ ಬಿದ್ದಿತು, ಒಡನೆಯೆ,

"ಅಯ್ಯೊ, ಅಯ್ಯೊ– ಈ ಹಸಿರು ಕಾಯಿ ಯಾವಾಗ ಕಣ್ಣಾಯ್ತು?... ಮೋಸ, ಮೋಸ..." ಎಂದು ಕಿರುಚಿದಳು.

ಕೇಶವಯ್ಯನ ಕೈಚಳಕವನ್ನು ಗಮಿನಿಸದಿದ್ದ ರುಕ್ಮಿಣಿಯು ಏನು ಹೇಳಲೂ ಅಸಮರ್ಥಳಾಗಿ ತೆಪ್ಪನ ಕುಳಿತಳು. ಕೇಶವಯ್ಯ ಮಾತ್ರ ಸುಮ್ಮನಿರದೆ,

"ಸುಮ್ಮನೆ ಆಡೆ. ಅದನ್ಯಾರು ಈಗ ಮಲಗಿಸಕ್ಕೆ ಬಂದಿದ್ದರು?" ಎಂದುಬಿಟ್ಟ, ಸೀತಾಲಕ್ಷ್ಮಿಯ ಕೋಪ ಭುಗ್ ಎಂದಿತು.

"ಇಂಥ ಮೋಸದ ಆಟ ಆಡಿ ಗೆಲ್ಲದಿದ್ದರೂ ಆಗತ್ತೆ" ಎಂದು ಪಗಡೆ ಹಾಸನ್ನು ಮಗುಚಿ, ಒಳ ನಡೆದಳು.

ಕೇಶವಯ್ಯ ರುಕ್ಮಿಣಿಯ ಬೆನ್ನು ಸವರುತ್ತ,

"ನನ್ನ ಹೆಂಡತಿಯ ಸ್ವಭಾವಾನೆ ಹೀಗೆ. ಮೂಗಿನ ತುದೀಲೆ ಇರತ್ತೆ ಕೋಪ... ಇದನ್ನ ನೀನು ಮನಸ್ಸಿಗೆ ತೀರ ಹೆಚ್ಚಿಕೊಬೇಡ, ಅವಳದ್ದು–ಕ್ಷಣಪಿತ್ತ, ಕ್ಷಣ ಚಿತ್ತ... ನಾಳೆಯೂ ಬಾ. ಅಷ್ಟರಲ್ಲಿ ಅವಳನ್ನು ರಿಪೇರಿ ಮಾಡಿರ್ತೀವಿ" ಎಂದು ನಕ್ಕ.

ರುಕ್ಮಿಣಿಗೆ ಹೇಸಿಗೆಯೆನಿಸಿತು.

"ಸರಿಯೆ. ನೀನ್ಯಾಕೆ ಹಾಗೆ ಮೋಸದಿಂದ ನನ್ನ ಕಾಯಿ ಮಲಗಿಸಿದ್ದು?" ವ್ಯಗ್ರಳಾಗಿ ಕೇಳಿದಳು.

"ಅಯ್ಯೊ, ನೀನೂ ಸರಿ, ಮೋಸ ಮಾಡದಿದ್ರ ಈ ಜೀವನದಲ್ಲಿ ಗೆಲ್ಲಲಿಕ್ಕೆ ಅಗತ್ಯೆ?... ಇಡೀ ಮಹಾಭಾರದ ಕಥೆಯಲ್ಲಿ ನಾವು ಕಾಣುವದೇನು?... ಉದ್ದಕ್ಕೂ ಮೋಸ!?– ಅದೂ ಶ್ರೀಕೃಷ್ಣ ಪರಮಾತ್ಮನಿಂದಲೆ ಅದೆಲ್ಲ ನಡೆಯಿತು ಅಂದಮೇಲೆ!... ಕೃಷ್ಣನ ಕುತಂತ್ರವಿಲ್ಲದೆ ಪಾರ್ಥ ಕರ್ಣನನ್ನ ಗೆಲ್ಲಲಿಕ್ಕೆ ಸಾಧ್ಯಾವಾಗ್ತಿತ್ತೆ? ಭೀಷ್ಣದ್ರೋಣಾದಿಗಳು ಸೋಲುತ್ತಾ ಇದ್ದರೆ? ಕೊನೆಗೆ ದುರ್ಯೋಧನನ್ನು ಗದಾಯುದ್ಧದಲ್ಲಿ ಭೀಮಸೇನ ಸದೆಬಡಿಯಲು ಕೂಡ ಕೃಷ್ಣ ತೊಡೆ ತಟ್ಟಿ ಸೂಚಸಿದ್ದು ಮಹಾ ಮೋಸವಲ್ಲವೇ?..."

ಕೇಶವಯ್ಯನ ಉಪನ್ಯಾಸ ಸಾಗುತ್ತಿದ್ದಂತೆಯೇ, ರುಕ್ಮಿಣಿಯು ಎದ್ದುನಿಂತಳು.

"ಯಾಕಮ್ಮ ಹೊರಟುಬಿಟ್ಟೆ?... ಸಂಬಾರದ ಕಾಫಿ ಮಾಡಿಸ್ತೀನಿ. ಮೈಗೆ ಒಳ್ಳೇದು ಕುಡಿದು ಹೋಗುವಿಯಂತೆ, ಇರು"

–ಕೇಶವಯ್ಯನ ಈ ಮಾತುಗಳನ್ನು ಕಿವಿಗೆ ಹಾಕಿಕೊಳ್ಳದೆ ರುಕ್ಮಿಣಿ ಹೊರನಡೆದಳು ಅವಳು ಕೇಶವಯ್ಯನ ಮನೆಯ ಮುಂದಿನ ಬೀದಿಯನ್ನು ದಾಟಿ ಎಡಕ್ಕೆ ಹೊರಳಿದರೆ ಅಲ್ಲಿಂದ ಆರನೆಯ ಮನೆಯ ಗಮಕಿ ಭೀಮಯ್ಯನವರ ಮನೆ. ಅವರು ಮಧ್ಯಾಹ್ನದ ವೇಳೆ ಸಾಮಾನ್ಯವಾಗಿ ಗದುಗಿನ ನಾರಣಪ್ಪನ ಭಾರವನ್ನೊ ಲಕ್ಷ್ಮೀಶನ ಜೈಮಿನಭಾರವನ್ನೊ ವಾಚಿಸುವುದು ವಾಡಿಕೆ. ಆಗ ಅವರ ಪಡಸಾಲೆಗೆ ಇತರ ಕೇರಿಗಳ ಜನರೂ ನೆರೆಯುತ್ತಿದ್ದುಂಟು. ಮನೆಯಲ್ಲಿ ನಡೆಯುವ ಈ ಭಾರತ ವಾಚನವನ್ನು ಮನೆಯ ಹೊರಗಿನ ತೆಂಗಿನ ಮರಕ್ಕೆ ಒರಗಿ ನಿಂತು, ಒಮ್ಮೊಮ್ಮೆ ರುಕ್ಮಿಣಿಯೂ ಕೆಲಸಮಯ ಆಲಿಸುತ್ತ ನಿಲ್ಲುತ್ತಿದ್ದದುಂಟು.

ಈ ದಿನ ಗಮಕಿ ಭೀಮಯ್ಯನವರು ಭಾರದಿಂದ ರುಕ್ಮಿಣಿಗೆ ಪ್ರಿಯವಾದ ಕರ್ಣವೃತ್ತಾಂತವನ್ನು ವಾಚಿಸುತ್ತಿದ್ದರು. ಅದನ್ನು ಕೆಲವು ಕ್ಷಣ ನಿಂತು ಆಲಿಸಬೇಕು

ಎನ್ನುವಷ್ಟರಲ್ಲಿ ಅವಳ ಹಿಂದೆ ದೂರದಲ್ಲಿ ಹಿಂಬಾಲಿಸಿ ಬರುತ್ತಿದ್ದ ಲಕ್ಷ್ಮ "ರುಕ್ಕೂ... ರುಕ್ಕೂ..." ಎಂದು ಕೂಗುತ್ತ ಬಂದು ರುಕ್ಮಿಣಿಯ ತರ್ನಯತೆಯನ್ನು ಕದಡಿದಳು. ಇನ್ನು ಅಲ್ಲಿ ನಿಂತು ಸಫಲವಿಲ್ಲವೆಂದು ರುಕ್ಮಿಣಿ ಅಲ್ಲಿಂದ ಮುಂದೆ ಅಡಿಯಿಡುತ್ತ.

"ಯಾಕೆ ಲಕ್ಷಮ್ಮನೋರೆ, ಏನು ಸಮಾಚಾರ?" ಎಂದು ಪ್ರಶ್ನಿಸುವಾಗ ಬೇಸರ ತುಳುಕಿತ್ತು.

ಲಕ್ಷ್ಮಮ್ಮ ಏದುತ್ತ ಬಂದವಳು.

"ಏನಿಲ್ಲ ರುಕ್ಕು, ನಮ್ಮ ಮನೇಲಿ ಅವಲಕ್ಕೆ ಮುಗಿದಿತ್ತು. ಸೀತಾಲಕ್ಷ್ಮೀನ ಕೇಳೋಣಾಂತ ಬಂದೆ. ಆದರೆ ಪಗಡೆ ಆಟದಲ್ಲಿ ಅವಳು ಮುನಿಸಿಕೊಂಡು ಎದ್ದು ಹೋದಾಗ, ಅವಳನ್ನ ಕೇಳೋದಾದರೂ ಹೇಗೆ?– ನೀನೇ ಹೇಳು?... ಅವಳೇನೋ ಕೇಳಿದರೆ ಯಾವುತ್ತೂ ಇಲ್ಲ ಅನ್ನುವ ಹೆಂಗಸಲ್ಲ. ಅಲ್ಲದೀರ ನಾನೇನು ಯಾರನ್ನೂ ಬಿಟ್ಟಿ ಕೊಡಿ ಎಂದು ಕೇಳವಲ್ಲವಲ್ಲ!– ಕಡ ಈಸಿಕೊಳ್ತಿನಿ. ವಾಯಿದೆಗೆ ಸರಿಯಾಗಿ ಹಿಂದುರುಗಿಸಿಬಿಡ್ತೀನಿ" ಎಂದರೆ ರುಕ್ಮಿಣಿಗೆ.

"ಮಹಾರಾಯಿತಿ, ನನ್ನಿಂದ ಸಾಲಾಗಿ ಪಡೆದ ಎಷ್ಟು ಪದಾರ್ಥಗಳನ್ನ ವಾಪಸು ಕೊಟ್ಟಿದ್ದೀರಿ?' ಎಂದು ಕೇಳಬೇಕೆನ್ನಿಸಿ, ಮರುಕ್ಷಣವೆ,

'ಇಂಥ ಭಂಡ ಸಂಗಡ ವಾದ ಮಾಡುವುದು ಮೂರ್ಖತನದ ಪರಮಾವಧಿ' ಎಂದುಕೊಳ್ಳುತ್ತ ಸಾಗುತ್ತಿರುವಂತೆ,

"ರುಕ್ಕು, ನಿನ್ನಲ್ಲಿದ್ದರೆ– ಒಂದು ಅಚ್ಚೇರು ಕೊಟ್ಟಿರು, ನಾಳೆ ನಾಳಿದ್ದರಲ್ಲಿ ವಾಪಸು ಮಾಡ್ತೀನಿ" ಎಂದು ಕೇಳೇಬಿಟ್ಟಳು!

ಲಕ್ಷಮ್ಮನ ಸ್ವಭಾವವೇ ಹಾಗೆ. ಕೇಳುವಾಗ ತನಗೆ ಅಗತ್ಯವಾದುದಕ್ಕಿನ್ನ ಹೆಚ್ಚಾಗಿ ಕೇಳಿಬಿಡುವುದು. ಕೊಡುವವರು ಅದರ ಅರ್ಧಷ್ಟನ್ನಾದರೂ ಕೊಡುವುದಿಲ್ಲವೆ?– ಎನ್ನುವ ಲೆಕ್ಕಾಚಾರ!

ರುಕ್ಮಿಣಿಯು ಒಳಗೇ ನಕ್ಕಳು.

"ಅಚ್ಚೇರಿನಷ್ಟು ಇರಲಾರದು. ಇರುವಷ್ಟನ್ನು ಕೊಡ್ತೀನಿ, ಬನ್ನಿ."

"ಇನ್ನೇನು ಮಾಡುವುದು?– ಲಭ್ಯ ಇದ್ದಷ್ಟು!... ಹುಂ, ಹಾಗೇ ಮಾಡು" ಎನ್ನುತ್ತ ರುಕ್ಮಿಣಿಯನ್ನು ಹಿಂಬಾಲಿಸಿದಳು ಲಕ್ಷ್ಮಮ್ಮ.

ಮನೆ ಸೇರುತ್ತಲೂ, ಒಂದು ಪಾವು ಅವಲಕ್ಕಿಯನ್ನು ತಂದಿತ್ತು,

"ನಾಳೆ, ತಪ್ಪಿದರೆ ನಾಳಿದ್ದು ತಂದುಕೊಡ್ತೀರಿ ತಾನೆ?" ತಾತ್ಸಾರದಿಂದಲೇ ಕೇಳಿದಳು.

"ಓ, ಭೇಷಕ್ಕಾಗಿ ನಾಳೆ ಬೃಹಸ್ಪತಿವಾರ ಅಲ್ಲವೆ? ಸಂತೆಯಿಂದ ತರಿಸಿ,

ನಾಳೆ ರಾತ್ರಿ, ತಪ್ಪಿದರೆ ನಾಳಿದ್ದು ಬೆಳಿಗ್ಗೆ ಖಂಡಿತವಾಗಿಯೂ ತಂದುಕೊಡ್ತೇನೆ" ಎಂದವಳು, ಏನೋ ಉಪಕಾರ ಮಾಡುವವಂತೆ ಸಮೀಪಕ್ಕೆ ಬಂದು, ದನಿ ತಗ್ಗಿಸಿ ನುಡಿದಳು:

"ರುಕ್ಕು, ಆ ಕೇಶವಯ್ಯನ ಮನೆಗೆ ವಿಶೇಷವಾಗಿ ಹೋಗಬೇಡಮ್ಮ. ನೆರೆಮನೆ ಹೆಂಗಸಿಗೆ ನೆಗೆದು ಮುತ್ತು ಕೊಡುವ ಜಾತಿ!... ನಾನು ಹೀಗೆ ಹೇಳಿದೆ ಅಂದು ಬೇಸರಪಟ್ಟುಕೊಬೇಡಮ್ಮ."

ಮಡಿಲಿಗೆ ತುಂಬಿದ ಅವಲಕ್ಕಿಯನ್ನು ಭದ್ರ ಮಾಡಿಕೊಳ್ಳುತ್ತ ಲಕ್ಷಮ್ಮ ಬೀದಿಗೆ ಇಳಿದಳು.ಯಾವುದಾದರೂ ಪದಾರ್ಥವನ್ನು ಈಸಿಕೊಳ್ಳುವಾಗ ಇಂಥದೊಂದು ಉಪಚಾರ ಮಾತಾಡುವುದು ಲಕ್ಷ ಮ್ಮನಿಗೆ ರೂಢಿಯಾಗಿತ್ತು!

ಐದಾರು ದಿನಗಳ ಹಿಂದೆ ಇದೇ ಲಕ್ಷಮ್ಮ ಬೆಲ್ಲದಚ್ಚು ಕೇಳಲು ಬಂದಾಗ, ತಾನು ಊಟ ಮುಗಿಸಿ, ಒಂದು ಬೆಳ್ಳಿಯ ಲೋಟದ ತುಂಬ ಹಾಲು ಕುಡಿಯುತ್ತಿದ್ದಳು. ಬಾಲ್ಯದಿಂದಲೂ ಹಾಲು–ಅದರಲ್ಲೂ ಹಸುವಿನ ಹಾಲ ರುಕ್ಮಿಣಿಗೆ ತುಂಬ ಪ್ರಿಯವಾದ ಪಾನೀಯ! ಬೆಲ್ಲದಚ್ಚು ತೆಗೆದುಕೊಂಡು ಲಕ್ಷ ಮ್ಮ ಗಮ್ಮನೆ ಹೋಗಬಾರದಿತ್ತೆ?...

ನಾಚಿಕೆ ಕೆಟ್ಟ ಹೆಂಗಸು.

"ಹಾಲು ಕುಡಿಯಬೇಡವೆ, ರುಕ್ಕು–ಹಾದರ ಮಾಡುವ ಹಾಗಾಗುತ್ತೆ" ಅಂದುಬಿಡುವುದೆ?

## ೧೬

ಸಂತೆಯಿಂದ ಬಂದ ಮಾರನೆಗೇ ಮರಿ ಕಡಿದು ತುಪ್ಪಟ ಮಾರಿದರು. ಆ ರಾತ್ರಿ ಅವರ ಗುಡ್ಲಿನಲ್ಲಿ ಹಬ್ಬದ ಅಡಿಗೆಯ ಸಡಗರ. ಆ ರಾತ್ರಿಯ ಔತಣಕ್ಕೆ ನಿಂಗಯ್ಯನ ಅಣ್ಣ ಕುಳುವಾಡಿ ಕುಂದೂರಯ್ಯನನ್ನೂ ಕರೆದಿದ್ದರು. ಅಣ್ಣನ ಮುಂದೆ ಕುಡಿಯುವುದಕ್ಕೆ ನಿಂಗಯ್ಯ ಹೆದರುತ್ತಿದ್ದ. ಆ ಕಾರಣದಿಂದಲೇ ಅಣ್ಣ ತಮ್ಮ ಗುಡ್ಲಿಗೆ ಬರುವುದಕ್ಕೆ ಮುನ್ನವೇ ಸೋರೆಬುರುಡೆಯಲ್ಲಿ ತುಂಬಿಸಿ ರಾಚನ ಸೇಂದಿ ಅಂಗಡಿಯಿಂದ ತರಿಸಿದ್ದ ಹೆಂಡವನ್ನೆಲ್ಲ ಹೀರಿ ಮುಗಿಸಿದ್ದ.

ಕುಂದೂರಯ್ಯ ತಮ್ಮನ ಗುಡ್ಲು ತಡಿಕೆಬಾಗಿಲಿನಲ್ಲಿ ಬಗ್ಗೆ ಒಳಗೆ ಬರುವ ವೇಳೆಗಾಗಲೆ, ಗುಡ್ಲಿಗೊಳಗೆ ದೀವಿಗೆ ಹೊತ್ತಿಸಿ ಎಷ್ಟೋ ಸಮಯ ಕಳೆದಿತ್ತು. ಆಗಲೆ– ಅಷ್ಟು ಹೊತ್ತಿನ ತನಕ ಕಿಲಿಕಿಲಿ ನಗುತ್ತು ಆಡುತ್ತಿದ್ದ ಕೂಸಿಗೆ ಮೊಲೆಯೂಡಿ ಸಿವುನಿ, ಒಂದು ಪಕ್ಕದಲ್ಲಿ ಹಾಸಿದ್ದ ದುಪ್ಪಟಿ ಮೇಲೆ ಉರುಳಿಸಿ, ಮಲಗಿದ್ದಳು...

ಕುಂದೂರಯ್ಯ ಒಳಗಡೆ ಕಾಲಿಡುತ್ತಿದ್ದಂತೆಯೆ,

"ಅಸ್ಸಿಸ್ಸಿ–ಗಬ್ಬುನಾತ!... ಯಾವಾಗ ಬುಟ್ಟೀಯೊ ತಮ್ಮ ಈ ಚಾಳ್ಯ?... ಇದು ಪಾಟಾಗಿ ನನ್ನ ಮಗ ನಿಪಾತಾದ. ಸದ್ಯಕ್ಕೆ ನಿನ್ನ ಮಗ ಕಲೀನಿಲ್ಲವಲ್ಲ– ಅದೇ ನಂಗ ಚೋಜಿಗ!" – ಹೇಳುವಾಗ ಅವನ ದನಿಯಲ್ಲಿ ಕಡುವೇಸರ ಹಾಗೂ ನೋವು ತುಂಬಿದ್ದವು.

ಆ ಮಾತಿಗೆ ತನ್ನ ಅಯ್ಯ ಇಲಿ ಸುಂಡನಂಗೆ ಮುಲಕಾಡೋದು ನೋಡಿ, ಲಕ್ಕನಿಗೆ ನಗು ಬಂತು... ಅಯ್ಯನಿಗಿಂತಾನು ಭಾರಿ ಅಳು ದೊಡ್ಡಯ್ಯ, ಉದ್ದಕ್ಕೆ, ದಪ್ಪಗೆ, ತ್ಯಾಗದ ಮರದಂಗೆ ಹುಲುಮಲವಾಗಿ ಬೆಳುದಿದ್ದ. ಅವನ ತಲೆ, ಕೆಪಾಲ, ಗದ್ದ ಯೆಲ್ಲಾ ಕಡೇನೂವೆ ನರೆಕೂದಲು ಅಲ್ಲಲ್ಲೆ, ಅಲ್ಲಲ್ಲೆ ಸುರುಳಿ ಸುತ್ತುಗಂಡು ಅವನ ಅಗಲಾದ ಮೊಖವ ನ್ವಾಡಕ್ಕೆ ಯಾರಿಗಾರು ಎದುರಿಕೆ ಆಗೋವಂಗಿತ್ತು. ಆದರಾಗು ಅವನು ಚೂಪುಗಣ್ಣ ಬುಟ್ಟುಗಂಡು ತಿವಿಯೋನಂಗೆ ದ್ರುಸ್ಟಿಸ್ತ ಬತ್ತಿರಬೇಕಾರೆ, ಎದುರುಗಡಿಂದ ಒಂದು ಹೆಬ್ಬುಲೀನೆ ಬಂದಂಗೆ ಜನ ಬೆದುರೋರು!...

ಆದರೆ ದೊಡ್ಡಯ್ಯ ಈಗ ಕಯ್ಯಿ ಕಾಲು ತ್ವಳುದು ತಮ್ಮೆಲ್ಲಾರೊಟ್ಟಗೆ ಉಣ್ಣಕ್ಕೆ ಕುಂತಾಗ, ಅವನ್ನ ನ್ವಾಡ್ತಿದ್ದಂಗೆ ಲಕ್ಕಂಗೆ ಅಯ್ಯೊ ಅನ್ನಿಸಿ, ಹ್ವಟ್ಟೆ ವಳುಗೆ ತೊಳುಸಿ ಬಂದಂಗಾಯ್ತು.

ಸಾಧಾರಣಾಗಿ ಮರಿ ಕಡಿದರೆ, ನಾಕಾಳು ತಿನ್ನೊ ಮಾಂವುಸವ ಒಬ್ನೆ ಒಬ್ಬಾಲಕೆ ತಿಂದು ಮುಗುಸೋನು. ಈಗ ಪಾಪ ಅಯ್ಯ ತಿಂದದ್ರಲ್ಲಿ ಅರ್ಧಾನು ತಿನ್ನನಾರ್ದೆ, ಅವ್ವ ಏಟು ಬಗೇಲಿ ಜುಲುಮೆ ಮಾಡಿ ನೀಡುತ್ತೀನಿ ಅಂದರೂವೆ, ಬ್ಯಾಡ ಅಂತೆದ್ದು ಕಯ್ಯಿ ತ್ವಳುದು ವೊಂಟೋಯ್ತಿದ್ದ.

ಮುಂದ್ಕೆ ಮೂರು ನಾಕು ಜಿನ ಲಕ್ಕ ಯಾವ ಕೇಮೆ ಮಾಡ್ತಿದ್ದರೂವೆ ದೊಡ್ಡಯ್ನ ರೂಪೇ ತನ್ನೆದುರ್ಗೆ ಬಂದು ನಿಂತಂಗೆ ಆಗೋದು!... ಅವನ ಮಗ ಪುಟ್ಟಾರಿ ಇದ್ದಾಗ, ಅವನ್ನ ಇಡುದು ನಿಲ್ಲಸಾರು ಯಾರದ್ರು ನಮ್ಮೂರಿನಾಗೆ!– ಉತ್ತುಮರೂ ಕೂಡ ಅವ್ನ ಕೆಣುಕಕ್ಕೆ ಇಂದು ಮುಂದು ನ್ವಡ್ತಿದ್ರು. ಆದರೆ, ಅವನ ಎಡತಿ–ನಮ್ಮ ದೊಡ್ಡವ್ವ, ಅವಳ ಜತ್ಗೆ ಲಗ್ಣಾಗಿದ್ದ ಒಬ್ಬಳು ಎಣ್ಣಮಗಳೂವೆ ಪ್ಲೇಗಾಗಿ ತೀರಿಕಂಡದ್ದೂ ಅಲ್ಲದೆ, ಅವನ ಇರಿಮಗ ಕಿರಿಮಗ ಇಬ್ಬರೂವೆ ಮಲೆ ಮದೇಶ್ವರನ ಬೆಟ್ಟಕ್ಕೆ ಅರಕೆ ವಪ್ಪುಸಕ್ಕೆ ಊರಿನ ಇನ್ನೂ ಬ್ಯಾರೆ ಕುಳಗಳೊಂದ್ಗೆ ವೋದೋರು, ಅಲ್ಲಿ ವಾಂತಿಭೇದಿ ರೋಗ ಅಮರಿಕಂಡು, ಅವರೆಲ್ಲಾರ ಜ್ವತ್ಗೆ ಸುರೀಟಾಗಿ ಕೈಲಾಸ ಸೇರುದಾಗ, ದೊಡ್ಡಯ್ಯ ಅಲ್ಲಿಗಂಟ ತನ್ನೆದೆಯ ಮ್ಯಾಕ್ಕೆ

ಯೆತ್ಕಂಡೇ ನಡೀತಿದ್ದೋನು, ಯತೆ ಬಂದು ಜಗ್ಗುದ. ಆದರೆ, ಅವ್ನ ನಡುಕುಲ ಹೈದ ಪುಟ್ಟಾರಿ ಕಿಸ್ತಾನ ದೊಡ್ಡಿ ಸೂಸಿಯಮ್ಮ ಮಗಳು ಲೂಸಿಯ ಬಲೇಗೆ ಬಿದ್ದಾಗ, ದೊಡ್ಡಯ್ಯ ಪೂರ್ತಾ ಧರೆಗೆ ಕುಸುದೇವೋದ... ಅವನ ಎಡತಿ, ಮಗಳು, ಏಡು ಗಂಡು ಮಕ್ಕಳು ಸತ್ತೋದಮ್ಯಾಲೆ ಅವ್ನ ಗ್ಯಾನವೆಲ್ಲ ಇದ್ದದ್ದು ಪುಟ್ಟಾರಿ ಮ್ಯಾಲೇಯ!... ಈ ಮಗನೂ ಇಂಗೆ ಕಯ್ಯಿ ಬುಟ್ಟೋಯ್ತಾನೆ ಅಂತ ಅವ್ನು ಕನಸಿನಾಗೂ ನೆಚ್ಚಿರನಿಲ್ಲ!

ಮೊದಮೊದ್ಲು ಪುಟ್ಟಾದಿ ಒಳ್ಳಿ ಹೈದನೆ ಆಗಿದ್ದ. ನಮ್ಮ ದೊಡ್ಡಯ್ಯ, ನಮ್ಮಯ್ಯ, ನಮ್ಮ ಹೊಲಗೇರಿಯೊ ಮಾತು ಅತ್ಲಾಗಿರಿಲಿ, ನಮ್ಮ ದರುಮನಳ್ಳೀ ಪರ್ತಿ ಒಬ್ಬರೂವೆ ನಮ್ಮಣ್ಣನ್ನ ಬಾಲ ಮೆಚ್ಚಿಗಂಡಿದ್ರು. ಒಂದು ಹೊಲ ಉಳೋದರಲ್ಲಾಗ್ಲಿ, ಸವುದೆ ಒಡೆಯೊದರಲ್ಲಾಗ್ಲಿ; ಇನ್ನು ಬ್ಯಾರೆ ಯಾವ ಕೆಲುಸದಲ್ಲೇ ಆದರೂ ಸೈ. ನಮ್ಮ ಪುಟ್ಟಾರಿ ಜಪಾತಿ ಕೆಲ್ಸ ಮಾಡಾರು ಅಪುರ್ಪವೆ. ಈ ಮಾತ ನಮ್ಮಳ್ಳಿ ಒಂದರಾಗಲ್ದೆ ಸುತ್ತಮುತ್ನ ಹಳ್ಳಿಯೋರೂವೆ ವಪ್ಪುಗತ್ತಿದ್ರು. ಅಲ್ಲದೇಯ, ನಮ್ಮ ದೊಡ್ಡಯ್ಯ ಅಕ್ದ ಲಕ್ಸ್ಮಣ ಗೆರ್‍ಯ ಅವನು ಯಾವತ್ತೂ ದಾಟುದೋನೇ ಅಲ್ಲ!... ಆದ್ರೆ ಅದ್ಯಾವ ದೊಡ್ಡಾಪತ್ತು ಬಂತೊ ಅಣಗೆ, ಆ ಮಾರಿಗುಡಿ ಅಣ್ಣದೀರ ಸಾವಾಸಕ್ಕೆ ಬಿದ್ದು ಕುಡಿಯಾದ ಪಾಟ ಆದ. ಅಂಗೆ ಪಾಟಾದ್ದೆ ಪಾಟಾದ್ದು ಬ್ಯಾರೆ ಬ್ಯಾರೆ ಈಚಲು ಪ್ಯಟೆಗೆ ವೋಗಿ ಬರಕ್ಕೂ ಮುಟ್ಕಂಡ. ದರುಮನಳ್ಳಿ ಈಚಲು ಪ್ಯಾಟೆಗೆ ಮಾತ್ರ ಕಾಲಿಕ್ತಿರನಿಲ್ಲ. ಯಾಕಪ್ಪಾಂದ್ರೆ, ಅಲ್ಲಿಗೆ ನಮ್ಮಯ್ಯ ವೋಯ್ತಿದ್ನಲ್ಲ– ಅದ್ಕೆ. ಆ ಕಾರಣಕ್ಕೆ ಕಿರಿಸ್ತಾನ ದೊಡ್ಡಿ ಈಚಲು ವನಕೇ ಎಚ್ಚಾಗಿ ಬೇಟಿ ಕ್ವಡಕ್ಕೆ ಅತ್ತಿದ್ದ... ಅಣ್ಣ ಇಂಗೆ ವೋಯ್ತಾ ಇರೋನೂವೆ, ಗಂಡನ ಕಳಕಂಡು ಕೆಟ್ಟ ಚಾಳಿಗೆ ಬಿದ್ದಿದ್ದ ಚಿಲ್ಲರೆ ಅಂಗಡಿ ಸೂಸಾನಮ್ಮನೂ ಗಾಳಿ ಬೀಸ್ದಂಗೆ ಅಲ್ಲಿಗೆ ಬತ್ತಾ ಇದ್ದದ್ದುಂಟು. ಅಂಗೆ ಬಂದಾಗ ನಮ್ಮ ಪುಟ್ಟಾರಿಯ ಪಕ್ಕದಾಗೆ ಬಂದು ಕುಂತು ಅದೂ ಇದೂ ಸಂದಿ ಗುಂದಿ ಮಾತ ತಕ್ಕಂಡು ಬೆಂಟಿಕಂಡು ಬತ್ತಿದ್ಲಂತೆ. ಜ್ವತ್ಗೆ ತನ್ನ ಅಟ್ಟೀಲಿ ತಯಾರು ಮಾಡ್ದ ವಡೆ ಚಕ್ಕಲಿ ತಂದು ನಂಜಕ್ಕೆ ಕ್ವಡ್ತಾ ಇದ್ಲಂತೆ. ಅವನೇಟು ಪರೀಲಿ ಬ್ಯಾಡಾಂತ ತಳ್ಳಾಕುದ್ರೂವೆ, ಅವಳೇ ಒಂದೊಂದು ದಪ ದುಡ್ಡು ಕ್ವಟ್ಟು ಮೊಗೆಮೊಗೆ ಎಂಡ ಕುಡುಸ್ತದ್ಲಂತೆ...

ಒಂದು ಸ್ವಾಮಾರ ಇಂಗೇ ಕುಡಿತ ಕುಡೀತ ಪುಟ್ಟಾರಿಗೆ ನಿಶಾ ಏರಿ ಉಚ್ಚುಚ್ಚಾಗಿ ಹೆಕಳೆವೊಡೀತಾ ಎದ್ದೋನು ನಮ್ಮೂರ ದಿಕ್ಕೆ ವೊಂಟನಂತೆ. ಆದ್ರೆ ಅವತ್ತು ಭರ್ತಿ ಕುಡುದಿದ್ರಿಂದ ಅವನ ಗ್ಯಾನದ ಜ್ವತೆಗೆ ಕಯ್ಯಿ ಕಾಲೂ ಸ್ವಾದೀನ್ ತೆಪ್ಪಿ ದಾರೀಲಿ ಬತ್ತಾ ಒಂದು ನೀರು ಅರಿಯೋ ಅಳ್ಳಕ್ಕೆ ಇನ್ನೇನು ಕಳಚುಕಳಾದ್ರಲ್ಲಿ

ಇದ್ನಂತೆ. ವೋಟಲ್ಲಿ, ವಂದಿಗೇ ಬತ್ತಿದ್ದ ಚಿಲ್ಲರೆ ಅಂಗಡಿ ಸೂಸಾನಮ್ಮ ಅಂಗೂ ಅವರ ಗೆಣೆಕಾರ ಪಿಳಿಪ್ಪು ಇಬ್ಬರೂವೆ ಅವ್ನ ಬಿದ್ದೋಗದಂಗೆ ತಬ್ಬಿ ಇಡಿದು ಎಂಗೆಂಗೂ ಮೆತ್ತಮೆತ್ತಗೆ ನಡುಸಿಗುತ್ತ ಉಪಾಯ್ವಾಗಿ ಕಿರಿಸ್ತಾನ ದೊಡ್ಡಿಗೆ ಅವ್ನ ತಟಾಯಿಸಿ, ಸುಸಾನಮ್ನ ಅಂಗಡಿ ಮನ್ಗೆ ಕೂಡಿದ್ರಂತೆ!

ಆ ಸೂಸನಮ್ನ ಅಂಗಡಿ ಮನೇಲಿ ಪೂರಾ ನಾತ್ರೆ ಕ್ವಂಟಾಗಿ ಬಿದ್ದಿದ್ದ ನಮ್ಮಣ್ಣ ಪುಟ್ಟಾರಿಗೆ ಬೆಳುಕು ಅರೀತ್ಲೆ ಎಚ್ಚರಾದಾಗ ತನ್ನೆದುರ್ಗೆ ಕೆಪ್ಪಟೆ ಕೆಂಪು ಲಂಗ ಉಟ್ಟು, ತೆಳ್ಗೆ ಬೆಳ್ಗೆ ಸುಳುದಾಡ್ತಿದ್ದ ಸುಸಾನಮ್ಮ ಅರೇದೆಣ್ಣು ಲೂಸಿ ಅನ್ನಾಳ ಕಂಡ ಬೆರುಗಾದ್ನಂತೆ!... ಅವನೆದ್ದದ್ದ ಗಮನ್ಸಿ ತಟಕ್ನೆ ಓಡೋಗಿ ಟೀ ಕಾಯ್ಸಿ ಗಾಜಿನ ಗಳಾಸ್ನಲ್ಲಿ ತಂದು ಕ್ವಟ್ಲಂತೆ ಲೂಸಿ!... "ನೀ ಯಾರು?" ಪುಟ್ಟಾರಣ್ಣ ಉಸುರ್ತಿದ್ದಂಗೇಯ, ಇಂದುಗಡೀಂದ ಬಂದ ಸೂಸಾನಮ್ಮ, "ಯಾಕಪ್ಪ, ಇವುಳು– ನನ್ನ ಮಗಳು, ಲೂಸಿ" ಅಂದ್ಲಂತೆ. ಸರಿ, ಅಂದು–ಮೊಖ ತ್ವಳಕಂಡು, ಲೂಸಿ ಕ್ವಟ್ಟ ಟೀ ಹೀರಿ, ಪುಟ್ಟಾರಿ–

"ಅಪ್ಪೊಯ್, ನಾತ್ರೆ ಪೂರಾ ನಿಮ್ಮ ಗುಡ್ಲಲ್ಲೆ ಮನಗಿಬುಟ್ಟಿದ್ನ್ಯಾ? ಸರಿಕವ್ವ ನಾತ್ರೆ ಯೆಲ್ಲೋಗಿದ್ದೆ ಅಂದ್ರೆ, ನಮ್ಮಯ್ಯಂಗೆ ಯಾನಂತ ಜಬಾಬು ಕ್ವಡ್ಲಿ?"– ಪೇಚಾಡದ್ನಂತೆ – ಅದುಕೆ,

"ಅದ್ಯಾಕಪ್ಪ ವೊಸ್ಸು ಪೇಚಾಡೀ? –ಯೇನಾರ ಒಂದು ಸುಳ್ಳು ಜೋಡುಸುದ್ರಾಯ್ತು" ಅನ್ನಾದ ಸೂಸಾನಮ್ಮ?

ನಮ್ಮ ಪುಟಾರಣ್ಣ ಫಟ್ ಅಂತ ಯೋಳಿದ್ನಂತೆ:

"ಸುಳ್ಳು ತಪವಟ ನನ್ನ ಜಲ್ಮದಾಗೆ ಬರನಿಲ್ಲ. ನಡದುದ್ದು ನಡದಂಗೆ ಯೋಳ್ತೀನಿ, ಅಯ್ಯನ ಕುಟ್ಟೆ... ಮಾಡಿದ ತೆಪ್ಪಗೆ ಅಯ್ಯ ಬಯ್ದಿದ್ರೆ ಬಯ್ಸಿಸ್ಕತ್ತೀನಿ."

ಅಂಗೇನೆ ಆಯ್ತು. ಅಣ್ಣ ಯೋಳಿದ್ದ ಕ್ಯಾಳಿ ದೊಡ್ಡಯ್ಯ ರಾಂಗ್ ರಾಂಗ್ ಆದ.

"ನೀ ಕುಡೀತಾನೇಂತ ನಂಗೂ ಬಂದಿತ್ತು ಕನ್ಲ. ನಾ ನಂಬ್ನಿಲ್ಲ. ಈಗ ನೀನೇಯ ರುಜ್ವಾತು ಮಾಡಿ ಯೋಳ್ತಿರ್ವಾಗ ಇನ್ನೇನ ಉಳಿದಿರಾದು?... ನೀನು ಚಿಕ್ಕೋನು ಪುಟ್ಟೋನು ಆಗಿದ್ರೆ, ದಡಿ ತಕ್ಕಂಡು ಚಮಡ ಸುಲೀತಿದ್ದೆ. ಈಗ ದಾನ ಧಡಿಯ ಆಗಿ ಬೆಳುದು ನಿಂತಿದ್ದೀ. ಈಗ ನಿಂಗೇನು ಯೋಳೊ ಅಂಗಿದ್ದದ್ದು?– ನನ್ನತ್ರ ಒಂದೇ ಮಾತು: ಪುನಾ ಈ ಇಂಗೇನಾರ ಅನಾವುತ ಮಾಡ್ಕಂಡು ಆ ಕಿರಿಸ್ತಾನದ ಲೌಡಿ ತಾವಿಕ ಯೇನಾರ ಹ್ವಾದೆ, ಆಮ್ಯಾಕೆ ನನ್ನ ಗುಡ್ಲಿಗೆ ಮಾತ್ರ ನೀ ಕಾಲ ಆಕಬಾರ್ದು. ಈ ಮಾತು ಗಟ್ಟಿ–ತಿಳುಕೊ..."

ಅಣ್ಣ ತಲೆ ತಗ್ಗುಸಿದ. "ಆಗ್ಲಿ" ಅಂದ ಸೊರ ಅವುನ ಗಂಟುಲಲ್ಲೇ ಸಿಕ್ಕತ್ತಂತೆ!... ಅಯ್ಯಂಗೆ ಆ ಸೊರ ಕೇಳುಸೊ ಇಲ್ವೊ–ಅಂತ, ನಡುದ ಪುರಾಣಾನೆಲ್ಲ ನನ್ನ ಕುಟ್ಟೆ ಬಿಚ್ಚಿದ...

ಆದ್ರೆ ತನ್ನಯ್ಯನ ಕುಟ್ಟೆ ಅಡ್ಡ ಮಾತ ಉಳುಸಿಕಳಕ್ಕೆ ಅವುನ ಕಯ್ನಲ್ಲಿ ಆಗನಿಲ್ಲ. ಒಂದೇಡು ವಾರ ಸುಮ್ಕಿದ್ದೋನು, ಪುನಾ ಕಿರಿಸ್ತಾನ ದೊಡ್ಡಿ ಈಚಲು ಪ್ಯಾಟೆಗೆ ನಮ್ಮಣ್ಣನ ಸವಾರಿ ಚಿತ್ತೈಸಕ್ಕೆ ಸುರು ಮಾಡ್ಕತ್ತು!... ಪುನಾ ಇಂದಲಂಗೇಯ ಮಾಯಕಾತಿ ಸೂಸಾನಮ್ಮ ನಮ್ಮಣ್ಣಂಗೆ ಭರ್ತಿ ಕುಡುಸಿ ಮೆತ್ತ ಮೆತ್ತಗೆ ತನ್ನ ಅಂಗಡಿಮನೆಗೆ ಕರಕಂಡೋಗಿ, ಯತಾ ಪರ್ಕಾರ ಹಾಸಿಗೆ ಹಾಸಿ ಮನಗಿಸಿದ್ಲು...

ಈ ಸಲ ಮಾತ್ರ ಅಣ್ಣ ಬೆಳುಗ್ಗೆ ಕಣ್ಣುಬುಟ್ಟಾಗ, ಸೂಸಾನಮ್ನ ಮಗಳು ಲೂಸಿ ಆ ಕ್ವಾಣೇಲಿ ಸುಳಿದಾಡ್ತ ಇರನಿಲ್ಲ. ನೇರ್ಪಾಗಿ ಅವುನ ಮೊಗ್ಗಲಲ್ಲೇಯ ಕಾಲು ನೀಡಿ ಮನಗಿದ್ಲು!...

ಸರಿ. ನಡೀಬಾರದ್ದು ನಡದೋಯ್ತು. ಮಾತ್ರ ಆ ಸಂಗತಿ ಆದದ್ದೆ ಆದದ್ದು ನಮ್ಮಣ್ಣ ಮುಂದೆ ಒಂದು ತಿಂಗಳು ಆ ಈಚಲು ವನಕಾಗ್ಲಿ ಸೂಸಾನಮ್ನ ಅಂಗಡಿ ಮನೆಗಾಗ್ಲಿ ಕಾಲಿಡನಿಲ್ಲ. ಆಮ್ಯಾಕೊಂದು ಜಿನ ಹುಣಸೂರು ಬೇಸ್ತವಾರ ಸಂತೇಲಿ ನಮ್ಮ ಪುಟ್ಟಾರಿಯೂ ನಾನೂ ವೋಯ್ತಾ ಕರೋನೂವೆ, ಅದೆಲ್ಲಿ ಕಾಯ್ತಾ ಇದ್ದಳೊ ಸೂಸಾನಮ್ಮ?– ಎಣ ಕಂಡೇಟಿಗ ರಣದ್ದು ಮುತ್ತೋತರ, ಭಗ್ಗನೆ ಬಂದು,

"ನನ್ನೆಣ್ಣಿಗೆ ತಲೆ ಕೆಡುಸಿಬುಟ್ಟು ಹ್ವಂಟೋದೋನು, ನಮ್ಮ ದೊಡ್ಡಿದಿಕ್ಕೆ, ಪುನಾ ತಿರುಗೂ ನ್ವಾಡಬ್ಯಾಡದ?... ಪಾಪ, ಆ ನನ್ನ ಕಂದ ನಿನ್ನ ಚಿಂತೆಲ್ಲೆ ಚೊರ ಬಂದು ಹಾಸ್ಗೆ ಇಡುದು ಮನಗದೆ!... ಈಟು ಜಿನ ಆಯ್ತು. ಒಂದು ಸರ್ತಿ ಆದರೂ ಬಂದು ಮೊಖ ತೋರುಸಿ ವೋಗಿದ್ರೆ, ಅದ್ಕೆ ಏಟೊ ನೆಮ್ಮದಿ ಸಿಕ್ಕುತ್ತಿತ್ತು... ಊ, ಈಗಲೂ ಯೇನ ಸೂರೋದ್ದು?– ಕೆಟ್ಟೋದು ಅಡುಗೇಯ ಲಿಪೇರಿ ಮಾಡುದ್ರಾಯ್ತು. ಈಗ್ಲೇಯ ನನ್ನ ಜ್ವತ್ಗೆ ವೊಂಟು ಬಾ. ಅರೆಕ್ಷಣ ಅವುಗಳಿಗ ನಿನ್ನ ಮೊಖ ತೋರುಸಿ, ಏಡು ಸಮಾದಾನ್ದ ಮಾತಾಡಿ ಬಂದುಬುಡು. ವೊಸ್ಟು ಮಾಡುದ್ರೆ, ಯೆಲ್ಲಾನು ಮರತು ಬುಡ್ತದೆ, ನನ್ನ ಕಂದ" ಅಂದ್ಲು.

ಅಣ್ಣ ಪೆಚ್ಚಾದ.

"ಇನ್ನೊಂದು ಜಿನ ಬರ್ತೀನಿ" ಅಂತ ಬೇತುಕಂಡ .

ಆಪ್ಪಯ್ಯ ಅಂದರೂವೆ ಅವಳು ವಪ್ಪುನೇ ಇಲ್ಲ.

ಇನ್ನೇನು ಮಾಡಕ್ಕಾದಾತು?– ಅಣ್ಣ ಅವಳ ಜ್ವತ್ಗೆ ವೋಗನೆಬೇಕಾಯ್ತು.

ಸಂತೇಲಿ ಖರೀದಿ ಮಾಡಿದ್ದ ಸಾಮಾನ ನನ್ನ ವಸಕ್ಕೊಪ್ಪುಸಿ ವೋದ...

ಅವನು ಅಂಗಡಿ ಮನೆ ವಳುಗೆ ವೋದ್ದೇ ಸಮ, ಮುಂದುಕೆ ನಡದ್ದ ಯೆಲ್ಲಾವು ಅವಂಗೆ ಒಂದು ಕನಸ ಕಂಡಂಗೇ ಆಯ್ತಂತೆ!... ವಳುಗೆ ಕುಂತುಗಂಡ ಕೂಡ್ಲೆ.

"ಲೂಸಿ ಯೆಲ್ಲ?" ಕ್ಯಾಳಿದ್ನಂತೆ.

"ವಳುಗವಳೆ, ಬತ್ತಾಳೆ, ನಾನಿಲ್ಲೆ ಬಂದೆ" ಅಂತ ಮನೆ ಮೊರಗೋದೋಳು, ಅವಳು ವಾಪ್ಸು ಬಂದಾಗ ಅವಳ ವಂದುಗುಟ್ಟೆ ಆ ದೊಡ್ಡ ಕಿರಿಸ್ತಾನದ ಗುರು ರೋಸಯ್ಯ ಪಾದ್ರೀನೂ ಬಂದರಂತೆ. ಇವರ್ಯಾಕಪ್ಪ ಬಂದರೂಂತ ಅಣ್ಣಂಗೆ ಚೋಜಿಗ!... ಬಂದೋರೆ, ಸಿಡ್ಲು ಬಡಿದಂಗೆ ಯೋಳಿದರಂತೆ!

"ನ್ವಾಡಪ್ಪ, ಪುಟ್ಟಾರಿ. ನೀನು ಈ ಸೂಸಾನಮ್ನ ಮಗಳು ಲೂಸ್ಯ ಬೋಸರು ಮಾಡಿದ್ದೀ. ಅವುಳಿಗೀಗ ನಾಕು ತಿಂಗಳು..." ಈ ಮಾತುಗಳು ಕಿವಿಗಿಳಿತಿದ್ದಂಗೆ, ಅಣ್ಣ ಭೂಮಿಗೆಕುಸುದೋಗಿ–

"ನಾಕು ತಿಂಗಳ ಇಂದ್ಕೆ ಅವಳ್ನಾಗಿ ಈ ಸೂಸಾನಮ್ಮನ್ನಾಗಿ, ನಾ ಕಂಡೆ, ಇರನಿಲ್ಲ..." ಅಂದುದಕೆ, ಆ ಗುರುವು–

"ನೀ ಏಟು ಜಿನದಿಂದ ಅವಳ ಸಮ್ಮಂದ ಇಟ್ಕಂಡಿದ್ದೀ ಅನ್ನಾದ ನಾ ಬಲ್ನಯಾ?... ಈಗ ಲೂಸಿ ನಿನ್ನಿಂದ ಬೊಸರಾಗಿರಾದಂತೂ ಗಟ್ಟಿ, ಆ ಕಾರಣಕೇ ಅವುಳ್ಳ ನೀನು ಲಣ್ಣಾಗಬೇಕು" ಅಂದೊರು, ಕಿಟಿಕಿ ಆಚ್ಗೆ ನ್ವಾಡ್ತ, ಸಿಕರೋಟು ಕತ್ತುಸುದ್ರಂತೆ.

"ನಾಕು ತಿಂಗಳ ಆಗಿದ್ರೆ ಕಂಡ್ತ ಅವುಳು ಬ್ಯಾರೆ ಯಾರ್ಗೊ ಬೋಸರಾಗಿರಬೇಕು. ನಂಗೂ ಅವುಳ್ಗೂ ಸಮ್ಮಂದ ನ್ಯಟ್ಟಗೆ ಏಡು ತಿಂಗಳ್ನೂವೆ ಮುಟ್ಟಿಲ್ಲ..."

ಅಣ್ಣ ವರಲುದ್ದು ಯಾವ ಸಪಲಕೂ ಬರನಿಲ್ಲ. ರೋಸಯ್ಯ ಗುರುಗೋಳು ಆ ದೊಡ್ಯ ಇನ್ನೂ ಮೂರು ನಾಕು ಜನ ಕರುಸಿ ಪಂಚಾತೀನೆ ನಡಸಿದ್ರಂತೆ. ಅವರೆಲ್ಲಾರೂವೆ ಅಣ್ಣನ ಕ್ಯಾಳಿದ್ದು ಒಂದೇ ಪ್ರಸ್ನೆ:

"ನಿಂಗೂ ಲೂಸಿಗೂವೆ ಸಮ್ಮುದ ಉಂಟ, ಇಲ್ವ–ವೊಸ್ಟು ಯೋಳು, ಸಾಕು."– ಅದುಕೆ ನಮ್ಮ ಪುಟ್ಟಾರಿ,

"ಹಯ್ಯೊ, ನಿಮ್ಮುಂದೆ ಅದ್ಯಂಗೆ ಸುಳ್ಳು ನುಡೀಲಿ?– ಉಂಟು... ಮಾತ್ರ ನಾಕು ತಿಂಗ ಆಗಿದ್ರೆ, ಅದು ನನ್ನ ಸುಪರ್ದಿಗೆ ಬರಾ ಇಸ್ಯ ಅಲ್ಲ"

ಅಂದನಂತೆ. ಆ ಪಂಚಾತಿದಾರ್ರು.

"ನಾಕು ತಿಂಗಳೊ ಮೂರೆ ತಿಂಗಳೋ– ಅದೇಟಾದ್ರೂ ಆಗ್ಲಿ ಲೂಸಿ, ಪೋಲಿ ಪಂಕಾಳಿ ಎಣ್ಣಲ್ಲ. ಈಚಲು ಪ್ಯಾಟೇಲಿ ಕುಡುದು ಬಂದು, ನೀನು ಅವುಳ ಸಾವಾಸ ಬೆಳುಸಿರೊ ಇಸ್ಯ ನಿನ್ನ ಮಾತ್ನಿಂದಲೆ ರುಜ್ವಾತು ಆಯ್ತು ಅದೆ. ಆದ ನೀನೆ ಕುದ್ದಾಗಿ ವಪ್ಪುಕತ್ತಿದ್ದೀ... ಈಗ ತಪ್ಪಿಸಿಕಳಾದೆ ನೀನು ಯಾವ ದೊಂಬರ ಲಾಗ ಅಕಿದ್ರೂವೆ, ಅದು ನಮ್ಮ ತಾವ ಬೇಯಕ್ಕಿಲ್ಲ"– ಕಡಾಕಂಡ್ತಾಗಿ ಅಂದುಬುಟ್ರಂತೆ. ಪುಟ್ಟಾರಿಗೆ ಮಂಕು ಕವುದಂಗಾಗಿ,

"ನಮ್ಮಯ್ನಾ ಒಂದು ಮಾತ ಕ್ಯಾಳಬೇಕು" ಅಂತ ತೊದಲಿದ್ನಂತೆ. ಆದೆ–

"ನಡಿ, ಅವುನ ತಾವಿಕೇ ವೋಗಾನ. ನಿಮ್ಮಯ್ಯಂಗೇ ನ್ಯಾಯ ಕ್ವಡಾನ"– ರೋಸಯ್ಯ ಗುರು ಅನ್ತಾ ಇರೋನೂವೆ ಅಣ್ಣಂಗೆ–

"ಪುನಾ ನೀ ಇಂಗೇನಾರ ಅನಾವುತ ಮಾಡ್ಕಂಡು ಆ ಕಿರಿಸ್ತಾನ ರಂಡೆ ತಾವಿಕೆ ಯಾನಾರ ವೋದೆ, ಆಮ್ಯಾಕೆ ನನ್ನ ಗುಡ್ಲಿಗೆ ಮಾತ್ರ ನೀ ಕಾಲು ಆಕಾಬಾರದು"– ಅಂದಿದ್ದ ಅವ್ನ ಅಯ್ಯನ ಮಾತು ಗೆಪ್ತಿಯಾಗಿ ಕಯ್ಯಿಕಾಲ್ನಲ್ಲಿ ಮದುರು ಅತ್ತಕತಂತೆ!... ಯಾನು ಮಾಡಕ್ಕು ತಿಳಿದೇಯ, ಮಾತು ಮುಗುದೋಗಿ ಸುಮ್ಕೆ ಕುಂತುಬುಟ್ನಂತೆ!

ರೋಸಯ್ಯ ಗುರುಗೋಳು, ಕಿರಿಸ್ತಾನ ದೊಡ್ಡ ಆ ಮೂರು ನಾಕು ಮುಕ್ಕಸ್ತರ ಕಡೀಕೆ ತಿರುಗಿ,

"ನ್ವಾಡಿದರೇನಪ್ಪ ಇವ್ನ ಆಟವೆ?– ಇವಂಗೆ ಇವ್ನ ಅಯ್ಯನತ್ರ ವೋಗಕ್ಕೂ ಭಯ! ಅಂಗಿದ್ರೆ ನಾಯೋಳೋದಿಷ್ಟು. ಫಲಾತನೇ ವೋಗಿ ಯೋಳಿದ್ರೂವೆ ಇವುನಯ್ಯ ಈ ಲಗ್ಣಕ್ಕೆ ವಪ್ಪಕ್ಕಿಲ್ಲ ಅನ್ನಾದು, ಯಾರಿಗಾದ್ರೂ ತಿಳೀತದೆ. ಈಗ ನಾವು ಇಂಗೆ ಮಾಡಾವ. ನಾಳೀಕೆ ಇವರಿಬ್ಬರ್ಗೂ ಲಗ್ಣ ಮಾಡಿಸಿಬುಡಾವ. ಆಮ್ಯಾಕೆ ಜಿನ ಕಳುದಂಗೆ, ಇವನ ಅಯ್ಯನನೂವೆ ನಡದು ಹ್ವಾದ್ದಕೆ ವೊಂದಿಕಂಡೆ ವೋಂದಿಕತ್ತಾನೆ!... ಇದ್ಕೆ ನಮ್ಮ ದೊಡ್ಡಿ ಯಜಮಾನರಾದ ನೀವು ಯಾನ ಯೋಳ್ತೀರಿ?" – ಪ್ರಸ್ನೆ ಆಕಿದರಂತೆ.

ಆ ಮಾತ್ಗೆ ಅಲ್ಲಿದ್ದ ಮೂರು ನಾಕು ಕುಳ ಒಪ್ಪಿ ತಲೆ ವಗೆದರಂತೆ!...

ಸರಿ. ಮಾರನೆ ಜಿನವೆ ನಮ್ಮ ಪುಟ್ಟಾರಿಗೆ ಪೀಟರು ಅಂತ ಹ್ವಸದಾಗಿ ಎಸರಿಟ್ಟು ಲಗ್ಣ ಮಾಡೇಬುಟ್ರಂತೆ!...

ದೊಡ್ಡಯಂಗೆ ಈ ಸುದ್ದಿ ಗ್ವತ್ತಾದಾಗ, ಮಂಕಾಗಿ, ಕಲ್ಲಿನ ಪ್ರತುಮೆ

ತರ ಕುಂತುಬುಟ್ಟ. ಏಟೋ ವೊತ್ತಾದಮ್ಯಾಲೆ ನಮ್ಮಯ್ಯನ ಕುಟ್ಟಿ–

"ನ್ವಾಡಿದೇನ್ಲ ನಿಂಗ, ನನ್ನ ಹೈದ ಮಾಡ್ದ ಆಗರಣಾವ?" ಅಂದು, ವಸಿ ವೊತ್ತು ಕಣ್ಣು ಮುಚ್ಚಂಡಿದ್ದು ಆಮ್ಯಾಕೆ ನಿದಾನ್ವಾಗಿ ಕಣ್ಣ ತೆರೆದು" ಇನ್ನು ನಂಗೂ ಆವಂಗೂ ಬುಟ್ಹೋಯ್ತು... ಈಗೇನ ಸೂರೋದ್ದು– ಅವನು ನಂಗೇ ಉಟ್ಟನೇ ಇಲ್ಲ ಅಂತಾವ ಎದೆಮ್ಯಾಲೆ ಕಲ್ಲು ಆಕ್ಕಂಡು ತೆಪ್ಪಗಿದ್ದು ಬುಡ್ತೀನಿ" ಅಂದ...ಸ

ಆಮ್ಯಾಕೆ ಯಾವಾಗಲಾರುವೆ, ಗಾಳಿ ಬೀಸಿದಂಗೆ ನಮ್ಮ ಪುಟ್ಟಾರಿ ಸಂತೇಲಿ ನಂಗೆ ಸಿಕ್ಕೋನು. ವಸಿ ಜಿನ, ಆ ಎಣ್ಣಿನ ಸಂಗದಲ್ಲಿ ಅವ್ನು ಕುಸಾಮತ್ನಲ್ಲೆ ಇರೂವಂಗೆ ಕಂಡ್ತು. ಆದ್ರೆ ಇನ್ನೊಂದು ತಿಂಗಳೊಪ್ಪತ್ನಲ್ಲಿ ಆ ಕುಸಾಮತ್ತೆ ಮಂಗರ ಮಾಯ ಆಯ್ತು... ಒಂದು ಬೆಸ್ತವಾರ ಹುಣಸೂರು ಸಂತಿಂದ ಯಾವ್ದೊ ಸಾಮಾನ ತರೇಳಿದ್ಲಂತೆ ಲೂಸಿ. ಅದು ಮರತೂಗಿ ಪುನಾ ಅಣ್ಣ ಅದೆನ ನೀ ಯೋಳಿದ್ದದ್ದು ಅಂತ ಎಡತಿ ಕ್ಯಾಳಿಕಂಬರಕ್ಕೆ ಕಿರಿಸ್ತಾನ ದೊಡ್ಡಿಗೆ ಇಮ್ಮರಳೋಗಿದ್ದ. ಅವ್ನು ಇಂಗೋಗಿ ಮನೆ ಕದವ ತಟ್ಟಿದಗ, ವಳುಗೆ ಯಾರೊ ಗುಬ್ಬಲು ಪರದಡುತ ಇದ್ದುದು ಕೇಳುಸ್ತಂತೆ!... ಸೂಸಾನಮ್ಮ ಅಂಗಡಿ ಸಾಮಾನು ತರಕ್ಕೆ ವೊತ್ತಿಗೆ ಮುಂಚೇಯ ವೊಂಟೋಗಿದ್ಲಲ್ಲ, ಇನ್ನು ವಳುಗಿರಾರು ಯಾರು?– ಸಂದೇಯ ಆಯ್ತಂತೆ. ಅಣ್ಣ ಜೋರುಜೋರಾಗಿ ಕದ ತಟ್ಟುತಿದ್ದರೂವೆ, ಭಗ್ಗನೆ ಯಾರೂ ಬಂದು ತಗೀನಿಲ್ವಂತೆ. ಸುಮಾರು ಸಮಯ ಕಳುದ ಆಯಿತ್ಲೂ, ಲೂಸಿ ಮೆಕ್ಕನಂಗೆ ಬಂದು ಕದ ತೆಗದ್ಲಂತೆ...

"ವಳುಗೆ ಯಾರೊ ಇದ್ದಂಗಿಲ್ವ?"– ಪುಟ್ಟಾರಿ ಕ್ಯಾಳುದ್ನಂತೆ.

"ಯಲ್ಲೆ? – ನಾನು ಅಡುಗೆ ಕ್ವಾಣೇಲಿ ಪಾತ್ರೆ ಜೋಡುಸ್ತಿದ್ದೆ, ಪೀಟರು... ನೀವು ಸಂತಿಂದ ಈಟು ಭಗ್ಗನ ಆದ್ಯಾಕ ಇಂದುಕೆ ಬಂದದು?" –ಎಡತಿ ಯೋಳ್ತಿದ್ದರೂನುವೆ, ಯಾಕೊ ಅನುಮನಸಾಗಿ ಮನೆ ವಳುಗೆಲ್ಲ ಸುತ್ತಾಡಿ, ಕಡೀಕೆ ಯಾರೂ ಕಾಣದೇಯ,

"ನೀನು ಸಂತ್ಯಂದ ಯೇನೇನೊ ತರಬೇಕು ಅಂತ ಅಂದ್ಯಲ್ಲ?... ನಂಗೆ ಸೀನೆಯಿತಗಾರ್ರು ಸಿಕ್ಕಿ ಮರೆತೋಗದೆ... ನೀ ಯೋಳ್ದ ಸುಮಾರು ಸಾಮಾನು ಗೆಪ್ತಿ ಆಯ್ತು. ಪೌಡರು, ಲಂಗದ ಬಟ್ಟೆ, ಯೇರ್‌ಪಿನ್ನು– ಈಟು ಸಾಮಾನು ಗೆಪ್ತಿ ಅದೆ. ಇನ್ಯಾನೊ ಒಂದ ನೀ ಯೋಳದು ಮರತೋಗಿ ಕ್ಯಾಳಿ ವೋಗೋವ ಅಂತ ಬಂದೆ. ನಡಕಂಬದ್ರೆ ಪುನಾ ವೋಗಿ ಬರಾದು ವೊತ್ತಾಯ್ತದೆ ಅಂತ ಬಾಡ್ಗೆ ಸೈಕೋಲು ತಕ್ಕಬಂದಿವ್ನಿ... ಅದ್ಯಾನ ಇನ್ನೊಂದು ಸಾಮಾನು,

ಬಿದ್ರನೆ ಯೋಳು..." ಅಂತಿದ್ದಂಗೇಯ, ರಾಗಿತೊಂಬೆ ವಳುಗ್ನಿಂದ ಯಾರೊ ಜೋರ್ನಿಂದ ಸೀನು ಕಡಸುದ್ದಲು ಕೇಳುಸ್ತು. ಬೆಚ್ಚೋಗಿ ಖಾಲಿ ತೊಂಬೆ ವಳೀಕೆ, ಬಗ್ಗೆ ನ್ವಾಡುದ್ರೆ– ವಳುಗಡೆ ರೋಸಯ್ಯ ಗುರುಗಳು ಕುಂತವ್ರೆ!...

ಅಣ್ಣಂಗೆ ಹೇಸೋಯ್ತು. ಎಡತಿಯ ತರಾಟ್ಗೆ ತಕ್ಕಂಡು–

"ಈಗ ಬಯಲಾಯ್ತು ನಿನ್ನ ಬೊಸರು ಮಾಡಿದೋರು ಯಾರು ಅಂತಾವ!– ಕಳ್ಳ ಭೋಷಡಿ, ನೀನೂ ನಿಮ್ಮವ್ವನೂ ಸೇರ್ಕಂಡು ನಂಗೆ ಮ್ವಾಸ ಮಾಡಿದ್ರಿ. ಈ ರೋಸಯ್ಯ ಗುರುಗಳು, ಯೆಲ್ಲಾರ್ಗೂ ಪುರಾಣ ಯೋಳೋರು, ಇಂತಾ ಲುಚ್ಚಾ ಕೆಲ್ಸ ಮಾಡ್ತಾರೆ ಅಂತ ನಾ ಎಣುಸೇ ಇರನಿಲ್ಲ ಥೂ, ಥೂ... " ಅಂತಿರೋನೂವೆ, ರೋಸಯ್ಯ ತೊಂಬೆ ವಳುಗ್ನಿಂದ ಎದ್ದು ಬಂದು,

"ನನ್ನ ತೆಪ್ಪ ಕ್ಸೆಮಿಸಪ್ಪ, ನಿನ್ನ ದಮ್ಮಯ್ಯ ಕಣೊ, ಪೀಟರು–ನನ್ನ ಮಾನ ಕಳೀಬ್ಯಾಡ." ಬೇಳುಗರೀತ ಕಾಲು ಕಟ್ಕಂಡರಂತೆ!

ಅಣ್ಣ ಉಕ್ತಾ ಇದ್ದ ಕ್ವಾಪದ ನುಂಕೊಂಡು,

"ಆಳಾಗೋಗಿ, ನಿಮ್ಮ ಪಾಪಕೆ ನೀವೇ ವೊಯ್ತೀರಿ ನಂಗೇನಂತೆ... ಈಗ ಈ ಲೂಸ್ಯಿಂದ ನನ್ನ ಬಿಡುಗಡೆ ಮಾಡುದ್ರೆ ಸರಿ. ಇಲ್ಲದಿದ್ರೆ, ಈ ದೊಡ್ಡೀಲೆಲ್ಲ ನಿಮ್ಮಾಟವ ಟಾಂಟಾಂ ಮಾಡಿ ರಾಣಾರಂಪ ಮಾಡಾಕ್ತೀನಿ!" –ಬೆದುರಿಸಿದ್ನಂತೆ.

"ಆಗ್ಲಿ ಆಗ್ಲಿ, ಅಂಗೇ ಮಾಡುವ... ಸೂಸಾನಮ್ಮ ಸಂತ್ಯಿಂದ ಬರೋಗಂಟ ತುಸ ಸೈಸಿಗಪ್ಪ"– ಬೇಡಿದ್ರಂತೆ ರೋಸಯ್ಯ.

ಸಂದೆ ದನೀಗೆ ಸೂಸಾನಮ್ಮ ಸಂತ್ಯಿಂದ ಅಂಗಡಿ ಸಾಮಾನ ಯಾರ ಗಾಡೀಲೊ ಹೇರಿಕಂಡು ಮನೆಗೆ ಬಂದ ವಸಿ ವೊತ್ತಿಗೇಯ ಪಂಚಾತಿ ಸೇರುಸಿ,

"ನಂಗೆ ಈ ಎಡತಿ ಬ್ಯಾಡ. ಇವುಗಳಿಂದ ನನ್ನ ಬಿಡುಗಡೆ ಮಾಡಿ," – ಅಣ್ಣ ಖೈಡಾಗಿ ಯೋಳಿಬುಟ್ನಂತೆ.

ಅಸ್ಟಾರಾಗೆ ರೋಸಯ್ಯ ಗುರುಗಳು ಸೂಸಾನಮ್ಮಂಗೆ ಗುಟ್ಟಾಗಿ ನಡುದ ಇಸ್ಯಾನೆಲ್ಲ ಸೂಕ್ಸ್ಮಾಗಿ ಯೋಲಿರಬೇಕು. ಅವಳು ಕಮಕ್ ಕಿಮಕ್ ಅನ್ನಲಿಲ್ಲವಂತೆ. ಪಂಚಾಯಿತಿದಾರ್ರಲ್ಲಿ ಒಬ್ಬ ಮಾತ್ರ ಕ್ಯಾಳಿದ್ನಂತೆ–

"ಎಡತೀಲಿ ಅಂತದೇನು ತೆಪ್ಪುಕಂಡು ಇಡುದೆ?"

ಅಣ್ಣ ಬಾಯಿ ಬುಡಕ್ಕೆ ಮುಂಚೇಯ, ಲೂಸಿ–

"ನಂದೂ ತೆಪ್ಪಿಲ್ಲ, ಅವರ್ದೂ ತೆಪ್ಪಿಲ್ಲ. ನಮ್ಮಿಬ್ಬರ್ಗೂವೆ ವೋದಾಣ್ಕೆ ಆಯ್ತಾ ಇಲ್ಲ..." ಅಂತಿದ್ದಮಗೇಯ ಅವರಲೊಬ್ಬ ಕಿಲಾಡಿ,

"ವೊಂದಾಣಿಕೆ ಆಗ್ದೆ ನಾಕು ತಿಂಗ್ಳ ಯೆಂಗಾಯ್ತು?" ಅಂತ

ಕ್ಯಾಳೇಬುಟ್ನಂತೆ.

"ಆಗ ರೋಸಯ್ಯ ಗುರುಗಳು "ಯಾನೊ ಅದ್ದು ಆಗೋಯ್ತು... ಈಗ ಇವುರ ಸಂಸಾರ ಎಡಗೋಲು ವಕ್ಕಡೆ ತೊದರೆ ಬಲಗೋಲು ಇನ್ನೊಕ್ಕಡೆ ತೂಯ್ತಾ ಅದೆ... ಇದು ಇನ್ನೂ ಬಿಗಡಾಯಿಸ್ಕಂಡು ಹಡ ರಂಪ ಅಗಕ್ಕೆ ಮುಂದೇಯ, ಇವರಿಬ್ಬರ್ನೂ ಬ್ಯಾರೆ ಮಾಡಾದೆ ಇವೇಕ..."– ಅಂದು, ಸಿಕ್ಕ ಬುಡುಸಕ್ಕೆ ಪರ್ಯತ್ನ ಮಾಡುದ್ರಂತೆ. ಆಗ ಇನ್ನೊಬ್ಬ ಪಂಚಾತಿದಾರ;

"ಸರಿ ಗುರುಗಳೆ, ಹ್ವಟ್ಟೆಲ್ಲಿರೊ ಕೂಸಿನ ಗತ್ಯೇನು?– ಅದುಕೆ ಪರಿಯಾರ ಕ್ವಡುಸಬ್ಯಾಡದ?" ನ್ಯಾಯ ಅಡಿದನಂತೆ.

ಆಗ ಸೂಸಾನಮ್ಮ ತಟಕ್ಕನೆ

"ಅವುನು ಪರಿಯಾರ ಕ್ವಡೂದು ಬ್ಯಾಡ ಯಾನೂ ಬ್ಯಾಡ. ಮೊದ್ದಲು ನಮ್ಮ ಹಟ್ಟಿಂದ ಕಡದೋಗ್ಲಿ" ಅಂದ್ಲಂತೆ. "ಸರಿ ಗಂಡ ಎಡತೀರ್ಗೆ ವೊಂದಾಣಿಕೆ ಆಗನಿಲ್ಲ ಅಂದ್ರೆ, ಇನ್ನೇನ ಉಳುದಿರಾದು–ಇವರಿಬ್ರೂ ಬ್ಯಾರೆ ಆಗೋದೇ ಸಮ" –ದೊಡ್ಡಿ ಪಂಚಾತಿದಾರ್ರೆಲ್ಲ ತೀರ್ಪು ಕ್ವಟ್ಟರಂತೆ...

ಅಣ್ಣ ಮಾತ್ರ ತಾನು ಮಾತ ಕ್ವಟ್ಟಿದ್ದ ಉಳುಸುದ್ನಂತೆ. ರೋಸಯ್ಯ ಗುರುಗಳ ಬೀದ್ಗೆ ಎಳಿನಿಲ್ವಂತೆ. ವಸಿ ಜಿನ ಅವಂಗೆ ಅಷ್ಟರಾಗೆ ಸಿನೇಯ್ತ ಆಗಿದ್ದ ಯೇಸುದಾಸ ಅನ್ನೋನ ಅಟ್ಟೀಲಿ, ಅಣ್ಣ ಕಾಲ ನೂಕಿದ್ನಂತೆ...

ಅದಾದ ಮುಂದಿನ ಬೇಸ್ತವಾರ ಹುಣಸೂರು ಸಂತೇಲಿ ಸಿಕ್ಕಿ ವಕ್ಕಡಿಂದ ನಡುದುದ್ನೆಲ್ಲ ನನ್ನ ಕುಟ್ಟೆ ಅಂಗಾಲು ಸುಳಿಸುದ್ದು ಒಂದು ತಪಸೀಲ್ನೂ ಬುಡದೆ ತೊಡಿಕಂಡಿದ್ದ. ಅವನ ಜ್ವತ್ಗೆ ಯೇಸುದಾಸನೂ ಇದ್ದ. ಆಗ ನಾನು,

"ಮುಂದೇನು ಮಾಡೀಯಣ್ಣ?' ಕಣ್ಣೀರು ತುಂಬಿಕತ್ತ ಕ್ಯಾಳಿದ್ದಕ್ಕೆ,

"ನಮ್ಮ ಈ ಯೇಸುದಾಸರ ತಮ್ಮ ಮೊಸಸು ಅನ್ನೋರು ಸೈನ್ಯಕೆ ಸೇರಿ ಕಂಡವ್ರೆ. ನಾನು ಸೇರಿಕತ್ತೀಣಿ. ನಮ್ಮಯ್ಯಂಗೆ ಯೋಳಿಬುಡು–ಇಂಗೆಲ್ಲ ಆಗೋಯ್ತು. ಸಾಯದೆ ಬದುಕಿದ್ರೆ ಯಾವತ್ತಾದ್ರೂವೆ ಬಂದು ನ್ವಾಡ್ತೀನಿ ಅಂತಾವ..."

ಅಣ್ಣನ ಮಾತ ಕ್ಯಾಳಿ ಗೋಳೊ ಅಂತ ಅತ್ತೆ. ಮಟ್ಟಾರಿ ನನ್ನ ತಬ್ಬಿಕಂಡು ತಾನೂ ಅಳ್ತ,

"ಅಳಬೇಡ ಕಲ್ಲ, ತಮ್ಮ. ಸುಮ್ಮಕಿರು... ನಸೀಬಿದ್ರೆ ಸೈನ್ಯದಿಂದ ಬದುಕಿ ಬತ್ತೀನಿ. ಇಂದ್ಕೆ ಬರೂನಾಗ ಸುಮಾರಾಗಿ ಅಣ ಉಳುಸ್ಕಂಬತ್ತೀನಿ. ಆ ಅಣದಿಂದ ಸೊಂತಕೆ ಜಮೀನ ತಕ್ಕತ್ತೀನಿ. ಆಗ ಈ ಊರಿನಾಗೆ ನಾನೂ ಒಬ್ಬ ಮನುಸಾಂತ ಆಗಕ್ಕಿಲ್ವ?– ಅಣ ಇರೋರ್ಗೆ ತಾನೆ ಈ ಊರನಾಗೆ ಮರ್ವಾದೆ..." ಅಂದ.

ಲಕ್ಕ ವಳುಗಡೆ ಅತ್ತುಗಂಡೇ ಊರಿಗೆ ಬಂದಿದ್ದ. ಅತ್ತುಗಂಡೇ ದೊಡ್ಡಯ್ಯಂಗೆ ಸುದ್ದಿ ಮುಟ್ಟುಸಿ, ಅವನತ್ರ ನಿಂತುಕೊನಾರದೆ, ತಮ್ಮ ಗುಡ್ಲಿಗೆ ಬಂದಿದ್ದ...

*   *   *   *

ಇಂದ್ಕೆ ನಡುದ್ನೆಲ್ಲ ಗ್ಯಾಪುಸ್ಕತ್ತ, ಪುಟ್ಟಾರಿ ಅಣ್ಣ ಸೈನ್ಯ ಸೇರದೇಯ ವಂದಿಗೇ ಇದ್ರೆ, ದೊಡ್ಡಯ್ಯ ಇಂಗ್ಯಾಕೆ ಸುಂಡೋಗೋನು?– ಅಂತ ಚಿಂತೆ ಮಾಡ್ತಾನೆ ಲಕ್ಕ, ಮಾಮೂಲ್ನಂತೆ ಒಂದು ಬೇಸ್ತವಾರ ಸಂತೇಗೋತಿದ್ದ, ಹುಣಸೂರ್ನಿಂದ ವಾಪ್ಸು ಬತ್ತಾನೂವೆ ಅದೇ ಚಿಂತೆ ಯಾಕೊ ಅವ್ನ ಇವತ್ತೂ ಕಾಡ್ತಾನೇ ಇತ್ತು... ಅದೇ ಮನಸಿನಾಗೆ ತಮ್ಮ ಗುಡ್ಲಿಗೆ ಬಂದಾಗ ಸಿವುನಿ ಮಣ್ಣಿನ ಅಳಿಗೆ ಮುಚ್ಚಳ ತಗುದು ಅದರೊಳ್ಗೆ ಅಡಕಿದ್ದ ಮಾಂವುಸದ ತುಂಡುಗೊಳ ಕೆಟ್ಟೋಗಿದ್ದದೊ ಯೆಂಗೆ ಅಂತ ಚುರುಚೂರಾಗಿ ಎತ್ತಿ ಎತ್ತಿ ಮೂಸಿ ಮೂಸಿ ವಳೀಕೆ ಇಡ್ತಾ ಇದ್ಲು.

ಲಕ್ಕ ಅಡುಗೆ ಕ್ವಾಣೆ ಬಾಗಿಲಲ್ಲೆ ನಿಂತು ತಂಗಿ ಸಿವುನಿ ಯೇಕಾಗ್ರಾಗಿ ಮಾಡ್ತಿದ್ದ ಕೆಲುಸಾನೆ ನ್ವಾಡ್ತಾ ಇದ್ದ... ತನ್ನ ತಂಗಿ ಬಂದೀನಿಂದ್ಲೂವೆ ತನ್ನ ಅಯ್ಯನಿಗಾಗಿ, ಅವ್ವನಿಗಾಗಿ, ತನಗಾಗಿ ಏಟೊಂದು ಮುತುವರ್ಜಿ ವಯಿಸ್ತವಳೆ. ಅವ್ವಂಗೂ ವಯಸ ಆಗೋಯ್ತು. ಈನದಿಂದ ಜಿನಕೆ ಅವುಳ ಸಕ್ತಿ ಕುಂದೊಯ್ತಾ ಅದೆ! ಅವ್ವನ ಕೇಮೆ, ಯೇನೇ ಅಂದರೂ, ದಪ್ಪಡಿದುಪ್ಪಡಿ. ಆದ್ರೆ ಸಿವುನಿ ಜಾಯಮಾನ್ವೇ ಬ್ಯಾರೆ. ಇವರ ವಗೆತನವೇ ಅಚ್ಚುಗಟ್ಟು. ರುತಿರುತ್ಯಾಗಿ ತಮಗೆಲ್ಲಾರ್ಗೂ ಮಾಡಾಕಬೇಕು. ಕರ್ಚೂವೆ ಹದ್ದು ಮೀರಬಾರ್ದು –ಅತೋಟೀಲೆ ಇರಬೇಕು.

ಅವೊತ್ತು ಮರಿ ಕಡುದು ವಸಿ ಮಾಂವುಸ ಬೇಯ್ಸಿ ನಮಗೆಲ್ಲ ನೀಡಿದ್ಲಲ್ಲ – ಈಗ ಉಳುಕೆ ಮಾಂವುಸವ ಉದ್ದಾನೆ ತುಂಡತುಂಡ್ನಂಗೆ ಕತ್ತಿರಿಸಿದ್ಲು. ಆ ತುಂಡಗಳ ತಕ್ಕಂಡು ಈಳಿಗೆಮಣೇಲಿ, ಚೋಟುದ್ದ ಇಂದುಕೆ ಬುಟ್ಟು, ಸೀಳಿದ್ಲು. ಅಂಗೆ ಸೀಳ್ದ ಒಂದೊಂದು ತುಂಡನೂವೆ ಸಾಲಾಗಿ ಬಿದಿರು ಗಳೀನ ಮ್ಯಾಲೆ ನ್ಯಾತಾಕಿದ್ಲು. ಆಮ್ಯಾಕೆ, ಆ ಗಳುಗಳ ನಮ್ಮ ಗುಡ್ಲ ಇಂಚೋರಿ ಇತ್ಲಲ್ಲಿ ಕೊಣಮಾವಿನ ಕೊಂಬೆಯಿಂದ ಚುಜ್ಜಲು ಮರದ ಕೊನೆಗಳ್ಗೆ ತಲುಲಾಗಿ– ಹದ್ದು, ಕಾಗೆ, ಕೊತ್ತಿ ಯಾವುದೊ ಆ ಮಾಂವುಸದ ತುಂಡುಗಳ ಮುಟ್ಟದಂಗೆ ಎಂಟು ಹಗಲು ಒಬ್ಬಳೇಯ ಒಂದೇ ಸಮಕೆ ಕಾಯ್ಕಂಡಿದ್ಲು. ಸ್ವಾಮಿ ಪಡುವಲಲ್ಲಿ ಮುಳುಗುತಿದ್ದಂಗೆ ಆ ಗಳುಗಳ ಯೆತ್ತಿಂಗಂಬಂದು ವಪರ್ತಿನಾತ್ರೆಯೂವೆ ಅಡುಗೆಕ್ವಾಣೇಲಿ ಒಂದು

ತುಂಡು ಗ್ವಾಡಿಂದ ಇನ್ನೊಂದು ಗ್ವಾಡೆ ತುಗಿದ ತಗುಲ್ಸಿ, ಒಲೆ ಬೆಂಕಿ ಸಾಖಕ್ಕೆ ಆ ಮಾಂವುಸದ ತುಂಡುಗಳ ವಣಗುಸ್ತಿದ್ಲು. ಅಂಗೆ ವಣಗಿದ ಉದ್ದಾನೆ ಮಾಲೆಗಳ ಗಳುಗಳಿಂದ ಇಳುಕಿ, ಅವ್ನ ಕಿರುಬೆಳ್ಳಿನ ಉದ್ದಕ್ಕೆ ಪುನಾ ಸಣ್ಣಸಣ್ಣದಾಗಿ ಕತ್ತುರಿಸಿ, ಆ ತುಂಡುಗೊಳ ಈ ಅಳಗೇಲಿ ತುಂಬಿಟ್ಟು, ಅವುನ್ನ ಬೇಕುಬೇಕಾದಾಗ ತಕ್ಕಂಡು ನಮ್ಗೆ ಬೇಯ್ಸಿ ಆಕ್ತಿದ್ಲು... ವಗೆತನದಲ್ಲಿ ಯಾರೂ ಬೆಳ್ಳು ಮಡಿಸೋ ಅಂಗಿಲ್ಲ. ನಿಪುಣೆ–ಇಂಗೆಲ್ಲ ಮನಸಿನಾಗೆ ಅಂದುಕೊತ್ತ, ಲಕ್ಕ,

"ಈಟು ಜಿನ ನೀನು ಮಾಡಾಕಿದ್ರೂವೆ, ಇನ್ನೂ ಉಳುಕಂಡಿದ್ದವ ಮಾಂವುಸದ ತುಂಡುಗಳು?" ಅಂದ.

ಸಿವುನಿ ಬೆಚ್ಚಿ, ಗಕ್ಕನೆ ತಿರುಗಿ–

"ನೀನಾ?– ಬುಡ್ತು ಅನ್ನು. ನಾನೇಟು ಬೆಚ್ಚೋದಿ ಅಂತಾವ?" ಅಂದೋಳು, ಸಾವರಿಸಿಕತ್ತ, "ಆಡೀಲೆಲ್ಲೊ ವಸಿ ಉಳುದವೆ ಕನಣ್ಣ. ಇನ್ನೊಂದು ವೊತ್ತು, ತಪ್ಪದೆ ಏಡೊತ್ತು ಅಟ್ಟರೆ ಮೂಗೀತು" ಅಂದ್ಲು.

"ಅಂಗಾರೆ ಈ ನಾತ್ರೀಕೆ ರಾಗಿಮುದ್ದೆ ಜ್ವತ್ಗೆ ಈ ಬಾಡಿನ ಸಾರನೂವೆ ಮಾಡು ಮತ್ತೆ..." ಬಾಯಿ ಚಪುರಸ್ತ, ಲಕ್ಕ ಸೂಚನೆ ಕ್ವಟ್ಟ.

"ನಾತ್ರೀಕೆ ನೀ ಯೋಳ್ದಂಗೆ ಬಾಡಿನ ಸಾ ಮಾಡಾದ್ಯಾನೊ ಮಾಡ್ತೀವ್ನಿ. ಆದ್ರೆ ನಿನ್ನಗಂಟ ನೀಡಕ್ಕೆ ಅಯ್ಯ ಆದ ಬುಡಬೇಕಲ್ಲ?..." ಸಿವುನಿ ಯೋಳ್ತ ಯೋಳ್ತ, ನಗಾಡಿ, ಅದೇತಾನೆ ಎಚ್ಚರಾಗಿ ಕಜೆ ತಗುದ ಕೂಸ ತತ್ತಿಗಂಡು ಎದೆ ಕಚ್ಚುಸ್ತಿರೋನೂವೆ.

"ನಮ್ಮ ಸುಖಕೆ ಈ ಅರೇದ ಎಣ್ಣ ಸೆರೆ ಅಕ್ಕಂಡಿರಾದು ಯಾವ ಚೆಂದವ?... ಅಯ್ಯ, ಅವ್ವ ಇಬ್ರ ಕುಟ್ಟೂ ಮಾತಾಡಿ, ಯಾವುದಾದ್ರೂ ಗಂಡ ನ್ವಾಡಿ ಇವುಳ ಗಂಟಾಕಿಬುಡಬೇಕು," ಅಂದುಕಂಡ ಲಕ್ಕ.

## ೧೭

ಲಕ್ಷಮ್ಮ ಮುಸುಕು ಹಾಕಿದ ಮಾತುಗಳಲ್ಲಿ ಸೂಕ್ಷ್ಮವಾಗಿ ರುಕ್ಮಿಣಿಯನ್ನು ಚುಚ್ಚುತ್ತ ಇದ್ದಳು...

ಮೊದಮೊದಲು ಲಕ್ಷಮ್ಮನ ಮಾತುಗಳ ಹಿಂಬದಿಗೆ ಅಡಗಿದ್ದ ಮರ್ಮ ರುಕ್ಮಿಣಿಗೆ ಅರಿವಾಗಲಿಲ್ಲ. ಆದರೆ ಆ ಮಾತುಗಳನ್ನೆ ಮೆಲುಕು ಹಾಕಿದಂತೆ ಅವುಗಳ ಹಿಂದೆ ಯಾವುದೆ ಗೂಢಾರ್ಥ ಅಡಗಿದೆ ಎಂಬ ಶಂಕೆ ತಲೆದೋರಿತು. ಆ ಶಂಕೆಯ ನಿವಾರಣೆಗೆ ಬಹುಕಾಲವೇನೂ ಬೇಕಾಗಲಿಲ್ಲ. ಊರಿನೊಳಗೆ

ಅಲ್ಲಲ್ಲಿ ಎದ್ದು ಬಿದ್ದು ಹರಿದಾಡಿದ ಸುದ್ದಿ ಅವಳ ಕಿವಿಯನ್ನೂ ಮುಟ್ಟದಿರಲಿಲ್ಲ– ಗಂಡಸು, ಹೆಂಗಸು ಇಬ್ಬರೆ ಒಂದೇ ಜಾಗದಲ್ಲಿ ಹಗಲೂ ರಾತ್ರಿ ವಾಸ ಮಾಡಬಹುದೇ? ಸಾಕ್ಷಾತ್ ಬ್ರಹ್ಮದೇವ ತಾನೆ ಸೃಷ್ಟಿಸಿದ ಮಗಳು ಶಾರದೆಯಲ್ಲೆ ಮೋಹಗೊಳ್ಳಲಿಲ್ಲವೆ?... ಎಂಬ ತರ್ಕವಾಗಿ ಆರಂಭ ಆದದ್ದು ಕೃಷ್ಣಶಾಸ್ತ್ರಿಗಳು ಪ್ರಾಯದ ಹೆಣ್ಣು ರುಕ್ಮಿಣಿ ಇಬ್ಬರೇ ಒಟ್ಟಿಗಿರುವಾಗ ಎಲ್ಲವೂ ಮುಗಿದೇ ಹೋಗಿರಬೇಕು, ಎನ್ನುವ ಹಂತವನ್ನೂ ಮುಟ್ಟಿತ್ತು!... ಮೊಸರು ಕಡೆಯುತ್ತ ರುಕ್ಮಿಣಿಯು,

"ನನ್ನ ಮಾವಯ್ಯ ದೇವರಂಥ ಮನುಷ್ಯ. ಒಂದು ದಿನವೂ ಸಹ ನನ್ನನ್ನು ಕತ್ತೆತ್ತಿ ನೋಡಿಲ್ಲ. ಇಂಥ ಪುಣ್ಯಾತ್ಮರ ಚಾರಿತ್ರ್ಯವಧೆ ಮಾಡಲಿಕ್ಕೂ ಜನ ಹೇಸಲ್ಲವಲ್ಲ?" ವ್ಯಸನ ಪಡುತ್ತ, ಕಡೆಯುವ ಮಂತಿಗೆ ನೀರು ಚೆಲ್ಲಿ ತೊಳೆದು, ಬೆಣ್ಣೆಯ್ನನು ಒಂದು ಕಡೆಯಿಂದ ಸುತ್ತಲೂ ಬಳಿದು ಉಂಡೆ ಮಾಡುತ್ತ,

"ಅಯ್ಯೊ, ಇದರಲ್ಲೇನು ವಿಶೇಷ?– ಅಂಥ ಮಹಾ ಪತಿವ್ರತೆ ಸೀತಾದೇವಿಯ ಬಗ್ಗೆಯೇ ಕೇವಲ ಅಗಸನೊಬ್ಬ ಜರಿದು ಕುತ್ಸಿತ ಟೀಕೆ ಮಾಡಲಿಲ್ಲವೆ?..." –ಹೀಗೆ ಚಿಂತಿಸುತ್ತಿದ್ದವಳು, ತಟ್ಟನೆ ಕೊಂಚ ಗಟ್ಟಿಯಾಗೆ,

"ಹುಂ, ನೆಕ್ಕುವ ನಾಯಿಗೆ ಲಿಂಗವೇನು, ಪಾಣಿಬಟ್ಟಲೇನು?" ಎಂದು ಸಿಡಿಮಿಡಿಗೊಂಡವಳು, ಬೆಣ್ಣೆಯನ್ನು ಕಾಯಿಸಲು ಬೇರೊಂದು ಪಾತ್ರೆಯಲ್ಲಿ ಒಲೆಯ ಮೇಲಿಟ್ಟು,

"ಈ ಹೇಸಿಗೆ ಮಾತಿನ ಗಂಗೋದ್ಭವ ಕೇಶವಯ್ಯನ ಮಡದಿ ಆ ಸೀತಾಲಕ್ಷ್ಮಿಯ ಹೊಸಲು ತಲೆಬುರುಡೆಯಲ್ಲೆ ಆಗಿರಲಿಕ್ಕೆ ಸಾಕು–" ಎಂದು ತಿರಸ್ಕಾರವಾಗಿ ತನ್ನಲ್ಲೆ ಹೇಳಿಕೊಂಡಳು.

ಅವಳ ಮನಸ್ಸು ಬೇರೊಂದು ದಿಸೆಯಲ್ಲಿ ಹರಿಯತೊಡಗಿತ್ತು...

ಇಲ್ಲ, ಇದು ಹೀಗೂ ಇರಬಹುದೆ?... ಆ ಸುಟ್ಟು ಮೊರೆಯ ಲಕ್ಷಮ್ಮ ತಾನೆ ಇದನ್ನು ಸೃಷ್ಟಿಸಿ, ಸೀತಾಲಕ್ಷ್ಮಿಯ ಮೇಲೆ ತನ್ನಲ್ಲಿ ತಪ್ಪುಭಾವನೆ ಬೆಳಯುವಂತೆ ಮಾಡಿರಬಹುದೆ?...

ಒಲೆಯ ಮೇಲೆ ಕುದಿಯುವ ತುಪ್ಪವನ್ನ ಉಕ್ಕದಂತೆ ಸೌಟಾಡಿಸುತ್ತ, ಅವಳ ಮನಸ್ಸು ಎದ್ದಬಿದ್ದು ಕುದಿಯಿತು...

ಆಚೆಮೊನ್ನೆ ಬುಂಡಮ್ಮ ತಮ್ಮ ಹಿತ್ತಲಲ್ಲಿ ಯಾವುದೋ ಮಾತಿಗೆ ಹೇಳಿದ ಹಾಗೆ–

"ಮನಸನ ನಾಲಿನ ಚಕಳದ್ದು. ಅದು ಹೆಂಗೆ ಬ್ಯಾಕಾರೂ ವೊಳ್ತದೆ.

ಭಕ್ತಿಯಿಂದ ದ್ಯಾವರಯೆಸರ ಯೋಳಾದು ಅದೇಯ. ಇನ್ನೊಬ್ರ ಈಯಾಳುಸಿ ಅವರ ತಿಕ ನೆಕ್ಕಕ್ಕೆ ವೋಗಾದು ಅದೇಯ..."

ಆ ರಾತ್ರಿ ಮಲಗಿದಾಗಲೂ ಇದೇ ಚಿಂತೆ ತೀವ್ರವಾಗಿ, ಒಳಗೆ ಆಳದಲ್ಲಿ ಕುಟ್ಟುವ ಕೊಟ್ಟಣವಾಗಿ, ರುಕ್ಮಿಣಿಯನ್ನು ಕಾಡಿತು. ಎಷ್ಟು ಪ್ರಯತ್ನಿಸಿದರೂ ತನಗೆ ನಿದ್ರೆ ಬರುತ್ತಿಲ್ಲ... ಹಾಳು, ಮಧ್ಯಾಹ್ನ ಆ ಲಕ್ಷಮ್ಮ ಬಂದು ಇಲ್ಲದ್ದನ್ನು ತನ್ನ ಮನಸ್ಸಿನೊಳಗೆ ಬಿತ್ತಿಹೋದದರಿಂದಲೆ ತನಗೆ ಈ ಚಿಂತೆ! ಅನಿಷ್ಟದವಳು, ಅವಳು ಎತ್ತಲಾದರೂ ಹಾಳಾಗಿಹೋಗಬಾರದೆ?

ಛೆ, ಆದರೂ ತಾನೇಕೆ ಈ ಸಣ್ಣ ವಿಷಯವನ್ನು ವಿಪರೀತ ಭಾವಿಸಿ ಕೊರಗಬೇಕು?– ಅತ್ತಲಿಂದ ಇತ್ತ, ಇತ್ತಲಿಂದ ಅತ್ತ ಹೊರಳಾಡಿ ಇದನ್ನು ಮರೆಯಲು ಯತ್ನಿಸಿದಳು. ಆದರೆ, ಕಯ್ಯಿಂದ ಎಷ್ಟು ಬಾರಿ ಹೊಡೆದೋಡಿಸಿದರೂ ಮತ್ತೆ ಮತ್ತೆ ಸುಯ್ಯೆಂದು ಮುಖವನ್ನು ಮುತ್ತಿ ಬಾಧಿಸುವ ಹೇಸಿಗೆಯ ಮೇಲಿನ ನೊಣಗಳಂತೆ ಮರೆಯಲು ಪ್ರಯತ್ನಿಸಿದಷ್ಟೂ ಈ ಚಿಂತೆ ದೂರವಾಗದೆ ಪುನಃ ದಾಳಿಯಿಡುತ್ತಲೇ ಇತ್ತು.

ಬಹಳ ಸಮಯ ರುಕ್ಮಿಣಿಯ ಮನಸ್ಸು ಈ ಪರಿ ಒದ್ದಾಡಿರಬೇಕು. ಕಡೆಗೊಮ್ಮೆ ಇನ್ನೇನು ನಿದ್ದೆಯ ಸೆಳಕು ಅವಳನ್ನು ಆಕ್ರಮಿಸಬೇಕು–ಅಷ್ಟರಲ್ಲಿ ಅವಳು ಕೇಳಿದ್ದೇನು?... ಹೆಜ್ಜೆಯ ಸಪ್ಪಳ!... ಯಾರೋ ನಡೆದು ಬರುತ್ತಿರುವಂತೆ!....

ಅವಳ ಎದೆ ಡವಡವ ಬಡಿಯಲುಪಕ್ರಮಿಸಿತು.

ಮನುಷ್ಯರ ಹೆಜ್ಜೆಯ ಸಪ್ಪಳ!.... ಅದರಲ್ಲಿ ಯಾವ ಅನುಮಾನವೂ ಇಲ್ಲ!... ಅಂಗಳದಿಂದ ತಾನು ಮಲಗಿರುವ ಕೋಣೆಯ ಕಡೆಗೇ ಬರುತ್ತಿರುವಂತಿದೆ!

ಯಾರಿರಬಹುದು?... ಮಾವಯ್ಯ ತಾನು ಹಾಲಿಗೆ ಹೆಪ್ಪು ಹಾಕಿ ಬರುವಾಗಲೆ ಹಜಾರದ ಕೊನೆಗೆ ಮಲಗಿ ನಿದ್ದೆಹೋಗಿದ್ದರು... ಬೀದಿಯ ತಾಪಾಳನ್ನು ತಾನೇ ಹಾಕಿ ಭದ್ರಪಡಿಸಿ, ನಿತ್ಯದ ಅಭ್ಯಾಸದಂತೆ ತಾನೇ ಮತ್ತೊಮ್ಮೆ ಹಿಂತಿರುಗಿ ಹೋಗಿ, ಸರಿಯಾಗಿ ತಾಪಾಳು ಹಾಕಿರುವುದನ್ನು ಖಾತರಿ ಮಾಡಿ ಬಂದಿದ್ದಳಲ್ಲ?... ಆದ್ದರಿಂದ ಕಳ್ಳಕಾಕರು ಯಾರೂ ಬೀದಿಯ ಬಾಗಿಲಿನಂದ ಒಳಗೆ ಪ್ರವೇಶಿಸುವ ಸಾಧ್ಯತೆಯೇ ಇಲ್ಲ!... ಒಂದು ಪಕ್ಷ ಅವರೇನಾದರೂ ಮನೆಯ ಮೇಲುಗಡೆಗೆ ಹತ್ತಿ ಅಂಗಳದೊಳಗೆ ಇಳಿಯಲು ಯತ್ನಿಸಿದರೆ, ಬಿದಿರು ಗಳುಗಳ ಮೇಲೆ ಹೊದ್ದಿಸಿದ್ದ ನಾಡ ಹೆಂಚುಗಳನ್ನು ಒಂದರ ಮೇಲೊಂದು ತೆಗೆದಿಡುವ ಸದ್ದು ಕೇಳಿಬರಬೇಕು. ತರುವಾಯ ಬಿದಿರುಗಳನ್ನು ಕತ್ತಿರಿಸುವಾಗಿನ ಲಟಲಟ ಸದ್ದು ಕೇಳಿರಬೇಕು. ಆದರೆ ಅಂಥ ಶಬ್ದವಾವುದೂ ಇಲ್ಲಿನ ತನಕ ತನ್ನ

ಕಿವಿಗೆ ಬಿದ್ದಂತಿಲ್ಲ!...

ಹಾಗಾದರೆ ಇದು ಯಾರಿರಬಹುದು?...

ಒಂದು ಕ್ಷಣ ತತ್ತರಿಸಿದಳು.

ಏನಾದರೂ–ಇದು, ಗತಿಸಿದ ತನ್ನ ಪತಿಯ ಪ್ರೇತವಾಗಿರಬಹುದೆ?...

ಯಾಕೆ, ಪ್ರತಿವರ್ಷವೂ ಮಾವಯ್ಯ ತಪ್ಪದೆ ಮಗನಿಗೆ ಕರ್ಮಾದಿಗಳನ್ನು ವಿಧಿವತ್ತಾಗಿ ಮಾಡಿ, ಪಿಂಡ ಇಡುತ್ತಿಲ್ಲವೆ?... ಕ್ರಮವಾಗಿ ಇಷ್ಟೆಲ್ಲ ಮಾಡಿದರೂ ತನ್ನವರಿಗೆ ಮುಕ್ತಿ ದೊರಕಲಿಲ್ಲವೆ? ಯಾರಿಗೆ ಗೊತ್ತು? ಏನು ಲೋಪವಾಯಿತೊ?... ಅಥವಾ ಕಿರಿವಯಸ್ಸಿನ ತನ್ನ ಪತಿಗೆ ಹೆಂಡತಿಯ ಮೇಲಿನ ಮೋಹ ಇನ್ನೂ ತೊರೆದಿಲ್ಲವೊ?...

ತನ್ನ ಪತಿಯ ಸ್ಮರಣೆ ಬಂದೊಡನೆಯೆ, ಅವನ ರೂಪು ಕಣ್ಣಿನ ಮುಂದೆ ತೇಲಿದಂತಾಗಿ ಉತ್ಸುಕಗೊಂಡಳು. ಆದರೆ ಮರುಗಳಿಗೆಯಲ್ಲಿಯೆ,

"ಈಗ ಅವರು ಬಂದರೆ ಕೇವಲ ಅಸ್ಥಿಪಂಜರವಾಗಿ ಮಾತ್ರ ಕಾಣಬಹುದು" ಅನ್ನಿಸಿದಾಗ,

"ಅಯ್ಯಯ್ಯೊ, ಈ ಸ್ಥಿತಿಯಲ್ಲಿ ಅವರನ್ನು ನಾನು ಹೇಗೆ ನೋಡಲಿ?...ಅವರು ಈ ಸ್ಥಿತಿಯಲ್ಲಿ ನನಗೆ ಕಾಣಿಸಿಕೊಳ್ಳದಿದ್ದರೇ ಲೇಸು" ಎಂದು ತವಕಗೊಂಡಳು.

ಅವಳ ಮೊರೆಗೆ ಓಗೊಟ್ಟಂತೆ ಹೆಜ್ಜೆಯ ಸಪ್ಪಳ ಹಠಾತ್ತನೆ ನಿಂತಿತು. ಕುತೂಹಲ ಕೆರಳಿ ಉಸಿರು ಕಟ್ಟಿ ಕುಳಿತಳು... ಈ ಅನುಭವ ಅವಳಿಗೆ ತೀರಾ ಹೊಸದು. ಅವಳು ಲಗ್ನವಾಗಿ ಈ ಮನೆಗೆ ಕಾಲಿಟ್ಟ ದಿನದಿಂದ ಇಂಥದೊಂದು ವಿಚಿತ್ರ ಎಂದೂ ನಡೆದಿರಲಿಲ್ಲ!...

ಏನಿರಬಹುದುದು?–ಎಂಥದು ಇದು?... ಅಥವಾ ಇದೆಲ್ಲ ನನ್ನ ಮನಸ್ಸಿನ ಭ್ರಾಂತಿಯೊ?... ಯಾವ ಪರಿಯಲ್ಲಿ ಆಲೋಚಿಸಿದರೂ ಬಗೆಹರಿಯಲಿಲ್ಲ. ಎಲ್ಲ ತೊಡಕು, ತೊಡಕು. ಭೀತಿಯಿಂದ ಕಂಪಿಸಿದಳು–ತಕ್ಷಣ ಮಂತ್ರವೊಂದು ಅವಳ ಬಾಯಿಯಿಂದ ಹೊರಬಿದ್ದಿತು: "ಅರ್ಜುನಃ ಫಲ್ಗುನಃ ಪಾರ್ಥಃ..." ಇತ್ಯಾದಿ – ಕಲಿಪಾರ್ಥನನ್ನು ಅವನ ಅನೇಕ ಹೆಸರುಗಳಿಂದ ನೆನೆಯುವ ಈ ಮಂತ್ರವನ್ನು ಬಾಲ್ಯದಲ್ಲಿ ಅವಳ ತಂದೆ ಬಾಯಿಪಾಠ ಮಾಡಿಸಿದ್ದರು. ಒಮ್ಮೆ ರುದ್ರಪಟ್ಟಣದ ತಮ್ಮ ತೋಟದಲ್ಲಿ ತಂದೆಯೊಡನೆ ಇದ್ದಾಗ, ಗುಡುಗು ಮಿಂಚಿನ ಮಳೆ ಆರಂಭವಾಗಿ ದೂರದಲ್ಲಿ ಸಿಡಿಲೊಂದು ಆಬ್ಬರಿಸಿತು. ಭಯದಿಂದ ನಡುಗುತ್ತಿದ್ದ ತನ್ನನ್ನು ಆ ಕೂಡಲೆ ಬರಸೆಳೆದು ತಬ್ಬಿ ಈ ಮಂತ್ರವನ್ನು ಗಟ್ಟಿಯಾಗೇ

ಅಂದಿದ್ದರು. ಮಳೆ ನಿಂತು ಮನೆಗೆ ಹಿಂದಿರುಗಿದ ತರುವಾಯ ಈ ಮಂತ್ರವನ್ನು ಬರೆದುಕೊಟ್ಟು ಬಾಯಿಪಾಠ ಮಾಡಿಸಿ,

"ನಿನಗೆ ಯಾವ ಕಾರಣಕ್ಕಾಗಲಿ ಭಯವಾದರೆ ಈ ಮಂತ್ರವನ್ನು ನಿನ್ನಲ್ಲೆ ಹೇಳಿಕೊ. ಇದು ನಿನ್ನನ್ನು ರಕ್ಷಿಸಿಬಲ್ಲದು" ಎಂದು ಉಪದೇಶವಿತ್ತಿದ್ದರು.

ಮಂತ್ರವನ್ನು ಮತ್ತೊಮ್ಮೆ ಉಚ್ಚರಿಸಿ, ಭಗವಂತನನ್ನು ಮನದಲ್ಲೇ ಪ್ರಾರ್ಥನೆ ಮಾಡುತ್ತ, ಹಾಸಿಗೆಯ ಮೇಲೆ ಉರುಳಿ ಕಣ್ಣುಚ್ಚಿದಳು. ಆದರೆ ಮರುಕ್ಷಣವೇ ರೆಪ್ಪೆ ಬಿಚ್ಚಿತು. ದೃಷ್ಟಿ ಬಾಗಿಲಲ್ಲಿ ನಿಟ್ಟಿತು. ಹಾವು ಆ ಕೋಣೆಗೆ ಬಂದಾಗಿನಿಂದ ಒಂದು ಮೂಲೆಗೆ ರಾತ್ರಿಯ ವೇಳೆ ಹೊತ್ತಿಸಿ ಇಡುತ್ತಿದ್ದ ದೀವಿಗೆಯ ಮಂದಬೆಳಕಿನಲ್ಲಿ ಅರಿಶಿನ ತೇಗದ ಬಾಗಿಲು ತಾನೇ ಒಂದು ದೆವ್ವದ ರೂಪ ತಾಳಿದಂತೆ ಗೋಚರಿಸಿ ಕಳವಳ ಹುಟ್ಟಿಸಿತು. ಹಾಗೆ ಅವಳ ದೃಷ್ಟಿ ಆ ಬಾಗಿಲಿನ ಮೇಲೆ ಕೇಂದ್ರೀಕೃತವಾದಂತೆ, ಆ ಬಾಗಿಲಿಗೆ ಒಳಗಡೆಯಿಂದ ತಾಪಾಳು ಇಲ್ಲದಿರುವ ಸಂಗತಿ, ಇದೀಗ ಹೊಸದಾಗಿ ಅರಿವಾಯಿತೇನೊ ಎನ್ನುವಂತೆ ಗ್ರಹಿಕೆಯಾಯಿತು. ಒಡನೆಯೆ, ಭೂತಕ್ಕೆ ತಾಪಾಳು ಇದ್ದರೂ ಒಂದೆ, ಇಲ್ಲದಿದ್ದರೂ ಒಂದೆ, ಅದಕ್ಕೆ ಯಾವುದು ತಡೆ? —ಎನ್ನಿಸಿ, ಮತ್ತೊಮ್ಮೆ ಒಳಗೊಳಗೇ ನಡುಗಿದಳು. ಹಾಗೆಯೇ ದೃಷ್ಟಿಸುತ್ತ ಕಣ್ಣುಚ್ಚಿದಳು...

ಆದರೆ ನಿದ್ದೆ ಮಾತ್ರ ಅವಳ ಬಳಿ ಸುಳಿಯಲಿಲ್ಲ. ಕಣ್ಣು ಮುಚ್ಚಲು ಅವಳು ಎಷ್ಟೇ ಪ್ರತ್ನಿಸಿದರೂ ಕಣ್ಣಿವೆ ಹೀಗೆ ಮುಚ್ಚಿದರೆ ಹಾಗೆ ತೆರೆಯುವುದು. ಹಾಗೆ ತೆರದಾಗಿನ ದೃಷ್ಟಿ ಮಾತ್ರ ಸಂಪೂರ್ಣವಾಗಿ ಬಾಗಿಲಿನತ್ತಲೆ ಹೊರಳುವುದು. ಒಂದೇ ಜಾಗದಲ್ಲಿ ಹೀಗೆ ನೆಟ್ಟಿದ್ದರಿಂದಲೋ ಏನೊ, ಕಣ್ಣುಗಳು ಸೋತು ಬಾಡಲುಪಕ್ರಮಿಸಿದವು...

ಆಗ ಮತ್ತೆ ಹೆಜ್ಜೆಯ ಸಪ್ಪಳ ಕೇಳಬೇಕೆ?

ಮೈಯೆಲ್ಲ ಕಿವಿಯಾಗಿ ಆಲಿಸಿದಳು... ಆದರೆ ಬಾಗಿಲಿಗೆ ಕೊಂಚ ದೂರದಲ್ಲೆ ಆ ಸಪ್ಪಳ ನಿಂತಂತೆ ಅವಳಿಗೆ ಭಾಸವಾಯಿತು.

ತುಸುಕಾಲ ನಿಶ್ಯಬ್ದ. ಅವಳ ಹೃದಯದ ಡುಬ್ ಡುಬ್, ಬಡಿತ ಸ್ಪಷ್ಟವಾಗಿ ಕೇಳಿಬರುವಷ್ಟು, ನಿಶ್ಯಬ್ದ!

ಎದ್ದು ಕುಳಿತಳು. ಮೈಯೆಲ್ಲ ಸೆಟೆದು ನಿಶ್ಚಲವಾಯಿತು. ಮುಂದೆ ಕೆಲ ನಿಮಿಷಗಳಲ್ಲಿ ಆ ಸಪ್ಪಳ ಮತ್ತೆ ಆರಂಭಃವಾಗಿ ಹಿಂದೆ ಹಿಂದೆ ಮಂದವಾಗುತ್ತ ದೂರ ದೂರ ಹೊರಟು ಹೋದ ಅನುಭವ!

ರುಕ್ಮಿಣಿಯು ಬೆವರಿನಲ್ಲಿ ತೊಯ್ದು ಹೋಗಿದ್ದಳು... ಇದು ಭೂತವೆ?–

ಇಲ್ಲ, ತನ್ನ ಉದ್ವಿಗ್ನಗೊಂಡ ಮನಃಸ್ಥಿತಿಯ ಕಳವಳವೆ?...

ಹೀಗೆ ಚಿಂತಿಸುತ್ತ ಕುಳಿತೇ ರಾತ್ರಿಯನ್ನು ಕಳೆದಳು.

ಬೆಳಗಾದದ್ದೆ ತಡ, ಕುತೂಹಲದಿಂದ ಬಾಗಿಲು ದಬ್ಬಿ ಹೊರಬಂದು ನೋಡಿದಳು, ಎನಿದು ಸೋಜಿಗ? –ತಾನು ಬಾಗಿಲಿನ ಮುಂದುಗಡೆ ಹರಡಿದ್ದ ಬೂದಿಯ ಮೇಲೆ ಹೆಜ್ಜೆ ಗುರುತುಗಳು ನೇರವಾಗಿ ಮೂಡಿವೆ!... ಪಿಶಾಚಿಯಾಗಿದ್ದರೆ ಅದರ ಹೆಜ್ಜೆ ತಿರುಗಮುರುಗ ಆಗಿರಬೇಕಿತ್ತು. ಅಲ್ಲವೆ?

ಈ ಸಂಗತಿಯಿಂದ ಚಕಿತಳಾದ ರುಕ್ಮಿಣಿ ಆ ಹೆಜ್ಜೆಯ ಜಾಡನ್ನೆ ಹಿಡಿದು ಪರೀಕ್ಷಿಸುತ್ತ ಮುಂದುವರಿದಳು, ಬೂದಿಯಿಂದ ಅವೃತವಾದ ಹೆಜ್ಜೆ ಗುರುತು ಹಜಾರದ ಮೂಲೆಗೆ ಮಲಗಿದ ಮಾವಯ್ಯನವರೆಗೂ ಸಗಿ, ಅಲ್ಲಿ ಕೊನೆಗಂಡಂತಿತ್ತು!

ಮಾವಯ್ಯ ಗೊರಕೆ ಹೊಡೆಯುತ್ತಿದ್ದರು. ಅವರು ಹೊದೆದಿದ್ದ ಹಸಿರು ಬಣ್ಣದ ಕಾಶ್ಮೀರ ಶಾಲಿನ ಹೊರಗೆ, ಅವರ ಒಂದು ಪಾದ ಮಾತ್ರ ಚಾಚಿಕೊಂಡಿತ್ತು.

ರುಕ್ಮಿಣಿ ನೋಡುತ್ತಾಳೆ–ಆ ಪಾದದ ಅಡಿಯ ಭಾಗಕ್ಕೆಲ್ಲ ಬೂದಿಯ ಲೇಪ!...

ಇದು ಸಾಧ್ಯವೆ?

ತಲೆ ಗಿರಗಿರನೆ ಸುತ್ತಿದಂತಾಯಿತು.

ಅಂಗಳದಲ್ಲಿ ಕಂಬವೊಂದರ ಆಸರೆ ಸಿಗದಿದ್ದಲ್ಲಿ ನಿಶ್ಚಯವಾಗಿಯೂ ಕೆಳಗೆ ಬೀಳಬೇಕು.

ಹೇಗೊ ಸಾವರಿಸಿಕೊಳ್ಳುತ್ತ ನಿತ್ಯದ ಮನೆಗೆಲಸದಲ್ಲಿ ತೊಡಗಿದಳು. ಮತ್ತೆ ಮತ್ತೆ ಆ ದಿನವೆಲ್ಲ ಅದೇ ಪ್ರಶ್ನೆ ಅವಳ ಮನಸ್ಸನ್ನು ಕಡೆಯಿತು.

ಇದು ಸಾಧ್ಯವೆ?... ತನ್ನ ಮಾವಯ್ಯ!... ನಿಷ್ಠಾವಂತ ವೈದಿಕ!... ತನ್ನನ್ನ ಇಲ್ಲಿ ಯತನಕ ತನ್ನ ಸ್ವಂತ ಮಗಳಿಗಿಂತಲೂ ಅತಿಶಯವಾಗಿ ನಡೆಸಿಕೊಂಡ ಪುಣ್ಯಾತ್ಮ!... ಇದು ಇವರ ಹೆಜ್ಜೆ ಗುರತೆ?...

ಬಿಡಿಸಲಾಗದ ಅಂಕಗಣಿತದ ಲೆಕ್ಕವೊಂದರ ಮುಂದೆ ಬೆರಗಾಗಿ ಕೂರುವ ಮಕ್ಕಳಂತೆ ಈ ಕ್ಲಿಷ್ಟ ಸಮಸ್ಯೆಯನ್ನು ಎದಿರಿಸಲಾರದೆ ಅವಳು ತಲ್ಲಣಗೊಂಡು ತತ್ತಿರಿಸಿಹೋದಳು.

ಆ ರಾತ್ರಿಯಿಡೀ ಯಾವ ಗಳಿಗೆಯಲ್ಲಿ ಏನಾಗುವುದೊ ಎಂಬ ಭೀತಿಯ ನಿರೀಕ್ಷೆಯಲ್ಲಿ ಕಳೆಯಿತು. ಯಾವ ಒಂದು ಸಣ್ಣ ಸದ್ದಿಗೂ ಚಳುಕು ಹೊಡೆದಂತೆ ಅವಳ ಕಿವಿ ತೆರೆದುಕೊಳ್ಳುವುದು. ಆದರೆ ದೈವಕೃಪೆಯಿಂದ ಯಾವ ಹೆಜ್ಜೆ ಸಪ್ಪಳವೂ ಕೇಳಿಬರಲಿಲ್ಲ.

ಮರುದಿನ ಎದ್ದಾಗ ಹಿಂದಿನ ಎರಡು ರಾತ್ರಿಗಳ ಕಠೋರ ಅನುಭವವನ್ನೇ ಅವಳ ಮನಸ್ಸು ಚಿಂತಿಸುತ್ತಿತ್ತು. ಇದೇ ಚಿಂತೆಯಲ್ಲಿ ಮನೆಗೆಲಸಗಳನ್ನು ಹೇಗೋ ಯಾಂತ್ರಿಕವಾಗಿ ಮುಗಿಸಿ, ಹಾಸಿಗೆಯ ಮೇಲೆ ಮೈಚೆಲ್ಲಿದ್ದಳು. ಹಿಂದಿನ ರಾತ್ರಿಗಳಲ್ಲಿ ಸರಿಯಾಗಿ ನಿದ್ದೆ ಬಾರದಿದ್ದುದರಿಂದಲೇ ರುಕ್ಮಿಣಿಗೆ ಈ ರಾತ್ರಿ ನಿಶ್ಚಿಂತ ನಿದ್ದೆ! ಅವಳ ಮೈಮೇಲೆ ಯಾವುದೋ ಭಾರ ಬಿದ್ದಂತಾದಾಗಲೆ ಅವಳಿಗೆ ಎಚ್ಚರ. ಕಣ್ಣು ತೆರೆದಾಗ ಅವಳ ಮುಖದೆದುರು ಅಗಲವಾದ ಮಾವಯ್ಯನ ಮುಖ! ಕಿರುಚಲು ಪ್ರಯತ್ನಿಸಿದಾಗ ಮಾವಯ್ಯ ಬಾಯಿ ಮುಚ್ಚಿದರು–ಕಯ್ಯಿಂದ ಅಲ್ಲ, ತಮ್ಮ ದಪ್ಪನೆ ತುಟ್ಟಿಗಳಿಂದ!...

ತನ್ನ ಹೊಯ್ದಾಟ, ಮಾವಯ್ಯನ ಧಡೂತಿ ಶರೀರವನ್ನು ಮೈಮೇಲಿನಿಂದ ತಳ್ಳಹಾಕುವ ತನ್ನ ದುರ್ಬಲ ಪ್ರಯತ್ನ ಯಶಸ್ವಿಯಾಗಿಲಿಲ್ಲ. ಮನಸ್ಸು ಎಲ್ಲೆಲ್ಲೊ ತೇಲಿತು...

ಸುರಕ್ಷಿತವಾಗಿ ತಾನು ಕುಳಿತು ಸಾಗುತ್ತಿದ್ದ ಹರಿಗಳು ಥಟ್ಟನೆಮಗುಚಿದಂತಾಗಿ ಹೊಳೆಯ ನೀರಿಗೆ ಬಿದ್ದು ಉಸಿರುಕಟ್ಟಿ ಕೈಕಾಲು ಬಡಿಯುತ್ತಿರುವ ಅನುಭವ... ನೀರಿನ ಸೆಳಕು ಮುಳುಗಿಸಿ, ಮೇಲೆತ್ತಿ ತೇಲಿಸಿ ಸೆಳೆದೊಯ್ಯತ್ತ, ರಾಮನಾಥಪುರದ ಗೋವುಗಳಲ್ಲಿನ ಗರ್ಭದದ ಕತ್ತಲಿಗೆ ನೂಕಿ, ಅಲ್ಲಿ ಹೊಳೆಯ ನೀರು ಎತ್ತಿಎತ್ತಿ, ಕುಕ್ಕಿಕುಕ್ಕಿ, ಕಡೆಗೊಮ್ಮೆ ಆಚೆಗೆ ದಬ್ಬಿದಂತಾಗಿ, ದಡಕ್ಕೆ ಬಂದು ಬಿದ್ದಿದ್ದಳು... ಹೊರಗೆ ಬಂದಾಗ ಭಾರ ಇಳುಕಿದಂತೆ ಶರೀರ ಹಗುರಾಯಿತು...

ಕಣ್ಣು ತೆರೆದಾಗ, ಹೊರಳಿ ಮೇಲೆದ್ದ ಮಾವಯ್ಯ, ಕಚ್ಚೆಯನ್ನು ಸರಿಪಡಿಸಿಕೊಳ್ಳುತ್ತ, ಕೋಣೆಯ ಬಾಗಿಲು ತೆರೆದು ಸರಸರ ಹೊರಟುಹೋದರು. ಯಾಕೊ ಆ ಗಳಿಗೆಯಲ್ಲಿ ತನ್ನ ಗಂಡ ಹೇಳಿದ್ದ ಅಹಲ್ಯೆಯ ಪ್ರಸಂಗ ನೆನಪಾಯಿತು. ಅಪರಾಧಿಯಂತೆ ತಲೆತಗ್ಗಿಸಿ ಅವರು ಹೊರಟುಹೋದ ರೀತಿ, ಅವಳಿಗೆ ಕೃತ್ರಿಮದಿಂದ ಅಹಲ್ಯೆಯನ್ನು ಭೋಗಿಸಿದ ಇಂದ್ರನ ಚೋರವರ್ತನೆಯಂತೆ ಕಂಡಿತು. ಆ ಭಾವನೆ ಬಂದೊಡನೆಯೆ ತಬ್ಬಿಬ್ಬು ಆದಳು... ತಾನು ಏನೇ ಆದರೂ ಅವಕಾಶ ಕೊಡಬಾರದಿತ್ತು –ಆದರೆ ಭಕ್ತಿ, ಗೌರವಗಳು ಇರುವ ಕಡೆ ಪ್ರತಿಭಟಿಸುವುದು ಅಷ್ಟು ಸುಲಭವೆ?... ಯಾವುತ್ತೂ ಮಹಾ ಸಂಯಮಿಯಾಗಿದ್ದ ಮಾವಯ್ಯ ಈ ಹೊತ್ತು ಯಾಕೆ ಸಡಿಲಗೊಳ್ಳಬೇಕಿತ್ತು?... ಈ ತನಕ ಗತಿಸಿದ ಗಂಡನ ಬಗ್ಗೆ ತಾನು ಇರಿಸಿಕೊಂಡಿದ್ದ ಪ್ರೇಮ ಏನಾಯಿತು?... ತಪ್ಪು ಯಾರದೇ ಆದರೂ ಇನ್ನು ಮುಂದೆ ತನಗೆ ಮಾತ್ರ ಈ ಯಾತನೆಯಿಂದ, ಈ ಪಾಪಭಾವದಿಂದ

ಮುಕ್ತಿಯಿಲ್ಲ!... ಹೀಗೆ ಏನೇನೋ ಗೋಜಲು... ದುರ್ಗಮವಾದ ಅರಣ್ಯದಲ್ಲಿ ದಿಕ್ಕು ತಪ್ಪಿದ ಭಾವನೆ... ಮನಸ್ಸು ಅಷ್ಟು ದೂರ ಸಾಗಿ ಮುಂದೆ ಆಲೋಚನೆ ಮಾಡಲು ಅಸಮರ್ಥವಾಗಿ ತಟಸ್ಥವಾಯಿತು... ಆದರೂ ಎಲ್ಲೋ ಆಳದಲ್ಲಿ ಆ ನಾಶಬಾಯಿ ಲಕ್ಷಮ್ಮನಂಥವರು ಆಡಿದ ಮಾತೇ ನಿಜುವಾಗಬೇಕೆ?– ಎಂದು ಪರಿತಪಿಸಿದಳು. ಅವಳ ಬಾಯಲ್ಲಿ ಮತ್ತಿ ಇದೆ ಎನ್ನುತ್ತಾರೆ ಜನ. ಇರಬಹುದೆ?...

ಈ ಒಳಗುದಿಯಲ್ಲೆ ಆ ರಾತ್ರಿ ಕಳೆದು ಬೆಳಗಾಗುತ್ತಿರುವಂತೆ ನೆರೆಮನೆಯ ವೆಂಕಣ್ಣ ಜೋಯಿಸರ ಮನೆಯೊಳಗಿನಿಂದ ಅವರು ಬಾಲಕರಿಗೆ ಹೇಳಿಕೊಡುತ್ತಿದ್ದ ವೇದಪಾಠ ಗಾಳಿಯಲ್ಲಿ ತೇಳಿಬರುತ್ತಿತ್ತು. ಯಜುರ್ವೇದದ ಮಂತ್ರ. ರುದ್ರನನ್ನು ಕುರಿತದ್ದು ಎಂದು ತನ್ನ ಪತಿ ಹೇಳುತ್ತಿದ್ದ ನೆನಪು. ಒಮ್ಮೆ ಗುರುಗಳು ಹೇಳಿಕೊಟ್ಟ ವೇದವಾಕ್ಯವನ್ನು, ಬಾಯಿ ನೆನೆಯಲಿ, ಜ್ಞಾಪಕಕ್ಕೆ ಬರಲಿ, ಎಂದು ಬಾಲಕರು ಎರಡು ಸಲ ತಮಗೆ ತಾವೇ ಹೇಳಿಕೊಳ್ಳುತ್ತ ಅಭ್ಯಾಸ ಮಾಡುತ್ತಿದ್ದರು... ಬಾಲಕರ ತಂಡ ಎರಡು ಗುಂಪಾಗಿ ಒಂದು ಗುಂಪಾದ ನಂತರ ಇನ್ನೊಂದು ಗುಂಪು ಮಂತ್ರವನ್ನು ಬಿಡಿಬಿಡಯಾಗಿ ಘೋಷಿಸುತ್ತಿತ್ತು:

ಪ್ರತಿ ಪೂರುಷಮೇಕ ಕಪಾಲಾನ್ನಿರ್ವಪತಿ (ಎರಡು ಬಾರಿ)

–ಮೊದಲನೆಯ ಗುಂಪು (ಬಹುಶಃ ಹತ್ತು ಅಥವಾ ಹದಿನೈದು ಬಾಲಕರ ಗಡವೇ ಸೇರಿರಬೇಕು!) ಏಕಕಂಠದಲ್ಲಿ ಸುಸ್ವರವಾಗಿ ಘೋಷಿಸುತ್ತಿತ್ತು.

ಅನಂತರ ಎರಡನೆಯ ಗುಂಪು ವೇದಮಂತ್ರದ ಇನ್ನೊಂದು ವಾಕ್ಯವನ್ನು,

ಜಾತಾ ಏವ ಪ್ರಜಾರುದ್ರಾನ್ನಿರವದಯತೇ

ಎಂದು ಅಷ್ಟೆ ಸ್ವರಹಿತ ಏಕಕಂಠದಿಂದ ಎರಡು ಸಲ ತಾನೂ ಘೋಷಿಸಿತು.

ಪುನಃ ಮೊದಲನೆಯ ಗುಂಪು–

ಏಕ ಮತಿ ರಿಕ್ತಂ

ಎಂದರೆ, ಎರಡನೆಯ ಗುಂಪು

ಆನಿಷ್ಯಮಾಣಾ ಏವ ಪ್ರಜಾರುದ್ರಾನ್ನಿರವದಯತೇ

ಎಂದು ಘೋಷಿಸುತ್ತಿತ್ತು....

–ವೇದಮಂತ್ರವು ಹೀಗೆ ಸುಶ್ರಾವ್ಯವಾಗಿ ಬಾಲಕರ 'ಪಂಚಾರಿ'ಯ ಅಭ್ಯಸರೂಪದಲ್ಲಿ ತೇಲಿಬರುವಾಗ, ತನ್ನ ತೌರೂರು ರುದ್ರಪಟ್ಟಣ ಹಾಗೂ ಸಮೀಪದ ಬಸವಾಪಟ್ಟಣಗಳಲ್ಲಿ ಮತ್ತು ಇದೇ ದರುಮನಹಳ್ಳಿಯಲ್ಲಿ ಯಾವುದಾದರೂ ವಿಶಿಷ್ಟ ಶುಭಕಾರ್ಯ ನಡೆದು ಭೋಜನಾನಂತರ ತಾಂಬೂಲ ಸವಿಯುವಾಗ ಶ್ರೋತ್ರಿಯ ಬ್ರಾಹ್ಮಣಸಮೂಹವು ಇಂತಹ ವೇದಮಂತ್ರಗಳನ್ನು

ಸ್ವರಪೂರ್ವಕ ಸೊಗಸುಗಾರಿಕೆಯಿಂದ ಉಚ್ಚರಿಸುವುದನ್ನು ರುಕ್ಮಿಣಿಯು ತಲೆದೂಗುತ್ತ ಜ್ಞಾಪಿಸಿಕೊಂಡಳು... ಕೂಡಲೆ, ಈ ವೇದಮಂತ್ರಗಳನ್ನು ತನ್ನಂತಹ ಸ್ತ್ರೀಯರಿಗೆ ಯಾಕೆ ಕಲಿಸದೇ ಹೋದರು–? ನಮ್ಮ ಕಂಠದಿಂದ ಈ ಮಂತ್ರಗಳು ಇನ್ನೂ ಇಂಪಾಗಿ ಹೊಮ್ಮುತ್ತಿದ್ದವೊ ಏನೊ, ಎಂದು ತರ್ಕಿಸಿದಳು.

## ೧೮

ಬಿಚ್ಚಿಹೋದ ಕಚ್ಚೆಯನ್ನು ಸರಿಪಡಿಸಿಕೊಳ್ಳುತ್ತ ರುಕ್ಮಿಣಿಯ ಕೋಣೆಯಿಂದ ಹೊರನಡೆದ ಕೃಷ್ಣಶಾಸ್ತ್ರಿಗಳು ಬಿಚ್ಚಿಹೋದ ತಮ್ಮ ಸಂಯಮದ ಗಂಟನ್ನು ಮತ್ತೊಮ್ಮೆ ಸರಿಪಡಿಸುವ ಯತ್ನದಲ್ಲೆ ಇಡೀ ರಾತ್ರಿಯನ್ನು ಕಳೆದರು. ನಾನು ಎಂಥ ಪಾಪ ಮಾಡಿದೆ, ಎಂಥ ಪಾಪ ಮಾಡಿದೆ– ಎಂದು ಹಲುಬುತ್ತ ಕಣ್ಣೀರಿಟ್ಟರು. ಒಂದು ಪಕ್ಕದಿಂದ ಇನ್ನೊಂದು ಪಕ್ಕಕ್ಕೆ ಹೊರಳುವರು. ಎದ್ದು ಕೂರುವರು. ಮಲಗುವರು. ಏಳುವರು. ಮತ್ತೆ ಮಲಗುವರು... ಉರಿ, ಉರಿ, ಉರಿ... ಪಶ್ಚಾತ್ತಾಪದ ಬೆಂಕಿಯಲ್ಲಿ ಬೇಯುತ್ತಿದ್ದರು...ರುಕ್ಮಿಣಿ ತನ್ನ ಮಗನ ಹೆಂಡತಿ! ಮಗಳಿಗೆ ಸಮಾನವಾದವಳು!– ಛೆ, ಎಂಥ ಹೇಸಿಗೆ ಕೆಲಸ ಮಾಡಿಬಿಟ್ಟೆ?... ಛೆ, ಛೆ, ಛೇ ಐವತ್ತು ವರ್ಷಗಳಿಗೂ ಮಿಕ್ಕಿದ ನನ್ನ ಸಂಯಮದ ಪುಣ್ಯವನ್ನು ಕೇವಲ ಕ್ಷಣಗಳ ಲಾಲಸೆಗೆ ಕ್ಷಯಮಾಡಿದೆನಲ್ಲ?– ಎಂಥ ಅವಿವೇಕ?... ಅಯ್ಯೊ, ಒಟ್ಟಿನಲ್ಲಿ ದೈವ ಕೈಬಿಟ್ಟಿತು; ಅದರಿಂದಲೇ ಮನಸ್ಸು ಕೈಕೊಟ್ಟಿತು. ಹೆಂಡತಿ ಸತ್ತ ದಿನವೇ ನನ್ನ ಕಾಮವೂ ಸತ್ತುಹೋಯಿತೆಂದೂ ನಾನು ಅತಿಶಯವಾಗಿ ಮೋಹಿಸಿದ್ದ ಆ ಪಾರ್ಥಿ ಶರೀರವನ್ನು ಕಟ್ಟಿಗೆಯೊಟ್ಟಿ ಸ್ಮಶಾನದಲ್ಲಿ ಸುಟ್ಟ ದಿನವೇ ನನ್ನಲ್ಲಿ ತುಂಬಿದ್ದ ಕಾಮವನ್ನೂ ಸುಟ್ಟೆನೆಂದು ಭ್ರಮಿಸಿದ್ದೆನಲ್ಲ?... ಶಿವ ಸುಟ್ಟರೂ ಕಾಮದೇವ ಅನಂಗನಾದನೆಂದು ಪುರಾಣಗಳು ಸಾರುತ್ತವೆ... ನಾನು ಆ ದಿನವೇ ನನ್ನ ವಿಷಯಾಸಕ್ತಿಗಳನ್ನೆಲ್ಲ ಸುಟ್ಟೆನೆಂದು ವಿಜೃಂಭಿಸಿದ್ದು ಹುಸಿಯಾಯಿತಲ್ಲ!... ಇನ್ನು ಯಾವುದಕ್ಕಾಗಿ ಅಹಂಕಾರ ಪಡಬೇಕು?– ಎಂದುಕೊಳ್ಳುತ್ತಿರುವಂತೆಯೆ, ಇನ್ನು ಯಾತಕ್ಕಾಗಿಯಾದರೂ ನಾನು ಬದುಕಬೇಕು ಎಂಬ ಭಾವನೆಯೂ ಸುಳಿದು ಹೋಯಿತು. ಛೆ, ಛೆ, ಆತ್ಮಹತ್ಯೆ ಮಹಾಪಾತಕ. ಒಂದು ಪಾಪದಿಂದ ಇನ್ನೊಂದು ಪಾಪಕ್ಕೆ ಜಿಗಿಯುವುದೆ?...

ಎದ್ದರು. ಒಳಗೊಳಗೇ ಅಳುತ್ತ ತೋಟಕ್ಕೆ ನಡೆದರು. ಮೊದಲು ಹೆಂಡತಿಯನ್ನು ಸುಟ್ಟ ಜಾಗದಲ್ಲಿ ಏಳಿಸಿದ್ದ ಮಲ್ಲಿಗೆ ವನದ ಮುಂದೆ ನಿಂತು ಗೋಳುಗರೆದರು... ತಮಗೆ ವಾಂತಿ, ಭೇದಿ ಆದಾಗ, ತಾವು ಬೇಡ ಬೇಡ

ಎಂದರೂ ಕೇಳದೆ ತಮ್ಮ ಶುಶ್ರೂಷೆಗೆ ನಡುಕಟ್ಟಿ ನಿಂತು, ತಾವು ಮಾಡಿದ ವಾಂತಿ, ಭೇದಿಗಳನ್ನು ಸ್ವಲ್ಪವೂ ಬೇಸರಿಸದೆ ತಾನೇ ತನ್ನ ಕಯ್ಯಿಂದ ಬಳಿದು, ತಮ್ಮನ್ನು ಬದುಕಿಸಿ, ಅನಂತರ ತಾನೇ ಕಾಲಾರಾ ಪಿಡುಗಿಗೆ ತುತ್ತಾದುದನ್ನು ನೆನೆನೆನೆದು ಅತ್ತರು... ನೀನಿದ್ದರೆ ಹೀಗಾಗುತ್ತಿತ್ತೆ?– ಧರ್ಮದ ಬೇಲಿಯಾಗಿ ನೀನು ಇಂಥ ಅವಿವೇಕದಿಂದ ನನ್ನನ್ನು ರಕ್ಷಿಸುತ್ತಿದೆಯಲ್ಲವೆ?...

ಕೃಷ್ಣಶಾಸ್ತ್ರಿಗಳ ಅಂತರಂಗದ ಕ್ಷೋಭೆಯಲ್ಲಿ ಹಿಂದಿನದೊಂದು ಸಂಗತಿ ಸ್ಫುಟಗೊಂಡಿತು: ಹೆಂಡತಿಯ ಮೊದಲ ಬಾಣಂತಿತನ. ಒಂದು ತಿಂಗಳು ಬದುಕಿ ಹೆಣ್ಣು ಮಗು ತೀರಿಕೊಂಡಿತ್ತು. ಅದಕ್ಕೆ ಸಂಸ್ಕಾರ ಮಾಡಲು ನಾನು ನಮ್ಮ ತೋಟಕ್ಕೆ ಹೋದಾಗ ಅನ್ಯಜಾತಿಯವರ ಒಂದು ಕೂಸೂ ಅದೇ ಕಾಲಕ್ಕೆ ಮೃತ್ಯವಶವಾಗಿ, ಅದನ್ನೂ ನಮ್ಮ ತೋಟಕ್ಕೆ ಸಮೀಪದ ಹೊಲದಲ್ಲಿ ಸಂಸ್ಕಾರ ಮಾಡಲು ತಂದಿದ್ದರು. ಹಸುಗೂಸುಗಳು ತೀರಿಕೊಂಡಾಗ ಅನ್ಯಜಾತಿಯವರೆಲ್ಲ ಅನುಸರಿಸುವ ಪದ್ಧತಿಯಂತೆ, ಹೊಲದಲ್ಲಿದ್ದ ಹುತ್ತವನ್ನು ಬಗೆದು ಅವರು ತಮ್ಮ ಕೂಸನ್ನು ಮಲಗಿಸಲು ಹೋದಾಗ, ನಾಗರಹಾವು ಹುತ್ತದಾಚೆಗೆ ಹೊರಬಂದು ಹೆಡೆ ಬಿಚ್ಚಿತು. ತಕ್ಷಣ ಪುರೋಹಿತ ವೆಂಕಣ್ಣ ಜೋಯಿಸರು ಬೇಡ ಬೇಡವೆಂದರೂ ಆ ಹಾವನ್ನು ಕೋಲಿನಿಂದ ಬಡಿದು ಕೊಂದು, ಸತ್ತ ಕೂಸನ್ನು ಹುತ್ತದೊಳಗೆ ಮಲಗಿಸಿ, ಹುತ್ತದ ಮಣ್ಣಿನಿಂದ ಮುಚ್ಚಿ, ಅದರ ಮೇಲೆ ಕಾರೆ ಮುಳ್ಳನ್ನು ಹೊದಿಸಿ, ಮೇಲೊಂದು ದೊಡ್ಡ ಕಲ್ಲನ್ನಿಟ್ಟು, ಆ ಜನ ತಮ್ಮ ಕೂಸಿನ ಸಂಸ್ಕಾರವನ್ನು ಆ ರೀತಿಯಲ್ಲಿ ಪೂರೈಸಿದ್ದರು!...

ಮನೆಗೆ ಹಿಂದಿರುಗಿದಾಗ ಈ ವಿಷಯವನ್ನು ಪ್ರಾಸಂಗಿಕವಾಗಿ ಹೆಂಡತಿಗೆ ತಿಳಿಸಿದಾಗ ನಾಗು ಕೇಳಿದ್ದಳು...

"ಕೂಸನ್ನು ಹುತ್ತದೊಳಗೆ ಯಾಕೆ ಹಾಕ್ತಾರೆ?"

"ಒಂದೆರಡು ತಿಂಗಳಿನ ಕೂಸು ಇನ್ನೂ ಗರ್ಭದಲ್ಲಿರೊ ಪಿಂಡದ ಹಾಗೆ ಕೈ ಕಾಲು ಮುದುರಿಕೊಂಡಿರುತ್ತೆ – ಹುತ್ತದೊಳಗೆ ಹಾವು ಸಿಂಬಿ ಸುತ್ತಿ ಮಲಗಿರುತ್ತಲ್ಲ, ಹಾಗೆ!... ಹುತ್ತದ ಕತ್ತಲಿಗೂ ತಾಯಿಯ ಗರ್ಭಕೋಶದ ಕತ್ತಲಿಗೂ ಸಾಮ್ಯವಿದೆ. ಅದರಂತೆ ಹಾವು, ಎಳೆಕೂಸು ಎರಡೂ ಸಿಂಬಿ ಸುತ್ತಿ ಮಲಗುತ್ತವೆ; ಹಾಲು ಕುಡಿಯುತ್ತವೆ... ಅವೆರಡಕ್ಕೂ ಇಷ್ಟು ಸಾಮ್ಯವಿರೋದರಿಂದ ಪ್ರಾಯಶಃ ಈ ಪದ್ಧತಿಯನ್ನು ಅನುಸರಿಸ್ತಾರೆ–" ಎಂದು ಹೇಳಿದ ನೆನಪು...

"ಇದಕ್ಕೆ ಇರಬೇಕು, ಒಂದು ಸಲ ಬುಂಡಮ್ಮ ಯಾವುದೊ ಮಾತಿಗೆ 'ಹುತ್ತದ ಮೊಗ ಹ್ವಟ್ಟೆ ವಳುಗೆ' ಅಂದಿದ್ದಳು!" ಎಂದು ಉದ್ಗರಿಸಿದ ನಾಗು,

"ಅದೆಲ್ಲ ಸರಿ, ಆದರೆ ನಾವೇನು ಪಾಪ ಮಾಡಿದೆವು ಎಂದು ನಮ್ಮ ಕಂದನ್ನ ಕಿತ್ತುಕೊಂಡಿತು ವಿಧಿ?" ಎಂದು ಕಂಬನಿಗರೆದಿದ್ದಳು...

ಮೊದಲ ಶಿಶು ಮರಣ ಹೊಂದಿದ್ದು ನಾಗವೇಣಿಯ ಆರೋಗ್ಯ ಮೇಲೆ ಭಯಂಕರ ಪರಿಣಾಮ ಬೀರಿತು. ಅತಿಯಾಗಿ ಕೊರಗಿದ ಪರಿಣಾಮವಾಗಿ, ಅವಳಿಗೆ ಬಾಣಂತಿ ನಂಜಾಯಿತು. ಗುಣವಾಗಲು ಮೈಸೂರಿನ ಆಸ್ಪತ್ರೆಯನ್ನೆ ಸೇರಬೇಕಾಯಿತು. ಗುಣವಾಗಿ ಮನೆಗೆ ಮರಳುವಾಗ ತೌರಿನಿಂದ ತಂಗಿ ಶಕೂ ಕೂಡ ಬಂದಿದ್ದಳು. ಶಕುಂತಲ ಚೆಲ್ಲಾಟದ ಹುಡುಗಿಯಲ್ಲದಿದ್ದರೂ ಇಪ್ಪತ್ತು ಇಪ್ಪತ್ತೊಂದರ ಉಕ್ಕುವ ಹರೆಯದ ಯುವತಿ. ನನಗೂ ಒಳ್ಳೆಯ ಪ್ರಾಯ. ಅವಳು ಮನೆಗೆ ಮರಳಿ ಇನ್ನೂ ನೆಟ್ಟಗೆ ಹದಿನೈದು ದಿನಗಳೂ ಕಳೆದಿಲ್ಲ. ನಾಗು, ರಾತ್ರಿಯ ವೇಳೆ ನನ್ನನ್ನು ಗೋಪ್ಯವಾಗಿ ಕರೆದು "ಶಕೂ ನಾಳೆ ಅವಳ ಊರು ಅಗ್ರಹಾರಕ್ಕೆ ಹೋಗ್ತಾಳೆ" ಎಂದಾಗ, ನಾನು ಬೆರಗಾಗಿ, "ಯಾಕೆ?" ಎಂದೆ. "ಬೆಂಕಿ, ಬೆಣ್ಣೆ ಎರಡೂ ಒಂದೇ ಸ್ಥಳದಲ್ಲಿ ಇರುವುದು ಯುಕ್ತವಲ್ಲ. ನಾಳೆ ಗಾಡಿ ಕಟ್ಟಿಸಿ, ಮೊದಲು ಅವಳನ್ನು ಸಾಗಹಾಕಿ. "ಕಡ್ಡಿ ಮುರಿದಂತೆ ಹೇಳಿದ್ದಳು. ಆ ಪ್ರಕಾರ ಮಾರನೆ ದಿನವೆ ಶಕುಂತಲ ಅವಳ ಊರಿಗೆ ಪ್ರಯಾಣ ಬೆಳಸಿದ್ದಳು...

ನಾಗವೇಣಿ ಹಾಗೆ ಮಾಡಿದ್ದು ತಪ್ಪು ಎಂದು ಹೇಳಲು ನನಗೆ ಯಾವ ಧೈರ್ಯ?– ಯಾರಿಗೆ ಗೊತ್ತು?– ಇನ್ನು ಕೆಲಕಾಲ ಶಕೂ ನಮ್ಮೊಡನೆಯೆ ಇದ್ದಿದ್ದರೆ, ಏನಾಗುತ್ತಿತ್ತೊ?... ಈ ಇಳಿವಯಸ್ಸಿನಲ್ಲೆ ಎಡವಿದ ನಾನು, ಆ ಪ್ರಾಯದಲ್ಲಿ ಎಡವುತ್ತಿರಲಿಲ್ಲ ಎಂದು ಯಾವ ಧೈರ್ಯದಿಂದ ಹೇಳಲಿ?... ನಾಗು, ಧರ್ಮದೇವತೆಯಾಗಿ ಆಗ ನನ್ನನ್ನು ನೀನು ಕಾಪಾಡಿದೆ. ಇಂದು ನೀನು ಬದುಕಿದ್ದಲ್ಲಿ ನಿಶ್ಚಯವಾಗಿಯೂ ಈ ಪತನದಿಂದ ನನ್ನನ್ನು ಪಾರು ಮಾಡುತ್ತಿದ್ದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ನಾಗು, ನಿನಗೆ ಪ್ರಮಾಣ ಮಾಡಿ ಹೇಳ್ತೀನೆ: "ಇನ್ನು ಮುಂದೆ ಎಂದೆಂದೂ ಹೀಗೆ ತಪ್ಪು ಮಾಡಲ್ಲ, ಖಂಡಿತ ಮಾಡಲ್ಲ. ದಯಮಾಡಿ ನನ್ನನ್ನು ನಂಬು" –ಫಟ್ಟನೆ ಚಾಟಿ ಏಟಿನಂತೆ ಯಾರೊ ಅಂದರು: ಊರೆಲ್ಲ ಸೂರೆಹೋದನಂತರ...! ಅದು ತಮ್ಮ ಹೆಂಡತಿಯ ಧ್ವನಿಯೊ ಅಥವಾ ತಮ್ಮೊಳಗಿನಿಂದಲೆ ಮೂಡಿದ ಮಾತೊ?

ಕಣ್ಣೀರು ಒರೆಸಿಕೊಳ್ಳುತ್ತ, ಅಲ್ಲಿಂದ ಎದ್ದರು. ಮಗನನ್ನು ಸುಟ್ಟ ಜಾಗಕ್ಕೆ ಹೋದರು. ಕಣ್ಣೀರು ಮತ್ತೆ ಚೆಲ್ಲನೆ ಒಡೆಯಿತು. ಎರಡು ಕೆನ್ನೆಗಳನ್ನೂ ಒದ್ದೆ ಮಾಡಿ ಹರಿಯಿತು... ಕಣ್ಣೀರು ಸುರಿಸುತ್ತಿರುವಂತೆಯೆ ಎಳೆಬಿಸಿಲಿಗೆ ಹಸಿರನ್ನು

ಉಕ್ಕಿಸುವ ಸಂಪಿಗೆ ಸಸಿಯನ್ನು ದೃಷ್ಟಿಸುತ್ತ ಕುಳಿತರು. ತಟ್ಟನೆ ಆವೇಶ ಬಂದವರಂತೆ, "ಕಂದಾ, ನಿನಗೆ ಪೂರಾ ಅನ್ಯಾಯ ಮಾಡಿದೆನೊ. ಮಹಾಪಾಪಿ ನಾನು. ಮಹಾಪಾಪಿ... ಕ್ಷಮಿಸು ಎಂದು ಯಾವ ಬಾಯಿಂದ ಕೇಳಲೊ?... ಕೋಟಿ ಕೋಟಿ ಜನ್ಮ ಕಳೆದರೂ ಈ ಪಾಪದಿಂದ ನನಗೆ ಮುಕ್ತಿಯಿಲ್ಲ... ಇಲ್ಲ... ಇಲ್ಲವೇ ಇಲ್ಲ" ಎಂದು ಎದೆ ಬಡಿದುಕೊಳ್ಳುತ್ತ ಸಂಪಿಗೆ ಸಸಿಯೆದಿರು ಮಣ್ಣಿನಲ್ಲಿ ಹೊರಳಾಡಿದರು...

ಅಷ್ಟರಲ್ಲಿ ತೋಟದೊಳಗೆ ಬಂದ ವೆಂಕಣ್ಣ ಜೋಯಿಸರು, ಶಾಸ್ತ್ರಿಗಳ ಅವಸ್ಥೆಯನ್ನು ದೂರದಿಂದಲೊ ನೋಡಿ ತವಕಗೊಂಡವಾರಾಗಿ,

"ಶಾಸ್ತ್ರಿಗಳೆ, ಶಾಸ್ತ್ರಿಗಳೆ– ಇದೇನು ನೀವು ಮಾಡ್ತಿರೋದು?..." ಎನ್ನುತ್ತ ಓಡಿ ಬಂದು ಅವರನ್ನು ಎತ್ತಿ ಕೂರಿಸುತ್ತ, "ಮಹಾಸಂಯಮಿ ನಮ್ಮ ಊರಿನಲ್ಲೆಲ್ಲ, ಎಂದು ಹೆಸರಾದ ನೀವೇ ಹೀಗೆ ಸಂಯಮ ಕಳೆದುಕೊಂಡರೆ, ನಮ್ಮಂಥವರ ಪಾಡೇನು?... ನೀವು ಕಂಡ ಹಾಗೆ, ನಾನೂ ಮೂರು ಗಂಡು ಮಕ್ಕಳನ್ನು ಕಳೆದುಕೊಂಡು ಕೂತಿದೀನಿ. ಪುತ್ರಶೋಖಂ ನಿರಂತರಂ ಎನ್ನುವ ಮಾತು ಸುಳ್ಳಲ್ಲ. ಆದರೂ, ಮಗ ಸತ್ತು ಇಷ್ಟು ಕಾಲ ಕಳೆದ ಬಳಿಕವೂ ಹೀಗೆ ನೀವು ಹುಚ್ಚಾಪಟ್ಟೆ ಆಡುವುದು ತರವೆ?" ಎಂದು ಸಂತೈಸಲು ಯತ್ನಿಸಿದರು.

ಶಾಸ್ತ್ರಿಗಳು ವೆಂಕಣ್ಣ ಜೋಯಿಸರನ್ನು ತಬ್ಬಿ,

"ವೆಂಕಣ್ಣ, ನನ್ನ ಯಾತನೆ ನಿಮಗೆ ಹೇಗೆ ತಿಳಿಯಬೇಕು?" ಎಂದು ಬಿಕ್ಕಿದರು. ಅದಕ್ಕೆ ಜೋಯಿಸರು,

"ನಾನೂ ಕೂಡ ನೊಂದಿರುವವನೆ, ಕಿಟ್ಟಣ್ಣ... ನಿಮ್ಮ ದುಃಖ ನನಗೂ ಅರ್ಥವಾಗುತ್ತೆ, ಆದರೇನು ಮಾಡುವುದು? ನಮ್ಮ ಕೈಲೇನಿದೆ?– ನಮ್ಮ ಬದುಕು ನಡೆಯವವರೆಗೂ ನಾಣ್ಯ. ಅದು ನಿಮಗೂ ಗೊತ್ತಿಲ್ಲವೆ?– ಸಮಾಧಾನ ತಂದುಕೊಳ್ಳಿ"– ಎಂದು ತತ್ತ್ವ ಬೋಧೆ ಮಾಡಿದರು.

ಅರ್ಧ ತಾಸು ಕಳೆದಿರಬಹುದು. ಥಟ್ಟನೆ ಯಾವುದೋ ನಿರ್ಧಾರಕ್ಕೆ ಬಂದಂತೆ ಕೃಷ್ಣಶಾಸ್ತ್ರಿಗಳು ವೆಂಕಣ್ಣ ಜೋಯಿಸರ ತೆಕ್ಕೆಯಿಂದ ಬಿಡಿಸಿಕೊಳ್ಳುತ್ತ ಮೇಲೆದ್ದರು. ಹರಬಿಗಳನ್ನು ಎರಡು ಕೈಗಳಲ್ಲೂ ಎತ್ತಿಹಿಡಿದರು. ಮೌನವಾಗಿ ಕೊಳದಲ್ಲಿಗೆ ನಡೆದರು. ಎರಡು ಹರಬಿಗಳಿಗೂ ನೀರು ತುಂಬಿದರು. ಹೊಸದಾಗಿ ನೆಟ್ಟ ಅಡಿಕೆ ಸಸಿಗಳಿಗೆ ನೀರೆರೆಯಲು ಪ್ರಾರಂಭಿಸಿದರು. ಕೆಲಕಾಲ ಅವರನ್ನೇ ಎವೆಯಿಕ್ಕದೆ, ಗೌರವಪೂರ್ಣವಾಗಿ ನೋಡುತ್ತಿದ್ದು, 'ವಿಚಿತ್ರ ಪುರುಷ' ಎಂದುಕೊಳ್ಳುತ್ತ, ವೆಂಕಣ್ಣ ಜೋಯಿಸರು ತೋಟದಿಂದ ಹೊರಟವರು

ಬಾಯಾಡಲೆಂದು ಹತ್ತಿರದ ಹಂಬಿನಿಂದ ನಾಲ್ಕಾರು ವೀಳೆಯದೆಲೆಗಳನ್ನು ಬಿಡಿಸಿಕೊಂಡರು.

ಅಡಿಕೆ ಸಸಿಗಳಿಗೆಲ್ಲ ಒಬ್ಬರೆ ನೀರುಣಿಸಿ ಕೃಷ್ಣಶಾಸ್ತ್ರಿಗಳು ದೇಹಭಾಧೆಯನ್ನು ತೀರಿಸಿ, ಹಲ್ಲು ತಿಕ್ಕಿ ಮುಖಮಾರ್ಜನಮಾಡಿ ಹರಬಿಯಿಂದ ಕೊಳದ ನೀರನ್ನು ಎತ್ತಿ ಎತ್ತಿ ತಲೆಯ ಮೇಲೆ ಸುರವುಕೊಂಡರು. ಆತ್ಮಹತ್ಯೆಯ ಯೋಚನೆ ಸುಳಿಯಿತು. ಕೊಳಕ್ಕೆ ಬೀಳಲು ಹವಣಿಸಿದರು. ತಟ್ಟನೆ ಸರಸಿಯ ನೆನಪು ಆಯಿತು. ಆ ಕಂದನನ್ನು ತಬ್ಬಲಿ ಮಾಡಿ ಹೋಗುವುದೆ? ಎಂಬ ಚಿಂತೆ ಕವಿದು, ಹಾಗೆಯೇ ಮೆಟ್ಟಲಿನ ಕಲ್ಲಿನ ಮೇಲೆ ಒರಗಿದರು. ಬ್ರಹ್ಮಪಿಶಾಚಿ ಯಾಗುವೆನೆಂಬ ಭಯವೂ ಸುಳಿಯದಿರಲಿಲ್ಲ.

ತೋಟದೊಳಗೆ ಲಕ್ಕ, ಶಾಸ್ತ್ರಿಗಳನ್ನು ಸಮೀಪಿಸಿದವನೆ,

"ಯಾಕೆ ಸೋಮಿ, ಇಂಗೆ ಕುಂತುಬುಟ್ರಿ?– ಮದ್ದಿನ್ನ ಆಗ್ಲೆ ದಾಟೋಗದೆ?" ಎಂದು ಕೇಳಿದವನು, "ಕೇಸವಯ್ಯಾರ ತ್ವಟಕೋಗಿದ್ದೆ" ಎಂದು ವಿವರಿಸಿ, "ಅಡಿಕೆ ಸೊಸಿಗಳ್ಗೆ ನೀರ ಆಕ್ಲಾ?" ಕೇಳಿದ.

ಬೋಡ್ಡ ಒಂದು ಹಳ್ಳಿಕುಂಚವನ್ನು ಅಟ್ಟಿಸಿಕೊಂಡು ಓಡಿತು. ಇನ್ನೇನು ಸಿಕ್ಕಿತು. ಎನ್ನುವುದರಲ್ಲಿ ಅದು ಒಂದು ಅಡಿಕೆ ಮರವನ್ನು ಹತ್ತಿಬಿಟ್ಟಿತು. ಕೈತಪ್ಪಿದ ಬೇಟೆಯಿಂದ ನಿರಾಶೆಗೊಂಡ ಬೊಡ್ಡ ಅಡಿಕೆ ಮರದ ಕೆಳಗಡೆ ನಗರುತ್ತ ನಿಂತು ಮೇಲೆ ಹೋಗಿ ಮರೆಯಾದ ಹಳ್ಳಿಕುಂಚನನ್ನೇ ತನ್ನ ದೃಷ್ಟಿಯಲ್ಲಿ ಅರಸುತ್ತಿತ್ತು.

ಶಾಸ್ತ್ರಿಗಳು ತನ್ನ ಮಾತಿಗೆ ಉತ್ತರ ಕೊಡದಿರಲು, ಲ್ಕಕ ಮತ್ತೊಮ್ಮೆ ಅವರನ್ನು ಸಮೀಪಿಸಿ ಕೇಳಿದ:

"ಸೋಸಿಗಳ್ಗೆ ನೀರ ಆಕ್ಲಾ, ಅಯ್ಯಾರೆ?"

"ಬೇಡ. ಎಲ್ಲಕ್ಕೂ ನಾನೇ ಹಾಕಿದ್ದೀನಿ" ಎನ್ನುತ್ತ ನಿಧಾನವಾಗಿ ಎದ್ದು, ಮಣ್ಣಿನಲ್ಲಿ ಹೊರಳಾಡಿದ್ದರಿಂದ ಮೈಲಿಗೆಯಾಯಿತೆಂದು ಇನ್ನೊಮ್ಮೆ ತಲೆಯಿಂದ ನೀರು ಸುರುವಿಕೊಂಡು, ಒದ್ದೆ ಪಂಚೆಯಲ್ಲೆ ಶಾಸ್ತ್ರಿಗಳು ಮನೆಯ ಕಡೆ ಹೊರಟರು. ಮೈ ಮೇಲೆ ಹೊದಿಯುವ ವಸ್ತ್ರಗಳನ್ನು ನೀರಿಗೆ ಅದ್ದಿ ಹಿಂಡಿ, ಅದನ್ನು ಮಡಿಕೆ ಮಾಡಿ ತಲೆಯ ಮೇಲೆ ಇಟ್ಟಿದ್ದರು. ಕೈಯಲ್ಲಿ ಮಡಿನೀರು ತುಂಬಿದ ತಾಮ್ರದ ಚೆಂಬು.

ಬೊಡ್ಡನೊಡನೆ ಲಕ್ಕನೂ ಅವರನ್ನು ಹಿಂಬಾಲಿಸಿದ. ಶಾಸ್ತ್ರಿಗಳ ಮಾತು ಯಾವತ್ತೂ ಮಿತ. ಇದು ಲಕ್ಕನಿಗೂ ತಿಳಿದ ವಿಷಯವೆ. ಹಾಗಿದ್ದೂ ಒಮ್ಮೊಮ್ಮೆ ತನ್ನೊಡನೆ ಯಾವ ವಿಚಾರವನ್ನಾದರೂ ಎತ್ತಿ ಮಾತಾಡಿಸಿ ತಾನು ಮಾತಾಡುವಂತೆ

ಹಚ್ಚಬೇಕು! ಆದರೆ ಈ ದಿನ ಅವರು ತುಟಿ ಪಿಟಕ್ಕೆನ್ನದ ಮೌನವಾಗಿ ಸಾಗುತ್ತಿದ್ದುದು ಲಕ್ಕನಿಗೆ ಅಚ್ಚರಿ ತಂದಿತ್ತು.

"ಇವೊತ್ತು ಈ ಅಯ್ಯನೋರ ಚರ್ಯೇನೆ ಒಂದು ತರಾ ಆಗದೆ. ಇವುರ ಅಟ್ಟೀಲಿ ಯಾನೊ ಯತ್ವಾಸ ನಡದಿರಬೈದು. ಅತ್ವಾ, ಭೀಮನಳ್ಳಿಗೆ ವೋಗಿರೋ ಇವರ ಎಣ್ಣು ಇನ್ನೂ ಬರನಿಲ್ಲ ಅನ್ನಾ ಬ್ಯಾಸರವೊ?" ಅಂತ ತನ್ನ ಮನಸ್ಸಿನಾಗೆ ಅಂದುಕೊತ್ತ ಅಪರ ಮನೆಗಂಟೂ ಇಂಬಾಲಿಸಿದೋನು,

"ಇನ್ನು ನಾ ಬತ್ತೀನಿ ಕನ್ರಯ್ಯ" ಅಂತಯೋಳಿ, ಲಕ್ಕ ಹೊಲಗೇರಿ ಕಡೀಕೆ ನಡುದ...

* * * *

ಶಾಸ್ತ್ರಿಗಳು ಕೈಕಾಲು ತೊಳೆಯಲು ಮನೆಯ ಅಂಗಳಕ್ಕೆ ಇಳಿದರು ರುಕ್ಮಿಣಿಯ ಒಳಗಿನಿಂದ ಹಿತ್ತಾಳೆ ತಂಬಿಕೆಯಲ್ಲಿ ನೀರು ತಂದಳು.

"ಅಲ್ಲಿ ಇಟ್ಟು ಹೋಗು."

ಯಾರೊ ಅಪರಿಚಿತರನ್ನು ಉದ್ದೇಶಿಸಿ ಹೇಳುವಂತೆ ಶಾಸ್ತ್ರಿಗಳು ನುಡಿದಿದ್ದರು.

ಕೈಲಿದ್ದ ತಂಬಿಗೆಯನ್ನು ಕಟ್ಟೆಯ ಮೇಲೆ ಇಡುವಾಗ, ಮನಃಕ್ಲೇಶದಿಂದ ಜರ್ಝರಿತವಾದ ಅವರ ಮುಖವನ್ನು ಗಮನಿಸದೆ ರುಕ್ಮಿಣಿ ಒಳ ನಡೆದಳು.

ಇಷ್ಟು ದಿನ ಕೈ ಕಾಲು ತೊಳೆದು, ಮನೆಯಲ್ಲಿ ಒದ್ದೆಯಾದ ಬಟ್ಟೆಯನ್ನು ಕಳಚಿ, ಮಡಿಪಂಚೆಯನ್ನೊ ರೇಶಿಮೆ ಮಗುಟವನ್ನೊ ಉಡುತ್ತಿದ್ದ ಶಾಸ್ತ್ರಿಗಳು ಇಂದು ಒದ್ದೆ ಬಟ್ಟೆಯಲ್ಲೆ ದೇವರ ಪೂಜೆಗೆ ಕುಳಿತರು. ರುಕ್ಮಿಣಿ ಅಭಿಷೇಕದ ಹಾಲನ್ನು ತಂದಿಟ್ಟು ದೇವರ ಬಾಗಿಲಿನಲ್ಲೆ ವಾಡಿಕೆಯಂತೆ ಶ್ರೀಗಂಧ ತೇಯುತ್ತ ಕುಳಿತಳು.

ಶಾಸ್ತ್ರಿಗಳು ಸಂಧ್ಯಾವಂದನೆ ಮಾಡಿ,
ಪರಸ್ತ್ರೀ ಸಂಗಜನಿತದೋಷವೃತ್ಯರ್ಥಂ
ಮಹಾ ಚರಿತ ದುಷ್ಕರ್ಮದೊಷನಿವೃತ್ಯರ್ಥಂ
ಮಮ ಶರೀರಶುದ್ಧ್ಯರ್ಥಂ
ಸಹಸ್ರಗಾಯತ್ತೀಜಪಂ ಕರಿಷ್ಯೇ...

–ಎಂದು ಸಂಕಲ್ಪವನ್ನು ವಟಗುಟ್ಟಿ ಗಾಯತ್ರೀ ಜಪ ಮಾಡುತ್ತ ಕುಳಿತಾಗ, ರುಕ್ಮಿಣಿಯು ಮರ್ಮಾಹತಳಾಗಿ ಗಂಧ ತೇಯುವುದನ್ನು ಅರ್ಧಕ್ಕೇ ನಿಲ್ಲಿಸಿ, ಎದ್ದು ಹೋದಳು.

ಸಹಸ್ರ ಗಾಯತ್ರೀ ಜಪ ಮುಗಿಸಿ, ಶಾಸ್ತ್ರಿಗಳು ಪೂಜೆಗೆ ಕುಳಿತರು.

ಸಾಲಿಗ್ರಾಮಗಳಿಗೆ ಕ್ಷೀರಾಭಿಷೇಕ ಮಾಡಿ, ಅನಂತರ ನೀರಿನಲ್ಲಿ ತೊಳೆದು ಮಡಿವಸ್ತ್ರದಿಂದ ಅವನ್ನು ಒರಿಸಿ ಇಟ್ಟರು. ತರುವಾಯ ರುಕ್ಮಿಣಿಯು ಅರ್ಧ ತೇಯ್ದಿದ್ದ ಗಂಧವನ್ನು ಇನ್ನೂ ಗಟ್ಟಿ ಬರುವಂತೆ ತೇಯ್ದು, ಅದನ್ನೂ ಕುಂಕುಮವನ್ನೂ ಸಾಲಿಗ್ರಾಮಗಳಿಗೂ ದೇವರ ಪಟಗಳಿಗೂ ಹಚ್ಚಿ, ರುಕ್ಮಿಣಿಯು ಹಿತ್ತಲಿನ ಹೂಗಿಡಗಳಿಂದ ಆರಿಸಿ ಬಿದಿರು ಬುಟ್ಟಿಯಲ್ಲಿ ತಂದಿಟ್ಟಿದ್ದ ಮಲ್ಲಿಗೆ, ಕೆಂಪು ದಾಸವಾಳ, ಇತ್ಯಾದಿ ಹೂಗಳನ್ನು ಧರಿಸುತ್ತ ನಾರಾಯಣಸೂಕ್ತವನ್ನು ಪಠಿಸಿದರು.

ಶಾಸ್ತ್ರಿಗಳ ಪೂಜೆ ಈ ದಿವಸ ಮಧ್ಯಾಹ್ನ ನಾಲ್ಕೂವರೆಯಾದರೂ ಮುಗಿಯಲಿಲ್ಲ. ತಾವು ಎಸಗಿದೆ ಅಪರಾಧಕ್ಕೆ ವ್ರತೋಪವಾಸಗಳಿಂದ ತಮ್ಮ ದೇಹ ದಂಡಿಸಿ ಹತೋಟಿಯಲ್ಲಿಡಬೇಕೆಂದು ಅವರು ಸಂಕಲ್ಪ ಮಾಡಿದಂತಿತ್ತು.

ರುಕ್ಮಿಣಿಯು ಕಾದು ಕಾದು ಸೊಪ್ಪಾಗಿ ಅಡಿಗೆಕೋಣೆಯಲ್ಲಿ ನೆಲದ ಮೇಲೇ ಒರಗಿ ನಿದ್ದೆ ಹೋಗಿದ್ದಳು. ಶಾಸ್ತ್ರಿಗಳು ಪೂಜೆ ಮುಗಿಸಿ ಬಂದು ನೋಡಿದವರು, ಯಾಕೆ ಎಬ್ಬಿಸಬೇಕೆಂದು ಹೊರಟುಹೋಗುವುದರಲ್ಲಿದ್ದರು. ಆದರೆ ತಮಗೇನೊ ಆಹಾರದ ಅಗತ್ಯವಿರಲಿಲ್ಲ. ಹಾಗೆಂದು ಪಾಪ ರುಕ್ಮಿಣಿಯೇಕೆ ಹಸಿದಿರಬೇಕು, ಎನ್ನಿಸಿ– "ರುಕ್ಕು–" ಎಂದು ಕರುಣೆ ತುಂಬಿದ ಸ್ವರದಲ್ಲಿ ಕೂಗಿದರು.

ರುಕ್ಮಿಣಿಯು ದಡಬಡ ಎದ್ದು ಕುಳಿತಳು. ಸೆರಗಳನ್ನು ಸರಿಪಡಿಸಿಕೊಳ್ಳುತ್ತ, "ಬೆಳಿಗ್ಗೆ ಮಾಡಿದ ಉಪ್ಪಿಟ್ಟಿದೆ" ಎಂದು ತಡವರಿಸಿದಳು. ಶಾಸ್ತ್ರಿಗಳು ಶಾಂತಸ್ವರದಲ್ಲಿ.

"ಬೇಡ, ಬೇಡ. ಇನ್ನು ಮೇಲೆ ನಾನು ಬೆಳಗಿನ ಫಳಾರ ಮಾಡಲ್ಲ. ಮಧ್ಯಾಹ್ನ ಒಂದು ಊಟವಾದರೆ ಮುಗಿಯಿತು. ರಾತ್ರಿಯ ಊಟ ಬೇಕಿಲ್ಲ, ಕುಡಿಯಲು ತುಳಸೀ ದಳ ಹಾಕಿದ ನೀರಿದ್ದರೆ ತೀರಿಸು–" ಎಂದರು.

ರುಕ್ಮಿಣಿಯು ಮರುಮಾತಾಡದೆ ಅವರ ಅಪೇಕ್ಷೆಯಂತೆ ಮಧ್ಯಾಹ್ನದ ಊಟವನ್ನೆ ಬಡಿಸುತ್ತ, "ಕೆಲವೇ ಗಂಟೆಗಳಲ್ಲಿ ಎಂಥ ಬದಲಾವಣೆ!" ಎಂದು ವಿಸ್ಮಿತಳಾದಳು. ಈಗ ಅವರು ವ್ಯಕ್ತಗೊಳಿಸುತ್ತಿರುವ ವೈರಾಗ್ಯವು ಅವಳನ್ನು ದಂಗುಗೊಳಿಸಿತು. ತಮ್ಮಿಬ್ಬರ ನಡುವೆ ಏನೂ ಆಗಿಲ್ಲವೆನ್ನುವ ಹಾಗೆ ಅವರು ವರ್ತಿಸುತ್ತಿದ್ದರು!

## ೧೯

ದಿನದ ಹಗಲು ಕಳೆದು ಇರುಳು ಕವಿಯಿತು. ಹಾಸಿಗೆಯ ಮೇಲೆ ಬಿದ್ದು ಕೊಂಡ ರುಕ್ಮಿಣಿಗೆ ಏನೋ ಆಸರ, ಬೇಸರ. ಒಂದು ವರ್ಷಕ್ಕೂ ಮಿಕ್ಕಿ ಹಾಸಿಗೆ ಸುಖದಿಂದ ವಂಚಿತಳಾಗಿದ್ದ ಅವಳಿಗೆ ಮತ್ತೆ ಪುರುಷಪ್ರವೇಶದಿಂದ ನರನಾಡಿಗಳಲ್ಲೆಲ್ಲ ವಿದ್ಯುತ್ ಸಮಚಾರವಾದಂತಾಗಿತ್ತು. ಗಂಡನೊಡನೆ

ಅನುಭವಿಸಿದ ರತಿಸುಖವನ್ನು ಎಂದೋ ಮರೆತು ಸಂಯಮಶೀಲೆಯಾಗಿದ್ದವಳನ್ನು ಹಿಂದಿನ ರಾತ್ರಿಯ ಅನುಭವ ಕೆದಕಿ ಬೆದಕಿ ಪುನಃ ಪ್ರಚೋದಿಸಿದಂತಿತ್ತು. ಯಾಕೊ ಸೆಖೆಯಾದಂತಾಯಿತು. ವಿಪರೀತ ಸೆಖೆ. ಹಾಸಿಗೆ ಬಿಟ್ಟೆದ್ದಳು. ಎದ್ದು ಹಜಾರಕ್ಕೆ ಬಂದಳು. ಮೂಲೆಯ ಮಾಮೂಲು ಜಾಗದಲ್ಲಿ ಶಾಸ್ತ್ರಿಗಳು ಆರಾಮವಾಗಿ ಕಾಲು ಚಾಚಿ ಅಂಗಾತ ಮಲಗಿ ಗಾಢನಿದ್ರೆಯಲ್ಲಿದ್ದರು. ಕೆಲನಿಮಿಷ ಅವರನ್ನೇ ನಿಟ್ಟಿಸುತ್ತಿದ್ದು, ಮೆಲ್ಲನೆ ಮುಂಬಾಗಿಲು ತೆರೆದು, ಜಗಲಿಗೆ ಹೋದಳು. ಅಲ್ಲಿ ಅತ್ತಿಂದಿತ್ತ ಶತಪಥಕ್ಕೆ ಆರಂಭಿಸಿದಳು. ಹೊರಗೂ ಗಾಳಿಯ ಸುಳಿವಿಲ್ಲ. ಉಬ್ಬಸ ಬರಿಸುವಂತಹ ಸೆಕೆ!... ಬಾಗಿಲು ಮುಚ್ಚಿ ಬಂದು ಮತ್ತೆ ಮಲಗಿದಳು. ಎಷ್ಟು ಪ್ರಯತ್ನಿಸಿದರೂ ನಿದ್ರೆಬಾರದು. ಕುರಿಗಳನ್ನು ಎಣಿಸಿದರೆ ನಿದ್ರೆ ಬರುವುದೆಂದು ಯಾರೋ ಹೇಳಿದ್ದ ನೆನಪು. ಆ ಪ್ರಕಾರ, ಒಂದು ಎರಡು ಮೂರು... ಕುರಿ ಎಣಿಸಲು ಉದ್ಯುಕ್ತಳಾದಳು. ಅದೂ ಉಪಯೋಗಕ್ಕೆ ಬರಲಿಲ್ಲ. ಮಗ್ಗಲಿನಿಂದ ಮಗ್ಗಲಿಗೆ ಹೊರಳಿದಳು. ಅದೂ ಉಪಯೋಗಕ್ಕೆ ಬರಲಿಲ್ಲ. ಮಗ್ಗಲಿನಿಂದ ಮಗ್ಗಲಿಗೆ ಹೊರಳಿದಳು ರವಿಕೆಯ ಒಳಗೆ ಬೆವರು ಸುರಿದು ಒದ್ದೆಯಾಗಿತ್ತು. ಎದ್ದು ಕುಳಿತಳು. ರವಿಕೆಯ ಗುಂಡಿಗಳನ್ನು ಬಿಚ್ಚಿ ಸೀರೆಯ ಸೆರಗಿನಿಂದ ಎದೆಯ ಭಾಗವನ್ನೂ ಕಂಕುಳನ್ನೂ ಒರಿಸಿದಳು. ಪುನಃ ಹಾಸಿಗೆಯ ಮೇಲೆ ಉರುಳಿದಳು. ಎಣ್ಣೆ ತೀರಿಹೋಗಿ ಮೂಲೆಯಲ್ಲಿದ್ದ ದೀವಿಗೆಯ ಕುಡಿ ನಂದಿಹೋಗಿತ್ತು. ಎದ್ದು ಹೋಗಿ ನಡುಮನೆಯಿಂದ ಎಣ್ಣೆ ತಂದು ದೀಪ ಉರಿಸಲು ಯಕೊ ಬೇಸರವಾಯಿತು. ಕತ್ತಲೆಯಲ್ಲೇ ಕಣ್ಣು ಬಿಟ್ಟು ನೋಡುತ್ತಿದ್ದಳು. ಮನಸಡ್ಸು ಬರಿದೊ ಬರಿದು. ನಿರ್ಭಾವದಿಂದ ಕತ್ತಲೆಯಲ್ಲೆ ನೋಟವನ್ನು ನೆಟ್ಟಳು. ಕತ್ತಲೆಯ ದಟ್ಟವಾದ ಕಪ್ಪು ಅಲೆಅಲೆಯಾಗಿ ಬಂದು ಕಣ್ಣುಗಳಿಗೆ ಮೆತ್ತಿದಂತಾಯಿತು. ರೆಪ್ಪೆಗಳು ತಾವೇತಾವಾಗಿ ಮುಚ್ಚಿದವು. ಪೂರ್ಣ ನಿದ್ರೆಯೂ ಅಲ್ಲದ ಎಚ್ಚರವೂ ಅಲ್ಲದ ಸ್ಥಿತಿಯಲ್ಲಿ ಮನಸ್ಸು ತೇಲಿತು.

ಒಂದು ಹಗಲು, ಗಂಡನೊಡನೆ ತೋಟಕ್ಕೆ ಹೋಗಿದ್ದಳು. ವಿವಾಹದ ಆರಂಭದ ದಿನಗಳು. ಇಬ್ಬರ ಹೆಜ್ಜೆಹೆಜ್ಜೆಯಲ್ಲೂ ಸಂಭ್ರಮ ಇಟ್ಟಾಡುತ್ತಿತ್ತು. ಸೀಬೆಹಣ್ಣು ತಿಂದು, ಎಳನೀರು ಕುಡಿದರು. "ಬೆಟ್ಟದ ಕಡೆ ಸುತ್ತಾಡಿ ಬರೋಣವೆ?' ವಿಶ್ವೇಶ್ವರ ಕೇಳಿದ್ದೇ ತಡ, ರುಕ್ಮಿಣಿ ಉತ್ಸಾಹದಿಂದ ಒಪ್ಪಿದ್ದಳು. ಊರಿನ ಮೇಗಡೆ ಪಶ್ಚಿಮಕ್ಕಿದ್ದ ಕುಂತಿಬೆಟ್ಟವನ್ನು ದಂಪತಿಗಳಿಬ್ಬರೂ ಚಿಮ್ಮಿ ಚಿಮ್ಮಿ ಜಿಗಿದಾಡುತ್ತ ಏರಿದ್ದರು. ಆಗ ಶಿವರಾತ್ರಿಯ ಕಾಲ. ಕಾಡಿನ ಗಿಡಿಮರಗಳ ಮೇಲೆ ಅಲ್ಲಲ್ಲಿ ಬಣ್ಣ ಬಣ್ಣದ ಹೂಗಳ ಸಂತೆ. ವಿಶ್ವೇಶ್ವರ ಒಂದು ಬೆಟ್ಟ ದಾವರೆ ಹೂವನ್ನು ಕಿತ್ತುತಂದ. ಅಂಗೈ

ಅಗಲದ ಹೂವು. ಅರಿಶಿನವನ್ನೇ ಅದಕ್ಕೆ ಲೇಪಿಸಿದಂತಿತ್ತು. ನೋಡಲು ಬಲು ಮೋಹಕವಾದ ಆ ಹೂವನ್ನು ವಿಶ್ವೇಶ್ವರ ರುಕ್ಮಿಣಿಯ ಮಂಡೆಗೆ ಮುಡಿಸಿ ಅವಳನ್ನು ಹೊರಳಿಸಿ ಹೊರಳಿಸಿ ನೋಡಿ ಸುಖಿಸುತ್ತಿದ್ದಂತೆ ರುಕ್ಮಿಣಿಯು ಎತ್ತ ತಿರುಗಿದರತ್ತ ಕಣ್ಣು ತುಂಬುತ್ತಿದ್ದ ಕಡುಗೆಂಪಿನ ಮುತ್ತುಗದ ಹೂಗಳನ್ನು ನೋಡುತ್ತ ಪುಳಕಗೊಳ್ಳುತ್ತಿದ್ದಳು...

ಹೀಗೆ ಅವರಿಬ್ಬರೂ ಸರಸ ಸಲ್ಲಾಪವಾಡುತ್ತ ಮುಂದೆ ಸಾಗಿದ್ದರು. ಹೆಜ್ಜೆ ಹೆಜ್ಜೆಗೂ ಘಮಘಮಿಸುವ ಯಾವುದೋ ಅಪರೂಪದ ಪರಿಮಳ ಅಲ್ಲಿನ ವಾತಾವರಣವನ್ನೆಲ್ಲ ತುಂಬಿದಂತಿತ್ತು. ರುಕ್ಮಿಣಿ ತಡೆದು ನಿಂತು,

"ಅಬ್ಬಬ್ಬ, ಇದೆಂಥ ಸುವಾಸನೆ!..." ಎಂದು ಆನಂದಿಸಿದಳು.

"ಈ ಪರಿಮಳ ಜಾಲಿ ಹೂವಿನದ್ದು, ರುಕ್ಕು... ಇದರ ಘಮನ ಗಾಳಿ ಬೀಸುತ್ತಿರುವಾಗ ಸುಮಾರು ಒಂದು ಒಂದೂವರೆ ಮೈಲಿ ಫಾಸಲೆಗೂ ಹರಡುತ್ತೆ..." ಎಂದು ವಿಶ್ವೇಶ್ವರ ವಿವರಿಸಿದ್ದ.

ರುಕ್ಮಿಣಿಯು ಆ ಸುವಾಸನೆಯನ್ನು ಹೀರುತ್ತಲೇ ಪತಿಯ ಜೊತೆಗೆ ಬೆಟ್ಟವನ್ನೇರಿ, ಅದರ ನೆತ್ತಿಗೆ ಬಂದಿದ್ದಳು.

ಬೆಟ್ಟದ ನೆತ್ತಿಯ ವಿಸ್ತಾರ ಪ್ರದೇಶದ ಉತ್ತರ ಭಾಗದಲ್ಲಿ ಒಂದು ಕೋಟೆ. ಅದು ದೃಷ್ಟಿಗೆ ಬಿದ್ದೊಡನೆಯೆ,

"ಇದೇ ಏನ್ರೀ, ನಮ್ಮ ಊರಿನ ಮಂದಿ ಮಾತಾಡಿಕೊಳ್ತಾರಲ್ಲ– ಆ ಚಿತ್ರ ಮೂಲನ ಕೋಟೆ?" ಎಂದು ವಿಶ್ವೇಶ್ವರನನ್ನು ಕೇಳಿದ್ದಳು ರುಕ್ಮಿಣಿ.

"ಹೌದು, ಇದೇ ದ್ರೋಣಾಚಾರ್ಯರು ಕುರುಕ್ಷೇತ್ರದ ಯುದ್ಧಕ್ಕೂ ಮುನ್ನ ದಕ್ಷಿಣಾಪಥಕ್ಕೆ ಬಂದಿದ್ದಾಗ ನಿರ್ಮಿಸಿದ ಚಿತ್ರಮೂಲನ ಕೋಟೆ. ಮುಂದೆ ಕುರುಕ್ಷೇತ್ರದ ಮಹಾಸಮರದಲ್ಲಿ ದುರ್ಯೋಧನನ ಸೈನ್ಯಕ್ಕೆ ಸೇನಾನಿಯಾಗುವ ಸಂಭವ ಬಂದಾಗ, ತಾವು ತಮ್ಮ ಅಧೀನದ ಸೇನಾತುಕಡಿಗಳನ್ನು ಉಪಯೋಗಿಸಿ ರಚಿಸಬೇಕೆಂದಿದ್ದ ಚಕ್ರವ್ಯೂಹದ ಒಂದು ಪ್ರಯೋಗ. ರಾಜಧಾನಿ ಹಸ್ತಿನಾಪುರದಿಂದ ಸಹಸ್ರಾರು ಮೈಲಿಯಾಚೆಗಿರುವ ಈ ದುರ್ಗಮ ತಾಣದಲ್ಲಿ ಈ ಚಿತ್ರ ಮೂಲನ ಕೋಟೆಯನ್ನು ನಿರ್ಮಿಸಿ, ಪರೀಕ್ಷೆ ನಡೆಸಿದರೆಂದು ಜನಜನಿತವಾದ ಮತು!..."

ವಿಶ್ವೇಶ್ವರ ತನ್ನ ಮಡದಿಗೆ ವಿವರಿಸುತ್ತ ಸಾಗಿದಂತೆ, ಜೀರ್ಣವಾಗಿ ಸಂದಿ ಗೊಂದಿಗಳಲ್ಲಿ ಪಾಚಿ ಹಾಗೂ ಗಿಡಗಳನ್ನು ಬೆಳೆದಿದ್ದರೂ ಇನ್ನೂ ಬಲಶಾಲಿಯಾಗೇ ಕಾಣುವ ಕೋಟೆಯನ್ನು ನೋಡಿ ರುಕ್ಮಿಣಿ ಬೆರಗಾದಳು. ಕೋಟೆಯೊಳಗೆ ಏನಿದೆಯೊ ನೋಡಬೇಕೆಂಬ ಕುತೂಹಲ ಉಂಟಾಯಿತು.

"ಕೋಟೆಯೊಳಗೆ ಹೋಗಿ ನೋಡೋಣವಾ?" – ಆಸೆಯಿಂದ ಕೇಳಿದಳು.

"ಇಲ್ಲಿಯ ತನಕ ಈ ಕೋಟೆಯೊಳಗೆ ನಮ್ಮ ಪ್ರದೇಶದ ಆಸುಪಾಸಿನ ಜನರು ಯಾರೂ ಪ್ರವೇಶಿದ್ದೇ ಇಲ್ಲ!... ಇದರ ಒಳಗೆ ಒಮ್ಮೆ ಹೋದವರು ಹಿಂದಿರುಗಿ ಬರಲು ದಾರಿ ಕಾಣದೆ ಸಾಯುತ್ತರೆಂದೇ ನಂಬಿಕೆ!... ಕೋಟೆಯೊಳಗೆ ಕೋಟೆಯಿದೆ ಎಂದು ಪ್ರತೀತಿ... ಒಂದೆರಡು ದನ ಕಾಯುವ ಹುಡುಗರಿಗೆ ಒಳಗೇನಿರುವುದೋ ನೋಡಬೇಕೆಂಬ ಚಪಲ ಬಂದು ಈ ಕೋಟೆಯ ಒಳಹೊಕ್ಕದ್ದರಂತೆ. ಆದರೆ ಹಾಗಿ ಹೋದವರು ಮತ್ತೆ ಹಿಂದಿರುಗಲೇ ಇಲ್ಲವಂತೆ! ಆದ್ದರಿಂದ..." ಎಂದು ವಿಶ್ವೇಶ್ವರ ವಿವರಣೆ ನೀಡುತ್ತಿರುವಾಗ, ಅವನ ವಾಕ್ಯವನ್ನು ಪೂರ್ತಿಗೊಳಿಸಲು ಅನುವುಗೊಡದೆ,

"ಆದ್ದರಿಂದ ಕೋಟೆಯೊಳಗೆ ನಾವು ಹೋಗಿ ಹಿಂದಕ್ಕೆ ನೋಡುವುದು ಬೇಡ– ಇದು ತಾನೆ ನೀವು ಹೆಳಬೇಕೆಂದು ಇರುವುದು?" ಎಂದು ರುಕ್ಮಿಣಿ ಮುಖವನ್ನು ಸಣ್ಣಗೆ ಮಾಡಿದಳು.

"ಹಾಗಲ್ಲವೆ, ರುಕ್ಕು. ಒಳಗಡೆ ಹೋಗಿ ಬರಲು ಆಗದೆ ಹೋದರೆ, ಯಾವ ಪುರುಷಾರ್ಥ ಸಾಧಿಸಿದ ಹಾಗಾಯ್ತು, ನೀನೇ ಹೇಳು."

ಗಂಡನ ಮಾತು ರುಕ್ಮಿಣಿಗೆ ಒಪ್ಪಿತವಾಗಲಿಲ್ಲ.

"ಅದಕ್ಕೇನಂತೆ, ಅಲ್ಲಿ ಸಾಯೋದೇ ಆದರೆ, ನಾವಿಬ್ಬರೂ ಒಟ್ಟಿಗೇ ಇರುತ್ತೇವಲ್ಲ!– ಆಗ ಇಬ್ಬರೂ ಒಟ್ಟಿಗೇ ಸಾಯೋದಪ್ಪ" ಎಂದಳು.

"ಬಂಗಾರದ ಜಿಂಕೆಯನ್ನು ಬಯಸಿದ ತ್ರೇತಾಯುಗದ ಸೀತಾದೇವಿಯ ಸಂತತಿ ಇನ್ನೂ ಜೀವಂತವಿದೆ!" ಎಂದು ನಗುತ್ತ, ಮೋಹದ ಮಡದಿಯನ್ನು ಬಾಚಿ ತಬ್ಬಿ ರಮಿಸುತ್ತ,

"ನನ್ನ ಮನದನ್ನೇ ಹೋಗಲೇಬೇಕೆಂದು ಹಟ ಮಾಡವಾಗ ನನ್ನ ಮಾತೆಲ್ಲಿ ನಡೆಯುತ್ತೆ?... ಆದರೂ ಅಲ್ಲಿ ಕಾದಿರಬಹುದಾದ ಅಪಾಯಕುರಿತು ಹೇಳಿದ್ದೇನೆ. ಇನ್ನೊಮ್ಮೆ ಚೆನ್ನಾಗಿ ಆಲೋಚನೆ ಮಾಡಿ ತಿಳಿಸು. ಹೋಗಲೇಬೇಕೆ?"

ರುಕ್ಮಿಣಿ ಅಷ್ಟೇನೂ ಆಲೋಚನೆ ಮಾಡುವ ಗೋಜಿಗೇ ಹೋಗದೆ ಹೌದು ಎನ್ನುವಂತೆ ತಲೆ ಕುಣಿಸಿದಳು.

"ಸರಿ" ಎಂದು, "ಕಲ್ಲುಮುಳ್ಳಿನ ಹಾದಿ, ಎಚ್ಚರದಿಂದ ಬಾ." ಹೇಳುತ್ತ ವಿಶ್ವೇಶ್ವರ ಕೋಟೆಯನ್ನು ಪ್ರವೇಶಿಸಿದ. ಹಿಂದಿನಿಂದ ಒಳಗೆ ಬಂದ ರುಕ್ಮಿಣಿ ತಾನು ಕಂಡ ದೃಶ್ಯದಿಂದ ಅವಾಕ್ಕಾದಳು. ಅವಳು ಶ್ರೀರಂಗಪಟ್ಟಣದಂತಹ

ಕೋಟೆಗಳನ್ನೇನೊ ನೋಡಿದ್ದಳು. ಆದರೆ ಇಷ್ಟು ಎತ್ತರದ ಭವ್ಯವಾದ ಕೋಟೆಯನ್ನು ತನ್ನ ಜೀವಮಾನದಲ್ಲೇ ಅವಳು ಕಂಡಿದ್ದಿಲ್ಲ! ಆ ಕೋಟೆ ಗೋಡೆಯ ಎತ್ತರಕ್ಕೇ ಇರುವ ದೈತ್ಯಾಕಾರದ ಮರಗಳು. ಈ ಮರಗಳು, ಅಷ್ಟಷ್ಟು ದೂರಕ್ಕೆ ಸೈನಿಕರನ್ನು ನಿಲ್ಲಿಸಿ, ಅಭೇದ್ಯವಾದ ವ್ಯೂಹ ರಚಿಸಿದಂತೆ, ದಟ್ಟವಾಗಿ ಬೆಳೆದು ನಿಂತಿದ್ದವು. ಕೆಲವೇ ಮರಗಳನ್ನು ದಾಟಿಹೋದಬಳಿಕ, ತಾವಿಬ್ಬರೂ ಎಲ್ಲಿದ್ದೇವೆ ಎನ್ನವುದೆ ಅರ್ಥವಾಗುತ್ತಿರಲಿಲ್ಲ. ಆದರೆ ಇಲ್ಲಿ ಮರಗಳಿರಲಿಲ್ಲ. ಕೇವಲ ಹೆಬ್ಬಂಡೆಗಳ ಸಾಲು. ಅವುಗಳ ಸಂದಿಯಲ್ಲಿ ತೂರಿ ನಡೆದಂತೆ, ಮಟ್ಟಸವಾದ ಬಯಲನ್ನು ದಾಟಿದರೆ ಮತ್ತೆ ಅವೇ ದೈತ್ಯ ಮರಗಳ ಜಾತ್ರೆ. ಇಲ್ಲಂತೂ ದಟ್ಟೈಸಿದ್ದ ವೃಕ್ಷರಾಶಿಯ ರೆಂಬೆಗಳು ಒಂದಕ್ಕೊಂದು ಹೆಣೆದಂತಿದ್ದು ಕತ್ತಲು ತಾನೇತನಾಗಿ ವಿಜೃಂಭಿಸಿತ್ತು. ಮರಗಳ ಮೇಲಿನ ರೆಂಬೆಗಳಿಗೆ ತೂರಿದ್ದ ರಾಕ್ಷಸ ಬಾವಲಿಗಳು ಒಟ್ಟಿಗೇ ಪಟಪಟ ಸದ್ದು ಮಾಡುತ್ತ ಅವರಿಬ್ಬರ ಮುಖ ಮೈಗಳಿಗೆ ಇನ್ನೇನು ಬಡಿದುಬಿಡುವುವೊ ಎನ್ನುವಂತೆ ಸುತ್ತಲೂ ಹಾರಾಡಿದಾಗ, ಭೀತಿಗೊಂಡ ರುಕ್ಮಿಣಿಯು ವಿಶ್ವೇಶ್ವರನನ್ನು ಬಲವಾಗಿ ಅಪ್ಪಿದಳು. ಗಂಡನನ್ನು ಬಲಾತ್ಕರಿಸಿ ತಾನು ತಪ್ಪು ಮಾಡಿದೆನೆಂದು ಈಗ ಅವಳಿಗೆ ಮನವರಿಕೆಯಾಗಿತ್ತು. ಆ ಕೋಟೆಯಲೊಳಗಿನ ಅರಣ್ಯ ಪ್ರದೇಶದ ವಿಸ್ತಾರದಲ್ಲಿ ಎಂಥಂತವೊ ವಿಕಾರ ಸ್ವರಗಳು ಚೀರಲಾರಂಭಿಸದುವು. ಭೀತಿಯಿಂದ ನಡುಗತ್ತು,

"ಇನ್ನೊಂದು ಕ್ಷಣ ಇಲ್ಲಿರೋದು ಬೇಡ. ನಡೀರಿ. ಆದಷ್ಟು ಜಾಗ್ರತೆ ಇಲ್ಲಿಂದ ಕಾಲ್ತೆಗೆಯೋಣ" ಎಂದು ಪೀಡಿಸತೊಡಗಿದಳು ರುಕ್ಮಿಣಿ.

ವಿಶ್ವೇಶ್ವರನಿಗೂ ಅದೇ ಚಿಂತೆಯಾಗಿತ್ತು. ರುಕ್ಮಿಣಿಯ ಕೈ ಹಿಡಿದು ಮಸಕು ಕತ್ತಲೆಯಲ್ಲೆ ದಾರಿ ಹುಡುಕುತ್ತ ಹೊರಟದಂತೆ ಒಂದು ಮರಕ್ಕೆ ಢಿಕ್ಕಿ ಹೊಡೆದು ರಕ್ತ ಚಿಮ್ಮಿತು. ಅನಂತರ ಅವರಿಬ್ಬರೂ ಮರದಿಂದ ಮರಕ್ಕೆ ಢಿಕ್ಕಿ ಹೊಡೆಯುತ್ತ ಸಾಗಿ, ತಾವು ಕೋಟೆಯೊಳಗೆ ಪ್ರವೇಶ ಮಾಡಿದ ದ್ವಾರವನ್ನು ಹುಡುಕಾಡಿದರು. ಎಷ್ಟು ಕಾಲ ಅರಸಿದರೂ ಆ ಕೋಟೆಬಾಗಿಲು ಅವರ ಕಣ್ಣಿಗೆ ಬೀಳದೆ ನಿಗೂಢವಾಗೇ ಇತ್ತು. ಮುಂದೆ ಹೋದಂತೆ, ಅವರು ಎಲ್ಲಿಂದ ಹೊರಟರೊ ಅದೇ ಸ್ಥಳಕ್ಕೆ ಹಿಂದಿರುಗಿ ಬಂದಂತೆ ತೋರುತ್ತಿತ್ತು. ವಿಚಿತ್ರ, ವೆಂದರೆ, ಎಲ್ಲಸ್ಥಳಗಳೂ ಒಂದೇ ರೀತಿ ಕಾಣುತ್ತಿದ್ದವು. ಎಲ್ಲಕ್ಕಿಂತಲೂ ಸೋಜಿಗವೆಂದರೆ ಅಲ್ಲಿ ವಿರಾಜಿಸುತ್ತಿದ್ದ ವೃಕ್ಷಗಳ ಜಾಣಾಕ್ಷ ಜೋಡಣೆ!.... ಇನ್ನು ಹೆಚ್ಚು ಕಾಲ ಅಲ್ಲಿ ಓಡಾಡಿದರೆ ಸಿಪಾಯಿಗಳಂತೆ ಅಚಲವಾಗಿ ನಿಂತ ಆ ಮರಗಳಿಗೆ ಒಂದಾದಮೇಲೆ ಬಂದರಂತೆ ತಲೆ ಬಡಿದು ಸಾಯುವುದೊಂದೇ

ಸಹಜವೆಂದು ಅವರಿಬ್ಬರಿಗೂ ಕಳವಳ ಹುಟ್ಟಿತು. ಆದರೆ ಆ ಕಠೋರ ಸನ್ನಿವೇಶದಲ್ಲಿ ಒಂದೇ ಜಾಗದಲ್ಲಿ ನಿಲ್ಲುವುದೂ ಬಲು ಅಪಾಯಕಾರಿಯೆಂದು ಅವರೂ ಗ್ರಹಿಸಿದರು. ಕೂಡಲೆ, ಎಡವುತ್ತ, ಮುಗ್ಗರಿಸಿ ಬೀಳುತ್ತ ಮರದಿಂದ ಮರಕ್ಕೆ ಢಿಕ್ಕಿ ಹೊಡೆಯುತ್ತ ಸಾಗಿದರು...

ಆ ಮಸಕಿನಲ್ಲಿ ಅವರು ಈಗ ಯಾವ ದಾರಿ ಹಿಡಿದಿದ್ದರೆ ಅವರಿಗಂತೂ ಅರಿವಿರಲಿಲ್ಲ. ಆ ಪರಮ ಸಂಕಟದ ವೇಳೆ, ಆರಂಭದಲ್ಲಿ ದೂರದಿಂದ ಕೇಳಿಬರುತ್ತಿದ್ದ ವಿಕಾರ ಸ್ವರಗಳು ಬರಬರುತ್ತ ರಣಮದ್ದಲೆಯಾಗಿ ಹತ್ತಿರವಾದಂತೆ ಭಾಸವಾಗತೊಡಗಿತ್ತು. ದಾರಿ ತಪ್ಪಿರಬೇಕೆಂದು ಊಹಿಸಿ ಬೇರೆ ದಿಕ್ಕಿಗೆ ತಿರುಗಿದರು. ಅತ್ತಣಿಂದಲೂ ಕರ್ಕಶ ಸ್ವರಗಳು ಸಮೀಪಾಗುತ್ತಿರುವಂತೆ ಕಂಡವು. ಇದೂ ಸರಿಯಲ್ಲವೆಂದು ಇನ್ನೊಂದು ದಿಕ್ಕಿಗೆ ತಿರುಗಿದರು... ಎಂಥದೋ ವಿಕಾರ ಚೀರಾಟ... ಕುದುರೆಗಳ ಖುರಪುಟ ಧ್ವನಿ... ಆನೇಗಳು ಘೀಳಿಡುವ ಸದ್ದು. ಕತ್ತಿಗಳು ಪರಸ್ಪರ ತಾಕಲಾಡುವಾಗ ಉದ್ಭವಿಸುವ ಖಣಿಲ್ ಖಣಿಲ್ ಶಬ್ಧ... ಯಾವ ಕಡೆ ತಿರುಗಿ ನೋಡಿದರೂ ಭೀತಿ ಹುಟ್ಟಿಸುವ ಇಂಥ ಸದ್ದುಗಳೇ ಮತ್ತೂ ಮತ್ತೂ ಸಮೀಪವಾಗುತ್ತಿದ್ದವು. ಇನ್ನು ಪ್ರಯತ್ನಮಾಡುವುದೂ ವ್ಯರ್ಥವೆಂದು ಬಗೆದು ತಟಸ್ಥರಾಗಿ ನಿಂತಲ್ಲೇ ನಿಂತರು... ಹಟಾತ್ತನೆ ಯಾರೋ ತನ್ನ ಗಂಡನನ್ನು ಎಲೆದೊಯ್ಯುತ್ತಿರುವಂತೆ ಭಾಸವಾಯಿತು... ರುಕ್ಮಿಣಿ ತತ್ತರಿಸಿದಳು. ವಿಶ್ವೇಶ್ವರನನ್ನು ಎಳೆದೊಯ್ದು ಜಾಡನ್ನು ಕುರುಡಾಗಿ ಅನುಕರಿಸುತ್ತ ನಡೆದಳು... ಮರದಿಂದ ಮರಕ್ಕೆ ಢಿಕ್ಕಿ ಹೊಡೆದು ಬಿದ್ದಳು, ಎದ್ದಳು, ಮತ್ತೆ ಅರಸುತ್ತ ಹೊರಟಳು... ಕತ್ತಲೆಯ ಕಾಡು. ಸೈನಿಕರಂತೆ ದೃಢವಾಗಿ ನಿಂತು, ಸುಸೂತ್ರವಾಗಿ ಮುಂದುವರಿಸಲು ಅಡ್ಡ ಬಂದು, ದಾರಿ ತಪ್ಪಿಸುವ ಬೃಹದಾಕಾರದ ಮರಗಳು... ಎದ್ದು, ಬಿದ್ದು ಸಾಗಿದಂತೆ, ಥಟ್ಟನೆ ಒಂದು ಕೊಚ್ಚೆಗುಂಡಿಗೆ ಮುಗುಚಿ ಮುಳುಗಿದಂತಾಯಿತು. 'ಅಮ್ಮಾ' ಎಂದು ಚೀರುತ್ತ ರುಕ್ಮಿಣಿ ಕಣ್ತೆರೆದಳು...

ವೆಂಕಣ್ಣ ಜೋಯಿಸರ ಮನೆಯಿಂದ ಬಾಲಕರ ತಂಡದ ವೇದಘೋಷದ 'ಪಂಚಾರಿ' ಕೇಳಿ ಬಂದು, ತಾನು ಇಷ್ಟು ಹೊತ್ತಿನ ತನಕ ಅನುಭವಿಸಿದ್ದು ಕೇವಲ ಕನಸು ಎಂಬಂಶವನ್ನು ಅದು ಮನವರಿಕೆ ಮಾಡಿಕೊಟ್ಟಿತು. ಆದರೂ ಅವಳ ಎದೆಬಡಿತ ಸ್ಥಿಮಿತಕ್ಕೆ ಬರಲು ಸ್ವಲ್ಪ ಕಾಲವೇ ಬೇಕಾಯಿತು.

## ೨೦

ಮುಂದಿನ ದಿನಗಳಲ್ಲಿ ಕೃಷ್ಣಶಾಸ್ತ್ರಿಗಳು ತೋಟದಲ್ಲಿ ತಮ್ಮ ದುಡಿಮೆಯನ್ನು ಅಧಿಕಗೊಳಿಸಿದರು. ತಣ್ಣೀರು ಸ್ನಾನ ಮಾಡಿ, ಒದ್ದೆ ಬಟ್ಟೆಯಲ್ಲಿ ಮನೆಗೆ ಬಂದು,

ಪೂಜೆಪುನಸ್ಕಾರ, ಜಪತಪಾದಿಗಳಲ್ಲಿ ಹೆಚ್ಚು ಸಮಯವನ್ನು ವ್ಯಯ ಮಾಡುವರು. ಅನಂತರ ಒಂದೇ ಊಟದ ಉಗ್ರ ವ್ರತದ ಕಟ್ಟುನಿಟ್ಟಾದ ಆಚರಣೆ. ರುಕ್ಮಿಣಿಯು ಯಾಂತ್ರಿಕವಾಗಿ ಮನೆಗೆಲಸ ಮಾಡುವಳು. ಹಗಲು ಹೇಗೊ ಕಳೆಯುವುದು. ಅನೇಕ ರಾತ್ರಿ ಕಾಲಿಟ್ಟೊಡನೆಯ ಅವಳ ಒಳಗಿನ ತಳಮಳ ಆರಂಭವಾಗುವುದು. ಅನೇಕ ದಿನಗಳಿಂದ ಉಪಯೋಗಿಸದೆ ಮೂಲೆಗೊರಗಿಸಿದ ತಂಬುರಿಯನ್ನು ಯಾರೋ ಕೈಗೆತ್ತಿ ಶ್ರುತಿ ಮಾಡಿ, ಬಿಗಿದ ತಂತಿಯನ್ನೊಮ್ಮೆ ಮೀಟಿ ಹೋದಂತಾಗಿತ್ತು, ರುಕ್ಮಿಣಿಯ ಸ್ಥಿತಿ! ಮೀಟಿಹೋದಮೇಲೂ ತುಂಬೂರಿಯಿಂದ ಝೇಂಕಾರನಾದ ಬಹುಕಾಲ ಹೊರಹೊಮ್ಮುತ್ತಲೇ ಇರುವಂತೆ, ಶಾಸ್ತ್ರಿಗಳು ಎಲ್ಲೋ ಅವಳ ಅಳದಲ್ಲಿ ಅಡಗಿ ಸೊರಗಿ ಮಲಗಿದ್ದ ಬಯಕೆಗಳನ್ನು ಒಮ್ಮೆ ಮಾತ್ರ ಕೆದಕಿ, ಆ ಬಳಿಕ ವಿಶ್ವಾಮಿತ್ರನಂತೆ ತಮ್ಮ ಸಂಯಮದ ಚಿಪ್ಪಿನೊಳಗೆ ಮುದುಡಿದ್ದರು.

ಎಂಟೊಂಬತ್ತು ದಿನಗಳು, ಮಳೆ ಸುರಿಸುವಂತೆ ತೋರಿ ಚದುರಿಹೋಗುವ ಮೋಡಗಳಂತೆ, ಕಳೆದುಹೋಗಿದ್ದವು. ಅವಳಿಗೆ ಅರಿವಿಲ್ಲದಂತೆಯೆ ಅವಳೊಳಗೆ ಪಲ್ಲವಿಸಿದ ಬಯಕೆ ಅದಮ್ಯವಾಗಿ ಬೆಳೆದು ಹೆಮ್ಮರವಾಗಿತ್ತು. ಗಂಡನೊಡನೆ ಸುಖಿಸಿದ ಹಳೆಯ ದಿನಗಳು ಅಂತರಂಗವನ್ನು ಮುತ್ತಿ ಜೇನು ಹುಳಗಳಂತೆ ಕಾಡಲುಪಕ್ರಮಿಸಿದ್ದವು. ಹೀಗಿರುವಾಗ ಒಮ್ಮೆ ಭೀಮನಹಳ್ಳಿಯ ಅಕ್ಕ ಪಾರ್ವತಿಯು ಒಂದು ಪತ್ರ ಕಳಿಸಿ, ಎರಡು ವರ್ಷಗಳ ಹಿಂದೆಯೆ ಲಗ್ನವಾಗಿದ್ದ ತನ್ನ ಮೊದಲನೆಯ ಮಗಳು ಪದ್ಮ ಋತುವಾಗಿರುವುದರಿಂದ ಮುಂದಿನ ಬುಧವಾರ ಆರತಕ್ಷತೆ ಇಟ್ಟಿದ್ದೇವೆ, ಆ ಶುಭಸಮಾರಂಭಕ್ಕೆ ತಪ್ಪದೆ ಬರಬೇಕೆಂದು ಆಹ್ವಾನಿಸಿದ್ದಳು. ಉಬ್ಬಸ ಹಿಡಿಸುತ್ತಿದ್ದ ತಮ್ಮ ಮನೆಯ ವಾತಾವರಣದಿಂದ ಕೆಲವು ದಿನಗಳವರೆಗಾದರೂ ಮುಕ್ತಳಾಗಬೇಕಂದು ರುಕ್ಮಿಣಿಗೆ ಆಪೇಕ್ಷೆಯೇನೊ ಉಂಟಾಯಿತು. ಆದರೆ ಶಾಸ್ತ್ರಿಗಳ ಊಟೋಪಚಾರಕ್ಕೆ – ಅದು ಕೇವಲ ಒಂದು ಹೊತ್ತಿನ ಭೋಜನವಾದರೂ ಸಹ – ತೊಂದರೆಯಾಗುವುದೆಂದು ಎಣಿಸಿದಳು. ಸುದ್ದಿ ತಿಳಿದಾಗ ಶಾಸ್ತ್ರಿಗಳಿಗೆ,

"ಒಂದು ಹೊತ್ತಗೆ ಅಡಿಗೆ ಮಾಡಿಕಳ್ಳಲಿಕ್ಕೆ ನನಗೇನೂ ಭಾಧಕವಿಲ್ಲ. ಪದ್ದಿ ಆರಕ್ಷತೆಗೆ ತಪ್ಪಿಸಿಕೊಬೇಡ– ಹೋಗು. ನಿನಗೆ ಇಚ್ಛೆ ಬಂದಷ್ಟು ದಿನ ಇದ್ದು ಬಾ" ಎಂದು ಒತ್ತಾಯ ಮಾಡಿದಾಗ, ರುಕ್ಮಿಣಿಯು ಭೀಮನಳ್ಳಿಯ ಪಯಣಕ್ಕೆ ಸನ್ನದ್ಧಳಾದಳು. ಗಾಡಿ ಹೊಡೆಯಲು ಶಾಸ್ತ್ರಿಗಳು ಯಥಾಪ್ರಕಾರ ಲಕ್ಕನನ್ನು ಗೊತ್ತು ಮಾಡಿದರು.

ಭೀಮನಳ್ಳಿ ಒಂದು ಕಾಡುಹಳ್ಳಿ. ಅಲ್ಲಿಗೆ ತಲುಪಲು ಕಾಡಿನ ಮಧ್ಯದ ಬಂಡಿ ಹಾದಿಯಲ್ಲೆ ಹೋಗಬೇಕು. ಪಾರ್ವತಿಯ ಆಹ್ವಾನ ಬಂದದ್ದು ಸೋಮವಾರ ಸಂಜೆಗೆ. ಮಾರನೆಯ ದಿನ ಮಂಗಳವಾರ. ಮಂಗಳವಾರ ಶುಕ್ರವಾರಗಳು ಪ್ರಯಾಣಕ್ಕೆ ಶುಭದಿನಗಳಲ್ಲವಲ್ಲ. ಇನ್ನು ಬುಧವಾರವೇ ಮಂಗಳಕಾರ್ಯವಿರುವುದರಿಂದ ಆ ದಿನವೇ ಪ್ರಯಾಣ ಬೆಳಸಬೇಕು. ಮುಹೂರ್ತವಿರುವುದು ಹತ್ತು ಗಂಟೆಗೆ, ಹನ್ನೆರಡು ಹದಿಮೂರು ಮೈಲಿಗಳು ಕಾಡುಹಾದಿ ಸಮೆಯಲು ಸುಮಾರು ನಾಲ್ಕು ಗಂಟೆಗಳ ಅವಧಿಯಾದರೂ ಬೇಕು. ಆದ್ದರಿಂದ ಬೆಳಗಿನ ಜಾವ ಇನ್ನೂ ಕತ್ತಲಿರುವಂತೆಯೆ ರುಕ್ಮಿಣಿಯನ್ನು ಹೊತ್ತ ಗಾಡಿ ಆಗಲೇ ಬ್ರಾಹ್ಮಣಕೇರಿಯನ್ನು ದಾಟಿತ್ತು. ಆಗ ಯಾರದೋ ಮನೆಯೊಳಗಿನಿಂದ ಅರೆನಿದ್ದೆಯಿಂದ ಎಚ್ಚೆತ್ತು ರೋದಿಸುತ್ತಿದ್ದ ಕೂಸನ್ನು ತೊಟ್ಟಿಲಲ್ಲಿ ತೂಗುತ್ತ ಅದರ ತಾಯಿ ಲಾಲಿಪದ ಹಾಡುವುದು ಕೇಳಿಬರುತ್ತಿತ್ತು. ಗಾಡಿಯು ಇನ್ನೂ ಮುಂದೆ ಸರಿದಂತೆ, ರಾಗಿಕಲ್ಲು ಬೀಸುವ ಇಬ್ಬರು ಹೆಣ್ಣುಮಕ್ಕಳು ದನಿಯೆತ್ತಿ ಉಳಿಯುತ್ತಿದ್ದ ಜನಪದ ಗೀತೆಯ ಕೆಲವು ಸಾಲುಗಳು ಮುಂಜಾವಿನ ಗಾಳಿಯಲ್ಲಿ ತೇಲಿದವು...

ಮುಂಜಾವಿನ ಮೋಡಗಟ್ಟಿದ ಕತ್ತಲೆಯಲ್ಲಿ ಹಾಲುನೊರೆಯಂತೆ ಬೆಳ್ಳಗಿದ್ದ ಎತ್ತರದ ಎತ್ತುಗಳು ತಮ್ಮ ಕೊರಳಿನ ಗೆಜ್ಜೆಗಳಿಂದ ಜಣಜಣನಾದ ಹೊರಡಿಸುತ್ತ ಊರನ್ನು ದಾಟಿಸಿ ಗಾಡಿಯನ್ನು ಕಾಡಿನ ಬಂಡಿಹಾದಿಗೆ ತಂದಿದ್ದವು. ಉದ್ದಕ್ಕೂ ಲಕ್ಕನ ಸಹಚರಿ ಬೊಡ್ಡ ಗಾಡಿಯನ್ನು ಅನುಸರಿಸಿ ಹಿಂದೆ ಹಿಂದೆ ಬರುತ್ತಿತ್ತು, ಆ ನಾಯಿ ಜೊತೆಗೆ ಬರದಂತೆ ಓಡಿಸಲು ಅನೇಕ ಬಾರಿ ಲಕ್ಕ ಪ್ರಯತ್ನ ಪಟ್ಟ. ಸಫಲವಾಗಿಲಿಲ್ಲ.

"ಬೊಡ್ಡಿ ಹೆತ್ತಿದ್ದು. ಹ್ವಾದೆಯಾ ಪಿಶಾತಿ ಅಂದ್ರೆ ಇಕಾ ಬಂದೆ ಗವಾಕ್ಸದಲಿಅಂತ ಲಾಜಾದಲ್ಲಿ ಪುನಾ ಗಾಡಿ ವಂದುಗುಟ್ಟೇ ಅಜರು!" ಲಕ್ಕ ನಿಸ್ಸಹಾಯಕನಾಗಿ ಗೊಣಗಿದ.

ಅದರ ಪರದಾಟ ನೋಡಲಾರದೆ ರುಕ್ಮಿಣಿಯೆ,

"ಪಾಪ; ಬರಲಿ ಬಿಡೊ" ಎಂದಳು.

"ಇನ್ಯಾನು ಇಲ್ಲ ಅಮ್ಮಾರೆ, ಗಮ್ಮನೆ ವಂದುಗಟ್ಟೆ ಬಂದರೆ ಸಮಾಸು. ನಾ ಬ್ಯಾಡ ಅಂದೇನ? ಈ ಕಾಡಿನಾಗೆ ಇಂಕರ ಸರಕ್ ಪರಕ್ ಅನಕ್ಕಿಲ್ಲ, ಸೂರನಂಗೆ ಬ್ಯಾಟಿಗೆ ವೊಂಟುಬುಡ್ತದೆ. ಈ ಕಾಡಿನಾಗೊ ಉಳಿ, ಕಿರುಬನ ಕಾಟ ಇದ್ದದೆ!– ಅದೇ ನಂಗೆ ಕೇವು" ಎಂದರೂ ಅಂತಿಮವಾಗಿ ನಿರ್ವಾಹವಿಲ್ಲದೆ

ಸೋತು ಲಕ್ಕನೂ ಸುಮ್ಮನಾದ.

ಆದರೆ ಎತ್ತಿನ ಗಾಡಿ ಕಾಡಿನಲ್ಲಿ ಇನ್ನೂ ನಾಲ್ಕು ಮಾರು ಕೂಡ ಉರುಳಲಿಲ್ಲ. ದೂರದಲ್ಲಿ ಮೊಲವೊ ಕಾಡುಕೋಳಿಯೊ ಕಣ್ಣಿಗೆ ಬಿದ್ದಿರಬೇಕು. ಬೊಡ್ಡ ರಭಸದಿಂದ ಅದನ್ನಟ್ಟಿ ಫೇರಿ ಕಿತ್ತಿತ್ತು. ಲಕ್ಕ ಗಾಬರಿಗೊಂಡು ಗಾಡಿಯನ್ನು ನಿಲ್ಲಿಸಿ ಕೆಳಕ್ಕಿಳಿದ. ಬಂಡಿಯ ಮುಂಭಾಗದ ಕೆಳಗಡೆ ಕಟ್ಟಿದ್ದ ಲಾಟೀನನ್ನು ಬಿಚ್ಚಿ ತೆಗೆದುಕೊಂಡು 'ಬೊಡ್ಡ, ಬೊಡ್ಡ' ಎಂದು ಕೂಗುತ್ತ ಅದರ ಹಿಂದೆ ಓಡಿದ್ದು ಕಂಡು ಬೇಸರಗೊಂಡಿದ್ದ ರುಕ್ಮಿಣಿಯ ಮನಸ್ಸಿಗೆ ಕಚಗುಳಿ ಇಟ್ಟಂತಾಗಿ ಮೋಜೆನಿಸಿತು.

ಮೊಲ ಬೊಡ್ಡನ ಬಾಯಿ ತಪ್ಪಿಸಿ ಒಂದು ಬಿಲವನ್ನು ಹೊಕ್ಕಿದ್ದನ್ನು ಕಂಡ ಆ ಬಿಲದ ಮುಂದೆ ಬೊಗಳುತ್ತ ನಿಂತ ಬೊಡ್ಡನನ್ನು ಲಕ್ಕ ಒದ್ದು ಓಡಿಸಿದ. ಊರ ದಿಕ್ಕಿಗೆ ಹೋಗುವ ಬದಲು ಅದು ಈ ಸಲ ಗಾಡಿಯ ಕೆಳಗಡೆ ಸೇರಿತು. ಲಕ್ಕ ಹಿಂಬಾಲಿಸಿದವನೆ ಅದನ್ನು ಅಲ್ಲಿಂದಲೂ ಓಡಿಸಲು ಪ್ರಯತ್ನಿಸಿದ. ಹಿಂದಿನಿಂದ ಓಡಿಸಿದರೆ, ಮುಂದೆ, ಮುಂಬನಿಂದ ಓಡಿಸಿದರೆ ಹಿಂದೆ– ಹೀಗೆ ಲಕ್ಕನನ್ನು ಪೇಟಾಡಿಸಿತು. ರುಕ್ಮಿಣಿ ನಗುತ್ತ,

"ಲಕ್ಕ, ನಿನಗೆ ಹೊತ್ತು ಹೋಗದು, ಬಾ. ಇದನ್ನು ನೀನು ಅಟ್ಟಾಡುವುದು, ಗಾಳಿ ಗುದ್ದುವುದು– ಎರಡೂ ಒಂದೇ. ಬರೀ ಶ್ರಮ, ಅಷ್ಟೆ" ಎಂದಳು.

ನಿಟ್ಟುಸಿರು ಬಿಟ್ಟು "ಲೌಡಿಮಗಂದೆ" ಎಂದು ಶಪಿಸಿ, ಲಕ್ಕ ಪುನಃ ಗಾಡಿಯ ಮೂಕಿಯನ್ನೇರಿ ಎತ್ತುಗಳಿಗೆ ಚಾಲನೆ ಕೊಟ್ಟ, ಗಾಡಿ, ಬಂಡಿಹಾದಿಯಲ್ಲಿ ಗಡಲ್ ಗಡಕ್ ಎಂದು ಕಾಡಿನ ಮೌನವನ್ನು ಭೇದಿಸುತ್ತಾ ಮುಂದುವರಿಯಿತು.

ಗಾಡಿ ಸಾಗಿದಂತೆ ಮೆಳೆಗಳು ಒತ್ತಿನಲ್ಲಿ ಏನೋ ಸರಪರ ಸದ್ದಾಯಿತು. ಎತ್ತುಗಳು ಬೆದರಿದವು. ಗಾಡಿಯ ಅಡಿಯಿಂದ ಬೊಡ್ಡನೂ ಬೊಗಳಲಾರಂಭಿಸಿತು.

"ಇದೇನೊ ಲ್ಕಕ– ಎತ್ತುಗಳು ಹೀಗೆ ಬೆದರ್ತಾ ಇವೆ?..." ಎಂದು ರುಕ್ಮಿಣಿ ಕೇಳಿದಳು.

"ಈ ಎತ್ತಿನ ಜೊತೆ ಈ ಕಾಡು ಆದೀಲಿ ಬಂದು ಸುಮಾರು ಜಿನವೆ ಆಗದೆ. ಅದ್ಕೇ ಮೆಳೆ ಹಿಂದೆ ಸರಪರ ಅಂದದ್ಕೆಲ್ಲ ಚಿಕ್ಕ ಹೈಕಳು ಬೆದರೂವಂಗೆ ಬೆದರ್ತಾ ಅವೆ" ಎಂದು ಲಕ್ಕ

"ಬೋಡ್ಡನೂ ಬೊಗಳ್ತಾ ಇದೆಯಲ್ಲ?..." ಸಂದೇಹ ಪೂರ್ತಿಯಾಗಿ ನಿವಾರಣೆಯಾಗದೆ ಕೇಳಿದಳು.

"ಸರಿಕನ ಬುಡಿ. ಇನ್ನು ಈ ಬೊಡ್ಡಂಗೇನು ಕೇಮ? ಸಣ್ಣ ಪುಟ್ಟದ್ದ್ಯೆಲ್ಲ

ಬೊಗಳಾದೆ ಕೆಲ್ಸ!"

"ನಾನು ಯಾಕೆ ಕೇಳಿದೆ ಅಂದರೆ, ಚಿರತೆಯೊ ಹುಲಿಯೊ ಮೆಳೆ ಪಕ್ಕದಲ್ಲಿ ಬರ್ತಿರಬಹುದೇನೋ ಅಂತ ಸಂದೇಹ ಬಂತು– ಅದಕ್ಕೆ"

"ಊ, ಈ ಕಾಡ್ನಲ್ಲಿ ಹುಲಿ, ಚಿರತೆಗೇನು ಕಮ್ಮಿ. ಬಂದರೂ ಬತ್ತಿರಬೈದು. ಬೆಳ್ಳಗಿರೊ ಎತ್ತುಗಳ ಕಂಡು ಆವಕೆ ಆಸೆ ಆಗ್ದೆ ಇರ್ತಾದಾ, ನೀವೇ ಯೋಳಿ... ಆದ್ರೆ ಇಂಗೆ ಮೆಳೆ ಇಂದ್ಕೆ ಸದ್ದ ಮಾಡ್ತಿರೋದು ಒಂದು ಉಡ ಆಗಿರಬೈದು, ಒಂದು ಕೀರ ಆಗಿರಬೈದು, ಇನ್ನೇನಾರೂ ಆಗಿರಬೈದು..." ಎಂದು ಮಾತು ನಿಲ್ಲಿಸಿ 'ಉಚ್, ಉಚ್' ಎನ್ನುತ್ತ ಎತ್ತುಗಳನ್ನು ಚುರುಕುಗೊಳಿಸಿದ.

ಮುಂಜಾವಿನಲ್ಲಿ ದರುಮನಳ್ಳಿ ಬಿಟ್ಟು ಹೊರಡುವಾಗಲೆ ಹೆಪ್ಪುಗಟ್ಟಿದ್ದ ಮೋಡ ಸಣ್ಣಗೆ ಮಳೆಗರೆಯಲ್ಲಾರಂಭಿಸಿತು. ಕ್ರಮೇಣ ಅದರ ರಭಸ ಹೆಚ್ಚುತ್ತ ಹೋಯಿತು. ಗಾಳಿಯೂ ಜೋರಿನಿಂದ ಬೀಸುತ್ತಿದ್ದು ಬಂಡಿಯ ಹಿಂದುಗಡೆ ಕುಳಿತ ರುಕ್ಮಿಣಿಯು, ಮಳೆಯ ಎರಚಲಿನಿಂದ ತಪ್ಪಿಸಿಕೊಳ್ಳಲು ಗಾಡಿಯ ಹಿಂದಿನಿಂದ ಮೇಲೆ ಸರಿಯುತ್ತ ಹೋಗಬೇಕಾಯಿತು.

ಹೊರಡುವಾಗ ಅಸಾಧ್ಯ ಸೆಕೆಯಿದ್ದುದರಿಂದ ಲಕ್ಕ ಅಂಗಿ ಬಿಚ್ಚಿ ಮೊಣಕಾಲಿನವರೆಗೂ ಸುತ್ತಿದ್ದ ತುಂಡು ದಟ್ಟಿ ಪಂಚೆಯಲ್ಲೆ ಕುಳಿತು ಗಾಡಿ ಹೊಡೆಯುತ್ತಿದ್ದ ಒಮ್ಮೊಮ್ಮೆ ಕಣ್ಣು ಕೋರೈಸುವಂತೆ, ಬಾನಿನಲ್ಲಿ ಮಿಂಚು ಕವಲು ಕವಲಾಗಿ ಬೆಳಗುವುದು. ಆಗ ಅವನ ತೆರೆದ ಕಪ್ಪು ಮಯ್ಯಿ ನುಣುಪಾದ ಕಪ್ಪುಶಿಲೆಯಂತೆ ಥಳಥಳ ಹೊಳೆಯುವುದು. ಮಳೆಯ ಹನಿ ಮುತ್ತಿನ ಮಣಿಗಳಂತೆ ಅವನ ದೇಹದ ಮೇಲೆ ಚೆಲ್ಲಿದಾಗ, ಅದು ಚಿರತೆಯ ಮೈಯಂತೆ ಮಿರುಗುವುದು. ಅವನ ಮೈಯನ್ನೆ ಗಮನಿಸಿದಂತೆ, ರುಕ್ಮಿಣಿಯ ಅಂತರಾಳದಲ್ಲಿ ಹಿಂದೆ ಇಂಥದೇ ಗಾಡಿ ಪ್ರಯಾಣದಲ್ಲಿ, ರುದ್ರಪಟ್ಟಣದಿಂದ ಬರುತ್ತಿದ್ದಂತೆ ಕಳ್ಳರು ಮೇಲೆರಗಿದಾಗ, ಲಕ್ಕ ಜೀವದ ಹಂಗುದೊರೆದು ಹೋರಾಡಿದ ಘಟನೆ ನೆನಪಾಗಿ ಅವನ ಬಗ್ಗೆ ಅಭಿಮಾನ ಉಕ್ಕಿತು.

ಮುಂಭಾಗದಲ್ಲಿ ಮಳೆಯ ಎರಚಲು ಕಡಿಮೆ ಆದರೂ ಮಳೆಯ ಹನಿಗಳು ಮೈ ಮೇಲೆ ಬಿದ್ದಾಗ, ಲಕ್ಕನಿಗೆ ಎಲ್ಲಿಲ್ಲದ ಖುಷಿ!... ಮಳೆಯಲ್ಲಿ ನೆನೆಯುವುದೆಂದರೆ ಬಾಲ್ಯದಿಂದಲೂ ಲಕ್ಕನಿಗೆ ಆನಂದವೆ. ಈಗಲೂ ಕೂಡ ಮಳೆ ಹನಿಹನಿಯಾಗಿ ಮೈ ಮೇಲೆ ಎರಚುತ್ತ ಬಂದಾಗ, ಮಗುವಿನಂತೆ ಅವನು ಕುಲುಕುವುದನ್ನು ರುಕ್ಮಿಣಿಯು ಗಮನಿಸಿದಳು. ಆದರೆ ಮಳೆಯಲ್ಲಿ ಎತ್ತುಗಳ ನಡೆ ಮಾತ್ರ ಮಂದವಾಯಿತು.

ಮಳೆ ಹೊಯ್ದಾಗ ರುಕ್ಮಿಣಿಗೂ ಸಂತೋಷವೇ. ಗಂಡನ ಸಂಗಸುಖ ಅನುಭವಿಸಿದ ಮೊದಲ ರಾತ್ರಿಯಲ್ಲೂ ಇಂಥದೇ ಮಳೆ!... ಕಿಟಿಕಿಗಳಿಗೆ ಇಂಥವೆ ಹನಿಯ ತೆರೆ ಬೀಸಿ ಒಸಗೆಕೋಣೆಯಲ್ಲಿ ತಮ್ಮಿಬ್ಬರನ್ನೂ ಬೆಸೆದು ಹೊರಗಿನ ಪ್ರಪಂಚವನ್ನು ಮರೆಯುವಂತೆ ಮಾಡಿತ್ತು... ಇಂದು ಸಹ ದಾರದಾರವಾಗಿ ಸುರಿದು ಕಾಡನ್ನೆಲ್ಲ ಆವರಿಸಿದ್ದ ಮಳೆ, ತಾನು, ಲಕ್ಕ, ಗಾಡಿ ಎತ್ತುಗಳು, ಬೊಡ್ಡ– ಇವಿಷ್ಟನ್ನುಳಿದು ಸದ್ಯಕ್ಕೆ ಜಗತ್ತಿನಲ್ಲಿ ಇನ್ನು ಬೇರೆ ಯಾವ ವಸ್ತುವೂ ಇಲ್ಲವೆನ್ನುವಂತೆ ಮಾಯೆಯ ಮುಸುಕಿನ ಮೋಡಿ ಹಾಕುತ್ತಿತ್ತು...

ಇದೇ ಗುಂಗಿನಲ್ಲಿ ಅವಳ ಚಿತ್ತ ರೆಕ್ಕೆ ಕಟ್ಟಿ ಹಾರುತ್ತಿರುವಾಗ, ಥಟ್ಟನೆ ಸಿಡಿಲೊಂದ ಎದೆ ಝುಲ್ ಎನ್ನುವಂತೆ ಫಳಾರನೆ ಅಬ್ಬರಿಸಿತು. ಬೆಚ್ಚಿಬಿದ್ದ ರುಕ್ಮಿಣಿಯು 'ಅಮ್ಮಾ'– ಎಂದ ಚೀರಿ. ಈಗ ತೀರ ಸನಿಹದಲ್ಲಿದ್ದ ಲಕ್ಕನನ್ನು ಅಪ್ಪಿಬಿಟ್ಟಳು!.

ಅವಳ ಅಪ್ಪುಗೆಯಿಂದ ಭಯಭ್ರಾಂತನಾದ ಲಕ್ಕ.

"ಅಯ್ಯೊ, ನನ್ಯಾಕೆ ತಬ್ಬಿಕಂಡ್ರಿ– ಬುಡಿ... ಮಳೆಬಂದಾಗ ಸಿಡ್ಲು ವೊಡುದ್ರೆ, ಇಂಗೂ ಬೆಚ್ಚೋರ?– ಬುಡಿ, ಬುಡಿ" ಎಂದು ಬಿಡಿಸಿಕೊಳ್ಳಲೆತ್ನಸಿದ.

ಆದರೆ ರುಕ್ಮಿಣಿಯ ಹಿಡಿತ ಬಲವಾಗಿತ್ತು...

ಅವಳು ತನ್ನ ಮುಖವನ್ನು ಅವನ ಕುತ್ತಿಗೆಯ ಹಿಂಭಾಗಕ್ಕೆ ತಂದಾಗ, ಅವಳ ಉಸಿರಿನ ಬಿಸಿ ಬೆಂಕಿಯ ಬೆರಳುಗಳಿಂದ ಆ ಬಾಗವನ್ನು ನೇವರಿಸಿತ್ತು...

ಲಕ್ಕ ಮತ್ತೂ ತಳಮಳಕ್ಕೆ ಈಡಾದ. ತನ್ನನ್ನು ತಕ್ಕೆಯಲ್ಲಿ ಬಂಧಿಸಿದ ಅವಳ ತೋಳುಗಳಿಂದ ಬಿಡಿಸಿಕೊಳ್ಳುವುದು ಅವನಿಗೆ ಅಂಥ ಕಠಿಣವಾದುದೇನೂ ಆಗಿರಲಿಲ್ಲ. ಆದರೆ ತೀರ ಜುಲುಮೆ ಮಾಡಿ ಕೀಳಲು ಹೋದರೆ, ತನಗೆ ಮಾತೃಸ್ಥಾನದಲ್ಲಿರುವ ಅವಳ ಕೋಮಲ ಬಾಹುಗಳಿಗೆ ಎಲ್ಲಿ ನೋವಾದೀತೊ ಎಂದು ಆತಂಕಗೊಂಡ... ಮುಂದೆ ಅವನು ಬೇರೆ ಯಾವ ಯೋಚನೆ ಮಾಡಲೂ ಅವಕಾಶ ಕೊಡದೆ, ರುಕ್ಮಿಣಿ ಆವೇಶ ಬಂದವಳಂತೆ ಎರಗಿ, ಅವನ್ನು ಕೆಳಗೆ ಮಲಗಿಸಿ ತಾನು ಮಲಗಿ ಆಕ್ರಮಣ ಮಾಡಿದಳು!.... ಈಗಲೂ ಅವಳಿಗೆ ಎಲ್ಲಿ ನೋವಾಗುವುದೊ ಎಂದು ಕಂಪಿಸುತ್ತಲೆ ಅವಳ ಬಲಾತ್ಕಾರಕ್ಕೆ ಸೋತು ತನ್ನನ್ನು ಒಪ್ಪುಸಿಕೊಂಡಿದ್ದ ಆದರೂ ಅವನ ಬಾಯಿಯಿಂದ ಯಾಂತ್ರಿಕವಾಗಿ "ಬ್ಯಾಡಿ ಅಮ್ಮಾರೆ, ಬ್ಯಾಡಿ ಅಮ್ಮಾರೆ..." ಎಂದು ದುರ್ಬಲ ಉದ್ಗಾರ ಹೊರಡುತ್ತಲೇ ಇತ್ತು.

ಲಕ್ಕನಿಗೆ ಹೇಗೆ ಹೇಗೋ ಆಗಿತ್ತು. ರುಕ್ಮಿಣಿಯ ಆಕ್ರಮಣದಿಂದ ಅವನ

ಮನಸ್ಸು ಕಲಸಿಹೋಗಿತ್ತು. ಕಾಡಿನಲ್ಲಿ ಬಿದಿರು ಒಂದಕ್ಕೊಂದು ಮಸೆದಾಗ, ಸಣ್ಣದಾಗಿ ಕಾಣಿಸಿಕೊಂಡ ಕಿಡಿ, ಗಾಳಿ ಬೀಸಿದಂತೆ ಭುಗಿಲ್ಲನೆ ಜ್ವಾಲೆಯಾಗುವಂತೆ, ಅವನ ದೇಹಕ್ಕೂ ಬಿಸಿಯೇರಿತ್ತು... ಎಲ್ಲ ಮುಗಿದ ನಂತರ ಮಳೆ ಸುರಿದಾಗ ಆರುವ ಕಾಳ್ಗಿಚ್ಚಿನಂತೆ ಮತ್ತೆ ಆರಿ ತಣ್ಣಗಾಗಿತ್ತು.

ರುಕ್ಮಿಣಿಯು ಲಕ್ಕನ ಮೈಮೇಲಿನಿಂದ ಹೊರಳಿ ಮಗ್ಗುಲಾಗಿ, ಎದ್ದು ಕುಳಿತು, ಸೀರೆಯನ್ನು ಸರಿಪಡಿಸಿಕೊಳ್ಳುತ್ತಿದ್ದಳು., ದಡಬಡನೆ ಎದ್ದ ಲಕ್ಕ ಚಡ್ಡಿಯ ಗುಂಡಿಯನ್ನು ಹಾಕಿ, ದಟ್ಟಿಯನ್ನು ಜೋಪಾನವಾಗಿ ಉಟ್ಟು, ಗಾಡಿಯ ಒಳಗಿನ ಗೂಟಕ್ಕೆ ಸೆಕ್ಕಿಸಿದ್ದ ಹಗ್ಗಳನ್ನು ಕೈ ಗೆತ್ತಿಕೊಳ್ಳುತ್ತ, ಸಾವಧಾನವಾಗಿ ಹೋಗುತ್ತಿದ್ದ ಎತ್ತುಗಳನ್ನು ಚುರುಕುಗೊಳಿಸಿದ ಮಳೆ ನಿರರ್ಗಳವಾಗಿ ಹುಯ್ಯುತ್ತಲೆ ಇತ್ತು.

ಈ ಹೊಸ ಅನುಭವದಿಂದ ಚುರುಕುಗೊಂಡ ಅವನ ಮನಸ್ಸು ಹಳೆಯ ಅನುಭವವೊಂದನ್ನುನೆನೆಯತೊಡಗಿತು:

ಆಗ ಅವನಿನ್ನೂ ತಲೆಕೆದರಿ, ಗೊಣ್ಣೆ ಸುರಿಸಿಕತ್ತ ಚಡ್ಡಿ ಇಕ್ಕಂಡು ತಟ್ಟಾಡ್ತ ಇದ್ದ ಹೈದ. ಅತ್ತು ವಯಸ ಇರಬೈದು. ಕೆಂಗಣ್ಣಪ್ಪನ ಅಟ್ಟೀಲಿ ಜೀತಕ್ಕಿದ್ದ ಕಾಲ. ಆ ಗೌಡನ ಎಮ್ಮೆ ದನ ಯೆಲ್ಲಾನೂವೆ ಅಟ್ಟಕಂಡು ಅವ ಮೇಯಿಸಕ್ಕೆ ಅಡವಿಗೊಗಿದ್ದ. ಬಾಕಿ ಹೈಕಳ ಸಂಗಾಟ ಸಿವಾಚಾರದ ಗಂಗಿಯೂ ಬಂದಿದ್ದಳು– ಅವತ್ತು ಭಾನುವಾರ. ಮಟಕ್ಕೆ ರಜ ಅಲ್ವ, ಅದ್ಕೆ... ಕಾಡ್ನಲ್ಲಿ ವೋಟೋಟು ದೂರಕೆ ಬ್ಯಾರೆ ಬ್ಯಾರೆ ಗುಂಪಾಗಿ ನಾವೆಲ್ಲ ಹೈಕಳೂವೆ ದನ ಮೇಯಿಸ್ತಾ ಇವಿ. ಇದ್ದಕಿದ್ದಂಗೆ ಇವೋತ್ತಿನಂತದ್ದೆ ಮಳೆ ಗಟ್ಟಿಸಿ ಕೆಡವಿಬುಟ್ತು. ನಾವೆಲ್ಲರೂವೆ ಕಾಡಿಗೆ ವೊಂಟಾಗ ಮಳೆ ಸುಳುವೇ ಇರನಿಲ್ಲ ಅದುಕೇ ಕೆಲವು ಹೈಕಳಂಗೆ ಗಂಗಿ, ನಾನು ಏಡು ಆಳೂವೆ ಗೊರಗ ತಂದಿರನಿಲ್ಲ. ಮಳೆ ಏಟ ತಡೀನಾರ್ತೆ ವಸಿ ಹೈಕಳು ಮರ, ಮಂಟಿ, ಮೆಳೆ, ಮರೆಗೋಗಿ ಕುಂತೊ. ವಸಿ ಹೈಕಳು, ಗೊರಗು ತಂದಿದ್ದೋವು. ಗೊರಗಾಕಂಡಿದ್ರೂವೆ, ಅಟ್ಟಾಡೊ ಮಳೇಲಿ ದಪ್ಪಾನೆ ಮರಗೊಳ ಮರೆಗೋಗಿ ನಿಂತೊ. ದನಗೊಳೆಲ್ಲ ಮೆಳೆ ಮರೆಗೆ ವತ್ತರುಸಿ ನಿಂತೊ. ಗಂಗಿ, ನಾನು ಏಡಾಳೂವೆ ಒಟ್ಟಿಗೇಯ ದನ ಮೇಯಿಸ್ತಿದ್ದೋರು, ದೌಡು ವೋಡುದು, ಉಲಿಗುತ್ತೀಲಿ ಆಸ್ರಯ ಪಡೆದೊ. ಆ ಉಲಿಗುತ್ತಿ ಮ್ಯಾಲೆಲ್ಲ ಹಂಬು ಅಡಕ್ವಾಗಿ ಚಪ್ಪರದಂಗೆ ಸುತ್ತಾಲು ಮೂರು ಕಡೀಕೆ ಎಣೆಕಂಡು ವಳುಗಡೆ ಒಂದು ಅದಿನಾರು ಮೆಟ್ಟಿನ ಉಲಿ ನಿಸುರಾಗಿ ಕಾಲು ಚಾಚಿ ಬಿದ್ದುಕೊಬ್ಯೆದಿತ್ತು. ಸಣ್ಣ ಪುಟ್ಟ ಕರಿ ಅಸುರು ಎಲೆಗೊಳೆಲ್ಲ ಒಂದಕ್ಕೊಂದು, ಒಂದರ ಮ್ಯಾಕ್ಕೊಂದು ತಗಲಿ, ವತ್ತೊತ್ತಾಗಿ ಜಮಾಯ್ಸಿ, ಮ್ಯಾಗಿನಿಂದ ಒಂದು ತೊಟ್ಟು ಮಳೇನೂವೆ ವಳೀಕೆ ಬೀಳದಂಗೆ

ಮಾಡಿತ್ತು. ಈ ಉಲಿಗುತ್ಯ ಮೂಡಲ ಚೋರಿ ಬಾಯಿ ತೆರೆಕಂಡಿದ್ರಿಂದ, ಮೂಡಲ ಮಳೆ ಒಂದ ಬುಟ್ಟರೆ, ಬ್ಯಾರೆ ಕಡಿಂದ ಹುಯ್ಯೊ ಮಳೆಗೆ ಇದರೊಳ್ಗೆ ನೆನಿತಾನೆ ಇರನಿಲ್ಲ. ಕಳ್ಳರು, ಕಾಕರು, ದನ ಕಾಯೋರು ಈ ಗುತ್ತಿ ವಳುಚೋರಿ ಬೆಂಕಿ ಅತ್ತಿಸಿ, ಮಳೆ ವ್ಯಾಳ್ಯದಲ್ಲಿ ಬೀಡಿ ಅಚ್ಚಿಕೊಂಡು, ಬೆಂಕಿ ಕಾಯ್ತಾ ಕುಂತುಗತ್ತಿದ್ರು... ಈ ಉಲಿಗುತ್ತಿ ವಳೀಕೆ ನಮ್ಮ ತೆಲ ಇಕ್ಕೊದರ ಮಳುಗೇಯ, ಗಂಗಿ ನಾನು ಏಡು ಹೈಕಳೂವೆ ನೆಂದು ಪಜ್ಜಿ ಆಗಿದ್ದೊ... ಇದು ಮೂಡಲ ಮಳೆ ಆಗಿದ್ರಿಂದ, ಮೂಡಲ ಗಾಳಿ ರೊಯ್ ಅಂತ ಒಂದೊಂದು ದಪ ಬೀಸಿದಾಗ್ಲೂವೆ, ಒಂದೊಂದು ಸರವು ಮಳೇಯ ನಮ್ಮಿಬ್ಬರ ಮ್ಯಾಲೂ ಚಕ್ಕನೆ ಕೇರಿದಂಗೆ ಆಗೋದು... ಥಂಡಿ ಗಾಳಿ ಬೀಸಿತೊಂದ್ರೆ, ನೆಂದೋಗಿ ಕುಂತಿದ್ದ ನಾವಿಬ್ಬರೂವೆ ಚಳಿ ತಡಿನಾರ್ದೆ ಗಡ ಗಡ ನಡುಗಿನ, ಕಟಕಟ್ನೆ ಹಲ್ಲು ಕಡಿಯೋವಂಗಾಯ್ತಿಯ್ತು!... ಗಂಗಿ ಅಂಗೆ ನ್ವಾಡಿದ್ಲು. ಇಂಗೆ ನ್ವಾಡಿದ್ಲು. ಮಳೆನಿಲ್ಲೊ ಸುಳುವೆ ಕಾಣನಿಲ್ಲ. "ಆಸ್‌ಸ್‌ಸ್ ಯೇನು ಚಳಿ, ನಾ ತಡಕೋನಾರಿ" ಅಂದೋಳು, ನನ್ನ ತಬ್ಬಿಕಂಡು ಕೇಳೀಕೆ ಕೆಡವಿ ನನ್ನ ಮ್ಯಾಲೆ ಮನಗಿ, "ಇದೇನ ನೀ ಮಾಡ್ತಿರಾದು ಬ್ಯಾಡ, ಬ್ಯಾಡ" ಅಂತಿದ್ರೂವೆ, ನನ್ನ ಚಡ್ಡಿ ಗುಂಡಿ ಬಿಚ್ಚಿ, ತನ್ನ ಲಂಗೆತ್ತಿ ಉಜ್ಜಕ್ಕೆ ಮುಟ್ಟಿಕೊಂಡ್ಲು... ಗಂಗಿ ಆಗ್ಲೆ ಮಯ್ಯಿ ನೆರೆಯಕ್ಕೆ ಬಂದಿದ್ದಳು. ಅವುರಟ್ಟೀಲಿ ಮಸ್ತು ಕರಾವು. ಕಾಂದಾರಿ ಎಣ್ಣುಗೊಳಂಗೆ ಕೊದಾರಿಯಾಗಿ ಬೆಳುಕಂಡಿದ್ಲು..... ತೀಟೆ ತಡೀನಾರ್ದೆ ಇಂಗೆ ಅವಳು ಉಜ್ಜುತ್ತಾ ಇರಬೇಕಾದ್ರೆ, ನಂಗೆ ಉಚ್ಚೆಗೆ ಅವಸರಾಗ ಚಿರಕಿವೊಡದಂಗೆ ಮ್ಯಾಕಮುಖನಾಗಿ ಲೊಳ್ಳನೆ ಹುಯ್ದು ಬುಟ್ಟೆ!... ಆ ಸಂಗ್ತಿಯ ನೆನೀತಿದ್ದಂಗೆ ಲಕ್ಕನಿಗೆ ಎಂಗೆಂಗೋ ಆಯ್ತು!...

ಇನ್ನೂ ಕಾಡನ್ನು ದಾಟಿರಲಿಲ್ಲ. ಮಳೆ ನಿಂತಿತ್ತು ಆಗಳೆ ಉದಯವಾಗಿದ್ದ ಸೂರ್ಯ, ಚದರುತ್ತಿದ್ದ ಮೋಡಗಳ ಅಂಚಿಗೆ ಬೆಳ್ಳಿಯ ಲೇಪ ಮಾಡಿ, ಮೇಲೆ ಮೇಲೆ ಏರುತ್ತಾ ಇದ್ದ. ಮಳೆಯಲ್ಲಿ ಮಿಂದ ಅಡವಿ ಬೆಳಗಿನ ಪ್ರಭೆಯಿಂದ ಹೊಸ ಕಾಂತಿಯನ್ನು ವಡೆದಂತಿತ್ತು. ಆದರೆ ರುಕ್ಮಿಣಿಗಾಗಲಿ, ಲಕ್ಕನಿಗಾಗಲಿ ಆ ಹಸರು ಸೌಂದರ್ಯದತ್ತ ದೃಷ್ಟಿ ಹೊರಳಲಿಲ್ಲ. ಅವರಿಬ್ಬರೂ ಅನಿರೀಕ್ಷಿತವಾಗಿ ನಡೆದುಹೋದ ಪ್ರಸಂಗದಿಂದ ವಿವಶರಾಗಿ ಚಿಂತಿಸುತ್ತ ಸಾಗಿದ್ದರು. ಲಕ್ಕನಿಗೆ– ಆಗಬಾರದ್ದು ಆಗೋಯ್ತ–ಮುಂದಕೇನೋ? ಎಂಬ ಕಳವಳ... ರುಕ್ಮಿಣಿಯ ಅಂತರಂಗವೂ ತೀವ್ರತಮವಾದ ಕ್ಷೋಭೆಗೆ ಒಳಗಾಗಿತ್ತು–ಶಾಸ್ತ್ರಿಗಳು ಕೆದಕಿ ಕೆರಳಿಸಿದ ಅಂದಿನಿಂದ ಅವಳ ನರನರವೂ ಉದ್ರೇಕಗೊಂಡಿತ್ತು. ಒಳಗೊಳಗೇ ತನಗರಿವಿಲ್ಲದಂತೆಯೇ ಉಪಶಮನಕ್ಕಾಗಿ ಹಂಬಲಿಸುತ್ತಿತ್ತೇನೋ... ಆದರೆ ಇದರ

ಪರಿಣಾಮ ಏನಾಗುವುದೊ ಎಂಬ ವಿಚಾರ ಸುಳಿಯಿತು. ತಲ್ಲಣಗೊಂಡಳು... ಓ ಎಂಥ ಕೆಲಸ ಮಾಡಿಬಿಟ್ಟೆ? ಎಂಥ ಅಚಾತುರ್ಯವಾಯಿತು?...' ಎಂದ ಪಶ್ಚಾತ್ತಾಪದಲ್ಲಿ ಬೆಂದಳು.

ಕಾಡನ್ನು ದಾಟಿದೊಡನೆಯ ಲಕ್ಕ ಎತ್ತುಗಳನ್ನು ದೌಡಾಸಿದ. ಆರತಕ್ಷತೆ ಇನ್ನೇನು ಶುರುವಾಬೇಕು ಎನ್ನುವಷ್ಟರಲ್ಲಿ ಅವರು ಭೀಮನಳ್ಳಿಯನ್ನು ತಲುಪಿದ್ದರು.

"ಬರ್ತೀಯೊ ನಿಲ್ಲವೊ ಅಂದುಕೊಳ್ತಾ ಇದ್ದೆ... ಸದ್ಯ, ಬಂದೆಯಲ್ಲ" ಎನ್ನುತ್ತ ಅಕ್ಕ ಪಾರ್ವತಿ ಉಕ್ಕುವ ಪ್ರೀತಿಯಿಂದ ಅಲಂಗಿಸಿ,

"ಮಾವಯ್ಯ ಆರೋಗ್ಯವಾಗಿದ್ದಾರೆ ತಾನೆ?" – ಕುಶಲ ಪ್ರಶ್ನೆ ಮಾಡಿದಳು.

ಹೌದೆನ್ನುವಂತೆ ರುಕ್ಮಿಣಿಯು ತಲೆಯಾಡಿಸಿದಾಗ–

"ಯಾಕೆ ರುಕ್ಕೂ, ಕೊಂಚ ಕಂಗೆಟ್ಟಿರುವ ಹಾಗೆ ಕಾಣುತ್ತಲ್ಲ?... ಮೈಯಲ್ಲಿ ಸ್ವಸ್ಥ ಇಲ್ಲವೆ?.... ಏನು ಸಮಾಚಾರ?"

ಪಾರ್ವತಿಯು ಲೋಕಾಭಿರಾಮವಾಗಿ ಪ್ರಶ್ನಿಸಿದ್ದಳು. ಹಾಗೆ ಕೇಳಿದವಳು, ಪುಣ್ಯಕ್ಕೆ ರುಕ್ಮಿಣಿಯ ವದನವನ್ನು ಅವಲೋಕಿಸುತ್ತ ನಿಲ್ಲದೆ, ಎತ್ತುಗಳನ್ನು ಬಿಚ್ಚುತ್ತಿದ್ದ ಲಕ್ಕನ ಕಡೆಗೆ ತಿರುಗಿ,

"ಹಿತ್ತಲಲ್ಲಿ ನಮ್ಮಾಳು ಚೋರಕ ಇದ್ದಾನೆ. ಅವನ ಕೈಗೆ ನಿಮ್ಮೆತ್ತುಗಳನ್ನು ಕೊಡು. ಅವನು ಎತ್ತುಗಳನ್ನು ಕಟ್ಟಿಹಾಕಿ ಅವಕ್ಕೆ ಹುಲ್ಲು ನೀರು ಕೊಡ್ತಾನೆ" ಎಂದವಳೆ, "ಹಾಗೇನೆ ಕೈಕಾಲಿಗೆ ನೀರು ಈಸುಕೊ. ಹೊಟ್ಟೆಗೆ ಏನಾದರೂ ತಗೊಳ್ಳೀವಂತೆ" ಎಂದಳು.

ಲಕ್ಕ ನಿರುತ್ಸಾಹದಿಂದ,

"ಯೇನು ಬ್ಯಾಡಿ, ಅಮ್ಮಾರೆ. ನಾ ನಮ್ಮೂರ್ಗೇ ವೊಯ್ತೀನಿ" ಅಂದ.

"ಚಿ, ಚಿ! ಎಲ್ಲಾದರೂ ಉಂಟೇನೊ. ಇವತ್ತು ನಮ್ಮ ಮನೆಯಲ್ಲಿ ಮಂಗಳಕಾರ್ಯ. ನೀನು ಇವತ್ತು ಇದ್ದೇ ಹೋಗಬೇಕು" ಪಾರ್ವತಿ ಒತ್ತಾಯ ಮಾಡಿದಳು.

"ಇಲ್ಲ ಅಮ್ಮಾರೆ, ನಾ ವೋಗಲೇ ಬೇಕು. ನಮ್ಮಯ್ಯಂಗೆ ಏಡು ಜಿನದಿಂದ ಜರ."– ಸುಳ್ಳಿನ ಮರೆ ಬಿದ್ದಿದ್ದ ಲಕ್ಕ.

"ಅಯ್ಯಯ್ಯೊ, ಇದೇನೂ ನೀನು ಹೇಳ್ತಿರೋದು? ಮಂಗಳಕಾರ್ಯ ಮುಗಿಯುವವರೆಗೂ ನೀನು ಇರ್ತೀಯ, ಕಾರ್ಯ ಮುಗಿದ ಕೂಡಲೆ, ಅಕ್ಕ ಪಕ್ಕದ ಹಳ್ಳಿಗಳಿಂದ ಬಂದಿರುವ ನಮ್ಮ ನೆಂಟರಿಷ್ಟರನ್ನ ನಿನ್ನ ಗಾಡಿಯಲ್ಲೆ ಕಳಿಸೋಣ, ಎಂತಿದ್ದೆನಲ್ಲೊ?" ಎಂದು ಪಾರ್ವತಿ ಪೇಚಾಡಿದಳು,

"ಅದ್ಯಾಕೆ ಅಮ್ಮಾರೆ, ನಿಮ್ಮ ಗಾಡಿಗೇನಾಗದೆ?" ಕೇಳಿದ

"ನಮ್ಮ ಗಾಡಿ ದೂರಿ ಮುರಿದುಹೋಗಿದೆ. ಅದನ್ನ ರಿಪೇರಿಗೆ ಬಿಟ್ಟಿದೀವಿ. ಅದಕ್ಕೇನೆ ನೀನು ಇಲ್ಲೆ ಇದ್ದು ನಮಗೆ ಕೊಂಚ ಸಹಾಯ ಮಾಡು ಅಂತ ಕೇಳ್ತಿರೋದು..."

"ಇಲ್ಲ, ಇಲ್ಲ, ನಾ ವೋಗಲೇಬೇಕು... ನಮ್ಮ ಗಾಡ್ಯ ಬೇಕಾರೆ ನೀವು ಇಲ್ಲೆ ಇಟ್ಟುಗನ್ನಿ. ಗಾಡಿ ವೋಡಿಯಕ್ಕೆ ಯೆಂಗಿದ್ರೂ ನಿಮ್ಮಾಳು ಚೊರಕ ಇದ್ದೇ ಅವನೆ... ನಾ ವೋಗಿ ಅಯ್ಯಾರ್‍ಗೆ ಇಸ್ಯ ತಿಳುಸ್ತೀನಿ."

"ಹುಂ, ಇನ್ನೇನು ಮಾಡುವುದು. ನಿಮ್ಮ ತಂದೆಗೆ ಹುಶಾರಿಲ್ಲ ಎನ್ನುವಾಗ, ನಾವು ಹೇಗೆತಾನೆ ನಿನ್ನನ್ನ ತಡೆಯಲಿಕ್ಕೆ ಆಗುತ್ತೆ. ನಿಮ್ಮ ಗಾಡಿಯನ್ನು ಇನ್ನು ನಾಲ್ಕೈದು ದಿನಗಳಲ್ಲಿ ಕಳಿಸಿಕೊಡ್ತಾರಂತೆ ಎಂದು ಮಾವಯ್ಯನವರಿಗೆ ತಿಳಿಸು... ಆದೇನೋ ಸರಿ. ಆದರೆ ನೀನು ದೂರ ಪ್ರಯಾಣ ಮಾಡಿ ಬಂದಿದ್ದೀಯೆ, ಮತ್ತೆ ಹಸಿದು ನೀನು ನಡೆದು ಹೋಗಲಿಕ್ಕೆ ನಾನೆಂದೂ ಒಪ್ಪಲ್ಲ. ಹೊಟ್ಟೆಗೆ ನೀನು ಏನಾದರೂ ತಗೊಂಡೇ ಇಲ್ಲಿಂದ ಹೊರಡಬೇಕು."– ಪಾರ್ವತಿ ಒತ್ತಾಯ ಪಡಿಸಿದಳು.

ವಿಧಿಯಿಲ್ಲದೆ ಒಪ್ಪಿ, ಲಕ್ಕ ಎತ್ತುಗಳನ್ನಟ್ಟಿ, ಅವರ ಮನೆಯ ಹಿಂದಿನ ಹಿತ್ತಲಿಗೆ ಹೊರಟ. ಅವನು ತೆರಳುವುದನ್ನೇ ವೀಕ್ಷಿಸುತ್ತಿದ್ದ ಪಾರ್ವತಿ,

"ನಿಮ ಲಕ್ಕನ್ನ ನೋಡಲಿಕ್ಕೇ ಒಂದು ಸಂತೋಷ ಆಗುತ್ತೆ ನೋಡೆ ನಕ್ಕು... ನಮ್ಮರೈತರು ಹೇಳ್ತಾರಲ್ಲ–ಕೊರಡ ಬಿಗಿದ ಹಂಗೆ ಬೆಳದವ್ನೆ ಅಂತ – ಹಾಗೆ ಬೆಳೆದಿದ್ದಾನೆ, ಹುಡುಗ!... ನಮ್ಮ ಚೋರಕನೂ ಇದ್ದಾನೆ ನೋಡು. ನಾವು ಎಷ್ಟೆಷ್ಟೇ ಪೋಷಾಕು ಮಾಡಿದರೂ ಅವನು ಮಾತ್ರ ಸೀಕಲ್ಲ ಕೊತ್ತೀನೆ!" ಎನ್ನುತ್ತ ನಕ್ಕಳು.

ರುಕ್ಮಿಣಿ ಮಾತು ತಿರುಗಿಸಿ,

"ಇದೇನಕ್ಕ, ನಮ್ಮ ಸರಸಿ, ಗಿರಜಿ ಇಬ್ಬರೂ ಕಾಣ್ತಾನೆ ಇಲ್ಲ?" ಎಂದು ಕೇಳಿದಳು.

"ಅಯ್ಯೊ, ಅವರಿಬ್ಬರನ್ನೂ ಸಾದಾ ದಿನಗಳಲ್ಲೇ ಹಿಡಿಯುವುದು ಪ್ರಯಾಸ. ಇನ್ನು ಇಂಥ ಸಂಭ್ರಮದ ದಿನದಲ್ಲಿ ಕೇಳಬೇಕೆ?... ಒಳಗಡೆ ಎಲ್ಲೊ ಸುತ್ತಾಡ್ತ ಇರಬೇಕು. ಬಾ, ನೋಡೋಣ" ಎನ್ನುತ್ತ ಪಾರ್ವತಿ ಕೈ ಹಿಡಿದು ಎಳೆದಾಗ, ರುಕ್ಮಿಣಿಯ–

"ಅಕ್ಕ, ನಾನು ಸ್ನಾನ ಮಾಡಬೇಕಲ್ಲ..." ಎಂದು ತಡವರಿಸಿದಳು.

"ಯಾಕೆ ಬೆಳಿಗ್ಗೆ ಸ್ನಾನ ಮಾಡಲಿಲ್ಲವೆ?..." ಎಂದು ಅನ್ಯಮನಸ್ಕಳಾಗಿ ಪ್ರಶ್ನಿಸಿದಳು. ಅಲ್ಲಿಗೆ ಬಂದ ನೆಂಟತಿಯೊಬ್ಬಳಿಗೆ "ನಮ್ಮೆಜಮಾನರಿಗೆ ರುಕ್ಕು ಬಂದಿದ್ದಾಳೆ ಎಂದು ತಿಳಿಸು" ಎಂದು, ನಂತರ ರುಕ್ಮಿಣಿಯತ್ತ ತಿರುಗಿ ನೋಡಿ,

"ಇಲ್ಲ, ನೀನು ತೀರ ತೆಗೆದುಹೋಗಿರುವ ಹಾಗಿದೆ, ರುಕ್ಕು..." ಎನ್ನುತ್ತಿರುವಂತೆ, ರುಕ್ಮಿಣಿಯು–ನೆನೆದಿದ್ದೀನಿ. ಏನೋ ಮುಜುಗರ. ಮತ್ತೆ ಸ್ನಾನ ಮಾಡಿದರೆ ಎಷ್ಟೋ ಹರ್ಷ ಆಗುತ್ತೆ." ರುಕ್ಮಿಣಿ ವಿವರಣೆಯಿತ್ತಳು.

ಆಗ ಕಣ್ಣಿಟ್ಟು ಸರಿಯಾಗಿ ರುಕ್ಮಿಣಿಯನ್ನು ನೋಡಿದಳು ಪಾರ್ವತಿ.

"ಅಯ್ಯೊಯ್ಯೊ, ನನ್ನ ಗಡಿಬಿಡಿಯಲ್ಲಿ, ನೀನು ನೆನೆದಿರೋದನ್ನೂ ನೋಡಿಲ್ಲ ನಾನು. ನಡಿ, ನಡಿ. ಹಂಡೆಯಲ್ಲಿ ನೀರು ಕಾಯ್ತಾನೆ ಇದೆ. ಬೇಗ ಬೇಗ ಸ್ನಾನ ಮಾಡಿ ಸಿದ್ಧವಾಗುವಿಯಂತೆ, ಬಾ..."

ತಂಗಿಯನ್ನು ಪ್ರಿತಿಯಿಂದ ತಬ್ಬಿ, ತಮ್ಮ ಮನೆಯೊಳಗೆ ಹೋಗುತ್ತ, ಪಡಸಾಲೆಯಲ್ಲಿ ಅಡ್ಡವಾದ ತನ್ನ ಯಜಮಾನರಿಗೆ, ಪಾರ್ವತಿಯು–

"ವಾಲಗದೋರು ಇನ್ನೂ ಬಂದೇ ಇಲ್ಲವಲ್ಲ" ಎಂದು ಆಕ್ಷೇಪಿಸಿದಳು.

"ಅದನ್ನೇ ವಿಚಾರಿಸಲು ಹೊರಟೆ"– ಎಂದು ಚಂದ್ರಶೇಖರಯ್ಯ, "ಯಾಕೆ ರುಕ್ಕ–ಇಷ್ಟು ಕಂಗೆಟ್ಟು ಹೋಗಿದ್ದೀಯೆ?" ಎಂದು ಕೇಳಿದ.

"ಕಾಡುಹಾದಿ, ಗಾಡಿ ಪ್ರಯಾಣ, ಕೊಂಚ ಬಳಲಿದ್ದಾಳೆ, ಅಷ್ಟೆ. ಈಗ ನೀವು ವಾಲಗದವರನ್ನು ಮೊದಲು ಹೋಗಿ ತರದೂದು ಮಾಡಿ ಕರೆದುತನ್ನಿ." – ಅವಸರದಿಂದ ಹೇಳಿದ ಪಾರ್ವತಿ, ರುಕ್ಮಿಣಿಯನ್ನು ತ್ವರೆಯಿಂದ ಬಚ್ಚಲುಮನೆಗೆ ಕರೆದೊಯ್ದಳು.

## ೨೧

ಪಾರ್ವತಮ್ನ ವತ್ತಾಯಕೆ ಯೇನೊ ಒಂದೀಟು ವೋಟ್ಟೆಗಾಕಿ, ಭೀಮನಳ್ಳಿಯ ಇಂದುಕಾಕಿ, ಲಕ್ಕ ಆಗ್ಲೆ ಕಾಡುಹಾದೀಲಿ ವಾಪಸಾಗ್ತಾ ಇದ್ದ. ಜ್ವತ್ಗೆ ಬೊಡ್ಡ ನಗರ್ತ ಬತ್ತಿತ್ತು. ಆಗ್ಲೆ ಬಿಸುಲು ಯೇರ್ತಾ ಇತ್ತು. ಇಂದಿನ ಜಿನ ಮಳೆ ಬಿದ್ರೆ, ಮಾರನೆ ಜಿನ ಕಾಡ್ನಲ್ಲಿ ನಡೆಯಕ್ಕೆ ಲಕ್ಕಂಗೆ ಯಾವೊತ್ತು ಉಮೇದೆ!... ಆದರೆ ಆ ಹ್ವತ್ತು ಲಕ್ಕಂಗೆ ಯಾಕೊ ಬಿಡಬ್ಯಾಸರ. ಜೋಲು ವೊಕ ಅಕ್ಕಂಡು, ಆ ಮೆಳಿಂದ ಈ ಮೆಳೆಗೆ ಪುತರ ಪುತರ ಸದ್ದು ಮಾಡ್ತ ಓಡೋಗೊ ಗೌಜಲಕ್ಕೀನೊ ಕಾಡುಕೋಳೀನೊ ಅಟ್ಟಾಡಕ್ಕೆ ವೊಂಟ ಬೋಡ್ಡನ್ನ ಒದ್ದು, ನಾಕೇಟು ಬಾರಿಸಿ, ಹ್ವಟ್ಟೆ ತುಂಬ ಬೋಗುಳ ಬಯ್ಕಿಕೊತ್ತ ಬತ್ತಾ ಇದ್ದ. ಆ ಸಮಯಕ್ಕೆ ಸರ್‍ಯಾಗಿ

ಯಾವುದೊ ಮರದ ಮ್ಯಾಗ್ನಿಂದ ಒಂದು ಹಕ್ಕಿ ಕೂಗಿ ದಂಗಾಯ್ತು:

ಉಪ್ಪಲ ಸೆಟ್ಟಿ
ಉಪ್ಪಲ ಸೆಟ್ಟಿ
ನೀ ತರ್ರೆ
ನಾ ಪುರ್ರೆ...

ಲಕ್ಕನ ಮನಸು ಒಂದು ಹೊಳ್ಳು ಹೊಳ್ತು ಇಂದಿಂದ್ಕೆ ಚಿಮ್ತು...

ಆಗಿನ್ನೂವೆ ಇಂಗೇಯ ಬತ್ತಾ ಇರಬೇಕಾರೆ, ಇಂತಾದ್ದೆ ಒಂದು ಸೋರೆ ಕಟ್ಟಿ ಹಕ್ಕಿ, ಸಮ ಸಮಾ ಇದೇ ಜಾಗದಾಗೆ ಇದೇ ತರ, ಇದೇ ವರಸೇಲಿ ಕೂಗ್ತಿತ್ತು... ಅದು ಗೆಪ್ತಿ ಆಯ್ತಿದ್ದಂಗೆ ಆ ಹಕ್ಕಿ ಸಂಗ್ತಿ ಗ್ಯಾಪನ ಆಯ್ತು: ಒಬ್ಬ ಉಪ್ಪುಲಸೆಟ್ಟಿ ಒಂದು ಇಂತಾ ಸೋರೆ ಕಟ್ಟನ್ನ ಇಡಿದು, ಅದರ ರೆಕ್ಕೆ ಪುಕ್ಕ ತರದಾಕಿ, ಅದ್ನ ತನ್ನ ಎಗುಲು ಮ್ಯಾಲೆ ಕುಂಡರಿಸ್ಕಂಡು, ಉಪ್ಪಿನ ಯಾಪಾರಕ್ಕೆ ಊರೂರು ತಿರುಗ್ತಾ ಇದ್ನಂತೆ. ಅವನೇನು ತಿಳುಕಂಡಿದ್ದ– ಈ ಹಕ್ಕಿ ರೆಕ್ಕೆ ಪುಕ್ಕ ತರದಾಕಿವ್ನಿ. ಇನ್ನು ಇದು ಹಾರಕ್ಕೇ ಇಲ್ಲ. ನನ್ನ ವಸದಲ್ಲೇ ಇರ್ತದೆ. ಅಟ್ಟಿಗೆ ವೋದ ಮ್ಯಾಲೆ ನನ್ನ ಎಡತಿ ಕೈಯಲ್ಲಿ ಇದ ಬೇಯಿಸಿ, ಪಳಿದ್ಯ ಮಾಡಿ ತಿನ್ನಬೇಕೂಂತ ಲೆಕ್ಕ ಆಗಿದ್ದ. ಆದ್ರೆ ಕಾಲ ಕಳದಂಗೆ, ಇಂಕರ ಇಂಕರಾಗಿ ಆ ಹಕ್ಕಿಯ ರೆಕ್ಕೆ ಪುಕ್ಕ ಬೆಳೀತ ವೋದೊ. ಒಂದು ಜಿನ, ಪೂರಾ ಬೆಳುದ ಮ್ಯಾಗೆ, ಆ ಸೋರೆಕಟ್ಟ ಆ ಉಪ್ಪಲ ಸೆಟ್ಟಿ ಹೆಗಲ ಮ್ಯಾಗಿನಿಂದ ಮ್ಯಾಕ್ಕೆ ಹಾರಿ, "ಉಪ್ಪುಲ ಸೆಟ್ಟಿ, ಉಪ್ಪಲ ಸೆಟ್ಟಿ–ನೀ ತರ್ರೆ, ನಾ ಪುರ್ರೆ..." ಅಂತ ಈಯಾಳ್ಸಿ ವೊಂಟೋಯ್ತಂತೆ!...

ಲಕ್ಕ ಈ ಇಸಯಾನೆ ಮೆಲುಕಾಕ್ತ ಬತ್ತಾ ಇದ್ದ. ಭೀಮನಹಳ್ಳೀಲಿ ವೊಟ್ಟಿಗೆ ಪುಟ ಬಲವಾಗಿ ಬಿದ್ದಿತ್ತಲ್ಲ. ಆ ಮೇಕಿನಲ್ಲಿ ಒಂದು ವರಸೇಲಿ ಕುಲುಕುಲುಕ್ತ ಜೊತೇಲಿ ಬತ್ತಿದ್ದ ಬೊಡ್ಡ, ಇದ್ದಕ್ಕಿದ್ದಂತೆ ಕಣ್ಣಿಗೆ ಕಾಣಿಸ್ದೆ, ಲಕ್ಕ "ಮಾಳತದ್ದು, ಯಾವ ಕಿರುಬನ ಬಾಯಿಗೆ ವೋಯ್ತೊ!.... "ಗೊಣಗ್ತ, ಹೊಳ್ಳಿ ನ್ವಾಡ್ದ. ಒಂದು ದಪ್ಪ ಹುರುಗಲು ಮರದ ಮೋಟು ಬೊಡ್ಡೆಗೆ ಕಾಲೆತ್ತಿ ಆರಾಮವಾಗಿ ಅದು ಉಚ್ಚೆ ಹುಯ್ಯುತ್ತಿತ್ತು!– ಅದ್ನೆ ನ್ವಾಡ್ತಿದ್ದಂಗೆ ಲಕ್ಕಂಗೆ ಇಂದ್ಕೆ ಅಲ್ಲಿ ನಡದ ಒಂದು ಪರಸಂಗ ನೆಪ್ಪಾಯ್ತು:

ತಾನು ಬಾಕಿ ದನ ಕಾಯೊ ಹೈಕಳ ಜ್ವತ್ಗೆ ಇಂಗೇಯ ಇಂದುಕೊಂದು ಜಿನ ಬತ್ತಾ ಇದ್ದ. ಆಗ ಎತ್ತತ್ತಗೊ ನ್ವಾಡ್ಲ ಬತ್ತದ್ದ ಉಳಿಕೆ ಹೈಕಳು 'ಉಸ್' ಮಾಡಿ, ರಾಗ ತಗ್ಗುಸಿ, "ಅಲ್ಲಿ ನ್ವಾಡ್ಲ ಅಪ್ಪಯ್ಯ!..." ಅಂತ ಬೆಟ್ಟು ಮಾಡಿ ತೋರಿದ್ರು. ಅದೇನಪ್ಪ ಅಂತ ತಿರುಗಿ ನ್ವಾಡಿದ್ರೆ, ಯಾರಾದ್ರೂ ಬೆಪ್ಪಾಗೊ ಅಂತ

ದ್ರುಸ್ಸಯವೆ!... ಮೈಗೆ ಹ್ವಾಸಾ ಸ್ಯಾಲೆಸುತ್ತಿ, ಕೈಯಿಗೆ ಮೊಕ್ಕೆಲ್ಲ ಅರಿಶಿಣ ತ್ವಡದು, ಅಣೆ ಮದ್ಯಕ್ಕೆ ರೂಪಾಯಿ ಅಗಲ ಕುಂಕಮ ಇಕ್ಕಂಡು, ತಲೆ ಕೆದರಿಕಂಡು, ಒಂದು ಎಂಗಸು ಕಣ್ಮುಚ್ಚಿ ಅಕ್ಕ ಪಕ್ಕ ಚಿಗುರತಾ ಇದ್ದ ಹುರುಗಲು ಮರದ ಬೊಡ್ಡೆಗೆ ಬೆನ್ನ ಮರುಗಿಸಿ ಕುಂತಿದ್ದಲು. ಅವಳ ಕುತ್ತಗೇಲಿ ಚೆಂಡು ಹೂವ್ನ ಹಾರ!... ಇದ್ಯಾಕಪ್ಪ ಇಲ್ಲಿ ಬಂದು ನಿದ್ದೆ ಮಾಡ್ತಿದ್ದಳು ಈವಮ್ಮ? ಅಂತ, ಒಬ್ಬ ಹೈದ ಮೆತ್ತಗಂದ. ಇಲ್ಲೆ ಯಾವ್ದೊ ಪಕ್ಕದ ಹಳ್ಳಿಯೋಳು ಇರಬೈದು, ಅಂತ ಇನ್ನೊಂದು ಹೈದ. ವೋಟ್ಟರಲ್ಲಿ ನಮ್ಮೆಲ್ಲಾರನೂವೆ ತಡದು ನಿಲ್ಲುಸಿ ಇನ್ನೊಂದು ಹೈದ ಯೋಳ್ದ...

"ಸರ್‍ಯಾಗಿ ನ್ವಾಡುರ್ಲ- ಅವಳ ಸುತ್ತಾಲೂ ಎಂಗೆ ಕುರಿಗಳು ಸಾಲುಗಟ್ಟಿ ಕುಂತವೆ!... ಕುರಿ ಮೇಯಿಸಕ್ಕೆ ಬಂದೋಳು, ಅಂಗೆ ನಿದ್ದೆ ಜೋಂಪು ಅತ್ತಿ, ಆ ಮರದ ಬೊಡ್ಡೆಗೆ ವರುಗಿ ಕುಂತವ್ಳೆ!"

ನಾವೆಲ್ಲರೂ ಇನ್ನೂ ಸಮೀಪವೋಗಿ ನೊಡುದ್ರೆ. ಅವಳ್ನ ಸುತ್ತುಗಟ್ಟಿ ಅಪ್ಪು ದೂರಕೆ ಸಾಲಾಗಿ ರುಸಿಗಳಂಗೆ, ಆ ಕಾಡೀಕಾಗ್ಲಿ ಈ ಕಡೀಕಾಗ್ಲಿ ಇಂಕರಾನೂ ಮಿಸುಕಾಡ್ದೆ ಕುಂತಿದ್ದೋವು ಕುರಿಗಳಲ್ಲ-ರಣಹದ್ದುಗಳು! ಅನ್ನೊ ಇಸ್ಯ ತಿಳೀತು- ನೂರಾರು ರಣದ್ದುಗಳು! ಇದ್ಯಾಕಪ್ಪ ಇಲ್ಲಿಗೆ ಬಂದು ಇಂಗೆ ಕುಂತವೆ?... ನಾವು ಹೈದಳೆಲ್ಲಾರು ಚಿಂತಿಸ್ತಾ ಇದ್ದಂಗೆ, ಕಾ ಕಾ ಕಾ ಅಂತ ಅತ್ತಿರದ ಮರದ ಮ್ಯಲೆ ಕುಂತಿದ್ದ ಒಂದು ಕಾಗೆ ಕೂಗ್ತು. ಅದರ ಇಂದುಗುಟ್ಟಲೆ ಸುತ್ತಾ ಮುತ್ತ ಮರಗಳ ಮ್ಯಲೆ ಕುಂತಿದ್ದ ಕಾಗೆಗಳೆಲ್ಲ ಕಾ ಕಾ ಕಾ ಬಾಜಾ ಬಜಂತ್ರೀಯ ಬಜಾಯಿಸಕ್ಕ ಮುಟ್ಟಿಕಂಡೊ!... ರಣದ್ದು ಮಾತ್ರ ಮಿಸಿಕಾಡ್ದೆ ಕುಂತೇ ಇದ್ದೊ!... ಇಂಗಿರೋನೂವೆ, ಅತ್ತಿರದ ಮರದ ಮ್ಯಾಗೆ ಕುಂತ ಒಂದು ಕಾಗೆ ಮರದ ಮ್ಯಾಗಿನಿಂದ ಹಾರಿ ಕೆಳಿಕೆ ಬಂತು. ಹೈಕಳು, ಇದೇನಪ್ಪಾಂತ ಉಸಾರಾಗಿ, ಇನ್ನೂ ಮುಂದಕ್ಕೆ ಚಿಗದು ನ್ವಾಡುದ್ರೆ- ಆ ಯಮ್ಮನ ಮುಂದೆ ಒಂದು ದೊಡ್ಡ ಮೊನೆ ಬಾಳೆಲೆ ಆಸಿತ್ತು. ಅದರ ಮ್ಯಾಲೆ, ಅನ್ನದ ರಾಸಿ ಗೋಪುರ ಕಟ್ಟಿತ್ತು. ಆ ರಾಸಿ ಅಂಚಿಗೆ ಯೇನೇನೊ ಸೀ ಪದಾರ್ತ, ಚಿಪ್ಪು ಬಾಳೆ ಹಣ್ಣು, ತೆಂಗಿನಕಾಯಿ ಹೋಳು, ಕಡಲೆಪುರಿ, ಈಳ್ಯದೆಲೆ ಇವೆಲ್ಲ ಇದ್ದಂಗಿತ್ತು. ಆ ಮೊನೆ ಬಾಳೆಲೆ ವತ್ತಿಗೇಯ ಚರಿಗೆ ಗಾತ್ರದ ಹ್ವಸಾ ಮಡಿಕೆಲಿ ನೀರು ಬ್ಯಾರೆ ತುಂಬಿ ಇಟ್ಟಂಗಿತ್ತು... ಇದ್ಯಾಕಪ್ಪ ಇವನೆಲ್ಲ ತಂದಿಟ್ಟಿರಾದು ಅಂತ ನಮಗೆ ಚೋಜಿಗ... ಅವಳೇ ತಿನ್ನಕೆ ತಂದು ಇಟ್ಟು ಕಂಡು ವೋಟರಲ್ಲಿ ಕಣ್ಣಿಗೆ ನಿದ್ದೆ ಅತ್ತಿ ಮನಗಿ ಬುಟ್ಟಿರಬೈದು, ಅಂತ ಒಂದುಕೊಂದು ತರ್ಕ ಮಾಡಿದೊ... ಯಾವ ತರ್ಕಕೂವೆ ಈ ಒಂಟು ಬಗೆ ಅರೀನೆ ಇಲ್ಲ!...

ಕಾಗೆ ಅತ್ತಾಗಿ ಇತ್ತಾಗಿ ಸೂಕ್‌ಸ್ಮಾಗಿ ನ್ವಾಡಿ, ಯಾಕೊ ಮತ್ತೆ ಹಾರೋಗಿ ಮರದ ಮ್ಯಾಲೆ ಕುಂತಗತ್ತು. ರಣಹದ್ದುಗಳು ಚಿಂಕರಾನು ಮಿಸುಕಾಡ್ದೆ ತೆಪ್ಪಗೆ ಕುಂತೇ ಇದ್ದೊ... ವಸಿ ವ್ಯಾಳ್ಯ ಇಂಗೇ ಕಳೀತು. ತಟ್ಟನೆ ಮೊದ್ದಲು ಕೆಳೀಕೆ ಇಳುದಿದ್ದ ಕಾಗೆ ಸರಕ್ಕನೆ ಮರದಿಂದ ಇಳುದು ಅನ್ನದ ರಾಸಿಗೆ ಬಾಯಾಕಿ, ಕೊಕ್ಕಿಗೆ ಸಿಕ್ಕಿದೋಟು, ಅನ್ನದ ಅಗಳ ಕಚ್ಚಿ, ಮರದ ಮ್ಯಾಕ್ಕೆ ಹಾರೋಗಿ ತನ್ನ ಹಿಂದ್ನ ಜಾಗದಲ್ಲೆ ತಿಂತಾ ಕುಂತುಗತ್ತು...

ಕಾಗೆ ಅಂಗೆ ಒಂದು ಅನ್ನದ ಅಗಳ ಎತ್ತಿಗಂಡೋದ್ರೂ ಎಚ್ಚರಗ್ದೆ ಆರಾಮಾಗಿ ನಿದ್ದೆ ವೋಡೀತಿದ್ದ ಎಂಗಸಿನ ಭಯ ವಸಿ ತೆಪ್ಪಿ, ಆ ಎಂಗಸಿನ ಸುತ್ತಾನೂ ಗುಂಡಗೆ ಕುಂತಿದ್ದ ರಣದ್ದುಗಳು ಒಂದಕೊಂದು ಮಾತಾಡಿಕಂಡ ಪರೀಲಿ ಒಟ್ಟಿಗೇಯ ಒಂದು ಸಲ ತಂತಮ್ಮ ಮುಂದಕೆ ಕುಪ್ಪಿದೊ...

ಆ ಕಾಗೆ ತಾನು ಎತ್ತಗಂಡೋಗಿದ್ದ ಅನ್ನದ ಅಗಳ ತಿಂದು ಮುಗುಸಿ, ಮತ್ತೊಂದು ಸರ್ತಿ ಹಾರಿ ಬಂದು, ಆಚೋರಿ ಈಚೋರಿ ಒಂದು ದಪ್ಪ ಕತ್ತು ಕೊಂಕಸಿ ನ್ವಾಡಿ, ಇನ್ನೊಟು ಅನ್ನದ ಅಗಳ ಕಚ್ಚಿಗಂಡೋಯ್ತು...

ಅಲುಗಾಡ್ದೆ ಕುಂತಿದ್ದ ರಣದ್ದುಗಳು ಗುಂಡಗೆ ಇನ್ನೊಂದು ಕುಪ್ಪು ಮುಂದಕೆ ಕುಪ್ಪುದೊ

ಈಗ ಮಾತ್ರ ಬಾಕಿ ಕಾಗೆಗಳೂವೆ ಕಾ ಕಾ ಕಾ ಎಂದು ಕೂಗ್ತ, ಒಂದೊಂದಾಗಿ ಏಡೇಡಾಗಿ ಸುತ್ತಾನೆ ಮರಗಳಿಂದ ಇಳುದು ಒಂದು ಅನ್ನದ ಅಗಳುಗಳ ತಂತಮ್ಮ ಕೊಕ್ಕಿನಲ್ಲಿ ಕಜ್ಜಿಕಂಡೋದೊ...

ರಣದ್ದುಗಳು ಇನ್ನೂ ಒಂದು ಕುಪ್ಪು ಮುಂದಕೆ ಕುಪ್ಪುದೊ...

ಪುನಾ ಕಾಗೆಗಳು ಗುಂಪಾಗಿ ಇಳುದು ಬಂದು ಆ ಮೊನೆ ಬಾಳೆಲೆ ಮ್ಯಾಲಿದ್ದ ಉಳಿಕೆ ಅನ್ನ, ಸೀ ಪದಾರ್ತ, ಬಾಳೆಹಣ್ಣು, ತೆಂಗಿನ ಹೋಳು ಯೆಲ್ಲಾನೂವೆ ಲೂಟಿ ಮಾಡಿಕಂಡೋದೊ...

ಕಾಗೆಗಳು ಎತ್ತಿಕಂಡು ವೋದಂಗೊದಂಗೆ ರಣದ್ದುಗಳೂವೆ ಇನ್ನೂ ಮುಂದಮುಂದ್ಕೆ ಮುಂದಮುಂದ್ಕೆ ಕುಪ್ಪುತಾ ಕುಪ್ಪುತಾ ನಡುದೊ...

ತಾನು, ಹೈಕಳೂ ಎಲ್ಲಾರೂವೆ ಈ ಚೋಜಿಗಾವ ಉಸುರು ಕಚ್ಚಿ ನ್ವಾಡ್ತಾ ಇದ್ದೊ.

ನಾಕೈದು ಕಾಗೆಗಳು ಒಟ್ಟಿಗೇ ಮಡಿಕೆ ನೀರ ಕುಡಿಯಕ್ಹೋಗಿ ಮಡಿಕೆ ನೀರ ಉಂಟಿಸಿ, ಅದರ ಸುತ್ತ ಕದ್ನಕ್ಕೆ ಸುರುಮಾಡ್ದೊ...

ಇದ್ಯಾಪಾಟಿದೆಯ್ಯ ನಿದ್ದೆ ಅಮರಿಕಂಡದೆ ಈ ಎಂಗಸ್ಗೆ ಅಂತಾ ನಾವು ಬೆರುಗಾದೊ.

ನಾವೆಲ್ಲಾರು ನ್ವಾಡ ನ್ವಾಡ್ತಿದ್ದಂಗೇಯ ಒಂದು ರಣದ್ದು ಸುಮಾರು ಒಂದು ಮುಕ್ಕಾಲು ಮಾರಿನೋಟು ಉದ್ದದ ತನ್ನ ರೆಕ್ಕೆಗಳ್ನ ಕೆದರಿ, ಸಟ್ಟನೆ ಆ ಕುಂತಿದ್ದ ಎಂಗಸಿನ ಮ್ಯಲೆ ಎರಗ್ತು. ಆ ಕ್ಷಣಕೆ ಆ ಎಂಗಸಿನ ದೇಯ ವಕ್ಕಡೀಕೆ ಮುಂಟಿಗಂತು!... ಆದ ಕಂಡು ನಮಗೆಲ್ಲ ದೊಡ್ಡೋನಾಗಿದ್ದ ಹೈದ ಉಸುರ್ದ– "ಆ ಎಂಗಸು ನಿದ್ದೆ ಮಾಡ್ತ ಇಲ್ಲ ಕನರ್ಲ– ಅವಳು ಸತ್ತೋಗವಳೆ!... ಅದು ಅವಳ ಹೆಣ– ಇಲ್ಲದಿದ್ರೆ ಈ ಪಾಟಿ ಸದ್ದುಗದ್ದಲದಲ್ಲಿ ಅವಳು ಎಚ್ಚಾರಾಗ್ದೆ ಇರ್ತಿದ್ಲ?... ಆಲ್ಲದೇಯ ಆ ರಣದ್ದು ಅಂಗೆ ಮ್ಯಾಲೆ ಎಗರಿ ಬಿದ್ದರೂವೆ ಚಿಂಕರಾನು ಚೀರದೆ ಅಂಗೆ ಯಾರಾರು ಸುಮ್ಕೆ ಮಂಟಿಗಂಡಾರ?..."

ಒಂದು ರಣದ್ದು ಎಗರಿ ಬಿದ್ದು ಅವಳ ಎದೆ ಗುಂಡಿಗ್ಯ ಕುಕ್ಕಿ ವೋಟು ಮಾಂವುಸವ ಆ ಗುಡಿಂಗ್ಯಿಂದ ಕಿತ್ತ ಕ್ಷಣಕೆ, ಅವಳ ಸುತ್ತಾಲು ಕುಂತಿದ್ದ ಎಲ್ಲಾ ರಣದ್ದುಗಳೂವೆ ನಾ ಮುಂದೆ ತಾ ಮುಂದು ಅನ್ನೋವಂಗೆ ಗರಿಕೆದರಿ ಆ ಎಂಗಸಿನ ಹೆಣದ ಮ್ಯಾಲೆ ಎಗರಿ ಬಿದ್ದೊ. ಸಿಕ್ಕಸಿಕ್ಕದೋಟು ಮಾಂವುಸವ ಕಿತ್ತೊ. ಜಾಗ ಸಿಕ್ಕದೇ ವೋದಾಗ, ಕೀ ಕೀ ಕೀ ಅಂತ ಕೀರ ಕೀರ್ಲಾಗಿ ಕಿರುಚ್ತ ಒಂದಕ್ಕೊಂದು ಕಡಿದಾಡಿ ಮಡಿದ ಬೀಳ್ತಾ ಇದ್ದೊ...

ಇದ ಕಂಡು ನಮಗೆ ಇನ್ನು ಅಲ್ಲಿ ನಿಂತು ನ್ವಾಡ್ತಿರಕ್ಕಾಗನಿಲ್ಲ. ನಾವೆಲ್ಲಾರೂ ದನ ಅಟ್ಟಿಕಂಡು ಬಿದ್ದಂಬೀಳ ಒಂದೇ ಉಸುರ್ಗೆ ವಟ ಹ್ವಡದೊ.

ಅವತ್ತು ನಾತ್ರೆಗೆ ಆ ದೊಡ್ಡ ಹೈದ ವಿನಾಯ್ಸಿ, ನಾನೂ ಸೇರಿದಂಗೆ ಐದು ಹೈಕಳಿಗೂ ಬೆಂಕಿ ಕಾದಮಗೆ ಜರ ಕಾಯ್ತು. ಎಂಟತ್ತು ಜಿನ ಬುಡನೇ ಇಲ್ಲ. ನಾವು ಹೈಕಳೆಲ್ಲ ಹೆಣಾವ ಆ ಪರಿಪಟ್ಟಲ್ಲಿ ಕಂಡು ಕಂಗಾಲಾಗಿದ್ದೊ. ನಾನಂತೂ ಹೆಣಾವ ಪೋಟು ಸಮೀಪ, ಅದೂ ಆ ಪರೀಲಿ ನ್ವಾಡಿದ್ದು– ಇದೇ ಮೊದಲ್ನೆ ಸಲ!... ಜರದ ತಾಪದಲ್ಲಿ ನನ್ನ ಗ್ಯಾನ ಯಾತಾವು ಯಾತಾವೊ ಸುಳುದಾಡ್ತ ಇತ್ತು... ನಾನೊಂದು ಮರದ ಬೊಡ್ಡೆಗೆ ಅಂತು ಕುಂತಿರೋವಂಗೆ, ಸುತ್ತಾಲು ಗುಂಡಗೆ ಸದ್ದಿಲ್ದೆ ತೆಪ್ಪಗೆ ಕುಂತಿದ್ದ ಆ ರಣದ್ದುಗಳು ವಸಿವಸ್ಯಾಗಿ ಕುಪ್ಪುತಾ ಕುಪ್ಪುತ ಬಂದು, ಕಡೀಕೆ ಅವೆಲ್ಲಾ ಒಟ್ಟೊಟ್ಟಿಗೆ ತಮ್ಮ ರೆಕ್ಕೆಗಳ ವೋಟೋಟು ಅಗಲಕೂ ಕೆದರಿ, ಗಕ್ಕನೆ ಮ್ಯಲೆರಗಿ, ನನ್ನ ಸರೀರದ ಮಾಂವುಸವ ಕುಕ್ಕಿ ಕುಕ್ಕಿ ತಿಂತಾ ಇದ್ದಂಗೆ ಕಂಡು ಕಿಟಾರ್ನೆ ಕಿರುಚ್ದೆ!... ಅವ್ವ ಎದ್ದು, "ಯೇನಾಯಿತ್ಲ ಮೊಗಾ?... ನಾ ಇಲ್ಲೇ ಇವ್ನಿ. ಎದುರಿಕೊಬ್ಯಾಡ ಮನಕ್ಕೊ" ಅಂತ ತಬ್ಬಿ ಕಂಡು ಮೈದಡವಿದ್ಲು...

*　　　　*　　　　*　　　　*

ತಾನು ಕಂಡದ್ದ ಕಂಡಂಗೆ ಎಲ್ಲಾ ನೂವೆ ಅವ್ವನ ಕುಟ್ಟೆ ಯೋಳಿ,

"ಅದ್ಯಾಕವ್ವ ಅವಳ ಹೆಣವ ಅಂಗೆ ಕುಂಡರಿಸಿದ್ರು?" ಕೇಳಿದ್ದ.

"ಬಿಮ್ಮಂಸೆ ಆದ ಎಂಗಸು ಸತ್ತರೆ, ಹ್ವಟ್ಗೆ ವಳುಗಡೆ ರೊ ಇನ್ನೊಂದು ಜೀವೊವೇ ಸತ್ತಂಗೆ ಅಲ್ವ?– ಅದುಕೆ ಸುಮಾರು ಜಾತಿ ಜನ ಮಣ್ಣು ಬಗದು, ಅಂತಾ ಹೆಣವ ಹೂಳಕ್ಕಿಲ್ಲಕನಪ್ಪ– ಒದು ಪಕ್ಕಸ ಹೂತೆ, ಆ ಹೆಣವ ಹೂತ ಆಸುಪಾಸ್ನಲ್ಲಿ ಮಳೆ ಬೆಳೆಯೇ ಅಗಕ್ಕಿಲ್ಲವಂತೆ!– "ಇಂಗೆಲ್ಲ ಇವರಿಸಿದ್ದಲು, ಅವ್ವ.

ತನ್ನ ಅವ್ವ ಜಿನ ಯೋಳಿದ ಮಾತ್ನೆ ನೆನೀತ ದರಮನಳ್ಳಿ ಕಡೀಕೆ ಲಕ್ಕ ತನ್ನ ಪಯಣವ ಮುಂದುವರಿಸ್ದ. ಯತಾ ಪರ್ಕಾರ ಬೊಡ್ಡ ಅವನ್ನ ಇಂಬಾಲಿಸ್ತು.

## ೨೨

ಲಕ್ಕ ಕಾಡ್ನಿಂದ ಬತ್ತಾ ಇದ್ದಂಗೆ ಕೆಂಗಣಪ್ಪ ತನ್ನ ಹೊಲದ ಪಕ್ಕದ. ಬಯಲ್ನಲ್ಲಿ ಕುಂತು ಏನ್ನೊ ಅರಸ್ತಾ ಇದ್ದದ್ದು ಕಾಣಿಸ್ತು. ಲಕ್ಕ ಅದೇ ದಾರೀಲಿ ವೋಗಬೇಕಲ್ಲ! ಕೆಂಗಣ್ಣಪ್ನ ಹದ್ದಿನ ಕಣ್ಣ ತೆಪ್ಪಸಿ ವೋಗೋವಂಗಿಲ್ಲ. ಸುಮಾಸು, ಬಂದದ್ದು ಬರಲಿ– ಅಂದು ನ್ಯಾರವಾಗಿ ಕೆಂಗಣ್ಣಪ್ಪ ಏನ್ನೋ ಅರಸ್ತಿದ್ದ ತಳಕ್ಕೇ ಹ್ವಾದ.

"ಆದೇನ್ರಯ್ಯ ಈಟೊಂದು ಬಗೇಲಿ ಉಡುಕ್ತಾ ಇದ್ದೀರಿ?... ಯೇನ್ನಾರ ಕಳಕಂಡ್ರ.?" ಕೇಳ್ದ.

"ಇಲ್ಲ ಕನ್ಲ ಲಕ್ಕ ನಾ ಯೇನ್ನೂ ಕಳಕಂಡಿಲ್ಲ..."

"ಮಂತೆ, ಈ ಬಟಾ ಬಯಲ್ನಲ್ಲಿ ಯಾಕೆ ಇಂಗೆ ಕುಂತು ತಡಕಾಡ್ತ ಇದ್ದೀರಿ?"

"ನಿಂಗೆ ಗ್ವತ್ತಿಲ್ಲೇನ್ಲ–ಪುರುಸರತ್ನ ತಡಕಾಡ್ತಾ ಇವ್ನಿ"

"ಅದಾ?..." ಅಂತ ವಳವಳುಗೇ ಲಕ್ಕ ನಕ್ಕ. ದಾತು ರುದ್ದಿಗೆ ಕೆಂಗಣಪ್ಪ ಅಗಾಗ ಈ ಪುರುಸರತ್ನದ ಸೊಪ್ಪ ತಿನ್ತಾ ಇದ್ದದ್ದು ಲಕ್ಕಂಗೂ ಗ್ವತ್ತಿತ್ತು.

"ಊ. ಅದೇಯ... ನನ್ನ ಜ್ವತೇಲಿ ಕುಂತು ಉಡುಕಾಡಿ ಈ ಪುರುಸರತ್ನದ ಸೊಪ್ಪ ವಸಿ ಜಮಾಯ್ಸಿ ಕ್ವಡು, ಮತ್ತೆ. ಆಗ್ಲೇ ಬಿಸಿಲು ಏರ್ತಾ ಅದೆ. ನಂಗೋಬ್ಬಂಗೇ ತಗ ಆಯ್ತುದೆ."– ಕೆಂಗಣಪ್ಪ ಇಂಗಂದು "ಅಂಗೇ ಆಮ್ಯಕೆ, ನಮ್ಮಟ್ಟಿ ತಾವಿಕೆ ತಿರುಗಾಡಿಕಂಡು ಬಾ. ನನ್ನೆಡತಿ ಕಜ್ಜಾಯ ಮಾಡವಳೆ" ಅಂದು ಪುಸಿ ಮಾಡ್ದ.

ಕಜ್ಜಾಯ ಅಸೀದೊ, ಬಿಸಿದೊ– ಅನ್ನೋ ಮಾತು ನಗ ಬೆರಕ್ಯಾಗಿ ಲಕ್ಕನ ನಾಲಿಗೆ ಮ್ಯಲೆ ಉಳ್ಳಾಡಿತೆ ವಿನಾ ತುಟಿಯಿಂದಾಚ್ಗೆ ಹೊಳ್ಳನಿಲ್ಲ... ಗೌಡ ಗ್ವಾಗರೀತ ಅವ್ನೆ. ಅಲ್ಲದೇಯ ಇಂದುಕೆ ಬಾಲ್ಯದಲ್ಲಿ ಅವ್ನ ಅಟ್ಟೀಲಿ ಜೀತಕೆ

ಇರನಿಲ್ವ, ತಾನು?– ತುಸ ವೊತ್ತು ಜ್ವತ್ಯಾಗಿ ಕುಂತು ಒಂದೋಟು ಸೊಪ್ಪು ಕಿತ್ತುಕೊಟ್ಟರೆ, ಅದ್ಯಾವ ಸಾಮ್ರಾಜ್ಯ ಕಳುದೋದದು?... ಅಲ್ಲದೇಯ ಈ ಗಾಟಿ ಗೌಡ್ನ ಈಟು ಸಣ್ಣ ಇಸ್ಯಕ್ಕೆಲ್ಲ ಯಕೆ ಯೆದುರಾಕೊಬೇಕು?

ಇಂಗೆ ಚಿಂತುಸಿ, ಆ ಬಯಲ್ನಲ್ಲಿ ಲಕ್ಕ ಪುರುಸರತ್ನವ ತಾನೂ ಅರಸ್ತ ವೊಂಟ ಗೌಡ ಸಂತುರುಪ್ತನಾಗಿ ಕುಂತ ತನ್ನ ಉಡುಕಾಟದವ ಮುಂದುವರಿಸ್ದ. ಗರಿಕೆ ಅಂಗೇ ಇದ್ದು ಪುಟಾಣಿ ನಕ್ಸತ್ರದ ತರ ಹೂವು ಇರೊ ಪುರುಸರತ್ನ ಸೊಪ್ಪ ಕುಕ್ಕರಗಾಲ್ನಲ್ಲಿ ಕುಂತು ಕೀಳ್ತ,

'ಇನ್ನೇಟು ಪುರುಸರತ್ನ ತಿಂದರೆ ತಾನೆ ಈವಯ್ನ ಎಂದೊ ವೊಂಟೋದ ಪುಂಸತ್ವ ವಾಪಸು ಬಂದಾತು?'– ತನ್ವಳಗೇ ಯೋಳಿಕೊಂಡು ನಗಡ್ಡ. 'ಮತ್ತೆ ಆಪಾಟಿ ಗ್ಯಾನಗೆಟ್ಟು ಆಟ ಆಡಿದರೆ ಯಾವ ಪುಂಸತ್ವ ತಾನೆ ಅದೇಟು ಜಿನ ಉಳುದಾತು?... ಮೊದ್ಲೆ ಯೋಳಕ್ಕಿಲ್ವಾ ಗಾದ್ಯ– ಅನ್ನ ಅದೆ ಅಂತ ಉಂಡೋನು ಕೆಟ್ಟ, ಎಣ್ಣು ಅವಳ ಅಂತ ವೋದೋನು ಕೆಟ್ಟ, ಅಂತಾವ!...' ಅಂದುಕೊತ್ತ ಇದ್ದಮಗೆ, ಗೌಡ್ನ ಅಟ್ಟಿಲಿ ತಾನು ಜೀತಕ್ಕಿದ್ದ ದಿನಗಳು ಗ್ಯಾಪನ ಅದೊ:

ಅದರಾಗು ಒಂದು ಜಿನ ಗೌಡನ ಎಡತಿ ತೌರಿಗೋಗಿದ್ಲು. ಲಕ್ಕ ಅಟ್ಟ ವಳುಗಡೇಗೆ ಇದ್ದ ಕ್ವಟ್ಟಿಗೆ ಅಂಚಿಗೆ, ವಳುಗಿನ ಜಗತಿ ಕೈಪಿಡಿ ಪಕ್ಕದಾಗೆ ಮನಗಿದ್ದ. ಇನ್ನೊಚ್ಚೊರಿ ದನ ಕರ ಕಟ್ಟಾಕಿತ್ತು. ಎಡತಿ ಇಲ್ಲದಿದ್ದಾಗ ಕೆಂಗಣ್ಣಪ್ನ ಅಟ್ಟ ವಳುಗಡೆ ಜಗತಿ ಮ್ಯಾಲೇ ಮನಗ್ತಿದ್ದ...

ಮೊಖದ ತುಂಬ ಕಂಬಳಿ ಕವುಚಿ ಮನಗಿದ್ದ ಲಕ್ಕಂಗೆ ಅದ್ಯಾವ ಮಾಯದಲ್ಲಿ ನಿದ್ದೆ ಬಂತೊ, ಗ್ವತ್ತಿಲ್ಲ. ಮಕಾಡಿ ಮನಗಿದ ವಸಿ ವೊತ್ನಲ್ಲೆ ಇರಬೇಕು, ಯರೊ ಉದ್ದುದ್ದಕೆ ತನ್ನ ಮಯ್ಯಿ ಮ್ಯಾಲೆ ಭಾರ ಹೇರಿ ಮನಗಿದಂಗಾಯ್ತು!... ಎಚ್ಚರಾದರೂವೆ ಕಣ್ಣು ಮಾತ್ರ ತೆರೀನಿಲ್ಲ. ಎದರಿಕೆ. ಯವುದೊ ಪಿಶಾತಿ ಬಂದು ಹೇರಿಕಂತು ಅಂತ ಲಕ್ಕ ಬೆಮತೋದ... ಆದ್ರೆ, ಆ ಹಾಳು ಪಿತತಿ ತನ್ನ ಚಡ್ಡಿ ಯಾಕೆ ಬಿಚ್ಚಬೇಕು?– ಅರ್ತವೆ ಆಗದೆ ಕಣ್ಣು ಮುಚ್ಚಿದಂಗೇಯ ಅಲ್ಲು ಮರಿ ಕಚ್ಚಿ, 'ಜಡೆಮುನಿ, ಕಾಪಡಪ್ಪ' ಅಂತ ಮನದಾಗೆ ಪ್ರಾರ್ತನೆ ಮಾಡ್ತ ಸುಮ್ಮನೆ ಬಿದ್ದುಕಂಡ... ಥೂ, ಇದೇನ– ಕುಂಡಿ, ಒಳತೊಡೆಯೆಲ್ಲನು ತಣ್ಣಗಾಯ್ತು ಅದಲ್ಲ!...

"ನಾನೇ ಕನ್ಲ–ಗಾಬರಿ ಬೀಳಬ್ಯಾಡ"– ಪುಸಿ ಮಾಡ್ತ ಗೌಡ ಕಂತು ಗಂಡು ತನ್ನ ಟುವಲ್ನಿಂದ ಕುಂಡಿ ವರುಸ್ತಾ ಇದ್ದ!...

ಲಕ್ಕ ತಟಕ್ನೆ ಎದ್ದು ಕುಂತು ಅಳಕ್ಕೆ ಸುರು ಮಾಡ್ದ... ಗೌಡ ಲಕ್ಕನ ಕೆನ್ನೆ ಸವರ್ತ,

“ದಮ್ಮಯ್ಯ ಕನ್ಲ. ನನ್ನೆಡತೀಗೆ ಮಾತ್ರ ಈ ಸುದ್ಯ ಯೋಳಬ್ಯಾಡ” ಗ್ವಾಗರಿಯಕ್ಕೆ ಮುಟ್ಟಕಂಡ. ಲಕ್ಕಂಗೆ ಸಮಾಧಾನ ಆಗಿ ಪುನಾ ಮನಗಬೇಕಾರೆ ನಾತ್ರೆ ಸುಮಾರು ವ್ಯಾಳ್ಯಾನೆ ಕಳೀತು...

ಅವತ್ನಿಂದ ಮುಂದಕೆ ಗೌಡ ಇನ್ನು ತನ್ನ ತಂಟೆಗೆ ಬರನರ ಅಂತ ಲಕ್ಕ ಬಗದ. ಅಂಗೂವೆ ಏಡು ನಾತ್ರೆ ಕಳುದು ಮೂರನೇ ನಾತ್ರೆ ಲಕ್ಕಂಗಿನ್ನೂ ನಿದ್ದೆ ಬಂದಿಲ್ಲ. ಗೌಡನೂವೆ ನಿದ್ದೆ ಬರದೆ ಹ್ವಳ್ಳಡುತಿದ್ದೊನು ದನ ಹಾದಾಡ್ತನೆ ಅಂತ ನೆಪ ತಕ್ಕಂಡು ಮೆತ್ತಗೆ ಎದ್ದ ಬಂದು ತನ್ನ ತಾವು ನಿಂತ. ಮನುಸನ ರಕ್ತದ ರುತಿ ಪಾಟಾದ ಹುಲಿ ಮತ್ತೆ ಉಡುಕ್ಕಂಡು ಬಂದೆ ಅನ್ನುಸ್ತು ಲಕ್ಕಂಗೆ...ಇನ್ನು ಸುಮ್ಮಕಿದ್ರೆ ಚೆಂದಿಲ್ಲ ಅಂದೂನೆ ಒಂದೇಡು ಸರ್ತಿ ಜೋರ್‍ನಿಂದ ಕೆಮ್ಮಿದ... ಯಾಕೊ ಸರಿಯಿಲ್ಲ, ಹೈದ ಉಸಾರಾಗವ್ನೆ ಅಂತಲೊ ಯಾನೊ ಗೌಡ ಅವತ್ತೇ ಕಡೆ, ಅದರಿಂದ ಮುಂದಕೆ ತನ್ನ ತಂಟೆಗೆ ಬರನಿಲ್ಲ. ಎಚ್ಚು ಜುಲುಮೆ ಮಾಡಿದ್ರೆ, ಹೈದಯಲ್ಲಿ ತನ್ನೆಡತಿಗೆ ಯೋಳಿಬುಟ್ಟಾನೊ ಅನ್ನೋಭಯ ಇರಬೈದು!...

*   *   *   *

ಪುರುಪಸರತ್ನದ ಸೊಪ್ಪ ಕೆಂಗಣ್ಣಪ್ಪ ಸಾಕು ಅನ್ನೋವೋಟು ಜಮಾಯ್ಸಿ ಆಗಿತ್ತು” ಇನ್ನು ಸಾಕು, ನಡೀಲಾ ಲಕ್ಕ” ಅಂದು, ಕೆಂಗಣ್ಣಪ್ಪ ಎದ್ದ. ಲಕ್ಕನೊಂದಿಗೆ ಊರ್‍ನ ಕಡೆ ವೊಂಟ. ಅವರಿಬ್ಬರೂವೆ ಬತ್ತಾ ಇರೋನೂವೆ ಊರ್‍ನ ಸಮೀಪ್ದ ಒಂದು ಹೊಲದಲ್ಲಿ ನೀಲಂಗಾಲದ ಮಾದೇವಪ್ಪನೂ ಅವ್ನ ಎಡತಿ ಬಸಮ್ಮನೂವೆ ಒಂದೊಂದು ಕೊಡದಲ್ಲಿ ಏನೋ ತುಂಬಿ ಹೊಲದ ಮ್ಯಾಕ್ಕೆಲ್ಲ ತೆಳ್ಳಗೆ ಚೆವುಕಸ್ತ ಇದ್ದರು. ಅದ್ನೆ ನ್ವಾಡ್ತ ನಡದ ಕೆಂಗಣ್ಣಪ್ಪ.

“ಈ ಮುಕ್ಕಗಳಿಗೊಂದ ಬ್ರಾಂತು–ಅದೊಂದು ಬಂಜರು ಭೂಮಿ. ಇವರು ಅದೇಟು ಹ್ವಸ ರಕ್ತ ತಂದು ನೀರಿಗೆ ಬರೆಸಿ ವೊಲಕ್ಕೆಲ್ಲ ತಕ್ಕಳಿಸಿದ್ರೂವೆ, ನೆಲ ಫಲವತ್ತಾಕ್ಕಿಲ್ಲ. ಉತ್ತಮಾದ ಫಸಲ ಕ್ವಡಕ್ಕಿಲ್ಲ ” –ತನಗೆ ತಾನೆ ಒಪ್ಪುಸಿಕೊಳೋನ ರೀತಿ ನುಡುದ.

ಲಕ್ಕ ಆ ಜಿನ ಬೆಳೂಗಾಗೊ ಮುನ್ನ ಹೊಲಗೇರಿಂದ ಹ್ವಂಟು ಕಿಸ್ಣಸಾಸ್ತ್ರಿಗಳ ಕಮಾನುಗಾಡಿ ಕಟ್ಟಕ್ಕೆ ಬತ್ತಿರೋನುವೆ ಮಾದೇವಪ್ನ ಮನೆ ಸಿಕ್ತು. ಅಲ್ಲಿ ವಸಿ ಜನ ಗುಬ್ಬಲು ಪರದಾಡ್ತ ಇದರು ಯೇನು ಇಸ್ಯ? ಅಂದು ಲಕ್ಕ ಕೇಳಿದ್ದ. ಆಗ ಯಾರೊ ಅಂದಿದ್ದರು.: “ಮಾದೇವಪ್ನ ಮೂರನೆ ಎಣ್ಣು ಕೆಂಪಿ ಇಲ್ವೆನ್ಲ!– ಅವಳು ಇವತ್ತು ಕೋಳಿ ಕೂಗಕ್ಕೂ ಮುಂಚ್ಯೆ ರುತಮತಿ ಆದ್ಲು.”

ಅದು ಸ್ಮರುಣೆ ಬಂದು, ಅವರು ಏಡಾಳೂವೆ ನಡಸ್ತ ಇದ್ದ ಕಾಯಕಕ್ಕೆ

ಕಾರಣ ಲಕ್ಕಂಗೆ ಹ್ವಳುದೋಯ್ತು.

ಕೆಂಗಣಪ್ಪ, ಲಕ್ಕ ಇಬ್ಬರೂವೆ ವೊಲಗೇರಿ ಸಮೀಪ ಬರೋ ವ್ಯಾಳ್ಯಾಕ್ಕೆ ಟಗರೂರನ ಗುಡ್ಲ ಮುಂದ್ಕೆ ಐದೂರು ಯಜಮಾನ್ರು ಘೇರಾಯಿಸಿದ್ರು, ಕೆಂಗಣಪ್ಪ ಆ ಕಡೆ ಒಂದಾವರ್ತಿ ದುಸ್ಟಿ ಹಾಯ್ಸಿ.

"ಯಾನೊ ಪಂಚಾತಿ ಅಂತ ಕಾಣುಸ್ತದೆ ಕನ್ಲ. ಈ ಜನಕೆ ಇನ್ನೇನು ಕೇಮೆ. ಇವರ ಮ್ಯಾಲೆ ಅವರ ತಳ್ಳಿ, ಅವರ ಮ್ಯಾಲೆ ಇವರ ತಳ್ಳಿ, ತಮ್ಮ ಕಯ್ಯ ಕಾಯಿಸ್ಕಳಾದು" ಎಂದು ಪುರುಸರತ್ನವ ಬಾಯಲ್ಲಿ ಮಣಕಿಸ್ತ ಹ್ವಂಟೇ ವೋದ. "ಅಟ್ಟಿಗೆ ಬಾರ್ಲ, ಕಜ್ಜಾಯ ಮಾಡವ್ಳೆ ನನ್ನೆಡತಿ"ದ ಮಾತು ಆ ಬಯಲಿಗೇ ಬಿದ್ದೋಯ್ತು.

ಲಕ್ಕಂಗೆ ಮಾತ್ರ ಜೀವ ತಡೀನಿಲ್ಲ. ಸಾದಾರಣಕೆ ಪಂಚತಿ ಸೇರ್ತಿದ್ದುದ್ದು ಊರ ನಡುತಾವಿನ ಚಾವಡೀಲಿ. ಈಗ ವೋಲಗೇರಿಗೇ ಯಾಕೆ ಬಂದವ್ರೆ, ಈ ಜಯಮಾನ್ರು?– ಯಾನೊ ಗನವಾದ ಇಸಯವೆ ಇರಬೈದು ಅಂದುಕೊತ್ತ, ಯಜಮಾನ್ರು ಜಮಾಯ್ಸಿರೊ ಕಡೀಕೆ ವೋದ.

ಟಗರೂರ ತಲೆಯ ಮಂಡಿಗ್ಗೆ ಹೆಟ್ಟಿ ಕುಕ್ಕರಿಸಿ ಕುಂತಿದ್ದ. ಅವನ್ಗೆ ಮೂರು ಮಾರು ದೂರದಲ್ಲಿ ಗುಡ್ಲು ತಡಿಕೆ ವರಿಕ್ಕಂಡು ಅವ್ನ ಹೊಲತಿ ಹುಚ್ಚು ಬೊರಿ ಸ್ಯಾಲೆ ಸೆರಗಿನ ತುದಿಯ ಉಂಡೆ ಮಾಡಿ ಬಾಯೋಳಿಕೆ ಸೆಕ್ಕಿ ದುಕ್ಕಡಿಸ್ತಿದ್ಲು. ಕೇಮೆಗೆ ಇನ್ನೂ ವೊಗದಿದ್ದ ಹೊಲಗೇರಿ ಎಂಗಸರು ತಂತಮ್ಮ ಗುಡ್ಲು ವಳುಗ್ನಿಂದ ಇಣಿಕಿ ಪಣಿಕಿ ನ್ವಾಡ್ತಿದ್ರು, ಮನಿಪಾರೆ ಹುಲ್ಲಿನಲ್ಲಿ ನಾಗರ ಸೆಡೆ ಮಾಡಿ ಆಡಿಕತ್ತಿದ್ದ ಹೈಕಳು ಆಡೋದ ನಿಲ್ಲುಸಿ, ಕಣ್ಣ ಅಗಲ್ಸಿ ನ್ವಾಡ್ತಾ ನಿಂತಿದ್ದೊ.

"ದಪಾ ದಪಾ ಅದೇ ಸೊಲ್ಲು. ಯೆಲ್ಲಿ ತರಾನೆ ಅಂದ್ರೆ, ಎಂಗಾರು ತರಬೇಕಪ್ಪ... ಆ ಹೈದ್ನ ಕ್ರಿಯಾದಿಗಳು ನಡೀಬ್ಯಾಡದ?" ಗಂಗಪ್ಪ ಜೋರು ಮಾಡ್ತಿದ!...

ಟಗರೂರ ನಿದಾನಕೆ ತಲೆ ಎತ್ತಿ, ಪಟೇಲರ ಕಡೀಕೆ ತಿರುಗ್ದ.

"ಅದೇನ ಅಲ್ಪ ಸೊಲ್ಪ ದುಡ್ಡ ಪಟೆಲ್ರೆ?– ಸಾವ್ರ ರೂಪಾಯಿ!... ನಾ ಯೆಲ್ಲಿಂದ ತರಾನೆ?" – ಬೆದರಿ ಬೆದರಿ ಅವ್ನು ಮಾತಾಡ್ದಾಗ, ಮಾರಮ್ಮ ಮುಂದಕೆ ಬಲಿ ಕ್ವಡಕೆ ತಂದು ನಿಲ್ಲಿಸ್ದ ಕುರಿ ವದುರಾಡೊವಂಗೆ ತೋರ್ತು, ಲಕ್ಕಂಗೆ!

"ಯೆಲ್ಲಿಂದ ತರಾನೆ, ಯಲ್ಲಿಂದ ತರಾನೆ– ಅಂತಾನೆ ಸತಾಯಿಸ್ತ ಕುಂತಿದ್ರೆ, ಈ ನ್ಯಾಯ ಸವೆಯಕ್ಕಿಲ್ಲ. ಯಾರ ಅಟ್ಟೀಲಾರೂ ಜೀತಕಿರ್ತೀನಿ ಅಂತ

ಈಸುಗಂಬಂದು ಅನ ಕಟ್ಟಬೇಕು ಕನ್ಲ."

"ಈಗೇನು–ಇಲ್ಲೇ ಯೋಳ್ತಿನಿ. ನನ್ನೇ ಯಾರಾರು ಪುಣ್ಯಾತ್ಮರು ಜೀತಕಿರಿಸಿಕೊಂಡು ಈ ಅಣವ ಪಂಚಾತಿಗೆ ಕಟ್ಟಿಕ್ವಡ್ಲಿ. ನ್ಯಾ ಬ್ಯಾಡ ಅನ್ನಕ್ಕಿಲ್ಲ... ಬೇತುಗತ್ತಿದ ಟಗರೂರ.

"ನಿನ್ನ ಯಾರಲಾ ಅಪ್ಪಯ್ಯಾ ಇರುಸಿಕಳಾರು?... ಸಿಳ್ಳೆಕ್ಯಾತ್ನಂಗೆ ಇದ್ದೀ. ನಿನ್ನ ಕಯ್ಲಿ ಯಾವ ಕೇಮೆ ಆದಾತು?... ನಿನ್ನ ಎಡತಿ ಹುಚ್ಚುಬೋರಿಗೂವೆ ಯಾರೂ ಆಪಾಟಿ ಆಣ ತೆರಕ್ಕಿಲ್ಲ. ಇನ್ನೂ ನಿನ್ನ ಮಗಳು ಚೆಲುವಿನ ಜೀತಕಿಟ್ರೆ ಯೇನಾರ ದ್ವರೀಬೈದು."– ಈ ಮಾತು ಮುಂದು ಮಾಡಿದೋನು ನಂಜೇಗೌಡ.

ಮಗಳ ಜೀತಕಿರುಸು ಅಂದ ಕೂಡ್ಲೆ ಟಗರೂರ ಭೂಮಿಗೆ ಇಳುದೋದ. ಗುಡ್ಲ ವರೀಕಂಡು ನಿಂತಿದ್ದ ಹುಚ್ಚುಬೋರಿ ಮಾತ್ರ,

"ಇರಾ ಒಂದು ಎಣ್ಣ, ಅದರಾಗು ಲಗ್ಣಕ್ಕೆ ಬಂದಿರಾ ಎಣ್ಣ ಜೀತಕಿರಿಸಾದಾ?– ಈ ಹೂಟಕೆ ಬಿಲ್‌ಕುಲ್ ನ ವಪ್ಪನಾರಿ..." ಬಿಕ್ತಾ ಬಿಕ್ತಾ ಅಂದ್ಲು.

"ಅದಕೂ ವಪ್ಪಕ್ಕಿಲ್ಲ, ಇದಕೂ ವಪ್ಪಕ್ಕಿಲ್ಲ, ಅಂದ್ರೆ ನಾವೇನ ಮಾಡಬೇಕು?... ಉಳುದಿರಾದು ಒಂದೇ ದಾರಿ. ಆ ಹೆಣವ ತಂದು ಇವರ ಗುಡ್ಲ ತಾವು ಕೆಡವೋದು! ವೋಟೇಯ"– ಇಂಗಂದೋರು ನಾಮಧಾರಿಗಳ ಉದ್ದೂರಯ್ಯ.

"ಹಯ್ಯಯ್ಯೋ ಹಯ್ಯಯ್ಯೋ ಅಂಗೆ ಮಾತ ಮಾಡಬ್ಯಾಡಿ ಕನ್ರಯ್ಯ– ನಿಮ್ಮ ಪಾದಕ್ಕೆಬೀಳ್ತೀನಿ." ಹುಚ್ಚುಬೋರಿ ಚೀರಿದ್ಲು.

"ಅಂಗಾರೆ ಬುಡು. ನಮಗುಳಿದಿರಾದು ಅದೊಮದೆ ದಾರಿ, "– ಇಂಗಂದು ಗಂಗಪ್ಪ "ಊ ನಡೀರಪ್ಪ, ಇವನತ್ರ ಎಸ್ಟು ಮಾತಾಡಿದ್ರೂವೆ ಅಸ್ಟೇಯ"– ಅಂತ ಹ್ವಂಡೋರಂಗೆ ತಿರುಗಿದ.

"ಬ್ಯಾಡಿ, ಬ್ಯಾಡಿ, ಅಂಗೆ ಮಾಡಬ್ಯಾಡಿ. ನಿಂತುಗನ್ನಿ... ಇನ್ನೇನ ಮಾಡಾದು ನನ್ನ ಎಣ್ಣನೇ ಯಾರತ್ರನಾರೂ ಜೀತಕಿರುಸಿ ರೂಪಾಯಿ ತಂದು ಕ್ವಡ್ತೀನಿ. ವಸಿ ಜಿನತಡೀರಿ..." ಟಗರೂರ ಆಳ್ತಾ ಆಳ್ತಾ ಯೋಳ್ದ.

ಹ್ವಂಟಿದ್ದೋರೆಲ್ಲ ನಿಂತುಗಂಡ್ರು. ನಾಮಧಾರಿಗಳ ಉದ್ದೂರಯ್ಯ,

"ಅವಳ್ನ ನಾ ಜೀತಕಿಟ್ಟುಕೋತೀನಿ. ಆದ್ರೆ ಸಾವ್ರ ರೂಪಾಯ ಕ್ವಡಕ್ಕೆ ನಂಗ ಸಾಮರ್ಥ್ಯ ಇಲ್ಲ. ನನ್ನತ್ರ ಐನೂರು ರೂಪಾಯಿ ಅದೆ. ವೋಟು ಬೇಕಾರೆ ಕ್ವಡ್ತೀನಿ" ಅಂದ.

ಬಾಕಿ ಜಯಮಾನ್ರು ಯೆಲ್ಲಾರು ವಚ್ಚೋರಿಗೋಗಿ ಮಾತಾಡಿಕಂಡ್ರು.

ಆಮ್ಯಾಕೆ ಗಂಗಪ್ಪ ಬಂದೋನು,

"ಐನೂರ ಕ್ವಟ್ಟರೆ ತಕ್ಕಡೀನೆ ಏಳಕ್ಕಿಲ್ಲ. ಹೈದ ತೀರುಕಂಡದೆ. ಅದ್ನ ಮಣ್ಣು ಮಾಡಕ್ಕೆ ಅದರ ಅವ್ವನಿಗೆ ಕ್ವಡಬೇಕೊ ಬ್ಯಾಡವೊ?... ಅವಳೂ ಬಡವಿ, ಪಾಪ. ಇನ್ಯಾವ ಆದಾರ ಇದ್ದತು ಅವಳ್ಗೆ?... ಅದೆಲ್ಲ ಅಗಕ್ಕಿಲ್ಲ ಉದ್ದೂರಯ್ಯ. ನಿನ್ನತ್ರ ಇದ್ದರೆ ಸಾವ್ರ ರೂಪಾಯ ತಂದು ಕ್ವಡು. ಎಣ್ಣ ಕರಕೊಂಡೋಗು. ಇಲ್ಲ,. ನಿಂಗೆ ಆಗಕ್ಕಿಲ್ಲ ಅಂದ್ರೆ, ಬ್ಯಾರೆ ಇನ್ಯಾರಾರ ಅಣ ಕ್ವಡ್ತಾರೆ." ಕೋವಿಲಿ ಸುಟ್ಟಂಗೆ ಯೋಳಿಬುಟ್ಟು,

ಉದ್ದೂರಯ್ಯ ವಸಿ ವೊತ್ತು ವಳುಗೇ ಅಳದೂ ಸುರದೊ ಕಡೀಕೆ,

"ಊ, ಅಟ್ಟೀಲಿ ವೋಗಿ ನ್ವಾಡ್ತೀನಿ. ಅಣ ಯೇನಾರ ಜಮಾ ಆದ್ರೆ ತತ್ತೀನಿ. ಅಲ್ಲೀಗಂಟ ತಡಕನ್ನಿ..." ಇಂಗಂದು ಎದ್ದೋದೋನು, ಕಣ್ಮುಚ್ಚಿ ಕಣ್ಣು ಬುಡೋರೊಳ್ಗೆ ಅಟ್ಟಿಯಿಂದ ಆಜರಾಗಿ,

"ತಕ್ಕನ್ನಿ ಗಂಗಪ್ಪಾರೆ, ನನೆಡತಿ ಮೂಲೆ ಮುಡಕಲಲ್ಲಿ ಇಟ್ಟಿದ್ದ ಅಣವ ಕ್ವಡುದೇ ಇದ್ರೆ, ಇಟು ದುಡ್ಡು ಈ ಕ್ಸಣಕ್ಕೆ ಜ್ವತೆ ಮಾಡಕ್ಕಾಯ್ತಾ ಇರನಿಲ್ಲ ನಂಗೆ...? ಅಂತೇಳಿ, ಗಂಗಪ್ಪನ ಕೈಗೆ ಒಂದು ಸ್ರಾವ ಬೆಳ್ಳಿ ನಾಣ್ಯವ ಒಂದೊಂದಾಗಿ ಎಣಿಸಿ ಆಕ್ದಾ.

ನಾಣ್ಯಗಳ ನಂಜೇಗೌಡನ ಕಾಯ್ಯಿಗೆ ಕ್ವಟ್ಟು, ಗಂಗಪ್ಪ,

"ನೀವೊಂದು ದಪ್ಪ ಎಣಿಸಿಬಿಡಿ, ನಂಜೇಗೌಡರೆ" ಅಂದ. ನಂಜೇಗೌಡ ಜ್ವಾಪಾನವಾಗಿ ಅಣವ ಇನ್ನೊಂದು ದಪ ಎಣಿಸಿ, ಅದಸ್ಟನೂ ಚೌಕದಲ್ಲಿ ಕಟ್ಟಿಕಂಡು.

"ಊ, ಈಗ ನೀನು ಎಣ್ಣ ಕರಕಂಡು ವೋಗಬೈದು, ಉದ್ದೂರಯ್ಯ" ಅಂದ. ಹುಚ್ಚಬೋರಿ,

"ನಾ ಕಳಸಕ್ಕಿಲ್ಲ. ಕಳಸಕ್ಕಿಲ್ಲ"– ರಾದ್ದಾಂತ ಮಾಡಿದ್ಲು. ಅದು ಯಾವ ಪರ್ಯೋಜನಕೂ ಬರನಿಲ್ಲ. ಅಲ್ಲಿದ್ದೋರೆಲ್ಲ ಅವಳಿಗೆ ಬುದ್ಧಿ ಯೋಳಕ್ಕೆ ಸುರು ಮಾಡಿದರು. ಕಡೀಕೆ ಆ ಎಣ್ಣು ನಾಮಧಾರಿಗಳ ಉದ್ದೂರಯ್ನ ಆಟ್ಟಿಗೆ ಹ್ವಂಡಲೇಬೇಕಾಯ್ತು!

*　　　*　　　*　　　*

ಲಕ್ಕ ಇದ್ಯಾಕೆ ಇಂಗಾಯ್ತು ಎಂದು ತಲೆ ಕೆಡಿಸಿಕಂಡ. ಅವರಿವರ ಕೇಳಿ ವಸಿ ತೀಳಿತು. ಆದರೆ ಪೂರಾ ಇಚಾರ ತಿಳಿಸಿದೋನು ಟಗರೂರನ ದೋಸ್ತು ಮಲ್ಲೂವ. ಅದೂ ಮೂರುನಾಕು ಜಿನ ಕಳುದ ಬಳಿಕಾನೆ. ಪಂಚಾತಿ ಆದ ನಾತ್ರೇನ ಟಗರೂರ ಮಲ್ಲೂವನ ಸಂಗಾಟ ರಾಚನ ಸರಾಪಿನ ಅಂಗಡೀಲಿ

ಕುಡೀತ ತೋಡಿಕಂಡಿದ್ನಂತೆ...

ಇಂದಿನ ನಾತ್ರೆನಾಗ ಭರ್ತಿ ಏರಿಸಿದ್ದ ಟಗರೂರ, ಸ್ವಾಮಿ ಅವನ ಗುಡ್ಲ ಬೆಚ್ಚಗೆ ಮಾಡಕ್ಕೆ ಅತ್ತಿದ್ರೂವೆ ಇನ್ನೂ ಬಿದ್ದೇ ಇದ್ನಂತೆ. ಎದ್ದು ನ್ವಾಡಿದಾಗ ಆಗ್ಲೆ ಎಡತಿ ಹುಚ್ಚುಬೋರಿ, ಮಗಳು ಚೆಲುವಿ ಇಬ್ಬರೂವೆ ಕೂಲಿಕಂಬಳಕೆ ವೋಂಟೋಗಿದ್ರಂತೆ. ಮಡಿಕೇಲಿ ಅರ್ದಮುದ್ದೆ ಹಿಟ್ಟ ಇವ್ನಿಗೇ ಅಂತಾನೆ ಎಡತಿ ಮಡಗೋಗಿದ್ಲು. ಹಿತ್ತಲಿಂದ ನಾಕು ಹರು ಮೆಣಸಿನಕಾಯಿ ಬುಡಸಿ ತಂದು ತಂಗಳಿಟ್ಟಿನ ಜತ್ಗೆ ಕಡಕಂಡು ತಿಂದ. ನಿಶಾದಿಂದ ತಲೆ ಇನ್ನೂ ಸಿಡೀತಾನೆ ಇತ್ತು. ಎಂಗೂ ಕಂಬಳಕೋಗೊ ವೊತ್ತು ಮೀರ್ತು. ಊರೋಳ್ಗೆ ತಿರುಕ್ಕಂಬಂದ್ರೆ ಈ ತಲೆ ಸಿಡ್ತ ವಸಿ ತಪ್ಪಬೈದು ಅಂತ ವೊಂಟ. ಊರೊಳಗಿನ ಬೀದಿಗಳಲ್ಲಿ ಜನವೇ ಇಲ್ಲ. ಮುಕ್ಕಾಲುಪಾಲು ಗಂಡಸರು ಎಂಗಸರೆಲ್ಲ ಕೆಲ್ಸಕ್ಕೊಂಟೋಗಿದ್ರು. ತೆಳ್ಳತೆಳ್ಳಗೆ ಅಲ್ಲೊಬ್ರು ಇಲ್ಲೊಬ್ರು ಉಳಿದೋರು ತಮ್ಮತಮ್ಮ ಅಟ್ಟಿ ಕದ ಮುಚ್ಚಿ ವಳುಗೆ ಸೇರಿದ್ರು. ಯಾವ ಬೀದೀಲಿ ನ್ವಾಡಿದ್ರೂವೆ ನಾಯಿಗಳ ಸಂಸಾರವೆ ವೊರತು ಒಂದು ನರಿಪಿಳ್ಳೆ ಸೈತ ಕಾಣಿಸ್ತಿರನಿಲ್ಲ...

ಟಗರೂರ ಆ ಬೀದೀಲಿ ಹ್ವಕ್ಕು ಈ ಬೀದೀಲಿ ಕಡದು ಪರಿವಾರದೋರ ಬೀದಿಗೆ ಬಂದಿದ್ನಂತೆ. ಆ ಬೀದಿಯೂ ಬಿಕೊ ಅಂತಿತ್ತು. ಅಂಗೆ ಅತ್ತಿತ್ತಾಗಿ ಕಣ್ಣಾಡಿಸ್ತ ಬರ್ವಾಗ, ಟಗರೂರಿನಿಗೆ ಬಾಯಾಡಕ್ಕೆ ಯೇನಾರೂವೆ ಸಿಕ್ಕಿದ್ರೆ ವಾಸಿಯಾಗಿತ್ತಲ್ಲ ಅನ್ನಿಸ್ತಂತೆ. ಯಾವ ಅಟ್ಟೀಲಿ ಕ್ಯಾಳಿದ್ರೆ ಸಿಕ್ಕಬೈದು ಅಂತ ಲೆಕ್ಕಾಚಾರ ಆಕ್ತ ಬತ್ತಾ ಇರೋನೂವೆ, ಎಂಕಿ ಅಟ್ಟಿ ಎದುರಾಗಿ, ಹುಂ– ಎಂಕಿ ಅಟ್ಟಿ ಅಂಗದೆ. ಅವಳು ಯಾವತ್ತೂವೆ ಈಳ್ಯದೆಲೆ ಹೊಗೆಸೊಪ್ಪು ವತ್ತಿರಿಸಿದಂಗೆ ಇರ್ತಾಳೆ. ನಾ ಕ್ಯಾಳಿದಾಗ, ಒಂದೊಂದಿ ಜಿನ ಗ್ಯಾನ ಸುದ್ದಾಗಿದ್ರೆ. 'ಏನ್ಲ ನನ್ನ ಹಳೇನ ಮಗನೆ, ಸಾಲ ಕ್ವಟ್ಟು ಮಡಗಿರೋನ ತರ ನಿಸೂರಾಗಿ ಬಂದು ಕ್ಯಾಳೀಓಯಲ್ಲ?' ಅಂತ ಹಟಿಗಿಸದ್ರೂವೆ, ಕಡೀಕೆ 'ಹು, ವೋಗ್ಲಿ ತಕ್ಕ' ಅಂತ ಕ್ವಡ್ತಿದ್ಲು. ಆ ಆಸೆಯಿಂದ್ಲೆ ಟಗರೂರ ಎಂಕಿ ಅಟ್ಟಿ ಬಾಗಿಲ ಮುಂದ್ಕೆ ಬಂದು ನಿಂತ. ಬಾಗಿಲು ಮುಚ್ಚಿತ್ತು. ವಕ್ಕಡೆ ಇರೋ ಜಗಲಿ ಮ್ಯಾಲೆ ಹೈಕಳು ಊಟಾನೊ ತಿಂಡೀನೊ ತಕ್ಕಂಡೋಗೊ ಟಿಪನ್ ಕರಾರ್ನ ಯಾರೊ ಇಟ್ಟಂಗಿತ್ತು. ಯಾರಿರಬೈದು ಅಂತ ಯೋಚಿಸಿದೋನು, ಇನ್ಯಾರು ಎಂಕಿ ಹೈದನೆ ಇರಬೇಕು ಅಂದಕೋತ್ತ, ಮುಂದಕೋಗಿ ಅಟ್ಟಿಕದ ತಟ್ಟಿದ. ವಳುಗ್ನಿಂದ ಯಾರೂ ಬಂದು ಕದ ತಗೀನಿಲ್ಲ. ಪುನಾ ಜೋರ್ನಿಂದ ತಟ್ಟಿದ. ವಳುಗ್ನಿಂದ ಸದ್ದು ಸಮಾಚಾರವೇ ಇಲ್ಲ!... ಮತ್ತೆ ಮತ್ತೆ ತಟ್ದ. ಏಟೋತ್ತಾದರೂ ಯಾರೂ ಕದ ತಗೀನೇ ಇಲ್ಲ. ನಿಂತ, ನಿಂತ, ನಿಂತ.

ಸಾಕಾಗೋಯ್ತು... ಎಂಕಿ ಜೋರಗಿರ ಬಂದು ಮನಗಿರ ಬೈದು, ಅವಳ ಹೈದ ಅವ್ನು ಕಲೀತಿರೊ ಮಠಕೋಗರಬೈದು... ಅದುಕೇ ಯಾರೂ ಬಂದು ಕದ ತಗೀತಾ ಇಲ್ಲ– ಅಂತ ಕರ್ತ ಮಾಡ್ದ... ಆಂದರೆ ಜಗಲಿ ಮ್ಯಾಲಿರೊ ಟಿಪನ್‌ಕರಾರು ಯಾರ್ದು?... ಅವನದೆ ಇರಬೈದ? ಆ ವನೇನಾರ ಮರತ ಗಿರತು ವೋಗಿರಬೈದು?... ಥತ್ ಥತ್, ಯೆಲ್ಲಾರ ಉಂಟ?– ಆ ಹೈದ ಹಲಗ ಬೋ ಉಸಾರು. ಇಂಗೆಲ್ಲ ಬುಟ್ಟೋಗಕ್ಕಿಲ್ಲ... ಅಂಗಾರೆ ಯಾರದಿರಬೇಕು ಇದು? ಓಪನ್ ಕಾರರು ನ್ವಾಡ್ತಾನೆ ಯೋಚಿಸ್ತಾ ಇದ್ದ. ಬೆಳಗಿನ ಪ್ರಬೇಲಿ ಆ ಇತ್ತಾಳೆ ಡಬ್ಬಿ ಜಗಲಿ ಮ್ಯಾಲೆ ಒಂಟಿಯಾಗಿ ಕುಂತು, ಟಗರೂರ್ನ ವಳುಗಡೆ ಮಿಗಿಲಾದ ಆಸೆ ಬತ್ತೀಯ ಮ್ಯಾಲೆ ಹ್ವತಿಸ್ತು... ತನ್ನ ಗುಡ್ಲಲ್ಲಿ ಯಾವತ್ತೂವೆ ಮಡಕೆ ಕುಡಕೆ ಸುಂಗಾರವೆ!– ತಣತಣಾಂತ ಹ್ವಳೆಯೊ ಇಂತಾ ಇತ್ತಾಳೆ ಪಾತ್ರೆ ಪದಾರ್ತ ತನ್ನಜ್ಜ ಮುತ್ತಜ್ಜರ ಕಾಲದಿಂದ್ಲೂವೆ ತಮ್ಮ ಗುಡ್ಲು ವಳೀಕೆ ಕಾಲಿಟ್ಟದ್ದೇ ಇಲ್ಲ!– ಯತೆ ಎದೇಲಿ ಒತ್ತಿಗಂಬಂತು. ಕಣ್ಣು, ಬಿದೀಲೆಲ್ಲ ಇಂದುಕೆ ಮುಂದುಕೆ, ಎತ್ತಿತ್ತಾಗೂ ಹರಿದಾಡ್ತು: ಸುತ್ತಾ ಮುತ್ತಲ ಅಟ್ಟಿ ಕದಗಳ್ನೆಲ್ಲ ತಟ್ಟಿ ತಟ್ಟಿ ನ್ವಾಡ್ದು. ಒಬ್ಬರದಾರ ಸುಳುವೇ ಬ್ಯಾಡದ? ಬೀದಿ ಉದ್ದಕೂ ವೋಟೇಯ– ಖುಲ್ಲಾ ಅಂದರೆ ಖುಲ್ಲಾ!... ಇತ್ತಾಳೆ ಪದಾರ್ತವ ಸ್ವಾಮಿ ಬಣ್ಣಬಣ್ಣ ಮಾಡಿ ಮಾಯದ ಬಲೆ ಬೀಸ್ತಿತ್ತು. ಮಂಕು ಕವಿದು ಟಗರೂರ ದಿಟ್ಟಿಸ್ತಾನೆ ಇದ್ದ. ತಣ್ಣಗೆ ಮ್ಯಲೆ ಹಂದಿ ಬಾಡು ಕಂಡು ಚೊಲ್ಲು ಸುರುಸೊ ತರ ಬಾಯಿಬುಟ್ಟ. ಇನ್ನು ತಡೆಯಕ್ಕಾಗನಿಲ್ಲ. ಇನ್ನೂ ಒಂದು ದಪ ಸುತ್ತಾಲು ಕಣ್ಣಾಡ್ಸಿ ಟಿಪನ್ ಕರಾರಿಗೆ ಕೈಯ್ಯ ಆಕ್ದ. ಅದ್ನ ಎತ್ತಿಗತ್ತಿದ್ದಂಗೆ ಎದೆ ವಳಾಗಡೆ ಕ್ವಟ್ಟಣ ಕುಟ್ಟಕ್ಕೆ ಸುರುವಾಯ್ತು. ವೊದಿದ್ದ ದುಪಟವೊಳಗೆ ಮೊಗ ಸುತ್ತೋನಂಗೆ ಅದ್ನ ಸುತ್ತಿಕಂಡ. ತಲೆ ಬೊಗ್ಗುಸಿ ಮೆಲ್ಲಕೆ ಅಲ್ಲಿಂದ ಜಾರ್ದ!... ಈಟೆಲ್ಲಾನೂವೆ ರಾಚನ ಸರಾಪಿನ ಅಂಗಡೀಲಿ ಕುಡೀತ ಕುಡೀತ ಟಗರೂರನೆ ಯೋಳಿದ್ನಂತೆ...

ಗಂಡನ ಕಳಕಂಡು ಎಂಕಿ ಕಸ್ಟಪಟ್ಟು ಕೂಲಿ ನಾಲಿ ಮಾಡಿ ತನ್ನ ಒಬ್ಬನೆ ಮಗ ಹಲಗನ್ನ ಓದಿಸ್ತಿರನಿಲ್ವ?– ಆ ಹೈದ ಏಡು ಏಡೂವರೆ ಮೈಲಿ ಇರೊ ಮಿಡ್ಲಿಸ್ಕೂಲಿಗೆ ಊಟ ತಕ್ಕಂಡೋಗಕ್ಕೆ ಒಂದು ಟಿಪನ್ ಕರಾರು ತಕ್ಕೊಟ್ಟಿದ್ದಲು... ತನ್ನ ಸತ್ತೊದ ಗಂಡ ಕುಡುಕ. ಕುಡುದೂ ಕುಡುದೂ ಒಂದು ಅಮಾಸೆ ನಾತ್ರೇಲಿ ಗೊತಕ್ ಅಂದಿದ್ದ. ಅವನು ಬದುಕಿದ್ದಾಗಲೂ ಕಾಟವೇಯ, ಸತ್ತಾಗಲೂ ಕಾಟವೇ ಆಯ್ತು ಅವಳಿಗೆ!... ಆ ಗಂಡನ ಮಣ್ಣು ಮಾಡಬೇಕಾರೆ, ಅವಳು ತನ್ನ ಚಿನ್ನದ ಚೌಲಿ ಗೊಣಸ ಇಟ್ಟುಕಂಡು ಕ್ವಡೀಂತ ಊರಿನ ಮನೆ ಮನೆಗೂ ಇಟ್ಟಾಡಿ, ವಸಿ ಪರಿದಾಡಿದ್ಲ?... ಆ ತಲೆಮಾಸಿದ ಗಂಡನ ತರ,

ಇರೊ ಒಬ್ಬಾನೂಬ್ಬ ಹೈದನೂ ಕೆಟ್ಟೋದಾನು ಅಂತಲೊ ಯಾನೊ ಸಣ್ಣದು ಪುಟ್ಟದಕ್ಕೆಲ್ಲ ತೆಪ್ಪು ಕಂಡಿಡುದು ವೋಗಿ ಬಂದು ವೋಗಿ ಬಂದು, ಈ ಹೈದ್ನ ಗಟ್ಟಿಸ್ತಾನೆ ಇದ್ಲಂತೆ!– ಎದ್ದ ಹ್ವತ್ನಿಂದ ನಾತ್ರೆ ಮೊಗ್ಗಲು ಕೊಡಾವರೆಗೂ ಹೈದ, ಅವ್ವನ ಕಯ್ಲಿ ಯಾವ ಗಳಿಗೇಲಿ ಏಟು ತಿನ್ನಬೇಕಾದತೊ ಅಂತ ಥರಥರನೆ ಪುತುರುಗುಟ್ತಾನೆ ಇರೋನಂತೆ...

ಇಂಗಿರುವಾಗ ಯೇನಾಯ್ತಪ್ಪ ಅಂದರೆ, ಟಗರೂರ ತಿಳುಕಂಡ ರೀತಿ, ಏಂಕಿ ಅಟ್ಟಿವಳಾಗಡೆ ಜೋರ ಬಂದು ಮನಗಿರನಿಲ್ಲ. ಅವಳು ಯಾರದೊ ತ್ವಾಟದ ಕೆಲುಸಕ್ಕೊಗಿದ್ದಲು. ಅವಳ ಹೈದ ಹಲಗ, ಟಿಪನ್ ಕರಾರು ತಕ್ಕಂಡು ಹ್ವೊರೀಕೆ ಬಂದೋನು, ಯಾವುದೋ ಪುಸ್ತಕ ಮರತೊ, ಇಲ್ಲ ಇತ್ತಲಿಗೆ ಅವರಸರಾಗೊ ಟಿಪನ್ ಕರಾರ ಜಗಲಿ ಮ್ಯಾಲಿಟ್ಟು ಕದವ ವಳೀಕೆ ಎಳಕಂಡು ವೋಗವ್ನೆ– ವೋಟರಲ್ಲಿ ಟಗರೂರ ಅಲ್ಲಿಗೆ ಬಂದೋನು, ಜಗುಲಿ ಮ್ಯಾಲಿದ್ದ ಟೀಪನ್‌ಕರಾರ ಕಂಡು, ಅಸ್ಯಾಗಿ ಎತ್ತಿಗೊಂಬಂದವ್ನೆ!... ವಳುಗ್ನಿಂದ ಪುಸ್ತಕ ತಕ್ಕಂಡು ಹ್ವರೀಕೆ ಬಂದು ನೌಆಡ್ತಾನೆ– ತಾನು ಜಗಲಿ ಮ್ಯಾಲಿಟ್ಟಿದ್ದ ಟಿಪನ್‌ಕರಾರು ಮುಮಗರಮಾಯ ಆಗದೆ!– ಆಗ ಮಾತ್ರ, ಹೈದಂಗೆ ಎದೆ ಒಡೆದೋಗಿರಬೇಕು... ತನ್ನವ್ವ ಕೂಲಿ ಮಾಡಿ ಕಾಸಿಗೆ ಕಾಸ ಗಂಟಾಕಿ ತಕ್ಕೊಟ್ಟಿರೊ ಟಿಪನ್ ಕರಾರ ಕಳದುಬುಟ್ಟು, ಅವ್ವಂಗೆ ಅದೇನಂತ ಮೊಖ ತೋರುಸ್ಲಿ? ಅವಳು ನನ್ನ ಸುಮ್ಮಕೆ ಬುಟ್ಟಾಳ? ಚಮಡ ಸುಲುದು ಬುಡ್ತಾಳೆ– ಅಂತೆಲ್ಲ ಅವ್ನ ಮನದಲ್ಲಿ ಮೂಡಿರಬೇಕು– ಅಟ್ಟಿ ವಳುಕ್ಕೋಗಿ ಮುಂದಿನ ಬಾಗಿಲ ತಾಪಾಳ ಪೆಟ್ಟಿ, ಹಗ್ಗ ತಕ್ಕಂಡು ಅಂಗಳದ ತೊಳೆಗೆ ನ್ಯಾತು ಆಕ್ಕಂಡಿರಬೇಕು!...

ವಸಿ ಮೊತ್ತಾದ ಮ್ಯಾಲೆ ಹಜಾಮರ ಜವರಯ್ಯ 'ಹೈದನಿಗೆ ಚೌರ ಮಾಡಕ್ಕೆ ಯೋಳಿದ್ರಲ್ಲ. ಯಾವತ್ತು ಬರಾನೆ?'– ಎಂಕಿಯ್ಯ ಕ್ಯಾಳಿ ವೋಗಾನೇಂತ ಅಟ್ಟಿ ತಾವಿಕೆ ಬಂದನಂತೆ. ಅಟ್ಟಿ ಕದ ಮುಚ್ಚಿತ್ತು. ಕದ ತಟ್ಟಿದನಂತೆ, ಕೂಗಿದನಂತೆ. ಪುನಾ ತಟ್ಟಿದನಂತೆ. ಯಾರೂ ಕದವ ತೆಗೀನಿಲ್ಲ. ಮತ್ತೆ ಊರ್ನಲ್ಲಿ ಅವರಿವರ ಅಟ್ಟಿ ತಟ್ಟಾಡಿ ಬಂದನಂತೆ. ಇನ್ನೂ ಕದ ಮುಚ್ಚೇ ಇತ್ತು. ಎಂಕಿ ಹ್ವರೀಕೋದ್ರೆ ಬೀಗ ಜಡಿದೇ ವೋಗಬೇಕು. ಹೈದ ಯೇನಾರ ಮಠದಿಂದ ಬ್ಯಾಗ ಬಂದರೆ ಇರಲೀಂತ ಒಂದು ಬೀಗದ ಕಯ್ಯ ಅವನ ತಾವೂ ಕ್ವಟ್ಟು, ಇನ್ನೊಂದ ತನ್ನ ತಾವು ಇಟ್ಟುಕಂಡು ಇರ್ತಾ ಇದ್ದ ಇಸ್ಯಜವರಯ್ಯಂಗೂ ಗ್ವತ್ತಿತ್ತಂತೆ– ಮತ್ತೆ ವಳಾಗಡೆ ಈಟೋತ್ತು ಯಾರಿರೂರು?– ಚೋಜಿಗಾಗಿ ಒಂದೇ ಸಮಕೆ ಕದ ಕುಟ್ಟಿದನಂತೆ. ವಳುಗ್ನಿಂದ ಯಾರೂವೆ ಹರ, ಸಿವ ಅನ್ನಲೇ ಇಲ್ಲ!... ತಟ್ಟಿ ತಟ್ಟಿ ಅವನ್ಗೆ

ಸಾಕಾಯ್ತಂತೆ. ಅನುಮನಸೂ ಬಂತು. ಗುಲ್ಲೆಬ್ಬಿಸಿ, ಆಚೆ ಈಚೆ ಅಟ್ಟೀಲಿ ಅಪುರ್ಪಕೆ ಕೆಲಸಕ್ಕೋಗದೆ ವಳುಗಡೇನೆ ಉಳುದಿದ್ದ ಮೂರು ನಾಕು ಎಂಗಸರ ಜಮಾಯಿಸಿದನಂತೆ... ಆ ಎಂಗಸರೂವೆ ತಟ್ಟಿದ್ರು. ಕೂಗಿದ್ರು. ಅವರಿಗೂ ಅಮಾನಸಾಯ್ತು– ಎಲ್ಲರೂವೆ ಕಡೀಕೆ ಅಟ್ಟಿಮ್ಯಾಲೆ ಹ್ವದಿಸಿದ್ದ ನಾಡ ಹೆಂಚ ತಗುದು ವಳೀಕೆ ಇಳುದು ಹ್ವಾಡಾದೆ ಸಮ ಅನ್ನೊ ತೀರ್ಮಾನಕ್ಕೆ ಬಂದರಂತೆ... ಆ ಪರ್ಕಾರ ಹಜಾಮರ ಜವರಯ್ಯನೆ ಅಟ್ಟಿ ಮ್ಯಾಕತ್ತಿ, ಹೆಂಚ ತಗುದು ವಳೀಕೆ ಇಳುದ್ನಂತೆ. ಇಳುದು ನ್ವಾಡ್ತಾನಂತೆ–ಹೈದ ಹಲಗ, ತೊಟ್ಟಿ ಕಂಬಕ್ಕೆ ನ್ಯಾತು ಆಕಂಡವ್ನೆ!– ವಸ್ತು ಯಾವಾಗ್ಲೊ ವೊಂಟೋಗಿರಬೇಕು... ಮುಂದಿನ ಕದವ ತೆಗೆದನಂತೆ. ಹ್ವರಗಿದ್ದ ಎಂಗಸರೂ ಬಂದು ನ್ವಾಡಿ ಎದೆ ಎದೆ ಬಡಕೊಂಡರಂತೆ...

ಹೈದ ಸತ್ತೋದ ಸುದ್ದಿ ಅಲ್ಲಿ ಬಿದ್ದು ಇಲ್ಲಿ ಎದ್ದು ಟಗರೂರನ ಗುಡ್ಲನೂ ಮುಟ್ಟಕ್ಕೆ ವೋಟು ತಡೆಯೇನೂ ಆಗ್ನಿಲ್ಲ. ಆ ಸುದ್ದಿ ಕಿವಿಗೆ ಬಿದ್ದ ಕ್ಷಣಕೆ, ಟಗರೂರಂಗೆ ಮರ್ಮದ ಜಾಗದಲ್ಲಿ ಕಟ್ಟಿರ ಕಚ್ಚಿದಂಗಾಯ್ತಂತೆ! ಮೊಖ ಕೆಟ್ಟು, ಸಂದಿ ಸಂದೀಲೂ ಬೆಮರು ಕಿತ್ತು ಹರಿಯಕ್ಕೆ ಸುರುವಾಯ್ತಂತೆ... ಟಗರೂರ ಹೆದರಿ ಹೆಪ್ಪಳಿಸೋಗಿ ಟಿಪನ್ ಕರಾರು ತಕ್ಕಂಡು ಸೀದ ಜಪ್ಪಯ್ಯನ ಮಟದ ಅಯ್ನೋರ ಮಂದಕಿಟ್ಟು,

"ಯಾನೊ ತೆಪ್ಪು ಮಾಡಿಬುಟ್ಟೆ, ಗುರುವೆ– ಹಾಳಾದ ಬಡ್ಡಿ ಹೆತ್ತ ಆಸೆ, ನನ್ನೊಡೆಯ– ಎತ್ತಿಗಂಬಂದೆ!... ಮಾತ್ರ, ಇದ್ರಿಂದ ಹೈದ ಸಾಯ್ತಾನೇಂತ ತಿಳೀನಿಲ್ಲ, ಸಿವನೆ!... ಊರ್‍ನ ಯಜಮಾನ್ರಿಗೆ ಯೋಳಿ ನನ್ನ ತಪಾಯ್ಸಿ, ಬುದ್ದಿ..." ಸಿವಪಾದಪ್ನೋರ ಪದಕ್ಕೆ ಬಿದ್ದನಂತೆ. ಅಯ್ಯನೋರು,

"ಇದರಾಗೆ ನಾನೇನೂ ಮಾಡಕ್ಕೆ ಬರಕ್ಕಿಲ್ಲ. ಒಂದು ಜೀವ ಕಳದೋಗದೆ. ಊರ ಯಜಮಾನ್ರು ಸೇರಿ ಈ ನ್ಯಾಯವ ಧರ್ಮಾಗಿ ತೀಮಾನ ಮಾಡಬೇಕು" ಅಂತ ಅಪ್ಪಣೆ ಕ್ವಟ್ಟು, ಅಲ್ಲೆ ಕುಂತಿದ್ದ ನಂಜೇಗೌಡರು, ಗಂಗಪ್ಪಾರು ಇಬ್ಬ ಕಡೀಕು ನ್ವಾಡಿದ್ರಂತೆ...

ಸರಿ ಮುಂದಕೆ ನಡೆದದ್ದೆಲ್ಲ ನಿಂಗೆ ಗ್ವತ್ತೇ ಅದೆ... ಯಜಮಾನ್ರು ಟಗರೂರಿನ ಗುಡ್ಲ ತಾವಿಕೆ ಬಂದು, ಅವನ ಮಗಳು ಚೆಲುವೀಯ ಕೆಲ್ಸದ ತಾವಿನಿಂದ ಕರಸಿ, ಅಪ್ನಿಗೆ ಬೀರಬಿದ್ದು, ಸಾವ್ರ ರೂಪಾಯ ತಕ್ಕಂಡು ಆ ಎಣ್ಣ ನಾಮಧಾರಿಗಳ ಉದ್ದೂರಯ್ನ ಅಟ್ಟಿ ಜೀತಕೆ ಕಳುಸಿದ್ದ, ನೀನೂವೆ ನನ್ನಂಗೇಯ ನ್ವಾಡ್ತ ನಿಂತಿದ್ಯಲ್ಲ?–

ಇಂಗೆ ಟಗರೂರ್‍ನ ದೋಸ್ತು ಮಲ್ಲೂವ ಪರಸಮಗ ಯೋಳಿ

ಮುಗುಸಿದ್ದ...

ಲಕ್ಕ–ಕಳ್ಳ ಬೊಡ್ಡಿಹೈದ ಟಗರೂರಂಗೆ ಒಳ್ಳೆ ಸಿಕ್ಸೇನೆ ಆಯ್ತು. ಆದ್ರೆ, ಇವನ ಕಳ್ಳ ಯವಾರದಿಂದ, ಬೆಳೀತಿದ್ದ ಒಂದು ಚೆಂದುಳ್ಳಿ ಕುಡಿ ಕಮರೋಯ್ತಲ್ಲ, ಅಂತ ಪೇಚಾಡಿದ... ಟಗರೂರ ಮಾಡ್ತಿದ್ದ ಸಣ್ಣ ಪುಟ್ಟ ಕಳ್ಳತನಗಳಲ್ಲಿ ಗೆಪ್ತಿಗೆ ಬಂದೊ... ಅಡೆ ಆಕಿದ ಹೊಗೆಸೊಪ್ಪ ಪಲ್ಟಾಯಿಸಕ್ಕೆ ಯಾರ ಅಟ್ಟೀಲಾರೂ ಕರುದ್ರೆ, ಅಲ್ಲೆ ಅದಿನೈದು ಇಪ್ಪತ್ತೊ ಒಣಗಿದ್ದ ಹೊಗೆಸೊಪ್ನ ಎಲೆಗಳ, ಚಡ್ಡಿ ವಳುಗಡೆ ಚೊರಕ ಮಾಡ್ತಿದ್ದ. ಕಾಸಕ್ಕಿ ಆಸೆಗೆ, ಯಾರ ಹೊಲ ಆದರೂ ಸೈ, ಯಾರೂ ಇಲ್ಲದಿದ್ದ ಸಮಯಕಾದು, ರಾಗಿ ತೆನೆ ಕಡಿಯೋದು–ಊರಿನಲ್ಲಿ ಇಂಗೇ ಯೇನಾರ ಅದು ಇದು ಚೆಲ್ಲರೆ ಕೆಲ್ಸ ಮಾಡ್ತಿದ್ದ. ಆದ್ರೆ ಎಲ್ಲಕಿಂತಲೂವೆ ಅವ್ನು ನಡುಸಿದ ಭಾರಿ ಹಿಕಮತ್ತು ಅಂದ್ರೆ, ಕರುರುಬರ ಕೆಸ್ತೂರಯ್ನ ಅಟ್ಟಿ ಕೋಳಿ ಕದ್ದದ್ದು!... ಸುಮಾರು ನಾಕೈದು ತಿಂಗಳ ಇಂದಿನ ಮಾತು. ಒಂದು ಮುಚ್ಚಂಜೆನಾಗ, ಟಗರೂರ ಹೆಗಲ ಮ್ಯಾಲೆ ಒಂದು ಹಸಿಬೆ ಚೀಲ ಅಕ್ಕಂಡು ಹುಣಸೂರು ಪ್ಯಾಟ ಸಂತ್ಯಿಂದ ಊರೊಳಗೆ ಬಂದೋನು, ಹಲಗೇರಿ ಕಡೀಕೆ ವೊಂಟದ್ದ. ದಾರೀಲೆ ಕೆಸ್ತೂರಯ್ನ ಅಟ್ಟಿ ಸಿಕ್ತು. ಆವತ್ತು ಸಂತೆ ಜಿನ ಅಲ್ವ?– ಸಂತೆಗೋಗಿದ್ದ ಜನ ಹುಣಸೂರಿನಲ್ಲಿ ಅದು ಇದು ಸೊಟಗ ಸಂಬಾರಾಂತ ಯವಾರ ಮಾಡ್ತ ಊರಿಗಿನ್ನೂವೆ ಮರಳಿರನಿಲ್ಲ. ಕೆಸ್ತೂರಯ್ಯನ ಮನೆಯೋರು, ಅವ್ನ ಸುತ್ತಾಮುತ್ತಾಲ ಮನೆಯೋರು ಇನ್ನೂ ಊರು ಕಡೆ ದಾರೀಲಿ ಬತ್ತಾ ಇರಬೇಕು. ಅಟ್ಟಿ ವಳುಗಡೆ ಒಬ್ಬರೊ ಇಬ್ಬರೊ ಮುದುಕೀರು ಇದ್ದಿರಬೇಕು. ಅಲ್ಲಿ ಹೈಕಳು ಆಚೆ ಬೀದಿ ಮುಂದ್ನ ಮಾಳದಲ್ಲಿ ಆಡಿಕತ್ತ ಇದ್ದುವಂತೆ... ಟಗರೂರ ನ್ವಾಡ್ದ– ಕೆಸ್ತೂರಯ್ಯನ ಅಟ್ಟಿಗೂ ನರಸಯ್ಯನ ಅಟ್ಟಿಗೂ ನಡುತಾವಿನ ಸೊಂಪಲಲ್ಲಿ ನಾಕೈದು ಕೋಳಿ ಮೇಯ್ತಿದ್ದೊ. ಟಗರೂರನಿಗೆ ಬಾಯ್ನಲ್ಲಿ ನೀರು ಕಿತ್ತುಗತ್ತು. ಊಟ ಮದ್ದಯ ಬಾವಿಗೆ ಅಂಟಿಗಂಡಂಗೆ ಯಾರೊ ಪುಣ್ಯಾತ್ಮರು ಇಂದುಕೆ ಒಂದು ದೊಡ್ಡ ಕಲ್ಲು ದೋನಿ ಕೆತ್ತಿಸಿ ಇರಿಸಿದ್ರು. ಆ ಬಾವೀಲೆ ನೀರು ಸೇದೋ ಎಂಗಸರು ಗಂಡಸರು ಯಾರಾದರೂ ಸರಿ, ಸರ್ವೇ ಸಾದಾರಣಾಗಿ ತಮತಮ್ಮ ಅಟ್ಟಿಗೆ ನೀರು ಸೇದೋವಾಗ, ಒಂದು ಚರಿಗೆಯೊ ಏಡು ಚರಿಗೆಯೊ ನೀರ ಆ ಕಲ್ಲುದೋಣಿಗೆ ತೆಪ್ಪದೆ ಸುರಿದು ವೋಯ್ತಿದ್ದರು. ಸಕುತಿ ಇದ್ದೋರು ಮೂರು ನಾಕು ಚರಿಕೆ ಸುರಿಯಾದು ಉಂಟು. ಬಾಯಾರಿ ಬಂದ ಎಮ್ಮೆ ದನ ಕುಡೀಲೀಂತ ಇಂಗೆ ಸೇದಿ ಆಕೋರು. ಆ ನೀರ ಈ ಪ್ರಾಣಿಗಳ ಜ್ವತ್ಗೆ, ಹಕ್ಕಿಪಕ್ಸಿಗಳೂವೆ ಕುಡುದೋಯ್ತಿದ್ದೊ. ಅಂಗಾಗಿ, ಅ ಕಲ್ಲು ದೋಣಿಯ ನೀರು ಖಾಲಿ ಆಯ್ತಾನೆ

ಇರನಿಲ್ಲ. ಟಗರೂರ ಸೀದ ಆ ಕಲ್ಲುದೋಣಿ ಅತ್ರ ವೋದ. ತನ್ನ ತಲೆಗೆ ಸುತ್ತಿದ್ದ ವಸ್ತ್ರ ತಗದು ಅದರಾಗಿ ಅದಿದ್ದ. ಆಮ್ಯಾಕೆ ಆ ವಸ್ತ್ರವ ಹಿಂಡಿ, ಅದ್ನ ಕೊಂಡೋಗಿ, ಮೆತ್ತಗೆ ಹ್ವಂಚಾಕ್ತ ಹ್ವಂಚಾಕ್ತ, ಆ ಕೋಳಿ ತಿರುಗಿದಂತೆ ತಿರುಗಿದಂತೆ ಇಂದಿಂದೆ ನಡುದು, ಸಮಯ ಕಾದು, ಬೋ ಹುಸ್ನಾರ್ನಿಂದ ತಾನು ಇಡುದಿದ್ದ ವದ್ದೆ ಪಾವಡೇಯ ತಟಕ್ಕನೆ ಅದರ ಮಾಲೆ ದಬ್ಬಾಕಿದ. ವದ್ದೆ ಪಾವಡೆ ತನ್ನ ಮ್ಯಾಲೆ ಬೀಳ್ತಾನೂವೆ ಆ ಕೋಳಿ ಕಮಕ್ ಕಿಮಕ್ ಅನ್ನನಿಲ್ಲ. ತಕ್ಸಣ ಅಮಗೇ ಅದ್ನ ಎತ್ತಿ, ತನ್ನ ಹಸಿಬೆಚೀಲಕೆ ತುರಕಿ, ಆ ಚೀಲವ ತನ್ನ ಎಗಲ ಮ್ಯಾಕ್ಕೆ ಎಸೆದು ಕಳ್ಳ ಎಜ್ಜೆ ಆಕ್ತ ವೊಂಟ...

ತನ್ನ ಗುಡ್ಲ ತಲುಪಿ, ಹಸಿಬೆ ಚೀಲದಿಂದ ಕೋಳಿಯ ಹ್ವಗೀಕೆ ತಗೀತ,

"ತಕ್ಷಣೆ, ವೈನಾದ ಕೋಳಿ ತಂದಿವ್ನಿ... ನಾತ್ರೆಗೆ ಪೊಗುದಸ್ತಾಗಿ ಎಸರ ಮಾಡಿಕ್ಕು" ಅಂದ.

ಹುಚ್ಚುಬೋರಿಗೆ ಎಲ್ಲಿಲ್ಲದ ಕುಸಾಮತ್ತಾಗಿ,

"ಇದ ತರಕ್ಕೆ ಈಗೆಲ್ಲಿತ್ತ ದುಡ್ಡು?" ಕ್ಯಾಳಿದ್ಲು.

""ನನ್ನ ಯೋನಂತ ತಿಳುಕಂಬುಟ್ಟೆ?– ಯೇಣ್ಣಿ, ಒಂದು ಕೋಳಿ ತರಕ್ಕು ತಾಕತ್ತಲ್ವ ನಂಗೆ?"– ಕ್ವಾಪ ಬಂದೋನಂಗೆ ನಟನೆ ಮಾಡಿ, ಆಮ್ಯಾಕೆ ಬಿದ್ದು ಬಿದ್ದು ನಗಾಡ್ತ.

"ವೋಗೆ ಬೋರಿ. ನೀನೊಂದು ಪೆದ್ದುಗರ. ಈ ಕೋಳಿಗೆಲ್ಲ ದುಡ್ಡು ಸುರಿಯಕ್ಕೆ ನಾಯೇನ ದೊರೆ ಮೊಮ್ಮಗನ?" ಅಂದುದಕೆ, ಬೋರಿ–

"ಒಂದು ಕೋಳಿ ತರಕ್ಕೆ ಒಬ್ಬ ದೊರೆ ಮೊಮ್ಮಗನೆ ಆಗಬೇಕೆ?– ನೀ ಕುಡಿಯಾ ದುಡ್ನಲ್ಲಿ ಉಳಿಕೆ ಮಾಡಿದ್ರೆ, ವಾರಕೊಂದು ಜಿನ ಆದ್ರೂ ನಮ್ಮ ಗುಡ್ಲಲ್ಲೂವೆ ಕೋಳಿ ಕಾರ ಆರೀನೇಬ್ಯೆದು!..." ಅಂದ್ಲು. ಟಗರೂರ,

"ಅಯ್ಯೊ ಪೆದ್ದಗರುವೆ, ಇದ್ನ ನಾ ದುಡ್ಡ ಕ್ವಟ್ಟು ತಂದೇಂತ ನೀ ತಿಳುಕಂಡ್ಯ?"– ನಕ್ಕು, "ಕ್ಯಾಳು, ಯೋಳ್ತಣಿ" ಅಂದು, ತಾನು ಆ ಕೋಳಿಯ ಎಂಗೆಹಾರಿಸಿ ತಂದೆ ಅನ್ನಾದ ಕಣ್ಣಿಗೆ ಕಟ್ಟೂವಂಗೆ ಇವರಿಸಿದನಂತೆ!

ಇದರಿಂದ–ಏಟೊ ಜಿನ ಕಳುದ ಮ್ಯಾಲೆ ಇವೊತ್ತೊಂದು ಕೋಳಿ ತಿನ್ನೊ ಅವಕಾಶ ಸಿಕ್ತಲ್ಲ ಅಂತಾವ, ಹುಚ್ಚುಬೋರಿಗೆ ಕುಸಿ ಆದರೂವೆ, ಮಗಳು ಚೆಲುವಿಗೆ ಮಾತ್ರ ಅವಳಯ್ಯನ ನಡತೆ ಇಸುಸನಿಲ್ಲವಂತೆ!

"ಮಯ್ಯ ಮುರುದು ದುಡೀಬೇಕು. ಘನ್ನಬೇಕು. ಕದ್ದು ತಂದು ತಿನ್ನಾದು ನಂಗೇನೂ ಒಪ್ಪಿತ ಆಗ್ನಿಲ್ಲ"– ಕಡ್ಡಿ ಮುರಿದಂತೆ ಯೋಳಿದ್ಲಂತೆ.

ಬೆಂಕಿಕಡ್ಡಿ ಗಿರಿ, ಬೀಡಿ ಕತ್ತಿಸಿ–

"ಚೋಟು ಉದ್ದುದೋರಿಂದ ಇಡುದು ವೋಟುದ್ದ ಇರೋವರ್ರೂ್ಗ ನಂಗೆ ಬುದ್ದಿ ಯೋಳೋರೇಯ. ಗಮ್ಮನೆ ನಿಮ್ಮ ನಿಮ್ಮ ಕೇಮೆ ಮ್ವಾಡಿರಮ್ಮಿ" ಅಂದು, ಟಗರೂರ ದಮ್ಮೇಳೀತ ಕುಂತು, ಕಾಲ ನೀಡಿದ್ನಂತೆ. ವಸಿ ವೋತ್ನಲ್ಲೆ ಕಣ್ಣು ಎಳದಂಗಾಗಿ ಬಿಡಿಯ ಜಟಜಟ್ನೆ ಸೇದಿ, ತುಂಡು ಆಚೆಗಸ್ದು, ಬಿದ್ದುಕಂಡನಂತೆ...

ಅಡುಗೆ ಆದ ಕೂಡ್ಲೆ ಅಯ್ಯಂಗೆ ಕಯ್ಯಿಕಾಲು ತೊಳಸಿ ಉಣಕ್ಕೆ ಕುಂದರಿಸಿದ್ಲು. ಹುಚ್ಚಬೋರಿ ತಗತಗ್ದು ಇಡುತಾ ಇದ್ದರೆ, ಅಷ್ಟ ಅಹ್ವಾಂತ ಚಪ್ಪರಸ್ತ ಗಡದ್ದಾಗಿ ಹ್ವಡದು, ಪುನಾ ಕಾಲು ನೀಡಿ ಬಿದ್ದುಕಂಡನಂತೆ...

ಈ ಇಚಾರನೆಲ್ಲ ಚಾಚೂ ತೆಪ್ಪದ ರೀತಿ, ಹುಚ್ಚುಬೋರಿ ಅದು ನಡದ ನಾಕನೆ ನಾತ್ರೆ, ಲಕ್ಕನ ಅವ್ವನ ಕುಟ್ಟೆ ವರದಿ ವಪ್ಪಿಸಿದ್ಲು. ಲಕ್ಕನ ಅವ್ವ ಕಲ್ಯಾಣಿಯೇನೊ ಗುಟ್ಟುಗಾತಿ. ಒಬ್ಬರು ಯೋಳಿದ್ನ ಇನ್ನೊಬ್ರ ಕುಟ್ಟೆ ಯೋಳೊ ಸೋಬಾವದೋಳಲ್ಲ. ಆದ್ರೆ ಹುಚ್ಚುಬೋರೀದು ತುಡುಮಿಡಕೆ ಜೀವ. ಯೇನಾರ ಕಿವಿಗೆ ಬೀಳೋದೆ ತಡ, ಅದ್ನ ಊರ್ನಲ್ಲೆಲ್ಲ ಸಾರುತಾ ಬರಬೇಕು. ಮಾತಾಡ್ತಾ ಇದ್ದರೂ ವೋಟೇಯ– ಮಾತಾಡ್ತಾನೆ ಇರಬೇಕು. ನಗಾಡ್ತ ಇದ್ದರೂ ವೋಟೇಯ, ನಗಾಡ್ತಾನೆ ಇರಬೇಕು. ಅದುಕೇ ಊರ್ನಲ್ಲಿ ಎಲ್ಲರೂವೆ ಬೋರಿ ಅನ್ನೊ ಹೆಸರಿನ ಜ್ವತ್ಗೆ ಹುಚ್ಚು ಅಂತಾನು ಸೇರಿಸಿದ್ದು!...

ಹುಚ್ಚಬೋರಿ ಈ ಇಸ್ಯವ ಬೋ ಗುಟ್ಟಾಗಿ ಇಟ್ಟುಕಾಬೇಕು ಅಂತಾ ಕುಂಡಿಮಾದಿ, ದ್ಯವಾಜಿ, ಪುಟ್ಟಿ, ಚೌಡಿ, ರಂಗಿ, ಯೆಲ್ಲಾರತ್ರವೂ" ಗುಟ್ಟು– ಇನ್ನ್ಯಾರ್ರೂ್ಗ ಯೋಳಬ್ಯಾಡಿ" ಅಂತ ಬಿತ್ತುಬುಟ್ಲು... ದ್ಯಾವಾಜಿ ಒಬ್ಬಳ ಕಿವಿಗೆ ಬಿದ್ದರೆ ಸಾಕಾಗಿತ್ತು. ಇನ್ನು ಈಟು ಮಂದಿ ಕಿವಿಗೆ ಬಿದ್ದರೆ ಕ್ಯಾಳಬೇಕ?– ಊರೋಳಗೆಲ್ಲ ಟಾಂ ಠಾಂ ಆಗೋಯ್ತು. ಪಂಚಾತಿಗೆ ಕುಂದರಿಸಿದ್ರು. ಟಗರೂರ "ನನ್ನೆಡತಿಗೆ ಹುಚ್ಚು–ಗ್ಯಾನಗೆಟ್ಟಂಗೆ ಯೇನೇನೊ ಮಾತಾಡಿಬುಡ್ತಾಳೆ... ಈ ಇಸ್ಯ ನಾ ಯೇನೇನೂ ಕಾಣನೇ ಕಾಣೆ. ನನ್ನ ಕಣ್ಣಾಣೆಗೂವೆ, ಇರಾ ನನ್ನೊಬ್ಬಳ ಮಗಳಾಣೆಗೂವೆ" ಅಂತ ಬಟ್ಟಾಡಿದ– ಪಂಚಾತಿಯೋರು ವಪ್ಪುನಿಲ್ಲ. ಇಪ್ಪತ್ತು ರೂಪಾಯಿ ದಂಡ ಆಕೇ ಆಕಿದ್ರು...

ಅಂತು ಒಟ್ನಲ್ಲಿ ಟಗರೂರ್ನಿಂದ ಒಂದು ಚೆಂದುಳ್ಳಿ ಹೈದ ಮಣ್ಣಾಯ್ತುಽ, ಅನ್ನಾ ಮಾತು ಊರ್ನಲ್ಲಿ ಗಟ್ಯಾಗಿ ನಿಂತೋಯ್ತು. ಆದೆ ತಿಂಗಳೊಪ್ಪತ್ತು ಕಳೆಯೋದ್ರಲ್ಲೆ ಲಕ್ಕಂಗೆ ಹ್ವಸ ಇಚಾರವೊಂದು ತಿಳಿದು ಬೆಪ್ಪಗೂಡೋದ! ಹಜಾಮರ

ಜವರಯ್ಯ ಒಂದು ತಂತೇಲಿ ಹುಣಸೂರು ಪ್ಯಾಟೇಲಿ ಸಿಕ್ಕಿ, ಅಲ್ಲೀತನಕ ತನ್ನ ವೊಟ್ಟೇಲೆ ಜ್ವಾಪಾನಾಗಿ ಬೀಗಮುದ್ರೆ ಆಕಿ ಇಟ್ಟುಗಂಡಿದ್ದ ಇಸ್ಯವ ತನ್ನತ್ರ ಗುಟ್ಟಾಗಿ,

"ಇಗ ಯೋಳ್ತಿರೊ ಇಸ್ಯವ ಯಾರ ಕುಟ್ಟಾರು ಯೋಳಿಬುಟ್ಟೀ ಕನಪ್ಪ!... ನಿನ್ನ ದಮ್ಮಯ್ಯ... ನನ್ನ ವೊಟ್ಟೇಲಿ ಈಟು ಕಾಲವೂ ಇದ್ನ ಎಂಗೋ ಇಟ್ಟುಕಂಡು ಕಾಲ ತಳ್ಳಿದೆ. ಇನ್ನು ಆಗಕ್ಕಿಲ್ಲ, ಯಾರ ಕುಟ್ಟಾರು ಯೋಳದೆ ವೋದರೆ, ನಂಗೆ ವೊಟ್ಟೆ ಉಬ್ಬರಣೆ ಬಂದು ನಾ ಸತ್ತೇವೋಗೊದಂತೂ ನಿಚ್ಚಯ!... ಅದುಕೆ, ನಿನ್ನ ತಾವು ಯೆಲ್ಲನೂ ಬಿಚ್ಚುತಾ ಇವ್ನಿ. ನೀನು ಬಾಕಿಯೋರಂಗೆ ಬಾಯಿಬಡುಕ ಅಲ್ಲ, ಯಾವ ಇಸ್ಯಾನಾರು ವೋಟ್ಟೇಲೆ ಇಟ್ಟುಕತ್ತೀಯಾಂತ ಅನುಬೋಗದಿಂದ ತಿಳುಕಂಡೀವ್ನಿ...ಆದರೂವೆ, ತಲೆ ವೋಗೊ ಇಸ್ಯ. ಒಂದು ದಪ್ಪ ಪಂಚಾತೀಲಿ ತೀರ್ಮಾನ ಆಗಿ ಮುಗಿದೊಗದೆ. ಯಾರ ಕುಟ್ಟುವೆ ನೀ ಯೋಳಕ್ಕಿಲ್ಲ ಅಂತ ಭಾಸೆ ಕ್ವಟ್ಟರೆ, ನಾ ಯೋಳ್ತೀನಿ ನ್ವಾಡಪ್ಪ" ಅಂದ.

"ಜಡೆಮುನಿ ಆಣೆಗೂ ನಾ ಯೋಳಕ್ಕಿಲ್ಲ. ಅದೇನು ಯೋಳಿರಯ್ಯ"– ಅಂತ ತಾನು ಭಾಸೆ ಕ್ವಟ್ಟಮ್ಯಾಲೆ ಜವರಯ್ಯ ಬಾಯಿ ಬಿಚ್ಚಿದ.

ಜವರಯ್ಯಂಗೂ ಸತ್ತೋದ ಆ ಹೈದ ಹಲಗಂಗೂ ಬೋ ಚೆಂದ. ಯಾವ ಇಚಾರ ಆದರೂವೆ ಹಲಗ ಜವರಯ್ನ ಅತ್ರ ಯೋಳಿಕೊಬೇಕು. ಅವ್ನು ಯಾರ ಸಂಗಾಟವೂ ಯೆಚ್ಚಾಗಿ ಸೀನೆಯ ಮಾಡಿಕತ್ತೀರನಿಲ್ಲ– "ನಿನ್ನಂಗೆ ಗುಟ್ಟುಗಾರ ಕನೊ" ಇಲ್ಲೀತಂಕ ಅವ್ನ ಸಾವಿನ ಇಚಾರವಾಗಿ ಹಬ್ಬಿರಾ ಸುದ್ದಿಗೆ ಬುಡವೆ ಇಲ್ಲ. ದಿಟ್ಟವಾಗೂ ನಡದ್ದೇನಪ್ಪ ಅಂದ್ರೆ– ಇಂದುಕೆ ಒಂದು ಜಿನ, ದೇಸದಲ್ಲಿ ಯಾರೊ ಸತ್ತೋಗಿ, ಮಟಕ್ಕೋಗಿದ್ದ ಹೈಕಳ್ನೆಲ್ಲ ಉಪಾದ್ಯರು ರಜ ಕ್ವಟ್ಟು ಕಳಿಸಿಬುಟ್ಟಿದ್ರು. ಊರಿಗೆ ಬಂದ ಹಲಗ ತಮ್ಮ ಅಟ್ಟಿ ಮುಂಚೋರಿ ಕಡ ಆಕಿರೋದ ಕಂಡು, ಅವ್ವ ದಣಿದು ಬಂದು ಮನಗಿರಬ್ಯೆದು, ಯಾಕೆ ಸುಮ್ಮಕೆ ಅವಳ ಯೋಳಿಸಬೇಕೂಂತ, ಹೈದ ಹಿತ್ತಲ ಬಾಗಿಲ ಚೋರಿ ಯೇನಾರ ತಗಿದಿದ್ದಾತ ನ್ವಾಡಾನೆಂತ, ಅಲ್ಲಿಗೋಗಿ ಕದವ ಮೆತ್ತಗೆ ದಬ್ಬಿದನಂತೆ ಆ ಕದ ತಕ್ಕತ್ತಂತೆ. ಎಂಕಿ ಆ ಕದ ಭದ್ರ ಮಡಾದ ಮರತು ಮನಗಿದ್ದಲು. ಹೈದ ವಳುಗೋಗಿ ನ್ವಾಡ್ತದೆ... ಅವ್ವ ಹುಟ್ಟಿದ್ದ ಹುಟ್ಟಿದಂಗೇಯ ಬೆತ್ತಾನು ಬೆತ್ತಲೆ ಅಂಗಡಿ ಬಸಲಿಂಗು ಜ್ವತ್ಗೆ ಬಿದ್ದುಕಂಡವಳೆ!... ಹೈದ ಕಲ್ಲಾಗಿ ನಂತನಂತೆ!... ಅವೋತ್ನಿಂದ ಹೈದನ್ನ ಕಂಡರೆ ಎಂಕಿಗೆ ಹುಚ್ಚು ಕ್ವಾಪ. ಸಣ್ಣಪುಟ್ಟ ತೆಪ್ಪಿಗೆಲ್ಲ ಏಟು. ಬೆನ್ನಲ್ಲಿ ಬಾಸುಂಡೆ ಯೆಳೀದೇ ಇದ್ದ ಜಿನವೆ ಅಪುರ್ಪ. ಅವಳ ಮಯ್ಯೊಳಗೆ ಭೂತ ಕುಣಿಯಕ್ಕೆ ಸುರು ಆಗೋಯ್ತು. ಜಿನದಿಂದ ಜಿನಕೆ ಅಟ್ಟೀಲಿ ಅವಳ

ರಾದ್ಧಾಂತ ಎಚ್ಚಕತ್ತಿತ್ತೆ ಜ್ವರತು ಕಮ್ಮಿ ಆಗೊ ಸುಳುವೆ ಕಾಣನಿಲ್ಲ... ನನ್ನ ಕುಟ್ಟೆ ಹೈದ, "ಇನ್ನು ನಂಗೆ ಬದುಕಕ್ಕೆ ಆಸ್ಯೇ ಇಲ್ಲ, ಜವರಪ್ಪ" ಅಂತ ಯೋಳಿಕತ್ತಾನೇ ಇತ್ತು. "ಚಿಕ್ಕೋನು ಪುಟ್ಟೋನು– ಅಂಗೆಲ್ಲ ಮಾತಾಡಬಾರ್ದು" ಅಂತ ನಾನು ಬದ್ದಿ ಯೋಳಿದೆ. ನನ್ನ ತಬ್ಬಿಕಂಡು ಗೋಳೋಂತ ಆಳ್ತ, ಒಂದು ಆಯಿತವಾರ ಸಂದೀನಾಗ ಕೆರೆ ಅತ್ರ ನಾವಿಬ್ರೆ ಇದ್ದಾಗ, ನಡದದ್ನೆಲ್ಲ ಮುಚ್ಚುವರೆಯಿಲೆ ಯೋಳಿ "ಇನ್ನು ಯಾವ ಆಸೆಗೆ ಬದುಕಬೇಕು? ನೀನೇ ಯೋಳು..." –ನನ್ನೇ ಕೇಳ್ತು... ನಿಂಗೂ ಗ್ವತ್ತಲ್ಲ, ನಿಸ್ಟುರಗಾರ ಹೈದ. ಮನಸ್ಸಿಗೇನಾರ ಬಂದ್ರೆ, ಅದ್ನ ಸಾದಿಸೋವಂತ ಗಂಡೇಯ. ನಾನೂವೆ ತಿಳಿದ ಬುದ್ದೀನೆಲ್ಲ ಯೆಚ್ಚ ಮಾಡಿ ಯೋಳ್ದೆ. ಅವ್ನು ನಂಗೆ ಯೋಳ್ದ ಕೊನೇ ಮಾತು ಏನಂತೀಯ?... "ನಿಂಗ್ಯಾಕೆ ಜನರಯ್ಯ, ಸುಮ್ಮಕೆ ಚಪಲ. ನಮಗೂ ನಮ್ಮವ್ವಂಗೂ ಇನ್ನು ಈ ಧರೇ ಮ್ಯಾಲೆ ರುಣತೀರೋಯ್ತು..."

ಹಲಗೆ ಇಂಗ ನನ್ನತ್ರ ಖೈಡಾಗಿ ಯೋಳಿದ್ದು ಮಂಗಳಾವರ ಬೈಗಿನಲ್ಲಿ. ಬದುವಾರ ಬೆಳಿಗ್ಗೆ ಎದ್ದೋನು ನ್ಯಾರವಾಗಿ ಅವರ ಅಟ್ಟಿ ತಾವಿಕೋದೆ. ಅಗ ಹಲಗ ಟಿಪನ್ ಕರಾರ ವೋರೀಕೆ ತಂದಿಟ್ಟೋನು, ಅದೇನು ಮನಸ್ಸು ಬಂತೊ, ಆತರಾತರಾಗಿ ಪುನಾ ಅಟ್ಟಿ ವಳೀಕೆ ಗುಡುಕ್ಕುನೋಗಿ ಕದ ಆಕ್ಕಂಡ. ಮಟದ ಹೈಕಳೆಲ್ಲ ಆಗ್ಲೆ ಊರ್ನಿಂದ ವೊಂಟು ಬರೋನಾಗ ದಾರೀಲೆ ಸಿಕ್ಕಿದ್ದೊ. ನಿಮ್ಮ ಜ್ವತ್ಗೆ ಹಲಗ ಯಾಕೆ ಬರನಿಲ್ಲಾಂತ ಕೇಳ್ದೆ. ಅಟ್ಟೇಲಿ ವಸಿ ಕೇಮೆ ಅದೆ, ಅದ ಮುಗುಸಿ ಬತ್ತೀನಿ... ಆ ಹೈಕಳು ಯೋಳಿದ್ದಕೂ ನಾನು ಅಟ್ಟಿ ತಾವು ಕಂಡ ದುರಸ್ಯಕೂ ಚಾಟಿ ಆಯ್ತು. ಅಂಗೆ ಆತರಾಗಿ ಟಿಪನ್ ಕರಾರ ಹ್ವರೀಕಿಟ್ಟು ವಳೀಕೋದ ಹೈದನ ಚರ್ಯೆ ಕಂಡವ್ಯಾಲಂತೂ ನಂಗೆ ಪೂರಾ ಅನುಮನಸಾಯ್ತು. ದಡದಡನೋಗಿ ಕದ ತಟ್ಟಿದೆ. ಎಸರು ಎಡದು ಕೂಗ್ದೆ. ವಳುಗ್ನಿಂದ ಏಟೋತ್ತಾದರೂವೆ ಜವಾಬೆ ಬರನಿಲ್ಲ. ಅಂಗೇ ವಸಿವೊತ್ತು ನಿಂತಿದ್ದೋನು ಕದಕ್ಕೆ ಕಿವಿ ಕ್ವಟ್ಟು ನಿಂತೆ. ವಳುಗ್ನಿಂದ ಗೊರ್ ಗೊರ್ ಅಂತ ಸದ್ದು ಬತ್ತಿತ್ತು. ನಂಗೆ ಕಯ್ಯಿಕಾಲು ವದುರಕ್ಕೆ ಸುರು ಆಯ್ತು. ಇನ್ನು ಅಲ್ಲಿ ನಿಂತರೆ ನನ್ನ ಮ್ಯಾಲೆ ಬಂದಾತು ಅಂತ ಆ ಜಾಗದಿಂದ ಆ ಕ್ಷಣದಲ್ಲಿ ನಿಕಾಲಾದೆ."

ಬೆಪ್ಪಾಗಿ, ಜವರಯ್ಯ ಯೋಳ್ದ ಕೇಳ್ತಾ ನಿಂತಿದ್ದೋನು,

" ಅಂಗಾರೆ, ಟಗರೂರ ಆ ಡಬ್ಬಿ ಎತ್ತಕ್ಕೆ ಮುಂಚೆ ಹೈದ ಸತ್ತೋಗಿತ್ತು ಅನ್ನು?" ಅಂದ ಲಕ್ಕ.

"ಅಯ್, ಟಗರೂರ ಬರಕ್ಕೆ ಸುಮಾರು ವೊತ್ನಲ್ಲೆ ಆ ಹೈದ್ನ ಪ್ರಾಣ

ವೋಗಿರಬೇಕು."

"ಅಂಗಾರೆ, ಟಗರೂರ ಡಬ್ಬಿ ಎತ್ತಿದ್ರಿಂದ ಯೇನೂವೆ, ಆ ಹೈದ ಸಾಯನಿಲ್ಲ ಅಂದಂಗಾಯ್ತು?" ಲಕ್ಕ ತನಗೆ ತಾನೆ ಮಾತಾಡಿಕಳೊತರ ಕ್ಯಾಳಿದ್ದ.

"ಅದು ಹ್ವಾಗಲಿ ಅಂದೆ ಆ ಮಾನಗೆಟ್ಟ ಯಜಮಾನ್ರು, ಆ ಹೈದ್ನ ಮಣ್ಣು ಮಾಡಕ್ಕೆ ಎಂಕಿ ಕಯ್ಯಿಲಿ ಬರಿ ನೂರು ರೂಪಾಯಿ ಕ್ವಟ್ಟು, ಉಳುಕೆ ಒಂಬಯನೂರು ರೂಪಾಯ್ನೂವೆ ಮಾದೇಸ್ವರನ ಗುಡಿ ಲಿಪೇರಿ ಮಾಡಿಸ್ತೀವಿಂತ ತಾವು ತಾನೆ ಅಂಚಿಕಂಡ್ರಲ್ಲ... ಈ ಅನ್ನಾಯಕೆ ಯೇನು ಯೋಳೋದಪ್ಪ..."

"ಅದ್ಯಾವ ಹ್ವಸ ಇಸ್ಯ ಬುಡು. ಕಾಲದಿಂದ್ಲೂ ಇಂಗೇ ನಡದು ಬಂದದೆ. ಈ ಅನ್ನಾಯದಲ್ಲೆ ಹುಟ್ಟಿ, ಈ ಅನ್ನಾಯದಲ್ಲೆ ಬೆಳೀತಾ ಅದೆ, ನಮ್ಮ ಪಂಚಾತಿ..."

ಲಕ್ಕನ ಮಾತ್ನಲ್ಲಿ ಸಂಕಟದ ಜ್ವತ್ಗತೆ ರೋಸವೂ ಬೆರುತ್ತಿತ್ತು.

* * * *

ಆದರೆ, ಉಳಿಕೆ ಒಂಬೈನೂರ ರೂಪಾಯಿಗಳನ್ನು ಹಂಚಿಕೊಳ್ಳುವಾಗ, ತನಗೆ ಬಂದ ಪಾಲು ಕಡಿಮೆ ಆಯ್ತು ಎಂದು ಕೋಟೆ ಬುಳ್ಳಪನಿಗೆ ಕೋಪ ಬಂದಿತು. ಪರಿವಾರದ ಜಾತಿ ಎಂಕಿಯ ಮಗ ಹಲಗ, ಸುಮಾರು ಹನ್ನೆರಡು ವರ್ಷದ ಬಾಲಕನು ಆತ್ಮಹತ್ಯೆ ಮಾಡಿಕೊಂಡು ಸತ್ತಿರುವುದಾಗಿಯೂ ಊರಿನ ಇತರೆ ಯಜಮಾನರು ಗೋಪ್ಯವಾಗಿ ಆ ಹೆಣವನ್ನು ಮಣ್ಣು ಮಾಡಿರುವುದಾಗಿಯೂ ಹುಣಸೂರು ಪೋಲೀಸು ಠಾಣೆಗೆ ಮೂಗರ್ಜಿ ಬರೆದ. ಒಡನೆಯೇ ಒಬ್ಬ ಪೋಲೀಸು ಪೇದೆಯೊಡನೆ ಸಬ್‌ಇಬ್‌ಸ್ಪೆಕ್ಟರ್ ಗೊಳಪ್ಪ ದರುಮನಳ್ಳಿಗೆ ಒಂದು ಬೆಳಿಗ್ಗೆ ಹಾಜರಾದರು.

ಸಬ್‌ಇನ್‌ಸ್ಪೆಕ್ಟರ್ ಗೊಳಪ್ಪನವರು ಹಟಾತ್ತನೇ ಪ್ರತ್ಯಕ್ಷವಾದದ್ದು ದರುಮನಳ್ಳಿಯ ಜನರನ್ನು ದಿಗ್ಭ್ರಮೆಗೊಳಿಸಿತು. ಗೊಳಪ್ಪನವರು ತಾವು ಬಂದ ಕಾರಣವನ್ನು ತಿಳಿಸದ ಬಳಿಕವಂತೂ ಊರಿನ ಮುಖಂಡರ ಜಂಘಾಬಲವೇ ಉಡುಗಿಹೋದಂತಾಯಿತು.

ಗೂಳಪ್ಪ ಹೊದೆ ಹೊದೆ ಮೀಸೆಯ 'ಕಪ್ಪೀನಿ' ಆಳು. ಎತ್ತರದಲ್ಲಿ ಕುಳ್ಳು. ಆದರೂ ತೋರವಾದ ಮಯ್ಯಿ, ಮೆಡ್ಡೆಗಣ್ಣು, ಖಾಕಿ ಪೋಷಾಕಿನ ವೈಖರಿಯಲ್ಲಿ, ಸಾಮಾನ್ಯರನ್ನು ಅದರಲ್ಲೂ ಹಳ್ಳಿಗಾಡಿನ ಮುಗ್ಧ ಮಂದಿಯನ್ನು ಭೀತಿ ಗೊಳಿಸುವ ವ್ಯಕ್ತಿತ್ವವನ್ನು ಆತನಿಗೆ ದಯೆಪಾಲಸಿದ್ದವು.

ಗೂಳಪ್ಪನ ಆಗಮನದಿಂದ ಎಲ್ಲರಿಗಿಂತ ವಿಶೇಷವಾಗಿ ಕಸಿವಿಸಗೊಂಡವರೆಂದರೆ ಶ್ಯಾನುಭೋಗ ಸೀತಾರಾಮಯ್ಯ, ಈತ ತಮ್ಮ ತಂದೆ

ವೆಂಕಟಕೃಷ್ಣಯ್ಯನವರಂತೆ ತಮ್ಮ ಬದುಕಿಗೆ ಎಂದೂ ಊರಿನ ವ್ಯವಹಾರಗಳನ್ನು ಅಂಟಿಸಿಕೊಂಡವರಲ್ಲ. ತಮ್ಮ ತೋಟ, ತುಡಿಕೆ, ತಮಗೆ ರೈತರಿಂದ ಬರಬೇಕಾದ ಪೋಟಿಕೆ, ಮಸಿಕುಡಿಕೆ ಹಣ, ಜೊತೆಗೆ ರೈತಾಪಿ ಜನ ತಂದುಕೊಡುವ ಬೆಣ್ಣೆ, ಜೇನುತುಪ್ಪ, ಆಯಾ ಕಾಲದಲ್ಲಿ ದೊರೆಯುವ ಹಲಸಿಹಣ್ಣು, ಮಾವಿನಹಣ್ಣು, ಸೀಬೆಹಣ್ಣು, ಉಪ್ಪಿನಕಾಯಿ ಹಾಕಲು ಅಮಟೆಕಾಯಿ, ಬೆಟ್ಟದ ನೆಲ್ಲಿಕಾಯಿ– ಇತ್ಯಾದಿ ಮಾಮೂಲುಗಳಲ್ಲಿ ಆಸಕ್ತಿ ವಿನಾ, ಊರಿನ ಆಗುಹೋಗುಗಳಲ್ಲಿ ಸಾಮಾನ್ಯವಾಗಿ ಅವರು ನಿರ್ಲಿಪ್ತರು. ಅಂದರೆ ಊರಿನಲ್ಲಿ ಏನೇ ಅವ್ಯವಹಾರ ನಡೆದರೂ ಉಪಾಯವಾಗಿ ಯಾವ ಏಟಿಗೂ ಸಿಕ್ಕದೆ 'ರಾಮಾ ಸ್ವಸ್ತಿ, ರಾವಣಾ ಸ್ವಸ್ತಿ' ಎಂದು ಜಾರಿಕೊಳ್ಳುವ ಸ್ವಭಾವದ ವ್ಯಕ್ತಿ.... ಈ ಊರಿನಲ್ಲಿ ನಾವು ಬ್ರಾಹ್ಮಣರು ಇರುವುದು ಕೆಲವೇ ಜನ. ಇಲ್ಲಿ ಲಿಂಗಾಯಿತರು, ಒಕ್ಕಲಿಗರು, ಕುರುಬರು, ಪರಿವಾರದವರು, ಕುಂಬಾರರು ಇತ್ಯಾದಿ ಇತರೇ ಕೋಮಿನವರದೇ ಪ್ರಾಬಲ್ಯ. ಆದ್ದರಿಂದ ತಾವು ಒಬ್ಬರ ಮೇಲೆ ಇನ್ನೊಬ್ಬರನ್ನು ಎತ್ತಿಕಟ್ಟಿ, ಅದು ಸಾಧ್ಯವಾಗದಿದ್ದಲ್ಲಿ ಎಲ್ಲರಿಂದಲೂ ಆದಷ್ಟು ದೂರ ಇದ್ದುಬಿಡುವುದು ಕ್ಷೇಮ ಎಂದು ತೀರ್ಮಾನಿಸಿದ್ದರು. ಆದರೆ ಇಂದು ಅವರು ಅಷ್ಟು ಸುಲಭವಾಗಿ ತಪ್ಪಿಸಿಕೊಳ್ಳಲಾಗದ ಸಂದರ್ಭ ಒದಗಿ ಬಂದಿತ್ತು. ಸಬ್‌ಇನ್‌ಸ್ಪೆಕ್ಟರ್ ಗೂಳಪ್ಪ ಒಬ್ಬ ಪೇದೆಯೊಡನೆ ಬಂದು ತಮ್ಮ ಮನೆಯ ಜಗುಲಿಯ ಮೇಲೆಯೇ ಪ್ರತಿ ಷ್ಠಾಪಿತರಾಗಿರುವರೆಂದೂ ತಮ್ಮನ್ನು ಜಾಗ್ರತೆ ಕರೆತರಲು ಹೇಳಿರುವುರೆಂದೂ ಪಟೇಲ ನಿರ್ವಾಣಯ್ಯ ತೋಟಕ್ಕೆ ಬಂದು ಸುದ್ದಿ ಮುಟ್ಟಿಸಿದಾಗ, ಸೀತಾರಾಮಯ್ಯನವರ ಶ್ಯಾನಭೋಗ ಬುದ್ಧಿಗೆ ಮಂಕು ಕವಿದಂತಾಯಿತು. ಈ ಸಂದಿಗ್ಧದಿಂದ ಹೇಗೆ ಪಾರಾಗುವುದೆಂದು ತರ್ಕಿಸುತ್ತಲೆ ಬಂದರು.

ಶ್ಯಾನುಭೋಗರು ಪಟೇಲನ ಸಂಗಡ ತಮ್ಮ ಮನೆಯ ಬಳಿ ಬಂದಾಗ, ಗೂಳಪ್ಪನಾಗಲೆ ತನ್ನ ಪೇದೆಯನ್ನು ಕಳಿಸಿ ಊರಿನ ಯಜಮಾನ್ರುರನ್ನು ಕಲೆ ಹಾಕಿ, ತನಿಖೆಗೆ ಆರಂಭಿಸಿದ್ದ. ಆಗಾಗ ಹುಷಾರು ತಪ್ಪುತ್ತಿದ್ದ ಕುಳವಾಡಿ ಕುಂದೂರಯ್ಯನಿಗೆ ಆ ದಿವಸವೂ ಆರೋಗ್ಯ ಕೆಟ್ಟು, ತನ್ನ ಪರವಾಗಿ ಲಕ್ಕನನ್ನೆ ಕಳಿಸಿದ್ದುದರಿಂದ, ಲಕ್ಕನೂ ಜಗಲಿಗೆ ಅಷ್ಟು ದೂರದಲ್ಲಿ ನಿಂತಿದ್ದ. ಶ್ಯಾನುಭೋಗರು ಬಂದವರೇ, "ಇನ್‌ಸ್ಪೆಕ್ಟರ್ ಸಾಹೇಬರಿಗೆ ನಮಸ್ಕಾರ. ಯಾವಾಗ ದಯಾಮಾಡಿಸೋಣವಾಯ್ತು?" ಎಂದು ಕೈ ಜೋಡಿಸುತ್ತ, ದೇಶಾವರಿ ನಗು ನಕ್ಕು, "ಅಯ್ಯಯ್ಯೊ, ಇದೇನು– ಸಾಹೇಬರನ್ನ ಚಾಪೆ ಮೇಲೆ ಕೂರಿದೀರಲ್ಲ?" ಎನ್ನುತ್ತ, ಗೂಳಪ್ಪ ಬೇಡ ಬೇಡವೆಂದರೂ ಕೇಳದೆ, ಮನೆಯ ಒಳಗಿನಿಂದ

ತಾವೇ ಕುರ್ಚಿಯನ್ನೆತ್ತಿ ತಂದು, "ತಾವು ಇಲ್ಲಿ ಇಲ್ಲಿ ಮುಹೂರ್ತ ಮಾಡಬೇಕು" ಎಂದು ವಿನೀತರಾಗಿ ಬಿನ್ನೈಸಿದರು, ಗೂಳಪ್ಪ ಈ ಠಕ್ಕು ಉಪಚಾರಕ್ಕೆ ತಾನು ಬಲಿಬೀಳುವ ಪ್ರಭೃತಿಯಲ್ಲ ಎಂದುಕೊಳ್ಳುತ್ತ, ಹೊರಗೆ ಪ್ರಕಟವಾಗಿ ಯಾವ ಭಾವವನ್ನೂ ತೋರದೆ, ಎದ್ದು ಕುರ್ಚಿಯ ಮೇಲೆ ಠೀವಿಯಿಂದ ಕುಳಿತು., ಒಂದು ಕಾಲನ್ನೆತ್ತ ಇನ್ನೊಂದರ ಮೇಲಿಟ್ಟು ಅಲ್ಲಾಡಿಸುತ್ತ, ತನ್ನ ಕೈಕೋಲನ್ನು ತೋಡೆಯ ಮೇಲಿಟ್ಟು ಅಟ್ಟಣಿಗೆಯಂತೆ ಎರಡೂ ಹಸ್ತಗಳಿಂದ ಅದನ್ನು ಹಿಡಿದು, ಚಪಾತಿ ಒತ್ತುವಂತೆ ಹಿಂದೆ ಮುಂದೆ ಆಡಿಸುತ್ತ.

"ಇದೇನು ಶ್ಯಾನುಭೋಗರೆ, ಊರ್ನಲ್ಲಿ ನೀವು, ಪಟೇಲರು, ಇಂಥಿಂಥ ಯಜಮಾನರು, ಎಲ್ಲರೂ ಇದ್ದು ಕೂಡ, ಇಂಥ ಅಚಾತುರ್ಯ ನಡೆಯೋಕೆ ಅವಕಾಶ ಕೊಟ್ಟಿರಿ?" ಪ್ರಶ್ನಿಸಿದ.

"ಅಚಾತುರ್ಯ?... ಏನು ಸ್ವಾಮಿ ತಾವು ಹೇಳ್ತಿರೋದು?– ನನಗೆ ಅರ್ಥ ಆಗ್ತಿಲ್ಲ" ಎಂದು ನಶ್ಯ ಏರಿಸುತ್ತ, ಯಜಮಾನರ ಕಡೆ ನೋಡುತ್ತ ಹೇಳಿದರು.

"ಶ್ಯಾನುಭೋಗರೆ, ನೀವು ಹಿಂದೆ ಎಲ್ಲಾದರೂ ನಾಟಕದಲ್ಲಿ ಪಾರ್ಟುಮಾಡಿದ್ದಿರೇನ್ರಿ?" ಕೈ ಕೋಲಿನಲ್ಲಿ ತೊಡೆಯ ಮೇಲೆ ಚಪಾತಿ ಒತ್ತುತ್ತಲೆ ಕೇಳಿದ ಗೂಳಪ್ಪ.

ಶ್ಯಾನುಭೋಗರು ಕೊಂಚ ಅಧೀರರಾದಂತೆ ಕಂಡರು.

"ಹಿ ಹ್ಹಿ ಹ್ಹಿ... ಯಾಕೆ, ಇಲ್ಲವಲ್ಲ ಸ್ವಾಮಿ..."

ಗೂಳಪ್ಪ ಕಣ್ಣಿನಿಂದಲೆ ಇರಿಯುತ್ತ,

"ಈ ನಾಟಕ ಯಾವುದೂ ನನ್ನ ತಾವು ನಡೆಯಕ್ಕಿಲ್ಲ, ಶ್ಯಾನುಭೋಗರೆ. ನೇರವಾಗಿ ಮಾತಾಡಿ. ನೀವೆಲ್ಲ ಸೇರಿ ಆ ಪರಿವಾರದೋರ ಜಾತಿ ಎಂಕಿ ಅನ್ನೋಳ ಮಗ ಸುಮಾರು ಹತ್ತು ವರ್ಷದ ಹುಡುಗ ಹಲಗ ನೇಣು ಹಾಕ್ಕೊಂಡು ಸತ್ತದ್ದನ್ನ ನಮಗೆ ರಿಪೋರ್ಟ್ ಮಾಡದೆ, ಅವನ ಹೆಣಾವ ಮಣ್ಣು ಮಾಡಕ್ಕೆ ಅವಕಾಶ ಕೊಟ್ಟಿದ್ದೀರಿ. ಇದು ಸರ್ಕಾರಿ ಕಾನೂನಿನ ದೃಷ್ಟೀಲಿ ಘೋರ ಅಪರಾಧ ಅನ್ನೊ ವಿಷಯ ನಿಮಗೆ ತಿಳಿದೇ ಇದೆ..." ಎಂದು ಮಾತಿನ ಶಲಾಕೆಗಳನ್ನು ಎಸೆಯುತ್ತಿರುವ ಸಮಯದಲ್ಲಿ, ಶ್ಯಾನುಭೋಗರು–

"ಅದರಲ್ಲಿ ಮಾತ್ರ ನಾನು ಭಾಗಿಯಾಗಿಲ್ಲ, ಸ್ವಾಮಿ" ಎಂದು ಒದರಿಬಿಟ್ಟರು! ಅನಂತರ ಆ ಕ್ಷಣದಲ್ಲೆ ತಾವು ಆಡಿದ್ದು ಅವಿವೇಕವಾಯಿತು. ಎಂಬ ಅರಿವಾಗಿ, ನಾಲಿಗೆ ಕಚ್ಚಿ, ಮುದುಡಿಹೋದರು.

"ಅಂದರೆ ಈ ಹೂಟದಲ್ಲಿ ನೀವು ಮಾತ್ರ ಭಾಗಿಯಾಗಿಲ್ಲ. ಆದರೆ ಅದರಲ್ಲಿ ನಿಮ್ಮನ್ನು ಬಿಟ್ಟು ಈ ಪಟೇಲರು, ನಂಜೇಗೌಡರು, ಇತರೆ ಯಜಮಾನರು, ಇವರೆಲ್ಲ ಭಾಗಿಗಳು ಎಂದು ನೀವು ರುಜುವಾತುಪಡಿಸಿದ ಹಾಗಾಯ್ತು."

ತಾನು ಕಲಿತಿದ್ದ ಲಾ ಹೇಗೆ ಪ್ರಯೋಜನಕ್ಕೆ ಬಂತು ಎಂದು ಗೂಳಪ್ಪ ಒಳಗೊಳಗೇ ಹಿಗ್ಗಿದ್ದ.

"ಹಾಗಲ್ಲ ಇನ್‌ಸ್ಪೆಕ್ಟರ್, ನಾನು ಹೇಳಿದ್ದು...ನಾನು ಏನು ಹೇಳಬೇಕು ಎಂದಿದ್ದೆ ಅಂದರೆ– ಈ ಊರಿನ ಯಾವ ವ್ಯವಹಾರದಲ್ಲೂ ನಾನು ಭಾಗವಹಿಸಿಲ್ಲ... ನಾನಾಯ್ತು, ನನ್ನ ತೋಟವಾಯ್ತು. ನೀವು ಹೇಳ್ತಿರೋದು ನಮಗೆ ಗೊತ್ತೇ ಇಲ್ಲ..."– ಶ್ಯಾನುಭೋಗರ ನುಣಚಿಕೊಳ್ಳುವ ದುರ್ಬಲ ಪ್ರಯತ್ನ ಹೀಗೆ ಪ್ರಕಟವಾಗಿತ್ತು.

"ಊರಿನಲ್ಲಿ ನಡೆಯೊ ಯಾವ ವಿಷಯವೂ ನಿಮ್ಮ ಗಮನಕ್ಕೆ ಬರದೇ ಹೋಯ್ತು ಅಂದ ಬಳಿಕ, – ಸೀತರಾಮಯ್ಯನೋರೆ, ನೀವು ನಿಮ್ಮ ಶ್ಯಾನುಬೋಗಿಕೆತನ ಊರಿನಲ್ಲಿ ಬೇರೆ ಇನಯಾರಿಗಾದರೂ ಬಿಟ್ಟು ಕೊಟ್ಟು ಸ್ವಸ್ಥವಾಗಿ ನಿಮ್ಮ ತೋಟತುಡಿಕೆ ನೋಡಿಕೋತ ಆರಾಮಾಗಿ ಇರಬಹುದಲ್ಲ?"

ಗೋಡೆಗೆ ಮೊಳೆ ಹೊಡೆಯುವ ರೀತಿಯಲ್ಲಿ ಗೂಳಪ್ಪ ಮಾತುಗಳನ್ನೆಸೆದ. ಶ್ಯಾನುಭೋಗರು ಪೆಚ್ಚಾಗಿ,

"ಅಯ್ಯೊ, ಕಾಲಾದಿಂದ ವಂಶಪಾರಂಪರ್ಯವಾಗಿ ನಡೆದುಬಂದದ್ದು ಈಗ ಇಷ್ಟು ಚಿಲ್ಲರೆ ವಿಷಯಕ್ಕೆಲ್ಲ ಬಿಟ್ಟು ಬಿಡೋದು ಅಂದರೆ..." ಎನ್ನುತ್ತ, ಕೈ ಕೈ ಹೊಸೆಯುತ್ತ ಹಲ್ಲುಕಿರಿದರು.

"ಸರಿ" ಎಂದ ಗೂಳಪ್ಪ, "ವಿಷಯ ತಿಳಿದ ಹಾಗಾಯ್ತು. ಮುಂದೆ ಕಾನೂನಿನ ಪ್ರಕಾರ ಏನೇನು ಖಟ್ಲೆ ತಗೋಬೇಕೊ ಅದ್ನೆಲ್ಲ ತಗೋತೀನಿ"– ನಿರ್ಧಾರವಾಗಿ ನುಡಿದ.

ನಂಜೇಗೌಡನಿಗೆ ಇನ್ನು ಸುಮ್ಮನೆ ಕೂರುವುದು ಸಾಧ್ಯವಾಗಲಿಲ್ಲ. ಅವರು ಎದ್ದುನಿಂತು,

"ಈಗ ನಮ್ಮೂರ್ನಲ್ಲಿ ಯಾನಾಗದೆ ಅಂತ್ಲ, ಇನ್‌ಸ್ಪೆಕ್ಟರ್?... ಯಾರೋ ಹಲಾಲ್ ಕೋರ್ರು ನಿಮ್ಗೆ ಸುಳ್ಳು ಸುದ್ದಿ ಕ್ವಟ್ಟು, ಪಾಪ ನಿಮ್ನ ಇಲ್ಲೀತಂಕ ದಣಿಸವ್ರೆ. ಎಂಕಿ ಹೈದಂಗೆ ಅದೆಂತಾದ್ದೊ ಯೋಳ್ತಾರಲ್ಲ... ನಿವೊನಿ, ಊ ನಿವೊನಿ ಜೋರಾನೊ ಯೇನೊ, ಆದಾಗಿತ್ತು. ಹೈದ ತೀರಿಕತ್ತು... ಹೆಣವ ಅಂಗೇ ಬೋ ಕಾಲ ಇಟ್ಟರೆ, ಕೊಳತು ನಮ್ಮೂರ್ನ ಬ್ಯಾರೆ ಹೈಕಳಗೂವೆ ಈ

ಕಾಯ್ಲೆ ಅಮರಿಕಂಡಾದು ಅಂತ ಜಟಪಟನೆ ಅದ್ನ ಮಸಣಕ್ಕೆ ತಟಾಯಿಸ್ಬೊ, ಪೋಟೆಯ... ಇದ್ನ ದೊಡ್ಡದು ಮಾಡಬ್ಯಾಡಿ. ನಾನು ನಮ್ಮ ಊರಿನೋರ ಪರ್ವಾಗಿ ಕಯ್ಯ ಮುಗುದು ಬೇಡಿಕತ್ತೀನಿ... ಇದರಿಂದ ನಮ್ಮೂರ ಮಾನವೇ ಪೋಟೋಯ್ತದೆ..." ಎಂದು ಅಂಗಲಾಚಿದ.

"ಹಂಗಾದರೆ–ನಿಮ್ಮೂರ್ನಲ್ಲಿ ಆ ಎಂಕಿ ಹೈದ ನೇಣು ಹಾಕೊಂಡದ್ದು, ಅದೆಲ್ಲ ಸುಳ್ಳಾ?... ಇಂತಾದೆಲ್ಲ ನಡೀಲೆ ಇಲ್ಲ ಅಂತೀರ, ಗೌಡರೆ?"

"ಬೇಸಕ್ಕಾಗಿ, ನಡೀರ, ಬೇಕಾರೆ ಯಾವ ದ್ಯಾವರ ಮುಂದೆ ನಿಂತು ಬೇಕಾರೂ ಪ್ರಮಾಣ ಮಾಡ್ತೀನಿ."

"ಅಷ್ಟೆಲ್ಲ ತೊಂದರೆ ಯಾಕೆ?... ನೀವು ಪ್ರಮಾಣಾನು ಮಾಡಬೇಕಾಗಿಲ್ಲ. ಬೇರೆ ಯಾವ ತೊಂದರೇನೂ ತಕ್ಕೊಬೇಕಿಲ್ಲ... ಇದ್ನ ಪತ್ತೆ ಮಾಡಕ್ಕೆ ನಾನು ಬೇರೆ ಔಷಧಾನೆ ಇಟ್ಟಿದ್ದೀನಿ."

ನಂಜೇಗೌಡನ ಮಾತು ನಿಂತಿತು.

ಶ್ಯಾನುಭೋಗರ ಮಡದಿ ಒಳಗಿನಿಂದ ಸನ್ನೆ ಮಾಡಿದ ಮೇರೆಗೆ, ಶ್ಯಾನು ಭೋಗರು ಎದ್ದು ಹೋಗಿ, ಬೆಳ್ಳಿ ತಟ್ಟೆಯನ್ನು ಈಸಿ ತಂದರು. ಅದರಲ್ಲಿ ಒಂದು ಚಿಪ್ಪು ಬೂದಿ ಬಾಳೆಹಣ್ಣು, ಕೆಂಪು ಬೂರಾ ಸಕ್ಕರೆ ಮತ್ತು ಬೆಳ್ಳಿಲೋಟದಲ್ಲಿ ಕಾಸಿದ ಹಾಲು.

"ಬ್ಯಾರೆ ಔಷದಿ ಇಟ್ಟಿವ್ನಿ ಅಂದ್ರಲ್ಲ– ಅಂಗಂದ್ರೇನ ಸೋಮಿ?" ಗಂಗಪ್ಪ ಧೈರ್ಯ ಮಾಡಿ ಕೇಳೇ ಬಿಟ್ಟ.

ಗೂಳಪ್ಪ ಒಂದು ಸಲ ಗಂಗಪ್ನ ನಿರ್ಲಕ್ಷ್ಯದಿಂದ ನೋಡಿ, ಎರಡು ಬಾಳೆಹಣ್ಣು ತಿಂದು, ಹಾಲು ಕುಡಿದು ಮುಗಿಸಿ ಎದ್ದ. ಶ್ಯಾನುಭೋಗರು ಗೂಳಪ್ಪ ಬಿಟ್ಟು ಬಾಳೆಹಣ್ಣುಗಳನ್ನು ಅವನ ಜತೆಗೆ ಬಂದಿದ್ದ ಪೇದೆಗೆ ಕೊಡಲು ಮರೆಯಲಿಲ್ಲ.

ಜಗಲಿಯಿಂದ ಇಳಿಯುತ್ತ, ಗಂಗಪ್ಪನತ್ತ ದೃಷ್ಟಿಹಾಯಿಸಿ, ಗೂಳಪ್ಪ–

"ಬ್ಯಾರೆ" ಔಷಧಿ ಯಾವದೂಂತ ನೀವೇನಪ್ಪ ಕೇಳಿದೋರು?... ಅದು ಬಲು ಸುಲಭದ ಔಷಧ– ಆ ಹುಡುಗನ ಹೆಣಾವ ಹೂಳಿರೋ ಜಾಗದಿಂದ ಆಗೆಸಿ ತೆಗಿಸ್ತೀನಿ. ಆಮೇಲೆ ಅದ್ನ ವೈದ್ಯರ ಪರೀಕ್ಷೆಗೆ ಗುರಿ ಮಾಡ್ತೀನಿ. ಆಗ ಆ ಹುಡುಗ ನಿಮ್ಮ ಇನ್ನೊಬ್ಬ ಯಜಮಾನ್ರು ಹೇಳಿದ ಹಾಗೆ– ನ್ಯೂಮೋನಿಯಾ ಜ್ವರದಿಂದ ಸತ್ತನೊ ಅಥವ ನನಗೆ ತಿಳಿದಬಂದಿರೊ ಹಾಗೆ ನೇಣುಹಾಕ್ಕೊಂಡು ಪ್ರಾಣ ಬಿಟ್ಟನೋ ಅನ್ನೋದು ನಿಖರವಾಗಿ, ಎಳ್ಳಷ್ಟು ಅನುಮಾನಕ್ಕೂ ಆಸ್ಪದವಿಲ್ಲದೆ ಪ್ರಕಟವಾಗುತ್ತದೆ" ಎಂದು ಹೇಳಿ, ಗಂಗಪ್ಪನೂ ಸೇರಿದಂತೆ ಅಲ್ಲಿದ್ದ

ಯಜಮಾನರೆಲ್ಲರಿಗೂ ಜಾಪಾಳದ ಮಾತ್ರೆ ಕೊಟ್ಟ.

ಈ ಮಾತು ಕೇಳಿ, ಅಲ್ಲಿ ನೆರೆದ ಎಲ್ಲ ಯಜಮಾನರಿಗೂ ಬಾಯಿ ಒಣಗುತ್ತ ಬಂದಿತು. ಅವರೆಲ್ಲರೂ ಒಂದು ಕಡೆ ಪ್ರತ್ಯೇಕವಾಗಿ ಸೇರಿ ಪರಸ್ಪರ ವಿಚಾರ ವಿನಿಯಮಯ ಮಾಡಿಕೊಳ್ಳುತ್ತಿದ್ದರು.

ಲಕ್ಕನಿಗೆ ಮುಸ್ಟಾನ್ನ ಉಂಡಸ್ಟು ಸಂತೋಸ ಆಗಿತ್ತು... ಈ ಯಜಮಾನ್ರು ನಮ್ಮೂರ್ನಲ್ಲಿ 'ಮಾತುಭಾರಿ' ಮನುಸು ಅಂತ ಎಲ್ಲಾರ ಬಾಯ್ನಲ್ಲೂವೆ ಉಳ್ಕಾಡ್ತಾರೆ!– ಇಂತೋರ ಈವಯ್ಯ ಎಂತೆಂತ ಪೈಲ್ವಾನ್ ವರಸೆ ಆಕಿ ಬೆಪ್ಪುಗೂಡಿಬುಟ್ಟ!– ಹೀಗೆಂದು ಆ ಇನ್‌ಸ್ಪೆಕ್ಟರ್ ವಿಷಯವಾಗಿ ಲಕ್ಕನಿಗೆ ಬಹಳ ಹೆಮ್ಮೆಯೆನಿಸಿತು. ಮಂಕು ಬಡಿದವರ ಹಾಗೆ ಇನ್ನೂ ಜಗಲಿ ಮುಂದುಗಡೆಯೇ ನಿಂತಿದ್ದ ಶ್ಯಾನುಭೋಗ ಸೀತಾರಾಮ್ಯನವರನ್ನು ಕೇಳಿದ:

"ಸೋಮಿ, ಇವರು ಯಾವ ಜಾತಿ?"

ಶ್ಯಾನುಭೋಗರು ಪಿಸುಮಾತಿನಲ್ಲೆ ಖಾರ ತುಂಬಿ,

"ಅಯ್ಯೊ, ನಿಮ್ಮ ಜಾತಿಗೂ ಕೀಳು ಕಣೊ–ಎಡಗೈ!"– ಎಂದರು ತಿರಸ್ಕಾರವಾಗಿ. ಅವರಿಗೆ, ಬುದ್ಧಿವಂತ ಬ್ರಾಹ್ಮಣನಾದ ತಾನು ಈ ಅತ್ಯಂತ ಕೀಳು ಜಾತಿಯ ಯಃಕಶ್ಚಿತನಿಂದ ಈ ದಿನ ಊರಿನ ಪ್ರಮುಖರ ಮುಂದೆ, ಅದೂ ನಡುಬೀದಿಯಲ್ಲಿ, ಮಾತುಮಾತಿಗೂ 'ಚಿತ್' ಅದೆನಲ್ಲ? ಎಂಬ ಕೊರಗು ಒಳಗೊಳಗೆ ಜ್ವಾಲಾಮುಖಿಯಾಗಿ ಹೊಗೆಯಾಡುತ್ತಿತ್ತು.

ಲಕ್ಕನಿಗೆ ಇನ್‌ಸ್ಪೆಕ್ಟರ್ ಗೂಳಪ್ಪನ ಬಗ್ಗೆ ಇನ್ನೂ ತಾರೀಪು ಹೆಚ್ಚಿತು. ನಮ್ಮೊನೊಬ್ಬ ಅದೇಟು ಚೆಂದಾಗಿ ನ್ಯಾಯ ಅಡ್ಡ!... ಈ ಸಾಸ್ತ್ರಪುರಾಣ ಓದ್ದ ನಮ್ಮೂರ ಗಟಾನುಗಟಿಗಳ ಅದೇಟು ಸಲೀಸಾಗಿ ಮಾತ್ನಲ್ಲಿ ಸೊಲಿಸಿದ್ದ!... ಬೇಸ್, ಬೇಸ್– ಲಕ್ಕನಿಗೆ ಎದೆಯುಬ್ಬಿ ಬಂತು. ಅವರನ್ನು ಮಾತಾಡಿಸಲೇಬೇಕೆಂದು ಮನಸ್ಸಾಯಿತು. ಮೋಟಾರ್ ಸೈಕಲ್ ಹಿಡಿದು ಏರಲು ಸಿದ್ದನಾಗಿ ನಿಂತಿದ್ದ ಗೂಳಪ್ಪನ ಮುಂದೆ ಹೋಗಿ ಕೈ ಜೋಡಿಸಿ ನಿಂತ "ಕೈಮುಗುದೆ. ಸೋಮಿ–" ಎಂದ ಅತ್ಯಂತ ವಿನಯದಿಂದ.

"ಇವನು ಯಾರು?" – ಸಬ್‌ಇನ್‌ಸ್ಪೆಕ್ಟರ್ ಗೂಳಪ್ಪ ನಿರ್ಭಾವದಿಂದ ಕೇಳಿದರು. ಅಪ್ಪರ ಮಾತು ಮುಗಿಸಿ ಇತರ ಯಜಮಾನರ ಜೋತೆಯಲ್ಲಿ ಅಲ್ಲಿಗೆ ಬಂದಿದ ನಂಜೇಗೌಡ,

"ಇವನು–ಹೊಲೇರ ಲಕ್ಕ. ಇವರ ದೊಡ್ಡಪ್ಪನೆ ನಮ್ಮೂರ ಕುಳವಾಡಿ. ಅವನ್ಗೆ ಹುಸಾರು ತೆಪ್ಪಿ, ಅವ್ನ ಬದ್ಲಾಗಿ ಇವನ್ನ ಕಳುಸವ್ನೆ" ಎಂದು ಪರಿಚಯಿಸಿದ.

ಒಡನೆಯೆ ಲಕ್ಕ.

"ತಾವು ತಮ್ಮ ಹೊಗೇರಿ ಕಡೀಕು ವಸಿ ದಯಮನಾಡಿಸಬೇಕು, ಸೊಮಿ" ಎಂದು ಪುನಃ ಕೈ ಜೋಡಿಸುತ್ತ ಬೇಡಿದ. ಅದಕ್ಕುತ್ತರವಾಗಿ ಗೂಳಪ್ಪ,

"ನೀವು ಹೊಲಗೇರಿ ಜನ ಇನ್ನೂ ಬಲು ಕೊಳಕಾಗೇ ಇದ್ದೀರಿ... ಅಲ್ಲಿಗೆ ಬರಬೇಕಾದ್ರೆ ಮೂಗು ಮುಚ್ಚೇ ಬರಬೇಕು" ಅದೋನು, ನಂಜೇಗೌಡನ ಕಡೆ ತಿರುಗಿ–

"ಎರಡು ವರ್ಷದ ಕೆಲಸ ಏನಾಯ್ತು ಅಂತೀರಿ, ಗೌಡರೆ .. ತುಮಕೂರಿನ ಕಡೆಗೆ ನನ್ನ ಪೋಸ್ಟ್ ಮಾಡಿದ್ರು. ಆಗ ಆ ಸುತ್ತಿನ ಒಂದು ಹಳ್ಳಿ ಹೊಲಗೇರಿಗೆ, ಒಂದು ಪೆಟ್ಟಿ ಕೇಸನ್ನು ಪರಿಶೀಲಿಸೊದಕ್ಕೆ, ನಾನು ಹೋಗಬೇಕಾಗಿ ಬಂತು. ನನ್ನ ಮರು ವರ್ಷದ ಮಗಳೂ ನನ್ನ ಜೊತೆಗೇ ಬರ್ತೀನಿ ಅಂತ ಜೋತು ಬಿದ್ದಳು. ನಿರ್ವಾಹವಿಲ್ಲದೆ, ಅವಳನ್ನೂ ಜೊತೆಯಲ್ಲಿ ಕರೆದುಕೊಂಡು ಹೋದೆ. ಅಲ್ಲಿ ನಾನೊಂದು ಕಡೆ ತಪಾಸಣೆ ಮಾಡ್ತಾ ಇದ್ದೆ. ಆಗ ನಮ್ಮ ಹುಡುಗಿಗೆ ಬಾಯಾರಿಕೆ ಆಯ್ತಂತೆ. ಯಾರೊ ಎತ್ತಿಕೊಂಡೋಗಿ ತಮ್ಮ ಜೋಪಡಿ ಮಡಿಕೆ ನೀರನ್ನ ಕುಡಿಸಿಬಿಟ್ಟರಂತೆ!... ಸರಿ, ನಮ್ಮ ಮನೆಗೆ ಹಿಂದಿರುಗಿದ ಮಾರನೆ ದಿನವೆ ಮಗೂಗೆ ನೂರಾಮೂರು ಡಿಗ್ರಿ ಜ್ವರ ಕಾಯಕ್ಕೆ ಆರಂಭವಾಯ್ತು. ಜ್ವರ ಮೂರು ದಿನ ಕಾಯೋದರಲ್ಲಿ ಆ ಜ್ವರದ ತಾಪಕ್ಕೆ ಅವಳ ಜ್ಞಾನ ತಪ್ಪಿದಹಾಗಾಗಿ, 'ನನ್ನ ಯಾರೊ ಕರೀತಾ ಅವ್ರೆ– ಕರೀ ಬಟ್ಟೆ ಹಾಕ್ಕೊಂಡು ಬಂದು ನಿಂತವ್ರೆ, ನಾ ಹೋಯ್ತೀನಿ...'– ಹೀಗೆಲ್ಲ ಏನೇನೊ ಬಡಬಡಿಸಕ್ಕೆ ಸುರುಮಾಡಿದ್ಲು ನನ್ನ ಹೆಂಡತಿ, 'ಅಂತಾ ಕೊಳಕು ಜಾಗಕ್ಕೆಲ್ಲ ಕೂಸನ್ನ ಯಾಕೆ ಕರೆಕೊಂಡೋಗಿದ್ರಿ?' ಅಂತ ಆಕ್ಷೇಪಣೆ ಮಾಡ್ತ, ಗೋಳೋ ಅಂದಳು. ನನಗೂ ಎಂಥ ತಪ್ಪು ಮಾಡಿದೆ ಅನ್ನಿಸಿ, ಕೂಸು ಬದುಕ್ತದೊ ಇಲ್ಲವೊ ಅಂತ ದಿಗಿಲಾಯಿತು. ಸದ್ಯಕ್ಕೆ ಅಲ್ಲಿ ಒಬ್ಬರು ಒಳ್ಳೆ ಡಾಕ್ಟರಿದ್ದರು. ಲಿಂಗಾಯಿತರು. ಅಯ್ಯೊ ಯಾವ ಜಾತಿ ಆದರೇನು?– ಒಟ್ಟಿನಲ್ಲಿ ಆ ಪುಣ್ಯಾತ್ಮ ಹಗಲೂ ರಾತ್ರಿ ಕಣ್ಮೇಲೆ ಕಣ್ಣಿಟ್ಟು, ಇಲಾಜು ಮಾಡಿದರು. ಸದ್ಯ, ಕೂಸು ಬದುಕ್ಕೊಂಡ್ತು..."– ಹೀಗೆ ಒಂದು ಪುರಾಣಾನೆ ಬಿಚ್ಚಿ ಹೇಳಿದ.

ಆ ಮಾತು ಕೇಳಿ ಲಕ್ಕ ನಾಚಿ ಒಂದು ಹಿಡಿಯಾದ. ಯಾಕಾರು ಈವಯ್ಯ ನಮ್ಮೋನೂಂತ ನಮ್ಮ ಹೊಲಗೇರಿಗೆ ಕರೆಯಕ್ಕೊದೆ?– ಒಳಗೆ ಕೊರಗಿ ಕೊರಗಿ ಕಡ್ಡಿಯಾಗುತ್ತಿದ್ದ.

ನಂಜೇಗೌಡ ಗೂಳಪ್ಪನ ಮಾತುಗಳನ್ನು ಸಂಪೂರ್ಣವಾಗಿ

ಅನುಮೋದಿಸಿ,

"ತಮ್ಮನ್ನ ಹುಣಸೂರಿಗೆ ಬಂದು ನಮ್ಮ ಮನೇಲಿ ಕಾಣ್ತೇವಿ"– ಹೀಗೆ ಆಶ್ವಾಸನೆ ಕೊಟ್ಟಿದಲ್ಲದೆ, ಹಿಂದೆ ಉಳಿದ ಪೇದೆಯ ಕೈಗೆ ಹತ್ತು ರೂಪಾಯಿಗಳನ್ನೂ ಇಟ್ಟು, ಅವನೊಂದಿಗೆ ಏನೇನೊ ಗುಟ್ಟುಗುಟ್ಟಾಗಿ ಪಿಸುಮಾತಾಡಿದ.

* * * *

ಆ ರಾತ್ರಿಯೆ ಯಜಮಾನರೆಲ್ಲ ಹುಣಸೂರಿಗೆ ತೆರಳಿ ಸಬ್‌ಇನ್‌ಸ್ಪೆಕ್ಟರ್ ಗೂಳಪ್ಪನನ್ನು ಅವನ ಮನೆಯಲ್ಲಿಯೆ ರಹಸ್ಯವಾಗಿ ಕಂಡು ಬಂದರು. ಅನಂತರ ಗೂಳಪ್ಪ ದರುಮನಳ್ಳಿಯ ಕಡೆ, ಎಂಕಿ ಹೈದನ ಈ ಕೇಸಿನ ಸಂಬಂಧವಾಗಿ ತಲೆಹಾಕಲಿಲ್ಲ. ಊರಿನಲ್ಲಿ ಅದರ ಬಗ್ಗೆ ಪ್ರಕಟವಾಗಿ ಮಾತಾಡಲು ಧೈರ್ಯ ಬರದಿದ್ದರೂ ಒಳಗೊಳಗೇ ಆ ಇನ್‌ಸ್ಪೆಕ್ಟರ್ ಕಯ್ಯ್‌ಜಯಮಾನರುಗಳು ಸರಿಯಾಗಿ ಬೆಚ್ಚಗೆ ಮಾಡಿರಬೇಕು. ಇಲ್ಲದಿದ್ದರೆ, ಆವಯ್ಯನಾ ಇಲ್ಲೀಗಂಟ ಬರದೇ ಇರೋನು!– ಎಂದು ಕೊಳ್ಳುತ್ತಿದ್ದರು ಊರಿನ ಜನ.

ಯಜಮಾನರ ನಡತೆಯಿಂದ ಲಕ್ಕನ ಮನಸ್ಸು ಒಳಗೇ ಹೇಸಿತು.

## ೨೩

ಅಪರೂಪಕ್ಕೆ ಬಂದ ರುಕ್ಮಿಣಿಯನ್ನು ಅಕ್ಕ ಪಾರ್ವತಿಯು ಭೀಮನಳ್ಳಿಯ ತಮ್ಮ ಮನೆಯಲ್ಲಿ ಬೇಡಬೇಡವೆಂದೂ ಒಂದು ತಿಂಗಳಿನ ಕಾಲ ಒತ್ತಾಯಪೂರ್ವಕವಾಗಿ ಉಳಿಸಿಕೊಂಡಿದ್ದಳು. ದಿನಕ್ಕೊಂದು ಬಗೆಯಲ್ಲಿ ಉಪಚರಿಸಿದ್ದಳು. "ಇನ್ನು ದರುಮನಳ್ಳಿಯ ನಿಮ್ಮ ಮನೇಲಿ, ನಿನ್ನ ಕೈಯೂಟ ಇದ್ದೇ ಇದೆ. ಇಲ್ಲಿ ಕೆಲವು ದಿನಗಳ ಮಟ್ಟಿಗಾದರೂ ಸುಧಾರಿಸಿಕೊ. ಯಾಕೊ ಮದಲಿಗೂ ಈಗ್ಲೂ ಬಲು ತೆಗೆದುಹೋಗಿದ್ದೀಯೆ" ಎಂದಿದ್ದಳು. ಭಾವ ಚಂದ್ರಶೇಖರಯ್ಯನವರ್ದು ಅದೇ ಒತ್ತಾಯ. ಮೇಲಾಗಿ ಗಿರಿಜೆಗೆ ಒಗ್ಗಿಹೋಗಿದ್ದ ಸರಸಿ ತನ್ನ ಸಂಗಾತಿಯನ್ನು ಬಿಟ್ಟು ಹೊರಡುವುದು ಅಷ್ಟು ಸುಲಭವೆ?

ಭಾವನವರ ಗಾಡಿಯಲ್ಲಿ ತಮ್ಮ ಹಳ್ಳಿಗೆ ವಾಪಸು ಬರುವಾಗ ಅಕ್ಕ ಮತ್ತು ಭಾವನ ಹಾಲಿನಂತಹ ಸಂಸಾರವನ್ನು ನೆನೆದು ಸಮತೋಷಪಟ್ಟಳು. ಪುಣ್ಯಶಾಲಿಗಳು. ಭಗವಂತ ಅವರನ್ನು ಹಾಗೆಯೆ ಸುಖವಾಗಿ ಇಟ್ಟಿರಲಿ ಎಂದು ಮನಸಾರೆ ಹಾರೈಸಿದಳು.

ದರುಮನಳ್ಳಿಗೆ ಬಂದ ಬಳಿಕ ಹಳೆಯ ಬದುಕಿನ ನಿರ್ವಹಣೆಗೆ ತನ್ನ ಮನಸ್ಸನ್ನು ತೊಡಗಿಸಿದಳು. ಬೇರೇನೂ ವಿಶೇಷವಿಲ್ಲದೆ ಯಾಂತ್ರಿಕವಾಗಿ ಇನ್ನೊಂದು ತಿಂಗಳು ಉರುಳಿತು.

ಎರಡು ತಿಂಗಳು ಕಳೆಯುತ್ತಿದ್ದಂತೆ ರುಕ್ಮಿಣಿಗೆ ಭಯ ಕಾಣಿಸಿಕೊಂಡಿತು. ತಿಂಗಳಿಗೆ ಸರಿಯಾಗಿ ಅವಳು 'ಹೊರಗೆ' ಕೂರಬೇಕು. ಈ ಎರಡು ತಿಂಗಳು ಉರುಳಿದರೂ ಮುಟ್ಟಾಗುವ ಯಾವ ಚಿಹ್ನೆಯೂ ಕಾಣುತ್ತಿಲ್ಲ. ಭೀಮನಹಳ್ಳಿಯಲ್ಲೆ ಅವಳಿಗೆ ಶಂಕೆ ಸೂಕ್ಷ್ಮವಾಗಿ ತಲೆದೋರಿತ್ತು. ಅಲ್ಲಿಂದ ಬಂದೊಡನೆಯೆ ಪರಂಗಿಹಣ್ಣು, ಬೆಲ್ಲ ಇತ್ಯಾದಿ ಉಷ್ಣ ಪದಾರ್ಥಗಳನ್ನು ಯಥೇಚ್ಛವಾಗಿ ಉಪಯೋಗಿಸಿದ್ದಳು. ಗರ್ಭ ನಿಂತರೆ ಆ ಪದಾರ್ಥಗಳ ಬಳಕೆಯಿಂದ ಅದು ಒಡೆದು ಹೋಗುವುದೆಂದು ಜನ ಮಾತನಾಡುವುದನ್ನು ಅವಳು ಕೇಳಿದ್ದಳು.

ಆದರೆ ಅವಳ ದುರದೃಷ್ಟದಿಂದ ರಕ್ತಸ್ರಾವದ ಯಾವ ಸೂಚನೆಯೂ ಕಂಡುಬರಲಿಲ್ಲ. ಈಗಲೀಗ ರುಕ್ಮಿಣಿಗೆ ತುಂಬ ದಿಗಿಲಾಯಿತು... ಈಗೇನು ಮಾಡುವುದು?... ಅನಪೇಕ್ಷಿತ ಗರ್ಭವನ್ನು ಹೇಗೆ ಕಳೆದುಕೊಳ್ಳುವುದು?...ಯಾರ ಸಂಗಡ ಹೇಳಿಕೊಳ್ಳಲಿ?... ಈ ಸಂದಗ್ಧದಿಂದ ನನ್ನನ್ನು ಯಾರು ಪಾರುಮಾಡಬಲ್ಲರು?... ಮಾವನವರಿಗೇ ಹೇಳಿಕೊಳ್ಳಲೆ?... ಛೆ, ಛೆ,. ಆಚಾರನಿಷ್ಠರಾದ ಅವರು ಗರ್ಭಪಾತಕ್ಕೆ ಒಪ್ಪಿಯಾರೆ?... ಅದು ಸಾಧ್ಯವಾಗದ ಮಾತು!... ಲಕ್ಷ್ಮಮ್ಮನೋರು?– ಆಯಿತು. ಅವರ ಹತ್ತಿರ ಯಾವ ಗುಟ್ಟು ಉಳಿಯುತ್ತೆ?... ಪುರೋಹಿತ ವೆಂಕಣ್ಣ ಜೋಯಿಸರ ಹೆಣ್ಣುಮಕ್ಕಳಿಗೆ ತುಂಬಾ ಸಂಭಾವಿತ ಗುಣ. ಅದರಲ್ಲೂ ಅವರ ಹಿರಿಯ ಮಗಳು ನಾಗಲಕ್ಷ್ಮಿ ವಯಸ್ಸಿನಲ್ಲಿ, ಅವರ ಇನ್ನಿಬ್ಬರು ಹೆಣ್ಣುಮಕ್ಕಳು, ವಸಂತ ಮತ್ತು ಶಾಂತಿಯನ್ನರಿಗಿನ್ನ ದೊಡ್ಡವಳು. ನಂಬಿಕೆಗೆ ಅರ್ಹಳು. ಆದರೆ ಅವಳಿಗೆ ಹೇಳಿಕೊಂಡರೆ, ಪಾಪ ಆ ಮುಗ್ದೆ ಯಾರಿಂದ ಈ ಕಾರ್ಯ ಮಾಡಿಸಲು ಶಕ್ತಳು?– ಇನ್ನೂ ವಿವಾಹವಾಗದಿರುವ ಹೆಣ್ಣು. ಅವಳು ಬೇರೆಯವರೊಡನೆ ಇಂಥ ವಿಷಯವನ್ನು ಪ್ರಸ್ತಾಪ ಮಾಡಲು ಹೆದರುವುದಿಲ್ಲವೆ?... ಬುಂಡಮ್ಮ?– ಅವಳು ಒಳ್ಳೆಯ ಸ್ವಭಾವದವಳಾದರೂ ಹಳೆಯಕಾಲದವಳು. ಸಂಪ್ರದಾಯಬದ್ಧಳು. ಭ್ರೂಣಹತ್ಯೆಗೆ ಅವಳೆಂದು ಒಪ್ಪಲಾರಳು. ಹಿಂದೊಮ್ಮೆ, ಶ್ಯಾನುಭೋಗರ ಮನೆಗೆ ಕಂದಾಯದ ಹಣ ಕಟ್ಟಲು ಬುಂಡಮ್ಮ ಬಂದಿದ್ದಳು. ಆಗ ತಾನೂ ಅಲ್ಲಿಗೆ ಆಗಾಗ ಹೋಗುತ್ತಿದ್ದ ಮಾಮೂಲಿನಿಂತೆ ಹೋಗಿದ್ದಲು. ಆ ಮಧ್ಯಾಹ್ನ ಶ್ಯಾನುಭೋಗರ ಹೆಂಡತಿಯ ಬಲಾತ್ಕಾರಕ್ಕೆ ಕಟ್ಟಿಬಿದ್ದು ಬುಂಡಮ್ಮ ಒಂದು ಹಾಡನ್ನು ಹಾಡಿದಳು. ಈ ವಯಸ್ಸಿನಲ್ಲೂ ಮುದುಕಿಯದು ಎಂಥ ಕಂಟ?– ಅದು ಹೇಗೂ ಇರಲಿ. ಆಗ ಅವಳು ಹಾಡಿದ ಪದದ ಎಡು ಸಾಲನ್ನು ಈಗ ನೆನಸಿಕೊಳ್ಳಲೂ ಭಯವಾಗುತ್ತದೆ.

ಮಾನವ ಕುಲದಾಗೆ ಹತ್ಯೆ ಮಾಡಾರುಂಟ

ಹೆತ್ತ ಮಕ್ಕಳ ಕೊಲ್ವಾರುಂಟ?...

ಇಂಥ ಅಭಿಪ್ರಾಯ ಹೊಂದಿರುವ ಮುದುಕಿ ತನ್ನ ಗರ್ಭಪಾತಕ್ಕೆ ಖಂಡಿತ ನೆರವೀಯಲಾರಳು!... ಹೀಗೆಯ ಊರಿನ ಕೇರಿಗಳಲ್ಲಿ ತನಗೆ ಹಿತವರೆನಿಸದ ಒಬ್ಬೊಬ್ಬರನ್ನೂ ಮನಸ್ಸಿನಲ್ಲೆ ವಿಚಾರ ಮಾಡಿ ನೋಡಿದಳು. ಈ ವಿಷಯದಲ್ಲಿ ಯಾರೂ ಅವಳಿಗೆ ಹಿತವರಾಗಿ ತೋರಲಿಲ್ಲ. ಊರಿನ ಯಾರ ಸಂಗಡ ಬಾಯಿ ಬಿಚ್ಚಿದರೂ ತನಗೆ ಅಪಾಯವೆ ಕಾದಿತ್ತು. ಭೀಮನಹಳ್ಳಿಯ ಅಕ್ಕ ಪಾರ್ವತಿಗೆ ತಿಳಿಸಿದರೆ ಹೇಗೆ ಎಂಬ ಆಲೋಚನೆಯೂ ಸುಳಿಯಿತು. ಸುಳಿದಂತೆಯ ಆ ಆಲೋಚನೆಯು ಕಮರಿಹೋಯಿತು. ಅಕ್ಕ ಭಾವ ಇಬ್ಬರೂ ಬಾಕಿ ಇಲ್ಲ ವಿಷಯಗಳಲ್ಲಿ ಉದಾರಿಗಳಾದರೂ ಇಂಥ ವಿಚಾರದಲ್ಲಿ ಅವರಿಬ್ಬರೂ ಸಂಪ್ರದಾಯಶರಣರೆ ಎಂಬುದನ್ನು ಭೀಮನಹಳ್ಳಿಯಲ್ಲಿ ತನ್ನ ಒಂದು ತಿಂಗಳ ವಾಸ್ತವ್ಯ ಮನವರಿಗೆ ಮಾಡಿಕೊಟ್ಟಿತ್ತು. ಭೀಮನಹಳ್ಳಿಯಲ್ಲಿ ಯಾರಾದರೂ ಹೆಣ್ಣು ಮಕ್ಕಳು ಜಾರಿದರೆ, ಅವಳು ಯಾವ ಕೇರಿಯವಳಾದರೂ ಸರಿ, ಅವಳನ್ನು ಕುರಿತು ಲಾಘವವಾಗಿ, ತಿರಸ್ಕಾರವಾಗಿ, ಕೆಲವೊಮ್ಮೆ ಕಠೋರವಾಗಿ ಟೀಕಿಸುತ್ತಿದ್ದರು! ತನ್ನ ಭಾವನ ದೃಷ್ಟಿಯಲ್ಲಿ ಹೆಣ್ಣು ಎಂದರೆ ಪುರಾಣದ ಸೀತೆ, ಸಾವಿತ್ರಿಯರಂತಿರಬೇಕು. ಭಾವನ ಸಹಚರಿಯಾಗಿ ಅನೇಕ ಸಂವತ್ಸರ ಸವೆಸಿದ್ದ, ಅಕ್ಕ ಪಾರ್ವತಿಯೂ ಅದೇ ಭಾವನೆಯನ್ನು ಬೆಳೆಸಿಕೊಂಡಿದ್ದಳು!... ತನಗಿನ್ನೂ ನೆನಪಿದೆ. ಒಂದು ದಿನ ಬುಟ್ಟಿ ಮಾರಲು ಮುದುಕಿಯೊಬ್ಬಳು ಅಕ್ಕನ ಮನೆಗೆ ಬಂದಿದ್ದಳು. ಬುಟ್ಟಿಯನ್ನು ಕೊಳ್ಳಲು ಚೌಕಾಶಿ ನಡೆಯುತ್ತಿರುವಾಗ, ಆ ಊರಿನ ಮದುವೆಯಾದ ಒಂದು ಹೆಣ್ಣು ಗಂಡನನ್ನು ಬಿಟ್ಟು ಅದೇ ಊರಿನ ಇನ್ನೊಬ್ಬನೊಡನೆ ಬಾಳ್ವೆ ಮಾಡುತ್ತಿರುವ ಸುದ್ದಿಯೆನ್ನೆತ್ತಿದ್ದಳು. ಅಕ್ಕ ಪಾತು ಒಡನೆಯ "ಇಲ್ಲಿ ನೋಡು. ಇನ್ನು ಮುಂದೆ ಇಂಥ ಹಾದರಗಿತ್ತಿಯರ ಸುದ್ದಿಯನ್ನು ನಮ್ಮ ಮನೇಲಿ ಹೇಳಬೇಡ. ನಮ್ಮ ಮನೇಲಿ ಬೆಳೀತಿರುವ ಹೆಣ್ಣುಮಕ್ಕಳಿವೆ. ಇಂಥ ಮಾತು ಅವರ ಕಿವಿಗೆ ಬೀಳಬಾರದು!..." ಸಿಡುಕಿ, ಆ ಮುದುಕಿ ಅವಾಕ್ಕಾಗುವಂತೆ ಮಾಡಿದಳು... ಇಂಥ ಸಂಪ್ರದಾಯ ಶರಣರ ಮುಂದೆ ತನ್ನ ಹಗರಣವನ್ನು ಪ್ರಕಟಿಸಿ, ಅವರ ಸಹಾಯ ಕೋರಿದರೆ, ಅವರಿಂದ ಎಂಥ ಪ್ರತಿಕ್ರಿಯೆ ಬರಬಹುದೆಂಬುದು ಸ್ವಯಂ ವೇದ್ಯವೇ ಆಗಿತ್ತು... ರುಕ್ಮಿಣಿ ಹತಾಶಳಾದಳು... ಈ ತುಯ್ದಾಟದಲ್ಲಿ ಇನ್ನೂ ಎಂಟೊಂಬತ್ತು ದಿನಗಳು ಕಳೆದುಹೋಗಿದ್ದವು...

ರುಕ್ಮಿಣಿಗೆ ಈ ತಾಳತಪ್ಪಿದ ಮನಃಸ್ಥಿತಿಯಲ್ಲಿರುವಾಗ, ತನ್ನನ್ನು ಬಹಳವಾಗಿ

ಪ್ರೀತಿಸುವ ವೆಂಕಣ್ಣ ಜೋಯಿಸರ ಹಿರಿಯ ಮಗಳು ನಾಗಲಕ್ಷ್ಮಿ ಒಮ್ಮೆ ಬಂದು, "ಇದೇನತ್ತೆ, ನೀವು ಬಂದು ಒಂದು ತಿಂಗಳ ಮೇಲಾಗಲಿಲ್ವ? ನೀರು ಹಾಕಲು ನನ್ನನ್ನು ಕರೆಯಲೇ ಇಲ್ಲ?" ಎಂದು ಕೇಳಿಯೇ ಬಿಟ್ಟಳು. ಈ ಮುಗ್ಧ ಪ್ರಶ್ನೆಯಿಂದ ಒಂದು ಕ್ಷಣ ಅಪ್ರತಿಭಳಾದರು ಅದನ್ನು ತೋರಗೊಡದೆ, "ನೋಡಮ್ಮ ನಾಗಲಕ್ಷ್ಮಿ, ನಾನು ತಿಂಗಳಿಗೆ ಸರಿಯಾಗಿ ಹೊರಗೆ ಕೋರ್‍ತಿದ್ದೆನಲ್ಲ– ಈಗೊಂದು ಎರಡು ತಿಂಗಳಿಂದ ಅದರ ಕ್ರಮ ತಪ್ಪಿದೆ..." ಎಂದು ಮಾತನ್ನು ತೇಲಿಸಿದವಳು, ನಾಗಲಕ್ಷ್ಮಿಯನ್ನು ತಬ್ಬಿ, "ಆದರೆ ಇದರ ಬಗ್ಗೆ ನೀನು ಯಾರ ಸಂಗಡವೂ ಮಾತನಾಡಬಾರದು, ಗೊತ್ತಾಯ್ತ?" ಎಂದು ರಮಿಸಿದಳು. "ಖಂಡಿತ ಹೇಳಲ್ಲ, ಅತ್ತೆ" – ಆ ಮುಗ್ಧ ಬಾಲಕಿ ಭರವಸೆಯಿತ್ತದ್ದು ರುಕ್ಮಿಣಿಗೆ ಆ ಗಳಿಗೆಗೆ ಮಾತ್ರ ಸಮಾಧಾನದ ನಿಟ್ಟುಸಿರು ಬಿಡುವಂತಾಯಿತು. ಆದರೆ ಮರುಗಳಿಗೆಯಲ್ಲಿಯೆ ಅವಳ ಅಂತರಂಗದ ಕ್ಷೋಭೆ ಮರುಕಳಿಸಿತ್ತು...

ಕೊನೆಗೆ ಲಕ್ಕನ ಸಹಾಯವನ್ನೇ ಯಾಕೆ ತೆಗೆದುಕೊಳ್ಳಬಾರದು?– ಎಂಬ ಆಲೋಚನೆ ಬಂದಿತು. ನಾಚಿಕೆಯಿಲ್ಲದೆ ಅವನ ಸಂಗಡ ಹೇಗೆ ಪ್ರಸ್ತಾಪಿಸುವುದು ಎಂದು ಮನಸ್ಸು ಹಿಂದೆಗೆಯಿತು... ಮತ್ತೆ ಈ ಡೋಲಾಯಮಾನಸ್ಥಿತಿಯಲ್ಲೆ ಇನ್ನೆರಡು ದಿನಗಳು ಉರುಳಿಹೋದವು... ಕಾಲ ರಭಸವಾಗಿ ಕಳೆದು ಹೋಗುತ್ತಿದೆ ಎಂಬ ಭಾವನೆ ಬಲವಾಗತೊಡಗಿದಂತೆ, ರುಕ್ಮಿಣಿಯಲ್ಲಿ ನಡುಕ ಹುಟ್ಟಿತು. ಕಾಲ ಮಿಂಚಿದ ಬಳಿಕ ತನ್ನ ಬದುಕು ಸಂಪೂರ್ಣವಾಗಿ ಮೇಲೇಳಲು ಸಾಧ್ಯವೇ ಆಗದ ಅತ್ಯಂತ ಆಳವಾದ ಕಂದರಕ್ಕೆ ಮಗುಚಿಕೊಳ್ಳುತ್ತದೆ, ಎಂಬ ಕಟುಸತ್ಯ ಅವಳು ಒಡನೆಯೆ ಕ್ರಿಯಾಶೀಲಳಾಗುವಂತೆ ಪ್ರೇರೇಪಿಸಿತು. ಕೊನೆಗೆ ಎಲ್ಲ ಸಾಧಕಬಾಧಕಗಳನ್ನೂ ಪರಿಶೀಲಿಸಿ, ಲಕ್ಕನ ನೆರವು ಬೇಡುವುದೆ ಉಚಿತವೆಂದು ನಿರ್ಧರಿಸಿದಳು.

ಆ ನಿರ್ಧಾರದ ಪ್ರಕಾರ ಅದೇ ಸೋಮವಾರ ಮಧ್ಯಾಹ್ನ ರುಕ್ಮಿಣಿಯೂ ಲಕ್ಕನನ್ನು ತಮ್ಮ ಮನೆಗೆ ಕರೆಸಿದಳು. ಲಕ್ಕ ಕೊಟ್ಟಿಗೆಗೆ ಬಂದವನೆ, ಗಬ್ಬದ ಕಡಸಿನ ಮೈದಡವುತ್ತ ನಿಂತ.

ರುಕ್ಮಿಣಿಯು, ಗಬ್ಬದ ಕಡಸನ್ನೆ ನಿಟ್ಟಿಸುತ್ತ, ಕೆಲ ಸಮಯ ಏನನ್ನೂ ಹೇಳಲಾರದೆ, ಹಿತ್ತಲು ಬಾಗಿಲಿನ ಸೂರುಕಟ್ಟು ಹಿಡಿದು, ಮೌನವಾಗೇ ನಿಂತಿದ್ದಳು. ಆ ಬಳಿಕ ನಿಧಾನವಾಗಿ, ತಗ್ಗಿದ ದನಿಯಲ್ಲಿ,

"ಲಕ್ಕ..." ಎಂದು ರಾಗವೆಳೆದಳು.

"ಯೇನಮ್ಮ ಮ್ಮಾರೆ?" ಕಡಸನ್ನು ತುರಿಸುತ್ತ ಲಕ್ಕ ಕೇಳಿದ.

"ಲಕ್ಕ...." ಎಂದು ಪುನಃ ತೊದಲಿದಳು.

"ಯೋಳಿ– ಅಮ್ಮಾರೆ"

"ಲಕ್ಕ..." –ಎಂದು ರುಕ್ಮಿಣಿ ಪುನಃ ಉಚ್ಚರಿಸಿದಂತೆ, ಗಂಟಲಲ್ಲಿ ಏನೊ ಸಿಕ್ಕಿಕೊಂಡಂತಾಯಿತು.

"ಯೋಳಿ."

"ಲಕ್ಕ... ನಾನು... ನನಗೆ–ಎರಡುವರೆ ತಿಂಗಳ ಮೇಲಾಯ್ತು..." ಎಂದ ರುಕ್ಮಿಣಿಯ ಕಣ್ಣುಗಳಲ್ಲಿ ನೀರು ತುಂಬಿತು.

ಲಕ್ಕ ಕಕ್ಕಾಬಿಕ್ಕಿಯಾದ

"ಅಂಗಂದ್ರೇನು ಅಮ್ಮಾರೆ..." ದಿಗಿಲಾಗಿ ತಡವರಿಸಿದ

"ನಾನು.... ಹೊರಗಾಗಿ ಎರಡೂವರೆ ತಿಂಗಳ ಮೇಲಾಯ್ತು..."

"ಹಯ್ಯೆ ದ್ವಾವರೆ!..." ಲಕ್ಕ ಕುಸಿದು ಹೋದ. ಮಾತು ಈಚೆಗೆ ಹೊರಡಲೊಲ್ಲದು.

"ಈಗೇನು ಮಾಡೋದು?..."

"ಮೂಢ ಮುಕ್ಕ, ನಂಗೇನು ತಿಳಿದಾತು?... ಆವತ್ತು, ನಾನೇಟು ಬಗೇಲಿ ಬ್ಯಾಡಿ ಬ್ಯಾಡಿ ಅಂದರೂವೆ... ನೀವು ಕ್ಯಾಳನಿಲ್ಲ..."

"ಹೌದು, ಆ ದಿನ ನಾನೇ ಜ್ಞಾನ ತಪ್ಪಿ ನಡೆದದ್ದು, ಇದರಲ್ಲಿ ನಿನ್ನ ತಪ್ಪೇನು ಇಲ್ಲ.... ಈಗ, ಮುಂದೇನು ಮಾಡೋದು?"

"ನಂಗೆ ತಿಳಿಯಕ್ಕಿಲ್ಲ. ನೀವು ಎಂಗೆ ಯೋಳಿದ್ರೆ ಅಂಗೆ ಮಾಡ್ತೀನಿ!"

"ಇದನ್ನ ಕಳೆಯಲಿಕ್ಕೆ ಏನಾದರೂ ಔಷಧಿ ತಂದು ಕೊಡಬೇಕಲ್ಲ?"

ಲಕ್ಕ ಕೆಲ ಸಮಯ ಮಾತಾಡದೆ ಮೌನವಾಗಿ ಚಿಂತಿಸುತ್ತ ನಿಂತ. ತರುವಾಯ,

"ತಾಳಿ, ಒಂದು ಜಿನ ಆ ಕುಂಬಾರರ ಕಾಳಮ್ಮ ಅವರಟ್ಟೀಲಿ ಅವಳ ಎದುರಟ್ಟಿ ಪುಟ್ಟನಂಜಮ್ಮನ ಜ್ವತ್ಗೆ ಅಂತಿದ್ದು ಗ್ಯಾಪಕ ಆಯ್ತಾ ಅದೆ... 'ಕ್ಯಾಳಿದೇನೆ ಪುಟ್ಟಿ, ನಮ್ಮೂರ ಅನುಕೂಲಸ್ತರ ಮನೆ ಎಣ್ಣೇ ಒಂದು ಕದ್ದು ಬೊಸಿರಾಗಿ, ಹುಣಸೂರ್ನಲಲಿ ಸಂತೆಮಾಳದತ್ರ ಕಾಸಿಂಬೀ ಇಲ್ವ, ಅವಳಿಂದ ಔಸ್ಧ ತಕ್ಕಂಡು ಮೈ ಇಳಿಸಿದಲಂತೆ!' ಅನ್ನೋಕೂವೆ, ನಾ ಯಾತಕೊ ಅವರಟ್ಟಿಗೆ ವೋಗಕ್ಕೂವೆ, ಒಂದೇ ಆಗಿತ್ತು. ಆ ಕ್ಷಣ ಅವಳು ತನ್ನ ಮಾತ ನಿಲ್ಲುಸಿದ್ಲು... ಈಗ ಅದೊಂದೇ ದಾರಿ ಇರಾದು. ಹುಣಸೂರಿಗೋಗಿ ಆ ಕಾಸಿಂಬೀನೆ ಕ್ಯಾಳ್ತೀನಿ ಎಂದ.

ಲಕ್ಕನ ಸಂಗಡ ರುಕ್ಮಿಣಿ ಮಾತಾನಾಡುತ್ತಿದ್ದುದು ಕೊಟ್ಟಿಗೆಯಲ್ಲಿ ತಾನೆ.

ಹೀಗೆ ಮಾತನಾಡುವಾಗ ಯಾವುದೊ ಜ್ಞಾನದಲ್ಲಿ ಅವಳು ಮನೆಯ ಮುಂದಿನ ಬಾಗಿಲಿಗೆ ತಾಪಾಳುಹಾಕುವುದನ್ನು ಮರೆತಿದ್ದಳು. ಒಗ್ಗರಣೆಗೆ ಸಾಸಿವೆ ಕಾಳು ಬೇಡಲು ಬಂದ ಲಕ್ಷಮ್ಮ ನಡುಮನೆಯಲ್ಲಿ ಅವಿತು ನಿಂತು ಅವರಿಬ್ಬರ ಸಂಭಾಷಣೆಯನ್ನೂ ಕೇಳಿಸಕೊಂಡವರು, ರುಕ್ಮಿಣಿ ಮತ್ತೆ ಮತ್ತೆ ಲಕ್ಕನನ್ನು ಒತ್ತಾಯಿಸಿ, ಹಿತ್ತಲಿನ ಬಾಗಿಲಿನಿಂದ ಒಳಬರುತ್ತಿರುವಂತೆ, ಮೆಲ್ಲನೆ ಮುಂಬಾಗಿಲಿನಿಂದ ಜಾರಿಕೊಂಡರು. ಅವರ ಮಾತಿನ ಒಗ್ಗರಣೆಗೆ ಈಗ ಹೇರಳ ಸಾಮಗ್ರಿ ಸಿಕ್ಕಿತ್ತು. ಅದಕ್ಕೆ ಬಣ್ಣ ಕಟ್ಟಿ, ಒಳಗಿಂದೊಳಗೆಯೆ, ಬ್ರಾಹ್ಮಣಕೇರಿಯಲ್ಲಿ ಬಿತ್ತುತ್ತ ನಡೆದಳು. ಸಮಾಚಾರ ಊರಿನ ಇತರೇ ಕೇರಿಗಳಿಗೂ ಹರಡಲು ಬಹಳ ಸಮಯವೇನೂ ಹಿಡಿಯಲಿಲ್ಲ.

ಅದೇ ರಾತ್ರಿ ಮಲಗುವ ಸಮಯದಲ್ಲಿ ಪುರೋಹಿತ ವೆಂಕಣ್ಣ ಜೋಯಿಸರು ತಮ್ಮಲ್ಲಿ ವೇದಪಾಠಕ್ಕೆ ಬರುತ್ತಿದ್ದ ಬಾಲ;ಕನೊಬ್ಬನ ಸಂಗಡ– ಕೃಷ್ಣಶಾಸ್ತ್ರಿಗಳನ್ನು ತುರ್ತಾಗಿ ನೋಡಬೇಕೆಂದೂ ಜೋಯಿಸರ ಮನೆಗೆ ಈ ಕೂಡಲೆ ಬಂದು ತಮ್ಮನ್ನು ಕಾಣಬೇಕೆಂದೂ ಹೇಳಿಕಳುಹಿಸಿದರು. ಜೊಯಿಸರ ಈ ಅನಿರೀಕ್ಷಿತ ಕರೆಗೆ ಕಾರಣವೇನಿರಬಹುದೆಂದು ಅರ್ಥವಾಗದೆ, ಚಿಂತಿಸುತ್ತಲೆ ಶಾಸ್ತ್ರಿಗಳು ಜೋಯಿಸರ ಮನೆಯೊಳಗೆ ಕಾಲಿಟ್ಟರು. ಜೋಯಿಸರು ಅವರನ್ನು ತಮ್ಮ ಅಧ್ಯಯನದ ಕೋಣೆಯೊಳಗೆ ಕರೆದೊಯ್ದು, ತಾಂಬೂಲದ ತಟ್ಟೆಯನ್ನು ಮುಂದಿಟ್ಟು,

"ಶಾಸ್ತ್ರಿಗಳೆ, ನಾವು ನಿಮಗೆ ಮೊದಲೆ ಹೇಳಿದಿವಿ–ಗಂಡನನ್ನು ಕಳೆದುಕೊಂಡ ಒಡನೆಯೆ ರುಕ್ಮಿಣಿಗೆ ಕೇಶಮುಂಡನ ಮಾಡಿಸಿ, ಕೇಶಮುಂಡನ ಮಾಡಿಸಿ, ಎಂದು. ಆದರೆ ನಿವು ನಮ್ಮ ಹಿತವಚನಕ್ಕೆ ಕುರುಡುಕಾಸಿನ ಕಿಮ್ಮತ್ತನ್ನೂ ನೀಡಲಿಲ್ಲ. ಇದರಿಂದ ನಮ್ಮ ದರುಮನಳ್ಳಿಯ ಇಡೀ ಬ್ರಾಹ್ಮಣ ಸಮಾಜವನ್ನೇ ಇದಿರುಹಾಕಿಕೊಂಡಿರಿ. ನಾವೇನೂ ಸಾಂಪ್ರದಾಯಿಕವಾಗಿ ನಿಮಗೆ ಬಹಿಷ್ಕಾರ ಹಾಕಿದ್ರೂನೂವೆ, ಒಳಗಡೆ ನಮಗೆಲ್ಲರಿಗೂ ನಿಮ್ಮ ಸುಸಂಸ್ಕೃತ ನಡೆನುಡಿಯ ಬಗ್ಗೆ, ನಿಮ್ಮ ದೈವಭಕ್ತಿಯ ಬಗ್ಗೆ, ತೋಟದ ಕಾಯಕದಲ್ಲಿ ನೀವು ನಿಮ್ಮನ್ನೆ ಸಮರ್ಪಣಭಾವದಿಂದ ತೊಡಗಿಸಿಕೊಳ್ಳುವ ಕಾರ್ಯಕ್ಷಮತೆಯ ಬಗ್ಗೆ ಅಪಾರ ಗೌರವವಿದ್ದದ್ದರಿಂದ ನಿಮ್ಮ ಶಠತ್ವವನ್ನೆಲ್ಲ ಮರೆತು ಪುನಹ ಎಂದಿನಂತೆ ನಮ್ಮನಿಮ್ಮಲ್ಲಿ ಏನೂ ಆಗಲೆ ಇಲ್ಲವೇನೊ ಎನ್ನುವ ಹಾಗೆ ನಡೆದುಕೊಳ್ಳತ್ತಾ ಬಂದಿದೀವಿ. ಆದರೆ ಈಗ..."

ವೆಂಕಣ್ಣಜೋಯಿಸರ ಮಾತುಗಳನ್ನು ನಿರ್ಭಾವದಿಂದ ಆಲಿಸುತ್ತಿದ್ದ

ಕೃಷ್ಣಶಾಸ್ತ್ರಿಗಳು ಕೊಂಚ ವಿಚಲಿತರಾದಂತೆ,

"ಈಗ–?... ಈಗ ಏನಾಗಿದೆ?" ಕೇಳಿದರು.

ಪುರೋಹಿತರ ನುಡಿಗಳ ಸುಳಿವು ಸಿಕ್ಕದೆ, ಒಳಗೆ ಸ್ವಲ್ಪ ಅಧೀರರೂ ಆದರು.

"ತಾಂಬೂಲ ಹಾಕಿಕೊಳ್ಳಿ, ಹೇಳ್ತೇನೆ" ವೆಂಕಣ್ಣಜೋಯಿಸರು ಎಲೆ ಅಡಿಕೆ ತಟ್ಟೆಯನ್ನು ಮುಂದೆ ಸರಿಸಿ ಹುಸಿನಗುತ್ತ ನುಡಿದರು.

ಜೋಯಿಸರು ಹುಸಿ ನಕ್ಕಾಗ, ಅದರಲ್ಲಿ ಏನೊ ಕೊಂಕು ಅಡಗಿದೆ ಎಂದು ಕೃಷ್ಣಶಾಸ್ತ್ರಿಗಳು ಅನುಭವದಿಂದ ಎಂದೊ ಅರಿತಿದ್ದರು.

"ಬೇಡಿ–ನಾನು ಎಲೆ ಅಡಿಕೆ ಹಾಕುವುದನ್ನು ತ್ಯಜಿಸಿದ್ದೇನೆ–" ನಿರಾಕರಿಸುತ್ತ, ಗಂಭೀರವಾಗಿ ನುಡಿದರು.

ಜೋಯಿಸರಿಗೆ ಸೋಜಿಗವೆನಿಸಿತು.

"ಇದೇನು ವಿಚಿತ್ರ. ಎಲೆ ಅಡಿಕೆಗೂ ನಿಮಗೂ ಪ್ರಾಣ. ನಿಮ್ಮ ಬಾಯಿ ಸದಾಕಾಲವೂ ತಾಂಬೂಲ ರಾಗ ರಂಜಿತವಾಗಿಯೆ ಇರಬೇಕು, ಅಂಥಾದ್ದರಲ್ಲಿ ಎಂದಿನಿಂದ ಈ ತಾಂಬೂಲ ವೈರಾಗ್ಯ?"

"ಬಿಟ್ಟು ಕೆಲವು ಕಾಲ ಆಯ್ತು... ವಯಸಾಗ್ತಾ ಆಗ್ತ ಈ ಚಟಗಳನ್ನ ಒಂದೊಂದಾಗಿ ಬಿಡುವುದು ಕ್ಷೇಮ, ಅಲ್ಲವೆ?.... ಅದಿರಲಿ ಜೋಯಿಸರೆ. ನೀವು ಅದೇನೊ ಹೇಳಲಿಕ್ಕೆ ಹೊರಟ ಹಾಗಿತ್ತಲ್ಲ. ಏನು ವಿಷಯ?"

"ಅದೇ ಹೇಳ್ತಿದ್ದೆನಲ್ಲ– ನಿಮ್ಮ ರುಕ್ಮಿಣಿಯ ಕೇಶಮುಂಡನ ವಿಚಾರ."

"ಅದು ಆಯ್ತಲ್ಲ. ಪುನಹ ಅದರ ಪ್ರಸ್ತಾಪದಿಂದ ಯಾವ ಸಾರ್ಥಕ್ಯ?"

"ಅದರ ಪ್ರಸ್ತಾಪ ಈಗೆ ಪ್ರಕೃತ ಆಗಿರೋದ್ದರಿಂದಲೇ ಆ ಸುದ್ದಿಯನ್ನು ಮತ್ತೆ ಎತ್ತಬೇಕಾಯಿತು. ನೀವು ಆಗಲೇ ಕೇಶಮುಂಡನ ಮಾಡಿಸಿದ್ದರೆ ಈ ಹಗರಣ ಆಗುತ್ತಲೆ ಇರಲಿಲ್ಲ ಎಂದು ಕಾಣತ್ತೆ..."

ಜೋಯಿಸರ ಬಾಯಿ ಕಟ್ಟಿತು. ಮಾತುಗಳು ಹೊಟ್ಟೆಯೊಳಗೇ ಸತ್ತಿದ್ದವು. ಈ ಜೋಯಿಸರಿಗೆ ತನ್ನ ಮತ್ತು ರುಕ್ಮಿಣಿಯ ಸಂಬಂಧದ ಸುಳಿವು ಏನಾದರೂ ಬಿದ್ದರಬಹುದೆ?... ಅದು ಹೇಗೆ ಪ್ರಕಟವಾಗಲು ಸಾಧ್ಯ?... ರುಕ್ಮಿಣಿಯಂತೂ ಪ್ರಕಟಿಸುವಂತಿಲ್ಲ... ರುಕ್ಮಿಣಿ ಮತ್ತು ತಾವು ಇಬ್ಬರನ್ನು ಉಳಿದು ಇನ್ನೊಂದು ನರಪಿಳ್ಳೆಗೆ ಇದು ತಿಳಿಯುವ ಸಂಭವವೇ ಇಲ್ಲ!...

ಬಾಯಿಗೆ ಒತ್ತರಿಸಿದ ಎಲೆ ಅಡಿಕೆಯ ಜೊತೆಗೆ ಇನ್ನೂ ನಾಲ್ಕು ಎಲೆಗಳಿಗೆ ಸುಣ್ಣ ಹಚ್ಚಿ ದವಡೆಗೆ ಸೇರಿಸುತ್ತ, ವೆಂಕಣ್ಣ ಜೋಯಿಸರು,

"ಅದರೂನೂವೆ ನಿಮ್ಮ ರುಕ್ಮಿಣಿ ಇಂಥ ಪ್ರಪಾತಕ್ಕೆ ಬೀಳ್ತಾಳೆ ಎಂದು ನಾವು ಯಾರೂ ನಿರೀಕ್ಷಿಸಿಯೇ ಇರಲಿಲ್ಲ..."

ಈಗಲೀಗ ಶಾಸ್ತ್ರಿಗಳಿಗೆ ಸಂದೇಹ ಉಳಿಯಲಿಲ್ಲ. ತಮ್ಮ ಮತ್ತು ರುಕ್ಮಿಣಿಯ ಸಂಬಂಧ ಈತನಿಗೆ ಹೇಗೋ ತಿಳಿದುಹೋಗಿದೆ... ಹೇಗೆ ತಿಳಿದಿರಬಹುದು?– ಇವರ ಹಿರಿಯ ಮಗಳು ನಾಗಲಕ್ಷ್ಮಿಯನ್ನು ರುಕ್ಮಿಣಿ ಪ್ರೀತಿಸ್ತಾಳೆ. ಯಾವುದೊ ದುರ್ಬಲ ಗಳಿಗೆಯಲ್ಲಿ ತಮ್ಮ ಸಂಬಂಧದ ಬಗ್ಗೆ ಹೇಳಿರಬಹುದುಎ?... ಛೆ, ಛೆ ಇರಲಾರದು. ರುಕ್ಮಿಣಿ ತನ್ನ ಮಾನವನ್ನು ಎಂದಿಗೂ ಬೀದಿಗೆ ಹಾಕುವವಳಲ್ಲ. ಮತ್ತೆ?– ಜೋಯಿಸರಿಗೆ ತಿಳಿಸಿರುವ ಬಗೆ?... ಕೃಷ್ಣಶಾಸ್ತ್ರಿಗಳ ಚಿತ್ತ ಗೋಜಲುಗೋಜಲಾಯಿತು. ಜೋಯಿಸರು ಇನ್ನೇನು ತಮ್ಮ ಮೇಲೆ ಉಡಾಯಿಸಲಿದ್ದ ಗುಂಡಿನ ನಿರೀಕ್ಷಣೆಯಲ್ಲಿ ಜರ್ಝರಿತರಾಗಿ ತಲೆತಗ್ಗಿಸಿ ಕುಳಿತರು.

ಇನ್ನೂ ಎರಡು ಮೂರು ಎಲೆಗಳಿಗೆ ಸುಣ್ಣವನ್ನು ಹಚ್ಚುತ್ತ, ವೆಂಕಣ್ಣ ಜೋಯಿಸರು–

"ಇಡೀ ನಮ್ಮ ಬ್ರಾಹ್ಮಣ ಕುಲ್ಕೇ ಅವಮಾನ. ಎಲ್ಲ ಬಿಟ್ಟು ಆ ಹೊಲೆಯ ಲಕ್ಕನ ಸಂಬಂಧ ಬೆಳೆಸಿ ಗರ್ಭಿಣಿಯಾಗಿದ್ದಾಲಲ್ಲ. ಇದಕ್ಕಿನ್ನ ಹೇಯವಾದ ಕೃತ್ಯ ಇನ್ನೊಂದಿದೆಯೆ?... ನೀವು–ನಾವೆಲ್ಲರೂ ಹೇಳಿದಾಗಲೇ ಅವಳ ತಲೆ ಬೋಳಿಸಿ ವಿರೂಪಗೊಳಿಸಿದ್ದರೆ, ನಮ್ಮ ಬ್ರಾಹ್ಮಣ ಸಮಾಜ ಈಗ ಇಂಥ ವಿಕೃತ ಪರಿಸ್ಥಿತಿಯನ್ನು ಎದರುಸಬೇಕಾಗಿತ್ತೆ?... ಯಾವಾಗಲೂ ನಿಮ್ಮದು ಹಟ. ನಿಮ್ಮ ಹಟಮಾರಿತನದಿಂದಲೆ ಈ ಘೋರ ಅನರ್ಥ ಸಂಭವಿಸಿದೆ."

ವೆಂಕಣ್ಣ ಜೋಯಿಸರ ಆಪಾದನೆಯನ್ನು ಕೃಷ್ಣಶಾಸ್ತ್ರಿಗಳು ವಿಸ್ಮಿತರಾಗಿ ಆಲಿಸಿದರು... ರುಕ್ಮಿಣಿಗೆ ವಿಶ್ವೇಶ್ವರ ಮೃತನಾದ ತತ್ಕಾಲದಲ್ಲೆ ಕೇಶಮುಂಡನ ಮಾಡಿಸಬೇಕಾಗಿತ್ತು ಎಂಬ ವೆಂಕಣ್ಣ ಜೋಯಿಸರ ಅಭಿಪ್ರಾಯವನ್ನು ಈಗ ಅವರು ಸಂಪೂರ್ಣವಾಗಿ ಒಪ್ಪುವಂತಾಗಿದೆ– ನಿಜ, ಅವಳು ವಿರೂಪಗೊಂಡಿದ್ದರೆ ಈ ರಂಪವೆಲ್ಲ ನಡೆಯುತ್ತಿರಲಿಲ್ಲವೇನೊ!... ಸರಿಯೆ. ಇದೇನು ವೆಂಕಣ್ಣ ಜೋಯಿಸರು ಹೇಳುತ್ತಿರುವುದು?– ಲಕ್ಕನಿಂದ ರುಕ್ಮಿಣಿ ಗರ್ಭಿಣಿಯಾಗಿದ್ದೇಳೆ ಎನ್ನುವ ಮಾತು!... ಇದನ್ನು ಒಪ್ಪಬಹುದೆ?... ಛಿ, ಇದು ಶುದ್ಧಾಂಗ ಸುಳ್ಳು – ತನ್ನಿಂದಲೆ ಆಕೆ ಬಸಿರಾಗಿರುವುದು. ಅದರಲ್ಲಿ ಯಾವ ಸಂಶವೂ ಇಲ್ಲ. ತನ್ನ ಹೆಸರನ್ನುಳಿಸಲು ರುಕ್ಮಿಣಿ, ಲಕ್ಕ ಇಬ್ಬರೂ ಪರಸ್ಪರ ಮಾತಾಡಿಕೊಂಡು ಈ ಕಥೆಯನ್ನು ಕಟ್ಟಿರಬೇಕು!– ಲಕ್ಕ ರುಕ್ಮಿಣಿಯನ್ನು ತಾಯಿಯ ಹಾಗೆ ಭಯ

ಭಕ್ತಿಗಳಿಂದ ಗೌರವಿಸುತ್ತಾನೆ. ರುಕ್ಮಿಣಿಯೂ ಸಹ ಲಕ್ಕನನ್ನು ತನ್ನ ಸ್ವಂತ ಮಗನಂತೆಯೇ ವಾತ್ಸಲ್ಯದಿಂದ ಆದರಿಸುತ್ತಾಳೆ... ಆದರೆ, ಅವರಿಬ್ಬರೂ ನನಗೋಸ್ಕರ, ತನ್ನ ಮಾನವನ್ನು ಕಾಪಾಡುವುದಕ್ಕೋಸ್ಕರ ಸೃಷ್ಟಿಸಿದ ಕಟ್ಟುಕಥೆ ಈಗ ದರುಮನಳ್ಳಿಯ ವಿಸ್ತಾರಕ್ಕೆ ವ್ಯಾಪಕವಾಗಿ ಹರಡಿರುವಂತಿದೆ. ಇದು ಸುಳ್ಳು ಎಂದು ಸಾಧಿಸಹೊರಟರೆ, ಲೋಕ ತನ್ನ ಮಾತನ್ನು ನಂಬುತ್ತದೆಯೆ?...

ಹೀಗೆ ಆಲೋಚನೆ ಹರಿದಿರುವಾಗ, ಶಾಸ್ತ್ರಿಗಳು ಆಂತರ್ಯದಲ್ಲಿ ತಟ್ಟನೆ ಚಕಿತಗೊಂಡರು... ರುಕ್ಮಿಣಿ ಭೀಮನಳ್ಳಿಯಿಂದ ಬಂದು ಸುಮಾರು ಒಂದೂವರೆ ತಿಂಗಳಾದರೂ ಅವಳು ಬಹಿಷ್ಠೆಯಾಗಿ ಹೊರಗೆ ಕೂರದಿದ್ದುದು ತನ್ನ ಬುದ್ಧಿಗೆ ಏಕೆ ಹೊಳೆಯಲಿಲ್ಲ?... ತಾನು ಮಾಡಿದ ಪಾಪಕ್ಕೆ ದೇಹ ದಂಡಿಸಿ, ಜಪತಾಪದಿಗಳಲ್ಲಿ ಮುಳುಗಿ, ಬಾಹ್ಯ ಜಗತ್ತಿನ ಆಗುಹೋಗುಗಳಿಗೆ ತಾನು ಕುರುಡಾಗಿದ್ದೆ ಇದಕ್ಕೆ ಕಾರಣ ಎಂದುಕೊಂಡರು... ತಕ್ಷಣವೆ ಎಂಥ ಅಪರಾಧ ಮಾಡಿಬಿಟ್ಟೆ ಎಂದು ಒಳಗೊಳಗೇ ಕುದಿಯಲಾರಂಭಿಸಿದರು...

"ಅಷ್ಟೆ ಶಾಸ್ತ್ರಿಗಳೆ, ವಿಷಯವನ್ನು ನಿಮಗೆ ತಿಳಿಸೋಣ ಎಂದು ಕರೆಸಿದೆ" ಎಂದು ವೆಂಕಣ್ಣಜೋಯಿಸರು ತಟ್ಟೆಯಲ್ಲಿ ವೀಳೆಯದೆಲೆಯನ್ನು ಮುಗಿಸಿ ಮೇಲೆದ್ದರು.

ಶಾಸ್ತ್ರಿಗಳು ಇದೇ ಚಿಂತೆಯಲ್ಲಿ ವೆಂಕಣ್ಣ ಜೋಯಿಸರ ಮನೆಯಿಂದ ಹೊರಟು ತಮ್ಮ ಮನೆಯ ಜಗುಲಿಯನ್ನೇರಿ ಕುಳಿತರು. ಆಗ ವಿಧವೆ ಲಕ್ಷಮ್ಮ ಅಲ್ಲಿಗೆ ಬಂದು,

"ಎಚ್ಚರ, ಕಿಟ್ಟಣ್ಣ. ಆಗಬಾರದ್ದು ಆಗಿಹೋಗಿದೆ. ಈಗ ಬಸಿರು ಕಳೆಯೋ ಔಷಧಿ ತರಲು ಲಕ್ಕನ್ನ ಹುಣಸೂರಿಗೆ ಓಡಿಸಿದ್ದಾಳೆ ನಿಮ್ಮ ರುಕ್ಮಿಣಿ!... ಈ ಗಳಿಗೆಯಿಂದ ಆ ಹೊಲೆಯ ನಿಮ್ಮ ಹಟ್ಟಿಯ ಬಾಗಿಲ ಕಡೆ ಸುಳಿಯದೇ ಇರುವ ಹಾಗೆ ನೀವು ಮುತುವರ್ಜಿ ವಹಿಸಬೇಕು. ಇಲ್ಲದೇ ಹೋದರೆ, ಅವಳ ತಲೆಯನ್ನು ಹಿಂದೆಯೇ ಬೋಳಿಸದೆ ನೀವು ಮಾಡಿದ ಒಂದು ತಪ್ಪಿನ ಜೊತೆಗೆ ಅದಕ್ಕಿನ್ನ ಘನಘೋರವಾದ ತಪ್ಪನ್ನು ಮಾಡಿದ ಹಾಗಾಗುತ್ತೆ... ಹೊಟ್ಟೆಯ ಒಳಗಿರುವ ಪಿಂಡವನ್ನು ನಾಶ ಮಾಡೋದೂ ಒಂದೆ, ಒಬ್ಬ ಜೀವಂತ ವ್ಯಕ್ತಿಯನ್ನ ಕೊಲೆ ಮಾಡೋದು ಒಂದೆ!... ಸಾರಿ ಸಾರಿ ಹೇಳ್ತಾ ಇದೀನಿ. ನನ್ನ ಮಾತು ತೆಗೆದುಹಾಕಬೇಡಿ. ಸೊಸೆ ಎಂದು ಮೊದಲು ವಹಿಸಿಕೊಂಡ ಹಾಗೆ ಈಗಲೂ ವಹಿಸಿಕೊಳ್ಳಲಿಕ್ಕೆ ಹೋದೀರಿ, ಜೋಕೆ" ಎಂದು ಎಚ್ಚರಿಕೆ ಕೊಟ್ಟು ಹೋದಳು.

ದೊಡ್ಡ ಗಂಟಲು ಮಾಡಿ ಹೀಗೆ ಲಕ್ಷಮ್ಮ ಒದರಿದ ಮಾತುಗಳು

ಹಜಾರದಲ್ಲಿದ್ದ ರುಕ್ಮಿಣಿಗೂ ಕೇಳಿಸದೆ ಇರಲಿಲ್ಲ. ತೊಟ್ಟಿಯ ಕಂಬವೊಂದನ್ನು ಒರಗಿ ಹೂಬತ್ತಿ ಹೊಸೆಯುತ್ತಿದ್ದ ರುಕ್ಮಿಣಿಯನ್ನು ಈ ಮಾತುಗಳು ಕಾದ ಸೀಸದಂತೆ ಇರಿದವು.

ಶಾಸ್ತ್ರಿಗಳನ್ನೂ ಸಹ ಅವರು ಆ ರಾತ್ರಿ ಹಜಾರದ ತಮ್ಮ ಮೂಲೆಯ ಹಾಸಿಗೆಯ ಮೇಲೆ ಮೈಚಲ್ಲಿದಾಗಲೂ– 'ಒಂದು ತಪ್ಪಿನ ಜೊತೆಗೆ ಅದಕ್ಕಿನ್ನ ಘೋರವಾದ ತಪ್ಪನ್ನ ಮಾಡಿದ ಹಾಗಗುತ್ತೆ.'– ಲಕ್ಷಮ್ಮನ ಈ ಮಾತುಗಳು ಹರಿತವಾದ ಸಹಸ್ರ ಸಹಸ್ರ ಚೂರಿಗಳಾಗಿ ಇರಿಯುತ್ತಿದ್ದವು. ಅವರಿಗೆ ಮಲಗಲಾಗಲಿಲ್ಲ.

ಎದ್ದರು. ರುಕ್ಮಿಣಿಯ ಕೋಣೆಯತ್ತ ನಡೆದರು. ಕೋಣೆಯ ಹೊರಗೇ ನಿಂತು, "ರುಕ್ಕೂ... ರಕ್ಕೂ..." ಎಂದು ಕೂಗಿದರು. ಮಾವನವರ ಧ್ವನಿಯಲ್ಲಿದ್ದ ಕಂಪವನ್ನು ಗುರುತಿಸಿ, ರುಕ್ಮಿಣಿ ಬೆಚ್ಚಬಿದ್ದಳು!... ಮಾವನವರನ್ನು ಹಿಂದೆ ಹಿಡಿದಿದ್ದ ಭೂತವೆ ಮತ್ತೆ ಹಿಡಿಯಿತೆ? ಎಂದು ಶಂಕಿಸಿದಳು. ಆದರೆ ಶಾಸ್ತ್ರಿಗಳು ಪ್ರಯಾಸಪಟ್ಟು"... ತುಂಬಾ ಅನ್ಯಾಯ ಮಾಡಿದೆ... ಲಕ್ಕನಿಂದ ಔಷಧಿ ತಗೋಬಾರದು... ಒಂದು ಪಾಪ ಆಲಿಸಲಿಕ್ಕೆ ಹೋಗಿ..." ಎನ್ನುತ್ತ, ಉಳಿದ ಮಾತುಗಳನ್ನು ತಮ್ಮೊಳಗೇ ಸುರಿದುಕೊಳ್ಳುತ್ತ ತೆರಳಿ ತಮ್ಮ ಹಾಸಿಗೆಯಲ್ಲಿ ಉರುಳಿದರು. ರಾತ್ರಿಯೆಲ್ಲ ಒಂದು ಮಗ್ಗಲಿನಿಂದ ಇನ್ನೊಂದು ಮಗ್ಗುಲಿಗೆ ಹೊರಳಾಡಿದರು. ನಿದ್ರೆ ಮಾತ್ರ ಕಣ್ಣಿಗೆ ಹತ್ತಲಿಲ್ಲ. ಒಮ್ಮೊಮ್ಮೆ ಹೊರಳುವಾಗಲೂ "ನಾನು ಪಾಪಿ–ನಾನು ಪಾಪಿ" ಎಂದು ಹಲುಬುವರು... ತನ್ನನ್ನು ಕಂಡರೆ ಲಕ್ಕನಿಗೆ ತುಂಬಾ ಗೌರವ. ಜೊತೆಗೆ ರುಕ್ಮಿಣಿಯೂ ಈ ಹೂಟದಲ್ಲಿ ಸೇರಿರಬೇಕು. ಇವರಿಬ್ಬರೂ ತನ್ನ ಮಾನವನ್ನು ಉಳಿಸಲು ತಮ್ಮಿಬ್ಬರ ಮೇಲೂ ಈ ಘೋರ ಅಪರಾಧವನ್ನು ಆರೋಪಿಸಿಕೊಂಡಂತಿದೆ!... ಎಂದು ಅನುಮಾನಿಸಿದರು...

ಅತ್ತ ರುಕ್ಮಿಣಿಗೆ ಉಸಿರು ಕಟ್ಟುತ್ತಾ ಇತ್ತು. ಈ ಪರಮ ಸಂಕಟದಿಂದ ಪಾರಾಗಲು ಉಳಿದಿದ್ದ ಒಂದೇ ಒಂದು ಹೊರದಾರಿಯೂ ಈಗ ಮುಚ್ಚಿಹೋಗಿತ್ತು. ನೇಣುಗಂಬ ಹತ್ತಿರ, ಹತ್ತರವಾಗುತ್ತಿದೆ, ಎಂಬ ಭಾವನೆ ಬಲಿಯಿತು...

ಸರಸಿ ತನ್ನ ಎದೆಯ ಮೇಲೆ ಕೈಯಿಟ್ಟು ಆರಾಮವಾಗಿ ನಿದ್ರಿಸುತ್ತಿದ್ದಳು. ತಾನೂ ಬಾಲ್ಯದಲ್ಲಿ ತನ್ನ ತಾಯಿಯ ಮಗ್ಗುಲಲ್ಲಿ ಹೀಗೆಯೆ ಮುಗ್ಧ ಬಾಲಕಿಯಾಗಿ ಮಲಗುತ್ತಿದ್ದಿರಬೇಕು... ಕಳೆದುಹೋದ ಆ ಸುಂದರ ದಿನಗಳು ಈಗ ಕೇವಲ ನೆನಪು. ಎಂದೆಂದಿಗೂ ಅವು ಮತ್ತೆ ಮರಳುವು, ಎಂದು ವ್ಯಾಕುಲಗೊಂಡಳು...

ತಟ್ಟನೆ ಅವಳ ಆಲೋಚನೆಗೆ ಬೇರೊಂದು ವೇದನೆಯ ಆಯಾಮ ಕೂಡಿತು. ತನ್ನ ಹೊಟ್ಟೆಯಲ್ಲಿ ಪ್ರತಿ ಹೆಣ್ಣೂ ಬಯಸುವ ಗರ್ಭ!... ತನ್ನ ಈ ಕ್ರೂರ ಪರಿಸ್ಥಿತಿಗೆ ಯಾರನ್ನು ದೂಷಿಸಬೇಕು?– ಮಾವನವರ ಸಂಯಮರಾಹಿತ್ಯದತ್ತ ಬೆರಳು ಮಾಡಿ ತೋರಬಹುದಾದರೂ ಲಕ್ಕನ ವಿಷಯದಲ್ಲಿ ನಾನೆಷ್ಟು ಸಂಯಮಿಯಾಗಿದ್ದ? ಎಂದು ಆತ್ಮನಿಂದೆಯಲ್ಲಿ ತೊಡಗುವಳು... ಒಟ್ಟಿನಲ್ಲಿ ಎಲ್ಲವೂ ಗೋಜಲು, ಕಗ್ಗಂಟು. ತನಗೆ ಮುಕ್ತಿಯಿಲ್ಲ ಎಂದು ಹಲಬುತ್ತ ತಲೆದಿಂಬನ್ನು ತೇವ ಮಾಡಿದಳು... ತಾಯಿಯ ನೆನಪಾಯಿತು. ಅಮ್ಮ ಇದ್ದಿದ್ದರೆ ತನಗೆ ಈ ದುರವಸ್ಥೆ ಬರುತ್ತಿರಲಿಲ್ಲವೇನೊ. ಬಂದಿದ್ದರೆ ಅವಳ ಮಮತೆಯ ಮಡಿಲಲ್ಲಿ ತಲೆಯನ್ನಿಟ್ಟು ಲೋದವನ್ನೇ ಮರೆದು ಇರಬಹುದಿತ್ತೇನೊ... ಅಮ್ಮ– ನೀನು ನನಗೆ ಸರ್ವಸ್ವವಾಗಿದ್ದೆ. ನೀನು ಸತ್ತರೆ, ನಾನು ನಿಶ್ಚಯವಾಗಿಯೂ ಬದುಕುವುದೇ ಇಲ್ಲವೆಂದು ಭಾವಿಸಿದ್ದೆ. ಆದರೆ ನನ್ನ ಭಾವನೆ ಹುಸಿಯಾಯಿತು– ನೀನು ಹೋದೆ; ನಾನು ಬದುಕಿ ಉಳಿದೆ... ನೀನು ಸತ್ತಾಗ–ನೀನು ಬಹುವಾಗಿ ಪ್ರೀತಿಸುತ್ತಿದ್ದ, ಮಲಗುವಾಗಲೆಲ್ಲ ನಿನ್ನ ಜೊತೆಗೇ ಮಲಗುತ್ತಿದ್ದ, ಬೆಕ್ಕು ಕೂಡ ಮನೆಯ ಮಾಡಿನ ಮೇಲೆ ಹತ್ತಿ ಕುಳಿತು ಹಾಲು ಅನ್ನ ಯಾವುದನ್ನೂ ಮುಟ್ಟದೆ ಉಪವಾಸವಿದ್ದು ಅಸು ನೀಗಿತಲ್ಲ?– ನಾನು ಏಕೆ ಹಾಗೆ ಸಾಯಲಿಲ್ಲ?... ಸತ್ತಿದ್ದರೆ, ಈ ಗೊಂದಲವೆ ಉದ್ಭವಿಸುತ್ತಿರಲಿಲ್ಲ, ಅಲ್ಲವೆ?... ಕ್ಷೋಭೆಗೊಳಗಾದ ಅವಳ ಚಿತ್ತ ಹೀಗೆ ಎಲ್ಲಿಂದೆಲ್ಲಿಗೊ ಜಿಗಿದು ಚಿಂತೆಯ ಸಾವಿರ ಸುಳಿಗಳಲ್ಲಿ ಸಿಕ್ಕಿ ಪರಿತಪಿಸುತ್ತಿರುವಾಗ, ಹಕ್ಕಿಗಳ ಚಿಲಿಪಿಲಿಯೊಂದಿಗೆ ಆಕಳಿಸುತ್ತ ಎದ್ದ ಸರಸಿ, ರುಕ್ಮಿಣಿಯ ಎದೆಯ ಮೇಲಿಂದ ಕೈ ತೆಗೆದು ತನ್ನೆರಡೂ ಅಂಗೈಗಳನ್ನು ಪದ್ಧತಿಯಂತೆ ಉಜ್ಜಿ ನೋಡಿಕೊಳ್ಳುತ್ತ, "ಉತ್ತಿಷ್ಠೋತ್ತಿಷ್ಠ ಗೋವಿಂದ..." ಹೇಳಲು ಉಪಕ್ರಮಿಸಿದಳು.

## ೨೪

ಮಾರನೆ ಮದ್ದಿನ ಲಕ್ಕ ಹುಣಸೂರು ಪ್ಯಾಟೆಂದ ದರುಮನಳ್ಳಿಗೆ ಇಂತಿರುಗಿದ್ದ. ಔಸ್ದ ಕ್ವಡೊ ಬೂಬಮ್ಮನ ಉಡುಕೊದ್ರಲ್ಲೇಯ ಹಿಂದ್ನ ಜಿನ ಪೂರ ಕಳುದೋಗಿತ್ತು. ಅವಳು ಸಿಕ್ಕದ್ದೂ ನಾತ್ರೇಗೆ. ಅವಳು ಮದ್ದು ಮಾಡಿ ಕ್ವಡಾದ್ರಲ್ಲೆ ಮಾರನೆ ಜಿನ ಸ್ವಾಮಿ ನೆತ್ತಿಗೆ ಬಂದಿದ್ದ. ಅದ್ನ ಒಂದು ಕಯ್ಯಿಚೀಲದಾಗೆ ಜ್ವಾಪಾನಾಗಿ ಇಟ್ಟಕಂಡು ತಮ್ಮೂರ್ಗೆ ಬಂದ. ಬಂದೋನು ಹೊಲಗೇರಿಗೆ ಮೊದ್ಲು ವೋಗನಿಲ್ಲ. ಔಸದವ ಬ್ಯಾಗ ರುಕ್ಮಿಣವ್ವಂಗೆ ತಲುಪಿಸೊ ಅತ್ರ ಅವನಿಗೆ. ಕೇರಿಕೇರಿನೂ ದಾಟ್ತಾ ಬಂದ. ದೇವಗಣಗ್ಣೆ ಮರದ ಕಟ್ಟೆ ಸಿಕ್ತು. ಅಲ್ಲಿ ಕೆಲವು

ಹೈಕಳು ಕುಂತು ನಿಂತು ಒಂಟು ಒಡಯೊ ಆಟ ಆಡ್ತಿದ್ದೊ:

ಅಡಿಕೆ ಆಯನಾರಿ, ಚಾಪೆ ಮೊಡಸನಾರಿ–ಅದೇನ ಹೇಳಿ, ಅಂತು ಒಂದು ಹೈದ.

ಉಳಿಕೆ ಹೈಕಳು ಯೋಚ್ಣೆ ಮಾಡ್ತ ಕುಂತೊ. ಒಂಟ ಒಡೆಯಕ್ಕಾಗನಿಲ್ಲ.

ಹಯ್ಯೊ, ಪೆದ್ದುಗಳೆ, ಅಡಿಕೆ ಅಂದ್ರೆ ಚುಕ್ಕಿ; ಚಾಪೆ ಅಂದ್ರೆ ಆಕಾಸ–ಚುಕ್ಕಿ ಆಯಕ್ಕಾದಾತ? ಆಕಾಸ ಮೊಡಿಸಕ್ಕಾದಾತ?

ಕತ್ತಲೆ ಮನೇಲಿ ಮುದುಕಿ ಕುಯ್ತವ್ರೆ. ಈ ಒಂಟಿಗೆ ಅರ್ತ?– ಒಂದು ಎಣ್ಣು ಕೇಳ್ತು.

ಮುಕ್ಕಾಲುವಾಸಿ ಹೈಕಳು 'ಆಲಸಿನಣ್ಣು–ಅಲಸಿನಣ್ಣು' ಅಂತ ಕೂಗಿದೊ...

ಮಕ್ಕಳ ಆಟ ನ್ವಾಡ್ತಾ ನಿಂತ ಲಕ್ಕಂಗೆ ತನ್ನ ಜವಾಬುದಾರಿ ತಟಕ್ಕನೆ ಗೆಪ್ತಿಯಾಗಿ, ಅಲ್ಲಿಂದ ವೊಂಟ. ಅವ್ನ ಜ್ವತೆಗೆ ಬೊಡ್ಡನೂವೆ ಕುಲುಕ್ತ ನಡೀತು.

ಇನ್ನೂ ವೋಟು ದೂರ ವೋಗ್ನಿಲ್ಲ–ಕೇಶವಯ್ಯಾರು ಸಿಕ್ಕಿದ್ರು.

"ಎತ್ತಾಗಿ ಹೊರಟೆಯೊ, ಲಕ್ಕ?" ಅಂದರು.

"ಇಂಗೆ ವೊಂಟೆ ಕನ್ರಯ್ಯ..."

ತಾನು ವೊಂಟ ಕಾರಣವ ಈವಯ್ಯಂಗೆ ಯೋಳಕ್ಕೆ ಅದೇನ ಜರೂರು–ಅಂದು ಲಕ್ಕ ತಾನು ಹೊಂಟ ಕಾರಣವ ಕೇಶವಯ್ಯಂಗೆ ತಿಳುಸ್ನಿಲ್ಲ.

"ನೀನು ಹೇಳದೆ ಹೋದರೆ, ನನಗೆ ಗೊತಾಗೊಲ್ವೊ?... ನೀನು ಹೋಗ್ತಾ ಇರೋದು ಆ ಮೂಲೆ ಮನೆ ಕೃಷ್ಣಶಾಸ್ತ್ರಿಗಳ ಹಟ್ಟಿಗೆ ಅಲ್ಲವೇನ್ಲ?" ಕೇಳಿದ ಕೇಶವಯ್ಯ.

ಯಲೆ, ಈವಯ್ಯಂಗೆ ಅದ್ಯಾವ ಪರೀಲಿ ಗ್ವತ್ತಾಯ್ತು?– ಇಸ್ಮಯಪಡ್ತ, ಕನ್ನ ಕೋರೀತಿರುವಾಗ ಸಿಕ್ಕಾಕಂಡ ಕಳ್ಳನ ತರ,

"ಊಕನ್ರಯ್ಯ" ಅಂದ.

"ಅಲ್ಲಿಗೆ ನೀನು ಹೋಗುವ ಹಾಗಿಲ್ಲ."

ಕೇಶವಯ್ಯನ ಅಧಿಕಾರವಾಣಿಯಿಂದ ಲಕ್ಕ ಅಪ್ರತಿಭನಾದ.

"ಯಾಕ್ರಯ್ಯ?"

"ಕಾಲ ಕಳೆದ ಹಾಗೆ ನಿನಗೇ ಗೊತ್ತಾಗತ್ತೆ. ಈಗ ನಾನು ಹೇಳುವ ಹಾಗೆ ಕೇಳು– ಅವರ ಮನೆಯ ಸಮೀಪ ಸುಳಿಯಬೇಡ."

"ಸುಮ್ಕಿರಿ. ಯಾವತ್ತೂ ನಿಮ್ಮದು ನಗಸಾರವೆ."

"ನಗಸಾರವೂ ಇಲ್ಲ, ಪಗಸಾರವೂ ಇಲ್ಲ. ಅವರ ಮನೆಗೆ ನೀನು

ಹೋಗಕೂಡದು ಎಂದು ಕಟ್ಟ ಆಗಿದೆ." ಇಷ್ಟು ಹೇಳಿ ಕೇಶವಯ್ಯ ಅಲ್ಲಿಂದ ತೆರಳಿದ.

ಇದು ಯಾವ ಕಟ್ಟು. ಯೇನು ಕತೆ?– ಲಕ್ಕಂಗೆ ಇದ್ನ ಕುರಿತು ಯೋಚಿಸಕ್ಕೂ ಕುಡ ಸಾಧ್ಯ ಆಗನಿಲ್ಲ. 'ಊ ನೋಡಾವ' ಅಂದು ಕೃಷ್ಣಶಾಸ್ತ್ರಿಗಳ ಮನೆ ಮುಟ್ಟಿದ. ಅಲ್ಲಿ ಮತ್ತೊಂದು ಚೋಜಿಗ ಅವನ್ನ ಕಾದಿತ್ತು ಈ ಮದ್ದನ್ನದ ವ್ಯಾಳ್ಯದಲ್ಲಿ ಸಾದಾರಣಾಗಿ ಯಾವೋತ್ತೂವೆ ಶಾಸ್ತ್ರಿಗಳು ತಮ್ಮ ಅಟ್ಟೀಲಿ ಉಳಿದೋರಲ್ಲ. ಈ ವೊತ್ನಲ್ಲಿ ತ್ವಾಟದಲ್ಲೆ ಸಾಸ್ತ್ರಿಗಳ ಮೊಕ್ಕಾಮು!– ಇದೇನ ಈ ಜಿನ ಅಟ್ಟೀಲೆ ಉಳಿದವರೆ?... ಅದೂವೆ ಜಗಲೀಲೆ ಕುಂತು ಯಾವುದೊ ಪುಸ್ತಕ ಓದ್ತಾ ಇರೋವಂಗಿದೆ!

ಲಕ್ಕ ಇನ್ನೂ ಅಷ್ಟು ದೂರವಿರುವಾಗಲೆ, ಕೃಷ್ಣಶಾಸ್ತ್ರಿಗಳ ಇವನ ಆಗಮವನ್ನು ಗಮನಿಸಿದರೂ ಸಹ, ತಮ್ಮ ಬಳಿಗೆ ಬರುವವರೆಗೂ ತಾವು ಓದುತ್ತಿದ್ದ ಭಗವದ್ಗೀತೆಯಲ್ಲಿ ತಲ್ಲೀನರಾದಂತಿದ್ದರು. ಅವನು ಹತ್ತಿರ ಬಂದಾಗ, ನಿಧಾನವಾಗಿ ಕತ್ತೆತ್ತಿ.

"ಔಷದಿ ತಂದಿದೀಯೇನಪ್ಪ"– ಕೇಳಿದರು. ಅವರ ಸ್ವರ ಬಳಲಿತ್ತು.

ಲಕ್ಕಂಗೆ ಚೋಜಿಗ. ತಾನು ಔಸ್ದ ತರಕ್ಕೋಗಿದ್ದ ಇಸ್ಯ ಈ ಸಾಸ್ತ್ರಿಗಳಿಗೆ ಎಂಗೆ ಗ್ವತ್ತಾಯ್ತು?... ರುಕ್ಮಿಣವ್ವಾರು ಯೇನಾರ...? ಚೆ, ಚೆ, ಅದು ಸಾದ್ಯಾನೆ ಇಲ್ಲದ ಮಾತು... ಲಕ್ಕ ಅಲವು ಪರಿ ಚಿಂತಿಸ್ದ. ಇದು ರುಕ್ಮಿಣ್ಣವಂಗೆ ಮತ್ತೆ ತನಗೆ–ನಾವಿಬ್ಬರ ಬುಟ್ಟರೆ ಈ ಜಗತ್ತಿನಾಗೆ ಬ್ಯಾರೆಯೋರ್ಗೆ ತಿಳಿಯೊ ದಾರೀನೆ ಇಲ್ಲವಲ್ಲ?... ತಬ್ಬಿಬ್ಬಾಗಿ–

"ತಂದಿವ್ನಿ" ಎಂದಷ್ಟೆ ಬಾಯಿಬಿಟ್ಟ.

"ಅದನ್ನು ರುಕ್ಮಿಣಮ್ಮನೋರಿಗೆ ಕೊಡಬೇಡ. ತೆಗೆದುಕೊಂಡು ಹೋಗಿ ಎಲ್ಲಾದರೂ ಚೆಲ್ಲಿಬಿಡು."

ಶಾಸ್ತ್ರಿಗಳ ಕಂಠ ಗಡುಸಾಗಿತ್ತು. ಎಂದೂ ಅವರು ಲಕ್ಕನೊಡನೆ ಕಠೋರವಾಗಿ ವರ್ತಿಸಿದವರಲ್ಲ. ಏನೊ ಅಚಾತುರ್ಯವಾಗಿದೆ ಎನ್ನುವುದ ಅವನಿಗೆ ಮನವರಿಕೆಯಾಯಿತು. ಆದರೆ ಏನು ಎನ್ನುವುದು ಮಾತ್ರ ಅವನಿಗೆ ಗುಢವಾಗಿಯೆ ಉಳಿಯಿತು.

ಶಾಸ್ತ್ರಿಗಳು ಇನ್ನೇನಾದರೂ ಹೇಳುವರೇನೊ ಎಂದು ಕಾದು ನಿಂತ. ಅವರು ಪುನಹ ಭಗವದ್ಗೀತೆಯ ಪುಸ್ತಕದಲ್ಲೆ ತಮ್ಮ ದೃಷ್ಟಿಯನ್ನು ಅಡುಗಿಸಿ, ಲಕ್ಕನ ಎರುವಿಕೆಯನ್ನೆ ಮರೆತಂತಿತ್ತು... ಇನ್ನು ರುಕ್ಮಿಣವ್ವಾರ ನ್ವಾಡಾದಾದ್ರೂ

ಎಂಗೆ?... ಕೇಸವಯ್ಯಾರು ಅದ್ಯಾನೊ ಕಟ್ಟು, ಅಂದ್ರಲ್ಲ?... ಒಂದೂವ ಅರ್ತಾನೆ ಆಯ್ತಾ ಇಲ್ಲ!...

ಲಕ್ಕ ಯತೆಯ ಭಾರದಿಂದ ಜಗ್ಗುತ, ಹೊಲಗೇರಿ ತಲುಪ್ದ. ಹೊಲಗೇರಿ ಮುಂದ್ನ ಬಯಲ್ನಲ್ಲಿ ಎಕ್ಕದ ಗಿಡಗಳು ಮಸ್ತಾಗಿ ಬೆಳುದಿದ್ದೊ. ಅಲ್ಲಿ ಎಕ್ಕದ ಕಾಯಿಗಳು ಸಿಡಿದು ಬಾಯಿ ತಕ್ಕಂಡಿದ್ದೊ. ಅವುಗಳ ತುಂಬ ಕಪ್ಪಿನಿ ಸಣ್ಣ ಸಣ್ಣ ಬೀಜಗೋಲು. ಆ ಕಪ್ಪೀನಿ ಬೀಜಗಳ ಮಯ್ಯಿತುಂಬ ಉದ್ದಾನೆ ಕೂದಲುಗಳಂಗೆ ಒತ್ತೊತ್ತಾಗಿ,. ದೂಮ್ರಾವ ಬಿಳಿ ರೇಸ್ಮ ಎಳೆಗೊಳು. ಗಾಳೀಲಿ ಅವು ಒಂದೊಂದಾಗಿ ಹಾರಕ್ಕೆ ಸುರು ಮಾಡಿದ್ದೊ. ಹೊಲಗೇರಿಯ ಹೈಕಳು ಅವ್ನ ಉಫ್ ಉಫ್ ಅಂತ ಬಾಯಿಂದ ಉರುಬಿ ಉರುಬಿ ಇನ್ನೂ ಮ್ಯಾಲೆ ಮ್ಯಾಲೆ ಏರಿಸೊ ಆಟ ಆಡ್ತಿದ್ದೊ... ಆ ಹೈಕಳ ಆಟ ನ್ಯಾಡ್ತಿದ್ದ ಲಕ್ಕಂಗೆ ಚಿಕ್ಕಂದ್ನಲ್ಲಿ ಇಂಗೇಯ ಎಕ್ಕದ ಬೀಜಗಳ ತಾನೂವೆ ಉರುಬಿ ಆಡ್ತಿದ್ದದ್ದು ನೆಪ್ಪಾಯ್ತು...

ಲಕ್ಕ ಇನ್ನೇನು ತಮ್ಮ ಗುಡ್ಲ ಸಮೀಪಿಸ್ತ ಇರೋನೂವೆ, ಓಣ್ಯಿಂದ ಮಂಕರೀಲಿ ತೊಪ್ಪೆ ಎತ್ತಿ ತತ್ತಿದ್ದ ಸಿವುನಿ ಎದಿರಾದ್ಲು. ಲಕ್ಕ ಗುಡ್ಲ ಒಳೀಕೆ ಪ್ರವೇಶ ಮಾಡೋದ ತಡದು,

"ವಸಿ ನಿಂತುಗಣ್ಣ, ಇದೇನು, ನಾನು ಕ್ಯಾಳ್ತ ಇರಾದು?... ಇದೆಲ್ಲ ದಿಟವ?" ಕೇಳಿದ್ಲು.

ಲಕ್ಕಂಗೆ ಸೊಂಟಾನೆ ಮುರಿದಂಗಾಯ್ತು. ಆದರೂವೆ ತನ್ನ ಅಪದೈರ್ಯವ ತೋರಗೊಡ್ದೆ,

"ಅದೇನ ನೀವು ಕ್ಯಾಲಿರಾದು?" ಅಂದು, ಆಕಾಸದಾಗೆ ಗರುಡಾಳ್ನ ಕಡೀಕೆ ತನ್ನ ದ್ರುಸ್ಟಿ ಹರಿಸ್ದ.

"ಅದೇನೊ ಬ್ರಾಂಬರ ಮೂಲೆ ಅಟ್ಟಿ ರುಕ್ಮಿಣವ್ವಾರ ನೀನು ಬೋಸರು ಮಾಡಿದ್ದಿಯಂತೆ...?" – ಒಂದೀಟೂ ಮುಖ ಇರುಕಿಸದೆ ಅಂದಿದ್ಲು!... ಲಕ್ಕ ತಬ್ಬಿಬ್ಯಾದ.

"ಯಾರಮ್ಮಿ ಯೋಳಿದೋರು?"

"ಯಾರೇನ ಹ್ಯಾಳಬೇಕು?... ಊರ್‍ಗೆ ಊರ್‍ಗೇ ಎದ್ದು ತಕತಕ ಕುಣೀತ ಯಕ್ಸಗಾನ ಮಾಡ್ತಾ ಅದೆ..."

ಲಕ್ಕ ತಲೆ ತಗ್ಗಿಸ್ದ. ಸಿವುನಿ ಇನ್ನೂ ಸಮೀಪ ಬಂದು,

"ಅಂಗಾರೆ– ಈ ಮಾತು ಸಟೆ ಅಲ್ಲ, ಅನ್ನು?" – ನಂಬಬಾರದ್ದ ನಂಬಬೇಕಾಗಿ ಬಂದೋಳಂಗೆ ಕೇಳಿದ್ಲು.

"ವೋಗಮ್ಮಿ, ನನ್ನ ತಲೆ–ಅಗ್ರಣೆ ಸಾಸ್ವೆ ಸಿಡಿಯೋವಂಗೆ ಸಿಡೀತಾ ಅದೆ" ಅನ್ತಾ ಅನ್ತಾ, ತಮ್ಮ ಗುಡ್ಲ ಹ್ವಕ್ಕ.

ಸುದ್ದಿ ಕೇಳಿದೂತ್ತಿನಿಂದ್ಲೂವೆ, ಕಣ್ಣುಗುಡ್ಡೆ ಕಳಚಿ ಬೀಳೋವಸ್ಟು ಅತ್ತು ಅತ್ತು ಕಲ್ಯಾಣಿ ಗುಡ್ಲಿನ ವಚ್ಚೋರಿಕೆ ಜೀವ ವೋಂಟೋದೋಳಂಗೆ ವರಗಿ ಕುಂತಿದ್ಲು. ಲಕ್ಕನ್ನ ಕಂಡೇಟಿಗೆ, ಗಕ್ಕನೆದ್ದು ಬಂದು ಅವನ ಸ್ವಾಟಿಗೆ ತಿವೀತ,

"ನಿಂಗ್ಯಾವ ಬೆರಗು ಬಂದಿತ್ಲ–ಹ್ವಾಗಿ ಹ್ವಾಗಿ ಆ ಹಾರುತಿ ಕೆಣುಕಕ್ಕೆ?" – ಕಿರುಚಿ, ಎದೆ ಬಡಿದುಕೊತ್ತ ಕುಕ್ಕನೆ ಕುಂತು ದುಕ್ಕಡಿಸ್ತಿದ್ಲು.

ಕ್ವಾಣೆ ವಳುಗಡೆ ಇದ್ದ ನಿಂಗಯ್ಯ, ಸ್ವಾರೆ ಬುಂಡೆ ಕಯ್ಲಿ ಇಡುಕಂಡೇಯ ಈಚ್ಗೆ ಬಂದೋನು.

"ನಮ್ಮ ವಂಸ... ನಿರ್ವಂಸ... ಆ–ಯ್ತಲ್ಲೊ... ಲಕ್ಕ–ಲೋ... ನೀನು– ಆ ಎಣ್ಣಿನತ್ರ ಹ್ವಾದೇಂತ ನಂಗೇನೂವೆಕ್ವಾಪ ಇಲ್ಲ ಕನ್ಲ... ಮೊದ್ಲೆ ಹ್ಯಾಳಕ್ಕಿಲ್ವ ಗಾದ್ಯ–ಎಣ್ಣು ಅಂದ್ರೆ ಹೆಬಗ ನಕ್ಕಾಂತ!... ಅದು ಸಮಾಸು..." ನಡನಡ್ವೆ ಕುಡೀತ ವದರಾಡ್ದ.

ತ್ರಾಣ ಉಡುಗಿ ಕುಂತಿದ್ದ ಕಲ್ಯಾಣಿ, ಪುನಾ ಜೀವ ಬಂದೋಳಂಗೆ–

"ಅದ್ನೆ ಮಂತೆ ನಾ ಹ್ಯಾಳಾದೂವೆ... ಇಂಗೆ ಮೆಡೆಗಾರಿಕೆ ಮಾಡಿ ನಮ್ನೆಲ್ಲ ಬ್ಯಾ ಬ್ಯಾ ಅನ್ನೂವಂಗೆ ಮಾಡಾದರ ಬದ್ಲು, ನಾವು ಯೋಳಿದಾಗ್ಲೆ ನಮ್ಮ ಹುಚ್ಚುಬೋರಿ ಎಣ್ಣು ಚೆಲುವೀಯ ಲಗ್ಲ ಆಗಿದ್ರೆ, ಈ ಪಜೀತ ಪಾರಿಜಾತ್ವೆ ಆಯ್ತಿರನಿಲ್ಲ..." ದುಕ್ಕಡಿಸುತ್ತಲೆ ಯೋಳಿ, "ಈಗ ನಾತ್ರೆಗೆ ನಿನ್ನ ಮ್ಯಾಲೆ ನ್ಯಾಯ ಬ್ಯಾರೆ ಆಕ್ಕಂಡವರಂತೆ ಊರ್ನ ಯಜಮಾನ್ರು. ಅಲ್ಲಿ ನೀನು ಅದೇನ ಪಸೀತೀಯೊ ಪಸಿ." –ಕ್ವಾಪ, ಸಂಕಟ ಎಡೂ ಬೆರೆತ ಮಾತ ಉಕ್ಕುಸಿದ್ಲು.

ಲಕ್ಕ ತಲೆ ತಗ್ಗುಸಿ ಕಲ್ಲಿನ ಪ್ರತುಮ್ಯಾಗಿ ನಿಂತೇ ಇದ್ದ. ರುಕ್ಮಿಣ್ಣವ್ವನ ತೆಪ್ಪ ಹ್ವರಸಕ್ಕೆ ಅವನಿಗ್ಯಾಕೊ ಮನಸೇ ಬರನಿಲ್ಲ.

ಈ ಗದ್ದಲದಾಗೆ ಸಿವುನಿ ಕೂಸು ಎಚ್ಚರಾಗಿ ಕಜೆ ತಗೀತು. ಸಿವುನಿ ಜಟಜಟ್ನೆ ಕಯ್ಯ ತ್ವಳುದ ಕೂಸಿಗೆ ಮೊಲೆ ಕಚ್ಚಿಸಿದ್ಲು.

## ೨೫

ಚಾವಡಿ ಕಟ್ಟೆಯಲ್ಲಿ ಜನ ಒಬ್ಬಿಬ್ಬರಾಗಿ ಬಂದು ಸೇರುತ್ತಿದ್ದರು. ಅತ್ತ ಜಪ್ಪಯ್ಯನ ಮಠದಲ್ಲಿ ಶಿವಪಾದಯ್ಯನವರು ಶಿವಶರಣರ ವಚನಗಳನ್ನು ವಾಚನ ಮಾಡಿ, ನೆರೆದ ಭಕ್ತಾದಿಗಳಿಗೆ ಅರ್ಥ ಹೇಳುತ್ತಿದ್ದರು. ಅಲ್ಲಿ ಕುಳಿತು ಕೇಳುತ್ತಿದ್ದ

ನಂಜೇಗೌಡ, ಗಂಗಪ್ಪ ಮತ್ತು ಅವರ ಗುಂಪು ಅರ್ಧದಲ್ಲೇ ಎದ್ದರು. ಶಿವಪಾದಪ್ಪನವರು ವಾಚನವನ್ನು ನಿಲ್ಲಿಸಿ, "ಯಾಕೆ?" ಎನ್ನುವಂತೆ ಸನ್ನೆ ಮಾಡಿದರು.

ನಂಜೇಗೌಡರು,

"ನ್ಯಾಯ...ಬುದ್ಧಿ" ಎಂದು ಮೆಲ್ಲನುಸುರಿ ಸ್ವಾಮಿಗಳಿಗೆ ಅರಿಕೆ ಮಾಡಿದರು. ಸ್ವಾಮಿಗಳು,

"ಅರ್ಧದಲ್ಲಿ ಯಾತಕ್ಕೆ ಏಳ್ತೀರಿ?– ಕೂತುಗೊಳ್ಳಿ. ಇನ್ನೊಂದು ಅರ್ಧ ಅಥವ ಮುಕ್ಕಾಲು ಗಂಟೆಯಲ್ಲಿ ಎಲ್ಲವೂ ಮುಗಿದು ಹೋಗುತ್ತೆ. ನಿಮ್ಮ ನ್ಯಾಯ ಇಡೀ ರಾತ್ರಿ ನಡೆಯೋದು ತಾನೆ?" ಎಂದು ಹುಸಿನಕ್ಕರು.

ವಾಚನ ಮುಂದುವರಿಯಿತು... ಗರಿ ತಾಗಿದರೆ ವೀರರೆಂಬುವರ ಕಾಣೆ, ನಿರಿ ಸೋಕಿದರೆ ಯತಿಯೆಂಬುವರ ಕಾಣೆ... ನಿರ್ವಾಹವಿಲ್ಲದೆ ಆ ಗುಂಪು ಮತ್ತೆ ಮನಸ್ಸಿಲ್ಲದ ಮನಸ್ಸಿನಿಂದ ಆಲಿಸುತ್ತ ಮಂಡಿಸಿತು. ಕಾಲುಗಂಟೆ ಹೀಗೆ ಕಳೆದಿರಬಹುದು. ಹಟಾತ್ತನೆ, ಬರಬಿಜ್ಜಿನಂತೆ ಸುದ್ದಿಯೊಂದು ಆ ಸಭೆಯ ಮೇಲೆರಗಿತು: ನಂಜೇಗೌಡರ ಅಣ್ಣ ಕಪನಯ್ಯನವರು ಇದೀಗ ಶಿವನಪಾದ ಸೇರಿಕೊಂಡರು!

ಶಿವಪಾದಪ್ಪನವರ ವಾಚನ ನಿಂತಿತು. ಕಪನಯ್ಯನನ್ನು ಕಂಡರೆ ಊರಿನ ಎಲ್ಲ ಭಕ್ತಾದಿಗಳಿಗಿಂತಲೂ ಅವರಿಗೆ ಪಂಚಪ್ರಾಣ. ಆತ ಮಹಾ ದೈವಭಕ್ತ. ನೇರ ನಡೆ, ನೇರ ನುಡಿ. ಎರಡು ಹೊತ್ತೂ ಶಿವಪೂಜೆ ಮಾಡದೆ ಬಾಯಿಗೆ ನೀರನ್ನೂ ಸೋಕಿಸುತ್ತಿರಲಿಲ್ಲ. ಹತ್ತು ಜನಕ್ಕೆ ಬೇಕಾಗಿದ್ದ ವ್ಯಕ್ತಿ. ಇಂಥ ಪುಣ್ಯಾತ್ಮನ ಸಾವು ಶಿವಪಾದಪ್ಪನವರ ಕಣ್ಣಿನಲ್ಲೂ ನೀರು ತಂದಿತು. ಆದರೆ ಊರಿನಲ್ಲಿ ಕ್ವಾಟೆ ಬುಳ್ಳಪನಂಥ ಒಬ್ಬಿಬ್ಬರು ಕುಹಕಿಗಳು ಕಪನಯ್ಯನ ಬಗ್ಗೆ ಶಿವಪಾದಪ್ಪನವರು ತಳೆದಿದ್ದ ಪ್ರೀತಿಗೆ ಬೇರೆ ಕಾರಣವನೆ ಕೊಡುತ್ತಿದ್ದರು... ಕಪನಯ್ಯನಿಗೆ ಇಬ್ಬರು ಗಂಡುಮಕ್ಕಳು. ಅವರಲ್ಲಿ ಹಿರಿನಾದ ಬಸವಯ್ಯನು ಲಗ್ನವಾದ ಬಳಿಕ ಮೈಸೂರಿಗೆ ತೆರಳಿ ಅಲ್ಲಿಯೇ ಒಂದು ಶಿವಾಚಾರದ ಹೋಟಲು ತೆಗೆದಿದ್ದ. ಬಸವಯ್ಯನ ಹೆಂಡತಿ ಮಲ್ಲಿ ಸ್ವಲ್ಪ ಕಲಿತವಳು. ಬಹಳ ಕಾಲ ಹಳ್ಳಿಯಲ್ಲಿ ಇರಲು ಇಚ್ಚಿಸಲಿಲ್ಲ. ಗಂಡನಿಗೆ ತಗಾದೆ ಮಾಡಿ ಹಳ್ಳಿಯಿಂದ ಅವನನ್ನು ಎಬ್ಬಿಸಿದಳು. ಮೈಸೂರಿನಲ್ಲಿ ಅವಳಿಗೆ ಮೂವರು ಮಕ್ಕಳಾಗಿದ್ದರು. ಯಾವಾಗಲೊ– ಆರು ತಿಂಗಳೊ ವರ್ಷಕ್ಕೊ–ಒಮ್ಮೆ, ಬಸವಯ್ಯ ಹಳ್ಳಿಗೆ ಬಂದು ತಂದೆ ತಾಯಿಯರನ್ನು ನೋಡಿ ಹೋಗುತ್ತಿದ್ದುದುಂಟು. ಕಪನಯ್ಯನ ಇನ್ನೊಬ್ಬ ಮಗ ಚೆನ್ನೂರ ಯಾವುದೊ ನಾಟಕದ ಕಂಪೆನಿ ಸೇರಿ ಊರೂರು ಅಲೆಯುತ್ತಿದ್ದ. ಹಾಗೆ ಅಲೆಯುವಾಗ,

ನಾಟಕದ ಕಂಪೆನಿಯ ಹುಬ್ಬಳ್ಳಿ ಕ್ಯಾಂಪಿನಲ್ಲಿ, ನಾಟಕದ ಖಯಾಲಿಯಿದ್ದು ಪದೇ ಪದೇ ಅವರ ಕಂಪೆನಿ ನಾಟಕಗಳಿಗೆ ಬರುತ್ತಿದ್ದ ಹೆಣ್ಣೊಂದನ್ನು ಮದುವೆಯಾಗಿದ್ದ. ಅವಳು ನಾಲ್ಕು ವರ್ಷ ಇವನೊಡನೆ ಸಂಸಾರ ಮಾಡಿಕೊಂಡಿದ್ದು, ಮೂರು ವರ್ಷದ ಹೆಣ್ಣು ಮಗುವನ್ನು ಇವನಲ್ಲೆ ಬಿಟ್ಟು, ಬೇರೆ ಇನ್ನೊಂದು ಕಂಪನಿಯಲ್ಲಿ ರಾಜಾ ಪಾರ್ಟು ಹಾಕುತ್ತಿದ್ದ ಗೆಣೆಯನೊಂದಿಗೆ ರಾತ್ರೋರಾತ್ರಿ ಪರಾರಿಯಾಗಿದ್ದಳು. ನಾಟಕ ಕಂಪನಿಯೊಡನೆ ಊರೂರು ಅಲೆಯುವ ಚೆನ್ನೂರನಿಗೆ ಮಗುವನ್ನು ಕಾಪಾಡುವುದು ಕಷ್ಟಕರವಾಗಿ ಕಂಡಿತು. ಆ ಹೆಣ್ಣು ಮಗುವನ್ನು ದರುಮನಳ್ಳಿಗೇ ಕರೆದುತಂದು ನೀವೇ ಪೋಷಿಸಬೇಕೆಂದು ಕಾಡಿ ಬೇಡಿ ತಂದೆತಾಯಿಯರ ಮಡಿಲಿಗೆ ಹಾಕಿ ಹೋದ. ಕಪನಯ್ಯ ದಂಪತಿಗಳಿಗೆ ಆ ಮಗು ಹೊರೆಯಾಗುವುದರ ಬದಲು ಅವರ ವೃದ್ಧಾಪ್ಯದಲ್ಲಿ ಬದುಕನ್ನು ಸಹ್ಯಗೊಳಿಸುವ ಒಂದು ವರವಾಗಿ ಪರಿಣಮಿಸಿತು. ಮಗುವನ್ನು ಅವರು ಸಂತೋಷವಾಗಿ ಸಾಕಿಕೊಂಡರು. ಕಪನಯ್ಯ ಮತ್ತು ಭದ್ರಮ್ಮ ಇಬ್ಬರೂ ಜಪ್ಪಯ್ಯನ ಮಟಕ್ಕೆ ಭಯ, ಭಕ್ತಿಗಳಿಂದ ನಡೆದುಕೊಳ್ಳವರಾದ್ದರಿಂದ, ಹೆಣ್ಣುಮಗುವನ್ನು ತಾವು ಹೋದಾಗಲೆಲ್ಲ ತಪ್ಪದೆ ಅಲ್ಲಿಗೆ ಕರೆದೊಯ್ಯುತ್ತಿದ್ದರು. ಆ ಹೆಣ್ಣಿಗೆ ಒಂಬತ್ತು ವರ್ಷಗಳಾಗುತ್ತಿದ್ದಂತೆ, ಭದ್ರಮ್ಮ ಕಾಲರಾದಲ್ಲಿ ಮೃತಳಾದ ಬಳಿಕವಂತೂ ಆ ಹೆಣ್ಣು ಚಂದ್ರಿ ಋತುವಾದಳು. ಆಶ್ರಮದ ಊಟೋಪಚಾರಗಳಿಂದಲೋ, ಸ್ವಾಮಿಗಳು ತೋರುತ್ತಿದ್ದ ಪ್ರೀತಿವಿಶ್ವಾಸಗಳಿಂದಲೊ ಋತುವಾದ ಎರಡೇ ವರ್ಷಗಳಲ್ಲಿ ಮೈ ಕೈ ತುಂಬಿ ಹದಿನೆಂಟು ಹತ್ತೊಂಬತ್ತರ ಪ್ರಾಯವೆಂಬಂತೆ ಕಾಣುತ್ತಿದ್ದಳು. ಅಂಥಾ ಸಮಯದಲ್ಲಿ ಚಂದ್ರಿ ಇದ್ದಕ್ಕಿದ್ದಂತೆ ಸತ್ತು, ಅವಳನ್ನು ತಮ್ಮ ಸ್ವಂತ ಮಗಳಿಗಿಂತ ಅಧಿಕಪ್ರೇಮದಿಂದ ನಡೆಸಿಕೊಳ್ಳುತ್ತಿದ್ದ ಸ್ವಾಮಿಗಳು ಅವಳ ಉತ್ತರಕ್ರಿಯಾಧಿಗಳನ್ನು ತಾವೇ ಮುತುವರ್ಜಿ ವಹಿಸಿ ತಮ್ಮ ಮಠದ ವೆಚ್ಚದಲ್ಲೇ ನಿರ್ವಹಿಸಿದ್ದರು. ಚಂದ್ರಿಗೆ ಆರು ತಿಂಗಳಿಂದಲೂ ಉದರ ಶೂಲೆ ಇತ್ತೆಂತಲೂ ಅವಳು ಯಾರಿಗೂ ತಿಳಿಸದೆ ಮುಚ್ಚಿ, ಕೊನೆಗೆ ಅದು ಪ್ರಬಲಿಸಿದಾಗ ಯಾರು ಯಾರೊ ದೂರದೂರಿನ ಆಯುರ್ವೇದ ಪಂಡಿತರಿಂದ ವೈದ್ಯ ಮಾಡಿಸಿದರೂ ಅವಳು ಉಳಿಯಲಿಲ್ಲವೆಂದೂ ಮಠದ ವತಿಯಿಂದ ಊರಿಗೆಲ್ಲ ಪ್ರಚಾರವಾಯಿತು. ಕಪನಯ್ಯನನ್ನು ಕೇಳಿದರೆ ಅವಳ ಸಾವಿನ ವಿಷಯವಾಗಿ ಯಾವ ಪ್ರತಿಕ್ರಿಯೆಯನ್ನು ವ್ಯಕ್ತಿಪಡಿಸುವ ಗೋಜಿಗೂ ಆತ ಹೋಗುತ್ತಿರಲಿಲ್ಲ. ಯಾರಾದರೂ ಚಂಡಿಸಿ ಕೇಳಿದರೆ "ಶಿವ ಕೊಟ್ಟ, ಕಿತ್ತುಗೊಂಡ" ಎಂದಷ್ಟೆ, ಹೇಳುತ್ತಿದ್ದ. ಆದರೆ ಕ್ವಾಟೆ ಬುಳ್ಳಪ್ಪನಂಥ ಒಬ್ಬಿಬ್ಬರು, "ಶಿವಪಾದಪ್ಪನೋರು ಮಗಳು ಮಗಳು ಅಂದುಕೊತ್ತ ಚಂದ್ರಿಯ ವಳುಗೇ

ಫಳಾರ ಮಾಡಿದರು ಅವಳ ಬೊಸಿರಾದ್ಲು. ಅಯ್ಯನೋರು ಬೋಸಿರು ತೆಗೆಸಕೆ, ಔಸದ ಕ್ವಡಿಸಿದರು. ಅದೇನು ಎಡವಟ್ಟಾಯ್ತೊ, ಹೆಣ್ಣು ಎರಡೇ ದಿನದಲ್ಲಿ ಪ್ರಾಣ ಬಿಡ್ತು!..." ಎಂದು ಕುಹಕ ಆಡಿದರು. ಬಹುಮಂದಿ ಬುಳ್ಳಪ್ಪನಂಥವರ ಆಪಾದನೆಯನ್ನು ನಂಬಲಿಲ್ಲ. ಅದರ ಚಂದ್ರಿಯ ಸಾವಿನ ಕಾರಣ ನಿಗೂಢವಾಗಿಯೇ ಉಳಿಯಿತು. ಚಂದ್ರಿ ಸತ್ತನಂತರ ಮಠದಿಂದ ಕಪನಯ್ಯ ದೂರವಾದದ್ದು ಮತ್ತು ನಂಜೇಗೌಡ ಮಠಕ್ಕೆ ಈಗ ಹತ್ತಿರವಾದದ್ದು ಕೆಲವರ ಅನುಮಾನಕ್ಕೆ ಅವಕಾಶವೀಯಿತು. ಚಂದ್ರಿಯ ಚಿಕ್ಕಪ್ಪ ನಂಜೇಗೌಡ ಚಂದ್ರಿಯ ಸಾವನ್ನೇ ಒಂದು ಅಸ್ತ್ರ ಮಾಡಿಕೊಂಡು ಶಿವಪಾದಪ್ಪನವರನ್ನು ತನ್ನ ಅಂಕೆಯಲ್ಲಿ ಇಟ್ಟುಕೊಂಡಿದ್ದಾನೆ ಎಂಬ ಗುಲ್ಲೂ ಅಲ್ಲಲ್ಲಿ ಕೇಳಿಬಂದಿತ್ತು. ಲಕ್ಕನ ಕಿವಿಗೂ ಅ ಸುದ್ದಿ ಬಿದ್ದು 'ಅವರಿವರ ಸುದ್ದಿ ನಂಗ್ಯಾಕೆ?... ನಂಗಿರಾದೆ ನಂಗೆ ಭಾರವಾಗಿ ಕುಂತದೆ. ಅದ್ನೇಯ ನಾ ಹ್ವರನಾರೆ' ಎಂದು ಕೊಂಡಿದ್ದ.

ಅದೇನೆ ಇರಲಿ. ಅಂತೂ ಕಪನಯ್ಯನ ಸಾವಿನಿಂದ ಲಕ್ಕನ ನ್ಯಾಯ ಆ ರಾತ್ರಿ ನಡೆಯದೆ ಮುಂದಕ್ಕೆ ಹೋಗುವಂತಾಯಿತು. ಕಪನಯ್ಯನ ಕ್ರಿಯಾದಿಗಳು ಮುಗಿಯುವ ತನಕ ಆ ನ್ಯಾಯವನ್ನು ಪಂಚಾಯಿತಿದಾರರು ಎತ್ತಿಕೊಳ್ಳುವಂತಿರಲಿಲ್ಲ. ಏಕೆಂದರೆ, ನಂಜೇಗೌಡರು ಊರಿನ ಅತ್ಯಂತ ಪ್ರಮುಖ ಯಜಮಾನರುಗಳಲ್ಲಿ ಒಬ್ಬರು. ಅವರಿಲ್ಲದೆ ಊರಿನಲ್ಲಿ ಇಂಥ ಪ್ರಮುಖ ನ್ಯಾಯ ನಡೆಯುವುದಾದರೂ ಹೇಗೆ?

ಕ್ರಿಯಾದಿಗೋಳು ಮುಗಿಯೋವರ್ಗೆ, ನ್ಯಾಯದ ಇಚಾರ ಚಿಂತಿಸ್ತಾ ಕುಂತರೆ ಸುಕವೇನ? ಮುಂದೆ ಆಗೋದ್ದಕೆ ಹೆದರಿ ಈಗ್ಲೆ ಯಾಕೆ ಸಾಯಬೇಕು?– ಲಕ್ಕ ಎದೆಯ ಕಲ್ಲು ಮಾಡಿಕಂಡ. ತನ್ನೋಟಿಗೆ ತಾನು ತನ್ನ ಕೆಲ್ಸ ಕಾರ್ಯದಲ್ಲಿ ತೊಡಗ್ದ. ಬ್ಯಾರು ಯಾರೂ ಕರೀದಿದ್ರೂವೆ, ಕೇಶವಯ್ಯ ಮಾತ್ರ" ನ್ಯಾಯ ಆದಮೇಲೆ ತಪ್ಪಿತಸ್ಥ ಅಥವ ಅಲ್ಲ ಎಂದು ತೀರ್ಮಾನ ಆಗೋದು. ಅದಕ್ಕೆ ಮುನ್ನ ಅಲ್ಲವಲ್ಲ? ಕೋರ್ಟಿನಲ್ಲೂ ಹಾಗೇನೆ ತಾನೆ?... ಅಲ್ಲಿಯವರೆಗೆ ನೀನು ಸುಮ್ಮನೆ ನಮ್ಮ ತೋಟಕ್ಕೆ ಬಂದು ಅದು ಇದು ಚಿಲ್ಲರೆ ಪಲ್ಲರೆ ಕೆಲಸ ಮಾಡಿ ಹೋಗ್ತಾ ಇರು." – ಇಂಗೆ ಉರಿದುಂಬಿಸಿ ತನ್ನ ತ್ವಾಟದ ಕೆಲುಸಕ್ಕೆ ಕರೆದೊಯ್ತಾ ಇದ್ದ.

ಆ ದಿನಗೋಳಲ್ಲೂ ಕುಂದೂರಯ್ಯ ಒಂದೊಂದು ದಪ ಕುಳವಾಡಿ ಕೆಲುಸಕ್ಕೆ ತನ್ನ ಪತ್ಯಾಗಿ ಲಕ್ಕನೇ ನೇಮುಸ್ತಿದ್ದ. ಅಂತಾ ಒಂದು ಬೆಳದಿಂಗ್ಳ ನಾತ್ರೆ ಲಕ್ಕ ಕಯ್ಲಿ ಕೋಲು ಕೋಲು ಇಡುದು ಬೊಡ್ಡನ ಸಂಗಾಟ ಊರ್ನಲ್ಲಿ ಗಸ್ತು

ತಿರುಗಕ್ಕೆ ಹ್ವಂಟಿದ್ದ. ಬೆಳುದಿಂಗ್ಳು ಮನೆ ಮನ್ಯ ಮಾಡ ಹೆಂಚುಗಳ್ನೂವೆ ಬೆಳುಗಿ, ಬೀದಿಬೀದೀಲೂ ಬೆಳ್ಳಿಯಗಿ ಹಾಸಿಕಂಡಿತ್ತು. ಲಕ್ಕ ಚಿಕ್ಕೀರಮ್ನ ಮನೆ ಮುಂದ್ಕೆ ಬಂದಾಗ ಇಂದ್ಕೆ ಆ ಮನೆ ವಳುಗಡೆ ನಡದ ಒಂದು ಪರಸಂಗ ನೆಪ್ಪಾಯ್ತು.

ಆಗ ತನಗಿನ್ನೂ ಎಳೆವಯಸ. ಇಂಗೇ ಗಸ್ತು ತಿರುಗಕ್ಕೆ ತನ್ನ ದೊಡ್ಡಯ್ಯ ಕಳುಸಿದ್ದ. ಅವತ್ತೂವೆ ಇಂಗೇನೆ ಹಾಲು ಚೆಲ್ಲಿದಂಗಿರೊ ಬೆಳುದಿಂಗ್ಲು. ಅವ್ರ ಮನೆ ಅತ್ರಕ್ಕೆ ಬತ್ತಿದ್ದಂಗೆ ಉಚ್ಚೆ ಉಯ್ಯಕ್ಕೆ ಅವಸರಾಯ್ತು. ಚಿಕ್ಕೀರಮ್ನ ಮನೆಗೂ ಕಾಡಯ್ಯ ಮನೆಗೂ ನಡುತಾವಳ ಸೊಂಪಲ್ನಲ್ಲಿ ವೋಗಿ ಕುಂತ... ಆಗ, ಅವಳ ಅಟ್ಟಿ ವಳುಗಡಿಂದ–

"ವಪ್ಪುಗಮ್ಮಿ. ಸಾಯೊ ವೊತ್ನಲ್ಲಿ ಯಾಕಿಂಗೆ ಹಟ ಮಾಡೀಯೆ?... ಸುಮ್ಮಕೆ ವಪ್ಪುಕೊ." ಮಾತು ಕೇಳಿಸಿ, ಅಲ್ಲೇನು ನಡೀತಾ ಅದೆ ತಿಳುಕೋಬೇಕು ಅನ್ನೊ ಮನಸಾಗಿ, ಜಟಜಟ್ನೆ ಮುಗುಸಿ ಎದ್ದ.

ಚಿಕ್ಕೀರಮ್ನ ಅಟ್ಟಿ ಮಣ್ಣಿನ ಗ್ವಾಡೇಯ ಸೂರಿನವರ್ಗೂ ಆಕಿರನಿಲ್ಲ. ಕಾಡಯ್ನ ಅಟ್ಟಿ ಗ್ವಾಡೆ ಕಡೀಕೆ ಸೈಜುಕಲ್ಲು ರಾಸೀಲಿ ಏಡು ಕಲ್ಲೆತ್ತಿ, ಅವ್ನ ಗ್ವಾಡೆಗೆ ವರುಗಿಸ್ದಂಗೆ ಒಂದರಮ್ಯಾಲೊಂದ ಇರುಸಿ, ಅದರ ಮ್ಯಾಕೆ ಹತ್ತಿ ನಿಂತು, ಆ ವೋಟು ಗ್ವಾಡೆ ವಳೀಕೆ ಇಣುಕಿ ನ್ವಾಡ್ದ. ನ್ವಾಡನ್ವಾಡ್ತಿದ್ದಂಗೆ ಲೋಕದಾಗೆ ಇಂಗೂ ಉಂಟ?' ಅಂತ ಲಕ್ಕ ಬೆರುಗಾದ!

ಬರೀ ಚಕ್ಕಳ ಮೂಲೆ ಮನಗಿದಂಗೆ ಚಿಕ್ಕೀರಮ್ಮ ಹಾಸಿಗ್ಗೆ ಅಂಟಿ ಬಿದ್ದಿದ್ಲು. ಹಿಂದಲಟ್ಟಿ ಬೆಟ್ಟಯ್ಯ ಎಲ್ಡಕ್ಕೆ ವೋಗೋನ ತರ ಕುಕ್ಕುರುಗಾಲ್ನಲ್ಲಿ ಕುಂತಿದ್ದ. ಅವನ ಕಯ್ಲಿ ಒಂದು ಕಡ್ಡಿ. ಆ ಕಡ್ಡತುದಿಗೆ ಗಾಡಿಕಪ್ಪು ಇನ್ನೊಂದು ಕಯ್ಯಾಗೆ ಒಂದು ಪತ್ರ ಇದ್ದಂಗಿತ್ತು.

"ಈ ಪತ್ರಕ್ಕೆ ನಿನ್ನ ಹೆಬ್ಬೆಟ್ಟೊತ್ತು. ಎಂಗಿದ್ರೂವೆ ನಿಂಗೆ ಮಕ್ಕಳಿಲ್ಲ. ಮರಿಲ್ಲ. ಜ್ವತ್ಗೆ ನಿನ್ನ ಗಂಡಸತ್ತ ಮ್ಯಾಗೆ ಉದ್ದಕ್ಕೂ ನಾನೇ ತಾನೇಯ ನಿನ್ನ ಕಸ್ಟ ಸುಕ, ನಿನ್ನ ಯವಾರ ಯೆಲ್ಲಾನು ಅನುಬೋಗಿಸ್ತ ಬಂದಿರಾದು?... ಇಂಗೆ ಅನುಬೋಗಿಸ್ದ ಮ್ಯಾಗೆ ನಾನೆ ತಾನೇಯ ನಿನ್ ಆಸ್ತಿಗೆ ಹಕ್ಕುದಾರ?..."

ಬೆಟ್ಟಯ್ಯ ಕುಂತಿದ್ದ ವರುಸೆ ಇಂದುಕೆ ಕಾಡ್ನಲ್ಲಿ ರಣದ್ದುಗಳು ಹೆಣದ ಮ್ಯಾಲೆ ಎರಗಕ್ಕೆ ಕಾಯ್ತಾ ಕುಂತಂಗಿತ್ತು!

"ನನ್ನ...ತ ತಂ...ಗಿ...ಮೊಗ...ದ–ತ್ತು..." ಕಣ್ಣು ಮುಚ್ಚಿಕಂಡು ಬೆಟ್ಟಯ್ನ ಮಾತ ಕೇಳ್ತಿದ್ದ ಚಿಕ್ಕೀರಮ್ಮ ಬೋ ಕಸ್ತಿನಿಂದ ತೊದಲಿದ್ಲು.

"ದತ್ತು, ದತ್ತು, ದತ್ತು! ವೋಟೂತ್ನಿಂದ ಇದೇ ರಾಮಾಣ್ಯ ಹಾಡ್ತ

ಇದ್ದೀಯಲ್ಲೆ, ಚಿಕ್ಕೀರಿ?... ಸುಮ್ಮಕೆ ನನ್ನ ಮಾತು ಕ್ಯಾಳು. ನಿನ್ನ ಹೆಬ್ಬೆಟ್ಗೆ ಈ ಗಾಡಿ ಕಪ್ಪ ಹತ್ತಿಸ್ತೀನಿ. ಅದ್ನ ಈ ಕ್ರಯಪತ್ರಕ್ಕೆ ವತ್ತಿಬುಡು. ಆಮ್ಯಾಕೆ ನಿರುಂಬಳಾಗಿ ನೀನು ಕಣ್ಣು ಮುಚ್ಚಿಕೊಬ್ಯೆದು..."

ಚಿಕ್ಕೀರಮ್ಮ ಮಾತಿಲ್ದೆ ಬಿದ್ದಿದ್ಲು.

ಬೆಟ್ಟಯ್ಯ ರಣದ್ದಿನ ಅಂಗೇಯ ತಟಕ್ನೆ ಚಿಗುದು ಹೆಣದಂಗೆ ಕಣ್ಮುಚ್ಚಿ ಬಿದ್ದಿದ್ದ ಚಿಕ್ಕೀರಮ್ಮ ಕಯ್ಯ ಇಡುದು, ಹೆಬ್ಬೆಟ್ಗೆ ತನ್ನ ಕೈ ಕಡ್ಡಿಯಿಂದ ಗಾಡಿ ಕಪ್ಪ ಬಳಿಯಕ್ಕೊದ. ಸೆಡಾರ್ನೆ ಚಿಕ್ಕೀರಮ್ಮ ಕಯ್ಯ ಕಿತ್ತುಗಂಡಾಗ, ಬೆಟ್ಟಯ್ನು ಜ್ವತ್ಗೆ ಲಕ್ಕಂಗೂ ಬೆಚ್ಚಿಬಿದ್ದ!

ಇಲ್ಲೀಗಂಟ ಗಡಸಾಗಿ ಚಿಕ್ಕೀರಮ್ನ ಆಸ್ತಿ ತನ್ನ ಹಕ್ಕು ಅನ್ನೋನಂಗೆ ಮಾತಾಡ್ತಿದ್ದ ಬೆಟ್ಟಯ್ಯ, ಚಿಕ್ಕೀರಮ್ಮ ಕೋಸಾರ್ನ ಕಯ್ಯ ಕಿತ್ತುಗಂಡದ್ದ ಕಂಡು ಮೆತ್ತಗಾಗಿ, ಗ್ವಾಗರಿಯಕ್ಕೆ ಮುಟ್ಟಿಕಂಡ.

"ನಂಗೂವೆ ನೀ ಕಂಡಂಗೆ ನಾಕು ಗಂಡು ಮಕ್ಕಳು ನನ್ನ ಇರೊ ಆಸ್ತಿನೆಲ್ಲ ಹಂಚಿದ್ರೂವೆ, ಅವ್ರು ಒಬ್ಬೊಬ್ಬರಿಗೆ ಸಿಕ್ಕೋದು ಕಡೀಕೆ ಪಿಂಚುಪಿಡಯೇ...ಆಮ್ಯಾಕೆ ನಂಗೂ ನನೆಡತೀಗೂ ಉಳಿಯೋದೇನ?– ಲೋಳಲೊಟ್ಟೆ! ವೋಟೇಯ..."

ಚಿಕ್ಕೀರಮ್ಮ ಕಣ್ಣುರೆಪ್ಪೆ ಎಳಕಂಡು ಕೊಂಟು ಬಿದ್ದಂಗೆ ಬಿದ್ದೇ ಇದ್ಲು.

"ಚಿಕ್ಕೀರಿ–ಇದ್ಯಾಕೆ?... ವಪ್ಪುಕಳೆ... ವಪ್ಪುಕಮ್ಮಿ... ನಾ ನಿಂಗೆ ಏಟು ತೋರ ಸುಕ ಉಣುಸಿವ್ನಿ..." ಬೆಟ್ಟಯ್ಯ ಅವಳ ಕೆನ್ನೆಗಳ ಇಡುಕಂಡು ಆ ಕಡೀಂದ ಈ ಕಡೀಕೆ ಅಳ್ಳಾಡಿಸ್ದ. ಅವಳ ಕುತ್ತಿಗೆ ಯಾವ ಕಡೀಕೆ ಎಳುದ್ರೆ ಆ ಕಡೀಕೆ ಬಂದು, ಅಂಗೇ ಒಂದ್ನಲ ತಪ್ಪಕ್ಕಂತ ಬಿದ್ದುಕತ್ತು... ಕತ್ತು ಯಾವಾಗ ವಕ್ಕಡೀಕೆ ಬಿತ್ತೊ ಬೆಟ್ಟಯ್ಯ ಬೆಚ್ಚೋದ... ಅವಳ ಆಣೆ ಮುಟ್ಟಿ ನ್ವಾಡ್ದ. ಕಯ್ಯಿ ಕಾಲು ಮುಟ್ಟಿನ್ವಾಡ್ದ – ಎಲ್ಲಾ ಕಡೇನೂವೆ ತಣ್ಣಗಾಗಿರಬೇಕು!... ಮುಂದು ಕೇನಪ್ಪ ಮಾಡೋದೂಂತ ಅಣೆ ಗಟ್ಟಿಸಿಕೊತ್ತ ಅಲ್ಲಿಂದೆದ್ದ. ಎದ್ದು ಬೀದಿ ಬಾಗಿಲ ಗಂಟೆವೋದ–ಹ್ವರೀಕೆ ಯಾರಾರು ಇದ್ದಾರೆ? ಅಂತ ವಸಿ ವೊತ್ತು ಕದಕ್ಕೆ ಕಿವಿ ಕ್ವಟ್ಟುಗಂಡೇ ನಿಂತಿದ್ದ. ಯಾರೂ ಇಲ್ಲ ಅನ್ನೋದ ಗಟ್ಟಿ ಮಾಡಿ ತರ್ದೂದಾಗಿ ಇಂದುಕೆ ಬಂದು ಅವಳ ಎಡದಾ ಹೆಬ್ಬೆಟ್ಗೆ ಕಡ್ಡೀಲಿದ್ದ ಗಾಡಿ ಕಪ್ಪ ಬೊಳುದು. ಆ ಸಮಯಕ್ಕೆ ಸರ್‍ಯಾಗಿ ನಡುಮನೆ ಗ್ವಾಡಿಂದ ಒಂದು ಕರೀಕೊತ್ತಿ ಅವ್ನ ಇಂದುಗಡಿಂದ ನೆಗೀತು!... ಜೀವ ಹ್ವಂಟೇ ವೋಯ್ತು ಅಂದಂಗೆ ಬೆಟ್ಟಯ್ನು ಮೊಖ ಬಿಳಿಚಿಕುತ್ತು. ಜೀವನ ಒಂದು ಕಯ್ಲಿ ಇಡಕಂಡು ಪುಕ್ಕಪುಕ್ಲಾಗಿ ಇಂದುಕೆ ತಿರುಗಿ ನ್ವಾಡ್ದ...

ಅದು ಮಿಯಾವ್ ಅಂದಮ್ಯಾಲೆ ಅದು ಕೊತ್ತಿ ಅನ್ನೋದು ಖಾತ್ರಿ ಆಗಿ, ಹ್ವಂಟೋಗಿದ್ದ ಜೀವ ಮರಳಿ ಬಂದಿತ್ತು!... "ಇದರ ಅಮ್ಮನ್ನಾ" ಬಯ್ಯಿಕತ್ತ, ಮತ್ತೆ ಕಪ್ಪ ಬೊಳುದಿದ್ದ ಅವಳ ಹೆಬ್ಬೆಟ್ಟ ತಕ್ಕಂಡು ಕ್ರಯಪತ್ರಕ್ಕೆ ಅದು ವತ್ತಿಸೇಬುಟ್ಟ!... ಕದ್ದು ಕದ್ದು ಇದ್ನೆಲ್ಲ ಸಾಕ್ಸಿಯಾಗಿ ನ್ವಾಡ್ತ ನಿಂತಿದ್ದ ಲಕ್ಕ ಆವಯ್ಯ ತಾಟಕತನಕೆ ಬೆರುಗಾಗಿ, 'ಇಂಗೂ ಉಂಟ?–ಸತ್ತ ಹೆಣದ ಕಯ್ಯಲೂವೆ ರುಜ ಆಕಿಸಿಕಂಡನಲ್ಲ?... ಈಪಾಟಿ ಆಸೆ ಇರೋನು, ಇನ್ನೊಬ್ರ ಕತ್ತು ಮಿಸುಗಕ್ಕೆ ತಾನೆ ಹೇಸಾನೆ?' ಅಂದುಕಂಡ...

ಆದ್ರೆ ಇದೇ ಇಚಾರದಲ್ಲಿ ಪಂಚಾತಿ ಸೇರಿದಾಗ, ತಾನು ಕಂಡದ್ದ ಯೋಳಕ್ಕೆ ಲಕ್ಕ ಹೆದರಿ ಹಿಂದೇಟು ಆಕಿದ್ದ. ಬೀದ್ಯಾಗೆ ವೋಗೊ ಮಾರಿ, ಅವರ ತಂಟೆ ನಂಗ್ಯಾಕೆ?– ಅಂತ ಬಾಯಿಗೆ ಬೀಗ ಆಕ್ಕಂಡಿದ್ದ. ಇದ್ರಿಂದ, ಪಂಚಾತೀಲಿ ತಕರಾರು ಹೂಡ್ದ ಚಿಕ್ಕೀರಮ್ನ ನೆಂಟರ ಇರುದ್ದ ಬೆಟ್ಟಯ್ಯ ಗೆಲ್ಲಕ್ಕೆ ಅನುಕೂಲಾಯ್ತು...

ಈಗ್ಲೂವೆ ಈ ಇಚಾರ ಗ್ಯಾಪಕ ಬಂದು 'ಥೂ... ಯೆಂತಾ ಹೇಡಿಯಾ ನಾನು?'– ತನ್ನನ್ನು ತಾನೇ ಲಕ್ಕ ಹಳಿದುಕೊಂಡ. 'ಒಂದು ಪಕ್ಕಸ ನಾ ಯೋಳಿದ್ರೂವೆ' ಆ ಉತ್ತುಮರ ಪಂಚಾತೀಲಿ, ನಾ ಯಾವೂರ ಹಾಳೇಂತ ನನ್ನ ಮಾತ ಲೆಕ್ಕಕ್ಕೆ ತಕ್ಕತ್ತಿದ್ರು?... ಬೆಟ್ಟಯ್ನಗೆ ಆಗದೆ ಇದ್ದೋರು ಈ ಹೈದಂಗೆ ದುಡ್ಡು ಕ್ವಟ್ಟು, ಇಲ್ಲ ಹೆದುರ್‍ಸಿ ಬೆದುರ್‍ಸಿ, ಈ ಹೈದ್ನಿಂದ ಸುಳ್ಳುಸಾಕ್ಸಿ ಯೋಳಿಸ್ತಾ ಅವರೇಂತ ತಳ್ಳಾಕೋರು!... ಅಂತಾನು ಅನ್ನುಸ್ತು...

ಇದೇ ಯೋಚ್ನೇಲಿ ಕಾಡಯ್ನ ಅಟ್ಟಿ ಮುಂಚೋರಿ ಬಂದಿದ್ದ ಲಕ್ಕ. ಆಗ್ಲೂ ಈಗ್ಲೂ ಬಹಳೋಟು ಕಾಲ ಕಳದೋಗಿದ್ರೂವೆ, ಆ ಜಾಗಕ್ಕೆ ಬಂದ ಕೂಡ್ಲೆ ಬೆಟ್ಟಯ್ಯನ ನಡುಸ್ತ ಅನ್ಯಾಯವೆ ಅವ್ನ ತಲೆಯ ತುಂಬಿಕತ್ತು. ಅವ್ನಿಗೆ ಕಾಡಯ್ಯನ ಅಟ್ಟಿಂದ ಆಗತಾನೆ ಬೂಮಿಗೆ ಪತನಾವದ ಕೂಸು ಗಾರ್‌ಗಾರ್ ಅತ್ತದ್ದು ಕೇಳಿಸ್ನೇ ಇಲ್ಲ!... ಕಾಡಯ್ಯನ ಅಟ್ಟಿ ಮುಂಚೋರಿಂದ ಈಚೆಗೆ ಕಡದ ಬುಂಡಮ್ಮ ಮಾತ್ರ ಕಣ್ಣಿಗೆ ಬಿದ್ರು,

"ಇದೆನ ಬುಂಡಮ್ಮಾರೆ– ಈಟೋತ್ನಲ್ಲಿ... ನೀವಿಲ್ಲಿ?..." ಕೇಳಿದ.

"ಕಾಡಯ್ನ ಏಡನೆ ಸೊಸೆ ಪುಟ್ಟನಂಜಿ ಇಲ್ವ–ಜಾಬಗೆರೆಯೋಳು– ಅವಳ್ದು ಕನ್ವೆರಿಗೆ. ವಸಿ ಕಸ್ತಾಯ್ತು. ಹೆರಿಗೆ ಮಾಡಿಸಕ್ಕೆ ನಂಗೆ ಯೋಳಿ ಕಳಿದ್ರು." ಎಲಡಿಕೆ ಜಗೀತ, ಹೊಗೆಸೊಪ್ನ ಒಂದೆಸಲ ಇಮ್ಮಣಿಚೀಲದಿಂದ ತಗದು ಬಾಯಿಗೆಸೆಗೊತ್ತ ಬುಂಡಮ್ಮಾರು ಯೋಳಿದ್ರು.

"ಮೊಗ ಗಂಡೊ, ಎಣ್ಣೊ–ಬುಂಡಮ್ಮಾರೆ?"– ಸುಮ್ಮಕೆ ಕೇಳಿದ ಲಕ್ಕ.

“ಎಣ್ಣು ಕನ್ಲ... ಹಯ್ಯೊ, ಆ ಕತೆ ಯಾನು ಯೋಳ್ಲಿ? ಉಟ್ಟಿದ ಮೊಗಾವ ತೊಳುದು ಬೊಳುದು ಮೊರದಲ್ಲಿ ಮನಗಿಸಿ ಅವಳ ಮುಂದಕೆ ತಕ್ಕಂಡೋಗಿ ಇಡುದ್ರೆ, ಮೊಗ ಎಣ್ಣು ಅಂತ ತಿಳೂದು ಕೂಡ್ಲೇಯ ಆ ಗೆಣಕಾತಿ ಪುಟ್ಟನಂಜಿ ಗಂಡು ಉಟ್ಟನಿಲ್ಲಾಂತ ಆ ಕೂಸ ನ್ವಾಡ್ದೆ, ತನ್ನ ಮೊಖವ ಆಚೋರಿಕೆ ತಿರುಗಿಸಿ ಬುಡೋದ?... ಅವಳೋಗ್ಲಿ ಅಂದ್ರೆ ಗಂಡ, ಆ ಹಲ್ಲುಬೀರ–ಮರಿಸೋಮಿ–ಅವನ ಅವ್ವನ ಜ್ವತ್ಗೆ ಅವನೂ ಕುಂತು ಅಟ್ಟೀಲಿ ಯಾರೊ ಸತ್ತೋದ್ರು ಅನ್ನೊವಂಗೆ ಗೋಳೋಂತ ಆಳೋದ?... ಎಂಗಸ್ರು ಮೋಗ್ಲಿ. ಈ ಗಂಡಸಿಗೇನು ರೋಗವ ಬಂದಿರಾದು ಅಂತೀನಿ?... ಅಟ್ಟೀಲಿ ಎಣ್ಣು ಉಟ್ಟಿದ್ರೆ ಗೋಳುಗರೀತಾರೆ. ಅದೇ ಎಣ್ಣು ಬೆಳದು ದೊಡ್ಡೋಳಾದ್ರೆ, ಊರಿನ ಗಂಡಸರೆಲ್ಲ ಅವಳ ಕಣ್ಣಲ್ಲೆ ತಬ್ಬಕಂಡು ಮುದ್ದಾಡ್ತಾರೆ!... ಇವರ ದುಂಡಗೆ ದುಡುದುನ ಕಟ್ಟ!...”

ಬುಂಡಮ್ಮ ಇವರಿಸ್ತಿದ್ದ ಅಂಗೆ ಗಂಗಪ್ಪನೂ ನಂಜೇಗೌಡನೂವೆ ಅವರ ಎದುರುಗಡಿಂದ ಬಂದು ಅವರಿಬ್ರ ಬಾಜೂನಲ್ಲೆ ಹಾದೋದರು. ಬುಂಡಮ್ಮಾರು ಅಂದದ್ದು ಅವರಿಬ್ಬರ್ಗೂ ಕೇಳಿಸಿರಬೇಕು. ಕೇಳಿಸ್ತೂಂತ ತೊಳ್ಳೆ ನಡುಗೊ ಜೀವವ ಬುಂಡಮ್ಮಾರ್ದು?... ಕಡ್ಡಿ ತುಂಡಾದಂಗೆ ನ್ಯಾಯ ಆಡ್ತಿದ್ದ ಬುಂಡಮ್ಮಾರ ಮಾತಿಗೆ ಊರಿನೋರೆಲ್ಲ ಹೆದುರ್ತಿದ್ದರು!.... ಅದುಕೇನೆ ಗಂಗಪ್ಪ, ನಂಜೇಗೌಡ ಇಬ್ಬರೂವೆ ಕೇಳಿದರೂ ಕೇಳಿಸ್ದೇ ಇದ್ದೋರಂಗೆ ತಲೆ ಬೊಗ್ಗಿಸಿ ಹ್ವಂಟೋದ್ರು!

ಬುಂಡಮ್ಮಾರು ಲಕ್ಕ ಇಬ್ಬರೂವೆ ಮಾಳದಲ್ಲಿ ಮಾತಾಡ್ತಿದ್ದಂಗೆ, ಊರ್ನ ಪಡ್ಡೆ ಹೈಕಳು ಗುಂಪುಗಾಡಿ ಕೋಲು ಆಕಕ್ಕೆ ಸುರು ಮಾಡಿದ್ರು... ಲಕ್ಕಂಗೆ–ಬೆಟ್ಟಯ್ಯ ಸತ್ತ ಹೆಣದ ಕಯ್ಲಿ ಕ್ರಯಪತ್ರಕ್ಕೆ ರುಜು ಆಕಿದ್ದ ನಾತ್ರೇನೂವೆ ಇಂಗೇ ಬೆಳುದಿಂಗಳಲ್ಲಿ ಊರ್ನ ಪಡ್ಡೆ ಹೈಕಳು ಗುಂಪಾಗಿ ಕೋಲು ಆಕ್ತ ಇದ್ದದ್ದು ನೆಪ್ಪಾಯ್ತು...

ಬುಂಡಮ್ಮಾರು ವಸಿ ಸಮ್ಮ ಆ ಹೈಕಳು ಕೋಲಾಕೋಡ್ನೆ ನ್ವಾಡ್ತ ಇದ್ದೋರು–

“ಇವರು ಕೋಲು ಆಕೋದು ನಂಗೆ ಇಡೀನಿಲ್ಲ ಕನ್ನ ಲಕ್ಕ. ಇವಕ್ಕೆ ಪ್ರತುಮಾಡಿ ಎಜ್ಜೆ ಆಕಕ್ಕೆ ಬರಕ್ಕಿಲ್ಲ. ನಮ್ಮ ಕಾಲದೋರು ಕೋಲು ಹುಯ್ಯೋದು ನ್ವಾಡಕ್ಕೇ ಒಂದು ಚೆಂದ. ಆ ನ್ವಾಟ ನ್ವಾಡಕ್ಕೆ ಜನ ಎಂಗೆ ಫೇರಾಯಿಸ್ತಿದ್ರು ಗ್ವತ್ತೇನ್ಲ?... ಇವತ್ತು ಅಲ್ಲೊಬ್ರು ಇಲ್ಲೊಬ್ರು ತೆಳ್ಳತೆಳ್ಳಗೆ ನಿಂತವ್ರಲ್ಲ–ಇಂಗೇಂತ ತಿಳುಕಂಡ್ಯ?...” ಅಂತ ಇಂದಿನ ದಿನಗೊಳ ಸ್ಮರಿಸುದ್ರು.

"ನೀವು ಯೋಳಿದ್ದು ಸಾಜ" ಅಂತ ವಪ್ಪಿ, "ಇನ್ನೂ ವಸಿ ಕೇರಿಗಳು ಉಳಕಂಡವೆ. ಗಸ್ತು ಹ್ವಡೀಬೇಕು, ಬತ್ತೀನಿ" ಅಂದು. ಲಕ್ಕ ಅಲ್ಲಿಂದ ಎಚ್ಚೆ ಕಿತ್ತ.

ತನ್ನ ಸೊಸೆ ಆ ಕಂಚುಗಾರ ಸಾಬಿಯ ಜ್ವತ್ಗೆ ಓಡೋದಾಗಿನಿಂದ ಲಕ್ಕ ಆ ಹಾರುತಿ ಅಟ್ಟಿಗೆ ವೋಯ್ತಿದ್ದದ್ದು ಸರಿ ಕಾಣ್ತೀರನಿಲ್ಲ, ಬುಂಡಮ್ಮಗೆ. ಅವನಿಗೂ ಒಂದೇರಡು ಬಾರಿ ಯೋಳಿಯೂ ಇದ್ಲು. ಆದರೆ ಲಕ್ಕ ಅವಳ ಬುದ್ಧವಾದವ ಜೀವಣಿಸಿರನಿಲ್ಲ. ಆತಂಕ ತುಂಬ್ದ ನ್ವಾಟವ ಅವನತ್ತ ಬೀರಿ" ಹಿಂದಿನ ಮಟದಯ್ಯನೋರು ಇದ್ರಾರೂವೆ, ತಾವೆ ಸೊಂತ ಪಂಚಾತಿ ಕಟ್ಟೇಲಿ ಖುದ್ದಾಗಿ ಕುಂತು, ಯಾವ ನ್ಯಾಯಾನೂವೆ ದರುಮಾಗಿ ತೀರುಮಾನ ಮಾಡೋರು. ಈಗ್ನ ಅಯ್ನೋರ ಚರ್ಯೇನೆ ಬ್ಯಾರೆ. ಪೂಜೆ ಪುಣಸ್ಕಾರ ಅಂದ್ಕಂಡು ಯಾವ ಯೇಟಿಗೂ ಸಿಕ್ಕಕ್ಕಿಲ್ಲ!... ಆಯ್ತು ಈಗೇನ ಮಾಡಾದು?– ಅನುಬೋಗಿಸನೇ ಬೇಕು" ಎಂದು ಕೊರಗಿದಳು.

ಅಲ್ಲಿಂದ ಹ್ವಂಟ ಲಕ್ಕ ಊರ್ನ ಉಳಿಕೆ ಕೇರಿಗಳ್ನೂ ಬಳಸಿ ವೊಲಗೇರಿ ಸೇರಿದಾಗ ಮಿಕ್ಕೆಲ್ಲ ಇಸ್ಯಗಳಿಂಗಿತಲೂವೆ ಕುರುವಿನ ಸೆಟ್ಟಿ ರಂಗಯ್ಯನ ಅಟ್ಟಿಯ ಮಗ್ಗದ ಲಾಳಿ ಆಡುವ ಸದ್ದೇ ಅವ್ನ ತಲೇಲಿ 'ಮುಂದ್ಕೇನು?– ಮುಂದ್ಕೇನು...?' ಅನ್ನೊ ಚಿಂತ್ಯ ಲಾಳಿ ಒಂದೇ ಸಮಕೆ ಆಡ್ತಾನೆ ಇತ್ತು.

ಎಂದಿನಂಗೆ ವೊಲಗೇರಿಯ ಮುಂಚೋರಿ ಎಂಗಸ್ರು ಕುಂತು ಚಾಪೆ ಎಣೀತಿದ್ರು. ಬೆಳುದಿಂಗ್ಳು ಅವರ ಮ್ಯಾಲೆಲ್ಲ ಚೆಲ್ಲಾಡ್ತಿತ್ತು. ಚಾಪೆ ಹೆಣೀತ ಆ ಸುದ್ದಿ ಈ ಸುದ್ದಿ ಯೆಲ್ಲಾನೂವೆ ಗುಡ್ಡೆ ಆಕ್ಕಂಡು ಹಕಳೆ ವೋಡೀತಿದ್ರು. ಎಂದಿನಂಗೆ ದೇವಜಮ್ಮ ತುಂಟಾಟ ಅಡ್ತ.

"ಚಾಪೆ ಹೆಣೀದೆ ಕುಂತು ಅಲ್ಲೇನು ಮಾಡಿ ಎದ್ದು ಬಾರ್ಲ. "– ಲಕ್ಕನನ್ನ ಕರದೇ ಕರದ್ಲು.

"ಇವೊತ್ತು ಆಗಕ್ಕಿಲ್ಲ." ಅಂತ ಲಕ್ಕ ಅಂದುದಕೆ,

"ಹೊಳೆ ಹಾದಾಯ್ತು. ಮುಕುಳಿ ತ್ವಳುದಾಯ್ತು. ಹೊಳೆ ಹಾಯೋವಾಗ ಎತ್ತಿಕಂಡಿದ್ದ ಸ್ಯಾಲೇಯ ಈಗ ಮುಚ್ಚಿಕಂಡ್ರೆ ಯಾವ ಸಪಲವ?... ಬಂದದ್ದೆಲ್ಲ ಬರ್ಲಿ, ಎದ್ದು ಬಾರ್ಲ– ಆದಂಗಾಯ್ತದೆ ಮಾದಪ್ಪನ ಜಾತ್ರೆ..." ಅಂತ ದ್ಯಾವಾಜಮ್ಮ ಮಾತ ಜೋಡಿಸಿದ್ಲು.

ದ್ಯಾವಾಜಿ ಮಾತು ಕೇಳಿದ್ರೂವೆ ಕೇಳದೆ ಇದ್ದೋನಂಗೆ ಲಕ್ಕ ಕಲ್ಲಿನಮ್ಯಾಗೆ ಕಲ್ಲಾಗಿ ಕುಂತೇ ಇದ್ದ. ಮುಂದ್ಕೇನು, ಮುಂದ್ಕೇನು ಅನ್ನೊ ಚಿಂತೆ ಅವ್ನ ಅಂತರಾಳದಾಗೆ ಹ್ವಡೀತ್ಲೇ ಇತ್ತು. ಬೊಡ್ಡ ಅವ್ನ ಕಾಲ ಬಳಿ ಕುಂತು ಅವನ

ಪಾದವ ನೆಕ್ತಾ ಇತ್ತು. ತನ್ನ ಈಟು ತೀವ್ರಾಗಿ ಬಾದಿಸ್ತಿದ್ದ ಚಿಂತ್ಯ ಮರೆಯಕ್ಕೆ ಲಕ್ಕನ ವ್ಯಗ್ರಾದ ಮನಸು ಬ್ಯಾರೊಂದು ದಿಕ್ಕಿನಾಗೆ ಅರೀತು...

ಊರ್ನ ಉತ್ತಮರೆಲ್ಲ ನ್ಯಾಯ ಮಾಡಿ ನಂಗೆ ಯಾವ ಸಿಕ್ಸೆ ಕ್ವಡ್ತಾರೊ?... ರುಕ್ಮಿಣವ್ವಂಗೆ ಆ ಹಾರುವರೆಲ್ಲಾರು ಪಂಚಾತಿ ಮಾಡಿ ಅದೇನು ಫಜೀತಿ ಮಾಡ್ತಾರೋ?... ದ್ಯಾವರು ಅದ್ಯಾಕೆ ಅವರ್ಗೆ ಆ ಬುದ್ದ ಕ್ವಟ್ಟ?... ನಮ್ಮವ್ವನೂ ಸಿವುನಿಯೂವೆ ಚಾಪೆ ಹೆಣೆಯಕ್ಕೆ ಬರದೆ ಗುಡ್ಲಾಗೆ ಬಿದ್ಕಂಡು ಸೋಕ ಮಾಡ್ತಿರಬ್ಯೆದು!... ರಾಚನ ಸರಾಪಿನ ಅಂಗಡೀಲಿ ನಮ್ಮಯ್ಯ ತನ್ನ ಯತೆ ಮರೆಯಕ್ಕೆ ಇನ್ನೂ ಏಡು ಬುಂಡೆ ಜಾಸ್ತಿ ಕುಡುದು ಆಳ್ತಾ ಬಿದ್ದಿರಬ್ಯೆದು!... ಮಠದ ಸಿವಪಾದಪ್ನೋರು ತಮ್ಮ ಭಕ್ತರ್ನ ಕುಂಡರಿಸಿಕಂಡು ಸರಣರ ಇಚಾರಾಗಿ ಉಪದೇಸ ಮಾಡ್ತಿದ್ದದ್ದು ಮಠದ ಬೀದೀಲಿ ಬಂದಾಗ ನಂಗೇ ಕಾಣಿಸ್ತಲ್ಲ! – ಆದ್ರೆ, ಅಲ್ಲಿ ನಂಜೇಗೌಡರೆ ಕಾಣ್ನಿಲ್ಲ. ಸೊತಕ ಅಂತ ತಮ್ಮ ಅಟ್ಟೀಲೇ ಇರಬ್ಯೆದು... ಕುಂಬಾರಗೇರೀಲಿ ತಾನು ಬತ್ತಾ ಇರಬೇಕಾರೆ, ಅಲ್ಲಿ ಮಾರಾಮಾರಿ ಕದ್ನ ಹಕ್ಕಳ ಮಾತ್ಗೆ ಸುರು ಆದ್ದು. ಗೆಜ್ಜುಗ ಆಡುವಾಗ ಮಾದಸೆಟ್ಟಿ ಹೈದ, ಗುಜ್ಜಸೆಟ್ಟಿ ಹೈದ್ನ ನೂಕುದನಂತೆ. ಬಿದ್ದು ಅದರ ಮಂಡಿ ಮೊಣಕಯ್ಲೆಲ್ಲ ರಕ್ತ ಬಸೀತಂತೆ. ಅವೇಡು ಹಕ್ಕಳ ಅವ್ವದೀರು ಮುಂದಲೆ ಇಡುಕಂಡು ಜಗ್ಗಾಡಿದ್ರಂತೆ. ಆಮ್ಯಾಕೆ ಅವರಿಬ್ರ ಗಂಡದೀರೂ ಮೆಚ್ಚು ಕುಯ್ಯಗತ್ತಿ ಕತ್ಕಂಡು ರಣರಂಗ ಮಾಡಿ ನಿಂತಿದ್ದದ್ದ, ತಾನೂ ವಕ್ಕಡೀಕೆ ನ್ವಾಡ್ತಿದ್ದ. ಈ ಜಗಳ ಬುಡುಸಿ ಸಮಾದಾನ್ಕೆ ತರಬೇಕಾರೆ ಕುಂಬಾರಗೇರಿ ಯಜಮಾನ್ರಿಗೆ ತುಟಿಗಟ್ಟಾಯ್ತು...

ಲಕ್ಕನ ಯೋಚ್ನೆ ಇಂಗೆ ಅರೀತ ಇರ್ವಾಗ, ದ್ಯಾವಾಜಿ ಯಾವುದೊ ಮಾತಾಡ್ತ ಆಡ್ತ,

"ಈ ಊರ್ನ ಆದ್ಯಾವ ನಕ್ಸತ್ರದಾಗೆ ಉಟ್ಟಾಕಿದ್ರೊ ಹಿಂದನೂರು!... ಅವ್ವಿ, ಅವ್ವಿ, ಅವ್ವಿ, ಒಂದು ಜಿನ ಆದ್ರೂವೆ ತಪ್ಪದೇ ಇಲ್ಲ, ಈ ಊರ್ನಲ್ಲಿ!... ಇವೊತ್ತು ಈ ಕೇರೀಲಿ ಆದ್ರೆ, ನಾಳೀಕೆ ಇನ್ನೊಮದು ಕೇರೀಗೆ ಸುತ್ತುಗತ್ತದೆ! ಯಾರೂವೆ ನಿರುಂಬಳಾಗಿ ಇರುವಂಗೇ ಇಲ್ಲ. ನೆರೆ ಕೆಟ್ಟರೆ ಕರ ಕಟ್ಟಿವಿ ಅನ್ನೊ ಜನವೆ ಊರು ತುಂಬ!– ಇಂಗಿರ್ವಾಗ ನಿರುಂಬಳಾಗಿ ಇರಾದಾದ್ರು ಎಂಗೆ?..."– ದೊಡ್ಡ ಲಾಯರಿ ತರಾನೆ ಉಡಾಯಿಸಿದ್ಲು ವಾದ್ವ!

"ನೀ ಯೋಳೋದೆ ಸೈ" ಅಂದ ಎಂಗಸ್ರ ಕಯ್ಲಿ, ಈಚಲು ಗರಿ ಎಸುಳ ಒಂದರೊಳ್ಗೆ ನುಗ್ಗಿ ಇನ್ನೊಂದರೊಳ್ಗೆ ಎದ್ದು ಕಾಲು, ಅರ್ದ, ಮುಕ್ಕಾಲು– ಇಂಗೆ ಚಾಪೆ ಆಯ್ತಾ ಇದ್ದೊ.

## ೨೬

ಕಪನಯ್ಯನವರ ತಿಥಿ ಇತ್ಯಾದಿ ಕರ್ಮಗಳು ಮುಗಿದಿದ್ದವು. ನಂಜೇಗೌಡರ ಮನೆಯ ಸೂತಕವೂ ಕಳೆದಿತ್ತು. ಈಗ ದರುಮನಳ್ಳಿಯ ಯಜಮಾನರು ಲಕ್ಕನ ನ್ಯಾಯುವನ್ನು ಕೈಗೆತ್ತಿಕೊಳ್ಳಬಹುದಿತ್ತು. ಆದರೆ ಊರಿನ ಪ್ರಮುಖ ಹಬ್ಬಗಳಲ್ಲೊಂದಾದ 'ಸಿಡಿ' ಹಬ್ಬವು ಆ ನ್ಯಾಯಕ್ಕೆ ಅಡ್ಡ ಬಂದಿತು. ಮೂರು ವರ್ಷಗಳಿಂದ ಕ್ಷುಲ್ಲಕ ಕಾರಣಗಳಿಗಾಗಿ ನಿಂತಿದ್ದ 'ಸಿಡಿ' ಹಬ್ಬವನ್ನು ಈ ಸಾಲಿನಲ್ಲಿ ನಡೆಸಬೇಕೆಂದು ಯಜಮಾನರು ಯೋಚಿಸುತ್ತಿದ್ದಾಗ, ತನ್ನ ಬಲಭುಜದಿಂದ ಹೂವಿನ ಪ್ರಸಾದ ಕೆಡವಿ ಸಿಡಿಯಮ್ಮ ಹಬ್ಬ ನಡೆಸಲು ಪೂಜಾರಿಗೆ ಅನುಮತಿ ನೀಡಿದ್ದಳು.

'ಸಿಡಿ' ಹಬ್ಬದ ತಯಾರಿಕೆಯಲ್ಲಿ ಊರಿಗೆ ಊರೇ ನಿರತವಾಯಿತು. ಈ ಹಬ್ಬದ ಸಡಗರದಲ್ಲಿ ಲಕ್ಕನ ನ್ಯಾಯ ಗೌಣವಾಯಿತು. ಹಬ್ಬ ಮುಗಿದ ನಂತರ ಆ ನ್ಯಾಯ ಮಾಡುವುದೆಂದು ಯಜಮಾನರು ತೀರ್ಮಾನಿಸಬೇಕಾಯಿತು. ಹುಣಸೂರಿನ ಶ್ರೀನಿವಾಸ ಶೆಟ್ಟರು ದೇವತೆಯ ಸೇವಾರ್ಥ ಉಚಿತವಾಗಿ ಕೊಟ್ಟ ಸುಮಾರು ಮೂರೂವರೆ ಅಡಿ ಸುತ್ತಳತೆಯ, ಹದಿನೈದು ಹದಿನಾರು ಅಡಿ ಎತ್ತರದ, ಹೊನ್ನೆಮರದ ಕಂಬವನ್ನು ಸಿಡಿಯಮ್ಮನ ಗುಡಿಯ ಮುಂಭಾಗದ ದೊಡ್ಡ ಬಯಲಿಗೆ ತಂದುದಾಯಿತು. 'ಸಿಡಿ'ಯ ದಿನ ಹೊಲೆಯರು ತಮ್ಮ ಕೇರಿಯಿಂದ 'ವೊಡೆ' ಆರತಿ ತಂದು ಪೂಜೆ ಮಾಡಿಸಿದ್ದೂ ಆಯಿತು. ಕೊಂಡ ನಿರ್ಮಿಸಿಹರಸಿಕೊಂಡ ಮಂದಿ ಕೊಂಡ ಹಾಯ್ದದ್ದೂ ಆಯಿತು. ತರುವಾಯ ಶ್ಯಾನುಭೋಗರ ತೋಟದಿಂದ ಪೂಜೆ ಸಲ್ಲಿಸಿ, ನೆಲಕ್ಕೆ ತಾಗದಂತೆ ಕೆಡವಿ, ಊರಿನ ಸುಮಾರು ಐವತ್ತು ಮಂದಿ ತರುಣರು ಒಂದು ಅಡಿಕೆ ಮರವನ್ನು ಹೊತ್ತು, ಪದ್ಧತಿಯಂತೆ ಓಡುತ್ತ ತಂದರು. ಊರಿನ ಬಡಗಿಗಳಾದ ನಂಡುಂಡಾಚಾರಿ, ಪುಟ್ಟಸ್ವಾಮಾಚಾರಿ, ಚೆನ್ನಾಚಾರಿ, ಇವರುಗಳು ಹಗಲೂ ಇರುಳೂ ಕಾರ್ಯನಿರತರಾಗಿ ನಾಲ್ಕು ವರ್ಷಗಳ ಹಿಂದೆಯೇ ಮಾಡಿಸಿದ್ದ ಭರ್ಜರಿ ದೂರಿಯ ಮಧ್ಯ ಭಾಗಕ್ಕೆ ಹೊನ್ನೆ ಮರದ ಕಂಬವನ್ನು ಕೂಡಿಸಿದರು. ಹಾಗೆಯೆ ಹಿಂದಿನಿಂದಲೂ ಇದ್ದ ಮರದ ಗಾಲಿಗಳನ್ನು ದೂರಿಯ ಎರಡು ಪಕ್ಕಕ್ಕೂ ಜೋಡಿಸಿದರು. ಅನಂತರ ಹೊನ್ನೆ ಮರದ ಕಂಬಕ್ಕೆ ಅಡ್ಡಲಾಗಿ ಚಚ್ಚೌಕದ ಸುಮಾರು ಎರಡು ಅಡಿ ಮರದ ತಿರುಗಣೆಯನ್ನು ಅಳವಡಿಸಿದರು. ಇದರ ಮೇಲುಗಡೆ ಸುಮಾರು ನಲವತ್ತು ನಲವತ್ತೈದು ಅಡಿ ಉದ್ದದ ಅಡಿಕೆಯ 'ಸಿಡಿಮರ'ವನ್ನು ತಿರುಪು ಬೆಣೆಗಳಿಂದ ಅಡ್ಡಡ್ಡಲಾಗಿ ನಿಲ್ಲಿಸಿದರು. ಅಡಿಕೆ ಮರವು

ಸುತ್ತಲೂ ಸರಾಗವಾಗಿ ತಿರುಗುವಂತೆ ಮಾಡಲು ಸಾಕಷ್ಟು ಎಣ್ಣೆ ಸುರಿಸಿದರು. ಅಲ್ಲಿಗೆ 'ಸಿಡಿ ತೇರು' ಸಿದ್ಧವಾದಂತಾಯಿತು.

ದರುಮನಳ್ಳಿಯಲ್ಲಿ 'ಸಿಡಿ' ಆಡುತ್ತಿದ್ದವರು ಬೆಸ್ತರು ಮತ್ತು ಹೊಲೆಯರು. ಒಂದು ವರ್ಷದ ಆ ಕೋಮಿನವರು ಆಡಿದರೆ, ಮಾರನೆ ಸಾಲಿಗೆ ಈ ಕೋಮಿನವರು ಆಡುವುದು ಅನುಚಾನೂವಾಗಿ ನಡೆದು ರೂಢಿಯಾಗಿತ್ತು. ಹೋದಸಲ, ಅಂದರೆ ಮೂರು ವರ್ಷಗಳ ಹಿಂದೆ, ಸಿಡಿ ಅಡಿದವರು ಹೊಲೆಯರು. ಆ ಕಾರಣದಿಂದಲೂ ಈ ಬಾರಿ ಸಿಡಿ ಆಡುವುದು ಬೆಸ್ತರ ಪಾಲಿಗೆ ಬಂದಿತ್ತು.

ಸಿಡಿ ಆಡುವ ರಾತ್ರಿ, ಊರಿನ ಮನೆಯವರೆಲ್ಲರೂ ಜಾಗ್ರತೆ ಜಾಗ್ರತೆ ಊಟ ಮುಗಿಸಿ, ಸಿಡಿಯಮ್ಮನ ಗುಡಿಯ ಮುಂದಿನ ಅಂಗಳದ ಬಯಲಿನ ಸುತ್ತ ವೃತ್ತಾಕಾರವಾಗಿ ನೆರೆದು ನಿಲ್ಲಲು ಆರಂಭಿಸಿದ್ದರು. ಊರಿನವರೇ ಅಲ್ಲದೆ, ಈ ವಿಶಿಷ್ಟ ಹಬ್ಬಕ್ಕೆಂದು ಮನೆಮನೆಗೂ ಬಂದಿದ್ದ ನೆಂಟರಿಷ್ಟರೂ ಈ ಜಾತ್ರೆಯಲ್ಲಿ ಸೇರಿದ್ದರು. ಅಕ್ಕಪಕ್ಕದ ಊರುಗಳೇ ಅಲ್ಲದೇ, ಬಹುದೂರದ ಊರು ಕೇರಿಗಳಿಂದಲೂ ಅಪಾರ ಜನಸ್ತೋಮ ಹರಿದು ಬಂದಿತ್ತು.

"ಮೈಸೂರು ಮಾರಾಜರ ಪೌಜಿನಲ್ಲೂವೆ ಈಪಾಟಿ ಜನ ಸೇರಕ್ಕಿಲ್ಲ ಕನ, ತಗಿ!" – ಇದು, ಪ್ರವಾಹದಂತೆ ಬಂದು ಸೇರುತ್ತಿತ್ತು ಜನಸಮೂಹವನ್ನು ಕುರಿತು ಹುಚ್ಚು ಬೋರಿ ಸಂಗಡ ದ್ಯಾವಾಜಮ್ಮ ತೆಗೆದು ಉದ್ಗಾರ!

ಅಲ್ಲಿಯ ನೆಲದ ಅಂಗುಲ ಅಂಗುಲಕ್ಕೂ ಜಾತ್ರೆಯ ಸಡಗರ, ಅಷ್ಟಷ್ಟು ದೂರಕ್ಕೆ ಪಂಜುಗಳ ಬೆಳಕು. ಮಧ್ಯರಾತ್ರಿಯ ವೇಳೆಗೆ ಸಿಡಿಯಮ್ಮನ ಗುಡಿಯೊಳಗೆ ಬೆಸ್ತರ ಕೋಮಿನ ಯಜಮಾನರು, ಸಿಡಿಯಾಡಲು ಸಿದ್ಧರಾದ ಹನ್ನೆರಡು ಮಂದಿ ತರುಣರು, ಚೆನ್ನಾಚಾರಿ, ಪೂಜರಿ ಸೋಮಪ್ಪ, ಇವರೆಲ್ಲ ಜಮಾಯಿಸಿದರು. ಕಬ್ಬಿಣದ 'ಕೊಂಡ್ಲು'ಗಳನ್ನು ಶಕ್ತಿದೇವತೆಯ ಮುಂದಿಟ್ಟು ಪೂಜೆಮಾಡಿ, ಅವುಗಳನ್ನೆತ್ತಿ ಪೂಜಾರಿ ಸೋಮಪ್ಪ ಚೆನ್ನಚಾರಿಯ ಕೈಗೆ ಕೊಟ್ಟ, ಚೆನ್ನಚಾರಿ ಸಿಡಿಯಾಡುವ ತರುಣರನ್ನು ಒಬ್ಬೊಬ್ಬರಾಗಿ ಮೊಖಾಡೆ ಮಲಗಿಸಿದ. ಹಾಗೆ ಮಲಗಿದ ಪ್ರತಿ ತರುಣನ ಬೆನ್ನಿನ ಚರ್ಮವನ್ನು ಎಳೆದು ಅದಕ್ಕೆ ಸಣ್ಣ ಉಳಿಯಿಂದ ಪೆಟ್ಟಿ, ಚುಚ್ಚಿ, ತೂತು ಮಾಡಿ, ಆ ತೂತಿಗೆ ಕೊಳವೆ ಹಾಕಿ, ಆ ಕೊಳವೆಗೆ ಕೊಂಡ್ಲುಗಳನ್ನು ಸಿಕ್ಕಿಸಿದ. ಬೆನ್ನಿನ ಇನ್ನೊಂದು ಭಾಗದ ಚರ್ಮವನ್ನೂ ಹೀಗೆಯೆ ಉಜ್ಜಿ ಎಳೆದು, ಅದಕ್ಕೂ ಇದೇ ರೀತಿ ಕಬ್ಬಿಣದ ಕೊಂಡಿ ಸಿಕ್ಕಿಸಿದ. ಅಂದರೆ ಸಿಡಿಯಾಡುವ ಪ್ರತಿ ವ್ಯಕ್ತಿಗೂ ಬೆನ್ನಿಗೆ ಎರಡು ಕೊಂಡ್ಲು. ಆ ಕೊಂಡ್ಲುಗಳಿಗೆ ಕಟ್ಟಿದ ಹಗ್ಗಗಳು ಅವರ

ಬೆನ್ನಿನ ಹಿಂದೆ ನೇತಾಡುತ್ತಿದ್ದವು.

ಈ ವಿಧಿ ಮುಕ್ತಾಯಗೊಂಡ ಒಡನೆಯ ಸಿಡಿಯಡುವ ಪ್ರತಿಯೊಬ್ಬ ತರುಣನೂ ಆವೇಶ ಬಂದವನಂತೆ ಎದ್ದುನಿಂತ. ಇದು ನಡೆಯುತ್ತಿದ್ದುದು ಗುಡಿಯ ಒಳಗಡೆ. ಅನಂತರ ಗುಡಿಯ ಮುಂಬಾಗಿಲು ತೆರೆಯಿತು. ಆವೇಶದಿಂದ ಯಾವ ಪರಿವೆಯೂ ಇಲ್ಲದೆ ಮುನ್ನುಗ್ಗುವ ಆ ತರುಣರ ಬೆನ್ನಿಗೆ ಸಿಕ್ಕಿಸಿದ ಕೊಂಡ್ಲುಗಳ ಹಗ್ಗಗಳನ್ನು ಇಬ್ಬಿಬ್ಬರು ಹಿಂದಿನಿಂದ ಹಿಡಿದು ಅವರ ನಡಿಗೆಯನ್ನು ನಿಯಂತ್ರಿಸುತ್ತಿದ್ದರು.

ಕೊಂಬು ಕಹಳೆ ತಮ್ಮಟೆ ಕಿವಿ ಗಡಚಿಕ್ಕುವ ಅಸಾದ್ಯ ಗದ್ದಲದಲ್ಲಿ ಸಿಡಿಯಾಡುವ ತರುಣರು ಗುಡಿಯಿಂದ ಹೊರಬಂದಾಕ್ಷಣ ಗುಡಿಯನ್ನೊಮ್ಮೆ ಪ್ರದಕ್ಷಿಣೆ ಮಾಡಿದರು. ಅವರೆಲ್ಲರೂ ಕೇವಲ ಕಾಚಾ ಧರಿಸಿ, ತಲೆಗೆ ಕೆಂಪು ಪೇಟ ಧರಿಸಿದ್ದರು. ಪೇಟವು ಕಳಚಿ ಬೀಳದಂತೆ ಅದಕ್ಕೆ ವಸ್ತ್ರವೊಂದನ್ನು ಬಿಗಿಯಲಾಗಿತ್ತು. ಗುಡಿಯ ಪ್ರದಕ್ಷಿಣೆ ಮುಗಿಸಿ ಅವರೆಲ್ಲರೂ ಸಿಡಿ ತೇರನ್ನೂ ಭಕ್ತಿಯಿಂದ ಸುತ್ತು ಹಾಕಿದರು. ಆ ಬಳಿಕ ಕೊಬ್ಬಿದ ಟಗರನ್ನು ಬಲಿ ಕೊಡಲಯಿತು. ಆಗ ತಮಟೆಯ ಆರ್ಭಟ ಹೆಚ್ಚಿತು. ಅದಾದನಂತರ ಸಿಡಿಯಡುವವರಲ್ಲಿ ಒಬ್ಬನನ್ನು ಆಯ್ದು. ಮೊದಲು ಅವನ ಬೆನ್ನಿನ ಕೊಕ್ಕೆಗಳನ್ನು ಸಿಡಿಮರದ ಹಗ್ಗಕ್ಕೆ ಸಿಕ್ಕಿಸಿದರು. ಸಿಡಿಮರದ ಇನ್ನೊಂದು ತುದಿಗೆ ಸಮತೋಲನದ ಅಗತ್ಯಕ್ಕಾಗಿ, ಒಬ್ಬ ವ್ಯಕ್ತಿ ಅದನ್ನು ತಬ್ಬಿ ಹಿಡಿದ. ಸುಮಾರು ನಲವತ್ತು ನಲವತ್ತೈದು ಅಡಿ ಉದ್ದದ ಸಿಡಿಮರ ತಟ್ಟನೆ ಮೇಲೆದ್ದಿತು. ತಕ್ಕಡಿಯಂತೆ ಎತ್ತರದಲ್ಲಿ ಅದು ಸಮಾನಾಂತರ ರೇಖೆಯಾಗಿ ನಿಂತಿತು. ಎರಡು ತುದಿಗಳಿಗೂ ಹಗ್ಗ ಕಟ್ಟಿ ಸಮತೋಲನಕ್ಕೆ ತಂದರು. ನಿಧಾನವಾಗಿ ಮೇಲೇರಿದ ಸಿಡಿಯಾದ ಆ ತರುಣ ಆಕಾಶದಲ್ಲಿ ಸುಮಾರು ಹದಿನೈದು ಹದಿನಾರು ಅಡಿ ಎರದಲ್ಲಿ ತೂಗೂತ್ತ. ಈಜಾಡುವವನಂತೆ ತನ್ನ ಕೈಕಾಲುಗಳನ್ನು ಬಡಿಯುತ್ತಿದ್ದ. ಕೊಂಬು ಕಹಳೆಗಳು ಗಗನವನ್ನೇ ಭೇದಿಸುವಂತೆ ಮೊಗಗಿದ್ದವು.

ತರುಣ ಆ ಎತ್ತರದಲ್ಲಿ ಸಿಡಿಯಾಡುವುದನ್ನು ನೋಡಲು ಜನರು ಉತ್ಸಾಹದ ಭರದಲ್ಲಿ ಒಬ್ಬರ ಮೇಲೊಬ್ಬರು ಬೀಳುತ್ತಿದ್ದರು. ಆ ನೂಕ್ಕುನುಗ್ಗಲಿನಲ್ಲಿ ಯಾರೊ ಬುಂಡಮ್ಮನನ್ನು ತಳ್ಳಿ, ಅವಳು ಮುಗ್ಗರಿಸುವಂತಾಯಿತು. ಯಾರೊ ಅವಳು ಕೆಳಗೆ ಬೀಳದಂತೆ ತಬ್ಬಿ ಹಿಡಿದುದರಿಂದ ಸದ್ಯ ಅವಳು ಪಾರಾದಳು. ತಕ್ಷಣ, ಹಿಂದೆ ತಿರುಗಿ ಮೇಲೆ ಬಿದ್ದವರನ್ನು ಉದ್ದೇಶಿಸಿ, "ಅಸ್ಸಿ, ಇದ್ಯಾಕ ಅಮ್ಮೀರ ಇಂಗೆ ಮ್ಯಾಲೆ ಬಿದ್ದೀರಿ?– ಆಕಾಸ ನ್ವಾಡಕ್ಕೆ ನೂಕಾಟ ಯಾಕ...?"

ಎಂದು ಖೇದದಿಂದ ಭೇಡಿಸಿದಳು. ಆದರೆ ಆ ದೊಂಬಿಯಲ್ಲಿ ಆ ಮುದುಕಿಯ ಮಾತಿಗೆ ಸೊಪ್ಪು ಹಾಕುವವರು ಯಾರು? ನೂಕಾಟ, ಪರಸ್ಪರ ಬೈದಾಟಗಳು ನಡದೇ ಇದ್ದವು...

ಅತ್ತ, ಎತ್ತರದಲ್ಲಿ ಸಿಡಿಮರ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಮೂರು ಮೂರು ಸುತ್ತು ಗಿರಗಟ್ಟಲೆಯಾಗಿ ಸುತ್ತಿತ್ತು. ಕೊಂಬು ಕಹಳೆ ತಮ್ಮಟೆಗಳ ಅಬ್ಬರದ ಜೊತೆಗೂಡಿ ಜನಸ್ತೋಮದ ಕೂಗು, ಕೇಕೆಗಳು ಮೇರೆಮೀರಿದವು. ಸಿಡಿ ತೇರಿಗೆ ಹಣವಣಿಸಿದ್ದ ಹಗ್ಗಗಳನ್ನು ಹಿಡಿದು ಮೊದಲು ಊರಿನ ಯಜಮಾನರು ಅನಂತರ ಇತರೇ ಜನ, ಹೀಗೆ ತೇರನ್ನು ಎಳೆದರು. ತೇರಿನ ಎರಡೂ ಪಕ್ಕದಲ್ಲಿ ವಿರಾಜಮಾನವಾಗಿದ್ದ ಪಂಜುಗಳ ಬೆಳಕಿನಲ್ಲಿ ಸಿಡಿತೇರು ಮುಂಬರಿಯಿತು. ಅದು ಮುಂದುವರಿದಂತೆ ಮತಾಪು, ಗರ್ನಾಲುಗಳನ್ನು ತೇರಿನ ಎದುರು ಹೊತ್ತಿಸಿದಾಗ ಇಡೀ ವಾತಾವರಣ ಪುಳಕಗೊಂಡಿತು.

ಇದನ್ನು ದೂರದಿಂದಲೆ, ಸಪ್ಪೆಮೋರೆ ಹೊತ್ತು ನೋಡುತ್ತ, ಲಕ್ಕನೊಬ್ಬನೇ ಏಕಾಂಗಿಯಾಗಿ ಹೆಜ್ಜೆ ಹಾಕುತ್ತಿದ್ದ. ಕೇಶವಯ್ಯನು ಶ್ಯಾನುಭೋಗರಿಗೆ ಅವನನ್ನು ತೋರುತ್ತ.

"ನೀವು ಏನೇ ಹೇಳಿ, ಶ್ಯಾನುಭೋಗರೆ, ಆ ರಂಡೆಗಂಡ ಲಕ್ಕ ಸಿಡಿ ಆಡಿದ ಹಾಗೆ, ಬೇರೆ ಯಾರೂ ಆಡಿದನ್ನ ಈ ತಹಲ್‌ವರೆಗೆ ನಾನಂತೂ ನೋಡಿದ್ದಿಲ್ಲ. ಮೂರು ಸಾಲಿನ ಹಿಂದೆ ಎರಡು ಕೈಗಳಲ್ಲೂ ಪಂಜು ಹಿಡಿದು ಆತ ಈಜುವ ಹಾಗೆ ಕೈಕಾಲು ಆಡಿಸುತ್ತ, ತೇಲಿ ತೇಲಿ ಸಿಡಿಮರದ ಜೊತೆಗೆ ಬಂದೊಂದು ಸುತ್ತ ಬರುವಾಗಲೂ ಒಮ್ಮೆ ನೆರೆದ ಜನಕ್ಕೆ ನಮಸ್ಕಾರ ಮಾಡುತ್ತಿದ್ದ ರೀತಿ ಈಗಲೂ ಸಹ ನನ್ನ ಕಣ್ಣಿಗೆ ಕಟ್ಟಿದ ಹಾಗಿದೆ... ಏನೋ ಹಾಳಾದವನು ಇದೊಂದು ಎಡವಟ್ಟು ಮಾಡಿಕೊಂಡು ಬಿಟ್ಟ. ಇಲ್ಲದಿದ್ದರೆ ಅವನಂಥ ಯೋಗ್ಯ ಕುಳ ನಮ್ಮ ಉತ್ತಮರಲ್ಲಿ ಹುಡುಕಿದ್ರೂ ಸಿಗೋದು ಅಪರೂಪ... ಏನಂತೀರಿ?" ಎಂದಾಗ, ಶ್ಯಾನುಭೋಗರು–

"ಹೌದು ಕೇಶವ, ನಿನ್ನ ಮಾತನ ನಾನು ಒಪ್ಪುತ್ತೀನಿ. ನಾನು ಮೊಳಕೆಯಿಂದಲೂ ಅವನನ್ನು ನೋಡುತ್ತಲೇ ಬಂದಿದ್ದೀನಿ. ಅವನ ಗಾಂಭೀರ್ಯ, ಮಾತಿನ ತೂಕ, ವಿನಯ– ಈ ಗುಣಗಳನ್ನು ನಾನೂ ಮೆಚ್ಚಗೊಂಡಿದೀನಿ. ಆದರೆ ಈಗ ಬ್ರಾಹ್ಮಣಕುಲಕ್ಕೇ ಅಪಮಾನ ಮಾಡಿದ್ದಾನಲ್ಲಯ್ಯ?... ಅದೂ ಸಹ ಎಂಥ ಅಪರಾದ?– ಈ ಮಾರಿ ಸಿಡಿ ಒಂದು ಅಡ್ಡ ಬರದಿದ್ದರೆ, ಇಷ್ಟು ವೇಳೆಗೆ ನ್ಯಾಯಕ್ಕೆ ಸೇರಿದ್ದರೆ, ನಾನೇ ಮುಂದಾಗಿ ವಾದ ಮಾಡಿ, ಆ ತಾಯಗ್ಗಂಡನ್ನ

ಒದ್ದು ಆಚೆಗೆ ಓಡಿಸ್ತಿದ್ದೆ" ಎಂದು ಗುಡುಗಿದರು.

ಸರಿಸಿಯ ಬಲಾತ್ಕಾರಕ್ಕೆ ತಮ್ಮ ಮನೆಯ ಜಗುಲಿಗೆ ಬಂದುನಿಂತು ದೂರದಿಂದಲೆ ವೀಕ್ಷಿಸುತ್ತಿದ್ದ ರುಕ್ಮಿಣಿಯ ಆಂತರ್ಯದಲ್ಲಿ ಬೆಸ್ತರ ತರುಣ ಬದಲಾಗಿ ಸಿಡಿಮರದ ಮೇಲೆ ಲಕ್ಕನೇ ತೂಗಿ ತೇಲಿ ಮೂಡುತ್ತಿದ್ದ!

"ನಡೀ ಅತ್ತೆ, ಅಲ್ಲಿಗೆ ಹೋಗೋಣ. ಹತ್ತಿರದಲ್ಲೆ ನೋಡಬಹುದು... ನಡೀ ಅತ್ತೆ."– ಸರಸಿ ಒಂದೇ ಸಮನೆ ದುಂಬಾಲು ಬಿದ್ದು ಪೀಡಿಸತೊಡಗಿದಳು.

"ಬೇಡಮ್ಮ, ಅಲ್ಲಿ ವಿಪರೀತ ಜನ ಇಲ್ಲೆ ಕಾಣುತ್ತಲ್ಲ. ಮಕ್ಕಳು ಆ ದೊಂಬಿಗೆ ಸಿಕ್ಕೋಬಾರದು. ಬಾ, ಬೇಕಾದರೆ ನಾನು ನಿನ್ನನ್ನ ಎತ್ತಿಗೊಳ್ತೀನಿ" ಎಂದರೂ

"ಏನೂ ಬೇಡ, ಏನೂ ಬೇಡ. ನಾನು ನಿಂತೇ ನೋಡ್ತೀನಿ" ಎಂದು ಸರಸಿ ಕೆನ್ನೆ ಊದಿಸಿ ನಿಂತಳು.

ಅಷ್ಟಷ್ಟು ದೂರಕ್ಕೆ ಸಿಡಿ ತೇರು ನಿಲ್ಲುವುದು. ಆನ ಹಣ್ಣುಕಾಯಿ ಮಾಡಿಸುವರು. ಸಿಡಿಯಾಡುತ್ತಿದ್ದ ತರುಣನನ್ನು ಕೆಳಗಿಳಿಸಿ ಇನ್ನೊಬ್ಬನನ್ನು ಏರಿಸುವರು. ಮತ್ತೆ ಎತ್ತರದಲ್ಲಿ ಅದೇ ಗಿರಗಟ್ಟಲೆ. ಅದೇ ಜನರ ಕೇಕೆ, ಸಂಭ್ರಮ, ಕೊಂಬು ಕಹಳೆ ತಮ್ಮಟೆಗಳ ಅಬ್ಬರ. ಮತಾಪು ಗರ್ನಾಲುಗಳ ರಂಜನೆ.

ಇನ್ನಷ್ಟು ದೂರ ಹೀಗೆ ಸಾಗಿದ ತರುವಾಯ ಆ ತರುಣನನ್ನು ಇಳಿಸಿ ಮತ್ತೊಬ್ಬನನ್ನು ಏರಿಸುವಿಕೆ– ಹೀಗೆ ಸಾಗಿದ ಸಿಡಿತೇರು ಕೆರೆ ಸಮೀಪದಲ್ಲಿದ್ದ ಗ್ರಾಮದೇವತೆ ಬಿಸಲುಮಾರಮ್ಮನ ಗುಡಿಯ ಮುಂದೆ ವಿಸರ್ಜನೆಗೊಂಡಿತು. ಅಲ್ಲಿ ಬಿಸಿಲುಮಾರಮ್ಮನಿಗೆ ಪೂಜೆ ಸಲ್ಲಿಸಿ, ಸಿಡಿಯಾಡಿದವರ ಬೆನ್ನಿನ ಕೊಕ್ಕೆಗಳನ್ನು ತೆಗೆದು, ಕೊಕ್ಕೆ ಚುಚ್ಚಿದ ಜಾಗಕ್ಕ ಶ್ರೀಗಂಧವನ್ನು ಮೆತ್ತಿದರು.

ಅದ್ನೆಲ್ಲ ನ್ವಾಡ್ತ ನಿಂತ ಲಕ್ಕಂಗೆ ತಾನೂ ಇಂದೆ ಇಂಗೇಯ ಸಿಡಿ ಆಡಿ, ಆಮ್ಯಾಕೆ ತಮ್ಮ ಗುಡ್ಲಿನಾಗ ಅವ್ವ ಬೇಯಿಸಿದ್ದ ಭತ್ತದ ಮ್ಯಲೆ ಬಾಳೆಲೆಹಂಡಿ, ಅದುಕೆ ಬೆನ್ನು ಕ್ವಟ್ಟು ಮನಗಿದ್ದ ನೆಪ್ಪಾಯ್ತು. ಮುಂದ್ನ ದಿನಗೋಲಲ್ಲಿ ಅವ್ವ ಬೇವಿನ ಔಸ್ದ ಮಾಡಿ, ತನ್ನ ಗಾಯಗಳ್ಗೆ ಲ್ಯಾಪ ಆಕಿದ್ಲು...

## ೨೭

ಸಿಡಿ ಬಂದು ಹೋಗಿತ್ತು. ತೆರೆ ಬಂದು ತೆರೆ ಹೋದ ಹಾಗೆ ಊರಿಗೆ ಊರೇ ಮೇರೆಮೀರಿದ ಉತ್ಸಾಹ ಸಂಭ್ರಮಗಳಿಂದ ನಲಿದು ತನ್ನ ಹಿಂದಿನ ಮಾಮೂಲಿ ಯಾಂತ್ರಿಕ ಜೀವನಕ್ಕೆ ಮರುಳುತ್ತಿತ್ತು. ಇಲ್ಲಿಯ ತನಕ ಮರೆತಂತಿದ್ದ

ಲಕ್ಕನ ನ್ಯಾಯ ಇದೀಗ ಊರಿನ ಯಜಮಾನರಿಗೆ ಮತ್ತೆ ನೆನಪಾಯಿತು. ಪಂಚಾಯಿತಿಯು ಕೂಡುವುದುಕ್ಕೆ ದಿನ ಗೊತ್ತುಮಾಡಲು ಯಜಮಾನರಲ್ಲಿ ವಿಚಾರ ವಿನಿಯಮಯವಾಯಿತು. ಸೋಮವಾರ ಕೆಲವು ಯಜಮಾನರಿಗೆ ಬೇರೆ ಯಾವುದೊ 'ಜಂಬರ'. ಮಂಗಳವಾರ ಪ್ರಶಸ್ತವಲ್ಲದ ದಿನ, ಆದಿನ ಬೇಡವೆಂದು ಇನ್ನು ಕೆಲವರು. ಬುಧವಾರ ಮತ್ತೆ ಯಾರಿಗೊ ಮನೆಯಲ್ಲಿ 'ಕಾರ್ಯ'. ಗುರುವಾರ ಹೇಳಿ ಕೇಳಿ ಹುಣಸೂರಿನಲ್ಲಿ ಸಂತೆ. ಕೊನೆಗೆ ಅವರಲ್ಲೆ ಅಳೆದೂ ಶುಕ್ರವಾರ ಸೇರುವುದೆಂದು ತೀರ್ಮಾನವಾಯಿತು.

ಗುರುವಾರ ರಾತ್ರಿ ಶುಕ್ರವಾರದ ನ್ಯಾಯಕ್ಕಾಗಿ ಉರಿನವರೆಲ್ಲ ಸೇರಬೇಕೆಂದು ಈ ಸಲ ತಮಟೆ ಬಡಿಯುತ್ತ ಡಂಗುರ ಸಾರಿದವನು ಸ್ವಯಂ ಲಕ್ಕನ ದೊಡ್ಡಯ್ಯ– ಕುಂದೂರಯ್ಯನೆ!

ಅತ್ತ ದೊಡ್ಡಯ್ಯ ನ್ಯಾಯದ ಬಗ್ಗೆ ಊರಿನ ಕೇರಿಕೇರಿಗಳಲ್ಲೂ ಸಾರುತ್ತಿರುವಾಗ, ಇತ್ತ ಲಕ್ಕ ಗುಡ್ಲಿನ ಪಕ್ಕದ ಬಂಡೆಯೇರಿ ಕುಳಿತು ಚಿಂತೆಯಲ್ಲಿ ಮುಳುಗಿದ್ದ:

ಎಳೆಮೊಗೀನಿಂದ್ಲೂವೆ ದೊಡ್ಡಯ್ಯಂಗೆ ತನ್ನಕಂಡ್ರೆ ಬೋ ಪಿರೀತ ಅಂತೆ. ಕಿಸ್ಲನಂಗವ್ನೆ, ಕಿಸ್ಣನಂಗವ್ನೆ ಅಂತ ಮುದ್ದಾಡ್ತಿದ್ನಂತೆ!– ತಾನುದೊಡ್ಡೋನಾದ ಮ್ಯಾಲೆ ಅವ್ವನೆ ತನ್ನ ಕುಟ್ಟೆ ಇದ್ನೆಲ್ಲ ಯೋಳಿದ್ಲು... ಆ ಕಾಲಕ್ಕೆ ದೊಡ್ಡಯ್ಯಂಗೂ ಈ ಬಂಡೆಗೂ ಬಾಳ ನಂಟು. ನಾತ್ರಿನಾಗ ಒಬ್ಬನೇ ಆಗಾಗ ಈ ಬಂಡೆ ಏರಿ ಕುಂತುಗತ್ತಿದ್ದ. ಒಂದೊಂದು ಜಿನ ತನ್ನೂವೆ ತೊಡೆ ಮ್ಯಾಲೆ ಕುಂಡರಿಸಿ ಕಂಬಳಿ ವೊದ್ದುಸಿ, ಸಪ್ತರುಸಿ ಮಂಡ್ಲ ದ್ರುವನಕ್ಸತ್ರ ಇವ್ನೆಲ್ಲ ತೋರುಸ್ತಿದ್ದ... ತಾನು ಬಾಣದಲ್ಲಿ ವೋಟೊಂದು ಚುಕ್ಕಿಗಳು ರಾಸಿ ನ್ವಾಡ್ತ.

"ನಾಕು ಮೂಲೆಗಳೂ ನಾಕು ಚುಕ್ಕಿ, ಅವುಗೊಳ ನಡೂಮದ್ಯ ಸಾಲಾಗಿ ಮೂರೇ ಮೂರು ಚುಕ್ಕಿ– ಅವೇನು ದೊಡ್ಡಯ್ಯ?" ಅಂತ ಕೇಳಿದ್ಲ.

"ನ್ವಾಡ್ಲ ಲಕ್ಕ. ನಾಕು ಚುಕ್ಕಿಗಳವಲ್ಲ, ಅವು ದ್ಯಾವಲೋಕದ ನಾಕು ಮಂಚದ ಪಾದಗೊಳು. ನಾಕು ಚುಕ್ಕಿಗಳ ನಡೂಮದ್ಯ ಇರೊ ಮೂರು ಚುಕ್ಕಿಗಳೂವೆ ಮೂರು ಜನ ಕಳ್ಳರು. ದಯಾವಲೋಕದ ಆ ಮಂಚಾವ ಅಪರಿಸಕ್ಕೆ ಆ ಮೂರಾಳುವೆ ಆ ಮಂಚದ ಅಡೀಕೆ ಕುಂತು ಬೆಳುಗಾನ ಹ್ವಂಚು ಆಕ್ತಾನೆ ಅವರೆ. ಆ ಮಂಚವ ಇನ್ನೇನು ಹ್ವತ್ತುಗಂಡು ವೋಗಬೇಕು ವೋಟರಲ್ಲಿ ಬೆಳ್ಳಂಬೆಳುಗಾಗೋಯ್ತದೆ! ಬೆಳುಕ್ಹರಿದ ಮ್ಯಾಗೆ ಯೇನು ಮಾಡೂವಂಗಿದ್ದದು? ಆ ಕಳ್ಳರು ಮಂಚ ದಕ್ಕನಿಲ್ಲಾಂತ ಅಲ್ಲಿಂದ ಫೇರಿ ಕೀಳ್ತಾರೆ. ಪತಿ ನಾತ್ರೂವೆ ಆ

ಮೂರು ಮಂದಿ ಕಳ್ಳರಿಗೆ ಇದೇ ಕೆಮೆ. ಆದ್ರೆ ಆಟ ನಡೀತಾನೆ ಇಲ್ಲ!,...

ಕಪ್ಪುಹಲಗೆ ಮ್ಯಲೆ ಅರಳು ಸುರುದಂಗಿದ್ದ ಚಿಕ್ಕಿಗಳ್ನೆ ನ್ವಾಡ್ತ ಲಕ್ಕ ದೊಡ್ಡಯ್ಯ ಕೇಳಿದ್ದ:

"ದೊಡ್ಡಯ್ಯ–ಅಂಗಾರೆ ಸತ್ತಮ್ಯಾಲೆ ನೀನು, ಅವ್ವ ಸಿವುನಿ, ಪುಟಾರಣ್ಣ, ನಾನು ಯೆಲ್ಲಾರೂವೆ ಮ್ಯಾಗಿನ ಬಾಣದಲ್ಲಿ ಚುಕ್ಕಿಗಳಾಗಿ ಕುಂತುಗತ್ತೀವ?"

"ಸರೋಯ್ತು. ಸುಮ್ಮಸುಮ್ಮಕೆ ಕುಂತುಗತಾರ?.... ಒಳ್ಳಿ ಗೆಣೆಕಾರ ನೀನೂವೆ.'

"ಮಂತೆ?"

"ಅದ್ಕೆ ದ್ರುವನಂಗೆ, ರುಸಿಗಳಂಗೆ ಪುಣ್ಯ ಮಾಡಿರಬೇಕು ಕನ್ನ."

ಪುಣ್ಯ ಅಂದರೇನೊ ಆಗ ತಿಳುದಿರನಿಲ್ಲ. ಈಗಲೂವೆ ಅದು ಲಕ್ಕಂಗೆ ಏಟಿಕ್ದೆ ಇರೋ ಮಾತೆ!

ಬಾಣದಲ್ಲೆ ನೆಟ್ಟ ಲಕ್ಕನ ನ್ವಾಟ ವೋಟಲಕೂ ಸುತ್ತಾಡು. 'ಅಂಗಾರೆ ನಮ್ಮೂರಿನಾಗೆ ಚುಕ್ಕಿ ಆಗೋರು ಯಾರ್‍ಯಾರು?' – ಅಂದು ಖಾನೇಸುಮಾರಿ ತಗಿಯಕ್ಕ ಹ್ವಂತ. ಅಸ್ಟರಾಗೆ ಬೊಡ್ಡ ಕಾಲುದಸೀಲಿ ಕುಂತಿದ್ದದ್ದು ಒಂದು ಹೆಗ್ಗಣ ವೋದ್ದ ಕಂಡು, ಅದ್ನ ಅಟ್ಟಿಸಿಕೊಂಡೋಯ್ತು. ಯಾಕೆ ಬಿಡ ಬ್ಯಾಸರಾಗಿ ಲಕ್ಕ ಅಲ್ಲಿಂದೆದ್ದ.

* * * *

ಅದೇ ರಾತ್ರಿ ರುಕ್ಮಿಣಿಯ ಊಟದ ಶಾಸ್ತ್ರ ಮುಗಿಸಿ ತೆಂಗಿನ ಗರಿಯ ತಾರಾಳೆ ಹೆಣೆಯುತ್ತ ಕುಳಿತಿದ್ದಳು. ಮಾವನವರು ಹೇಗಿದ್ದರೂ ರಾತ್ರಿ ವೇಳೆ ಭೋಜನವನ್ನೆ ಮಾಡುತ್ತಿಲ್ಲ. ತಾನೂ ಸಹ ಸರಸಿಯೂ ಊಟ ಮಾಡದೆ ಹೋಗುವಳೆಂದು ನೆಪಕ್ಕೆ ಅವಳ ಜೊತೆಯಲ್ಲಿ ಊಟದ ಶಾಸ್ತ್ರದ ಮುಗಿಸಿ ಎದ್ದಿದ್ದಳು. ಶಾಸ್ತ್ರಿಗಳು ದೇವರ ಕೋಣೆಯಲ್ಲೆ ಇದ್ದರು. ಅವರ ಜಪ ತಪ, ಪೂಜೆ ಪುನಸ್ಕಾರಗಳು ಇನ್ನೂ ಮುಗಿದಿರಲಿಲ್ಲ. ಹೊತ್ತು ಹೋಗಲು ಈಚೀಚೆಗೆ ರುಕ್ಮಿಣಿಯು ತೆಂಗಿನ ಗರಿಗಳ ತಾರಾಳೆ ಹೆಣೆಯುವುದರಲ್ಲಿ ಕಾಲ ಕಳೆಯುವಳು... ತಾನೂ

ಹೆರೆಯುವೆನೆಂದೂ ಸರಸಿಯೂ ಒಮ್ಮೊಮ್ಮೆ ರುಕ್ಮಿಣಿಯೊಡನೆ ಕೂರುವಳು. ಕೊಂಚ ಸಮಯ ಹೆಣೆಯಲು ಪ್ರಯತ್ನಿಸಿ, 'ಥೂ–ನನ್ನ ಕೈಲಿ ಆಗೋಲಮ್ಮ' ಎಂದು ಎದ್ದು ಹೋಗುತ್ತಿದ್ದೂದೂ ಉಂಟು. ಅದೇನೊ ಈ ರಾತ್ರಿ ಅವಳಿಗ ಹೆಚ್ಚಿಗೆ ಆಸಕ್ತಿಯುಂಟಾಗಿ ಸ್ವಲ್ಪ ಹೆಚ್ಚು ಕಾಲ ತಾರಾಳೆಯಲ್ಲಿ ಕೈಯಾಡಿಸಿದ್ದಳು. ಆದರೆ ಎಷ್ಟು ವಿಧವಾಗಿ ತೋರಿಸಿಕೊಟ್ಟರೂ ಸರಸಿಗೆ ಹೆಣಿಗೆ ಕ್ರಮ

ಬರುತ್ತಿರಲಿಲ್ಲವಾದ್ದರಿಂದ ಬೇಸರಗೊಂಡು,

"ಹೀಗೇ ಅಭ್ಯಾಸ ಮಾಡ್ತಾ ಮಾಡ್ತಾ ಬರತ್ತೆ. ಇದೇನು ಬ್ರಹ್ಮವಿದ್ಯೆ ಅಲ್ಲ... ನೀನಿನ್ನೂ ಚಿಕ್ಕೋಳು. ಇನ್ನೂ ಸ್ವಲ್ಪ ದೊಡ್ಡವಳಾದರೆ, ನನಗಿನ್ನ ಚೆನ್ನಾಗೇ ಹೆಣೀತೀಯೆ" ಎನ್ನುತ್ತ, ರುಕ್ಮಿಣಿ ಅವಳನ್ನು ಅಪ್ಪಿ, ಮುದ್ದಿಟ್ಟು ತನ್ನ ತೊಡೆಯ ಮೇಲೆ ಮಲಗಿಸಿಕೊಂಡಳು. ರುಕ್ಮಿಣಿಯ ತೊಡೆಯ ಮೇಲ ಒರಗಿ, ಅವಳ ಬೆರಳುಗಳು ಆಡಿವುದನ್ನೆ ಗಮನಿಸುತ್ತಿದ್ದ ಸರಸಿಯು ಕಣ್ಣುಗಳು ನೋಡನೋಡುತ್ತಿದ್ದಂತೆಯೆ ಬಾಡಿ ಹೋದವು.

ರುಕ್ಮಿಣಿಯ ಬೆರಳುಗಳು ತಾರಾಳೆ ಹೆಣೆಯುತ್ತಿರುವಂತೆ, ಅವಳ ಅಂತರಂಗ ಎಂಥೆಂಥವೊ ಯೋಚನೆಗಳನ್ನು ಹೆಣೆಯುವುದರಲ್ಲಿ ಮಗ್ನವಾಗಿತ್ತು... ತನ್ನ ಬಗ್ಗೆ ತನ್ನ ಬೆನ್ನಿನ ಹಿಂದೆ ನಡೆಯುತ್ತಿದ್ದ ಕುತ್ಸಿತ ಟೀಕೆಯ ಶಾಖ ರುಕ್ಮಿಣಿಯನ್ನು ಆಗಾಗ ತಪ್ಪದೆ ಇರಲಿಲ್ಲ... ಮೊನ್ನೆ ಕೇಶವಯ್ಯನ ಪಕ್ಕದಮನೆಯ ಶಾರಮ್ಮ ಬಂದಿದ್ದಳು. ಎಂದೊ ಅಪರೂಪಕ್ಕೆ ಬರುತ್ತದ್ದವಳು ಈಗ ಬಂದು, "ನೋಡ್ರಿ ರುಕ್ಮಿಣಿ, ಆ ಕೇಶವಯ್ಯನ ಹೆಂಡತಿಗೆ ಪಾಪ, ನೀವೇನು ಮಾಡಿದ್ದಿರಿ?– 'ಆ ರುಕ್ಮಿಣಿಗೆ ವಿಪರೀತ ಠೇಂಕಾರ ಬಂದಿತ್ತು ತೆಂಗಿನ ಮರದ ಸುಳಿಗೆ ಹತ್ತಿ ಕುಳಿತಿದ್ದಳು. ಈಗ ಸದ್ಯ, ನನ್ನ ಕಣ್ಣ ಮುಂದೇನೆ ಜಾರಿ ಕೆಳಗೆ ಬಿದ್ದಳು. ನನಗಂತೂ ಹಾಲು ಕಿಡಿದಷ್ಟು ಸಮತೋಷವಾಗಿದೆಯಮ್ಮ'– ಹೀಗೆಲಲ್ಲ ನನ್ನ ಸಂಗಡ ಅನ್ನೋದೆ?" ಎಂದು, ಕೇಶವಯ್ಯನ ಹೆಂಡತಿ ಹೇಳಿರಬಹುದಾದುದಕ್ಕೆ ಇನ್ನೂ ಸ್ವಲ್ಪ ಒಗ್ಗರಣೆಕೊಟ್ಟು ರುಚಿಕೊಟ್ಟುಮಾಡಿ, ತನಗೆ ತಲುಪಿಸಿ ಹೋಗಿದ್ದಳು!...

ಬ್ರಾಹ್ಮಣ ಕೇರಿಯಲ್ಲಿ ತನ್ನನ್ನು ನಾನಾ ರೀತಿಯಲ್ಲಿ ದೂಷಿಸುತ್ತಿದ್ದುದು ನಾಗಲಕ್ಷ್ಮಿಯ ಮೂಲಕ ಅಲ್ಪಸ್ವಲ್ಪ ತಿಳಿಯುತ್ತಿತ್ತು. ಈ ದೂಷಣೆಯಲ್ಲಿ, ಬ್ರಾಹ್ಮಣಕೇರಿಯ ಇತರ ಹೆಂಗಸರಿಗಿನ್ನ ತಲೆ ಬೋಳಿಸಿದ ವಿಧವೆಯರ ಪಾತ್ರವೇ ಅತಿ ಕಠೋರವಾದುದಾಗಿತ್ತು:

"ನಮ್ಮ ಮಂಡೆ ಬೋಳಿಸಿದಾಕ್ಷಣ, ನಮಗೇನು ಪ್ರಾಯ ಹೊರಟುಹೋಗಿದೆಯೇ?... ನಾವು ಕಚ್ಚೆಯನ್ನ ಬಿಗಿಯಾಗಿ ಕಟ್ಟಿಕೊಂಡಿಲ್ವೆ?... ಇವಳೊಬ್ಬಳೇನ ಹೆಂಗಸೇ?.... ನಮ್ಮ ಹಾಗೆ ಮಂಡೆ ಬೋಳಿಸಿ, ಮಡಿ ಸೀರೆ ಉಟ್ಟು, ದೇವಸ್ಥಾನಗಳಿಗೆ ಹೋಗಿ ಪುರಾಣ ಪುಣ್ಯ ಕಥೆಗಳ ಶ್ರವಣ ಮಾಡಿದ್ದರೆ, ಇವಳಿಗೆ ಈ ಗತಿ ಬರುತ್ತಿತ್ತೆ?..."

ತನ್ನ ವಿಷಯ ಕೇವಲ ಬ್ರಾಹ್ಮಣಕೇರಿಗೆ ಸೀಮಿತವಾಗಿದ್ದರೂ ಹೇಗೊ ಸಹಿಸಬಹುದಿತ್ತು. ಆದರೆ ಇದು ಊರಿನ ಕೇರಿಕೇರಿಯ ಕೊಳಕು ಕೊಚ್ಚೆಯಲ್ಲೂ

ಬಿದ್ದು ಒದ್ದಾಡುತ್ತಿದ್ದುದು, ರುಕ್ಮಿಣಿಯ ಒಡಲಿಗೆ ಉರಿಯುವ ಕೊಳ್ಳಿಯನ್ನೆ ಇಟ್ಟಂತಾಗಿತ್ತು... 'ಲಲ ಅನ್ನೋ ಅತ್ತಿಲ್ಲ, ತಗಿ ಬಿಗಿ ಮಾಡೊ ಗಂಡ ಮೊದ್ಲೆ ಇಲ್ಲ'– ಇಂಗೆಲ್ಲ ನೆನ್ನೆ ಸಂದೆ ಕೆರೆ ತಾವು ನಿಮ್ಮ ಇಸ್ಯಗಿ ಊರ್ನವಸಿ ಎಂಗಸ್ರು ಮಾತಾಡಿಕತ್ತಿದ್ರು ಅಮ್ಮಾರೆ ಎಂದು ತಮ್ಮೊಳು ಸೊಸಿಯ ಬೆಳಿಗ್ಗೆ ಹಾಲು ಕರೆಯುವಾಗ ವರದಿ ಮಾಡಿತ್ತು!...

ಸರಸಿಯನ್ನು ಎತ್ತಿ, ಮಲಗುವ ಕೋಣೆಗೆ ಹೋಗಿ ಅವಳನ್ನಲ್ಲಿ ಮಲಗಿಸಿ, ತಾನೂ ಹಾಸಿಗೆಯ ಮೇಲೆ ಶರೀರ ಚೆಲ್ಲಿ ಹೊರಳಾಡಿದಳು. ಕೃಷ್ಣಶಾಸ್ತ್ರಿಗಳೂ ತಮ್ಮ ಪೂಜೆ ಪುನಸ್ಕಾರ ಮುಗಿಸಿ, ಹಜಾರದ ಮೂಲೆಯ ತಮ್ಮ ಮಾಮೂಲು ಜಾಗದಲ್ಲಿ ಮಲಗಿ ಆಗಲೆ ಗೊರಕೆ ತೆಗೆದಿದ್ದರು... ರುಕ್ಮಿಣಿಯ ಒಡಲಾಳದಲ್ಲಿ ಇಷ್ಟು ದಿನವೂ ತೆಕ್ಕೆಹಾಗಿ ಮಲಗಿ ಸುಪ್ತವಾಗಿದ್ದ ಸಮಸ್ಯೆ ಥಟ್ಟನೆ ಮೇಲೆದ್ದು ಬಂದಿತು:

ನಾನು ಯಾರಿಗೆ ಬಸಿರಾಗಿದ್ದೇನೆ?– ನನ್ನ ಮಾವಯ್ಯನಿಗೊ, ಲಕ್ಕನಿಗೊ?... ಒಂದು ಮುಟ್ಟಿನಿಂದ ಇನ್ನೊಂದು ಮುಟ್ಟಿನ ಒಳಗೆ ಇಬ್ಬರು ಪುರುಷರು ಪ್ರವೇಸ ನಡೆದಿದೆ... ಇವರಿಬ್ಬರಲ್ಲಿ, ಇದು ಯಾರಿಂದ ಉಂಟಾದ ಬಸಿರು?– ಇದು ಕೇವಲ ದೈವಕ್ಕೆ ಮಾತ್ರ ತಿಳಿದಿರಬೇಕು!... ಈಗ ನಾನೇನು ಮಾಡಲಿ?– ಬೇಡದ ಈ ಗರ್ಭವನ್ನು ಕಳೆದುಕೊಳ್ಳಲೂ ಜನ ನನಗೆ ಅವಕಾಶ ಕೊಡಲಿಲ್ಲ– ಎಂದು ಎಣ್ಣೆಯಲ್ಲಿ ಬಿದ್ದ ನೋಣವಾಗಿ ಚಿಂತಿಸುತ್ತಿದ್ದಳು.

ಒಂದು ಸಂಜೆ ತೋಟದ ಕೊಳದಲ್ಲಿ ಬಟ್ಟೆಯೊಗೆದು ಮಡಿ ಕುಕ್ಕೆಯಲ್ಲಿಟ್ಟು ರುಕ್ಮಿಣಿಯ ಮಾರ್ಗದಲ್ಲಿ ತರುತ್ತಿದ್ದಾಗ ಆಗ ಮಾರಿಗುಡಿ ಅಣ್ಣದೀರು ಭರ್ತಿ ಕುಡಿದು ಬಂದಿದ್ದವರು ಈಚಲು ಗುತ್ತಿಯೊಂದರ ಬಳಿ ಬೀಡಿ ಸೇದುತ್ತ ಕುಳಿತು ಸುಧಾರಿಸಿಕೊಳ್ಳುತ್ತಿದ್ದರು. ಒಬ್ಬಳೇ ಒಂಟಿಯಾಗಿ ಬರುತ್ತಿದ್ದ ರುಕ್ಮಿಣಿ ಅವರ ಕಣ್ಣಿಗೆ ಬಿದ್ದಳು. ಮಾರ್ಗದಲ್ಲಿ ಒಂದು ನರಪಿಳ್ಳೆ ಕಾಣುತ್ತಿರಲಿಲ್ಲ. ಕುಡಿದು ಅಮಲಿನಲ್ಲಿ ಒಂಟಿ ಹೆಣ್ಣನ್ನು ಕಂಡು ರಣಹದ್ದುಗಳಂತೆ ಅವರು ಎದ್ದು ಬಂದು ಅವಳನ್ನು ಅಡ್ಡಗಟ್ಟಿದರು. ಬೆದರಿದ ಹುಲ್ಲೆಯಾಗಿ, ಕಂಪಿಸುತ್ತ ರುಕ್ಮಿಣಿ 'ಅಮ್ಮಾ...' ಎಂದು ಚೀರಿದಳು. ಅವಳ ಹುಯಿಲು ಮುಗಿಲನ್ನೇ ಮುಟ್ಟಿತ್ತು. ಅಷ್ಟರಲ್ಲಿ,

"ಯಾರ್ರೋ ಅದು– ಸುವರ್‌ಗಳ?... ಬಂದೆ... ಬಂದೆ... " ಎಂಬ ಕೂಗನ್ನು ಕೇಳಿ, ಗುರುಮಲ್ಲು

"ಕೊಪ್ಪಲು ಪೈಲ್ವಾನ್ ಗ್ಯೋಸ್ ಸಾಬರ ದನಿಯಂಗದೆ!... " ಎಂದು ಕಳವಳಿಸಿದ.

ಐವರು ಅಣ್ಣಂದಿರೂ ತಿರುಗಿ ನೋಡಿದರು... ಸಂಶಯವೇ ಇಲ್ಲ!... ದರುಮನಳ್ಳಿ ದಿಕ್ಕಿನಿಂದ ಇವರತ್ತಲೆ ದೊಣ್ಣೆ ಹಿಡಿದು ಓಡಿಬರುತ್ತಿರುವವರು ಗೋಸು ಸಾಬರೆ!...

"ಅವರು ಗೋಸು ಸಾಬ್ರೆ ಕರ್ನಲ್. ಅವರ ಪೇಟ, ಚೋಳ್ನ ನ್ವಾಡಿದ್ರೆ ಗ್ವತ್ತಾಗಕ್ಕಿಲ್ವ?" ಎಂದ ರುದ್ರ "ಸರಿ. ಇನ್ನೊಬ್ಬ ಯಾರ?" ಎಂದು ಪ್ರಶ್ನೆಯನ್ನು ಗಾಳಿಗೆ ಎಸೆದ.

"ಕೊಪ್ಪಲ ಕರಿಯಪ್ಪನಂಗೆ ಕಾಣಿಕ್ಕಿಲ್ವ..." ಎಂದವನು ಬೈಲಿಗರಂಗ.

"ಇನ್ನು ಇಲ್ಲಿ ನಿಲ್ಲೋದ ಚೆಂದಿಲ್ಲ, ನಡೀರ" ಎಂದು ಹೇಳುತ್ತಿರುವಂತೆ, ಬೈಗಿನ ಮಸುಕಿನಲ್ಲಿ ಅವರೆಲ್ಲರೂ ಪಕ್ಕ ಮಳೆಯೊಳಗೆ ಜಾರಿ ಮರೆಯಾದರು.

ಗೋಸು ಸಾಬರೂ ಕರಿಯಪ್ಪನೂ ಬರುವ ವೇಳಗೆ ರುಕ್ಮಿಣಿಯು ನೆಲಕ್ಕೆ ಕುಸಿದಿದ್ದಳು. ಗೋಸರು ಸಾಬರು ಬಂದವರೆ,

"ಒ, ಮೂಲೆಹಟ್ಟಿ ರುಕ್ಮಿಣವ್ವ!... ನೀನಾ ಅಮ್ಮಣ್ಣಿ?... ಅದ್ಯಾರು ಅಂಗೆ ನಿನ್ನ ಅಡ್ಡಾಕಿದ್ದೋರು?" ಎಂದು ಕೇಳಿದರು.

ರುಕ್ಮಿಣಿ ಪಕ್ಕದಲ್ಲೆ ಇದ್ದ ಮಾಸತಕಲ್ಲಿನ ಆಸರೆಯಿಂದ ಮಡಿಕುಕ್ಕೆಯನ್ನು ಎತ್ತಿ ನಿಂತು, ನಡೆದುದನ್ನು ಅಳುತ್ತಳುತ್ತ ಚುಟಕದಲ್ಲೆ ಹೇಳಿ ಮುಗಿಸಿದಳು. ಗೋಸು ಸಾಬರು,

"ಇನ್ನು ಮ್ಯಾಗೆ ಹಿಂಗಲ್ಲ ಒಂಟಿಯಾಗಿ ಬರಬ್ಯಾಡಿ. ಈಚೀಚ್ಗೆ ನಿಮ್ಮೂರು ಪೂರಾ ಕೆಟ್ಟೋಗೈತೆ. ಬಂದರೂವೆ, ಹೊತ್ತು ಇನ್ನೂವ ಅಲ್ಲಿರೋವಾಗ್ಲೆ. ನಿಮ್ಮ ತ್ವಾಟ ಬುಟ್ಟಿ ಹೊಂಟುಬುಡಿ" ಎಂದು ಪಡುವಣ ಬೆಟ್ಟದ ಸಾಲಿನ ಮೇಗಡೆ ಅಷ್ಟು ದೂರಕ್ಕೆ ಕೈಯೆತ್ತಿ ತೋರುತ್ತ, ಬುದ್ಧವಾದ ಹೇಳಿದರು.

"ಮಾವನವರು ಇನ್ನೂ ತೋಟದಲ್ಲೆ ಇದ್ದರು. ನಿನ್ನ ಹಿಂದೆಯೇ ಬರ್ತೇನೆ, ನಡಿ– ಅಂದರು. ಆ ಭರವಸೆಯನ್ನು ನಂಬಿಯೇ ಹೊರಟೆ. ಆದರೆ ಅವರ ಸುಳಿವೇ ಇಲ್ಲ. ಅವರು ತೋಟ ಬಿಟ್ಟು ಹೊರಡೋಕೆ ಯಾಕಿಷ್ಟು ವೇಳೆಯಾಯ್ತೊ ನನಗೆ ತಿಳಿಯದು" ಎಂದು ರುಕ್ಮಿಣಿ ವಿವರಿಸುತ್ತಿರುವಂತೆ,

"ಅದೊ, ಅದೋ– ಅಯ್ಯನೋರು ಬರ್‍ತಾ ಇರೋವಂಗದೆ..." ಎಂದ ಕೊಪ್ಪಲು ಕರಿಯಪ್ಪ.

ಗೋಸು ಸಾಬರು ಆ ದಿಕ್ಕಿನಲ್ಲಿ ನೋಡಿ,

"ಹೌದೌದೂ, ಸಾಸ್ತ್ರಿಗಳೇ– ಅದ್ಕೆ ಅನ್ಮಾನ ಎಲ್ಲೈತೆ?... ಅವರು ಕಾಲು ಎತ್ತಾಕಂಡಿ ಬತ್ತಾ ಇರೋ ವರಿಸೇಲೆ ಹೇಳಬೌದು, ಇದು ಅವರೇಯ– ಬ್ಯಾರೆ

ಇನ್ಯಾರೂ ಅಲ್ಲಾಂತ" ಎಂದು ದಾಡಿಯನ್ನು ನೀವಿದರು.

ಸ್ವಲ್ಪ ಹೊತ್ತಿನಲ್ಲೆ ಕೃಷ್ಣಶಾಸ್ತ್ರಿಗಳು ಇವರುಗಳನ್ನು ಕೂಡಿದರು. ಗೋಸು ಸಾಬರು ನಡೆದುದನ್ನು ವಿವರಸಿದಾಗ ಶಾಸ್ತ್ರಿಗಳ ಎದೆ ಝಲ್ಲೆಂದಿತು.

"ನಾನೂ ಇವರ ಹಿಂದೆಯೇ ಹೊರಟೆ. ನಮ್ಮ ತೋಟದ ಬಾಗಿಲಿನಲ್ಲಿ ಒಂದು ಭಾರಿ ಕಾಳಿಂಗಸರ್ಪ ಅಡ್ಡ ಆಯ್ತು. ಹಾಗೆ ಹಾವು ಅಡ್ಡಬಂದಾಗ ಮುಂದೆ ಹೋದರೆ ಕಂಟಕವೆಂದು ತಿಳಿದವರು ಹೇಳ್ತಾರೆ. ಆದ್ದರಿಂದ ಪುನಃ ತೋಟದೊಳಕ್ಕೆ ಹೋಗಿ, ಕೊಂಚ ವೇಳೆ ಅಲ್ಲೇ ಕುಳಿತಿದ್ದ. ಆ ಕಾರಣದಿಂದಲೆ ಬರೋದು ತಡವಾಯ್ತು. ಅಷ್ಟರಲ್ಲಿ ಈ ಪೋಲಿ ಪಟಾಲಂ..." ಎನ್ನುತ್ತಿರುವಂತೆ, ಗೋಸು ಸಾಬರು ಹಣೆಹಣೆ ಚೆಚ್ಚಿಕೊಳ್ಳುತ್ತ,

"ನಿಮ್ಮದು ಬ್ರಾಂಬರ್ದು ಒಳ್ಳೆ ಕತೆ, ಸ್ವಾಮಿ... ಕುಂತರೆ ಸಾಸ್ತ್ರ, ನಿಂತರೆ ಸಾಸ್ತ್ರ" ಎಂದು ನಗೆಯಾಡಿ, "ಇನ್ನುಮ್ಯಾಗೆ ಈ ಅಮ್ಮಣ್ಣಿಯೋರ ಒಬ್ಬೊಬ್ಬರ್ನೆ ಹಿಂಗೆ ಕಳಿಸಬ್ಯಾಡಿ. ಕಾಲ ಪೂರಾ ನಾಜೂಕಾಗೋಯ್ತು. ಮೊಲಾನೆ ಹುಲಿನ ಅಟ್ಟಿಸಿಕಂಡೋಗೊ ಕಾಲ ಬಂದುಬುಟ್ಟಂಗದೆ!... ಎಚ್ಚರಿಕೆಯಿಂದ ಇರಬೇಕು, ಸ್ವಾಮಿ, ನಾ ಬರ್ತೀನಿ" ಎಂದು ಗೋಸು ಸಾಬರು ಹೊರಟಂತೆ, ಕೃಷ್ಣಶಾಸ್ತ್ರಿಗಳು–

"ನಿಮ್ಮಿಂದ ತುಂಬ ಉಪಕಾರವಾಯ್ತು. ಗೊಸು ಸಾಹೇಬ್ರೆ... ಈಗ ಎತ್ತ ಕಡೆ ಪಯಣ?"– ಶಾಸ್ತ್ರಿಗಳು ಗೊತ್ತಿದ್ದೂ ಯಂತ್ರಿಕವಾಗಿ ಕೇಳಿದ ಪ್ರಶ್ನೆ.

"ಈ ಹೊನ್ನಲ್ಲಿ ನಾನು ಬ್ಯಾರೆ ಇನ್ನೆಲ್ಲಿಗೆ ಹೋಗ್ಲಿ, ಸಾಮಿ...ಸ ಗೊತ್ತೆ ಐತಲ್ಲ ನಮ್ಮ ರಾಚನ ಕಾಪಿಕ್ಲಬು– ಅಲ್ಲೀಗೇನೆ..." ಎಂದಾಗ, ಅಲ್ಲೊಂದು ಇಲ್ಲೊಂದು ಬಿಳಿ ಕೂದಲು ಇಣುಕುತ್ತಿರುವ ಗೋಸು ಸಾಬರ ದಾಡಿಯೂ ನಕ್ಕಂತಾಯಿತು, ರುಕ್ಮಿಣಿಗೆ! ಅಗಲವಾದ ಅವರ ಮುಖದಲ್ಲಿ ತನ್ನ ಭಾಗದ ದೈವವನ್ನೇ ಕಂಡಳು.

ಸಲಾಂ ಸಾಬ್, ಎಂದು ವಂದನೆ ಸಲ್ಲಿಸಿ, ಗೋಸು ಸಾಬರು ಕರಿಯಪ್ಪನೊಡನೆ ತೆರಳಿದ ಬಳಿಕ ಕೃಷ್ಣಶಾಸ್ತ್ರಿಗಳು, ಯಾವ ಮಾತೂ ಇಲ್ಲದೆ ಮೌನವಾಗಿ ಊರಿನತ್ತ ಹೆಜ್ಜೆಯಿಟ್ಟರು. ರುಕ್ಮಿಣಿಯೂ ಮಡಿಕುಕ್ಕೆಯನ್ನು ಇರುಕಿ ಅವರನ್ನು ಮೆಲ್ಲಮೆಲ್ಲನೆ ಹಿಂಬಾಲಿಸಿದಳು. ಶಾಸ್ತ್ರಿಗಳೂ ಗೊದಮೊಟ್ಟೆಗಳ ಕಟ್ಟನ್ನು ಹೊತ್ತು ನಿಧಾನವಾಗಿಯೇ ನಡೆಯುತ್ತಿದ್ದರು. ಅವರಿಗೆ ತೀರ ಸಮೀಪದಲ್ಲಿ ಹಿಂದಿನಿಂದ ಬರುತ್ತಿದ್ದ ರುಕ್ಮಿಣಿಗೆ ಅವರ ವಿಶಾಲವಾದ ಬೆನ್ನಿನ ಭಾಗ ಹೊರತು ಮುಂದಿನ ದೃಶ್ಯವಾವುದೂ ಅಷ್ಟಾಗಿ ಕಾಣುತ್ತಿರಲಿಲ್ಲ. ಆ ಕಾರಣಕ್ಕೊ ಅಥವಾ ತಾನು ಇನ್ನೇನು ಸ್ವಲ್ಪದರಲ್ಲಿ ಅನುಭವಿಸುವುದರಲ್ಲಿದ್ದ ಘೋರ ದುರಂತವನ್ನು

ಸ್ಮರಿಸಿಯೊ, ಅಂತೂ ಅವಳ ಆಲೋಚನೆ ಶಾಸ್ತ್ರಿಗಳನ್ನು ಕುರಿತೇ ಉರುಳಾಡಿತು...

ಬೇರೆ ವಿಷಯಗಳನ್ನೆಲ್ಲ ಈ ನನ್ನ ಮಾವನವರು ಎಂಥ ಸದ್ಗುಣಿ. ಆದರೆ ಒಂದು ಕೆಟ್ಟ ಮೂಹೂರ್ತದಲ್ಲಿ ಅಲಪಕ್ಕೆ ಆಸೆಪಟ್ಟು ತಮ್ಮ ಪುಣ್ಯಕ್ಷಯ ಮಾಡಿಕೊಂಡದ್ದಲ್ಲದೆ ನನ್ನನ್ನೂ ಪ್ರಚೋದಿಸಿ, ಆ ಪ್ರಚೋದನೆಯಿಂದ ನಾನು ತಮ್ಮಂತೆಯೇ ತಪ್ಪು ಮಾಡಲು ಅವಕಾಶವನ್ನು ಕಲ್ಪಿಸಿ, ಇನ್ನು ಎಂದೆಂದಿಗೂ ಹಿಂದಿರುಗಲಾಗದ ಪ್ರಪಾತಕ್ಕೆ ನನ್ನನ್ನು ತಳ್ಳಿದರಲ್ಲ?...

ಆದರೂ ಅಚ್ಚರಿಯ ಸಮಗತಿಯೆಂದರೆ: ಅವಳ ಆಂತರ್ಯದಲ್ಲಿ ಮಾವಯ್ಯ ತನಗೆ ಎಸಗಿದ ಅಪರಾದ ಈಗೀಗ ಗೌಣವಾಗಿ, ಲಕ್ಕನ ವಿಚಾರದಲ್ಲಿ ತಾನು ಮಡಿದ ತಪ್ಪೆ ಮಹತ್ತರಭೂತವಾಗಿ ಅವಳನ್ನು ಕಾಡುತ್ತಿದ್ದುದು!... ಲಕ್ಕನನ್ನೇ ತಪ್ಪಿತಸ್ಥನನ್ನಾಗಿ ಮಾಡಿದ ಊರಿನ ಪ್ರಮುಖರು ಅವನನ್ನು ಪಂಚಾಯಿತಿ ಕಟ್ಟೆಗೆ ಕರೆದಿರುವರಾದರೂ, ಊರಿನ ಒಬ್ಬಿಬ್ಬರಾದರೂ ಮಾವಯ್ಯನ ಮತ್ತು ತನ್ನ ಸಂಬಂಧ ಕುರಿತು ಶಂಕಿಸದೆ ಇರಲಿಲ್ಲ...

"ಯಾವ ಶಾಪವೊ ಅಥವಾ ಈ ಶಾಸ್ತ್ರಿ ಪೂರ್ವಜನ್ಮದಲ್ಲಿ ಮಾಡಿದ ಪಾಪವೋ– ಕಯ್ಯಿಗೆ ಬಂದ ಮಗನನ್ನು ಕಳೆದುಕೊಂಡ. ಮನೆಯಲ್ಲಿ ಬೇಯಿಸಲಿಕ್ಕೆ ಇಲ್ಲವೆಂದು ನೆಪಹೂಡಿ, ವಿಧವೆ ಸೊಸೆಯನ್ನು ಮನೆಯಲ್ಲೆ ಇರಿಸಿಕೊಂಡ. ಚಿಕ್ಕ ಪ್ರಾಯದ ಹೆಂಗಸು. ಕೇಶಮುಂಡನ ಬೇರೆ ಮಾಡಿಸಿಲ್ಲ..." ಎಂದು ಕೆಲವರು ಮಾತಾಡಿಕೊಂಡರೆ, ಲಕ್ಷಮ್ಮ ನಂಥವರು–

"ರಾತ್ರಿ ಊಟ ಮುಗಿದನಂತರ ಹೂವಿನ ಮಾಲೆ ಕಟ್ಟಿ ಮುಡಿದುಕೊಳ್ಳುತ್ತಂತೆ!– ಮೊನ್ನೆ ಆಚೆ ಬಾವಿ ಮನೆ ಶಿಂಗ್ರಮ್ಮ ನೋರೆ ಯಾಕೊ ರುಕ್ಮಿಣಿಯ ಮನೆಗೆ ಹೋಗಿದ್ದಾಗ, ಅವಳು ಮಲ್ಲಿಗೆದಂಡೆ ಕಟ್ಟುತ್ತಿದ್ದುದನ್ನ ತಾವೇ ಖುದ್ದಾಗಿ ನೋಡಿದರಂತೆ!– ಯಾಕೆ ರುಕ್ಕು, ಈ ಮಲ್ಲಿಗೆದಂಡೆ ಕಟ್ತಿದೀಯೆ? ಕೇಳಿದ್ದಕ್ಕೆ, ನಾಳೆ ದೇವರ ಪೂಜೇಗೇರಿ, ಅಂದಳಂತೆ! ಯಾವ ದೇವರ ಪೂಜೇನೂ, ಏನೋಮ್ಮ!..." ಕುಹಕವಾಡಿದ್ದು ರುಕ್ಮಿಣಿಯನ್ನು ಮುಟ್ಟಿತ್ತು.

ಇಂಥ ಕಟುನಿಂದೆಯನ್ನು ಯಾರೂ ಪ್ರಕಟವಾಗಿ ಆಡುತ್ತಿರಲಿಲ್ಲ. ಎಲ್ಲೊ ಕೆಲವು ಬ್ರಾಹ್ಮಣ ಕೋಣೆಗಳ ಗೋಪ್ಯದಲ್ಲಿ ಬಾವಿಯಲ್ಲಿ ನೀರು ಸೇದುವಾಗಿನ ರಹಸ್ಯ ಸಂಬಂಧಗಳಲ್ಲಿ ಕೇವಲ ಒಬ್ಬಿಬ್ಬರ ಮಾತುಕತೆಯಾಗಿ ಪುಟಿದಿತ್ತು, ಅಷ್ಟೆ...

ಹಿಂದೆ, ಕೆಲವರು ಬ್ರಾಹ್ಮಣ ಮಹಿಳೆಯರು ಇದೇ ರೀತಿ ಆಪಾದಿಸಿ, ಆ ನಿಂದೆ ತನ್ನ ಕಿವಿಗೂ ತಲುಪಿದಾಗ, ರುಕ್ಮಿಣಿಯೂ ಸಿಡಿಮಿಡಿಗೊಂಡುದುಂಟು. ಆದರೆ ಈಗ ಆಪಾದನೆ ಮಾಡಿವರು ಅಪ್ಪಿತಪ್ಪಿ ಮಾಡುತ್ತಿದ್ದರೂ ಅದರಲ್ಲಿ

ನಿಜಾಂಶವಿಲ್ಲ, ಎಂದು ರುಕ್ಮಿಣಿಯೂ ಯಾವ ಧೈರ್ಯದಲ್ಲಿ ತಳ್ಳಿ ಹಾಕಬಲ್ಲಳು?

ಊರು ಇನ್ನೇನು ಸಮೀಪಿಸುತ್ತಿತ್ತು, ಯಾವುದೊ ಹಳ್ಳಿಯ ಪೌರೋಹಿತ್ಯದ ನಿಮಿತ್ತವಾಗಿ ತೆರಳಿದ್ದ ವೆಂಕಣ್ಣ ಜೋಯಿಸರು ಊರು ಪಕ್ಕದ ಬಡಗಲಿನ ಹೊಲದ ಮೇಲೆ ಹಾದು ಬರುತ್ತಿದ್ದವರು ಗರುಡಪಕ್ಷಿಯೊಂದು ಕೀಕೀ ಎಂದು ಚೀರುತ್ತ ತಮ್ಮೆದುರಿನ ಎತ್ತರದಲ್ಲಿ ಹಾರುತ್ತಿರುವುದನ್ನು ಗಮನಿಸಿ, "ಕುಂಕುಮಾಂಕಿತ ವರ್ಣಾಯ..." ಇತ್ಯಾದಿ ಶ್ಲೋಕವನ್ನು ಹೇಳುತ್ತ, ವಿಷ್ಣುವಾಹನ ನಾದ ಗರುಡನಿಗೆ ಕೈಬೆರಳುಗಳ ಉಗುರಗಳನ್ನು ತೋರಿಸಬಾರದೆಂದು ಎರಡು ಕೈಗಳ ಬೆರಳುಗಳನ್ನೂ ಮಡಿಸಿ, ಬಿಳಿ ಪಂಚೆಯಲ್ಲಿ ಕಟ್ಟಿದ್ದ ಗಂಟನ್ನು ತಲೆಯ ಮೇಲೆ ಸಮತೋಲನವಾಗಿಡಲು ಪ್ರಯತ್ನಸುತ್ತ ಮಾರ್ಗಕ್ಕಿಳಿದರು. ಅವರನ್ನು ನೋಡಿ ಕೃಷ್ಣಶಾಸ್ತ್ರಿಗಳು–

"ಎಲ್ಲಿಂದ ಬರ್ತೀರೋದು ಜೋಯಿಸರು? ಗಂಟು ಬಲವಾಗಿರೊ ಹಾಗಿದೆಯಲ್ಲ?..." ಎಂದು ಪ್ರಾಸಂಗಿಕವಾಗಿ ಕೇಳಿದ್ದರು. ಅವರಿಗೆ ಜೋಯಿಸರೊಡನೆ ಸಂಭಾಷಣೆಯಲ್ಲಿ ತೊಡಗಬೇಕೆಂಬ ಇಚ್ಛೆಯಿಲ್ಲದಿದ್ದರೂ ಎದುರಿಗೆ ಪ್ರತ್ಯಕ್ಷವಾದಾಗ ಮಾತನಾಡಿಸಲೇಬೇಕಾದ ಲೌಕಿಕ ಸೌಜ್ಯವನ್ನು ಮಾತ್ರ ಪ್ರಕಟಿಸಿದ್ದರು.

"ಗೌಜಲಳ್ಳಿ ಮುಕುಂದಯ್ಯನೋರ ತಾಯಿಯ ಶ್ರಾದ್ಧ. ಅದನ್ನು ಮುಗಿಸಿ ನಡೇದೇ ಬರ್‍ತಾ ಇದ್ದೇನೆ. ಮುಕುಂದಯ್ಯನವರೇನೊ ಗಾಡಿಯಲ್ಲೆ ಕಳಿಸುತ್ತೇನೆ ಎಂದರು. ಆದರೆ ಅವರ ಮಗ ಗೊಬ್ಬರ ಹೊಡೆಯಬೇಕಾಗಿದೆ ಎಂದು ಹೇಳಿದ್ದರಿಂದ ನಾನು ನಡೆದೇ ಬರಬೇಕಾಯಿತು..." ಎಂದು ಗಂಟನ್ನು ತಲೆಯ ಮೇಲಿನಿಂದ ಹೆಗಲಿಗೆ ವರ್ಗಾಯಿಸಿಕೊಳ್ಳುತ್ತ," ಇದ್ಯಾವ ಮಹಾಗಂಟು ಅಂದಿರಿ, ಶಾಸ್ತ್ರಿಗಳೆ. ನೀವು ಕಂಡ ಹಾಗೆ, ನವನಾಗರಿಕ ಕಾಲ. ಎಲ್ಲವೂ ಸೂಕ್ಷ್ಮಕ್ಕೆ ಬಂದು ಹೊಯ್ತು. ಬೈ ಜನ ಹೇಳ್ತಾರಲ್ಲ – ಚುಟುಕಿ ಚಪ್ಪರ, ಎಂಟು ಕಾಲು ಬೇಟೆ, ಅಂತ–ಹಾಗೆ!... ಈಗೊಂದು ಹತ್ತು ವರ್ಷದ ಹಿಂದೆ ಶ್ರಾದ್ಧ ಮಾಡಿಸಲಿಕ್ಕೆ ಹೋದರೆ, ಒಬ್ಬ ಆಳು ಹೊತ್ತು ತರುವ ಸಾಮರ್ಥ್ಯ ಯಾರಿಗಿತ್ತು?... ಏನೊ, ನಾವೂನು ಕಾಲಕ್ಕೆ ತಕ್ಕ ರೀತಿ ಗೆಜ್ಜೆ ಕಟ್ಟುವುದನ್ನೂ ಕಲಿಯಬೇಕು. ಏನಂತೀರಿ?..."

ಶಾಸ್ತ್ರಿಗಳು ಬಲಾತ್ಕಾರದ ನಗೆ ತಂದು ನಕ್ಕರು. ಮುಂದೆ ಚಕಾರವೆತ್ತಲಿಲ್ಲ.

ಅಲ್ಲಿಂದ ಮುಂದೆ ಊರಿನ ದಿಡ್ಡಿಬಾಗಿಲಲ್ಲಿ ಅಶ್ವತ್ಥಕಟ್ಟೆ ಸಿಕ್ಕಿತು.

ಊರಿನೊಳಗೆ ಬಂದಾಗ, ಯಾವಾಗಲಾದರೊಮ್ಮೆ, ಎಲ್ಲಿಂದಲೊ ಹಠಾತ್ತನೆ ಬಂದು ಒಂದೆರಡು ಗಂಟೆ ಅಥವಾ ಒಂದೆರಡು ದಿನ ಊರಿನಲ್ಲಿ ಉಳಿದು

ಇನ್ನೆತ್ತಲೊ ಹೊರಟುಹೋಗುತ್ತಿದ್ದ ಅವಧೂತನೊಬ್ಬ ತನ್ನ ಪಾಡಿಗೆ ತಾನು, ಊರೊಳಗಿನ ಒಂದು ಬೀದಿಯಿಂದ ಇನ್ನೊಂದು ಬೀದಿಗೆ ತಿರುಗುತ್ತಿದ್ದ... ಲಂಗೋಟಿಯೊಂದನ್ನುಳಿದು ಅವನ ಮೈಮೇಲೆ ಒಂದು ಚೂರು ಬಟ್ಟೆಯಿಲ್ಲ. ಇವನು ಯಾರೊ, ಎಂತೊ ಯಾರಿಗೂ ತಿಳಿಯದು. ಇವನೊಬ್ಬ ನಿಗೂಢ ಮನುಷ್ಯ. ಯಾರಾದರೂ ನಿಮ್ಮ ಸ್ಥಳ ಯಾವುದು? ಎಂದು ಪ್ರಶ್ನಿಸಿದರೆ– ನೆಲವೇ ನನ್ನ ಮನೆ, ಆಕಾಶವೇ ನನ್ನ ಹೊದಿಕೆ, ಎಂದುಬಿಡುತ್ತಿದ್ದ... ಒಟ್ಟಿಯಲ್ಲಿ ಹಕ್ಕಿಯಂಥ ಬುದುಕು. ಯಾರ ಹಂಗೂ ಇಲ್ಲ, ಯಾವ ಭಯವೂ ಇಲ್ಲ... ಆ ಅವಧೂತನನ್ನು ನೋಡುತ್ತಿದ್ದಂತೆಯೆ, ರುಕ್ಮಿಣಿಯ ಒಡಲಾಳದಲ್ಲಿ 'ನಾನು ಸಹ ಈತನ ಹಾಗೆ ನಿರ್ಭೀತಿಯಿಂದ ಇರಲು ಸಾಧ್ಯವಾಗಿದ್ದರೆ?' ಎಂದೆನಿಸಿತ್ತು.

ಮನೆ ಸೇರಿ, ಅಡಿಗೆ ಊಟಗಳ ಕರ್ಮ ಮುಗಿಸಿ, ರುಕ್ಮಿಣಿಯು ಹಾಸಿಗೆಗೆ ಮಗ್ಗಲು ಕೊಟ್ಟಳು ಎಂಥೆಂಥವೊ ಯೋಚನೆಗಳು, ಅಸ್ಪಷ್ಟ ಯಾತನೆಗಳು– ಅವಳ ಮನಸ್ಸಿಗೆ ಲಗ್ಗೆ ಹಾಕಿ, ಅಲ್ಲಿ ಚಿಂತನೆಯ ಕ್ರೂರ ಎಳೆಗಳಿಂದ ಜಡೆ ಹೆಣೆಯುತ್ತ, ಹೆಣೆದ ಜಡೆಯನ್ನು ಆಲಸ್ಯದಿಂದ ಬಿಚ್ಚುತ್ತ, ಮತ್ತೆ ಹೆಣೆಯುವ ಕ್ರಿಯೆಯಲ್ಲಿ ತೊಡಗಿ, ರುಕ್ಮಿಣಿಯ ಒಳಗನ್ನು ಕ್ಷತವಿಕ್ಷತಗೊಳಿಸಿ ಆ ರಾತ್ರಿಯ ನಿದ್ರೆಯನ್ನು ಪೂರ್ತಿಯಾಗಿ ಬಡಿದೋಡಿಸಿದ್ದವು!

*          *          *          *

ಅತ್ತ ರಾಚನ ಸರಾಪಿನ ಅಂಗಡಿಯಲ್ಲಿ ನಿಶೆ ಏರುತ್ತಿರುವಂತೆ, ಗೋಸು ಸಾಬರಿಗೂ ಅವರ ಸ್ನೇಹಿತ ಕರಿಯಪ್ಪನೂ ಸರಾಪಿನ ಅಮಲಿನಲ್ಲಿ ವಾಗ್ವಾದಕ್ಕೆ ಆರಂಭಿಸಿ ಪರಸ್ಪರ ವೈಯಕ್ತಿಕ ಟೀಕೆಗೂ ಇಳಿದಿದ್ದರು. ಉಳಿದವರು ಕೇಕೆ ಹಾಕಿ ನಗುತ್ತ, ಇನ್ನೂ ಕೊಂಚ ಸರಾಪನ್ನು ಹೆಚ್ಚಾಗಿಯೇ ಹೀರುತ್ತಿದ್ದರು. ಆ ಸ್ನೇಹಿತರಿಬ್ಬರ ಕಲಹ ಉಳಿದವರಿಗೆ ತಮಾಷೆ ಒದಗಿಸಿ, ರಾಚನ ಅಂಗಡಿ ಎಂದಿಗಿಂತ ಇಂದು ಉತ್ಸಾಹಭರಿತವಾಗಿತ್ತು. ಅವರ ಪೈಪೋಟಿಯ ವಿಶೇಷ ಲಾಭ ಪಡೆದವನೆಂದರೆ, ಅಂಗಡೆ ಮಾಲೀಕ ರಾಚ! ಮೊಗೆ ಮೊಗೆ ಹೆಂಡ ಗಿರಾಕಿಗಳ ಗಂಟಲುಗಳಲ್ಲಿ ಇಷ್ಟು ದಿನಗಳಿಂದಲೂ ಬೇಗ ಇಳಿಯುತ್ತಿದ್ದುದನ್ನು ಕಂಡು ಹಿಗ್ಗಿದ ರಾಚ, ತಾನೂ ಒಂದು ಬಿಸಿ ಬಿಸಿ ಚಾಪೀಸು ಕಡಿಯುತ್ತ ಆನಂದಿಸುತ್ತಿದ್ದನು!

ಕಲಹಕ್ಕೆ ಕಾರಣ ತೀರ ಕ್ಷುದ್ರ. ಗೋಸು ಸಾಬರು ಕರಿಯಪ್ಪ ಇಬ್ಬರೂ ಶಕುನಿ ಕೊಪ್ಪಲು ಗರಡಿಯಲ್ಲಿ ಸಾಮು ಮಾಡಿದವರೆ. ಇಬ್ಬರೂ ಸಮಬಲರು. ಹಿಂದೆ ಪ್ರಾಯದವರಾಗಿದ್ದಾಗ ಅಖಾಡಕ್ಕೆ ಇಳಿದರೆ ಒಮ್ಮೆ ಗೋಸು ಸಾಬರಿಗೆ ಇನ್ನೊಮ್ಮೆ ಕರಿಯಪ್ಪನಿಗೆ ಜಯ ಲಭಿಸುತ್ತಿತ್ತು. ಹಿಂದೆ ನಡೆದ ಒಂದು ಕುಸ್ತಿಯಲ್ಲಿ

ತಾನ ಜಯಶೀಲನಾದೆನೆಂದು ಗೋಸು ಸಾಬರೂ, ಇಲ್ಲ ತಾನೇ ಗೆದ್ದೆದೆಂದು ಕರಿಯಪ್ಪನೂ ವಾಗ್ಯುದ್ಧಕ್ಕೆ ಇಳಿದಿದ್ದರು. ಕುಡಿತದ ಅಮಲಿನಲ್ಲಿ ಮಾತು ಎಲ್ಲಿಂದೆಲ್ಲಿಗೋ ಹೋಗಿತ್ತು.

"ನೀವು ಮಟಮಟ ಮದ್ಯಾನ್ನ ಕುಂಪಣಿಯೋರ್ಗೆ ರಾಜ್ಯ ವಪ್ಪಿಸಿದೋರಲ್ವ ಸಾಬರೆ?– ಅದೇಟು ನಿಸೂರು ಕ್ವಚ್ಚೇರಿ. ಸಮ್ಕಿರಿ..." ಎಂದು ಕರಿಯಪ್ಪ, ಟಿಪ್ಪೂ ಸುಲ್ತಾನ ರಾಜ್ಯ ಕಳೆದುಕೊಂಡ ಸಂದರ್ಭವನ್ನತ್ತಿ ಚುಚಿದ.

ಗೋಸು ಸಾಬರ ಪಿತ್ಥ ನೆತ್ತಿಗೇರಿತು.

"ಏಯ್ ಕರಿಯಪ್ಪ–ನೀವು ವಕ್ಕಲಿಗರು, ಬೂದುಗುಂಬಳಕಾಯಿ ಬೇಳೀನಾರ್ದೆ ಸ್ರೀ ರಾಮಚದ್ರಂಗೆ ನಿಮ್ಮ ಹೆಡತೀರು ತಾಲೀನು ಮುಕ್ಕಸ ತಕ್ಕಡಿಗೆ ಆಕಿ, ವಪ್ಪಿಸಿದ್ದು ಮರೆತೋಯ್ತು...?"

ಕರಿಯಪ್ಪ, "ಇನ್ನೊಂದು ವೊಗೆ ಸರಾಪು ಆಕ್ರೀ" ಎಂದು ರಾಚನಿಗೆ ಹೇಳಿ, "ಸಾಹೇಬ್ರೆ, ಅದ್ಯಲ್ಲ ಬ್ಯಾಡ. ಅವತ್ತು ನಾ ಗೆದ್ದೆನೊ, ನೀವು ಗೆದ್ರೂ ಅನ್ನಾದು ಈಗ ಬ್ಯಾಡ. ಈಗ ಈ ರಾಚನ ಅಂಗಡೀನೆ ಅಖಾಡ ಮಾಡಿಕಳಾವ. ಯಾನಂತಿರಿ?" ಎನ್ನುತ್ತ ಮತ್ತೆ ರಾಚ ಕೊಟ್ಟ ಹೆಂಡವನ್ನು ಹೀರಿದ.

ಅಂಗಡಿಯೊಳಗೆ ಕುಳಿತಿದ್ದ ಗಿರಾಕಿಗಳು ಗೋಸು ಸಾಬರು ಕರಿಯಪ್ಪನ ಸವಾಲಿಗೆ ಏನು ಜವಾಬು ಕೊಡುವರೊ ಎಂಬ ಕುತೂಹಲದಿಂದ ಗೋಸು ಸಾಬರ ಮುಖವನ್ನೆ ಕಾತರದಿಂದ ನೋಡುತ್ತಿದ್ದರು.

ಗೋಸು ಸಾಬರು ಇನ್ನೊಂದು ಮೊಗೆ ತರಿಸಿ ಕುಡಿದು,

"ಓ ಬೇಷಕ್ಕಾಗಿ, ನಾನೂ ತಯಾರ್ ಇದ್ದಿನಿ–" ಎಂದು ಎದ್ದರು. ಸರಾಪಿನ ಮಹಿಮೆ ಅತಿಯಾಗಿ, ಅವರ ಕಾಲುಗಳು ಸವಾಧಿನ ತಪ್ಪಿದವು. ತೂರಾಡಿ ತೂರಾಡಿ ತುಪಕ್ಕನೆ ಕೆಳಗೆ ಬಿದ್ದರು.

ಹೀಗೆಯೇ ಎದ್ದು ನಿಲ್ಲಲು ಪ್ರಯತ್ನಿಸಿದ ಕರಿಯಪ್ಪನೂ ಓಲಾಡುತ್ತ ಒಂದೆರಡು ಹೆಜ್ಜೆ ಮುಂದಿಟ್ಟು ಆಯ ತಪ್ಪಿ ಗೋಸು ಸಾಬರ ಪಕ್ಕದಲ್ಲೇ ಉರುಳಿಕೊಂಡನು.

ನೆರೆದಿದ್ದ ಗಿರಾಕಿಗಳಿಗೆ ಖುಷಿಯೋ ಖುಷಿ, ಕೇಕೆ ಹಾಕಿ, ಚಪ್ಪಾಳೆ ತಟ್ಟಿದರು. "ಇವತ್ತೀಗ ತಿಕೀಟೇ ಇಲ್ದ ನಾಟಕ!" ಎಂದು ನಲಿದರು.

ಸರಾಪು ಈ ದಿನ ನಿತ್ಯಕ್ಕಿಂತ ಅಧಿಕವಾಗಿ ಬಿಕರಿಯಾದ್ದು ರಾಚನಿಗೇನೊ ಸಂತೋಷ ತಿಂದಿತ್ತು. ಆದರೆ ಏಳಲು ಪ್ರಯತ್ನಿಸಿ ನೆಲಕ್ಕುರುಳಿದ ಗೋಸು ಸಾಬರಿಗೂ ಕರಿಯಪ್ಪನಿಗೂ ಅನಂತರದ ಕೆಲವೇ ನಿಮಿಷಗಳಲ್ಲಿ ನಿದ್ರೆ ಹತ್ತಿತ್ತು.

ಗಾಢನಿದ್ರೆ, ಅವರಿಬ್ಬರನ್ನೂ ಎಚ್ಚರಿಸಲು ಅಲ್ಲಿದ್ದವರೆಲ್ಲ ಪಟ್ಟ ಪ್ರಯತ್ನ ಸಫಲವಾಗಲಿಲ್ಲ. ರಾಚನೂ ಗಲ್ಲ ಬಿಟ್ಟು ಬಂದು ಎಬ್ಬಿಸಲು ನಡೆಸಿದ ಯತ್ನಗಳೂ ವಿಫಲವಾದವು. ಅಗಲೆ ಅಂಗಡಿ ಮುಚ್ಚುವ ವೇಳೆ ಮೀರಿತ್ತು. ಏನು ಮಾಡಲು ತೋಚದೆ ಕೊನೆಗೆ ಪಿಪಾಯಿಯಲ್ಲಿದ್ದ ನೀರನ್ನು ತಂದು ಅವರಿಬ್ಬರ ಮೇಲೂ ಸುರಿದ... ಎಷ್ಟೋ ಹೊತ್ತಾದಬಳಿಕ ಗೋಸುಸಾಬರು–

"ಅರೆ ಇಸ್ಕಿ–ಇದೆಲ್ಲಿಂದ ಬಂತಪ್ಪ ಈ ಕಲ್ಲುಮಳೆ?..." ಎನ್ನುತ್ತ, ಎದ್ದು ಕೂತರು– ಜೊತೆಜೊತೆಗೇ ಕರಿಯಪ್ಪನೂ,

"ಬೊಡ್ಡಿಮಗ್ನ ಮ್ವಾಡವೆ... ಇದ್ಯಾಕೀ ಜಿನ ನಮ್ಯಾಲೆ ಈಪಾಟಿ ಮಳೆ ಕರೀತ ಇದ್ದದ್ದು?"– ಹೇಳಿಕೊಳ್ಳುತ್ತ, ಎದ್ದು ಕೂತು, ಒದ್ದೆಯಾದ ಮೈ ಮೇಲಿನ ಬಟ್ಟೆಯನ್ನೇ ಮುಟ್ಟಿ ಮುಟ್ಟಿ ನೋಡಿಕೊಳ್ಳುತ್ತಿದ್ದ.

ಆ ಸ್ನೇಹಿತರಿಬ್ಬರ ಜ್ಞಾನವೂ ನೆಟ್ಟಗಾಗಿ ಅವರು ತಮ್ಮ ಊರು ಸೇರುವ ವೇಳೆಗೆ ಶಕುನಿಕೊಪ್ಪಲಿನ ಕೋಳಿಗಳು ಎಚ್ಚರಗೊಳ್ಳುತ್ತಿದ್ದವು.

## ೨೮

ಈ ಶುಕ್ರವಾರದ ದರುಮನಳ್ಳಿಯ ಬದುಕು ಬೇರೆ ಯಾವ ಶುಕ್ರವಾರದಂತೆ ಇರಲಿಲ್ಲ. ಈ ರಾತ್ರಿ ಊರಿನಲ್ಲಿ ದೊಡ್ಡ ನ್ಯಾಯ. ಹಿಂದೆ ಈ ಊರಿನಲ್ಲಿ ದೊಡ್ಡ ನ್ಯಾಯಗಳು ಆಗಿಲ್ಲವೆಂದಲ್ಲ. ಆದರೆ ಈ ರಾತ್ರಿಯ ನ್ಯಾಯಕ್ಕೆ ಒಂದು ವಿಶೇಷ ಮಹತ್ವ ಬಂದಿತ್ತು. ಹೊಲೆಯರ ಜಾತಿಯ ತರುಣನೊಬ್ಬ, ಉತ್ತಮರ ಹೆಂಗಸಿನ ಅದರಲ್ಲೂ ಹಿಂದೂ ಸಮಾಜದಲ್ಲಿ ಸರ್ವಶ್ರೇಷ್ಠವೆನಿಸಿದ ಬ್ರಾಹ್ಮಣ ಜಾತಿಯ ಯುವತಿಯೊಬ್ಬಳ ಸಂಗಸುಖ ಪಡೆದದ್ದು ಈ ಒಂದು ಊರಿನ ಉತ್ತಮರನ್ನೇ ಅಲ್ಲದೆ, ಸುತ್ತಮುತ್ತಲಿನ ಊರುಗಳ ಉತ್ತಮರೆನಿಸಿಕೊಂಡ ಜಾತಿಯವರೆಲ್ಲರನ್ನೂ ಕೆರಳಿಸಿತ್ತು.

ಹಿಂದಿನ ರಾತ್ರಿಯಲ್ಲಿ ಹೇಗೊ ಹೊರಳಾಡಿದ ಆ ಹಳ್ಳಿ, ಆ ಸುದ್ದಿಯನ್ನೆ ಮುಕ್ಕಳಿಸುತ್ತ ಬೆಳಗಿಗೆ ಕಣ್ಣು ತೆರೆಯಿತು. ರೈತರು ಹೊಲಗದ್ದೆಗಳಲ್ಲಿ ಉಳುವಾಗ, ಹೆಂಗಳೆಯರು ಬಾವಿಯಲ್ಲಿ ನೀರು ಸೇದುವಾಗ, ಕಮ್ಮಾರರಿಂದ ಎತ್ತಿನ ಗಾಡಿಗೆ ಪಟ್ಟೆ ಬಿಡಿಸುವಾಗ, ಕುಂಬಾರರು ಮಡಿಕೆ ಮಾಡುವಾಗ, ಬಡಗಿಗಳು ನೇಗಿಲುಗಳನ್ನು ಕೆತ್ತುವಾಗ, ಹೊಲಗದ್ದೆ ರೈತ ಮಹಿಳೆಯರು ಕಳೆ ಕೀಳುವಾಗ, ಹಳ್ಳಿಯ ಹೈಕಳು ಕಾಡಿಗೆ ಎಮ್ಮೆ ದನಗಳನ್ನು ಅಟ್ಟಿಹೋದಾಗ, ಬೆಳಗಿನಿಂದ ಉತ್ತ ದಣಿದ ಗಂಡಂದಿರಿಗೆ ಅವರು ಆರು ಬಿಟ್ಟ ಒಡನೆಯೇ ಕೈತೊಳೆಯಲು ನೀರು ಕೊಟ್ಟು

ಉಪ್ಪೆಸರು ರಾಗಿ ಮುದ್ದೆಯ ಜೊತೆಗೆ ಬೇಯಿಸಿ ಒಗ್ಗರಣೆ ಹಾಕಿದ ಬೆರಕೆ ಸೊಪ್ಪನ್ನು ಅವರ ಮಡದಿಯರು ನೀಡುವಾಗ, ತೋಟಗಳಲ್ಲಿ ಸ್ನೇಹಿತರು ಕೂಡಿದಾಗ, ಮಧ್ಯಾಹ್ನದ ವೇಳೆ ಭೋಜನ ಮುಗಿಸಿ ಪಗಡೆಯಾಡುವಾಗ ಜಗಲಿಗಳಲ್ಲಿ ಹರಟೆಮಲ್ಲರು ಸೇರಿದಾಗ, ಜನ ಎಲ್ಲಿ ನಿಂತರೆ ಎಲ್ಲಿ ಕುಳಿತರೆ ಅಲ್ಲಿ, ದರುಮನಳ್ಳಿಯ ಎಲ್ಲ ಕೋಮಿನ ಜನರೂ ಬೆಳಗಿನಿಂದ ಬೈಗಿನವರೆಗೂ ಪ್ರಮುಖವಾಗಿ ಚರ್ಚಿಸುತ್ತಿದ್ದುದು ಇದೊಂದೇ ವಿಚಾರ!

ಊರು ಈ ಚಿಂತೆಯಲೆ ಬೆಳಗನ್ನು ಬೇಯಿಸಿ, ಮಧ್ಯಾಹ್ನ ಕಂಡಿತು. ಮಧ್ಯಾಹ್ನದಲ್ಲಿ ಕುದಿದು ದಣಿದು ಸಂಜೆಗೆ ಕಾಲಿಟ್ಟಿತು. ಸಂಜೆಯ ಬಾಡಿ ಬಸವಳಿದು ರಾತ್ರಿಗೆ ಹೊರಳಿತು. ರಾತ್ರಿಯಾಗುತ್ತಲೂ ಹೆಣ್ಣು ಗಂಡು ಆದಿಯಾಗಿ ಸರ್ವರೂ ಬೇಗ ಬೇಗ ರಾತ್ರಿಯ ಊಟ ಮುಗಿಸಿದರು. ಉಂಡು ಕೈ ತೊಳೆಯುತ್ತಿರುವಂತೆಯೇ ಪಂಚಾಯಿತಿ ಕಟ್ಟೆಗೆ ಧಾವಿಸಿದರು. ನೆರೆಯೂರಿನ ಮಂದಿಯೂ ತಮ್ಮ ಮನೆಗಳಲ್ಲಿ ಊಟ ಮುಗಿಸಿ, ಇದೇ ಊರಿನ ನೆಂಟರ ಮನೆಗಳಲ್ಲಿ ಉಂಡು, ಪಂಚಾಯಿತಿ ಕಟ್ಟೆಯ ಎದುರಿಗಿನ ಮಾಳದಲ್ಲಿ ನೆರೆಯತೊಡಗಿದರು. ಚಾವಡಿಯ ಮುಂದಿನ ಎತ್ತರದ ವಿಶಾಲ ವೇದಿಕೆಯ ಮೇಲೆ ಮಂದಲಿಗೆ ಜಮಖಾನಗಳನ್ನು ಹಾಸಿ ಸ್ಥಳದ ಹಾಗೂ ಪರಸ್ಥಳದ ಯಜಮಾನತರು ಕೂರಲು ವ್ಯವಸ್ಥೆ ಮಾಡಲಾಗಿತ್ತು. ಉಳಿದ ಜನ ಮಾಳದ ವಿಸ್ತಾರದಲ್ಲಿ, ಅಲ್ಲಲ್ಲಿ ಬಂದು ಕೂರುತ್ತಿದ್ದರು. ಕೆಲವರು ಗಣಗಲೆ ಮರದ ಕಲ್ಲುಕಟ್ಟೆಯ ಮೇಲೆ, ಇನ್ನು ಕೆಲವರು ಊರೊಟ್ಟಿನ ಬಸವೇಶ್ವರ ಗುಡಿಯ ರಿಪೇರಿಗೆಂದು ತಂದು ಎಲೆದಿದ್ದ ಮರದ ದಪ್ಪನೆಯ ಲಾಂಬಿಗಳ ಮೇಲೆ ಮತ್ತು ಉದ್ದನೆಯ ಕಲ್ಲುಚಪ್ಪಡಿಗಳ ಮೇಲೆ, ಅವರಲ್ಲಿ ಹೆಚ್ಚು ಉತ್ಸಾಹಭರಿತ ತರುಣರು ದೇವಗಣಗಲೆ ಮರದ ಕಲ್ಲುಕಟ್ಟೆಯ ಮೇಲೆ, ಇನ್ನು ಕೆಲವರು ಊರೊಟ್ಟಿನ ಬಸವೇಶ್ವರ ಗುಡಿಯ ರಿಪೇರಿಗೆಂದು ತಂದು ಎಳೆದಿದ್ದ ಮರದ ದಪ್ಪನೆಯ ಲಾಂಬಿಗಳ ಮೇಲೆ ಮತ್ತು ಉದ್ದನೆಯ ಕಲ್ಲುಚಪ್ಪಡಿಗಳ ಮೇಲೆ, ಅವರಲ್ಲಿ ಹೆಚ್ಚು ಉತ್ಸಾಹಭರಿತ ತರುಣರು ದೇವಗಣಗಲೆ ಮರದ ರೆಂಬೆಗಳ ಮೇಲೆ–ಹೀಗೆ ಎಲ್ಲಂದರಲ್ಲಿ, ಮಾಳದ ಮಧ್ಯೆ ಇದ್ದ ಅಳೆತ್ತರದ ಕಲ್ಲುಕಂಬವೊಂದನ್ನುಳಿದು [ಈ ಕಂಬಕ್ಕೆ ಹಿಂದೆ ಪಾಂಡವರು ಕುದುರೆ ಕಟ್ಟುತ್ತಿದ್ದರೆಂದು ಪ್ರತೀತಿ! ಇಂಥ ಕಂಬಗಳು ಈ ಮಾಳದಲ್ಲಿ ಅನೇಕವಾಗಿ ಇದ್ದುವಂತೆ. ಅವೆಲ್ಲ ಈಗ ಊರಿನ ಕೆಲವು ಪ್ರಮುಖರ ಮನೆಗಳಲ್ಲಿ ದನಕರು ಎಮ್ಮೆಗಳನ್ನು ಕಟ್ಟಲು ಉಪಯೋಗಿಸಲಾಗುತ್ತಿದೆ!] ಬೇರೆ ಎಲ್ಲ ಜಾಗಗಳಲ್ಲೂ ಆದಷ್ಟು ಬೇಗ ಹಿಡಿಯಲು ಜನ ಮುತ್ತುತ್ತಿದ್ದರು...

ಆ ಬೆಳಿಗ್ಗೆ ತಾನು ಎಂತಾ ಪೇಚಿಗೆ ಸಿಕ್ಕಾಕಂಡೆ ಅಂತ ಲಕ್ಕ ಒದ್ದಾಡ್ತಿದ್ದ. ಯಾವ ಕೇಮೆ ಮಾಡಕ್ಕೂ ಮನಸ್ಸಿಲ್ಲ. ಅವ್ವ ಕ್ವಟ್ಟ ಬೆಳುಗಿನ ತಂಗಳಾವ ತಿಂದೋನಂಗೆ ನೆಪ ಮಡಿ ಎದ್ದಿದ್ದ. ಅವ್ನ ರೊಟ್ಟಿ ಮುರುಕು ಮುಕ್ಕಾಲು ಪಾಲು ಬೊಡ್ಡನ ವೊಟ್ಟೆ ಸೇರಿತ್ತು. "ನೀ ಸುಮ್ಕೆ ತಿನ್ನಲಾ, ಅಪ್ಪಯ್ಯ. ನಿನ್ನ ಬೊಡ್ಡಂಗೆ ನಾ ಯಾವತ್ತಾರ ಆಕಕ್ಕಿಲ್ಲ ಅಂದಿದ್ದೇನಾ" ಅಂತ ಕಲ್ಯಾಣಿ ಅಂತಿದ್ರೂವೆ ರಾಗಿ ರೊಟ್ಟಿಯ ತಾನೋಂದು ಚೂರು ಬಾಯಿಗೆ ಹಾಕಿದ್ರೆ, ಮೂರು ಚೂರ ತನ್ನ ನಾಯಿಗೆ ಎಸೀತಾನೆ ಇದ್ದ... ಆಗ, ತೆಂಗಿನ ಮರದ ಅಟ್ಟಿ ಅಡವಿಯಪ್ಪ ಬಂದೋನು,

"ಲಕ್ಕ–ನಮ್ಮ ದೊಡ್ಡೆಮ್ಮೆ ಕಡಸ್ಗೆ ಆಕ್ರ ಆಗದೆ ಕನ್ಲ... ವಸಿ ಬಂದು ತಕ್ಕೊಡ್ಲ' ಅಂದ ಕರದ.

"ಇವತ್ತು ನನ್ನ ಕಯ್ಲಿ ಆಗಕ್ಕಿಲ್ಲ ಕನ್ರಯ್ಯ"– ಲಕ್ಕ ವಳುಗ್ನಿಂದ್ಲೆ ಜವಾಬು ಕ್ವಟ್ಟ.

"ಈಟು ಜಿನವೂವೆ ಅಕ್ರ ಆದಾಗ್ಲೆಲ್ಲ ನನ್ನೆಮ್ಮೆ, ಎಮ್ಮೆ ಕರಗಳ ನೀನೇ ಬಂದು, ಆಕ್ರ ತಕ್ಕೊಟ್ಟು ಉಳೂಸಿರೋನು... ಈಗ ನೀ ಬರದೇ ವೋದರೆ, ನನ್ನೆಮ್ಮೆ ಕಡಸು ಬದುಕಕ್ಕಿಲ್ಲ ಕನ್ಲ" ಗ್ವಾಗರದ, ಅಡವಿಯಪ್ಪ.

"ವೋಟು ತೋರ ಕರೀತವ್ರೆ. ವೋಗ್ಲ ಮೊಗ"– ಕಲ್ಯಾಣೀಗೂ ತಗಾ ಮಾಡಿದ್ಲು.

ಮನಸಿಲ್ದ ಮನಸ್ನಲ್ಲಿ ಲಕ್ಕ ಎದ್ದು, ಅಡವಿಯಪ್ಪ ಜ್ವತೇಲಿ ವೊಂಟ...

ಅಡವಿಯಪ್ಪ ಅಟ್ಟೀಗೆ ವೋಯಿತ್ಲೂವೆ–ಜಟಜಟ್ನೆ ಆಕ್ರಾಗಿದ್ದ ಆ ಎಮ್ಮೆ ಕಡಸ್ನ ನಾಲಿಗೆ ಇರುದು, ಚುಜೀಲಿ ಬಗದು ರಕ್ತವ ಈಚ್ಗೆ ಕಡಸ್ದ. ವಸಿ ವೋತ್ನಲೆಲ ತಲೆ ವೋಗೀತಿದ್ದ ಕಡಸು ನೆಟ್ಟಗಾಯ್ತು.

"ಈ ಪಟ್ಟು, ನಾ ಬತ್ತೀನಿ ಕನ್ರಯ್ಯ" ಲಕ್ಕ ಎದ್ದ.

"ತಡೀಲ, ತಡೀಲ ನನ್ನೆಡತಿ ಕಡಬು ಮಾಡವ್ಳೆ. ತತ್ತೀನಿ ತಾಳು. ತಿಂದುಕಂಡು ವೋಗೀವಂತೆ–" ಅಂದು ಅಡವಿಯಪ್ಪ ವಳುಗೆ ನಡೆದಂತೆ, "ಬ್ಯಾಡಿ ಅಡವಿಯಪ್ಪಾರೆ. ನಂಗಾಗ್ಲೆ ತಂಗಳಾಗದೆ." ಲಕ್ಕ ಕೂಗ್ತಾನೆ ಇದ್ದ. ಅಡವಿಯಪ್ಪ ಅವ್ನ ಅಡಚಣ್ಯ ಕಿವಿಗೆ ಆಕಲ್ದೆ. "ಸುಮ್ಕಿರ್ಲ, ಒಂದೆಡು ಕಡಬು ತಿಂದ್ರೆ ಏನು ಆಗಕ್ಕಿಲ ಕನ" ಅಂದು ಮುತ್ತುಗ ಎಲೇಲಿ ಕಡಬು ಕಾಯಿಚಟ್ನಿ ಮ್ಯಾಲೆ ಮೊಸರು, ಇವೀಟ್ನೂ ತಂದು ಲಕ್ಕನ ಕಯ್ಯಿಗೆ ಇಟ್ಟೇ ಇಟ್ಟ! ನಿರ್ವಾಯಿಲ್ದೆ ಲಕ್ಕ ಅದ್ನ ತಿನ್ನಲೇಬೇಕಾಯ್ತು, ಕಡುಬು ಮುರುದು ತಿನ್ನಿತಿದ್ದಂಗೆ, ತಾನು ಕುಂತಿದ್ದ ಕ್ವಟ್ಟಿಗೆ ಇಚಾರದಲ್ಲಿ ಈ ಅಡವಿಯಪ್ಪಂಗೂ ಗಂಗವ್ವಗೂ ನಡುದ ಖಡಾಖಡಿ ನೆಪ್ಪಾಯ್ತು:

ಅಡವಿಯಪ್ಪನೂ ಗಂಗವ್ವನೂವೆ ದಾಯಾದಿಗೋಳು. ಈ ಒಂದೇ ಅಟ್ಟೀಲಿ ವಾಸ. ಗಂಡ ಇಲ್ದ ಗಂಗವ್ವಗೆ ಏಡೇ ಹೈಕಳು– ಒಂದು ಗಂಡು, ಒಂದು ಎಣ್ಣು. ಅಡವಿಯಪ್ಪಂಗೆ ನಾಕು ಗಂಡು ಮೂರು ಎಣ್ಣು. ಅದಕೇನೆ ಅವರ ಅಟ್ಟಿ ಹಂಚಿದ ಯಜಮಾನ್ರ.

"ಗಂಗಿ, ನಿಂಗಾರಾದ್ರೂ ಏಡೇ ಕೊನೆ. ಅಡವಿಗೆ ಅಟ್ಟಿ ತುಂಬ ಮಕ್ಕಳು. ಆದ್ರಿಂದ ಅಟ್ಟೀಲಿ ಒಂದು ಭಾಗ ನಿಂಗೆ; ಏಡು ಭಾಗ ಅಡವೀಗೆ. ಇನ್ನುಳಿಗೆ ಒಂದು ಭಾಗವ ಎಂಗಿದ್ರೂ ಇಬ್ಬರೂವೆ ಕ್ವಟ್ಟಿಗೆ ಮಾಡಿಕಂಡೇ ಇದ್ದೀರಿ. ಆದ್ರೆ ಈ ಕ್ವಟ್ಟಿಗೆ ಮಾತ್ರ ಈಗಿರೂವಂಗೆ ಇರಲಿ. ಇಬ್ಬರೂವೆ ನಿಮ್ಮೆತ್ತು, ಎಮ್ಮೆ, ದನ, ಕರ ಕಟ್ಟಿಕಂಡು ಹ್ವಂದಿಸಿಕಂಡೋಗಿ... ಏಟೇ ಆದ್ರೂ ನೀವು ಒಂದೇ ರಕ್ತ ಬೆರದಿರೋರು... ಈ ಇಸ್ಯದಲ್ಲಾರೂ ಕದ್ನ ಮಾಡ್ದೆ ನಡಕಂಡು ಓಗಿ..."– ಇಂಗೆ ತೀಪು ಕ್ವಟ್ಟೋಗಿದ್ರು.

ಆಗ್ಗಲೆ ಅಡವಿಯಪ್ಪ ಲಕ್ಕನ ಕುಟ್ಟೆ ಯೋಳಿದ್ದ:

"ನೀನು ಕುಳವಾಡಿಯಾಗಿ ಅವರ ಜ್ವತೇಲಿ ಬಂದಿರನಿಲ್ಲವೇನ್ಲ. ಲಕ್ಕ. ಆಗ ಈ ಯಜಮಾನ್ರು ಕದ್ನ ಮಾಡ್ದೆ ನಡಕಂಡೋಗಿ ಅಂತ ಯೇನೊ ಯೋಳೋದ್ರು... ಆದ್ರೆ ಕ್ವಟ್ಟಿಗೇನು ಭಾಗ ಮಾಡದೇಯ, ನಾವೇಡು ಅಟ್ಟಿಯೋರು ಯಾವತ್ತಾರು ಕದ್ನ ಮಾಡೂವಂಗೆ ಮಾಡಿಬುಟ್ಟು ವೋದರಲ್ಲ!.... ಅಲ್ಲ ಕನ್ಲ. ಅಟ್ಟೀಲಿ ಭಾಗ ಮಾಡಿದಂಗೆ, ಈ ಕ್ವಟ್ಟಗೇಲೂವೆ ಅಂಗೇಯ– ಏಡು ಭಾಗ ನಂಗೆ, ಒಂದು ಭಾಗ ಗಂಗೀಗೆ, ಅಂತ ಮಾಡಬಾರದಾಗಿತ್ತ? ನೀಯೇನೇ ಅನ್ನು, ನಮ್ಮೂರ ಈ ಯಜಮಾನ ಬೊಡ್ಡಿಮಕ್ಕಳು ಹಲಾಲುಕೋರ್ರು–ಯಾವ ನ್ಯಾಯಾನೆ ತಕ್ಕೊ. ಅದ್ನ ಬುಡಮಟ್ಟ ಪರಿಯರಿಸಕ್ಕೆ ಇಲ್ಲ.... ಯೆಲ್ಲೊ ಒಂದು ಕೇಪು ಮಡಿಗೇ ವೊಯ್ತಾರೆ! ಅದು ಯಾವುತ್ತಾರು ಡಂ ಅಂತ ಸಿಡಿಯೋದೇಯ!"

ಅಡವಿಯಪ್ಪ ಯೋಳಿದಂಗೇ ಆಯ್ತು...

ಅವರು ಏಡು ಆಳಿನ ಸಂಸಾರವೊವೆ ಮೊದಮೊದ್ಲು ವೊಂದಿಕೊಂಡು ವೊಂದಿಕೊಂಡೇ ನಡೀತಿದ್ದೊ. ಆದ್ರೆ ಬತ್ತಾ ಬತ್ತಾ ಈವಯ್ಯಂಗೂ ಗಂಗವ್ವಗೂ ಕದ್ನ. ಕದ್ನ, ಕದ್ನ... ಕದ್ನಕ್ಕೆ ಕಾರಣ ಇಸ್ಟೇಯ– ಅಡವಿಯಪ್ನ ಅವ್ವ ಹ್ವತ್ತಾರೆ ಎದ್ದಕೂಡ್ಲೆ ಪಂಚಗವ್ಯ ಅಂತ ಹಾಳುಹ್ವಟ್ಟೆಗೆ ಗೋವಿನ ಗಂಜಳ ಕುಡಿಯೋದು ನೇಮ ಇಟ್ಟುಕಂಡಿದ್ಲು. ಅದರಾಗು ಕಪ್ಪುಗೋವಿನ ಗಂಜಳಾನೆ ಆಗಬೇಕು! ಅವರ ತಾವು ಒಂದು ಕಪ್ಪುಹಸ ಇತ್ತು.ಅದು ಕಾಡ್ನಲ್ಲಿ ಹುಲಿ ಬಾಯಿಗೋಗಿ, ಅಡವಿ ಅವ್ವಂಗೆ ದಿಕ್ಕೇ ತೋಚನಿಲ್ಲ. ಕೊನೀಕೆ ಅವಳು ಗಂಗವ್ವನ ಆಸ್ರಯಾನೆ

ಮಾಡಬೇಕಾಯ್ತು. ಗಂಗವ್ನ ತಾವೂ ಒಂದು ಕಪ್ಪು ಹಸ ಇತ್ತು. ಮುದಿಯ. ಹಲು ಕ್ವಡ್ತಿರನಿಲ್ಲ. ಗೊಬ್ಬರಕೆ ತೊಪ್ಪೆನಾರು ಸಿಕ್ಕದೇಂತ ಗಂಗವ್ವ ಅದ್ನ ಸಾಕೊಂಡಿದ್ದು. ಮುದುಕಿ ದ್ಯಾವಮ್ಮ ತನ್ನ ಕಸ್ಟಾವ ಗಂಗವ್ವನ ತಾವು ತೋಡಿಕಂಡ್ಲಂತೆ. ಆಗ ಗಂಗಿ.

"ಅದಕೇನ ಅಜ್ಜಿ, ಗಂಜಳಕೂ ಬರವ? –ಒಂದೀಟು ಗಂಜಳವ ನೀ ಕುಡುದ್ರೆ ಯಾವ ಸಾಮ್ರಾಜ್ಯ ವೋದಾತು?... ಮಾರಾಯ್ನ ಮಗಳಂಗೆ ಕುಡಿ" ಅಂತ ವಪ್ಪುಗೆ ಕ್ವಟ್ಟಿದ್ಲಂತೆ...

ಅದೇ ಪರ್ಕಾರ ವಸಿ ದಿನ ನಡೀತು. ಯಾವ ತಂಟೆ ತಕರಾರು ಇರನಿಲ್ಲ. ಆದ್ರೆ ಮುದುಕಿ ದ್ಯಾವಮ್ಮ ಗಂಜಳ ಕುಡಿಯಕ್ಕೆ ಬಂದಾಗ್ನೆಲ್ಲ ಅಡವೀನೂ ಎದ್ದು ಬಂದು ಹಸ ತೂರುಸ್ತ ನಿಂತುಕಳಾನಂತೆ. ಅದರಲ್ಲೇನ ತೆಪ್ಪೊಂತ ಗಂಗವ್ವನೂ ಅದ್ನ ದೊಡ್ಡ ಇಸ್ಯ ಅಂತ ತಲೆ ಕೆಡಿಸಿಕೋನಿಲ್ಲವಂತೆ... ಇಂಗೇ ನಡೀತಿತ್ತು... ಲಕ್ಕನೂವೇ ಆ ಕಡೆ ವೋಯ್ತಾ ಬತ್ತ ನ್ವಡ್ತಾನೆ ಇದ್ದ...

ಒಂದು ದಿನ. ಗಂಗವ್ವ ಆಕಸ್ಮತ್ತು ಜಲಬಾದ್ಗೆ ಅವಸರವಾಗಿ ಎದ್ದು ಬಂದು ನ್ವಾಡಿದ್ರೆ, ಮುದುಕಿ ಆಗ್ಲೆ ಗಂಜಲ ಕುಡದು ಹ್ವಂಟೋಗದೆ. ಅಡವಿ ಒಬ್ನೆ ಬಕ್ಕೊಂಡು ಗಂಗಿ ಪಾಲಿಗೆ ಸೇರ್ದ ಕ್ವಟ್ಟಿಗೆ ತೊಪ್ಪೇಯ ಮಂಕರಿಗೆ ಬಾಚಿ ತುಂಬಿ, ತನ್ನ ಪಾಲಿಗೆ ಸೇರ್ದ ಕ್ವಟ್ಟಿಗ್ಗೆ ಸುರುಕತ್ತಾ ಅನೆ!... ಇದ ಕಂಡು ಗಂಗವ್ವಗೆ ಕ್ಯಾಣ ಅತ್ತಿತಂತೆ. ತನ್ನ ಸಮ್ಮಂದ, ತನಗಿಂತ ಹಿರಿಯೋನು, ಅವ್ನತಾವು ಮರ್ವ್ಯಾದ್ಯಾಗಿ ಮಾತಾಡಬೇಕು ಅನ್ನಾದ ವಕ್ಕಡೀಕೆ ಇರಸಿ.

'ಅಯ್ಯೊ, ಅಯ್ಯೊ, ಅಯ್ಯೊ – ಇದ್ಯಾವ ಮನಹಾಲ ಕೆಲುಸವ ನೀ ಮಾಡ್ತಿರಾದು?... ನನ್ನ ಕ್ವಟ್ಟಿಗೆ ತೊಪ್ಪೇನೆಲ್ಲಾನೂವೆ ಬಾಚಿ ನಿನ್ನ ಕಡೀಕೆ ಗುಡ್ಡೆ ಆಕ್ಕತ್ತಿದ್ದೀಯಲ್ಲ?..." ಬಿಸಿಲ್ಗೆ ಎಲ್ಟುಕಾಳು ಸಿಡಿಯೂವಂಗೆ ಸಿಡಿದ್ಲು...

ಲಕ್ಕ ಆ ವ್ಯಾಳ್ಯದಲ್ಲಿ ಊರೋಳಗೆ ಗಸ್ತು ವೋಡೀತ ಅವರ ಅಟ್ಟಿ ತಾವಿಕೆ ಬಂದೋನು, ಗಂಗಿ ಮಾತ ಕೇಳಿ, ಇಲ್ಲೇನು ನಡೀತಿದ್ದದು ಅಂತ ಕುತೂಲವಾಗಿ, ಅವರ ಜಗಲಿ ವರಗಿ ನಿಂತು ಕೇಳ್ತಿದ್ದ...

ಅಡವಿಯಪ್ಪ ಗುಳ್ಳೆನರಿಯಂತ ಮನಸ. ಕಣ್ಣಮಿಟುಕಿಸೊ ವೋಟು ಜಟ್ಟನೆ ತನ್ನ ಕ್ವಟ್ಟಿಗ್ಗೆ ಜಾರಿ,

"ಯಾರಮ್ಮಿ ನಿನ್ನ ತೊಪ್ಪೆ ಬಾಚಿದೋರು?– ಇದು ನನ್ನ ಹಸೀನದೇಯ. ನಿನ್ನ ಪಾಲಿಗೆ ಬಂದು ತೊಪ್ಪೆ ಆಕಿತ್ತು, ವೋಟೇಯ" ಅಂತ ಅಟಕಾಯಿಸ್ದ.

ಗಂಗವ್ವ ಮೆತ್ತಗಾದ್ಲು. ಅವಳ್ಗೆ ಇದ್ದರೂ ಇರಬೈದು ಅನ್ನಸಿರಬೇಕು.

ಅವಳು ಮುಂದುಕೆ ಬಾಯಿ ಬಿಚ್ಚದೆ, ತಾನೇ ತೆಪ್ಪು ಮಾಡಿದೋಳಂಗೆ ಹ್ವಂಟೋದ್ಲಂತೆ...

ಅದೇ ಸಂದೆಗೆ ಹೊಲದತ್ತಿರ ಸಿಕ್ಕಿದಾಗ, ಲಕ್ಕ "ಅದ್ರೇನ್ರಯ್ಯ ನಾತ್ರೆ ಗಂಗವ್ವಂಗೂ ನಿಗೂ ಆಪಾಟಿ ಮಾತು ನಡೀತಿತ್ವಲ್ಲ?" ಅಂತ ಕೇಳಿದ್ದ ಅದುಕೆ ಅಡವಿಯಪ್ಪ,

"ಏನಿಲ್ಲ ಕನ್ಲ ಅವಳ ಕಡೇದ ಒಂದೀಟು ತೊಪ್ಪೆ ಗೋರಿಕಂಡೆ. ಅದ್ಕೇ ವೋಟು ಬಾಯಿ ಮಾಡ್ತಿದ್ಲು" ಅಂತ ನಿಜಾನೆ ಯೋಳಿದ್ದ...

ಆದ್ರೆ ದಿನಂಪತಿ ಗಂಗಿ ಕಡೆ ತೊಪ್ಪೆ ಕಮ್ಮಿ ಆಯ್ತಾನೆ ಬಂತು. ಅವಳ್ಗೆ ಅನುಮನಸು ಬಂದು, ಇದ್ನ ಪರೀಕ್ಷೆ ಮಾಡೇ ಬುಡಬೇಕು ಅಂತ ನಿಚ್ಚೈಸಿ ಏಡು ನಾತ್ರೆ ಮೊದಲ ಕೋಳಿ ಕೂಗಕ್ಕೆ ಮುಂಚೇನೆ ಎದ್ದು ಕಾದ್ಲಂತೆ. ಅವಳಂಗೆ ಕಾಯ್ತಿರಾದು ಅಡವಿಯಪ್ಪಂಗೆ ತಿಳೀನಿಲ್ಲಂತೆ, ಏಡು ನಾತ್ರೇನೂ ಅಡವಿ ತೆಪ್ಪದೆ ತನ್ನವ್ವ ಗಂಜಳ ಕುಡಿದು ಆಯಿತ್ಲೂವೆ, ಗಂಗಿ ಪಾಲಿನ ತೊಪ್ಪೇಯ ಮಸ್ತಾಗಿ ಬಾಚಿ ತನ್ನ ಕಡೀಕೆ ಅಕ್ಕಂಡಿದ್ದನಂತೆ. ಅದ್ನ ಗಂಗಿ ಕಣ್ಣಾರ ಕಂಡ್ಲು. ಮುದುಕಿ ಗಂಜಳ ಕುಡುದೋಯ್ತಿತ್ತು. ಆಮ್ಯಾಕೆ ಸುರು ಆಯ್ತಿತ್ತು ಅವಯ್ನ ಪಾರಪತ್ಯ. ಗಂಗಿ ಇದ್ನೆಲ್ಲ ನ್ಯಾಡಿಕಂಡು ಒಂದು ಜಿನ ಸುಮ್ಕಕಿದ್ಲು. ಏಡ್ ಜಿನ ಸುಮ್ಕಕಿದ್ಲು. ಮೂರನೇ ಜಿನ ತಡೀನಿಲ್ಲ.

"ಇದೆಂತ ತಟವಟಗಾರ ಜಲ್ಮವ ನಿಂದು?... ಈ ತೋರ ಎಮ್ಮೆ, ದನ ಇರೋನೂವೆ, ಈ ಪಾಟಿ ಹಡಾಸೆ ಯಾಕೆ ಅಂತೀನಿ?"– ತನ್ನ ಅಟ್ಟಿ ಕದದ ಕಿಂಡೀಲಿ ಮೊಗುಮ್ಮಾಗಿ ನ್ವಾಡ್ತಿದ್ದೋಳು ಆಣೆ ಚೆಚ್ಚಿಗತ್ತ ಕೇಳಿದ್ಲಂತೆ.

"ಯಾರ್ಲೇ ನಿನ್ನ ತೊಪ್ಪೆ ಬಾಚಿದೋರು?" ಅಂತ ಅಡವಿ ಬಾಯಿಜೋರು ಮಾಡಿದ್ನಂತೆ.

"ಅವ್ವಿ, ನೀ ತೊಪ್ಪೆ ಬಾಚಿದ್ದ ಏಡು ನಾತ್ರಿದ್ಲೂ ನಾನೂವೆ ನ್ವಾಡ್ತಾನೆ ಇವ್ನಿ. ನಾನು ಕಣ್ಣಾರೆ ನ್ವಾಡಿದ್ನೆ ಸಟೆ ಮಾಡಿ, ಆಟಕಾಯಿಸ್ತಿದ್ದೀಯಲ್ಲ–ನಾ ಯೇನೆಳ್ಲಿ?"

"ಏನ್ಲೆ, ವೋಟೊತ್ನಿಂದ ನನ್ನ ತಟವಟಗಾರನ್ನೆ ಮಾಡಿ ಆಟಕಾಯಿಸ್ತಿದ್ದೀಯಲ್ಲ?... ನಿನ್ನ ದನೀನ ತೊಪ್ಪೆ ಅದ್ಯಾವ ಸೂಳೆಮಗನಿಗೆ ಬೇಕು. ನಮ್ಮ ರಾಸುಗೊಳ ಗೊಬ್ಬರವ ನಮ್ಮ ಹೊಲಗಳಿಗೆಲ್ಲ ದಾರಾಳ್ವಾಗಿ ಎರಚಾಡಿದ್ರುವೆ ಇನ್ನೂ ಮಸ್ತಾಗಿ ಮಿಕ್ಕೋಯ್ತದೆ!... ಇಸ್ಯ ಇಂಗಿರುವಾಗ, ನಿನ್ನ ತೊಪ್ಪೆ ತಕ್ಕಂಡು ನಾ ಯೆಲ್ಲಿಗೆ ಬಡಕೊಳ್ಳಿ?"

ಅಡವಿಯಪ್ಪನ್ನ ಕಂಡರೆ ಊರ್ನಲ್ಲಿ ಯಾರ್ಗೂ ಆಯ್ತಾ ಇರನಿಲ್ಲ. ಅವ್ನು ಸಣ್ಣಪುಟ್ಟಕ್ಕೆ ಆಸೆ ಪಡ್ತಿದ್ದಲ್ಲದೆ, ಊರ್ನಲ್ಲಿ ಯಾರ ಕುಟ್ಟೂ ಸೇರ್ತಿರನಿಲ್ಲ. ತಾನಾಯ್ತು, ತನ್ನಹೊಲ ಮನೆ ಆಯ್ತು. ಊರ್ನಲ್ಲಿ ಆಯಿತ್ತದ್ದ ಪಂಚಾತಿ ನ್ಯಾಯ ನ್ವಾಡಿ ನ್ವಾಡಿ ಅವನ್ಗೆ ಪಂಚಾತಿ ಆಂದ್ರೆ ಬೆಚ್ಚಿ ಬೀಳೋನು. ಏನಾರ ತನ್ನ ಹ್ವಟ್ಟೇಲಿ ಮಡಕ್ಕಳಕ್ಕೆ ಆಗದೆ ಇರೊ ಇಸ್ಯ ಇದ್ದರೆ, ಅದ್ನ ತನ್ನ ಹ್ವಟ್ಟೆ ಉಬ್ಬರ ಕಳಕಳಕ್ಕೆ ಲಕ್ಕನೊಬ್ಬನ ಆತ್ರ ಬಾಯಿ ಸಿಡಿಲಿಸೋನು!.. ಆದಕೇನೆ ಆವತ್ತು ನಡದ ಜಗಳದ ಇಸ್ಯವ ಆಮ್ಯಾಕೆ ಮಾತಾಡ್ತ ಅಂದಿದ್ದ– "ಗಂಗಿಗೆ ಅವತ್ತು ಜಬಾಬು ಕ್ವಡ್ತ ದರುಮರಾಯನ ಮರಿಮಗನಂಗೆ ಮಾತಾಡಿದ್ದೆ ಕನ್ಲ" ಅಂತ ನಕ್ಕಿದ್ದ.

ಆದ್ರೆ ಗಂಗೆ ವ್ಹೋಟಕೆ ಸುಮ್ಕ ಕಾಗನಿಲ್ಲವಂತೆ, ಅವಳು–

"ಇದೀಗ ಚೆಂದ. ನಾನು ಕಣ್ಣ ಕಿಸುಗಂಡು ಚೆಂದಾಗಿ ನ್ವಾಡಿದ್ನೆ ಇಲ್ಲಾಂತ ಮಲೆಯಾಳಿ ಕಣ್ಣುಕಟ್ಟು ಮಾಯ ಮಾಡಕ್ಕೆ ವ್ಹೋಂಟಿದ್ದೀಯಲ್ಲ, ನೀನೀಗ ಐನಾತಿ ಭಂಡ... ಇನ್ನು ನಿನ್ನ ತಾವು ಎಚ್ಚು ಮಾತಾಡಿ ಸುಕವೇನ?... ಕ್ಯಾಳು. ಇನ್ನೊಂದು ಜಿನ ಏನಾರ ಇಂಗೆ ನನ್ನ ಚೋಗಿ ತೊಪ್ಪ ನೀ ಕದೀತ ಸಿಕ್ಕಾಕಂಡ್ರೆ ನಾ ಮಾತ್ರ ಸುಮ್ಮಕಿರೋಳಲ್ಲ..." ಅಂದೇಬುಟ್ಲಂಟೆ!

"ಅದೇನು ಮಾಡಿಬುಟ್ಟೇಣೆ?" – ನೆವುರಿದ್ನಂತೆ ಅಡವಿ.

"ಏನು ಮಾಡಬುಟ್ಟೀ ಅಂದ್ರೆ, ಮಾಡಾದ್ನೆ ಮಾಡ್ತೀವಿ" ಅಂತ ಗಂಗಿ ಸಿಡುಕಿದ್ಲಂತೆ.

" 'ಅದೇನು ವಸೀತಿಯೋ ವಸಿ' ಅಂತೇಳಿ ಕಣ್ಣ ಮೆಡುರುಸಿ ವಳೀಕೆ ನಡುದೆ ಕನ್ಲ, ಲಕ್ಕ"– ಅಡವಿ ಲಕ್ಕನ ಕುಟ್ಟೆ ಇವರಿಸಿದ್ದ.

ಮುಂದಿನ ದಿನಗಳಲ್ಲಿ ಈ ಆಣಾಣಿ ನಿಲ್ಲನೇ ಇಲ್ಲ. ಅಡವಿಯಪ್ಪ ತೊಪ್ಪೆ ಬಾಚೋದು ತೆಪ್ಪನಿಲ್ಲ. ಗಂಗವ್ವ ಸಿಡಾರ್ ಪಡಾರ್ ಅನ್ನಾದೂ ತೆಪ್ಪನಿಲ್ಲ.. ಮಳೆ ಕರೀದೆ ಮ್ವಾಡಕ್ಕೆ ಮ್ವಾಡ ಡಿಕ್ಕಿ ಮೋಡದಂಗಿತ್ತು ಅವರ ಕದ್ನ! ಆದ್ರೆ ಒಂದು ಜಿನ ಅದು ಮುಗಲ್ನೆ ಮುಟ್ಟಿಬಿಡ್ತು. ಪರ್ತಿ ರೋಜಾನು ಯೋಳ್ತಿದಂಗೆ ಅವತ್ತೂವೆ ಗಂಗವ್ವ,

"ನಾ ಯೇಟು ಬಗೇಲಿ ನಿಂಗೆ ಯೋಳ್ತಾ ಇದ್ರೂವೆ, ನಿನ್ನಾಟ ಬುಡ್ನೇ ಇಲ್ಲ. ಈ ಪಟ್ಟು ನೀನು ನಂಟ, ನಂಗೆ ಇರಿಯೋನು ಅನ್ನಾದ್ನೆಲ್ಲ ಮರತು ನಾನೂವೆ ಕಿತ್ತು ನಿಂತುಕಾಬೇಕಾಯ್ತದೆ" ಅಂದ್ಲಂತೆ.

"ಅದೇನು ಕಿತ್ತುಗಂಡೀಣೆ?" ಅಂದೋನು. "ಸಕ್ತಿ ಇದ್ರೆ, ಕಿತ್ತುಗೋ ಬಾಣೆ" ಅಂತ ಅಡವಿ ಮಾತ ಚುಕಾಯ್ಸಿಬುಟ್ಟನಂತೆ.

"ನಾ ಯಾಕೊ ಅಂತ ಹೀನ ಕೆಲುಸ ಮಾಡಕ್ಕೆ ಬರಾನೆ?– ನೀ ಇಂಗೇ ಆಡ್ತಿದ್ರೆ, ನನ್ನ ಸಕ್ತೀಯ ಬ್ಯಾರೆ ತರ ತೋರ್ತೀನಿ" ಅಂದ್ಲಂತೆ ಗಂಗಿ.

"ಅದೇನೆ ನೀ ಕಿಸಿಯಾದು?"– ಅಡವಿ ರೇಗಿದ್ನಂತೆ.

"ಎಕ್ಕಡ ಪೈಜಾರ ತಕ್ಕತ್ತೀನಿ"– ರೋಸಗಿ ಅಂದೇಬುಟ್ಲಂತೆ ಗಂಗಿ.

ಈ ಮಾತ ಕೇಳಿ ಅಡವಿಗೆ ನೆತ್ತಿ ಸುಳಿ ಸುದ್ದ ಉರಿದೋಯ್ತಂತೆ.

"ಏನೇ ಹರಾಮಿ ರಂಡೆ. ನನ್ನ ಎಕ್ಕಡದಲ್ಲಿ ಹ್ವಡೀತೀನಿ ಅಂತ ಯೋಳೊ ವೋಟು ದಕ್ಕಸತ್ತು ಬಂತೇನೆ ನಿಂಗೆ?..."– ಇಂಗಲ್ಲ ಕಿರುಚಾಡಿದ್ನಂತೆ.

"ಮಂತೆ ಅದೇಟು ತೋರ ಯೋಳಿದ್ರೂವೆ ನೀ ಈ ಕೆಲ್ಸ ಮಾಡ್ತಿರುವಾಗ ನಂಗಿನ್ನೇನು ಉಳಿದಿದ್ದಾತೊ, ನನ್ನ ಹಾಟುಗಳ್ಳ?" ಅಂದೇಬುಟ್ಲಂತೆ.

"ಲೇ, ಲೇ, ಲೇ–ನನ್ನ ಎಕ್ಕಡದಲ್ಲಿ ಹ್ವಡೀತೀನಿ ಅಂದದೂ ಅಲ್ದೆ, ಹಾಟುಗಳ್ಳ ಅಂತ ಬ್ಯಾರೆ ಕರಿದೀಯೇನೆ?... ಇನ್ನೊಂದು ದಪ ನೀ ಇಂಗೇನಾರ ಅಂದ್ರೆ, ನಿನ್ನ ರಕುತ ಕುಡುದುಬುಟ್ಟೇನು, ಉಸಿರು!" – ಅಡವಿಯಪ್ಪ 'ಇಂಗೆ ಬಯ್ಯಿಕತ್ತ, ಬಯ್ಯಿಕತ್ತ ಅಟ್ಟಿ ವಳುಕೋದೆ ಕನ್ಲ. ಅಂದಿದ್ದ, ಲಕ್ಕನತ್ರ!...

ಆದ್ರೆ ಬತ್ತಾ ಬತ್ತಾ ಗಂಗವ್ವ ಸಂತೆ ಬಜಾರೀನೆ ಆಗೋದ್ಲು. ಅಡವಿ ಏಟೇ ಆದ್ರೂವೆ ಮೀಸೆವೊತ್ತ ಗಂಡಸು. ಅವ್ನ ಮ್ಯಾಲೆ ಎಣ್ಣೆಂಗಸು ಕಯ್ಯಿ ಮಾಡಕ್ಕಾದಾತ?– ಅವಳ ತಾವು ಇದ್ದ ಒಂದೇ ಪಾಸುಪತಾಸ್ತ್ರ, ಅಂದ್ರೆ ಬಾಯಿಗೆ ಬಂದಂಗೆ ಬಯ್ಯೋದು!... ಚಿಕ್ಕೋಳಾಗಿ ಇದ್ದೇನಿಂದ ಊರ್ನಲ್ಲಿ ತಾನು ಕಲ್ತಿದ್ದ ಕೆಟ್ಟ ಕೆಟ್ಟ ಬೋಗಳಾನೆಲ್ಲ ಗಂಗಿ, ಗಂಟಲು ದೊಡ್ಡದು ಮಾಡಿ ಅಡವಿಯ ಪತಿನಿತ್ಯ ಬಯ್ಯೋದೆ ಈಗ ಅವಳ ಕುಲುಮೆ ಆಯ್ತು!... ತಿಂಗಳಾನುಗಟ್ಲೆ ನಿಲ್ಲುನೇ ಇಲ್ಲ, ಅವರಿಬ್ರ ಕದ್ನ!...

ಲಕ್ಕ ಕಡಬು ತಿಂದು, ಅಡವಿ ಕ್ವಟ್ಟಿಗಿಂದ ಎದ್ದೊನು, ಅವರ ಗುಡ್ಲಿಗೋಗಿ ಚಾಪೆ ಹಾಸಿ, ದುಪಟಿ ವೊದ್ದು, ಬಿದ್ದುಕಂಡ. ಆಗಲೂವೆ ಇದೇ ಯೋಚ್ನೆ ಬುಡನಿಲ್ಲ... ಹೊಸೋದು ತಡ ಅಂದ್ರೆ, ನಾರೋದು ತಡವ?... ಗಂಗಿ, ಅಡವಿ ಇಬ್ಬರ ಲಟಾಪಟಿ ಸುದ್ದಿ ಊರ್ನ ಸಂದಿಗೊಂದೀರೆಲ್ಲ ಬಿದ್ದು ಒದ್ದಾಡ್ತು. ಮಾತ್ರ, ಅಡವಿಯೂವೆ ಗಂಗವ್ವನೂವೆ ಅತ್ರದ ಸಮ್ಮಂದ. ನಾವ್ಯಾಕೆ ಈಮದ್ಯ ತಲೆ ಆಕವೆ ಅಂತ ಊರ್ನೋರು ಅವರು ಏಡಾಳ್ಗೂ ಬುದ್ದಿಯೋಳಕ್ಕೆ ಮುತ್ವರ್ಜಿ ವಯಿಸನಿಲ್ಲ. ಆದ್ರೆ ಗಂಗವ್ವ ಚೆಂದುಳ್ಳಿ ಎಣ್ಣು. "ಇವರ ಮ್ಯಾಲೆ ನಂಜೇಗೌಡ ಒಂದು ಕಣ್ಣ ಇಟ್ಟೇ ಇದ್ದ ಕನಲ..." ಅಂತ ಲಕ್ಕನಿಗೆ ತಿಳುಸಿದ್ದ ಅಡವಿ, "ನಾನೊಂದು ಪೆದ್ದುಗರ... ನಂಗೆ ಆ ಇಸ್ಯದಲ್ಲಿ ಸಂಸಯ ಬರನೇ ಇಲ್ಲ!" ಅಂತ ಎಲ್ಲ

ಮುಗುದಮ್ಯಾಲೆ ಲಕ್ಕನತ್ರ ಬೇತುಗಂಡಿದ್ದ!...

ಆದ್ರೇ ಗಂಗವ್ವ ಬಾಯ್ನಲ್ಲಿ ಬಜಾರಿ ಅದ್ರೂವೆ ಮಾನಿಸ್ತ ಎಂಗಸು. ಹಾದೀಲಿ ಹ್ವಯ್ತಿರೋನಾಗ, ಇನ್ನೊಬ್ಬ ಗಂಡಸ ಕತ್ತೆತ್ತಿ ಮುಕ್ಕಸ ನ್ವಾಡ್ತಿರನಿಲ್ಲ!– ಈಗ ಅಡವಿಯಪ್ಪನೊಂದ್ಗೆ ಅವಳು ಕಾದಾಟಿಕೆ ನಿಂತದ್ದು ನಂಜೇಗೌಡಂಗೆ ಕ್ವಾಟೆ ನುಗ್ಗಕ್ಕೆ ಭರ್ಜರಿ ಕನ್ನ ಸಿಕ್ಕಿದಂಗಾಯ್ತು!...

ಒಂದು ಸಂತೆಜಿನ ಹುಣಸೂರ್ಗೆ ವೋಗಿದ್ದಾಗ, ನಂಜೇಗೌಡ ಸಿಕ್ಕಿ,

"ಬಾಪ್ಪ ಅಡವಿ, ನಿನ್ನ ಸಂಗಾಟ ವಸಿ ಮಾತಾಡೊದೆ" ಅಂತ ಕರದ್ರು ಕನ್ಲ, ಲಕ್ಕ. ನಂಗೆ ವೋಗಕ್ಕೆ ಇಸ್ಟ ಇರನಿಲ್ಲ, ಆದ್ರೆ ಆ ನಂಜೇಗೌಡ ಅಂದರೆ, ನಿಂಗೆ ಗ್ವತ್ತೆ ಅದಲ್ಲ ಬೋ ಪಾತಕದ ಮನಸ. ಬೇಕಾರೆ ಅವ್ನು–ಕಾಳಿಯ ಬೋಲಿ ಮಾಡ್ತಾನೆ, ಬೋಳಿಯ ಕಾಳಿ ಮಾಡ್ತಾನೆ... ಅವನ್ತಾವು ಯಾಕೆ ನಿಸ್ಟೂರ ಕಟ್ಟಿಕಾಬೇಕು ಅಂತ ನಿರ್ವಾಯಿಲ್ದೆ ಅವ್ನ ಜ್ವತೆಗೋದೆ. ಮುನೇಸ್ಪರನ ಕಾವಲ್ಗೆ ಕರಕಂಡೋಗಿ, ರಸ್ತೆ ಬಾಜೂನಲ್ಲಿರೊ ಒಂದು ಮರದ ನೆರಳ್ನಲ್ಲಿ ಕುಂಡರಿಸಿ,

"ಅಡವಿ, ಇಂದುಕೆ ನೀ ಬೋ ಸೂರನಾಗಿದ್ದ... ಆದ್ರೆ ಈಗ್ಯಾಕೆ ನಿನ್ನ ಗಂಡಸ್ತನವೆ ಹ್ವಂಟೋಗಿರೊ ಅಂಗದಲ್ಲ?" ಅಂತ ಕೆಣುಕ್ದನಂತೆ.

"ಯಾಕಣ್ಣ?" – ಪೆಚ್ಚಾಗಿ ವದರಿದ್ನಂತೆ ಅಡವಿ.

"ಅಲ್ಲ ಕನೊ, ಅಡವಿ. ಅದೇನ ನಿಮ್ಮಟ್ಟಿ ಜಗಳ ಹಾದಿ ಬೀದಿ ರಾಮಣ್ಯ ಆಗಿಬುಟ್ಟದಲ್ಲ?" ಸೌದೆ ಸೀಳೋನಾಗ ಸನಗು ಎತ್ತೋನಂಗೆ ಕೇಳಿದ್ದ ಕನ್ಲ– ಅಂದಿದ್ದ ಅಡವಿ. ಅದುಕೆ ಅಡವಿ, ಕಯ್ಯಿ ಕಯ್ಯಿ ವೋಸೀಕತ್ತ,

"ಏನು ಮಾಡಾದು ನಂಜಣ್ಣ, ಎಲ್ಲ ನನ್ನ ಅಣೆಬರಾವು"ಅಂದನಂತೆ.

"ಅದೇನು ಆ ಗಂಗಿ ನಿನ್ನ ಮಾನವ ಈ ಕೇರೀಲದ್ದಿ ಆ ಕೇರೀಲಿ ತಗೀತ ಅವಳಂತಲ್ಲ?"

"ಹಯ್ಯೊ, ಅದ ಯೋಳಿಕಂಡ್ರೆ ನಾಚಿಗ್ಗೇಡು, ಸುಮ್ಕಿರಣ್ಣ. ಯಾನೊ ನಮ್ಮ ಸಮ್ಮಂದದ ಎಣ್ಣು ಅಂತ ನಾನೂವೆ ಅವಳು ಆಡೊ ಮಾತ್ನೆಲ್ಲ ಎಂಗೊ ಸೈಸಿಗಂಡು ಬತ್ತಾ ಇವ್ನಿ."

"ಕೆಟ್ಟ ಕೆಟ್ಟ ಮಾತ್ನಲ್ಲೆ ಬೋಯ್ತಿತಾಳಂತೆ, ನಿಮ್ಮಟ್ಟಿ ಸುತ್ತಮುತ್ತಲೋರು, ನನ್ನತ್ರ ಬಂದು ಯೋಳ್ತಾನೆ ಅವ್ರೆ–ಕಿವೀಲಿ ಕ್ಯಾಳಬಾರದಂತೆ ಮಾತಾಡ್ತಾಳೆ, ಬೋ ಮಾನಗೆಟ್ಟ ಎಂಗಸು, ನಿಜ್ವ ಇದೇ ತಲೆನೋವಾಗಿ ಬುಟ್ಟದೆ ನಮಗೆ, ಅಂತಾವ... ಮೀಸೆ ಹ್ವತ್ತಿರೊ ಆ ಗಂಡಸು ಈಪಾಟಿ ಬೋಗುಳ ಕ್ಯಾಳಿಕಂಡು ಅದ್ಯಾಕೆ ಸುಮ್ಕಿದ್ದಾನೊ ತಿಳೀದು, ಅಂತಾನೆ ಇರ್ತಾರೆ..."

"ಏನು ಮಾಡಾದು, ನಂಜಣ್ಣ. ಮೊದ್ಲೆ ಯೋಳಿದ್ನಲ್ಲ– ಸಮ್ಮಂದ. ನಮ್ಮಟ್ಟಿ ಮಜ್ಜಿಗೆಯ ಈಚಲು ಮರದ ಕೆಳಗ್ಯಾಕೆ ಕುಡುಯೋದು ಅಂತ ಸುಮ್ಮಕಿದ್ವಿ."

"ಅದ್ಯಾನೊ ಸರಿ... ನೀನು ಮಾನಿಸ್ತ. ನಾನ ವಪ್ಪುಕತ್ತೀನಿ. ಆದ್ರೆ ನಿಮ್ಮ ಸುತ್ತಮುತ್ತನೋರು ಏನೇಳ್ತಾರೆ ಗ್ವತ್ತಾ? – ನಾವೂ ಇನ್ನು ನಾಕುಜಿನ ನ್ವಾಡ್ತೀವಿ. ಅಡವಿಯಷ್ಟೆ ಇದ್ನ ಪಂಚಾತಿಗೆ ವಪ್ಪುಸಿದ್ರೆ ಸಮ. ಇಲ್ಲದೆ ವೋದ್ರೆ, ನಾವು ಆಜೂಬಾಜೂನೋರೆ ಪಂಚಾತಿಗೆ ಕ್ವಟ್ಟುಬುಡ್ತೀವಿ, ಅಂದ್ರು."

ಆ ಮಾತ ಕೇಳಿ ನಂಗೆ ಜಂಗಾಬಲವೇ ಬುಟ್ಹೋಯ್ತು ಕನ್ಲ. 'ಹಯ್ಯಯ್ಯೊ, ಅವರು ಕ್ವಡಾದು ಬ್ಯಾಡ' ಅಂದ್ರೆ... ಅಂದ್ರೆ ನಂಜೇಗೌಡ ವೋಟಕೆ ಬುಟ್ನಾ?...

"ಸರೋಯ್ತು ಕನೊ, ಅಡವಿ. ನೀ ಬ್ಯಾಡ ಅಂದರೆ, ಅವರು ಬುಟ್ಟು ಬುಟ್ಟಾರೆ?"

"ಮಂತೆ, ಈಗ ನಾ ಯೇನ ಮಾಡಬೇಕು ಅಂತೀಯಣ್ಣ?"

"ನನ್ನ ಕ್ಯಾಳಿದ್ರೆ? – ನೀನೇ ತಕ್ಕಾಬೇಕು ತೀರುಮಾನ್ವ– ಈ ಇಚಾರ್ವ ಅವರೇ ಪಂಚಾತಿಗೆ ತಿಳಿಸಬೇಕೊ ಇಲ್ಲ, ಇದ್ನ ನೀನೇ ಪಂಚಾತಿಗೆ ವಪ್ಪುಸಬೇಕೊ ಅಂತಾವ."

ಅಡವಿ ವಸಿ ಹ್ವತ್ತು ಬೆಪ್ಪು ಇಡುದೊನಂಗೆ ಕುಂತಿದ್ನಂತೆ. ನಂಜೇಗೌಡ ಕ್ವಾಪ ಮಾಡಿಕಂಡೇ ಅಂದನಂತೆ–

"ಇದ್ಯಾಕೊ ಸುಮ್ಮಕಾದೆ?– ಪಂಚಾತೀಲಿ ನಾನಿರಕ್ಕಿಲ್ವ... ಆ ಬಜಾರಿಗೆ ವಸಿ ಬುದ್ದಿ ಕಲಿಸಿ, ನಿನ್ನ ತಂಟೆಗೆ ಬರದಂತೆ ಮಾಡ್ತೀವಪ್ಪ... ಅದು ಚೆಂದವೊ, ಇಲ್ಲ ನೀ ಇಂಗೆ ಬೋಗಳ ತಿಂತಿರಾದು ಚೆಂದವೊ, ನೀನೇ ಯೋಳಿಬುಡು."

ಅಡವಿ ತಬ್ಬಿಬ್ಬಾದ್ನಂತೆ.

"ನಂಗೊಂದೂ ವೋಳೀತಾನೆ ಇಲ್ಲ. ಎಂಗೆ ಮಾಡಾದೊ ಗ್ವತ್ತಾಯ್ತಾ ಇಲ್ಲ."

"ಇದೇ ನಿನ್ನ ಕೊನೆ ಮಾತ?... ಅಂಗಾರೆ ಬುಡು. ನಾನೂವೆ ನಿನ್ನ ಹಿತಕ್ಕೇಳ್ದೆ. ಅವರಿವರು ಪಂಚಾತಿಗೆ ಕ್ವಡಕ್ಹೂವೆ ನೀನೇ ಕ್ವಡಕ್ಹೂವೆ ಯತ್ವಾಸ ಆಯ್ತದೆ. ಅವರು ಕ್ವಟ್ಟರೆ, ಕದ್ನ ಮಾಡಿ ಹೇಸಿಗೆ ಕೆಟ್ಟಿರೋ ನಿಮ್ಮಿಬ್ಬರ ಮ್ಯಾಲೂ ಕ್ವಡಬೇಕಾಯ್ತದೆ. ಆಗ ನೀನೂವೆ ಅವಳ ಜ್ವತ್ಗೆ ಅಪರಾದಿ ತಾನದಲ್ಲಿ ನಿಲ್ಲಬೇಕಾಯ್ತದೆ... ಅದ ಬುಟ್ಟು ನೀನೆ ಆ ಗಂಗಿ ಮ್ಯಾಲೆ ಕಂಪ್ಲಿಂಟು ಕ್ವಟ್ಟರೆ, ಅಪರಾದಿ ತಾನದಲ್ಲಿ ಅವಳಾಯ್ತಳೆ; ನೀನು ಫಿರ್ಯಾದಿ ಆಯ್ತೀಯೆ. ಆಗ ನ್ಯಾಯ ನಿನ್ನ ಕಡೀಕೆ ಹ್ವಳ್ಳಕ್ಕೆ ಅನುಕೂಲ ಆಯ್ತದೆ... ಯೋಚ್ನೆ ಮಾಡು."

ಇಂಗೆ ನನ್ನ ಕೆಡೀಕಂಡ ಕನ್ಲ, ಲಕ್ಕ–ಅಂದಿದ್ದ ಅಡವಿ.

"ಇನ್ನು ಯೋಚ್ಣೆ ಮಾಡಾದು ಯೇನು ಉಳುಕಂಡದೆ, ನಂಜಣ್ಣ–ನೀ ಈಟೆಲ್ಲ ಯೋಳಿದ ಮ್ಯಾಗೆ?"

"ಅಂದಮ್ಯಾಗೆ ಈ ನ್ಯಾಯವ ಪಂಚಾತಿಗೆ ನೀನೇ ವಪ್ಪುಸ್ತೀಯೆ ಅಂದಂಗಾ ಆಯ್ತು."

"ಬ್ಯಾರೆ ದಾರೀನೆ ಕಾಣ್ತಿಲ್ಲವಲ್ಲ – ನೀ ಯೋಳೋದ್ರಲ್ಲಿ?"

"ಅಂಗಿದ್ರೆ ಒಂದು ಕೆಲ್ಸ ಮಾಡು. ನಾಳೀನೆ ಇದ್ನ ಪಂಚಾತಿಗೆ ವಪ್ಪುಸಿಬುಡು. ಅಲ್ಲಿ ನಿನ್ನ ಮಂಡೆ ಕೂದ್ಲು ಚುಳ್ ಅನ್ನದಂಗೆ ನಾನು ನ್ವಾಡಕತ್ತೀನಿ. ಆ ಗಂಗಿ ಮಾತ್ರ ಇನ್ನೆಂದಿಗೂ ನಿನ್ನ ತಂಟೆಗೆ ಬರಬಾರ್ದು ಅನ್ನಾತರ ಮಾಡ್ತೀನಿ."

ಅಡವಿಯಪ್ಪ ವಸಿ ವೊತ್ತ ಯೋಚ್ಣೆ ಮಾಡಿ,

"ಇನ್ನೇನ ಮಾಡಾದು?– ಅಂಗೆ ಮಾಡಾನ ನಡಿಯಣ್ಣ " ಅಂತ ವಪ್ಪಿ ಅಲ್ಲಿಂದೆದ್ದನಂತೆ..

ಲಕ್ಕ ಇಂಗೆ ಯೋಚ್ಣೆ ಮಾಡ್ತ ಬಿದ್ದಿರೋನೂವೆ, ಸಿವುನಿ ಉಣ್ಣಕೇಳಿಸಿದ್ಲು. ಉಣ್ಣಕ್ಕೆ ಯಾಕೊ ಸೇಡೀನಿಲ್ಲ. ನೆಪಮಾಡಿ ಎದ್ದ. ಕೆರೆ ಅತ್ರ ವೋಗಿ ಕುಂತ. ಅಲ್ಲಿ ಕುಂತು ಕೆರೆ ನೀರನೆ ನ್ಯಾಡ್ತಿರೋನೂವೆ, ನಾತ್ರೆಗೆ ಬತ್ತಿರೊ ತನ್ನ ನ್ಯಾಯದ ಚಿಂತೆ ಮರೆಯಕ್ಕೆ ಗಂಗಿ ನ್ಯಾಯದ ಯೋಚ್ಣೇಲಿ ಲಕ್ಕನ ಮನಸು ಪುನಾ ತೊಡೀಕತ್ತು...

ಸರಿ, ಅಡವಿ ದರುಮನಳ್ಳಿ ಪಂಚಾತಿಗೆ ದೂರು ಕ್ವಟ್ಟ ಮ್ಯಾಲೆ ಪಂಚಾತಿ ಯಜಮಾನ್ರು ಒಟ್ಟಿಗೆ ಸೇರೆ ಪಂಚಾತಿ ನಡಿಯೋ ಜಿನ ಗ್ವತ್ತು ಮಾಡಿದ್ರು. ಸ್ವಾಮಾರ ನಾತ್ರೆ ಇರಬ್ಯೆದು. ಆ ನಾತ್ರೆ ಯಜಮಾನ್ರೆಲ್ಲ ಜಾವಡೀಲಿ ನೆರದ್ರು. ಅವತ್ತೂವೆ ಕುಂದೂರಯ್ನ ಬದ್ಲು ಲಕ್ಕನೆ ಹಂಗಾಮಿ ಕುಳವಾಡಿ. ಆಗ ನಂಜೇಗೌಡ ಲಕ್ಕನ್ನ ಕರದು,

"ಲೋ ಲಕ್ಕ, ತೆಂಗಿನ ಮರದ ಅಟ್ಟಿ ಗಂಗಮ್ಮ ನೋರ ಕರಕಂಬಾ, ವೋಗು" ಅಂದ್ರು. ಲಕ್ಕ ವೋಗ್ತಿರೋನೂವೆ "ಜಟ್ಟನೆ" ಅಂತಾನು ಸೇರಿಸಿದ್ರು...

ಲಕ್ಕ ತೆಂಗಿನ ಮರದ ಅಟ್ಟಿಗೋಗಿ, ಕ್ವಟ್ಟಿಗೇಲಿ ನಿಂತು, 'ಗಂಗವ್ವ, ಗಂಗವ್ವ...–' ಅಂತ ಮೂರು ನಾಕು ದಪ ಕೂಗ್ದ. ಯಾರೂವೆ ವಳುಗಡಿಂದ ಆ ಊ ಅನ್ನನಿಲ್ಲ... ಯಜಮಾನ್ರು ಆತ್ರ ಪಡಸಿದ್ರಿಂದ, ಯಾವುದೋ ಗ್ಯಾನದಲ್ಲಿ ಗಂಗವ್ವನ ಒಳಪಡಸಾಲ್ಗೆ ಕಾಲಿಟ್ಟು, ಮತ್ತೆ 'ಗಂಗವ್ವಾರೆ..." ಅಂತ ಸೊರ ಎತ್ತಿ ಕೂಗ್ದ.

ಗಂಗವ್ವ ಅಟ್ಟೀಲಿ ಇರನೇ ಇಲ್ಲ. ಯಾರದೊ ಅಟ್ಟೀಗೋಗಿದ್ಲು. ಆಚಿಂದ ಅವಳು ಅಟ್ಟಿ ವಳೀಕೆ ಕಾಲಿಡ್ತ ಇದ್ದಂಗೇಯ ಪಡಸಾಲೆ ಅಂಚಿನಲ್ಲಿ ಲಕ್ಕ ನಿಂತಿದ್ದ ಕಂಡು,

"ಲೋ ಲಕ್ಕ, ಯೇನ್ಲ ಇದು ನಿನ್ನ ದಾಷ್ಟೀಕ?... ನಮ್ಮ ಪಡಸಾಲೆ ವಳೀಕೆ ಕಾಲಡೊವಂಗೆ ಅದೆಯೆನ್ಲ? – ನಿನ್ನ ಜಾತಿಯೇನು? ನನ್ನ ಜಾತಿಯೇನು?..." ಉಚ್ಚುಚಾಗಿ ಅರಚಕ್ಕೆ ಸುರು ಮಾಡಿದ್ಲು.

"ಪಂಚಾತಿಯೋರು ನಿಮ್ಮ ಕರಿ ಅಂದ್ರ, ಅದ್ಕೆ ಬಂದೆ..."

"ಯಾರಾರ ಕರೀಲಿ. ಮೊದ್ಲು ಪಡಸಾಲೆ ಕಡದು ಹ್ವರೀಕೆ ಬಾ. ಅಮ್ಯಾಕೆ ಮುಂದಿನ ಮಾತು."

ಬಾರುಕೋಲ್ನಿಂದ ಹ್ವಡಸಿಕೊಂಡೋನ ತರ ಜರ‍್ರನೆ ಇಳುದೋಗಿ, ಪಡಸ್ಯಾಲಿಂದ ತಟಕ್ಕನೆ ವೊರೀಕೆ ಬಂದು ಕ್ವಟ್ಟಿಗೇಲಿ ನಿಂತಿದ್ದ. ಅದೇ ವ್ಯಾಳ್ಯಕೆ ಸರ‍್ಯಾಗಿ ಗಂಗವ್ವನ ಸಿನೇಯಿತಗಾತಿ ನಿಂಗವ್ವ ಬಂದ್ಲು.

ಅವಳು ಬತ್ತಿದ್ದಂಗೇಯ, ಗಂಗವ್ವ ನಿಂಗವ್ವನ ಕುಟ್ಟೆ,

"ನ್ವಾಡೆ ನಿಂಗಿ. ಹೊಲೇರು ಏಟುತೋರ ಎಚ್ಕೋಗವ್ರೆ?... ಈ ಬಡ್ಡಿ ಹೈದ, ಪಂಚಾತಿಯೋರು ಕರದ್ರು ಅಂತೇಳಿ ನನ್ನ ಪಡಸಾಲೆ ವಳೀಕೆ ಬಂದಿದ್ನಲ್ಲ!..."– ಈ ತರ ವಪ್ಪಿಸಿದ್ಲು.

"ಅಂಗ?..." ಅಂತ ಕಣ್ಣ ಅಸ್ಟು ಅಗಲಕೂ ಕಿಸದು, "ಕಾಲಕೆಟ್ಹೋಯ್ತು" –ಅಂತ ತಳ ಆಕಿದ್ಲು ನಿಂಗವ್ವ.

"ಊ, ಕೀಳುಜಾತಿ ಹೊಲೇರಿಗೂವೆ ಈ ದಿಮಾಕು ಬಂದಮ್ಯಾಗೆ ಇನ್ನೇನವ್ವ ಉಳೀತು?– ಇವತ್ತು ಪಡಸಾಲೆ ವಳೀಕೆ ಬತ್ತಾನೆ. ನಾಳೀಕೆ ನಮ್ಮ ಮೊಗ್ಗಲಿಗೇ ಮನಗತೀನಿ ಅಂತಾನು ಬತ್ತಾನೆ. ನೇರ್ಪಾಯ್ತು ಬುಡು!..."

ಗಂಗವ್ವ ಇಂಗಂದಾಗ ಲಕ್ಕಂಗೆ ನೆತ್ತಿಂದ ಉರಿ ಕಿತ್ತುಗತ್ತು. ಮನಸ್ನಲ್ಲೆ ಇಂದೆ ನಡುದ್ನ ಅದೆಂಗಾರು ಮರತ್ಲು ಅಂತ ಚೋಜಿಗಪಟ್ಟ... ಆವತ್ತು ತಾನೂ ಅವಳೂವೆ ಚಿಕ್ಕೋರಾಗಿದ್ದಾಗ, ಕಾಡ್ನಲ್ಲಿ ದನ ಕಾಯ್ತಿದ್ದಂಗೆ ಮಳೆ ಬಂದು, ನೆಂದು, ಪಜ್ಜಿಯಾಗಿ ತಾವಿಬ್ರೂವೆ ಹುಲಿಮೆಳೆ ವಳುಗೆ ವೊಕ್ಕಂಡು ನಡುಗ್ತ ಕುಂತಿದ್ದಾಗ, ಇದೇ ಗಂಗಿ... ಊ. ತೀಟೆ ಮುಗದಮ್ಯಾಲೆ ನಾ ಹೊಲೆಯ!... ಥೂ ಕ್ಯಾಕರ‍್ಸಿ ಮೊಕ್ಕೆ ಉಗೀಬೇಕು ಅನ್ನುಸ್ತು...

ಲಕ್ಕ ಇಂಗೆ ಚಿಂತೆ ಮಾಡ್ತ ಇರೋನೂವೆ–

"ಹೂ, ಈಗೇಳು–ಅದೇನ ನಿನ್ನ ಕೊಳೆ ಪಂಚಾತಿ ಮಾತು?" –

ಬೇಕಾಬಿಟ್ಟಿ ಕೇಳಿದ್ಲು ಗಂಗವ್ವ.

ಲಕ್ಕ ಸಾವರುಸಿಕೊಂಡೋನು,

"ಅದೇಯ – ಅಡವಿಯಪ್ಪನೋರ್ಗ್ಳೂ ನಿಮ್ಗೂವೆ ನಡೀತಿರೊ ತೊಪ್ಪೆ ಜಗಳದ ನ್ಯಾಯ" ಅಂದಿದ್ದ.

"ನಮ್ಮಟ್ಟಿ ಜಗಳಕೂ ಈ ಪಂಚಾತಿಯೋರ್ಗ್ಳೂವೆ ಯೇನ್ಲ ಸಮ್ಮಂದ?"

"ನಂಗೋತ್ತಿಲ್ಲ... ಅವರು ಕಳಿಸದ್ರು. ನಾ ಬಂದೆ."

"ನಾ ಬರಕ್ಕಿಲ್ಲಾಂತ ಯೋಳೋಗು"– ಖೈಡಾಗಿ ಯೋಳಿ, ನಿಂಗಿ ಕಡೀಕೆ ತಿರುಗಿ, "ನಿನ್ಯಾಕೆ ಕರಿದೇಂದ್ರೆ, ನಾವಿತ್ತು ವಳೀಕೆ ವೋಗೂವಂಗಿಲ್ಲ. ಇವತ್ತು ನೀನೆ ವಸಿ ಅಡಿಗೆ ಮಾಡ್ಬೇಕು. ಆಮ್ಯಾಕೆ ನಿನ್ನಟ್ಟೀಲಿ ಆಡ್ತಿರೊ ನನ್ನ ಮಕ್ಕಳು, ನಿನ್ನ ಮಕ್ಕಳು ಗಂಡಯ್ಯ ಯೆಲ್ಲಾರ್ನೂ ಇಲ್ಲಿಗೇ ಕರಕಂಬಂದು ಇಲ್ಲೆ ಉಣ್ಣಕ್ಕಿಕ್ಕು" ಅಂದ್ಲು.

ಲಕ್ಕ, ಕನ್ನಡಿ ಮ್ಯಾಲೆ ಉದ್ದು ಉರುಳೊ ವೊತ್ತು ಅಲ್ಲಿ ನಿಲ್ಲನಿಲ್ಲ. ಸೀದ ಚಾವಡಿಗೋಗಿ ಪಂಚಾತಿಕಟ್ಟೆಗೆ ಗಂಗೆ ಯೋಳಿದ್ದ ಅವಳು ಯೋಳಿದಂಗೆಯ ವಪ್ಪುಸ್ದ.

ತಾವು ಯೋಳಿಕಳಿಸಿದ್ರೂವೆ ತಮ್ಮ ಮಾತಿಗೆ ಬೆಲೆ ಕ್ವಟ್ಟು ಆ ಚಿಲ್ಲರೆ ಎಂಗಸು ಬರನಿಲ್ಲವಲ್ಲಾಂತ ಯಜಮಾನ್ರಿಗೆ ಕ್ಯಾಣ ಸಾಜವಾಗೆ ಬಂತು.

"ಲೋ ಲಕ್ಕ, ಪುನಾ ವೋಗಿ ಕರೀಲಾ ಅವಳ" ಅಂದ್ರು.

ಲಕ್ಕ ಪುನಾ ವೋಗಿ,

"ಯಜಮಾನ್ರುಗೊಳು ಪುನಾ ವೋಗಿ ಕರಿ ಅಂದ್ರು. ಅದ್ಕೆ ಬಂದೆ" ಅಂದ.

"ನಾ ಇವತ್ತು ಮುಟ್ಟು. ಬರಕ್ಕಾಗಕ್ಕಿಲ್ಲವಂತೆ ಅಂತ ಯೋಳ್ಗ"– ಅನ್ನೋವಾಗ ಅವಳ ಮಾತ್ನಲ್ಲಿ ಗಡಸು ತುಂಬಿ ತುಳುಕಾಡ್ತಿತ್ತು.

ಲಕ್ಕ ಪಂಚಾತಿಕಟ್ಟೆಗೆ ವಾಪಸಾಗಿ ಅಂಗೇ ವರದಿ ವಪ್ಪುಸ್ದ.

"ಮುಟ್ಟೊ ತಟ್ಟೊ, ಅದ ಕಟ್ಕಂಡು ನಮಗೇನು?... ಬರಕಿಲ್ಲಾಂದ್ರೆ ಬುಡೋರ್‍ಯಾರು? ನಾವು ನಿಮಗೆ ಅಪ್ಪಣೆ ಮಾಡ್ತಾ ಇದ್ದೀವಿ. ನೀನೋಗು. ಅವಳೇನಾರ ಪುನಾ ಬರಕಿಲ್ಲಾಂತ ಆಟ ಮಾಡದ್ರೆ, ಅವಳ ತುರುಬ ಇಡಕಂಡು ಬೀದೀಲಿ ದರದರ ಎಳಕಂಡು ಬಾ. ನೀಯೇನೂ ಎದುರುಕೊಬ್ಯಾಡ. ಇದ್ರಿಂದ ಏನೇ ಬಂದರೂವೆ ನಿನ್ನ ಕಾಪಾಡಕ್ಕೆ ನಾವಿವಿ" ಅಂದ್ರು.

ಲಕ್ಕ ಪುನ ಗಂಗಿ ಅಟ್ಟಿಗೋದ. ಪಂಚಾತಿಯೋರು ಎಂಗೆ ಉಸುರುದ್ರೊ

ಅಂಗೇಯ, ಒಂದು ಮಾತ್ನೂ ಇರುಕಿಸಿಕೊಳ್ಳದೇಯ ಗಂಗಿಗೆ ತಿಳುಸದ್ದ.

ಈಗಲೀಗ ಗಂಗಿ ಎದುರಿದ ತರ ತೋರಿದ್ಲು.

"ದಿಟವಾಗೂ ಎಳಕಂಬಾ ಅಂದರೇನೊ?"

"ಸತ್ತವಾಗೂ ಅಂದರು"

ಗಂಗಿಗೆ ವಸಿವಸ್ಯಾಗಿ ಕಯ್ಯಿಕಾಲು ವದುರಕ್ಕೆ ಸುರು ಆಯ್ತು.

ವಳುಗಡೆ ವಲೆ ಕತ್ತಿಸಿ, ಹಿಟ್ಟಿಗೆ ಎಸರೆತ್ತುತಾ ಇದ್ದ ನಿಂಗಮ್ಮ, ಆ ಕೇಮೆಯ ಅರ್ಧಕೇ ಬುಟ್ಟು ಓಡಿಬಂದೋಳು,

"ಸುಮ್ಕೆ ವೊಂಟೋಗು, ಗಂಗೆ. ಇನ್ನು ಆಟ ಮಾಡಾದು ತರವಲ್ಲ. ಹೊಲೇನ್ನ ಕಯ್ಲಿ ಎಳುಸಿಕೊತ್ತ ನಡುಬೀದೀಲಿ ಅಪಮಾನ ವೊಂದಕ್ಕಿಂತ, ಇಸ ತಕ್ಕಂಡು ಸಾಯಾದು ಲೇಸು" ಅಂದು, ಇವೇಕದ ಮಾತಾಡಿದ್ಲು...

"ಮುಟ್ಟಾಗಿರೋ ಈ ಸ್ತಿತೀಲಿ, ಯಾವ ಮೊಕ ಇಟ್ಟುಕಂಡು ಪಂಚಾತಿಯೋರ ಮುಂದಕೋಗಿ ನಿಂತುಕೊಳ್ಳಲೆ, ನಿಂಗಿ?"– ಇಂಗಂದು ಕಣ್ಣೀರು ತಂದುಕಂಡರೂವೆ, ಲಕ್ಕನ ಕಡೀಕೆ ತಿರುಗಿ" ಊ, ಇನ್ನೇನ ಮಾಡಾದು, ಬತ್ತೀನಿ ನಡಿ" ಅಂದು ಲಕ್ಕನ ವಂದಗುಟ್ಯೆ ವೋಂಟ್ಲು. ಅಟ್ಟಿ ಜಗಲಿ ಹಬ್ಬಿಗೆ ಇಳೀತೂಲೂವೆ, "ನಿಂಗಿ, ನಾ ಬರಾದು ಏಟೋತ್ತಾದಾತೊ, ಯಾನು ಕತೆಯೊ. ನಮ್ಮೂರ ಪಂಚಾತಿ ಅಂದ್ರೆ ನಿಂಗೆ ಗ್ವತ್ತೇ ಅದಲ್ಲ. ಈ ಯಜಮಾನ್ರು ಉಂಡು ಕುಂತ್ರೆ ಸಣ್ಣಪುಟ್ಟ ನ್ಯಾಯ ಆದ್ರೂವೆ ಬೆಳುಕರಿಸ್ತಾರೆ. ವೋಟ್ರಲ್ಲಿ ಮಕ್ಕಳು, ನಿಮ್ಮೆಜಮಾನ್ರು, ನೀನು ಎಲ್ಲಾರು ಉಂಡುಕಂಡು, ಮಕ್ಕಳ ಮನಗಿಸಿರು" ಅಂತೇಳಿದ್ಲು...

ಪಂಚಾತಿಕಟ್ಟೇಲಿ ಗಂಗಿ ಎಂತೋರ ಮನಸೂ ಕರಗೂವಂಗೇ ಮಾತಾಡಿದ್ದಲು.

"ನಾನು ಮುಟ್ಟಾಗಿರೊ ಎಂಗಸು. ನನ್ನ ಸ್ತಿತೀಲಿ ರಾಜಾರೋಸ ಊರ್ನೂರೆಲ್ಲಾರ ಮುಂದಗಡೂವೆ ಇಂಗೆ ತಂದು ನಿಲ್ಲುಸೋದು ದರುಮವ? ಇಮ್ಮ ಎಡತಿ, ಎಣ್ಣುಮಕ್ಕಳೂ ನನ್ನಂಗೆ ತೆಪ್ಪು ಮಾತಾಡಿದ್ರೆ ಆವರ್ನೂವೆ ಇಂಗೆ ಪಂಚಾತಿ ಕಟ್ಟೇಲಿ ತಂದು ನಿಲ್ಲುಸ್ತಿದ್ರ?... ಅಲ್ಲದೇಯ, ನಾನೇನು ಅಂತಾ ಕತ್ತೆ ಹಾದರ ಮಾಡಿದ್ದು?– ನನ್ನ ದಾಯಾದಿ ನನ್ ಜಪಲಿನ ತೊಪ್ಪ ಮ್ವಾಸದಿಂದ ತನ್ನ ಕಡೀಕೆ ಆಕ್ಕತಿದ್ದ. ಆದ ಕಂಡು ಕಂಡೂ ಎಂಗೆ ಸುಮ್ಮಕಿರಾದು?... ನಿಮ್ಮಟ್ಟಿ ತೊಪ್ಪ ಯಾರಾರು ಇಂಗೆತ್ತಿದ್ರೆ ನೀವು ಸುಮ್ಮಕಾಗಿವ್ರ?... ಊ, ಅವ್ನು ಏಟೇ ಆದ್ರೊ ಗಂಡಸು, ಒಬ್ಬ ನಿಮ್ಮಂತ ಮೀಸೆವೊತ್ತ ಗಂಡಸೆ ನನ್ನ ಜಾಗದಲ್ಲಿ ಇದ್ದಿದ್ರೆ, ಅವನ್ಗೆ ನಾಕ ತದಕಿ, ಉಟ್ಟಿದ ಜಿನವ ಕಾಣಿಸಿರಾನು!... ಆದ್ರೆ ನಾನು

ಎಣ್ಣೆಂಗಸು. ಅವ್ನ ಮ್ಯಾಲೆ ಕಯ್ಯಿ ಮಾಡೋವೋಟು ತಾಕತ್ತ ಕ್ವಡ್ನಿಲ್ಲ ದ್ವಾವರು..." ಸ್ಯಾಲೆ ಸೆರುಗ್ನಲ್ಲಿ ಕಣ್ಣೀರ ವತ್ತಿಕತ್ತಿದ್ಲು.

ಯಜಮಾನ್ರೆಲ್ಲ ತಲೆ ಎಟ್ಟಿಗಂಡು ಕುಂತಿದ್ರು. ಅಲ್ಲಿ ಕುಂತಿದ್ದ ಎಲ್ಲಾ ಜಯಮಾನ್ರೂವೆ ಕೆಟ್ಟೋರೆಲ್ಲ. ದರಮಕರುಮ ತಿಳಿದಿರೊ ಮನತಾನಸ್ತರೂ ವಸಿ ಜನ ಆದ್ರೂ ಅಲ್ಲಿದ್ರು...ಆದ್ರೆ ಅವರಲ್ಲಿ ಒಬ್ಬರಾರೂವೆ ಬಾಯ ತಗೀನಿಲ್ಲ. ಕೆಲವ್ರು ನಂಜೇಗೌಡನಂತೋರ್ಗೆ ಎದುರಿ ಸುಮ್ಮಕಿದ್ರೆ, ಇನ್ನು ಕೆಲವ್ರು ದಾರೀಲೋಗೋ ಮಾರಿ– ಅದನ್ಯಾಕೆ ನಮ್ಮಟ್ಟಿಗೆ ವೊಕ್ಕಿಸಿಕಾಬೇಕು? ಅಂತ ಸುಮ್ಮಕಾಗಿದ್ರು. ಇನ್ನು ವಸಿ ಜನ ಮಟದ ರುಣದಲ್ಲಿದ್ದೋರು. ಅವರಂತೂ ನಂಜೇಗೌಡಂಗೆ ಇರೋದ್ವಾಗಿ ವೋಗೋವಂಗೇ ಇರ್ನಿಲ್ಲ!...

ಈಗ ಅಡವಿ ಮ್ಯಾಕ್ಕೆದ್ದ.

"ಅವಳು ಯೋಳ್ತಿರಾದೆಲ್ಲ ಸುತರಾಂ ಸುಳ್ಳು. ನನ್ನಸ, ಎಮ್ಮೆ ಅವಳ ಪಾಲಿನ ಕ್ವಟ್ಟಿಗ್ಗೆ ಚಿಗದು, ಅಲ್ಲಾಕಿದ್ದ ತೊಪ್ಪ ಎತ್ತಿಗಂಡಿದ್ದೆ ಇನಾಯ್ಸಿ, ಅವಳ ದನಕರೀನ ತೊಪ್ಪ ನಾ ಮುಟ್ಟೇ ಇಲ್ಲ" ಅಂದ.

ಅಡವಿ ಸತ್ಯದ ತಲೆ ಮೆಟ್ಡಂತೆ ಸಟೆಯಾಡಿದ್ದು ಕೇಳಿ,

"ಎಂತಾ ಹಾದರಕೆ ಉಟ್ದ ಮಾತಾಡಿಯೊ?... ನಿಮ್ಮಪ್ನ ಬೀಜಕೆ ನೀ ಉಟ್ಟರಾದು ಸಾಜವಾದ್ರೆ ಇದ್ದದ್ದು ಇದ್ದಂಗೆ ಬೋಗಳೊ ಬಾಡಕಾವು" ಅಂದುಬುಟ್ಲು.

ಕೆಲವು ಯಜಮಾನ್ರು ಇಂತದೇ ಸನಗು ಸಿಕ್ಕಲೀಂತ ಕಾಯ್ತಿದ್ರು. ತನ್ನ ಬಾಯ್ನಿಂದ ತಾನೇ ಗಂಗಿ ಕೆಟ್ಟ ವಾರ್ಕ್‌ಸ ಕಡಸಿ ಸಿಕ್ಕಾಕಂಡಿದ್ಲು. ಮೆತ್ತಗೆ ನಂಜೇಗೌಡ ಗಂಗಪ್ನ ಚುಚ್ಚಿದ. ತಟಕ್ನೆ ಗಂಗಪ್ಪ ಎದ್ದು.

"ಎಂತಾ ಬಾಯಪ್ಪ ಇವಳ್ದು?– ಲೇ ಗಂಗೆ, ಗ್ಯಾನ ಇಟ್ಕಂಡು ಮಾತಾಡು. ಅಡವಿಯಪ್ಪ ನಿನಗಿಂತ ಇರಿಯೋನು. ಅವನ್ನ ನಮ್ಮುಂದ್ಯೆ ಇಂಗೆ ಬಯ್ಯೋಳು, ಇನ್ನು ನಿಮ್ಮಟ್ಟೀಲಿ ಇನ್ಯಾಪಾಟಿ ಅಡಿರಬೇಕು?" – ಎಂದು ಬೆದರುಸ್ದ.

"ಏ, ಗಂಗಪ್ಪ–ನನ್ನ, ಲೇ ಗೀ ಅಂತ ಕರೀಬ್ಯಾಡ. ನಾ ಯೇನು ನಿನ್ನಡತಿ ಕೆಟ್ಟೋಗ್ನಿಲ್ಲ, ನಿನ್ನ ಕೈಲಿ ಇಂಗೆಲ್ಲ ಕರಸಿಕಳ್ಳಕ್ಕೆ?... "ಗಂಗಿ ಕಪಾಲ್ಕೆ ತಟ್ಟಿದ ತರ ಜಾಡಿಸಿದ್ಲು.

"ಇನ್ನೇನ ಮಾರಾಣಿ ಮೊಮ್ಮಗಳೂಂತ ಕರೀಬೇಕೇನೊ?... ಅಬ್ಬಬ್ಬ... ಎಂತಾ ಬಜಾರಿ ಎಂಗಸಪ್ಪ!– ನೀ ಯೇನಾರ ನನ್ನೆಡತಿ ಆಗಿ ಈ ಮಾತಾಡಿದ್ರೆ, ನಿನ್ನ ಸಿಗದು ಊರ ಮುಂದ್ನ ದಿಡ್ಡಿ ಬಾಗಿಲ್ಗೆ ತ್ವಾರಣ ಕಟ್ತಿದ್ದೆ!"

"ವೋಗೋಗೊ ಗುಲಾಮ. ನಿನ್ನಡತಿ ನಾ ಯಾಕಾಗ್ಲಿ. ಗಂಡಸರಿಗೇನೂ ಬರ ಬಂದಿಲ್ಲ ಕನ" – ಮಾತು ಚುಕಾಯಿಸಿದ್ಲು.

"ನನ್ನ–ಗುಲಾಮು ಅಂದ್ಯೇನೆ?" ವೋಡೆಯೋನಂಗೆ ಚಾವಡಿ ಮೆಟ್ಟಿಲಿಳಿದ.

ತಕ್ಷಣ ನಂಜೇಗೌಡ ಎದ್ದ ಬಂದು ಗಂಗಪ್ನ ತಬ್ಬಿ,

"ದುಡುಕಬ್ಯಾಡ, ಗಂಗಪ್ಪ, ಇವಳ್ಗೆ ಬುದ್ದಿ ಕಲಿಸಕ್ಕೆ ನಾವಿವಿ..."– ಸಮಾಧಾನ ಯೋಳಿ, ಇಂದ್ಕೆ ಕರಕಂಡೋಗಿ ಕುಂಡರಿಸ್. ಆಮ್ಯಾಕೆ ಚಾವಡೀಲಿ ಕುಂತ ಯಜಮಾನ್ರ. ಕಡೀಕೆ ತಿರುಗಿ, ನಂಜೇಗೌಡ "ಇದೀಗ ಇಪರೀತಕೇ ವೋಟೋಯ್ತು. ಒಂದೀಟು ತೊಪ್ಪೆ ಮಾತ್ಗೆ ತನಗಿಂತ ಇರಿಯೋರು ಅನ್ನದ್ನು ನ್ವಾಡದೆ ಈ ಪಾಟಿ ಬಾಯಿ ಮಾಡೋ ಎಂಗಸ ಇಂಗೇ ಬುಡೋದು ತರವಲ್ಲ. ಇವಳ್ಗೆ ಸರ್ಯಾಗಿ ಬುದ್ದಿ ಕಲಿಸಬೇಕು" ಅಂದ.

"ಅಂತಿಂತ ಸಿಕ್ಸೆ ಕ್ವಟ್ಟರೆ, ಈ ಸಂತೆಬಜಾರಿಗೆ ಬುದ್ದಿ ಬರಕ್ಕಿಲ್ಲ. ಅವಳ ಈ ಮಾಳದ ಮಧ್ಯದಲ್ಲಿ ರೊ ಪಾಂಡವರ ಕಂಬಕ್ಕೆ ಕಟ್ಟಿ ಚಮಡ ಸುಲೀಬೇಕು." –ಗಂಗಪ್ಪ ವದರಾಡ್ದ.

"ಗಂಗಪ್ಪ ಯೋಳದಂಗೆ ಮಾಡಾದೆ ಸರಿ. ಈತೋರ ಯಜಮಾನ್ರ ಮುಂದೆ ಎದೆ ಕ್ವಟ್ಟ ಈ ಗಯ್ಯಾಳಿ ಎಣ್ಣಿಗೆ ಸರ್ಯಾಗೆ ಪಾಟ ಕಲಿಸಬೇಕು. ಇವಳ್ಗೆ ಒಂದು ಸಣ್ಣ ಸಿಕ್ಸೆ ಮಾಡಿಬುಟ್ಟರೆ, ಊರು ಅಲ್ಲಂಡೆ ಆಯ್ತದೆ. ಚಿಕ್ಕಪುಟ್ಟ ಎಣ್ಣಮಕ್ಕಳೆಲ್ಲ ಇವಳ ಚೆಂಗೂಲಿ ಬುದ್ದೀನೆ ಕಲ್ತು, ಎಲ್ಲಾರ ಅಟ್ಟಿಗಳೂವೆ ಕುರುಕ್ಸೇತ್ರಾನೆ ಆಗೋಯ್ತವೆ"– ಇಂಗಂದೋನು ದೊಳ್ಳಪ್ಪ.

"ಔದೌದು. ಇವಳ್ನ ಪಾಂಡವರ ಕಂಬಕ್ಕೆ ಕಟ್ಟಿ ನಾಕು ಬಿಗಿಯಾದೆ ಸರಿ." ಇನ್ನೊಬ್ಬ ಯಜಮಾನ ಅಂದ. ಜ್ವತ್ಗೆ ಇನ್ನೂ ಮೂರು ನಾಕು ಯಜಮಾನ್ರು,

"ಎಚ್ಚು ಮಾತ್ಯಾಕೆ. ಕಟ್ಟಿ ಕಂಬಕೆ ಇವಳ"– ಆತುರಿಸಿದ್ರು.

"ಸಾನುಬೋಗ್ರು, ಅಂಗೇಯ ಇನ್ನೂ ವಸಿ ಆಳು, ಅಂಗೂ ಮಾತಾಡ್ದೆ ಇಂಗೂ ಮಾತಾಡ್ದೆ, ಚಾವಡಿ ವಳುಗೆ ಸುಮ್ಮಕೆ ಲಿಪಿ ಕುಂತಂಗೆ ಕುಂತಿದ್ರು.

ಇದ್ನೆಲ್ಲ ನ್ವಾಡ್ತ ಕುಂತಿದ್ದ ಬುಂಡಮ್ಮಾರ್ಗೆ ರೇಗ್ತು.

"ಮುಟ್ಟಾಗಿರೊ ಎಂಗಸಿನ ಮ್ಯಾಲೆ ಕಯ್ಯಿ ಮಾಡಕ್ಕೆ ನಿಮ್ಗೆ ನಾಚಿಕೆ ಆಗಕ್ಕಿಲ್ವ?– ಗಂಡಸ್ರಂತೆ ಗಂಡಸ್ರು!" ವಸಿ ಜೋರಾಗಿ ಗೊಣಗಿದ್ರು.

ನಂಜೆಗೌಡ ಎದ್ದ.

"ಬುಂಡಜ್ಜಿ ಯೋಳೊ ಮಾತ್ನಲೂ ನ್ಯಾಯ ಅದೆ. ಈ ಗಂಗೆ ಏಟು

ತೆಪ್ಪು ಮಾಡಿರ್ಲಿ, ಇವಳು ವೊರಗಡೆ ಇರ್ಲ್ವಗ, ಈ ತರ ಸಿಕ್ಸೆ ಕ್ವಡಾದು ದರುಮ ಅಲ್ಲ... ಈಗೇನಂತೆ ಮುಟ್ಟು ಕಳೀಲಿ. ನೀರೂ ಆಗ್ಲಿ. ಆಮ್ಯಕೊಂದು ಜಿನ ಸೇರಿ ಇವಳ್ಗೆ ನೀವೆಲ್ಲ ಯೋಳದಂಗೆ ಸಿಕ್ಸೆ ಕ್ವಟ್ಟು ಪಾಟ ಕಲಿಸೂನ" ಇಂಗೇಳಿ, ಗಂಡಾಗಿ ಬಂದಿದ್ದ ನ್ಯಯದ ಜೀಜ ನರಕಿ ಮೆತ್ತಗೆ ಮಾಡಿದ್ದ... ಅವನ್ನು ಯೇರಿಸಿಂಗಿ ಇಳಿಸಿಂಗಿ ಆಟ. ಆವಯ್ಯ ಯೇರಿಸ್ನೂ ಬಲ್ಲ ಇಳಸ್ನೂ ಬಲ್ಲ!...

ನ್ಯಾಯಸ್ತರೆಲ್ಲ ನಂಜೇಗೌಡ್ನ ಮಾತ್ಗೆ ಕಬೂಲಿ ಯೋಳಿ, ವಪ್ಪಿದ್ರು. ಪಂಚಾತಿ ಮುಂದಕೋಯ್ತು...

ಮುಂದ್ನ ಎಂಟತ್ತು ಜಿನ ಇನ್ಯಾವ ಇಸೇಸವೂ ಇಲ್ದೆ ಕಳೀತು. ಒಂದು ಬೇಸ್ತವಾರ ಸಂತೇಲಿ ಸಿಕ್ದ ಅಡವಿಯಪ್ಪ ಲಕ್ಕನ್ನ ಹೊಳೆ ಅತ್ರ ಕರಕಂಡೋಗಿ ಕುಂಡರಿಸಿಕೊಂಡು ಗುಟ್ಟಾಗಿ,

"ಲೋ ಲಕ್ಕ, ನೀ ಯಾರತ್ರವೂ ಬಾಯಿ ಬುಡಕಲ್ಲಾಂತ ಬಾಸೆ ಕ್ವಟ್ಟರೆ ಒಂದು ಮಾತೇಳ್ತೀನಿ" ಅಂದ ಲಕ್ಕ,

"ಅಡವಿಯಪ್ಪಾರೆ, ಇದ್ಕೆ ಸತ್ಯ ಪರ್ಮಾಣ ಯಕೆ?– ನನ್ನ ತಾವು ನಂಬಕಿದ್ರೆ ಯೋಳಿ, ಇಲ್ಲದಿದ್ರೆ ಬುಟ್ಟಬುಡಿ" ಅಂತ ವಸಿ ಬ್ಯಾಸರದಿಂದ್ಲೆ ನುಡದ. ಆಗ ಅಡವಿಯಪ್ಪ,

"ಅಂಗಂದೆ, ಅಂತ ಬ್ಯಾಸರ ಮಾಡಕೋಬ್ಯಾಡ ಕನ್ಲ... ಇದು, ತಲೆವೋಗೋ ಇಚಾರ..." ಅಂತಿದ್ದಂಗೇಯ ಲಕ್ಕ,

"ಅಂಗಿದ್ರೆ, ನನ್ನ ತಾವು ಯೋಳನೇ ಬ್ಯಾಡಿ... ಅದೆಲ್ಲಿ ಗಾಚಾರ" ಅಂದ. ಅಡವಿಯಪ್ಪ,

"ಇದರಾಗೆ ನಿಂಗೇನು ಆಗಕ್ಕಿಲ್ಲ ಕನ್ಲ... ಈ ಮಾತು ನನ್ನಿಂದ ವೊಂಡ್ತು ಅನ್ನದು ಪ್ರಚುರಾದ್ರೆ, ಈ ಊರ್‍ನ ಜಯಮಾನ್ರು ನನ್ನ ಕಂಡ್ತಾ ನ್ಯಾತಾಕಿಬುಡ್ತಾರೆ..." – ಇನ್ನೂ ದನಿ ತಗ್ಗಿಸಿ ಯೋಳ್ದ. ಆಗ ಲಕ್ಕ,

"ಅಂಗಂದ್ರೇನ ನೀವೇಳಿರಾದು? ನಂಗೊಂದೂ ಅರ್ತ ಆಯ್ತಾ ಇಲ್ಲ" ಅಂದ.

"ನ್ವಾಡ್ಲ, ಇದು ಬರೀ ನಮ್ಮ ಗಂಗಿ ಇಸ್ಯವೆ ಆಗಿದ್ರೆ, ನಂಗೋಟು ಚಿಂತೆ ಇರ್‍ನಿಲ್ಲ. ಇದು ನಮ್ಮ ಮಟದವರ್‍ಗೂ ವೋಗಿ ಗಂಟಾಗಿರಾದ್ರಿಂದ, ನಿಂಗೇಳಕೆ ಇಂದೂ ಮುಂದೂ ನ್ವಾಡ್ದೆ...ಆದ್ರೆ ಮೊದ್ಲೆ ನಿನ್ನ ಕುಟ್ಟೆ ಆದ್ರೆ ನಿನ್ನ ಕುಟ್ಟೆ ಯೋಳ್ನಿಲ್ಲ, ಇಂತಾದ್ದು ಯಾವ್ದಾರ ಇಸ್ಯ ನಡದ್ರೆ, ನನ್ನ ವೊಟ್ಟೆ ವಳುಗೆ ನಾ ಇಟ್ಟುಕೋನಾರೆ... ಅದ್ಕೆ, ನಡದದ್ದ ನಿನ್ನ ತಾವು ಯೋಳಿ ನನ್ನ ವೊಟ್ಟೆ ಉಬ್ಬರಣೆಯ ಕೊಳಕೊಳಾನ

ಅಂತ ಇಲ್ಲಿಗೆ ಕರಕಂಬಂದೆ... ನೀ ಯಾರೂ ಕುಟ್ಟೂ ಬಾಯಿ ಬಿಚ್ಚಕ್ಕಿಲಾಂದ್ರೆ ಯೋಳ್ತೀನಿ..."

"ಇದ್ಯಾಕಯ್ಯಾರೆ ಇಂಗೆ ಅಪನಂಬಿಕೆ ಪಟ್ಟೀರಿ. ನನ್ನ ನೀವು ಕುಡಿ ಒಡೆಯೋವಾಗಿಂದ ಕಂಡಿದ್ದೀರಿ... ಒಬ್ಬರು ಆಡಿದ್ದ ಇನ್ನೊಬ್ರ ಕುಟ್ಟೆ ಯೋಳೊ ಸೋಬಾವ ನಂದಲ್ಲ ಅಂತ ನಿಮ್ಗೂ ಚೆಂದಾಗ ಗ್ವತ್ತದೆ. ಇಂಗಿರೊನೂವೆ, ಇನ್ನೂ ಯಾಕೆ ನನ್ನ ಗುಣವ ಕುಂದಣ ಮಟ್ಟೀಲಿ ವರೆ ಅಚ್ಚುತಾನೆ ಇದ್ದೀರಿ?... ಅದೇನಿದ್ರೂ ಯೋಳಿ. ಅದ್ನ ನನ್ನೊಳಗೇ ಜ್ವಾಪಾನಾಗಿ ಇಟ್ಟಕತ್ತೀನಿ. ನೀವು ಚಿಂತೇನೆ ಮಾಡಬ್ಯಾಡಿ" ಅಂದ.

"ನೀ ಇಸ್ಟು ಅಂದಮ್ಯಾಲೆ ಯೋಳ್ತೀನಿ, ಕ್ಯಾಳಿಕೊ: ಗಂಗಿಗೆ ಐದ್ನೆ ನೀರಾದ ಮಾರನೆ ನಾತ್ರೆ. ದೀವಿಗೆ ಕೆಡಸಿ ಮನಗ್ದ ಸುಮಾರು ವೊತ್ತೇ ಆಗಿರಬೇಕು. ಆಲಬಾದ್ಗೆ ಅವಸರವಾಯ್ತು. ಎದ್ದೆ. ಎದ್ದೋನು ಕ್ವಟ್ಟಿಗೆ ದಾಟಿ ವೋಯ್ತಿರೋನೂವೆ, ಗಂಗಿ ಅಟ್ಟೀಲಿ ಯಾರೊ ಬ್ಯಾರೆ ಎಂಗಸಿನ ಸೊರ ಕ್ಯಾಳಿ ಅಂಗೇ ನಿಂತೆ. ನಿಂಗಮ್ಮ ದೊನಿಯಂತೂ ಅಲ್ಲವೇ ಅಲ್ಲ, ಇನ್ಯಾರು ಇರಬೈದು?– ಕುತೂಲಾತಿ, ಅವಳಟ್ಟಿ ಗ್ವಾಡೆ ವತ್ತಿಗೆ ಜರಗ್ದೆ... ಆಗ ವಳುಗೆ ಆಡೋ ಮಾತು ಚೆಂದಾಗೆ ಕೇಳ್ತಿತ್ತು...

"ಇದೇನ ಮಾದಮ್ಮ ಅಪುರ್ಪಕ್ಕೆ ಬಂದಿದ್ದೀ? ಅದೂ ಈಟೋತ್ನಲ್ಲಿ?" ಗಂಗಿ ಚೋಜಿಗ ಪಡ್ತ ಕ್ಯಾಳಿದ್ಲು. ನಂಗೂ ಚೋಜಿಗ ಆಯ್ತು. ಮಟದ ಮಾದಮ್ಮ ಯಾವತ್ತೂವೆ ಗಂಗಿ ಅಟ್ಟಿಗೆ ಬಂದದ್ನೇ ಕಾಣೆ. ಯೇನಿದ್ರೂವೆ ಮಟದಲ್ಲಿ ಯೇನಾರ ಇಸೇಸ ಇದ್ದು, ಗಂಗಿ ಅಲ್ಲಿಗೋದಾಗ ಇವರಿಬ್ರಿಗೂ ಸಿನೇಯ ಬೆಳುದಿರಬೇಕು... ಏನೇ ಆದ್ರೂವೆ ಇವತ್ತು ಈ ಸಮನಾತ್ರೇಲಿ ಈಟು ದೂರ ಈ ಮಾದಮ್ಮ ಪಯಣ ಬೆಳುಸಬೇಕಾರೆ ಇದರಲ್ಲೇನೋ ಕರಾಮತ್ತು ಇರಬೈದೂಂತ, ಗ್ವಾಡೆಗೆ ಇನ್ನೂ ವತ್ತಾಗೆ ಕಿವಿ ಕ್ವಟು ನಿಂತೆ.

"ಕ್ಯಾಳೆ ಗಂಗವ್ವ, ಆವತ್ತು ನಡದ ಪಂಚಾತೀಯ, ದೇವಗಣಗಲೆ ಮರದ ಇಂಚೋರಿ ನಿಂತು ನಾನೂವೆನ್ವಾಡ್ತಾನೆ ಇದ್ದೆ. ನಂಗ್ಯಾಕೊ ಹಿತ ಕಾಣನಿಲ್ಲ..."

ಮಾದಮ್ಮ ಅಪುರ್ಪಕೆ ಬಂದು ಅವೊತ್ನ ನ್ಯಾಯದ ಸುದ್ದಿ ಎತ್ತಿದ್ದು, ಗಂಗಿ ವಳುಗೇ ಬೆಚ್ಚಿರಬೇಕು... ಪಂಚಾತಿ ಆದ ದಿನದಿಂದ್ಲೂವೆ, ಅವಳು ಬೋ ಎದುರಿದ್ಲು ಕನ್ಲ. ಮೊದಲ ಗತ್ತು, ಗಡಸು ಈಚೀಚ್ಗೆ ತಣ್ಣಗಾದಂಗಿತ್ತು. "ಯಾಕೆ ಮಾದಮ್ಮ?" ಅಂತ ಕ್ಯಾಳಿದಾಗ ಅವಳ ಸೊರ ನಡುಗ್ತ ಇರೊವಂತೆ ಕಂಡ್ತು.

ಅದ್ಕೆ ಮಾದಮ್ಮ ಏನಂದ್ಲು ಗ್ವತ್ತ?

"ನಂಗೆ ಎಂಗೊತ್ತಾಗಬೇಕು. ಮುಂದಕೇಳಿ" ಅಂದಿದ್ದ ಲಕ್ಕ...

ಆಗ ಮಾದಮ್ಮ ಬಿಗಿಯಾಗೇ ಅಂದ್ಲು:

"ಯಾಕೆ ಅಂದ್ರೆ?– ನೀನೂ ಸರಿ. ವೋಟು ತೋರ ಜನದ ಮುಂದೆ ನಿನ್ನ ನಾಲಿಗೆ ಲಂಗುಲಗಾಮಿಲ್ದೆ, ಅದ್ಯಾಕಂಗೆ ಯೆಗರಾಡ್ದೆ?" ಅದ್ಕೆ ಗಂಗಿ,

"ಮಂತೆ, ನನ್ನ ವೋಟು ಗೊಳುಕಿಚ್ಚ ಉಯ್ದರೆ, ಅದೇಟು ತೊರ ಸೈಸನೆ?" ಅಂತ ವಸಿ ಅಳೋಳಂಗೆಯ ಕ್ಯಾಳಿದ್ಲು. ಮಟದ ಮಾದಮ್ಮ,

"ಈಗ ಅದ್ದು ಆಗೋಯ್ತು. ಉಕ್ಕೊದ ಹಾಲು. ಅದ್ನ ಇಂದುಕೆ ಬಾ, ಅಂದ್ರೆ ಬಂದಾತ?... ಅದೆಂಗಾರ ವೋಗ್ಲಿ. ಈಗ ನಿಂಗೆ ಬಂದಿರೊ ಗಂಡಾಂತರ್ವ ಕ್ಯಾಳಿ, ಜೀವ ತಡೀದೆ ಇಲ್ಲಿಗೆ ನಾ ಓಡಬಂದಿ" ಅಂದ್ಲು. ಮಾದಮ್ಮ ಅಂಗಂದಾಗ ನಂಗೂ ಕುತೂಹಲವಾಯ್ತು. ನಂಗೇ ಆಯ್ತು ಅಂದಮ್ಯಾಗಿ ಇನ್ನು ಗಂಗಿಗೆ ಆಗದೆ ಇದ್ದದ?– ಅವಳು,

"ಅದೇನ ಮಾದಮ್ಮ, ಬಾಯಿ ಬಿಚ್ಚೇಳು" ಅಂದ್ಲು, ಆಗ ಮಾದಮ್ಮ,

"ಯಾನಂತ ಯೋಳ್ಲವ್ವ, ಗಂಗಿ?...ನಿನ್ನ–ನಿನ್ನ..." ಅಂತಿದ್ದೋಳು ದುಕ್ಕಡಿಸಿದಂಗಾಯ್ತು. ಮಾದಮ್ಮ ದುಕ್ಕಡಿಸಿದ್ದು ಗಂಗಿಗೆ ಗಾಬರಿ ಮಾಡಿರಬೇಕು. ಅವಳು,

"ಅದೇನ ವಸಿ ಓಡದು ಯೋಳವ್ವ–" ಅಂತ ಗ್ವಾಗರಿದ್ಲು. ಮಾದಮ್ಮ ಮುಂದ್ಕೆ ಆಡ್ದ ಮಾತ ಕ್ಯಾಳಿ ನಂಗೂವೆ ಮಯ್ಯಿ ನಡಗ್ತು. ಯಾಕಾರ ಪಂಚಾತಿಗೆ ಕ್ವಟ್ನೆ ಅನ್ನೂವಂಗಾಯ್ತು. ಅವಳೇನಂದ್ಲು ಗ್ವತ್ತ?

"ನೀನು ಬೋ ಅರಾಮಕೋರಿಯಂತೆ. ನಿನ್ನ ಲಿಪೇರಿ ಮಾಡಕ್ಕೆ ನಿನ್ನ ಚಾವಡಿಮುಂದೆ ತುಂಬಿದ ಸಬೇಲಿ ನಿನ್ನ ಸ್ಯಾಲೆ ಊರಾಕಿ, ಉಟ್ಟಿದ ನಿರ್ವಾಣ ನಿಲ್ಲುಸಿ, ಪಾಂಡವ್ರ ಕಲ್ಲು ಕಂಬಕೆ ಬಿಗಿದು, ಚಡೀಲಿ ವೋಡೀತಾರಂತೆ!..."

ಈ ಮಾತು ಕಿವಿಗೆ ಬಿದ್ದು ಗಂಗಿ ಧರೆ ವಳೀಕೆ ಇಳುದೋಗಿರಬೇಕು. ಅವಳು

"ಯಾರೆ–ಮಾದಮ್ಮ... ನಿಂಗೆ ಇದ್ನೆಲ್ಲ–ಯೋಳಿದೋರು...?" ಅಂತ ತೊದಲಿದ್ಲು. ಅದ್ಕೆ ಮಾದಮ್ಮ,

"ಅಯ್ಯೊ, ಯಾರೇನ ಯೋಳಬೇಕು?– ಆ ನಂಜೇಗೌಡ್ರು, ಗಂಗಪ್ಪನೋರು, ದೊಳ್ಳಪ್ಪನೋರು, ಇಂತಿಂತಾ ಯಜಮಾನ್ರೆಲ್ಲ ನಮ್ಮ ಮಟದ ಅಯ್ಯನೋರತ್ರ ಇವತ್ತು ಸಂದೆ ದನೀಗೆ ಬಂದು, ನಾವು ಯಜಮಾನ್ರೆಲ್ಲ ಸೇರಿ

ಈ ತೀರುಮಾನಕೆ ಬಂದಿವಿ, ಬುದ್ದಿ. ತಾವು ಇದ್ಕೆ ವಪ್ಪುದ್ರೆ, ನಾಳೀಕೊ ನಾಡಿದ್ದೊ ನ್ಯಾಯಕ್ಕೆ ಸೇರಿಕತ್ತೀವಿ ಅಂದ್ರ. ಅದ್ಕೆ ಸ್ವಾಮಿಗಳು–ಎಲ್ಲ ಸಿವನ ಇಚ್ಚೆ. ನಿಮ್ಗೆ ಅವನ ಪ್ರೇವಣೆ ಆಗಿರೊ ಅಂಗದೆ. ಅಂಗೇ ಮಾಡಿ, ಅಂತ ಅಪ್ಪಣೆ ಕ್ವಟ್ಟರು…"

ಈಗಲೀಗ ಗಂಗಿ ಚೆಂದಾಗಿ ಬೆಚ್ಚೋಗಿದ್ಲು.

"ಯೇನಂದೆ ಮಾದಮ್ಮ?– ನನ್ನ ಬೆತ್ತಲೆ ಮಾಡಿ, ವೋಡೀತಾರಂತ?… ಅವತ್ನ ನ್ಯಾಯದಲ್ಲಿ ಅಂಗೇ ಕಂಬಕ್ಕೆ ಕಟ್ಟ ವೋಡಿಯೋದ ಅಂತ ಅಂತಿದ್ರಲ್ಲ?– ನಾನೂವೆ ಇನ್ನೇನ ಮಾಡಾದು ವೋಡದ್ರೆ ವೊಡಕಳ್ಳಿ ಅಂತ ಗಟ್ಟಿ ಮಾನಸ ಮಾಡಿದ್ದೆ… ಆದ್ರೆ–ಎಲ್ಲಾರ ಮುಂದೇನೂವೆ ಸ್ಯಲೆ ಊರಾಕೋದು ಅಂದ್ರೆ… ಇದೇನವ್ವ ವೊಸ ಮಾತು? ಈ ಊರಿನೋರ್ಗೆ ಯೇನವ್ವ ಬಂತು ಕೇಡುಗಾಲ?…" ಅಂತ ಬೇತುಗತ್ತಿದ್ಲು. ಆಗ ಮಾದಮ್ಮ

"ಈಗ ಯಾರ ದೂಸಣೆ ಮಾಡಿ ಯಾವ ಫಲ?… ನಿಂಗೆ ಬಂದಿರೊ ಗಂಡಾಂತ್ರದಿಂದ ಪಾರಾಗೊ ಉಪಾಯ ಉಡುಕು" ಅಂದ್ಲು.

ವಸಿ ವೊತ್ತು ಗಂಗಿ ಕವ್ ಕಿವ್ ಅನ್ನುದೆ ಕುಂತಂಗಿತ್ತು. ಆಮ್ಯಾಕೆ ಮೆತ್ತಗೆ,

"ಉಷ್ಷು–ಯೇಟು ಬಗೇಲಿ ಯೋಚ್ಣೆ ಮಾಡಿದ್ರೂವೆ ನಂಗೆ ಯಾವ ಉಪಾಯವೂ ತೋಚಕ್ಕಿಲ್ಲ. ನಿಂಗೇನಾರ ವೊಳುದ್ರೆ, ಯೋಳು ಮಾದಮ್ಮ" ಅಂದ್ಲು. ಮಾದಮ್ಮ

"ನಂಗೂ ವೋಳೀತಾನೆ ಇಲ್ಲ…" ಅಂದೋಲು, ವಸಿ ವೊತ್ತು ಸುಮ್ಮಕಿದ್ದು, "ಊ– ಇರಾದು ಒಂದೇ ದಾರಿ… ನ್ವಾಡು ಗಂಗವ್ವ–ನಮ್ಮ ಮಟದ ಸ್ವಾಮಿಗೋಳು ದ್ಯಾವರಂತ ಮನಸ್ರು. ಅವರ್ಗೆ ಪಕ್ಸ ಪರಪಕ್ಸ ಅಂತ ಇಲ್ಲ. ಈಗ ನೀ ಬಂದು ಅವರ ಕಾಲ ಕಟ್ಟಿಕಂಡ್ರೆ, ನ್ವಾಡವ್ವ ಅವರೊಬ್ರೆ ಯೇನಾರ ಬಚಾವು ಮಾಡಬೌದು…" ಅಂದ್ಲು.

ಗಂಗಿಗೆ ಈ ಮಾತು ಇಡುಸ್ದಂಗೆ ಕಂಡ್ತು.

"ಯಾವಾಗ ವೋಗಾನ ಅಂತೀ?" ಅಂತ ಕ್ಯಾಳೇಬುಟ್ಲು.

"ಅಯ್ಯೊ, ಒಳ್ಳಿ ಕೆಲ್ಸ ಮಾಡಾಕೆ ಕಣೇನು ಕ್ಯಾಳಬೇಕ?… ನೀನು ಊ ಅಂದ್ರೆ, ಈಗಾಂದ್ರೆ ಈಗ…" –ಮಾದಮ್ಮ ಇಂಗೆ ಅಂತಿದ್ದಮಗೇಯ, ನಾನು ಜಾಗದಿಂದ ಜಾರಿ, ತಡದಿದ್ದ ಉಚ್ಚೆ ಪುಟ್ಟಣವ ಖಾಲಿ ಮಾಡಕ್ಕೆ ವೋರೀಕೋದೆ… ನಾನು ಬೇಲಿ ಮರೆಗೆ ಉಚ್ಚೆ ಉಯ್ಯಿತಿರೋನೂವೆ, ಮಾದಮ್ಮನೂ ಗಂಗಿಯೂವೆ ನಮ್ಮಿಬ್ರಟ್ಟಿ ಮುಂಚೋರಿ ಬಾಗಿಲ್ನಿಂದ ಮಟದ ದಿಕ್ಕೆ ಮೊಕವಾಗಿದ್ರ… ಮುಂದಕೇನಾಯ್ತೊ ನಂಗೆ ತಿಳೀದು. ಮಟದೊಳ್ಗೆ ಯೇನು ನಡೀತೊ ಆ

ಮಾದೇಸ್ವರನ್ಗೇ ಗ್ವತ್ತು!... ಮಾದಮ್ಮ ಗಂಗಿಯ ಸ್ವಾಮಿಗೋಳತ್ರ ಕರಕೊಂಡೋದ್ಲೊ, ಇಲ್ಲ ಮಟದ ಇಂದಕಿದ್ದ ತನ್ನ ಕ್ವಾಣೆಗೆ ಕರಕಂಡೋಗಿ ನಂಜೇಗೌಡಂಗೇ ಬ್ಯಾರೆ ಮನೆ ಬುಟ್ಲೊ, ಯಾರ್ಗ ಲಕ್ಕ ಯೋಳಬೇಕು?..." –ಇಷ್ಟೇಳಿ ಅಡವಿಯಪ್ಪ ಮತ್ತೊಂದು ದಪ, "ನಿನ್ನ ದಮ್ಮಯ್ಯ ಕನ್ಲ. ಮನಾ ನಿನ್ನ ಕೇಳಿಕತ್ತೀನಿ. ಯಾರತ್ತರ್ಲೂ ಬಾಯಿ ಬುಡಬ್ಯಾಡ" ಅಂತ ಬೇಡಿದ್ದ...

* * * *

ಊರ್ನ ದೊಡ್ಡಕೆರೆ ಅಂಚ್ನಲ್ಲಿ ಇದೇ ಯೋಚ್ನೇಲಿ ಮುಳುಗಿದ್ದ ಲಕ್ಕ, ಒಂದು ಕಲ್ಲು ತಕ್ಕಂಡು ಕೆರೆ ನೀರಿಗೆ ಬೀರ್ದ. ಚಪ್ಪೆ ಆಗಿದ್ದ ಆ ಕಲ್ಲು ಕೆರೆ ನೀರ ಚಕ್ ಚಕ್ ಅಂತ ವೋಟೋಟು ದೂರಕೂ ಹಾರುಸ್ತಾ ವೋಗಿ, ಸುಮಾರು ದೂರದಲ್ಲಿ ಮುಳಿಕತ್ತು...

ಮುಂದೆ ಮೂರೇ ಜಿನದ ವಳುಗೆ ಪಂಚಾತಿ ಸೇರ್ತು ಆಗ ಮಾತ್ರ ನಂಜೇಗೌಡ ನಾಟಕ ಆಡಿದ್ದ:

"ನಾವು ಯಜಮಾನ್ರೆಲ್ಲ ಈ ಗಂಗಿಯ ಬೆತ್ತಲೆ ಮಾಡಿ, ಈ ಕಲ್ಲುಕಂಬಕೆ ಕಟ್ಟಿ, ವೊಡದು ಬುದ್ಧಿ ಕಲಿಸುವಾ ಅಂತಿದ್ದೊ. ಆದ್ರೆ ನಮ್ಮ ಮಟದ ಬುದ್ದಿಯೋರ್ನ ಒಂದು ಮಾತು ಕೇಳುವಾಂತ ಅವರತ್ರ ವೋದಾಗ, ಅವರು–'ಎಣ್ಣೆಂಗಸು. ಒಳ್ಳೆ ಅರೇದೋಳು. ಇವಳ ಬೆತ್ತಲೆ ಮಾಡಿ ಊರ ನಡೂ ಮದ್ಯ ನಿಲ್ಲುಸೋದು ನಂಗ್ಯಾಕೊ ಸರಿ ತೋರನಿಲ್ಲ, ಅವಳ ಕಯ್ಲಿ ತೆಪ್ಪಾಯ್ತು, ಇನ್ನಿಂಗೆ ಬಜಾರಿ ಬಾಯಿ ಮಾಡಕ್ಕಿಲ್ಲ ಅಂತ ಅನ್ನುಸಿ, ಅತ್ತೊ ಇಪ್ಪತ್ತೊ ರೂಪಾಯಿ ದಂಡ ಆಕಿ, ಸಾಕು'– ಅಂದ್ರು. 'ಒಂದು ದಪ ಪಂಚಾತಿ ಕಟ್ಟೆ ಅತ್ತಿದಮ್ಯಾಲೆ, ಅದೇ ಏಟೋ ಬುದ್ಧಿ ಕಲಿಸಿರ್ತದೆ'– ಅಂತಾನು ಅಂದು... ಆ ಪರ್ಕಾರ ಇವಳು ಈಗ ಅಡವಿಯಪ್ಪನ್ನ ಈನಾಮಾನ್ವಾಗಿ ಬೈದ್ದು ತೆಪ್ಪು. ಮತ್ತೆ ಪಂಚಾತೀಲಿ ಎದೆ ಎತ್ಕಂಡು ಅಲ್ಕ ಅಲ್ಕಾಗಿ ಮಾತಾಡಿದ್ದು ತೆಪ್ಪೂಂತ ವಪ್ಪಿಕಳ್ಲಿ. ಆಮ್ಯಾಕೆ ನ್ವಾಡಾವ."

ಸ್ಯಾನುಬೋಗ್ರು, "ವಪ್ಪಿಕತ್ತೀಯೇನವ್ವ ಗಂಗಮ್ಮ?" –ಪ್ರಶ್ನೆ ಎಸ್ತರು. ತಕ್ಷಣ ಗಂಗಿ

"ವಪ್ಪಿಕತ್ತೀನಿ ಸೋಮಿ. ತೆಪ್ಪಾಯ್ತು. ಇನ್ನು ಮುಂದ್ಕೆ ಅಂಗೆ ನನ್ನ ಬಾಯ್ನಲ್ಲಿ ಕೆಟ್ಟ, ವಾಕ್ಸ ಕಡಸಕ್ಕಿಲ್ಲ" ಅಂತ ಬಾಸೆ ಕ್ವಟ್ಟಂಗೇಳಿ, ತನ್ನ ಸ್ಯಾಲೆ ಸೆರುಗನ ಗಂಟು ಬಿಚ್ಚಿ, ಅತ್ತು ನಾಣ್ಯದ ರೂಪಾಯಿ ಸ್ಯಾನುಬೋಗರ ಮುಂದ್ಕೆ ಸುರುದ್ಲು.

"ಮರ್ವಾದ್ಯಾಗಿ ನಡಕಾಬೇಕು. ಮುಂದ್ಕೆ ನಿನ್ನ ಕ್ವಾಪ ತಾಪ ಯೆಲ್ಲಾನು

ವಕ್ಕಡೀಗೆ ಕಟ್ಟಿಟ್ಟು ಗಂಬೀರ್‍ವಾಗಿ ಜೀವಣ ಮಾಡಾದ ಕಲಿ. ಸಣ್ಣಪುಟ್ಟ ಇಸ್ಯಕೆಲ್ಲ ಕಾಲ ಕೆರೆದು, ಮುಟ್ಟಿದ್ರೆ ಮುನಿಯಂಗೆ ಆಡಬ್ಯಾಡ"– ಇದು ಇಲ್ಲೀಗಂಟ ಸುಮ್ಮಕೇ ಕುಂತಿದ್ದ ಪಟೇಲರ ಬುದ್ದುವಾದ!

ಲಕ್ಕ ಕೆರೆ ಅತ್ರ ಇನ್ನೂ ಕಂತೇ ಇದ್ದ...

ಅಲ್ಲ ಪಂಚಾತಿ ಮುಗದ ಏಟೋ ಜಿನದ ಗಂಟ ಲಕ್ಕನಿಗೆ ಅಡವಿ ಸಿಕ್ಕೇ ಇರನಿಲ್ಲ. ಮನೆಗೆಲ್ಸ, ಹೊಲಗೆಲ್ಸದಲ್ಲಿ, ಅಡವಿ ತಿಂಗಳಾನುಗಟ್ಲೆ ಸಂತೇಗೇ ಬಂದಿನಿಲ್ಲ. ಅವನು ಸಂತೆಗೆ ಬಂದೋನು, ಲಕ್ಕನ್ನ ಪುನಾ ತರ್ದೂದಾಗಿ ವೊಳೆ ಅತ್ರ ಕರಕಂಡೋಗಿ,

"ನನ್ನ ಆ ಅಲಾಲುಕೋರ ನಂಜೇಗೌಡ ಮುಳುಗಿಸಿಬುಟ್ಟ ಕನ್ಲ, ಲಕ್ಕ" – ಅಳೋನಂಗೆ ಯೋಳ್ದ.

"ಇದ್ಯಾಕೆ ಅಡವಿಯಪ್ಪಾರೆ, ನ್ಯಾಯ ನಿಮ್ಮ ಕಡೀಕೆ ಆಗದೆ. ಗಂಗವ್ವ ತೆಪ್ಪು ವಪ್ಪಿ, ತೆಪ್ಪು ಕಾಣಿಕೇನೂ ಪಂಚಾತ್ಗೆ ವಪ್ಪಿಸಬ್ರೆ... – ಈ ತರ ಲಕ್ಕ ಅಂತಿರೋನೂವೆ, ಅಡವಿ.

"ಅಯ್ಯೊ, ಮುಂದಕಾದ್ದು ನಿಂಗೆ ತಿಳೀದು, ಕ್ಯಾಳು... ಪಂಚಾತ್ಯಿಂದ ಅವಳ ಮಾನ ಮುಕ್ಕಾಗದಂಗೆ ಅಟ್ಟಿಗೆ ವಾಪಸು ಬಂದಮ್ಯಾಗೆ, ಗಂಗಿ ಜಪ್ಪಯ್ನ ಮಟಕೆ ವೋಗಿ ಬರಾದು ಎಚ್ಚಾಯ್ತು ಕನ್ಲ...ಒಂದೇಡು ದಪ ಮಯ್ಯಿ ಇಳುದ್ಲು ಅಂತಾನು ಜನ ಆಡಿಕತ್ತಾರೆ. ಕೆಲವ್ರು– ನಂಜೇಗೌಡ ಇವಳ್ನ ಊಟ ಮಾಡಿ ಪಂಚಾತೀಲಿ ಬಚಾವ್ ಮಾಡ್ದ ಅಂತಾರೆ. ಇನ್ನು ಕೆಲವ್ರು– ಎಣ್ಣು ಲಕ್ಸಣವಾಗದೆ. ಮಟದ ಅಯ್ಯನೋರೆ ಯಾಕೆ ಅನುಬೋಗಿಸಿಬಾರ್ದು? ಅಂತಾನು ಅನುಮಾನ ಪಡ್ತಾರೆ...ಅಯ್ಯೊ, ಅವಳ ಮನೆ ಕಿಸಾಂತರಾಗ, ಆ ಲೌಡಿ ಯೇನಾರು ಮಾಡ್ಲಿ, ಅದ ಕಟ್ಕಂಡು ನಂಗೇನು? –ಆದ್ರೆ ಈ ಗೋಜಲ್ನಿಂದ ನಂಗೆ ಬಂದಿರೋ ಪೀಕಲಾಟ ನ್ವಾಡು..." ಅಂತ ಅಣೆ ಬಡಕಂಡ.

"ಅದೇನ–ಇದ್ರಿಂದ ನಿಮ್ಗೆ ಬಂದ ಪೀಕಲಾಟ?" – ಅರ್ತಾಗದೆ ಲಕ್ಕ ಕ್ಯಾಳಿದ್ದ.

"ನ್ವಾಡ್ಲ ಲಕ್ಕ, ನಮ್ಮ ಕ್ವಟ್ಟಿಗೆ ಜಗಳಾನೆ ದೊಡ್ಡದು ಮಾಡಿ, ಆ ನಂಜೇಗೌಡ ಮುಂದ್ಕೆಯೇನು ಕತೆ ಮಾಡ್ದ ಗ್ವತ್ತೇನ್ಲ. ನೆನ್ನೆ ಜಿನ ನಮ್ಮಟ್ಟಿ ತಾವಿಕೆ ಮೂರು ನಾಕು ನ್ಯಾಯಸ್ತರ ಕರಕಂಬಂದು, ನಮ್ಮ ಕ್ವಟ್ಟಿಗೇಲಿ ಅರ್ದಕ್ಕೆ ಸಮ್ವಾಗಿ ಗುರ್ತು ಮಾಡಿ, 'ಇಲ್ನೋಡೊ ಅಡವಿ. ಇನ್ನುಮ್ಯಾಗೆ, ನಿಮ್ಮಿಬ್ರ ಜಗಳವ ಸಾಸ್ವತ್ವಾಗಿ ತೆಪ್ಪುಲಕ್ಕೆ ನಮ್ಮ ಮಟದ ಬುದ್ಯೋರು ಅವರ ಕ್ವಟ್ಟಿಗೆ ಇಬ್ಬಾಗ ಮಾಡಿ, ಯಾರ್‍ಗೂವೆ

ಅನ್ನಾಯ ಆಗದಂಗೆ ಅರ್ದಕ್ಕೆ ಸರ್‍ಯಾಗಿ ಗ್ವಾಡೆ ಎತ್ತಿಸಿಬುಡೀಂತ ಅಪ್ಪಣೆ ಕ್ವಡಿಸಿದ್ರು. ಅದ್ಕೆ ಒಂದು ಗುರ್ತು ಮಾಡಿವಿ. ಗಂಗವ್ವ, ನೀನು ಅರ್ತ ಮಾಡ್ಕೊ... ಈಗ ನೀವಿಬ್ರೂವೆ ಅರ್ದರ್ದ ಕರ್ಚು ಆಕ್ಕಂಡು ತಕ್ಸಣ ಗ್ವಾಡೆ ಕೆಲ್ಸಕ್ಕೆ ಸುರು ಮಾಡ್ಸಿ– ಒಂದು ಪಕ್ಸ ನೀವಿಬ್ರೂ ಯೇನಾರ ನಿದಾನ ಮಾಡ್ತೆ, ನಾವು ಪಂಚಾತಿಂದ್ಲೆ ಗ್ವಾಡ್ಯ ಆಕ್ಸಿ ನಮ್ಮ ಪಂಚಾತಿಗೆ ತಗ ಕ್ವಟ್ಟರೂಂತ ನಿಮ್ಮಿಬ್ಬರಿಂದಲೂವೆ ದಂಡ ವಸೂಲು ಮಾಡ್ತೀವಿ' ಅಂತ ಎಚ್ಚರ್‍ಕೆ ಮಾತೇಳ್ದ. ನಂಗೆ ಜೀವಾನೆ ವೋಯ್ತು. ನಮಾಜು ಮಾಡಕ್ಕೋಗಿ ಮಸೀದ್ಯ ತಲೆ ಮ್ಯಾಲೆ ಕೆಡೀಕಂಡಂಗಾಯ್ತು!... 'ಬ್ಯಾಡಿಕನಪ್ಪ ಅರ್ದರ್ದ ಮಾಡಬ್ಯಾಡಿ. ಗಂಗಿ ತಾವು ಇರೋವ್ಗೆ ವೋಲಿಸಿದ್ರೆ, ನನ್ನತ್ರ ಇರೋ ದನ ಕರೀನ ರಾಸು ದ್ವಡ್ಡದು. ಅದು ನ್ಯಾಯ ಅಲ್ಲ. ಅವಳ್ಗೆ ಕಾಲು, ನನ್ಗೆ ಮುಕ್ಕಾಲು ಮಾಡಿಬುಡೀಂತ ಪರಿಪರ್‍ಯಾಗಿ ಬೇಡಿದೆ. ಅವರ್‍ಯಾರು ಜಪ್ಪಯ್ಯ ಅನ್ನನಿಲ್ಲ... ಈಗೇನ್ಲ ಮಾಡಾದು?" ಅಂತ ಲಕ್ಕನ್ನ ಕ್ಯಾಳಿದ.

ಲಕ್ಕಂಗೆ ಯೇನೇಳಕ್ಕೂ ವೋಳೀದೆ,

"ನಂಗೇನ್ರಯ್ಯ ತಿಳಿದುದು?..."ಅಂದ.

ವಸಿ ಸಮಯ ಯೋಚ್ಣೆ ಮಾಡ್ತೆ ವೊಳೆ ನೀರ್‍ನೆ ಬಿರುಗಣ್ಣು ಬುಟ್ಟುನ್ವಾಡ್ತ ಕುಂತಿದ್ದ ಅಡವಿ,

"ಊ, ಇನ್ನು ಯೇಟು ಚಿಂತೆ ಮಾಡದ್ರೂ ಆ ಬೊಡ್ಡೀ ಮಕ್ಕಳು ಬುಡಕ್ಕಿಲ್ಲ – ಲಕ್ಕ, ನಾನೀಗ ಒಂದು ಕೆಲ್ಸ ಮಾಡ್ತೀನಿ. ಕೆರೆ ಅಂಗಳದಲ್ಲಿ ಕೆಂಗಣ್ಣಪ್ಪ ಎಂಗಿದ್ರೂವೆ ಇಟ್ಟಿಗೆ ಕುಯ್ಯವ್ನೆ. ನೀನೊಸಿ ನಮ್ಮ ಗಾಡೀಲಿ ಆ ಗ್ವಾಡೆ ಎತ್ತೋವೋಟು ವೊಡಕ್ವಡು. ಕೆಂಗಣ್ಣಪ್ಪಂಗೆ ನಾನು ಯೋಳಿಕತ್ತೀನಿ. ಅವ್ನು ನಂಗೆ ನೆಂಟ. ಇಂದ್ನಿಂದ ದುಡ್ಡು ಕ್ವಡತೀನಿ ಅಂದ್ರು ವಲ್ಲೆ ಅನ್ನಕ್ಕಿಲ್ಲ. ಗಾರೆ ರಾಮಯ್ಯಂಗೂ ಯೋಳ್ತೀನಿ. ಆಮ್ಯಾಕೆ ನೀ ಬಂದು ಅವನು ಗ್ಯಾಡೆ ಕಟ್ಟೋ ನಾಗ ನೀರು, ಇಟ್ಟೀಗೇಯ ಅವನ್ಗೆ ಸರಬ್ರಾಜು ಮಾಡ್ಕಡು. ಅದೇನು ಕಂಬಳಾಯ್ತದೊ ಕ್ವಟ್ಟೇನಂತೆ..." ಅಂದಿದ್ದ. ಆಗ ಲಕ್ಕ.

"ಅಂಗಾರ ಗ್ವಾಡ್ಯ ನೀವೊಬ್ರೆ ನಿಮ್ಮ ಕರ್ಚಿನಿಂದ್ಲೆ ಯೇಳಿಸಿಬುಟ್ಟೀರ?" ಪ್ರಸ್ನೆ ಮಾಡಿದ್ದ.

"ಇಲ್ಲ ಕನ್ಲ, ಗಂಗೀ ಎಣ್ಣೆಂಗಸಲ್ವ?– ನಾನು ಕಟ್ಟಿಸ್ತೀನಿ. ಒಟ್ನಲ್ಲಿ ಅದ್ಯೇನು ಕರ್ಚಾಯ್ತದೊ ಅದ್ನ ಯಾಜಮಾನ್ರಿಗೇಳಿ ಗಂಗಿ ಕಡಿಂದ ವಸೂಲು ಮಾಡ್ತೀನಿ" ಅಂದಿದ್ದ ಅಡವಿ.

* * * *

ಗ್ವಾಡೆ ಯೇಳುಸಿ ಆಗಿತ್ತು. ಮತ್ತೇ ವಸಿ ಜನ ಲಕ್ಕಂಗೆ ಸಾಸ್ತ್ರಿಗಳ ತ್ವಾಟ, ಕೇಸವಯ್ಯಾರ ತ್ವಾಟ, ಮಟದ ಅಯ್ಯನೋರ ಕೆಲ್ಸ–ಇಂಗೆ ಯೇನಾರ ಜಂಬರ ಬಿದ್ದು, ಅಡವಿಯಪ್ನ ಏಟೋ ಜನ ಮಿಲಾಕತ್ತಾಗ್ನಿಲ್ಲ... ಒಂದು ಜಿನ ಲಕ್ಕ ಕೆರೆ ಕಡೀಕೆ ವೋಯ್ತಿರ್ವಗ. ಇಂದ್ನಿಂದ ಬತ್ತಿದ್ದ ಅಡವಿ ಲಕ್ಕನ ಕೂಗಿ, ನಿಲ್ಲುಸಿ, ಕೆರೆ ಆಚೆಗಿರೊ ಕೋಡಿ ಬಸಪ್ಪನ ಗುಡಿ ತಾವಿಕೆ ಕರಕಂಡೋಗಿ, ಪುನಾ ತನ್ನ ಯತೆಯ ತೋಡಿಕಂಡ...

"ಲಕ್ಕ, ಆ ಗ್ವಾಡೆ ಆಕಿಸಿದ್ದು ನಂಗೆ ಎಂತಾ ಅನ್ನಾಯ ಆಯ್ತು ಅಂತೀಯ?... ಆ ಗಂಗಿ ಕಡಿಂದ ನಾನು ಆಟೀಟು ತೊಪ್ಪೆ ಎತ್ತಿಗತ್ತಿದ್ದು ಬೋ ದ್ವಡ್ಡ ಇಸ್ಯ ಯೇನಲ್ಲ. ಅದು ವೋದ್ರೆ, ಕತ್ತೆಬಾಲ... ಮುಖ್ಯವಾಗಿ ನಂಗೆ ಬಂದ ತ್ವಂದರೆ ಅಂದ್ರೆ, ನನ್ನ ಕ್ವಟ್ಟಿಗೆ ಇಬ್ಬಾಗಾಗಿ ಕಿಸ್ಕಿಂದಾ ಪಟ್ಟಣಾದ್ದು!... ಅದೂ ವೋಗ್ಲಿ ಅಂದ್ರೆ, ನಮ್ಮವ್ವಂಗೆ ಕರೆ ಅಸೀನ ಗಂಜಳ ತೆಪ್ಪೋಗಿ, ನಾ ನಿಚ್ಚ ಅವಳಿಂದ ಸಾಪಳ ಕ್ಯಾಳಬೇಕಾಗಿ ಬಂದಿರಾದು!– 'ಲೋ ಅಡವಿ, ನೀ ಬೋ ಹೇಳು ಇಸುಗ ಕನೊ. ಹೀನ ಹೀನ. ನಿಂಗೇನೂ ಕೇಡು ಬಂದಿತ್ತು, ಅವಳ ಕಡೆ ತೊಪ್ಪೆ ಗೋರಕ್ಕೆ?.... ಅವಳ ಈಟು ತೊಪ್ಪಿಂದ ಯೇನಾರ ಉಪ್ಪರ್ಗೆ ಯೇರುಸ್ತಿದ್ಯ?... ಈಗ ನ್ವಾಡು, ನಿನ್ನ ಅಡಾಸಿಂದ ಗಂಟು ನಂಟು ಯೆಡ್ಕೂ ಕಳಕಂಡೆ!'... ಅವ್ವನ ಮಾತ ಕ್ಯಾಳಿ ಕ್ಯಾಳಿ, ನಂಗಂತೂ ಜೀವಣಾನೆ ರೋಸೋಗದೆ ಕನ್ಲ. ನಮ್ಮ ಕ್ವಟ್ಟಿಗೇಲಿ ನೀ ಕಂಡಿರೋವಂಗೆ ದನ ಕಟ್ಟಿದ ಮ್ಯಾಗೆ ವಳೀಕೆ ಕಾಲಿಡಕ್ಕೂ ಜಾಗ ಇಲ್ಲ... ಮೊನ್ನೆ ಯೇನಾಯ್ತು ಅಂತೀಯೆ. ನಮ್ಮ ಗೌರಿ ಗೋವು ಆಕಿರೊ ಕೆಂದಗರ ಇಲ್ವ, ನಾನು ಎತ್ತುಗಳ ಗೊಂದಲಕೇಲಿ ಇಟ್ಟಾಡ್ತಿದ್ದ ನೆಲ್ಲುಲ್ಲು ಸರಿ ಪಡಿಸ್ತಾ ಇದ್ರೆ, ಆ ಕೆಂದಗರ ಅದ್ಯಾವ ಮಾಯದಲ್ಲೊ ಬಂದು ಗುದ್ದು ಬುಡಾದ? – ಅಪಾಯ ಸ್ತಳಕ್ಕೆ ಗುದ್ದು ಬುಡ್ತುಕನ್ಲ. ಇನ್ನೊಸಿ ಜೋರ್ನಿಂದ ಗುದ್ದಿದ್ರೆ ನನ್ನ ಪ್ರಾಣವೆ ವೋಂಟೋಗಬೇಕು!"...

* * * *

ಇದೆಲ್ಲ ಗ್ಯಾಪನಾಗಿ, ವೊಟ್ಟೆ ವಳುಗೆಲ್ಲ ತೊಳಿಸಿದಂಗಾಯ್ತು. ಬಿಸಲ್ನ ಜಳ ಈಗೊಸಿ ಕಮ್ಮಿಯಾದಂಗಿತ್ತು. ತಣ್ಣಗಿರೊ ಗಾಳಿ ಬೀಸಕ್ಕೂ ಮುಟ್ಟಿಕತ್ತು. ಆದ್ರೆ ಲಕ್ಕನ್ನ ವಳುಗಡೆ ತಪ ಕಾಳ್ಗಿಚ್ಚಾಗಿ ಉರೀತಿತ್ತು. ಕತ್ಲಾಗೊವರ್ಗೂ ಅಲ್ಲೇ ಕುಂತಿದ್ದ... ಕತ್ತಲು ಪೂರಾ ಕವುಚಿಗಂಡಾಗ,

ಲಕ್ಕ ಅಲ್ಲಿಂದೆದ್ದ. ನಿಧಾನ್ವಾಗಿ ನಡದು ತಮ್ಮ ಗುಡ್ಲ ಸೇರ್ದ. ಆಟೊತ್ತಿಗಾಗ್ಲೆ, ಸಿವುನಿ ಗುಡ್ಲ ವಳುಗೆ ದೀವಿಗೆ ಕತ್ತಿಸಿದ್ಲು. ಅಯ್ಯ, ಅವ್ವ ಯಾರೂ ಇನ್ನೂ

ಗುಡ್ಲಿಗೆ ಬಂದಿರನಿಲ್ಲ. ಸಿವುನಿ "ಯೆತ್ತಾಗಿ ವೋಗಿದ್ಯಣ್ಣ?" ಅಂತ ಕೆಳಿದೋಳು, ಅವ್ನಿಂದ ಉತ್ತರ ಬರದೇ ಇದ್ದ ಕಂಡು, ಒಲೆ ಕತ್ತುಸಕ್ಕೆ ಕ್ವಾಣೆಗೋದ್ಲು. ಲಕ್ಕ ಮಚ್ಚಿಗೆ ಇಡಿ ಜೋಡುಸ್ತ ಕುಂತ. ಯಾರೊ ಮೆತ್ತಗೆ ನಕ್ಕಂಗಾಯ್ತು! ವೋಳ್ಳಿ ನ್ವಾಡ್ದ–ನಕ್ಕಿದ್ದು ಸಿವುನಿ ಮೊಗ!... ಕಣ್ಣ ಮುಚ್ಚಿದಂಗೇಯ ಅದರ ಮೊಕದ ತುಂಬ ಕುಸಿ ತುಂಬಿತ್ತು. ಇದಿಯಮ್ಮ ಚಕ್ಕಲಗುಲಿ ಆಡಸ್ತಿರಬೇಕು, ಅಂದುಕೊಂಡ ಲಕ್ಕ. ಮೊಗ ದ್ವಡ್ಡೋರ ಸಂಕಟ, ಯೆತೆ, ಯಾವ್ದೊ ಕಾಣ್ದೆ ತನ್ನೊಟ್ಟಿಗೆ ತಾನು ಬ್ಯಾರೆ ಪರ್ಪಂಚದಾಗೆ ಇದ್ದಂಗಿತ್ತು!...

## ೨೯

ಯಜಮಾನ್ರೆಲ್ಲ ಬಂದು ಚಾವಡಿಗೆ ಸೇರಿದನಂತರ ಲಕ್ಕನಿಗೆ ಪಂಚಾಯಿತಿ ಕಟ್ಟೆಗೆ ಹಾಜಾರಾಗಬೇಕೆಂದು ಕರೆ ಬಂತು. ಅವರ ಆಣತಿ ಹೊತ್ತು ತಂದವನು ಕುಳಿವಾಡಿ ಕುಂದೂರಯ್ಯ– ಲಕ್ಕನ ದೊಡ್ಡಪ್ಪನೆ!...

ಮಚ್ಚಿಗೆ ಹಿಡಿ ಜೋಡಿಸ್ತ ಕುಂತಿದ್ದ ಲಕ್ಕ, ದೊಡ್ಡಯ್ಯ ಇಸ್ಯ ತಿಳುಸ್ದ ತಕ್ಷಣ ಎದ್ದು ಅವನ ಇಂದುಗುಟ್ಟೆ ವೊಂಟ... ಮುಂದಮುಂದಾಗಿ ನಡೀತಿದ್ದ ಕುಂದೂರಯ್ಯ ಕಣ್ಣೀರ ವತ್ತಿಗೊತ್ತಾನೆ ವೋಯ್ತಿದ್ದ... ಲಕ್ಕನ ಎದೆಗೂಡ್ನಲ್ಲಿ "ಮುತ್ತಿನಂತಾ ಕಾಲ್ನಲ್ಲೋಗಿ ಮಿತ್ತಿನಂತಾ ಮತ ತಂದ್ಯಲೊ ಮಗನೆ"– ಅವ್ವನ ಈ ಮಾತುಗಳೇ ಕೊಟ್ಟ ಕುಟ್ತಿದ್ದೊ... ಈ ಯೋಚ್ಣೇಲಿ ಚಾವಡಿ ಸಮೀಪಿಸಿದ್ದೂ ಲಕ್ಕಂಗೇ ತಿಳೀನಿಲ್ಲ...

ಚಾವಡಿಯ ಒಳಗೆ ಕುಳಿತು, ಎರಡು ಬೆರಳಿನ ನಡುವೆ ಚಿಟಿಕೆ ನಶ್ಯ ಹಿಡಿದು, ಅದನ್ನು ಮೂಗಿನ ಹೊಳ್ಳೆಗಳ ಹತ್ತಿರ ಒಯ್ಯುವುದು, ಮೂಸುವುದು, ಆದರೆ ನಶ್ಯ ಮಾತ್ರ ಖರ್ಚಾಗಬಾರದು– ಪಂಚಾಯಿತಿ ಕಟ್ಟೆಯೊಳಗೆ ಬೆಟ್ಟಯ್ಯ ಈ ತರ ಮಾಡುತ್ತಲೆ ಇದ್ದ. ಅವನು ಹೀಗೆ ಮಾಡುವುದನ್ನೇ ಸ್ವಲ್ಪ ಸಮಯದಿಂದ ಗಮನಿಸುತ್ತಿದ್ದ ನಂಜೇಗೌಡ, ಶ್ಯಾನುಭೋಗರ ಕಿವಿಯಲ್ಲಿ,

"ಆ ಚಾಂಡಾಲ್ನ ನ್ವಾಡಿದ್ರ, ಸೋಮಿ?– ಅವ್ನು ಯಾವಾಗ್ಲೂ ಇಂಗೇಯ. ಜೀನ ಅಂದ್ರೆ ಜೀನ, ನ್ವಾಡಿ, ಒಂದು ಚಿಟಿಕೆ ನಸ್ಯದ ಮೂಗ್ಗೆ ವಾಸಣ ತಕ್ಕಂಡಂಗೂ ಆಗಬೇಕು. ನಸ್ಯ ಕರ್ಚೂ ಆಗಬಾರ್ದು! ನಮ್ಮಟ್ಟಿಗೆ ಯಾವಾಗಲಾರು ಬಂದಾಗ, ನನ್ನೆಡತಿ ಅಕ್ಕಿರೊಟ್ಟಿ ಅರೆಮೆಣಸಿನ ಖಾರ ಕ್ವಟ್ಟು, ಅದ್ಕೆ ಈ ತೋರ ಬೆಣ್ಣೆ ಆಕ್ಕೊಟ್ರೆ, ಈ ಬೊಡ್ಡಿ ಹೈದ ರೊಟ್ಟಿ ಖಾರ ತಿನ್ನುವಾಗ, ರೊಟ್ಟಿ ಮುರುಕ ಬೆಣ್ಣೆಗ ಇಂಗೆ ಮುಟ್ಟಿಸೋದು ಅಂಗೆ ಬಾಯ್ಗೆ ಅಕ್ಕಳೋದು ಕಡೀಕೆ ಉಳುಕಂಡ

ವೋಟು ತೋರ ಬೆಣ್ಣೆನೂವೆ ಗುಳುಂನೆ ನುಂಗೋದು!... ಬೋ ಆಸೆಪುರಕ, ಸೋಮಿ. ಬದುಕಕ್ಕ ಇಪರೀತ ಆಸೆ. ಇವನಿಗೇನಾರು ಆಯಸು ಖರೀದ್ಗೆ ಸಿಕ್ಕೂವಂಗಿದ್ರೆ, ಅದ್ನೂ ಕೊಂಡು, ಬೀಗಮುದ್ರೆ ಮಾಡಿರೋನು!– ಸತ್ತ ಎಣದ ಕಯ್ಲಿ ಕ್ರಯಪತ್ರಕ್ಕೆ ರುಜು ಆಕ್ಸಿ, ಅವಮ್ಮನ ತಾವಳ ಆಸ್ತಿಯ ವೋಡಕೊನಿಲ್ವೆ– ಅಂಗೆ!" ಎಂದು ಉಸುರಿದ.

ಅದಕ್ಕೆ ಶ್ಯಾನುಭೋಗರೂ ಪಿಸುಮಾತಿನಲ್ಲೆ,

"ಹೌದೌದು. ಆ ಸಮಾಚಾರವನ್ನು ಇತ್ತೀಚೆಗೆ ನಾನೂ ಕೇಳಿದೆ. ಇವನ ಹೆಂಡತಿಯೆ ಗುಟ್ಟು ಗುಟ್ಟು ಎಂದು ಊರಿನಲ್ಲಿ ಯಾರೊ ಒಬ್ಬಳ ಸಂಗಡ ಹೇಳಿದ್ದ, ಹಾಗೇ ಒಬ್ಬರಿಂದ ಇನ್ನೊಬ್ಬರ ಕಿವಿಗೆ ಬಿದ್ದು ಕೊನೆಗೆ ನನ್ನ ಕಿವಿಗೂ ಬಿದ್ದಿದೆ"–ಎಂದು ನುಡಿದರು.

"ಯೇನ ಮಾಡಾದು, ಸೋಮಿ. ಬೊಡ್ಡಿ ಹೈದ ಗೆದ್ದೊದ. ಪಂಚಾತೀಲಿ ನೀವು ಕಂಡಂಗೆ ಸಾಕ್ಸಿ ಯೋಳೋರೆ ಇರ್ನಿಲ್ಲ. ಅದಾದಮ್ಯಾಲೇಯ ಆ ಎಂಗಸು ಈ ಸುದ್ಯ ಟಾಂ ಟಾಂ ಮಾಡದ್ದು...ಈಗೇನ ಮಾಡೂವಂಗೆ ಇದ್ದದ್ದು?– ಈಗ ಅವ್ನ ಕೈಳಿದ್ರೆ, 'ಅಯ್ಯೊ, ಆ ಎಂಗಸು ಮುಂಡೆ ಮಾತ್ನೂವೆ ಒಂದು ಲಿಂಗ ಅಂತ ಕಟ್ಕಂಡು ಆಡು' ಅಂತ ಮಾತ ತೇಲಿಸಿಬುಡ್ತಾನೆ..." ಅಂದ ನಂಜೇಗೌಡ.

ಇವರಿಬ್ಬರೂ ಹೀಗೆ ಗೋಪ್ಯವಾಗಿ ಸಂಭಾಷಿಸುತ್ತಿರುವಾಗ, ಕುಳವಾಡಿ ಕುಂದೂರಯ್ಯ ಸಮೀಪಿಸಿ,– "ಎಲ್ಲಾರು ಸೇರವ್ರೆ, ಸೋಮಿ" ಎಂದು ಬಿನ್ನವಿಸಿದ. ಶ್ಯಾನುಭೋಗರು,

"ಹಾಗಾದ್ರೆ ಶುರು ಮಾಡಬಹುದಲ್ಲ?" ಚಾವಡಿಯೊಳಗೆ ಕುಳಿತ ಯಜಮಾನರುಗಳತ್ತ ದೃಷ್ಟಿ ಹೊರಳಿಸಿ ಕೇಳಿದರು... ಆಗ ನೆರೆದಿದ್ದ ಯಜಮಾನರೆಲ್ಲ "ಆಗಬಹುದು" ಎಂದು ಒಪ್ಪಿಗೆಯಿತ್ತರು.

ಎಲೆ ಅಡಿಕೆ ಜಗಿಯುತ್ತ, ಮಹಿಳೆಯರ ಗಡಣದಲ್ಲಿ ಒಂದು ಪಾರ್ಶ್ವಕ್ಕೆ ಕುಳಿತ ಬುಂಡಮ್ಮ,

"ಸುರು ಆಯ್ತು ಕನ್ರವ್ವ, ಇವರ ಕೊಳೆ ಪಂಚಾತಿ" ಎಂದು ಅಣಕವಾಡಿ ಸುತ್ತ ಕುಳಿತ ಮಹಿಳೆಯರನ್ನು ನಗಸಿದ್ದಲು.

ಇನ್ನೊಂದು ಪಾರ್ಶ್ವಕ್ಕೆ ಹೊಲತಿಯರ ಗುಂಪಿನಲ್ಲಿ ಕುಳಿತ ಕಲ್ಯಾಣಿ, ದ್ಯಾವಾಜಮ್ಮನ ಸಂಗಡ–

"ನಮ್ಮ ಪಾಡಿಗೆ ನಾವು ಸಿವನೆ ದ್ಯಾವರೆ ಅಂತ ನಮ್ಮ ಭಂಗ ನಾವು ಮಾಡಿಕತ್ತ, ಎಣುಸಾಕ್ದ ಕಜ್ಜಾಯದಂಗೆ ಇದ್ದರೂವೆ, ನಮ್ಗೆ ತಗಲಿಕಂಡ ಉಪದ್ರ

ನ್ವಾಡೆ ದ್ಯಾವಾಜಿ..." ಎಂದು ಬಿಕ್ಕಿದಳು. ಅದಕುತ್ತರವಾಗಿ ದ್ಯಾವಾಜಮ್ಮ.

"ಯಾನ ಮಾಡಕ್ಕಾದಾತು, ಕಲ್ಯಾಣಿ, ಮನಸನ್ಗೆ ಬರ್‍ದೆ, ಮರಕ್ಕೆ ಬಂದಾತ?... ಬದುಕ್ನಲ್ಲಿ ಇಂಗೆ ಒಂದೊಂದು ದಪ ಯೆಡವಟ್ಟಾಯ್ತದೆ. ಸೈಸಿಕಾಬೇಕು" ಎಂದು ತತ್ತ್ವೋಪದೇಶ ಮಾಡಿದಳು.

* * * *

"ನ್ಯಾಯ ಸುರು ಆಯ್ತು, ಸದ್ದು ಸದ್ದು"– ಎಂದು ಕುಳವಾಡಿ ಕುಂದೂರಯ್ಯ ತಮಟೆ ಬಾರಿಸುತ್ತ ಸಾರಿದ. ಅಲ್ಲೊಬ್ಬರು ಇಲ್ಲೊಬ್ಬರು ತೆಳ್ಳ ತೆಳ್ಳಗೆ ಪರಸ್ಪರ ಮಾತನಾಡಿಕೊಳ್ಳುತ್ತಿದ್ದರೂ ಒಟ್ಟಿನಲ್ಲಿ ಜನರ ಗುಜುಗುಜು ಸದ್ದ ಬಹುತೇಕ ಅಡಗಿತು... ದುಪಟ, ಕಂಬಳಿ, ಶಾಲು ಹೊದ್ದು ಕುಳಿತ ಜನರ ಮೇಲೆ ಬೆಳದಿಂಗಳು ತನ್ನ ಬೆಳ್ಳಿ ಲೇಪವನ್ನು ಸವರುತ್ತ ಬರುತ್ತಿತ್ತು. ಅವರೆಲ್ಲರೂ ಬೇರೆ ಯಾವುದೋ ಲೋಕದ ವ್ಯಕ್ತಿಗಳಂತೆ ವಿಲಕ್ಷಣವಾಗಿ ತೋರುತ್ತಿದ್ದರು.

ಲಕ್ಕನ ದ್ರುಸ್ಟಿ ಮಾತ್ರ ತನ್ನ ಎಡಗಡೀಕೆ ಗುಂಪ್ನಲ್ಲಿ ಆರಾಮಾಗಿ ನಿಂತಿದ್ದ ಗರುಡಗಂಬದ ದಾಸಯ್ಯಲ್ಲೆ ನಟ್ಟಿತ್ತು. ಊರಿಗೆ ಆಗಿಂದಾಗ ಬತ್ತಾ ಇದ್ದ ದಾಸಯ್ಯ ಅವ್ನು. ಬಿಳಿ ಅಂಗರೇಕು ತ್ವಟ್ಟು, ಒಂದು ವರಿಸೇಲಿ ಕಚ್ಚೆಪಂಚೆ ಬಿಗುದು, ತಲೆ ಮ್ಯಾಲೆ ಕಣ್ಣು ತುಂಬೂವಂಗೆ ಬಿಳಿ ಚುಕ್ಕ ಕೆಂಪು ರಂಗಿನ ದಪ್ಪಾನೆ ಪೇಟ ಸುತ್ತಿ, ಗರುಡಗಂಬವ ಪಕ್ಕದಾಗಿಟ್ಟು, ಊರ ನಡೂಮದ್ಯದಲ್ಲಿ ನಿಂತು ಅವ್ನು ಸಂಕ ಬಾಯಾಗಿಟ್ಟು ಭೋಂ ಭೋಂ– ಅಂತ ಬಜಾಸಿದ್ರೆ ಸಾಕು. ಗ್ರಾಮದ ಉಳುಕೆ ಹೈಕಳಂಗೆ ಲಕ್ಕನೂವೆ ಅವ್ನ ಮುಂದ್ಕೆ ಓಡೋಗಿ ನಿಂತುಕತ್ತಿದ್ದ. ಆಗ ಉಳುಕೆ ಹೈಕಳಂಗೆ ಲಕ್ಕನ ನ್ವಾಟವೆಲ್ಲ ಗರುಡಗಂಬದ ಮ್ಯಾಲೆ ಸನ್ಯಾಸಿ ತರ ಗಮ್ಮನೆ ಕುಂತ ಗರುಡಪಕ್ಸಿ ಸುತ್ತಾಲು ಸುತ್ತುತಾ ಇತ್ತು. ಚಿನ್ನದ ತಗಡ್ನೆ ವೊದಿಕೆ ಮಾಡ್ದಂಗೆ ಮಿರಮಿರ್‍ನೆ ಮಿಂಚೊ ಗಡಿ, ಬೆಳ್ಳುಂಬೆಳ್ಗೆ ರೇಸ್ಮೆ ತುಪ್ಪಟಾನೆ ತುಂಬಿಕಂಡಂಗೆ ಇದ್ದ ಅದರ ದಪ್ಪಾನೆ ಕತ್ತು, ಒಂದು ದಪ ಕುಕ್ಕಿದರೆ ಕರುಳ್ನೆ ಬಗಿಯಾವಂಗಿದ್ದ ಅದರ ಕೊಕ್ಕು– ಇವು ಒಂದೊಂದ್ನೂ ಏಟೊತ್ತು ನ್ವಾಡ್ತಾ ನಿಂತರೂವೆ ಲಕ್ಕಂಗೆ ಬ್ಯಾಸರ ಅನ್ನದೆ ಇರ್‍ನಿಲ್ಲ!... ಉಳ್ಳೋರ ಹೈಕಳು ದಾಸಯ್ಯಂಗೆ ರಾಗೀನೊ, ಜ್ವಾಳನೊ, ಅಕ್ಕೀನೊ, ಇಲ್ಲ ಕೋನಿಕೆ ಕಾಸನೊ ತಂತಮ್ಮ ಅಟ್ಟಿಗಳಿಂದ ಈಸುಗಂಬಂದು ನೀಡೋರು. ಲಕ್ಕಂಗೆ ತಾನೂ ಯೇನಾರ ಕ್ವಡಬೇಕೂಂತ ಆಸೆ. ಆದ್ರೆ ಅವ್ನ ಜೋಬು ಯಾವುತ್ತೂವೆ ಖಾಲಿ!... ಆದ್ರಿಂದ ಯಾವತ್ತೂ ದೂರದಾಗೆ ಸಪ್ಪೆಮ್ವಾರೆ ಅಕಿ ನಿಂತಿರ್‍ತಿದ್ದ. ಇಂಗಿರಬೇಕಾರೆ, ಒಂದ್ಸಲ ಲಕ್ಕನ ದೊಡ್ಡಯ್ಯ ಕಡ್ಲೆಮುರಿ ತಕ್ಕೊ ಅಂತ ಲಕ್ಕಂಗೆ ಒಂದಾಣೆ ಕ್ವಟ್ಟಿದ್ದ. ಲಕ್ಕ ಅದ್ನೆ

ತಂದು ದಾಸಯ್ಯಂಗೆ ವಪ್ಪುಸಿದ್ದ. ದಾಸಯ್ಯಂಗೆ ಏನನ್ನುಸ್ತೋ, ಆ ಒಂದಾಣೆ ಜೊತ್ಗೆ ಇನ್ನೂ ಒಂದಾಣೆ ತನ್ನ ಜೋಬ್ನಿಂದ ತಗುದು, 'ನಿನ್ನಂತೋರ ಅತ್ರ ನಾ ಯೆಂದ್ಗೂ ದುಡ್ಡು ಈಸುಗಳಕ್ಕಿಲ್ಲ, ತಕ್ಕೊ. ನಿನ್ನಾಣೆ ಜ್ವತ್ಗೆ ಈ ಆಣೇನೂ ತಕ್ಕಂಡೋಗಿ ನಿಂಗೇನು ಆಸ್ಯೊ ಅದ ಕ್ವಂಡು ತಿನ್ನು' ಅಂದು ಲಕ್ಕನ ಕಯ್ಯಾಗಿಟ್ಟಿದ್ದ–

ಆ ದಿನಾನೆ ಸಮ, ಆಗ್ನಿಂದಲೂವೆ ಗರುಡಗಂಬದ ದಾಸಯ್ಯಂಗೂ ಲಕ್ಕಂಗೂ ಬಾಲ್ಯದಿಂದ್ಲೆ ಸಿನೇಯಿತತನದ ಕೊಂಡಿ ಬೆಸಗಂಡಿತ್ತು. ಲಕ್ಕನ ಆಸೆ ನ್ವಾಡನಾರ್ದೆ, ಬಾಕಿ ಹೈಕಳು ಅಂಗೂವೆ ಊರ್ನೋರು ಯಾರೂ ಇಲ್ದೇ ಇದ್ದ ನ್ವಡಿ, ದಾಸಯ್ಯ ಆ ಗುರುಡಪಕ್ಸಿ ಮುಟ್ಟಕ್ಕೆ ಲಕ್ಕಂಗೆ ಅವಕಾಸ ಕ್ವಟ್ಟಿದ್ದ... ತಳ ತಳ ವೊಳೆಯೊ ಆ ಪಕ್ಸಿಯ ಗರಿ ಮುಟ್ಟಿದಾಗ, ಲಕ್ಕನ ಜೀವ ಸೊರ್ಗಕ್ಕೇ ವೋಗಿ ಕುಂತಂಗಾಗಿತ್ತು!... ಇನ್ನೊಂದು ಜಿನ ಆ ದಾಸಯ್ಯ ದ್ವಡ್ಡ ಮನಸು ಮಾಡಿ, ಆ ಗರುಡಪಕ್ಸಿಯ ಲಕ್ಕನ ಎಗಲಮ್ಯಾಲೇ ಕುಂಡರಿಸಿದ್ದ!– ಆಗಂತೂ ಲಕ್ಕನ ಮನಸು ನವಿಲುಗರಿ ಬಿಚ್ಚಿದಂಗೆ ಕುಣಿದಾಡ್ತಿತ್ತು... ಅವರಿಬ್ಬರ್ಗೂ ಇಂಗೇ ಸರಾಗ ಬೆಳೀತು. ದಾಸಯ್ಯ ಊರಿಗೆ ಬಂದ ಅಂದ್ರೆ, ಲಕ್ಕ ಓಡೋಗಿ ಆ ಗರುಡಪಕ್ಸಿಯ, ಯಾರೂ ಇಲ್ದೇ ಇದ್ದ ನ್ವಾಡಿ, ಕಯ್ಯಗೆತ್ತಿ ತನ್ನೆದೆಗೆ ಅವುಚಿಕೊಳೊನು. ಒಂದೊಂದು ದಪ ತಲೆ ಮ್ಯಾಲೆ ಕುಂಡುರಿಸಿ ಕುಣಿದಾಡೋನು... ಇಂಗೆಲ್ಲ ಆಟ ಆಡ್ತಿದ್ದ!... ದಾಸಯ್ನ ಸಂಗಾಟ ಲಕ್ಕನ ಸಮ್ಮಂದ ಇಂಗೆ ಎಣಕಂಡು ಬಂದಿ!...

ಈ ದಿವ್ಸ ಅಪರಾದಿ ಸ್ತಾನದಲ್ಲಿ ನಿಂತ ಲಕ್ಕಂಗೆ ದಾಸಯ್ನ ನ್ವಾಡೋ ದೈರ್ಯ ಬರನಿಲ್ಲ. ಅವನ ನ್ವಾಟವೆಲ್ಲ ಆ ಗರುಡಪಕ್ಸೀಲೆ ನಟ್ಟಿತ್ತು!...

*        *        *        *

ಲಕ್ಕ ಇಂಗೆ ಯೋಚ್ನೇಲೀ ಮುಳುಗಿರೋನೂವೆ, "ಲಕ್ಕ ಬಂದಿದಾನೇನಪ್ಪ, ಕುಳವಾಡಿ?" ಶ್ಯಾನುಭೋಗರು ಕೇಳಿದರು, ಕುಂದೂರಯ್ಯ,

"ಬಂದೇಟೊ ವೊತ್ತಾಯ್ತು, ಸೋಮಿ" ಎಂದ.

ಅಷ್ಟರಲ್ಲಿ ನಂಜೇಗೌಡ ಶ್ಯಾನುಭೋಗರ ಸಮೀಪಕ್ಕೆ ಸರಿದು ಮೆಲ್ಲನೆ – "ಸ್ಯಾನುಭೋಗರೆ, ಯಾಕೊ ಹಾಳು ವೊಟ್ಟೆ ಬೆಳುಗ್ನಿಂದ ತಡೀತ ಇಲ್ಲ. ಒಂದು ಕಾಲುಗಂಟೆ ಟೇಂ ಕ್ವಟ್ಟರೆ ಸಾಕು." ಇಂಗೋಗಿ ಅಂಗೆ ಬಂದುಬುಡ್ತೀನಿ" ಅಂತ ಬೇತುಗಂಡ.

"ಓ, ಹೊಟ್ಟೆಕಳೆತ!– ಎಷ್ಟು ದಿನದಿಂದ ನಂಜೇಗೌಡರೇ?"– ಶ್ಯಾನುಬೋಗರು ಸ್ವಲ್ಪ ಗಟ್ಟಿಯಾಗೆ ಕೇಳಿದರು.

"ನೆನ್ನೆ ನಾತ್ರಿಂದ, ಸೋಮಿ. ಮೂರು ನಾಕು ಸರ್ತಿ ಝಾಡಿಸಿಬುಡ್ತು.

ವಸಿ ನ್ಯಾಯವ ಅಂಗೇ ತಳುಗ್ಸಿ" ಅಂದ.

"ಅಯ್ಯೋ, ಒಂದು ಕಾಲುಗಂಟೆ ನಿದಾನವಾದ್ರೆ, ನ್ಯಾಯ ಎಲ್ಲೂ ಓಡಿ ಹೋಗಲ್ಲ. ನೀವು ಸರ್ರನೆಹೋಗಿ, ತಡೆಯೋದು ಒಳ್ಳೇದಲ್ಲ" ಎಂದು ಒಪ್ಪಿಗೆಯಿತ್ತರು ಶ್ಯಾನುಭೋಗರು.

ನಂಜೇಗೌಡ ಎದ್ದು ಹೋಗುವಾಗ, ಸಭೆಯಲ್ಲಿ ಗುಜುಗುಜು ಪ್ರಾರಂಭವಾಯಿತು. ಬುಂಡಮ್ಮ ಪಕ್ಕದಲ್ಲಿ ಕುಳಿತ ಹೆಂಗಸನ್ನು ತಿವಿದು ಕೇಳಿದಳು:

"ಆ ನೂರೊಂದು ಗೋವ ತಿಂದ ಹುಲಿ, ಯಾಕಿಂಗೆ ಎದ್ದೋಯ್ತಾ ಅದೆ?"

"ವೊಟ್ಟೆ ಕಳುತವಂತೆ, ಅಜ್ಜಿ" – ಪಕ್ಕದಲ್ಲಿ ಕುಂತಿದ್ದ ರಂಗಮ್ಮ ಹೇಳಿದಳು

"ಮಟದಲ್ಲಿ ಬಿಟ್ಟಿ ಕೂಳು ಸಿಕ್ತದೇಂತ ಅಡ್ಡಾದಿಡ್ಡಿ ಕಪ್ಪಡಿಸಿದ್ರೆ, ಮತ್ತೇನ ಆದದು?.... ಕ್ಯಾಳಿಲ್ಲವೇನೆ ರಂಗಮ್ಮ ಗಾದ್ಯ– 'ಅನ್ನ ಅದೇಂತ ತಿಂದೋನು ಕೆಟ್ಟ, ಎಣ್ಣು ಅವಳೇಂತ ವೋದೋನು ಕೆಟ್ಟ' ಅಂತಾವ?... ದೇಯದಲ್ಲಿ ಸಕ್ತಿ ಇರಾಗಂಟ ಯೇನೂ ಗ್ವತ್ತಾಕ್ಕಿಲ್ಲ. ಜೀವ ಮೆತ್ತಗಾಯ್ತದಲ್ಲ, ಆಗ್ಲೆ ಇಂತಾವೆಲ್ಲ ಅಮರಿಕಳಾದು!...

ಬುಂಡಮ್ಮನ ಅನುಭವದ ನುಡಿಗಳಿಗೆ ರಂಗಮ್ಮನ ಜೊತೆಗೆ, ಅವಳ ಸುತ್ತಲಿದ್ದ ಇನ್ನೂ ಕೆಲವರು ಹೆಂಗಸರೂ ಮೆಚ್ಚಿ ತಲೆದೂಗಿದರೂ.

## ೩೦

ತಾನು ಗರ್ಭಿಣಿಯಾಗಿರುವೆ ಎಂದು ಮನದಟ್ಟಾದ ದಿನದಿಂದಲೂ ರುಕ್ಮಿಣಿ ಅಧೀರಳಾಗಿದ್ದಳು, ಹಿಂದಿನ ಲವಲವಿಕೆ ಅವಳ ಮುಖದಿಂದ ಮಾಯಾವಾಗಿತ್ತು. ಲಕ್ಕನಿಂದ ಔಷಧಿ ತರಿಸಿ ಈ ಬೇಡದ ಗರ್ಭದಿಂದ ಪಾರಾಗಬಯಸಿದರೆ, ಸ್ವಜನರ ಗುಂಪೇ ಅಡ್ಡಬಂದು ಅವಳನ್ನು ಅಂಧಕಾರದ ಜಗತ್ತಿಗೆ ತಳ್ಳಿತ್ತು..... ಅತ್ತೆ ತನ್ನ ಉದ್ದನೆಯ ತಲೆಗೂದಲನ್ನು ಈ ರಾತ್ರಿ ತಾನು ನಿದ್ರಿಸುತ್ತಿರುವಾಗ ಕತ್ತರಿಸಿ ಹಾಕಿದ್ದರೆ ಚೆನ್ನಾಗಿರುತ್ತಿತ್ತೇನೊ, ಎನ್ನಿಸುವುದು..... ಈಗ ರುಕ್ಮಿಣಿಗೆ ಯಾವ ಕೆಲಸದಲ್ಲೂ ಆಸಕ್ತಿಯಿಲ್ಲ. ಕುಳಿತಿದ್ದರೆ ಶೂನ್ಯಮನಸ್ಕಳಾಗಿ ಸುಮ್ಮನೆ ಕುಳಿತೇ ಇರುವಳು. ಅಂಗಳದ ಕುಂಬವೊಂದನ್ನು ಒರಗಿ ನಿಂತರೆ ಎಷ್ಟೋ ಸಮಯ ಹಾಗೇ ನಿಂತುಬಿಡುವಳು...

ಕೆಲವು ದಿನಗಳ ಹಿಂದೆ ಹೊಸದೊಂದು ಸಂಗತಿ ನಡೆದು ಅವಳ ನೊಂದ ಮನಸ್ಸನ್ನು ಮತ್ತಷ್ಟು ಘಾಸಿಗೊಳಿಸಿತ್ತು:

ಶ್ಯಾನುಭೋಗರ ಮೂರನೆ ಮಗ ಸೀತಾರಾಮು ಮೈಸೂರಿನ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದು, ಹೋದ ಸಾಲಿನಲ್ಲಿ ಬಿ.ಎ. ಪಸುಮಾಡಿದ್ದ. ಶ್ಯಾನುಭೋಗರು ಡೆಪ್ಯುಟಿ ಕಮಿಶನರ್ ಸಾಹೇಬರ ಕೈಕಾಲು ಕಟ್ಟಿ ತಮ್ಮ ಮಗನಿಗೆ ಒಂದು ಗುಮಾಸ್ತೆ ಹುದ್ದೆಯನ್ನು ಸಂಪಾದಿಸಿಕೊಟ್ಟಿದ್ದರು. ಅವನು ಮೈಸೂರಿನ ಅಠಾರ ಕಛೇರಿಯಲ್ಲಿ ಕೆಲಸ ನಿರ್ವಹಿಸಿದ್ದು ಕೇವಲ ಒಂಬತ್ತೇ ತಿಂಗಳು. ಪುನಹ ತಮ್ಮ ತೋಟದ ಬಾಳೆಗೊನೆಗಳನ್ನೂ ಹೆಸರುವಾಸಿಯಾದ ದರುಮನಳ್ಳಿಯ ಬೆಣ್ಣೆಯನ್ನೂ ಡೆಪ್ಯೂಟಿಕಮೀಶನರ್ ಸಾಹೇಬರ ಪತ್ನಿಯವರಿಗೆ ರಹಸ್ಯವಾಗಿ ಸಪ್ಲೈ ಮಾಡಿ ಮಾಡಿ, ಹುಣಸೂರು ತಾಲ್ಲೂಕು ಕಚೇರಿಗೆ ಹುಡುಗನನ್ನು ವರ್ಗ ಮಾಡಿಸಿದ್ದರು!...

ಸೀತಾರಾಮು ಲಕ್ಷಣವಾದ ಯುವಕ ಗುಣದಲ್ಲೂ ಅಷ್ಟೆ. ಯರೂ ಬೆರಳು ಮಡಿಸುವಂತಿರಲಿಲ್ಲ. ಈ ಸೀತಾರಾಮು ಸಿಕ್ಕಾಗಲೆಲ್ಲ, ರುಕ್ಮಿಣಿಯು,

"ನಮ್ಮ ಜಾನಕಿಗೂ ನಿನಗೂ ವರಸಾಮ್ಯ ಹೇಳಿ ಮಾಡಿಸಿದ ಹಾಗಿದೆ. ನೀನು ಅವಳನ್ನೆ ವಿವಾಹವಾಗಬೇಕು" ಎನ್ನುತ್ತಲೆ ಇದ್ದಳು.

"ಹೆಣ್ಣನ್ನೆ ತೋರಿಸದೆ ಮದ್ವೆ ಮಾಡಿಕೊ ಅಂದರೆ ಹೇಗೆ?" – ಎಂದು ಸೀತಾರಾಮು ಹೇಳೇ ಹೇಳುತ್ತಿದ್ದ.

ಅವನಿಗೆ ರುಕ್ಮಿಣಿಯಲ್ಲಿ ಅಪಾರ ಗೌರವ. ಅವಳ ಅಭಿಪ್ರಾಯಕ್ಕೆ ಆತ ಬಹಳ ಬೆಲೆ ಕೊಡುತ್ತಿದ್ದ.... ತನ್ನ ಬದುಕು ಹಗರಣವಾಗುವುದಕ್ಕೆ ಪೂರ್ವದಲ್ಲಿ ರುಕ್ಮಿಣಿಯು ಅಶ್ವತ್ಥಣ್ಣನಿಗೂ ಅತ್ತಿಗೆ ಸಾವಿತ್ರಿಗೂ ಒಂದು ಪತ್ರ ಬರೆದು, ಜಾನಕಿ ಸಮೇತ ಅವರಿಬ್ಬರೂ ದರುಮನಳ್ಳಿಗೆ ಹೊರಟು ಬರಬೇಕೆಂತಲೂ ಶ್ಯಾನುಭೋಗರ ಮೂರನೆಯ ಮಗ ಸೀತಾರಾಮುವಿನೊಡನೆ ತಾನು ಜಾನಕಿಯ ವಿಷಯ ಪ್ರಸ್ತಾಪ ಮಾಡಿದಾಗ ಆ ಜಾನಕಿಯನ್ನು ನೋಡಲು ಅಪೇಕ್ಷಿಸಿರುವನೆಂತಲೂ ಸಂಬಂಧ ಕುದುರುವ ಶುಭಸೂಚನೆಯನ್ನು ತಾನು ಕಂಡಿರುವುದಾಗಿಯೂ ತಿಳಿಸಿ, ರುದ್ರಪಟ್ಟಣಕ್ಕೆ ಪೋಸ್ಟ್ ಮಾಡಿದ್ದಳು.

ಪತ್ರ ಕೈಸೇರಿದರೂ ಜಾನಕಿಗೆ ನೆಗಡಿಯಾಗಿದ್ದ, ಸೋರುವ ಮೂಗಿನ ಹೆಣ್ಣನ್ನು ತೋರುವುದು ಹೇಗೆ? ಎಂದು ಸಾವಿತ್ರಿಯು ಪ್ರಯಾಣವನ್ನು ಮುಂದೂಡಿದ್ದಳು. ಜಾನಕಿಯ ನೆಗಡಿ ನಿಂತು ಹೊರಡುವ ಸಿದ್ಧತೆಯಲ್ಲಿ ಇರುವಾಗ, ಸಾವಿತ್ರಿಗೆ ಜ್ವರ ಬಂದು, ಹಾಸಿಗೆ ಹಿಡಿದಳು. ಹೀಗಾಗಿ, ಅವಳ ಆರೋಗ್ಯ ಸುಧಾರಿಸಿ, ಗಂಡ ಮಗಳೊಡನೆ ದರುಮನಳ್ಳಿಗ ಬಂದು ಇಳಿಯುವ ವೇಳೆಗೆ ಹಳ್ಳಿಯ ಮನೆಮನೆಯಲ್ಲೂ ರುಕ್ಮಿಣಿಯ ಹೆಸರು ಗೊಬ್ಬರವಾಗಿತ್ತು. ಮೊದಲೇ

ರುಕ್ಮಿಣಿಯ ಬಗ್ಗೆ ಸದಭಿಪ್ರಾಯವಿರದ ಸಾವಿತ್ರಿ, ರುಕ್ಮಿಣಿ ಅಡುಗೆ ಕೋಣೆಯಲ್ಲಿರುವಾಗ ಅವಳಿಗೆ ಕೇಳಿಸಲೆಂದೇ ತನ್ನ ಗಂಡನ ಸಂಗಡ–

"ಹೀಗಾಗತ್ತೆ ಅಂತಾನೆ, ಆಗಲೆ ಅವಳ ಮಂಡೆ ಬೋಳಿಸಿ ಅಂತಿದ್ದದ್ದು ನಾನು. ಆಗ ನನ್ನ ಮಾತಿಗೆ ನೀವು ಗಮನಕೊಡಲಿಲ್ಲ. ಈಗ ಅವಳ ಸಂಬಧೀಕರಾದ ನಮಗೂ ಕೂಡ ಎಂಥಾ ಕೆಟ್ಟ ಹೆಸರು. ನೋಡಿ. ನಾಳೆ ಶ್ಯಾನುಭೋಗರ ಮನೆಗೆ ಹೆಣ್ಣು ತೋರಿಸಲು ಹೋದಾಗ, ಅವರೆಲ್ಲಿ ಈ ನೆಪಹೂಡಿ, ಈ ಮಲಿನಗೊಂಡ ಮನೆ ಹೆಣ್ಣನ್ನು ನಾವು ತರೊಲ್ಲ ಅಂದರೆ ಏನು ಮಾಡೋಣ?– ಇಲ್ಲಿಗೆ ಬಂದಾಗಿನಿಂದಲೂ ಇದೇ ಚಿಂತೆ ನನ್ನೊಳಗೆ ಅವಲಕ್ಕಿ ಕುಟ್ಟಿದ ಹಾಗೆ ಕುಟ್ಟುತಾ ಇದೆ" ಎಂದು ಕೃಷ್ಣಶಾಸ್ತ್ರಿಗಳು ಮನೆಯಲ್ಲಿಲ್ಲದ ವೇಳೆಯಲ್ಲಿ ತನ್ನ ದನಿಯೆತ್ತಿರಿಸ ಹೇಳಿದ್ದಳು."; ಇದೇ ಸಾವಿತ್ರಿನ ಮಗಳನ್ನು ರುದ್ರಪಟ್ಟಣವ ಹೊಳೆಯ ಆಚೆ ದಡದ ತೋಪಿನಲ್ಲಿ ಇವರ ಪುಂಡ ಮಗ ಶೇಷನ ಪೋಲಿ ಪಟಾಲಮ್ಮು ಬಲಾತ್ಕಾರದಿಂದ ಕೆಡಿಸಿದಾಗ, ತಾನು ಅವಳಿಗೆ ಬೆಂಬಲವಾಗಿ ನಿಂತದ್ದನ್ನು ಸಾತು ಇಷ್ಟು ಜಾಗ್ರತೆ ಮರೆತಳೆ?" ಎಂದು ರುಕ್ಮಿಣಿಯು ಅಡಿಗೆ ಕೋಣೆಯಲ್ಲಿ ಅಚ್ಚರಿಪಡುತ್ತಿರುವಾಗ,

"ಅಯ್ಯೊ, ಅವರ ಮನೆಯವರು ಹಾಗೇನಾರ ಆಕ್ಷೇಪಣೆ ಎತ್ತಿದರೆ, ನಮಗೂ ರುಕ್ಕೂಗೂ ಯಾವ ಸಂಬಂಧವೂ ಇಲ್ಲ. ಅವಳೀಗ ನಾಯಿ ಮುಟ್ಟಿದ ಮಡಿಕೆ. ಅದು ಇನ್ನು ನಮ್ಮ ಮನೆ ಹೊಸಿಲು ದಾಟಿ ಒಳಗೆ ಬರೋ ಹಾಗಿಲ್ಲ. ಆ ವಿಷಯ ನೀವ್ಯಾಕೆ ಚಿಂತೆ ಮಾಡ್ತೀರಿ?– ನಮ್ಮ ಹುಡುಗಿ ನಿಮಗೆ ಒಪ್ಪಿಗೆಯಾದರೆ ಸರಿ. ಆ ಗಯ್ಯಾಳಿ ವಿಚಾರಾನ ಈ ಶುಭಕಾರ್ಯಕ್ಕೆ ಬೆರಸೋದು ಬೇಡಿ– ಹೀಗೆ ಹೇಳಿದರಾಯ್ತು!" ಎಂದು ತನ್ನೊಡನೆ ರಕ್ತ ಹಂಚಿ ಬಂದ ಅಶ್ವತ್ಥನೂ ಹೇಳಿದ್ದು. ರುಕ್ಮಿಣಿಯ ಕಣ್ಣಿನಿಂದ ನೀರು ಬಳಬಳ ಸುರಿಯುವಂತೆ ಮಾಡಿತು.

ಇಷ್ಟು ಸಾಲದೆಂದು ತಮ್ಮ ಮನೆಗೆ ಬಂದಾಗಿನಿಂದಲೂ ತನ್ನಲ್ಲಿ ಹಿಂದಿನ ಸಲಿಗೆಯಿಂದ ವರ್ತಿಸದೆ ದೂರದೂರವಾಗೇ ನಡೆದುಕೊಳ್ಳುತ್ತಿದ್ದ ಜಾನಕಿ, ಗಂಡು ತನ್ನನ್ನು ಒಪ್ಪಿ, ವಿವಾಹ ಖಚಿತವಾಯಿತು ಎಂದೊಡನೆಯೆ ತನ್ನೊಡನೆ ಅವರಿಗೆ ಆಡುತ್ತಿದ್ದ ಒಂದು, ಅರ್ಧ ಮಾತನ್ನೂ ನಿಲ್ಲಿಸಿದಳು. ತಾನು ಕಾಲು ಜಾರಿದ ಹೆಂಗಸು, ಅವಳೆ ಮೇಲು ಎನ್ನುವ ರೀತಿ, ತುಂಬ ಸೊಕ್ಕಿನಿಂದ ಜಾನಕಿಯು ಮೆರೆಯುತ್ತಿದ್ದುದು ರುಕ್ಮಿಣಿಗೆ, ಸೋಜಿಗ ಹಾಗೂ ಮಹಾವೇದನೆಯನ್ನು ಏಕಕಾಲದಲ್ಲಿ ತಂದಿತು.

ತಾನು ಅವಳ ಸಂಕಷ್ಟದ ವೇಳೆಯಲ್ಲಿ ಬಲಭುಜವಾಗಿ ನಿಂತು ಧೈರ್ಯ

ತುಂಬಿದ್ದನ್ನು ಈ ಹುಡುಗಿ ಇಷ್ಟು ಶೀಘ್ರವಾಗಿ ಮರೆಯಿತೆ?... ಇಂಥವರಿಗೆ ಉಪಕಾರ ಮಾಡಿದರೆ ಕೊನೆಯಲ್ಲಿ ಸಿಗುವ ಪ್ರತಿಫಲ ಇದೇಯೆ?– ಮನುಷ್ಯ ಸ್ವಭಾವ ವಿಚಿತ್ರವೇ ಸರಿ! ಎಂದು ಅವಳ ಒಳಗು ಸಹತಹಿಸಿತು.

ರುಕ್ಮಿಣಿ ಹತಾಶಳಾದಳು.

ಇನ್ನು ತನ್ನವರು ಎನ್ನುವವರು ಯಾರೂ ಉಳಿದಿಲ್ಲ. ಭೀಮನಳ್ಳಿ ಅಕ್ಕ–ಮೈಗೆ ಸ್ವಸ್ಥವಿಲ್ಲ, ಸದ್ಯಕ್ಕಂತೂ ನಾ ಬರಲಿಕಾಗಲ್ಲ, ಎಂದು ಪತ್ರ ಹಾಕಿದ್ದಾಳೆ. ಅವಳಿಗೆ ನಿಜವಾಗಿಯೂ ಸ್ವಸ್ಥವಿಲ್ಲವೊ, ಅಥವಾ ನಮಗ್ಯಾಕೆ ಈ ಉಪದ್ವ್ಯಾಪವೆನ್ನುವ ಅಸಡ್ಡೆಯೋ? ಅಥವಾ ಅವಳು ನಮ್ಮ ಸಮಾಜಕ್ಕೆ ಹೆದರಿ ಹೀಗೆ ನನ್ನಿಂದ ದೂರವಾಗಿರಬಹುದೆ? – ಅವಳು ಎಷ್ಟಾದರೂ ಹೆಣ್ಣು, ಅವಳಿಗೆ ಧೈರ್ಯ ಸಾಲದು ಎನ್ನೋಣ. ಆದರೆ ನಮ್ಮ ಭಾವನೂ ಅಂಜುಗುಳಿಯಾಗಬೇಕೆ?...

ರುಕ್ಮಿಣಿಗೆ ಈಗ ಯಾವ ದಾರಿಯೂ ಕಾಣುತ್ತಿಲ್ಲ.....

ಈಗ ಅವಳು ಬಂದಿ. ಚಿತ್ರಮೂಲನಕೋಟೆಯೊಳಗೆ ತಾನು ಸಿಕ್ಕಿಕೊಂಡಂತೆ ಆಗಿದೆ. ಇದರಿಂದ ಪರಾಗುವ ಮಾರ್ಗವೇ ಈಗ ಅವಳಿಗೆ ಗೋಚರಿಸುತ್ತಿಲ್ಲ.....

ರುಕ್ಮಿಣಿಯ ಮನಸ್ಸು ಹೀಗೆ ಡೋಲಾಯಮಾನವಾಗಿರುವಾಗ ಸರಸಿಯು ಎಲ್ಲಿಂದಲೊ ಬಿರುಗಾಳಿಯಂತೆ ಒಳಗೆ ಬಂದಳು,

"ಅಕ್ಕ, ನಾನು ಪಂಚಾಯ್ತಿ ನೋಡೋಕೆ ಹೋಗಬೇಕು. ಅಲ್ಲಿ ಎಸ್ಟೊಂದು ಜನ ಸೇರಿದಾರೆ ಅಂತ!– ನೀನೂ ಬಾ ಅಕ್ಕ, ಹೋಗೋಣ" ಎಂದು ರುಕ್ಮಿಣಿಯನ್ನು ಕರೆದಳು.

"ಬೇಡಮ್ಮ, ಅಲ್ಲೆಲ್ಲ ಹೋಗಬಾರದು" ಎಂದು ಸರಸಿ ಹೋಗದಿರುವಂತೆ ತಡೆಯಲು ರುಕ್ಮಿಣಿ ಪ್ರಯತ್ನಪಟ್ಟಳು.

"ಯಾಕೆ ಹೋಗಬಾರದು?... ಈಚೆಚೇಗೆ ನೀನು ಹಿಂಗೇನೆ– ಅಳು ಮುಂಜಿ. ಮೊದಲ ಹಂಗೆ ನಗನಗ್ತ ಇರದೆ ಯಾವಾಗ ನೋಡಿದರೂ ಜೋಲುಮುಖ ಹಾಕ್ಕೊಂಡು ಕಣ್ಣೀರು ಸುರಿಸ್ತ ಕೂತಿರೋದು! ನನ್ನ ಕೈಲಿ ಆಗಲ್ಲಮ್ಮ. ನಾ ಹೋಗಲೇ ಬೇಕು."– ಸರಸಿ ಹಟ ಮಾಡಿದಳು.

"ಬೇಡ ಸರಸಿ, ಅಂಥ ಜಾಗಕ್ಕೆ ನೀನು ಹೋಗಬಾರದು." ಹೇಳಿ ರುಕ್ಮಿಣಿ ಅವಳನ್ನು ಹಿಡಿಯಹೋದಳು. ಚಿಗರೆಯಂಥ ಬಾಲೆ, ಸರಸಿ. ಅವಳು ರುಕ್ಮಿಣಿಯ ಕೈಗೆ ಸಿಕ್ಕುವಳೆ?– ಬೀದಿ ಬಾಗಿಲಿನ ಮೆಟ್ಟಿಲುಗಳನ್ನು ಎರಡೆರಡಾಗಿ ನೆಗೆಯುತ್ತ, ಚಾವಡಿಯುತ್ತ ದೌಡು ಹೊಡೆದಳು...

ರುಕ್ಮಿಣಿಯ ಆಲೋಚನೆ ಈಗ ಸರಸಿಯನ್ನು ಅಪ್ಪಿತು:

ಸರಸಿ ಏನೂ ಅರಿಯದ ಮುಗ್ಧ ಹುಡುಗಿ. ಮುಂದೆ ಭವಿಷ್ಯದಲ್ಲಿ ಅವಳಿಗೆ ಏನೇನು ಕಾದಿದೆಯೊ?– ಎಂಬ ಭಾವನೆ ಸುಳಿದ ಕ್ಷಣದಲ್ಲೆ, ತನ್ನ ಬದುಕು ನಾಶವಾಯಿತೆಂದು, ಅವಳ ಬುದುಕು ಹಸನಾಗುವುದಿಲ್ಲವೆಂಬ ಶಂಕೆ ಸರಿಯೆ?... ಆದರೂ ತನಗೇಕೊ ಕಾತರ. ತನ್ನ ಬದುಕಾದಂತೆ ಅವಳ ಜೀವನವೂ ಎಲ್ಲಿ ಛಿದ್ರವಾಗುವುದೊ ಎಂಬ ಕಳವಳ...ಸರಸಿಯದು ಎಂಥ ಒಳ್ಳೆಯ ಸ್ವಭಾವ?– ತಾನು ಆಳುತ್ತ ಕುಳಿತಿದ್ದರೆ, "ಥೂ ಹೀಗೆಲ್ಲ ಅಳಬಾರದಮ್ಮ" ಎಂದು ತನ್ನ ಪುಟ್ಟ ಕೈಗಳಿಂದ ತನ್ನ ಲಂಗವನ್ನೆತ್ತಿ ಹಿಡಿದು ಅದರ ತುದಿಯಿಂದ ತನ್ನ ಕಣ್ಣೀರನ್ನೊರೆಸಿ, "ಬಾಕ್ಕ, ಕವಡೆ ಆಡೋಣ" ಎಂದು ಕರೆಯುವಳು... ಒಂದು ದಿನ ನಾನು ದೇವರಿಗೆ ಹೂಬತ್ತಿ ಹೊಸೆಯುತ್ತ ಕೂತಿದ್ದೆ. ಯಾವ ಮಾಯದಲ್ಲೊ ಈ ಪಟಿಂಗಿ ದೇವರ ಕೋಣೆಗೆ ನುಗ್ಗಿ, ಅಲ್ಲಿ ಲಕ್ಷ್ಮೀನೃಸಿಂಹದೇವರ ಪಟಕ್ಕೆ ಧರಿಸಿದ್ದ ಹೂಮಾಲೆಯನ್ನು ಎತ್ತಿ ತಂದು, ಹಿಂದಿನಿಂದ ಮೆತ್ತಗೆ ತನ್ನ ತಲೆಗೂದಲಿಗೆ ಸೆಕ್ಕಿಸಿ, "ನೋಡಿದ್ಯಾ ಈಗ ಏನು ಚೆನ್ನಾಗಿ ಕಾಣುತ್ತೆ? ನೀನು ಹೂ ಮುಡಿದಿದ್ದರೇ ಚೆನ್ನ!– ಇನ್ನು ಮೇಲೆ ನೀನು ಹಿಂಗೇ ಹೂವು ಮುಡಿಕೋಬೇಕು" ಎಂದಿದ್ದಳು. ತತ್‌ಕ್ಷಣ ಆ ಮಾಲೆಯನ್ನು ತೆಗೆದು, "ಇಲ್ಲ ಸರಸಿ, ನಾನು ಹೂವು ಮುಡಿಯೋ ಹಾಗೇ ಇಲ್ಲ" ಎಂದಾಗ, "ಹಂಗಿದ್ದರೆ, ನಮ್ಮಮ್ಮನ ಹಂಗೆ ನೀನೂ ತಲೆಕೂದಲ್ನ ತೆಗಿಸಬೇಕಾಗಿತ್ತು, ಅಲ್ವ?– ನಂಗೇನೊ ಕೂದಲಿರೋರು ಹೂವು ಮುಡಿದರೇ ಚೆಂದಾಮ್ಮ..."

ಸರಸಿಯ ವಾದಕ್ಕೆ ಹೇಗೆ ಉತ್ತರ ಕೊಡಬೇಕೊ ತಿಳಿಯದೆ, "ನೀನು ಬಲು ಜಾಣೆ" ಎಂದು ಬಾಚಿ ತಬ್ಬಿ ಮುತ್ತಿಟ್ಟಿದ್ದಳು. ಆದರೆ ಕೆಲವು ದಿನಗಳ ಹಿಂದೆ ಇದೇ ಸರಸಿ ರುಕ್ಮಿಣಿಯ ಕಣ್ಣಿನಲ್ಲಿ ನೀರು ತರಿಸಿದ್ದಳು. ಒಂದು ಮಧ್ಯಾಹ್ನ ರುಕ್ಮಿಣಿಯು ಬಚ್ಚಲುಮನೆಯಲ್ಲಿ ವಾಂತಿ ಮಾಡುತ್ತಿರುವಾಗ, "ಈಚೇಚ್ಗೆ ನೀನು ವಾಂತಿ ಮಾಡಿಕೊಳ್ತಾನೆ ಇರ್ತೀಯಲ್ಲ?– ಯಾಕಕ್ಕ?... ಊಟಾನೂ ಸರ್ಯಾಗಿ ಮಾಡಲ್ಲ!" ಎಂದು ಕೇಳಿದ್ದಳು.

ರುಕ್ಮಿಣಿಯ ಕಣ್ಣಿನಲ್ಲಿ ನೀರು ಚೆಲ್ಲನೆ ತುಂಬಿತು. ತಾನು ಕೇಳಿದ ಪ್ರಶ್ನೆಯಿಂದ ಅಕ್ಕನ ಕಣ್ಣಿನಲ್ಲಿ ನೀರು ತುಂಬಿದ್ದು ಕಂಡು ಸರಸಿಗೆ ದಿಗ್ಭ್ರಮೆಯಾಯಿತು. ತಾನೂ ಅಕ್ಕನನ್ನು ತಬ್ಬಿ ಅಳತೊಡಗಿದ್ದಳು...

## ೩೧

ಚಾವಡಿ ಮುಂದೆ ನೆರೆದ ಜನಸ್ತೋಮದ ಮುಂದೆ ಲಕ್ಕನ ನ್ಯಾಯ

ಆರಂಭವಾಗಿತ್ತು. ನಂಜೆಗೌಡರೂ, ಹಿತ್ತಲ ಕಡೆಗೆ ಹೋಗಿದ್ದವರು, ಆಗಲೇ ಬಂದು ಯಜಮಾನರ ಜೊತೆಗೆ ಕೂತಿದ್ದರು.

ಶ್ಯಾನುಭೋಗರು "ನ್ಯಾಯ ಶುರು ಮಾಡಬಹುದೆ?" ಎಂದು ಯಜಮಾನರನ್ನು ಕೇಳಿದರು. ಉಳಿದವರು ಮೌನವಾಗಿದ್ದರೂ ದೊಳ್ಳಪ್ಪ ಆಕ್ಷೇಪಣೆ ತೆಗೆದ.

"ಲಕ್ಕನ ನ್ಯಾಯ ತಕ್ಕೋಬೇಕಾದ್ರೆ, ರುಕ್ಮಿಣಮ್ಮನ್ನೂವೆ ಕರಿಸನೇ ಬೇಕು. ಇಲ್ಲದಿದ್ರೆ ವಕ್ಕಡೆ ನ್ಯಾಯ ಆಯ್ತದೆ, ಯೇನಾಯ್ತು, ಯೇನು ಕತೆ ಅನ್ನಾದರ ಪೂರ್ತಾ ಎಳೆ ನಮ್ಮ ಕೈಗೆ ಸಿಕ್ಕಕ್ಕಿಲ್ಲ. ಆಯಮ್ಮನ್ನೂ ಕರೆಸಿ" ಎಂದು ಒತ್ತಾಯಪೂರ್ವಕ ವಾದ ಮಂಡಿಸಿದ.

ಆಗ ಕೇಶವಯ್ಯ ಎದ್ದು ನಿಂತು,

"ಅವಶ್ಯವಿಲ್ಲ. ಆಳುವ ಕೆಟ್ಟರೊ ವಿಷಯದಲ್ಲಿ ನಮ್ಮ ಇಡಿ ಬ್ರಾಹ್ಮಣರ ಕೇರಿಯೋರು ಸೇರಿ, ಅವಳಿಗೆ ಅದೇನು ಶಾಸ್ತಿ ಮಾಡಬೇಕೊ ಅದನ್ನ ಮಾಡ್ತೀವಿ. ಅದರ ಚಿಂತೆ ಉಳಿದೋರಿಗೆ ಬೇಡ. ಈಗ ಲಕ್ಕ ಗಂಡಸು. ರುಕ್ಮಿಣಿ ಎಷ್ಟೇ ಆದರೂ ಹೆಣ್ಣುಹೆಂಗಸು. ಅದು ಬೆಳಗಿನ ಝಾವ. ಕಾಡುದಾರಿ. ಗಾಡೀಲಿ ಪ್ರಯಾಣ ಮಾಡ್ತಿದ್ದೋರು ಇವರಿಬ್ಬರೆ. ಹೀಗಿರುವಾಗ ಈ ಲಕ್ಕ ಸಮಯ ಸಾದಿಸಿ ಅವಳ ಮೇಲೆ ಬಲಪ್ರಯೋಗ ಮಾಡಿರೋದು ಸಾಧ್ಯ!– ಈ ವಿಷಯದಲ್ಲಿ ನಮ್ಮ ಯಜಮಾನರು ಏನಂತಾರೆ?" ಎಂದು ಅವರತ್ತ ತಿರುಗಿದ.

ನಂಜೇಗೌಡರು ಎದ್ದುನಿಂತು,

"ಕೇಶವಯ್ಯನೋರು ಹೇಳೋ ಮಾತು ವ್ಯಾಲೆ ವ್ಯಾಲೆ ನೂತ್ನವಾಗೇನೊ ಅದೆ. ಆದ್ರೆ ಸ್ವಾಮಿಯೋರು ಇದು ಕಲಿಕಾಲ ಅನ್ನಾದ ಮರೆತಂಗದೆ. ಈಗ ಗಂಡಸರಿಗಿಂತ ಹೆಂಗಸರು ಯತ್ರಾತರಲ್ಲೂವೆ ಕಡಿಮೆ ಇಲ್ಲ. ಆದ್ರಿಂದ ರುಕ್ಮಿಣಮ್ನ ನಮ್ಮೆಲ್ಲಾರ ಮುಂದುಕೆ ನಿಲ್ಲಿಸಿದ್ರೆ, ಆಗ ನಿಜಸ್ತಿತಿ ಗೊತ್ತಾಯ್ತದೆ" ಎಂದು ಒತ್ತಾಯಿಸಿದ.

ಸಭೆ ಮುಂದೇನಾಗುವುದೋ ಎಂಬ ಕಾತರದ ನಿರೀಕ್ಷೆಯಲ್ಲಿ ಕಾಯುತ್ತಿತ್ತು. ಕೇಶವಯ್ಯ,

"ನಾನು ಮೊದಲೇ ಹೇಳಲಿಲ್ಲವೆ?... ರುಕ್ಮಿಣಿಯ ನ್ಯಾಯ ಫೈಸಲ್ ಮಾಡೋರು ನಾವು– ಬ್ರಾಹ್ಮಣಕೇರಿ ಯಜಮಾನರು. ಈ ಮಾತು ಹಾಗಿರಲಿ. ಈಗ ಲಕ್ಕನನ್ನೇ ಕೇಳಿ, ಶ್ಯಾನುಭೋಗರೆ– ಏನು ನಡೀತು ಅಂತ" ಎಂದು ವಾದದ ದಿಕ್ಕನ್ನು ಹೊರಳಿಸಿದ.

ಗಂಗಪ್ಪನು ತನ್ನ ಅಂಗೈಯಲ್ಲಿ ಉಂಡೆನಶ್ಯಕ್ಕೆ ಬೆಣ್ಣೆ ಸುಣ್ಣ ಎರಡನ್ನೂ ಹಾಕಿ ತೀಡಿ ತಯಾರಿಸಿದ ಹುಡಿನಶ್ಯದಲ್ಲಿ ಒಂದು ಚಿಟಿಕೆ ತೆಗೆದು ಮೂಗಿಗೇರಿಸಿ, ಎಷ್ಟೋ ದಿನಗಳ ನಶ್ಯ ಸಿಂಬಳಗಳ ಮಿಶ್ರಣದಿಂದ ತನ್ನ ಮೊದಲಿನ ಹಸಿರು ಬಣ್ಣವನ್ನು ಕಳೆದುಕೊಂಡಿದ್ದ ಚೈಚೌಕದಲ್ಲಿ ಮೂಗಿನ ಹೊಳ್ಳೆಗಳನ್ನು ಆ ಕೊನೆಯಿಂದ ಈ ಕೊನೆಗೆ ಒರೆಸಿಕೊಳ್ಳುತ್ತ ಎದ್ದ ಶ್ಯಾನುಭೋಗರು,

"ಕೇಶವಯ್ಯನೋರು ಹೇಳೋದು ಸಮಂಜಸವಾಗೇ ಇದೆ. ನಮ್ಮೆದುರಿಗೇ ಲಕ್ಕ ನಿಂತಿದಾನೆ. ಇವನ್ನನ್ನೇ ಕೇಳಿಬಿಡೋಣ. ಇವನೇ ಇರುವಾಗ ಈ ವಿಚಾರದಲ್ಲಿ ರುಕ್ಮಿಣೀನ ವಿವರಣೆ ಕೇಳೋದು ಕೊಂಕಣ ಸುತ್ತಿ ಮೈಲಾರಕ್ಕೆ ಹೋದ ಹಾಗಾಗುತ್ತೆ. ಅದು ನನ್ನ ದೃಷ್ಟೀಲೂ ಅನಗತ್ಯ..." ಎನ್ನುತ್ತಿರುವಾಗಲೇ ಅವರಿಗೆ ಸೀನು ಬಂದಿತು.

ಶ್ಯಾನುಭೋಗರು ಸೀತರೆ ಒಂಟೊಂಟಿ ಸೀನುವವರಲ್ಲ. ಕಡಿಮೆ ಎಂದರೆ ನಾಲ್ಕು. ಹೆಚ್ಚು ಬಂದಾಗ ಏಳು, ಎಂಟಕ್ಕೆ ಇರುತ್ತಿರಲಿಲ್ಲ. ಈಗಳಿಗೆ ಅವರ ಮೂಗು ಹೆಚ್ಚವರಿ ಸೀನುವ ವೇಳೆ. ಅಲ್ಲಿ ನೆರೆದ ಸಭಿಕರಿಗೆ ಅವರ ಸೀನು ಮೋಜೆನಿಸಿ, ಬಿಗುವಿನಿಂದ ಕೂಡಿದ್ದ ವಾತಾವರಣವನ್ನು ಕೊಂಚ ಹಗುರಗೊಳಿಸಿತು. ಒಂದು, ಎರಡು, ಮೂರು...... ಎಂದು ಎಣಿಸುತ್ತಿದ್ದ ಕೇಶವಯ್ಯ ಅಕ್ಕಪಕ್ಕದಲ್ಲಿ ಕುಳಿತ ಯಜಮಾನರನ್ನು ಉದ್ದೇಶಿಸಿ,

"ಇವರ ಹಾಗೆ ನಾನು ಸೀತಿದ್ದರೆ, ನನ್ನ ದೇಹದ ನೀರಿನ ಜೊತೆಗೆ ನನ್ನ ರಕ್ತವೂ ಹೊರಗೆ ಬಂದು, ನಾನು ಇಷ್ಟರಲ್ಲೆ ಫನಾ ಆಗಿಬಿಡ್ತಿದ್ದೆ" ಎಂದೆ.

ಆಗ ನಂಜೇಗೌಡ,

"ಅದ್ಕೆ ಅಲ್ವ ಕೇಶವಯ್ಯಾರೆ, ಯಾರಾರು ನಮ್ಮ ಊರ್ನಲ್ಲಿ ಜಾಸ್ತಿ ಸೀತರೆ, 'ಓ ಓ ಸ್ಯಾನುಭೋಗರ ಸೀನು ಬತ್ತಾ ಅವೆ' ಅಂತ ಹೆಸರಿಟ್ಟಿರೋದು?" ಎಂದ.

ಚಾವಡಿಯ ಒಳಗೆ ಎದ್ದ ನಗೆಯ ಅಲೆಗೆ ತಮ್ಮ ನಗೆಯನ್ನೂ ಬೆರಿಸಿ, ಅನಂತರ ಲಕ್ಕನನ್ನುದ್ದೇಶಿಸಿ, ಶ್ಯಾನುಭೋಗರು,

"ಏನಪ್ಪ ಲಕ್ಕ, ಈಗ ನಿನ್ನ ಮೇಲೆ ಬಂದಿರೋರ ಆಪಾದನೆ ವಿಷಯದಲ್ಲಿ, ನೀನು ಏನು ಹೇಳೀಯೆ?" ಎಂದು ಕೇ:ಳಿದರು. ಅದಕ್ಕೆ ಲಕ್ಕನಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ.

"ಊರು ಬಿಟ್ಟು ಗಾಡೀಲಿ ನೀವಿಬ್ಬರೇ ಕಾಡುಹಾದಿ ಹಿಡಿದಿದ್ದಾಗ, ಏನು ನಡೀತು?"

ಲಕ್ಕ ಮತ್ತೆ ನಿರುತ್ತರ.

"ತಪ್ಪು ನಿನ್ನದೊ?–ರುಕ್ಮಿಣಮ್ಮಂದೊ"?

ಲಕ್ಕ ಈ ಪ್ರಶ್ನೆಗೆ ಯಾವ ಉತ್ತರ ಕೊಡುವನೊ ಎಂದು ಸಭಿಕರ ಜೀವ ತದಿಗಾಲ ನಿರೀಕ್ಷೆಯಲ್ಲಿ ತವಕಗೊಂಡಿತ್ತು.

ಲಕ್ಕಿನಿಂತ ಇದಕ್ಕೂ ಉತ್ತರ ಬರಲಿಲ್ಲ.

ನಂಜೇಗೌಡ ಎದ್ದು,

"ಈ ಹೇತಲಂಡಿ ಬಡ್ಡಿಹೈದ ರುಕ್ಮಿಣವ್ವನ ಇರುದ್ದವಾಗಿ ಯೋಳಿದರೆ, ನಿಮ್ಮ ಬ್ರಾಂಬರ ತ್ವಾಟಗಳಲ್ಲೆ ಅಲ್ವ ಅವುನು ಇಸೇಸ್ವಾಗಿ ಕೂಲಿಗೆ ದುಡಿಯೋದು, ಆಗ ನೀವು ಅವುನ್ಗೆ ಕೂಲಿ ಕಂಬಳಕೆ ಕರೆದೀರಾ? ಅದ್ಕೇ ಅವುನು ಎದರಿ ನಿಜಸ್ತಿತ್ಯ ಬಾಯಿಬುಡ್ತಾ ಇಲ್ಲ..." ಎಂದು ಕೆಣಕಿದ

ಗಂಗಪ್ಪ ಕೊಸಾರನೆ ಎದ್ದು,

"ನಂಜೇಗೌಡರು ಯೋಲೋ ಅಂಗೆ ರುಕ್ಮಿಣವ್ವನ ಈ ಚಾವಡಿ ಮುಂದೆ ನಿಲ್ಲುಸಿದ್ರೇನೆ ಈ ನ್ಯಾಯ ಫೈಸಲ್ ಆಗಾದು, ಇಲ್ಲದಿದ್ರೆ ಜಪ್ಪಯ್ಯ ಅಂದ್ರೂವೆ ಅಗಕ್ಕಿಲ್ಲ"– ಬಾಣ ಬಿಟ್ಟ ಹಗೆ ಆಡಿದ

ಶ್ಯಾನುಭೋಗರು,

"ಏನೊ ಲಕ್ಕ, ನೀನು ಹೀಗೆ ಉಮೆಗೊಡ್ಡಿ ತರ ಬಾಯಿ ಹೊಲಿದೇ ನಿಂತಿದ್ರೆ ರುಕ್ಮಿಣಿನೂ ಕರೆಸಬೇಕಾಗುತ್ತೆ. ಕರೆಸೋಣವ?" ಎಂದು ಕೇಳಿದಾಕ್ಷಣ, ಚವಡಿಯೋಳಗಿನಿಂದ

"ಕರೆಸಿ, ರುಕ್ಮಿಣಮ್ಮನ ಕರೆಸಿ...." ಕೂಗೆದ್ದಿತು.

ಆ ಸದ್ದಡಗುವವರೆಗೂ ಮೌನವಾಗಿದ್ದ, ತರುವಾಯ ಲಕ್ಕ

"ಕರುಸಬ್ಯಾಡಿ" ಎಂದ ದೃಢಸ್ವರದಲ್ಲಿ ಹೇಳಿದ.

"ಹಾಗಾದ್ರೆ ನೀನೇ ತಪ್ಪಿತಸ್ಥ ಎಂದು ಒಪ್ಪಿಕೊಳ್ತೀಯ?"

ಲಕ್ಕನೊಳಗೆ ಹೊಯ್ದಾಟ. ಒಂದು ಪಕ್ಸ ನಾ ವಪ್ಪಿಕ್ವಳದೇ ವೋದ್ರೆ. ರುಕ್ಮಿಣವ್ನ ಕರುಸೇ ಕರುಸ್ತಾರೆ. ಬುಡಕ್ಕಿಲ್ಲ. ಅವರು ಇಲ್ಲಿಗೆ ಬಂದ್ರೆ, ಈ ತುಂಬಿದ ಸಬೇಲಿ ಅವುರ ಮಾನಾವ ಇಂಕರ ಇಂಕರಾಗಿ ಆರಾಜು ಆಕ್ತಾರೆ!.... ಇಲ್ಲ ನಾ ವಪ್ಪಿಕಂಡನೊ, ನನ್ನ ಚಮಡಾವ ಸುಲುದು ಬುಡ್ತಾರೆ!... ಎಂಗೆ ಮಾಡಾದು? – ಏನ ಯೋಳಾದು?... ಇತ್ತಾಗಿ ಕಾಲಿಟ್ರೂ ಗಂಡಾಂತ್ರ, ಆತ್ತಾಗಿ ಕಲಿಟ್ರೂ ಗಂಡಾಂತ್ರ!...

"ರುಕ್ಮಿಣಮ್ಮಾರ ಕರುಸನೂ ಬ್ಯಾಡದು. ಇವುನು ವಪ್ಪನೂ ಬ್ಯಾಡದು.

ಇಂಗಂದರೇನು? ನಮ್ಮ ನ್ಯಾಯಸ್ತಾನವ ಈ ಬಡ್ಡಹೈದ ಹೈಲಾಟಕೆ ಇಟ್ಟುಕಂಡನಲ್ಲ!... ಲೋ ಲಕ್ಕ. ನ್ಯಾಯವಾಗಿ ಅದೇನು ಬೊಗಳ್ತೀಯೊ ಇಲ್ವೊ?" ಎಂದು ಆರ್ಭಟಿಸಿದ ನಂಜೇಗೌಡ. "ಯಾಕೆ ಸುಮ್ಮನೆ ಮುಚ್ಚಕ್ಕೆ ಪರ್ಯತ್ನ ಮಾಡೀಯೆ?– ನಮಗೆಲ್ಲಾರ್ಗೂ ಗ್ವತ್ತಾಗೋಗದೆ. ಲಕ್ಷ್ಮಮ್ಮಾರು ಊರೂಳಗೆಲ್ಲ ಡಂಗೂರ ಸಾರಿ ಬುಟ್ಟವ್ರೆ... ನೀನು ಔಸ್ದ ತರಕ್ಕೆ ವೋಗಿದ್ದು ಮುಕ್ಕಸ ನಿಮಗೆ ಗ್ವತ್ತಾಗದೆ.... ಏಟೊತ್ತಾದ್ರೂ ನೀ ಯೋಳನೇ ಬೇಕು. ಯಾಕೆ ಸುಮ್ಮಕೆ ನಮ್ಮ ಸತಾಯಿಸೀಯೆ?" ಎಂದು ಚುಚ್ಚಿದ.

"............"

ರುಕ್ಮಿಣವ್ವ ನನ್ನ ಉದ್ದಕೂ ವೋಟು ಚೆಂದಾಗಿ ನೋಡಿಕೊಂಡವರೆ. ಹಿಂದುಕೆ ಅವ್ವಂಗೆ ಜ್ವರ ಬಂದು, ಔಸ್ದ ಕ್ವಡಸೂಂತ ದುಡ್ಡು ಕ್ವಡನಿಲ್ಲ? ಆಮ್ಯಾಕೆ ಆ ದುಡ್ಡ ನಮ್ಮಯ್ಯ ವಾಪಸು ಮಾಡಾಕೋದ್ರೆ, ಆ ತಾಯಿ, 'ಬ್ಯಾಡ ಇಟ್ಕುಕೊ' ಅನ್ನನಿಲ್ಲ? –ಅಲ್ಲದೇಯ ನನ್ನ ಹಸಿದ ಹ್ವಟ್ಟೆಯ ನಮ್ಮವ್ವನಿಗಿಂತ ಹೆಚ್ಚಾಗಿ ಇಲ್ಲೀಗಂಟ ಕಾಪಾಡ್ನಿಲ್ವ?– ಅಲ್ಲದೇಯ ನನ್ನ ಹಸಿದ ಹ್ವಟ್ಟೆಯ ನಮ್ಮವ್ವನಿಗಿಂತ ಹೆಚ್ಚಾಗಿ ಇಲ್ಲೀಗಂಟ ಕಾಪಾಡ್ನಿಲ್ವ?... ಏಟು ದೊಡ್ಡ ಗುಣ ಅವರ್ದು?.... ಯೇನೊ ನಡೆಯೊ ಕಾಲು ಎಡವ್ದು. ಗಾಚಾರ ಎಡವುದ್ರು, ದಿಟ. ಆದ್ರೆ ಈಗ ನಾನು ಈ ರಕ್ಕಸರ ಕೈಗೆ ಆ ತಾಯ ವಪ್ಪುಸಿಬುಟ್ರೆ, ಆ ದ್ಯಾವರು ಮೆಚ್ಚಕ್ಕಿಲ್ಲ.....

"ಸ್ವಾಮಿ, ಇವನ್ಯಾಕೊ ಗಿಣಿಗೆ ಹೇಳಿದಂಗೆ ಹೇಳಿದ್ರೂವೆ ಬಾಯಿ ಬುಡ್ತಾನೆ ಇಲ್ಲ. ರುಕ್ಮಿಣವ್ವನ್ನು ಕರುಸೋದೆ ಇನ್ನು ನಮಗುಳಿದಿರೊ ಒಂದೇ ದಾರಿ....." ನಂಜೇಗೌಡ ನಿರ್ಧಾರವಾಗಿ ನುಡಿದ.

ಶ್ಯಾನುಭೋಗರು ಕುಳವಾಡಿಯನ್ನು ಕರೆದು,

"ಕುಂದೂರಯ್ಯ, ಹೊಗಪ್ಪ, ಹೋಗಿ ಆ ಮೂಲೆಮನೆ ರುಕ್ಮಿಣಮ್ಮ ನೋರ ಕರೆದುಕೊಂಡು ಬಾ..." ಎಂದು ಆಜ್ಞಾಪಿಸಿಯೇ ಬಿಟ್ಟರು.

ಆಗ ತಟಕ್ಕನೆ ಕಾಡ್ನಲ್ಲಿ ನೂರಾರು ಕಣದ್ದುಗಳು ಬಸುರಿ ಎಂಗಸ್ನ ಹೆಣವ ಕುಕ್ಕಿ ಕುಕ್ಕಿ ಮಾಂಸ ಕೀಳ್ತಿದ್ದ ಎದೆ ನಡುಗಿಸೋ ದ್ರುಸ್ಯ ಲಕ್ಕನ ಕಣ್ಣಮುಂದೆ ಸುಳೀತು!

ಲಕ್ಕ ಏಡು ಎಜ್ಜೆಮುಂದೆ ಬಂದು ಕೂಗಿದ:

"ಬ್ಯಾಡಿ, ಬ್ಯಾಡಿ. ಅವುರ್ನ ಕರುಸಬ್ಯಾಡಿ. ನಾನೇ ತೆಪ್ಪು ಮಾಡಿದೋನು."

ಲಕ್ಕನ ಮಾತು ಕೇಳಿ ಹುಣ್ಣಿಮೆಯಲ್ಲಿ ಮೊರೆಯುವ ಸಾಗರದ ಹಾಗೆ ಸಭೆ ಒಂದು ಸಲ ಭೋರ್ಗರೆಯಿತು. ಆ ಗದ್ದಲದ ತೆರೆಯ ಮೇಲೆ, 'ಲೌಡಿ

ಮಗ', 'ಎಂತಾ ಕೊಬ್ಬು', ಉತ್ತಮರ ಎಂಗಸು ಮುಟ್ವಾನ ಅಂದ್ರೇನ?' 'ಹಲ್ಕ ನನ್ನ ಮಗನ ಚಮಡ ಸುಲೀಬೇಕು', 'ಇಂತಾ ಊರ್‍ನಲ್ಲಿ ಇರ್‍ವಾಗ ಎಂಗಸ್ರು ಒಬ್ಬೊಬ್ರೆ ಇನ್ನು ಓಡಾಟಕ್ಕೆ ಉಂಟ?' –ಇಂಥ ಮಾತುಗಳು ಯಥೇಚ್ಚವಾಗಿ ತೇಲಿದವು. ಶ್ಯಾನುಭೋಗರು ಇನ್ನೊಂದು ಚಿಟಿಕಿ ನಶ್ಯವನ್ನು ಮೂಗಿಗೆ ಏರಿಸಿ, ಪಂಚಾಯಿತಿದಾರರನ್ನು ಉದ್ದೇಶಿಸಿ ಕೇಳಿದರು:

"ಲಕ್ಕ ತಪ್ಪು ಒಪ್ಪಿದ್ದಾನೆ ರುಕ್ಮಿಣಮ್ಮ ಇನ್ನು ಈ ಚಾವಡಿಗೆ ಬರಬೇಕಾದ್ದಿಲ್ಲ. ಅವಳ ನ್ಯಾಯಾನ ಕೇಶವಯ್ಯನೋರು ಹೇಳಿದ ಹಾಗೆ ಬ್ರಾಹ್ಮಣರ ಕೇರಿಯವರಿಗೇ ಬಿಡೋಣ. ಈಗ ಈ ಅಪರಾಧಿಗೆ ಏನು ಶಿಕ್ಷೆ ವಿಧಿಸಬೇಕು ಅನ್ನೊದನ್ನ ನೀವು ಪಂಚಾಯಿತಿದಾರರು ತೀರ್ಮಾನಿಸಬೇಕು."

"ನೀವು ತೀರ್ಮಾನ ಮಾಡಾದು ಏನದೆ? ಅವ್ನುನ್ನ ಆ ಪಾಂಡವರ ಕುದುರೆ ಕಂಬಕ್ಕೆ ಕಟ್ಟಿ ನಾಕು ಜಡಿಬೇಕು, ವೋಟೇಯ."

ನಂಜೇಗೌಡ್ನ ಮಾತಿಗೆ ಉಳಿಕೆ ಪಂಚಾಯಿತಿದಾರರೂ,

"ಅದೇ ಸರ್‍ಯಾದ ಸಿಕ್ಸೆ, ಯಜಮಾನ್ ನಂಜೇಗೌಡ್ರ ತೀರ್ಮಾನ ನಮಗೂ ಸಮ್ಮತ" ಎಂದು ಒಪ್ಪಿಗೆ ಸೂಚಿಸಿದರು. ನಂಜೇಗೌಡ ಚಪ್ಪಾಳೆ ತಟ್ಟಿ,

"ರುದ್ರ–ಎಲ್ಲಿದ್ದೀಯೊ?" ಎನ್ನುವುದೇ ತಡ,

"ಇಲ್ಲೆ ಇವುನಿ, ಯಜಮಾನ್ರೆ..." ಎಂದು ಗುಂಪಿನ ನಡುವೆಯಿಂದ ರುದ್ರ ಪ್ರತ್ಯಕ್ಷನಾದ.

"ರುದ್ರ – ಈ ಲಕ್ಕನ್ನ, ನಿನ್ನ ಸಿನೇಯಿತರನ್ನೂ ಕಟ್ಟಿಗಂಡು, ಆ ಕುದುರೆ ಕಂಬಕ್ಕೆ ಬಿಗಿಯೊ."

ನಂಜೇಗೌಡ್ನ ಅಪ್ಪಣೆ ಹೊರಬಿದ್ದದ್ದೇ ಸಮ, ಆ ಮಾರಿಗುಡಿ ಅಣ್ಣದೀರು, ರುದ್ರಣ ಮುಂದಾಳುತನದಲ್ಲಿ ಲಕ್ಕನನ್ನು ಮಾಳದ ಮಧ್ಯಭಾಗದಲ್ಲಿದ್ದ ಕುದುರೆ ಬಿಗಿಯಲು ಅನುವಾದರು,...

## ೩೨

ದೇವರ ಕೋಣೆಯಲ್ಲಿ ಇನ್ನು ಕುಳಿತಿರಲಾರದೆ ಮನೆಯ ಹೊರಗೆ ಎದ್ದುಬಂದ ಕೃಷ್ಣಶಾಸ್ತ್ರಿಗಳು ಜಗಲಿಯ ಮೆಟ್ಟಿಲುಗಳನ್ನು ದುಡುದುಡನೆ ಇಳಿದು ಹೊರಟರು... ಅವರ ಅಂತರಂಗ ಕುದಿಯುತ್ತಿತ್ತು... 'ವಾಸ್ತವವಾಗಿ ಅಪರಾಧಿ ತಾನು. ಶಿಕ್ಷೆ ನಿರಪರಾಧಿ ಲಕ್ಕನಿಗೆ!– ಇದೆಲ್ಲಿಯ ನ್ಯಾಯ?.... ಇನ್ನು ತಾನು ಹೇಡಿಯಾಗಬಾರದು'...... ಹೀಗೆ ತಳಮಳಿಸುತ್ತ ಪಂಚಾಯಿತಿ ಕಟ್ಟೆಯತ್ತ ದಾಪುಗಾಲಿಡುತ್ತ ಸಾಗಿದರು.

ಅತ್ತ ಚಾವಡಿಯ ಮುಂದೆ ಪಾಂಡವರ ಕಂಬಕ್ಕೆ ಮಾರಿಗುಡಿ ಅಣ್ಣದೀರು ಲಕ್ಕನನ್ನು ಬೀಗಿಯಾಗಿತ್ತು. ನಂಜೇಗೌಡ ಚಾವಡಿ ಒಳಗಿನಿಂದ ಒಂದು ಬೆತ್ತದ ಕೋಲನ್ನು ಎಸೆದು.

"ತಕ್ಕಳ್ಳಲಾ ರುದ್ರ, ಈ ಬೆತ್ತದ ಕೋಲ. ನಿಂಗೆ ಸಾಕಾಗೊಗಂಟ ಇದ್ರಲ್ಲಿ ಆ ಲೌಡಿಮಗಂಗೆ ವೊಡೀತಾನೆ ಇರು... ಊರ್ನಲ್ಲಿ ಇಂತಾ ಹೇಸ್ಗೆ ಕೆಲ್ಸ ನಡುಸುದ್ರೆ, ಅಂತೋರ್ಗತೆ ಇಂತದೆ ಉಗ್ರ ಶಿಕ್ಸೆ ಕಾದಿರ್ತದೆ ಅನ್ನಾ ಬೆಚ್ಚು ಅವ್ರ ಮನದಲ್ಲಿ ಉಟ್ಟೋ ಅಂಗಿರ್ಲಿ" ಎಂದು ಗುಡುಗಿದ.

ಬುಂಡಮ್ಮ ನೆರೆಯಲ್ಲಿ ಕುಳಿತವರ ಸಂಗಡ,

"ಸರಣ, ಸರಣ–ಇವ್ನು ಬೋ ಸರಣ!" ಎಂದು ಎರಡು ಕೈಗಳಿಂದಲೂ ತನ್ನದೇ ಆದ ಅಭಿನಯವೈಖರಿಯಿಂದ ಅಣಕಿಸುತ್ತ, "ಅವ್ವಿ, ಅವ್ವಿ, ಅವ್ವಿ– ಒಂದಕ್ಕಿಂತ ಒಂದೆಚ್ಚ ಇಲ್ಲಿ ಸೇರಿರೋ ಗುಬ್ಬಳಗಳು ಕನ್ರವ್ವ... ಸೋ ಅಂದ್ರೆ ಸೋಬಾನೆ ಅನ್ನಾಜನ!" ಎಂದು ಕ್ರೋಧದಿಂದ ನುಡಿದು, ಹೊಗೆಸೊಪ್ಪಿನ ಎಸಳನ್ನು ತಂಬುಲದ ಬಾಯಿತಗೆ ಎಸೆದುಕೊಂಡಳು.

ದ್ಯಾವಾಜಿಯೂ ಉಗ್ರವಾಗಿ ಪ್ರತಿಕ್ರಿಯಿಸುತ್ತ,

"ತೆಗೆ, ತೆಗಿ. ಇವುರದ್ಯಾವ ಸೀಮೆ ನ್ಯಾಯವ?– ಇನ್ನೂ ರುತುವಾಗ್ದೆ ಇದ್ದ ನಮ್ಮ ಕುಂಡಿಮಾದಿ ಎಣ್ಣು ಸಾವಂತ್ರಿಯ ಇಂದ್ಕೆ ಆ ಕೆಂಗಣ್ಣಪ್ಪ ಮ್ಯಾಲೆ ಬಿದ್ದು ವೊಸಿಕಾಡ್ಡ ಇಚಾರ್ವ ನಿಮ್ಮ ಪಂಚಾತಿ ಮುಂದಿಡೀಂತ ಕೇಳಿದ್ಕೆ, ಇದೇ ನಂಜೆಗೌಡ 'ವೋಗಮ್ಮಿ, ಇದ್ಯಾವ ದ್ವಡ್ಡ ಸಂಗ್ತೀಂತ ತಂದಿದ್ದೀಯೆ?.... ಗಂಡಸ್ಗೆ ಯಾವ ಕಟ್ಟು?– ದನ ಒಂಟಿ ಸಿಕ್ದಾಗ, ಅದರ ಮ್ಯಾಲೆ ಅತ್ತುಬ್ಯಾಡಾಂತ ಹೋರ್ರ್ಯ ಆದ್ಯಾರು ತಾನೆ ತಡಯಕ್ಕಾದಾತು? ಅಂದಿತ್ನಲ್ಲ!'... ಇವುರಿಗೊಂದು ನ್ಯಾಯ, ನಮಗೊಂದು ನ್ಯಾಯವ?" ಎಂದು ಗೊಣಗಿದಳು.

* * * *

ತಂತಮ್ಮ ಜಗಲಿಗಳ ಮೇಲೆ ಕುಳಿತು ಕೆಲವು ಬ್ರಾಹ್ಮಣರು ಚಾವಡಿಯತ್ತ ರಭಸವಾಗಿ ಸಾಗುತ್ತಿದ್ದ ಕೃಷ್ಣಶಾಸ್ತ್ರಿಗಳನ್ನು ಗಮನಿಸಿ,

"ಯಾಕೆ ಶಾಸ್ತ್ರಿಗಳು ಚಾವಡಿ ಬಯಲಿಗೆ ಇಷ್ಟು ತವಕಪಟ್ಟು ಹೋಗ್ತಿದಾರೆ?" ಎಂದು ಅಚ್ಚರಿಪಡುತ್ತಿದ್ದರು.

"ಇವರು ಹೊರಟಿರೊ ಚರ್ಯೆ ನೋಡಿದರೆ, ಶಾಸ್ತ್ರಿಗಳು ಇವತ್ತು ಚಾವಡಿಗೆ ಹೋಗಿ ಏನೊ ಗಲಾಟೆ ಮಾಡೋ ಹಾಗೆ ಕಾಣುತ್ತೆ!" ಎಂದು ಲೆಕ್ಕಹಾಕಿ ಅವರೆಲ್ಲರೂ ಎದ್ದು ಏನು ನಡೆಯುವುದೊ ನೋಡೋಣವೆಂಬ ಕುತೂಹಲದಿಂದ,

ಶಾಸ್ತ್ರಿಗಳನ್ನು ಹಿಂಬಾಲಿಸಿದರು.

* * * *

ನಂಜೇಗೌಡ ಎಸೆದ ಬೆತ್ತದ ಕೋಲು ಚಾವಡಿಯ ಮುಂದುಗಡೆಯೆ ಬಿದ್ದಿತ್ತು. ಅದು ಬಿದ್ದ ಜಾಗದಿಂದ ಸ್ವಲ್ಪ ದೂರದಲ್ಲಿದ್ದ ರುದ್ರ ಸರಸರನೆ ಬಂದು ಬೆತ್ತದ ಕೋಲನ್ನು ಕೈಗೆತ್ತಿಕೊಂಡ...

ಅಷ್ಟರಲ್ಲಿ ಕೃಷ್ಣಶಾಸ್ತ್ರಿಗಳು, ಗುಂಪುಗಟ್ಟಿ ನಿಂತಿದ್ದ ಜನಸಂದಣಿಯಿಂದ ತೂರಿ, ಚಾವಡಿಯ ಮುಂದೆ ಬಿರುಗಾಳಿಯಂತೆ ಬಂದು ನಿಂತುರು,

"ತಡೆಯಿರಿ..... ಲಕ್ಕ ನಿರಪರಾಧಿ,... ಶಿಕ್ಷೆ ಆಗಬೇಕಾದದ್ದು ನನಗೆ!...." ಎಂದು ಏದುತ್ತೇದುತ್ತ ನುಡಿದರು.

ಪಂಚಾಯಿತಿ ಕಟ್ಟೆಗೆ ಹಟಾತ್ ಪ್ರವೇಶ ಹಾಗೂ ಶಾಸ್ತ್ರಿಗಳಾಡಿದ ಮಾತು ಇಡೀ ಸಭೆಯನ್ನು ಚಕಿತಗೊಳಿಸಿತು. ಕೆಲವು ನಿಮಿಷ ಎಲ್ಲರೂ ಸ್ತಂಭೀಭೂತರಾದರು...

ಈ ಆಘಾತದಿಂದ ಮೊದಲು ಚೇತರಿಸಿಕೊಂಡ ವೆಂಕಣ್ಣ ಜೋಯಿಸರು, "ಇದೇನು ಶಾಸ್ತ್ರಿಗಳೆ, ನೀವು ಹೇಳ್ತಿರೋದು?' ಎಂದು ಪ್ರಶ್ನಿಸಿದರು.

"ನಾನೆ ತಪ್ಪು ಮಾಡಿರುವವನು. ನನಗೇ ಶಿಕ್ಷೆ ಆಗಬೇಕು"– ಶಾಸ್ತ್ರಿಗಳ ಧ್ವನಿಯಲ್ಲಿ ಇನ್ನೂ ಉದ್ವಿಗ್ನತೆ ತುಂಬೇ ಇದ್ದಿತು.

"ಉಪ್ಪು ತಿಂದೋನು ಅವನು. ಆದ್ದರಿಂದ ನೀರು ಕುಡೀಬೇಕಾದವನೂ ಅವನೇ!– ಹೀಗಿರುವಾಗ ನಿಮಗೇಕೆ ಉಪದ್ವ್ಯಾಪ, ಅಂತೀನಿ?" ಎಂದು ಶ್ಯಾನುಭೋಗರು ಅನುಕಂಪದಿಂದ ಕೇಳಿದರು.

ಶಾಸ್ತ್ರಿಗಳು ಏನೊ ಹೇಳಲು ಪ್ರಯತ್ನಿಸುತ್ತಿದ್ದರು. ಆಗ ಕೇಶವಯ್ಯ,

"ಶಾಸ್ತ್ರಿಗಳೆ, ನಿಮ್ಮ ಮಾತನ್ನು ನಾನು ನಂಬಲ್ಲ... ಈ ಹೈದ ಲಕ್ಕನ್ನ ಅವನ ಬಾಲ್ಯದಿಂದಲೂ ನೀವು ಪ್ರೀತಿ ಮಾಡ್ತೀರಿ ಅನ್ನೊ ಸಂಗತಿ ಊರಿನೋರಿಗೆಲ್ಲ ತಿಳಿದಿರುವ ವಿಷಯವೆ!... ಏನೊ ತಪ್ಪು ಮಾಡಿದ್ದಾನೆ. ಪಾಪ, ಅವನನ್ನು ಹೇಗಾದರೂ ಉಳಿಸಬೇಕು ಎನ್ನುವ ಔದಾರ್ಯದಿಂದ ನೀವು ಹೊರಟಂತಿದೆ!.... ಅವನನ್ನುಉಳಿಸಲಿಕ್ಕೆ ಹೋಗಿ ನಿಮ್ಮ ಮಾನಯಾಕೆ ಕಳೆದುಕೊಳ್ಳಬೇಕು?... ಇದನ್ನ ಹುಚ್ಚು ಎಂದು ಕರೆಯದೆ ಬೇರೆ ಯಾವ ಹೆಸರಿನಲ್ಲಿ ಕರೆಯೋಣ?" ಎಂದು ಪ್ರಶ್ನಾರ್ಥಕವಾಗಿ ಚಾವಡಿಯಲ್ಲಿ ನೆರೆದ ಯಜಮಾನರತ್ತ ದೃಷ್ಟಿ ಬೀರಿದ. ಒಡನೆಯೇ, ನಂಜೇಗೌಡ,

"ಈ ಸಾಸ್ತ್ರಿಗಳ್ಗೆ ಹುಚ್ಚೇ ಇಡೀದಿರಾದು– ಇದರಾಗೆ ಯಾವ ಸಂದೇಯವೂ

ಇಲ್ಲ!" ಅಂತ ಘೋಷಿಸಿದ.

"ನನಗೆ ಹುಚ್ಚೂ ಇಲ್ಲ, ಬೆಪ್ಪೂ ಇಲ್ಲ. ನಾನು ಹೇಳುವ ಮಾತು ನಂಬಿ" ಎಂದು ಶಾಸ್ತ್ರಿಗಳು ಪೇಚಿದರು.

"ಇದು ನಿಜವಾದ ಬುದ್ಧಭ್ರಮಣೆ!" ಅಲ್ಲಿ ನೆರೆದ ಬ್ರಾಹ್ಮಣವೃಂದ ಹುಯಿಲಿಟ್ಟಿತು.

ಒಬ್ಬ ವಿದ್ವಾಂಸ ವಿಪ್ರ ಮಾತು ಸೇರಿಸಿದ:

"ಅದಕ್ಕೇ ಜನ ಅನ್ನೋದು: ವಿಪ್ರಾತ್ ಪಶ್ಚಿಮಬುದ್ದಯಃ ಎಂದು!"

"ನೀವು ನನಗೆ ಭ್ರಮಣೆ ಅನ್ನಿ. ನಾನು ಅವಿವೇಕಿ ಅನ್ನಿ. ನಾನು ನುಡಿದಿರೋದು ಸತ್ಯಸಂಗತಿ, ನೀವು ನಂಬಲೇಬೇಕು... ಆ ನಿರಪರಾಧಿಯನ್ನು ಸುಳ್ಳು ಆಪಾದನೆಯಿಂದ ಮುಕ್ತಗೊಳಿಸಲೇಬೇಕು. ಹಾಗೆ ಮಾಡಿದಾಗಲೆ, ನನ್ನೆದೆಯ ಮೇಲಿನ ಭಾರವನ್ನು ಇಳುಕಿದಂದಾಗತ್ತೆ...." ಹೀಗೆ ಶಾಸ್ತ್ರಿಗಳು ಪರಿತಪಿಸುತ್ತಲೇ ಇದ್ದರು.

'ಈವಯ್ಯ ಉಚ್ಚು ಇಳೀಬೇಕಾದರೆ ಇವರ ಕುಂಡರಿಸಿ ಮಂಡೆಗೆ ಲಿಂಬಿಅಣ್ಣು ತಿಕ್ಕಿ ನೂರೊಂದು ಚರಿಗೆ ನೀರ ಉಯ್ಯಲೇಬೇಕು' ಎಂದು ಗಂಗಪ್ಪ ಉಗ್ಗಡಿಸಿದ

ಪಂಚಾಯಿತದಾರರು ಅವರವರಲ್ಲೆ ವಿಚಾರವಿನಿಯುಮಯ ಮಾಡಿಕೊಂಡರು. ಶಾಸ್ತ್ರಿಗಳ ಚಿತ್ತಸ್ವಸ್ಥ್ಯ ಹತೋಟಿ ತಪ್ಪಿದೆ ಎನ್ನುವ ನಿರ್ಧಾರಕ್ಕೆ ಬಂದಿದ್ದರು... ಥಟ್ಟನೆ ವೆಂಕಣ್ಣಜೋಯಿಸರು, ಶ್ಯಾನುಭೋಗರು, ಕೇಶವಯ್ಯ, ನಂಜೇಗೌಡ, ಬುಳ್ಳಪ್ಪ, ಗಂಗಪ್ಪ, ಪಟೇಲ ಇವರುಗಳು ಚಾವಡಿಯಿಂದ ಎದ್ದು, ಶಾಸ್ತ್ರಿಗಳು ನಿಂತ ಜಾಗಕ್ಕೆ ಇಳಿದು ಬರುತ್ತಿರುವಾಗ, ಕೃಷ್ಣ ಶಾಸ್ತ್ರಿಗಳು ತಮಗೆ ಅರಿವಿಲ್ಲದೆಯೆ ಎಂಬಂತೆ.

"ಒಂದು ಕೆಟ್ಟ ಘಳಿಗೇಲಿ....." ಎಂದು ಬಿಕ್ಕಿ, ಅಲ್ಲಿಯತನಕ ಅವರ ಎದೆಯೊಳಗೆ ಮೊರೆಯುತ್ತಿದ್ದ ವೇದನೆಯನ್ನು, "ನನ್ನ ಸೊಸೆಯ ಶೀಲಹರಣ.... ಮಹಾಪಾಪಿ ನಾನು... ಲಕ್ಕನಿಗೂ ಈ ಅಪರಾಧಕ್ಕೂ ಯಾವ ಸಂಬಂಧವೂ ಇಲ್ಲ"– ಎಂಬ ಮಾತುಗಳ ಮೂಲಕ ಪ್ರಕಟಗೊಳಿಸಿದರು.

" ಈ ಹುಚ್ಚಿಗೆ ಔಷಧಿಯೇ ಇಲ್ಲ"– ಎಂಬ ಆ ಯಜಮಾನರೆಲ್ಲರೂ ಶಾಸ್ತ್ರಿಗಳನ್ನು ಸುತ್ತುವರಿದರು. "ನೇಮನಿಷ್ಠೆಗೆ, ಸದಾಚಾರ ಸದ್ವರ್ತನೆಗೆ ಹೆಸರಾದ ನೀವು, ಇಂಥ ಹೀನಕಾರ್ಯ ಮಾಡಿದೆ ಅಂತ ನಡುನೀರಿನ್ನಲಿ ನಿಂತು ಪ್ರಮಾಣ ಮಾಡಿದರೂ ನಾವು ನಂಬಲ್ಲ... ಯಾಕೆ ಸುಮ್ಮನೆ ಚಪಲ ಪಡುತ್ತೀರಿ?... ಸುಮ್ಮನೆ

ನಮ್ಮ ಜೊತೆಗೆ ಬಂದು ಕುಳಿತುಕೊಳ್ಳಿ....." ಎಂದು ಬಲಾತ್ಕಾರದಿಂದಲೆ ಅವರನ್ನು ಕರೆದೊಯ್ದು, ಚಾವಡಿಯೊಳಗೆ ಕೂರಿಸಿದರು. ಉದ್ದಕ್ಕೂ ಶಾಸ್ತ್ರಿಗಳು ಒದರಾಡುತ್ತಲೆ ಇದ್ದರು... ನೆರೆದಿದ್ದ ಸಭಿಕರ ಗುಂಪಿನಲ್ಲಿ ಕೆಲವರು "ಈವಯ್ಯ ಯೋಳ್ತಿರೋ ಮಾತ್ನಲ್ಲಿ ನಿಜ ಯಾಕಿರಬಾರ್ದು?– ಅಟ್ಟೀಲಿ ಮಾವ ಸೊಸೆ ಇಬ್ಬರೇಯ!... ನಡದಿದ್ರೂ ನಡದಿರಬೈದು" ಅಂತ ಸಂದೇಹಪಟ್ಟರು.

ಚಾವಡಿಯೊಳಗೆ ಯಜಮಾನರೆಲ್ಲರೂ ಪುನಃ ಉಪಸ್ಥಿತರಾದ ನಂತರ ಗಂಗಪ್ಪ,

"ಒಳ್ಳೆ ಕತ್ಯಾಯ್ತು.... ಈ ಶಾಸ್ತ್ರಿಗೊಳು ಸಿವಪೂಜೇಲಿ ಕರಡಿ ಬುಟ್ಟಂಗೆ ಬಂದು, ನಮ್ಮ ಪಂಚಾತಿಗೇ ಅಡ್ಡಕಾಲು ಕ್ವಟ್ಟು ಕುಂತುಬುಟ್ಟಿದ್ರಲ್ಲ?..... ಸದ್ಯಕೆ, ವಳುಗೆ ಕರಕಂಬಂದು ಕುಕ್ಕರಿಸಿದ್ದಾಯ್ತು. ಇನ್ನು ಅವರು ಯೇನಾರ ಬಾಯಿ ಮಾಡ್ತಿರ್ಲಿ–" ಎಂದು ಗೊಣಗಿದ.

"ಪಂಚಾಯಿತಿ ಅಂದಮ್ಯಾಲೆ, ಇಂತ ಅಡ್ಡಿ ಆಡಚ್ಣೆಯೆಲ್ಲಾ ಮಾಮೂಲೆ ಅಲ್ವ?"– ಎಂದು ತಾನು ಅನುಭವಸ್ಥ ಎಂಬುದನ್ನು ಪ್ರಕಟಿಸುತ್ತ ಪಟೇಲ ನಿರ್ವಾಣಯ್ಯ ನುಡಿದ.

"ಸುಮಾಸು, ಶ್ಯಾನುಭೋಗರೆ, ಇನ್ನು ಕಾರ್ಯ ಜರುಗಬೌದಲ್ಲ?"– ಎಂದು ನಂಜೇಗೌಡ ಕೇಳಿದಂತೆ, ಶ್ಯಾನುಬೋಗರು ತಲೆ ಸನ್ನೆಯಲ್ಲಿ ಒಪ್ಪಿಗೆಯಿತ್ತಿದ್ದರು. ಕೊಡಲೆ ನಂಜೇಗೌಡ, ಬೆತ್ತದ ಕೋಲು ಹಿಡಿದು ಕರಾಳವಾಗಿ ನಿಂತಿದ್ದ ರುದ್ರನಿಗೆ, "ರುದ್ರ, ಇನ್ನು ನಿನ್ನ ಕಾರ್ಯ ಜರಗುಸು" ಎಂದ.

ತುಂಡು ಪಂಚೆಯನ್ನು ಬಿಟ್ಟು ಲಕ್ಕನ ಮೈಯನ್ನು ಬೆತ್ತಲೆ ಮಾಡಿದ್ದರು. ಬೆಳುದಿಂಗಳ ಬೆಳಕಿನಲ್ಲಿ ಹೊಳೆಯುವ ಕಪ್ಪು ಗೊಂಬೆಯಂತೆ ಕಾಣುತ್ತಿದ್ದ ಲಕ್ಕ.

ಛಟಾರ್– ಎಂದು ಮೊದಲ ಏಟು ಬಿದ್ದಾಗ, ಪಾಂಡವರ ಕಲ್ಲುಕಂಬಕ್ಕೆ ಬಲವಾಗಿ ಕಟ್ಟಲ್ಪಟ್ಟಿದ್ದ ಲಕ್ಕ 'ಅಮ್ಮಾ.....' ಎಂದು ನರಳಿದ. ಥಟ್ಟನೆ ಲಕ್ಕನ ಆಜುಬಾಜುವಿನಲ್ಲೆ ಸುತ್ತುತ್ತಿದ್ದ ಬೊಡ್ಡ, ಭೀಕರವಾಗಿ ಬೊಗಳುತ್ತ ಏರಿ ಬಂದು ತನ್ನ ಯಜಮಾನನನ್ನು ಹೊಡೆಯಲಾರಂಭಿಸಿದ್ದ ವ್ಯಕ್ತಿಯ ಮೇಲೆ ನೆಗೆನೆಗೆದು ಆಕ್ರಮಣ ಮಾಡಿ, ಕೈಕಾಲುಗಳನ್ನು ಕಚ್ಚಿತು. ಅಷ್ಟರಲ್ಲಿ ಮಾರಗುಡಿಯ ರುದ್ರನ ಬಳಗ ಬೊಡ್ಡನನ್ನು ಸುತ್ತುವರಿದು, ಸೆಬ್ಬೆಗಳಿಂದ ಅದನ್ನು ಬಡಿದರು. ಆ ಏಟುಗಳಿಂದ ಜರ್ಝರಿತಗೊಂಡ ಬೊಡ್ಡ ಕುಂಯ್ ಕುಂಯ್‌ಗುಡುತ್ತ, ಕುಂಟುತ್ತ ಕಲ್ಯಾಣಿಯ ಮುಂದೆ ಹೋಗಿ ಬಿದ್ದಿತು.

ಬೊಡ್ಡನ ಆಕ್ರಮಣದಿಂದ ತುಸು ಸಮಯ ದಿಗ್ಭ್ರಾಂತನಾದಂತೆ ನಿಂತಿದ್ದ

ರುದ್ರ, ತನ್ನ ಕೈ ಕಾಲುಗಳನ್ನು ರಕ್ತ ಸೋರುವುದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ, ಆವೇಶಬಂದವನಂತೆ ಲಕ್ಕನನ್ನು ಹಿಗ್ಗಾಮುಗ್ಗ ಬಡಿಯಲು ಪ್ರಾರಂಭಿಸಿದ... ಲಕ್ಕನಿಗೆ ಒಂದೊಂದು ಏಟು ಬಿದ್ದಾಗಲೂ ಕೃಷ್ಣಶಾಸ್ತ್ರಿ ತಮ್ಮ ದೇಹಕ್ಕೇ ಏಟು ಬಿದ್ದಂತೆ ನರಳಿದರು. ನಿಸ್ಸಹಾಯಕರಾಗಿ ಅವರ ಒಳಜೀವ ಮುಲುಕಿತು. 'ತೇನ ವಿನಾ ತೃಣಮಪಿ ನ ಚಲತಿ'... ಇದನ್ನು ಗಮನಿಸಿ ಅವರನ್ನು ಸುತ್ತುವರಿದ ಬ್ರಾಹ್ಮಣ ಗಣದ ಜೊತೆಗೆ ಚಾವಡಿಯೊಳಗಿನ ಎಲ್ಲ ಯಜಮಾನರೂ ಮೂಕವಿಸ್ಮಿತರಾದರು. ಅವರ ದೊಡ್ಡಪ್ಪನ ಮಗ ಸುಬ್ಬಾವಧಾನಿಗಳು, "ಈ ಕಿಟ್ಟಣನಿಗೆ ಇವತ್ತೇನಾಗಿದೆ–ಒಳ್ಳೆ ಬುದ್ಧನ ಹಾಗೆ ಆಡ್ತಾ ಇದಾನಲ್ಲ?" ಎಂದು ವ್ಯಥೆಪಟ್ಟರು.

* * * *

ಕೃಷ್ಣ ಶಾಸ್ತ್ರಿಗಳಿಗೆ ಆ ದೃಶ್ಯವನ್ನು ನೋಡುತ್ತ ಕೂರಲು ಸಾಧ್ಯವಾಗದೆ ಅಲ್ಲಿಂದೆದ್ದರು. ತಮ್ಮ ಜ್ಞಾತಿ ಕಾಶಿಪತಯ್ಯನವರ ತೊಡೆಯ ಮೇಲೆ ಕುಳಿತು ಆಳುತ್ತಿದ್ದ ಸರಸಿಯನ್ನು ಎತ್ತಿಕೊಂಡು ಮನೆಯ ಕಡೆ ಹೊರಟರು.

ಶಾಸ್ತ್ರಿಗಳು ಮನೆಯೊಳಗೆ ಬಂದಾಗ ರುಕ್ಮಿಣಿಯು ತೊಟ್ಟಿಯ ಕಂಬವೊಂದನ್ನು ಒರಗಿ ಕುಳಿತಿದ್ದಳು. ಅವಳ ಕಣ್ಣಿನಲ್ಲಿ ಇಲ್ಲಿಯತನಕ ಒಂದೇ ಸಮನೆ ಸುರಿದ ನೀರು ಈಗ ನಿಂತಿರುವಂತಿತ್ತು. ಆದರೆ ಅವಳ ದೃಷ್ಟಿ ಮಾತ್ರ ಅಂಗಳದ ಮೇಲಿನ ಆಕಾಶದಲ್ಲಿ ನೆಟ್ಟಿತ್ತು. ಇದನ್ನು ನೋಡಿದ ಶಾಸ್ತ್ರಿಗಳು ತಾವು ಎತ್ತಿದ್ದ ಸರಸಿಯನ್ನು ಕೆಳಗಿಳಿಸಿದರು. ಸರಸಿ ಅಳುತ್ತಲೆ, "ಅತ್ತೆ–ಅತ್ತೆ" ಎಂದು ಕೂಗುತ್ತ ರುಕ್ಮಿಣಿಯ ಬಳಿಗೆ ಓಡಿದಳು. ರುಕ್ಮಿಣಿಯು ಯಾಂತ್ರಿಕವಾಗಿ ಅವಳನ್ನು ತನ್ನ ಎದೆಗೆ ಅಪ್ಪಿಕೊಂಡಳು.

## ೩೩

ಲಕ್ಕನಿಗೆ ಛಡಿ ಏಟಿನ ಶಿಕ್ಷೆ ಮುಗಿದ ತರುವಾಯ, ದರುಮನಹಳ್ಳಿಯ ನ್ಯಾಯ ಸ್ಥಾನವು ಅವನನ್ನು ಹಳ್ಳಿಯಿಂದಾಚೆಗೆ ಗಡೀಪಾರುಮಾಡುವ ತೀರ್ಮಾನಕ್ಕೆ ಸರ್ವಾನುಮತದಿಂದ ಒಪ್ಪಿಗೆ ಕೊಟ್ಟಿತು. ಅವನಿಗೆ ಹಳ್ಳಿಯಲ್ಲಿ ಯಾರೂ ಬೆಂಕಿ ಬಿಸಿನೀರುಗಳನ್ನು ಕೊಡುಕೂಡದೆಂತಲೂ ಅವನು ಗ್ರಾಮದ ಎಲ್ಲೆ ಕಟ್ಟಿನ ಹೊರಗೆ ಕೂಡಲೆ ಹೊರಟುಹೋಗಬೇಕೆಂತಲೂ, ಮತ್ತೆ ಎಂದು ಆ ಗ್ರಾಮದೊಳಗೆ ಪ್ರವೇಶಿಸಬಾರದೆಂತಲೂ ಕಟ್ಟಾಜ್ಞೆಮಾಡಿ, ಕುಳುವಾಡಿ ಕುಂದೂರಯ್ಯನಿಂದ ಸಾರಿಕೆ ಕೊಡಿಸಿದ್ದರು.

ಲಕ್ಕನ್ನ ಅವನ ಅಯ್ಯ, ದೊಡ್ಡಯ್ಯ ಇಬ್ಬರೂವೆ ಕೂಡಿಕಂಡು ಮೆಲ್ಲಗೆ ನಡಸಿಕೊಂಡೋಗಿ ಗುಡ್ಲಿನೊಳ್ಗೆ ಮಖಾಡೆ ಮನಗಿಸಿದರು. ಸಿವುನಿ ಅವ್ನ ಬೆನ್ನಿನ ಬಾಸುಂಡೆಗಳ್ಗೆ ದ್ಯಾವಾಜಿಯಿಂದ ಎರವಲು ತಂದಿದ್ದ ಕುಡಕೆ ಹರಳೆಣ್ಣೆಗೆ ಬೆಳ್ಳುಗಳ ಅದ್ದಿ ಅದ್ದಿ ನಯ್ವಾಗಿ ಸವರ್‍ತ ಇದ್ದರೂವೆ ಲಕ್ಕ, 'ಆಹ್-ಅಯ್ಯೊ-ಅಪ್ಪ.....' ಎಂದು ನರಳ್ತಾನೆ ಇದ್ದ.

ಕಲ್ಯಾಣಿ ಅರೆನಿದ್ದೇಲಿದ್ದ ಸಿವುನಿಯ ಕೂಸ ತನ್ನ ತೊಡೆ ಮ್ಯಾಲಿಟ್ಟು ತಟ್ತಾ ಇದ್ಲು. ಆಗ ಅವಳ ಕಣ್ಣಿಂದ ಉಕ್ಕಿ ಸುರೀತಿದ್ದ ನೀರಿನ ತೊಟ್ಟು ಕೂಸಿನ ಕೆನ್ನೆ ಮ್ಯಾಲೂ ಬಿದ್ದು, ಅದಕ್ಕೆ ಎಚರಾಗಿ, ಅದು ರಚ್ಚೆ ತೆಗೀತು. ಕಲ್ಯಾಣಿ ಒಡನ್ಯೆ ತನ್ನ ಕಂಬನೀಯ ಸ್ಯಾಲೆ ಸೆರಗ್ನಿಂದ ವತ್ತಿಕೊಂಡು ಕೂಸಿನ ಕೆನ್ನೆ ವರೆಸಿ, ಹುಳ್ಳುಳ್ಳಾಯಿ ಮಾಡಿ ಅದ್ನ ರಮಿಸಿ ಮಲಗಿಸೊ ಯತ್ನದಲ್ಲಿದ್ಲು.

ಕ್ವಾಣೆ ವಳುಗೆ ಲಕ್ಕನ ಅಯ್ಯ, ಸೋರೆಬುಂಡೆಯ ಎತ್ತಿ ಹೀರ್‍ತ, ತನ್ನ ಅಳಲ ಮರೆಯಕ್ಕೆ ಯತ್ನಿಸಿತಿದ್ದ. ಗುಡ್ಲಿನ ವೊರಗಡೆ ಕುಳವಾಡಿ ಕುಂದೂರಯ್ಯ ಆಕಾಸನೆ ನ್ವಾಡ್ತ, ಯಾವ ಚಲನೆನೂ ಮಾಡ್ದೆ ಕಲ್ಲಾಗಿ ಕುಂತಿದ್ದ.

"ಯಾಕೆ ಕುಳುವಾಡಿ ಹಿಂಗೆ ಬೆಪ್ಪಗಿ ಕುಂತದ್ದ?"- ಅನ್ತಾ ನ್ಯಾಯಕ್ಕೆ ಬಂದಿದ್ದ ಗೋಸುಸಾಬರು, ತಮ್ಮ ಹಳ್ಳಿಗೆ ವೋಂಟಿದ್ದೋರು, ಮನಸ್ಸು ಬದಲ್ಸಿ, ತಮ್ಮ ಸೀನೇಯಿತಗಾರ ಕರಿಯಪ್ಪನೊಡ್ನೆ, ಕುಳವಾಡಿ ಕುಂದೂರಯ್ನ ಮುಂದ್ಕೆ ಬಂದು ನಿಂತಿದ್ರು.

"ಈಗ ಬೆಪ್ಪಾಗಿ ಕುಂತುಗಳದೆ ಇನ್ನೇನು ಉಳಿದದೆ ಗೋಸುಸಾಯೇಬ್ರೆ?"- ಮಾತುಗೊಳು ಅವ್ನ ಬಾಯಿಂದ ವೊರಬರುತ್ತಿದ್ದರೂ ಕುಂದೂರಯ್ಯ ನಿಚ್ಚಲವಾಗಿ ಕುಂತೇ ಇದ್ದ.

ಗೋಸು ಸಾಬರು ಗುಡ್ಲಿನೊಳೀಕೆ ಇಣಿಕೆ ನ್ವಾಡಿದ್ರು.

"ನನ್ನ ದೊಸ್ತ್ ಎಲ್ಲಿ?"- ಕೇಳಿದ್ರು.

ಲಕ್ಕನ ಅಯ್ಯ ಬುಂಡೆ ಹಿಡದಂತ್ಯೆ ಕ್ವಾಣೆಯಿಂದ ಇಣಿಕ್ದ.

ಗೋಸು ಸಾಬರು ರೇಗಿದ್ರು.

"ಅರ್‍ರೆ, ಬಾರಯ್ಯ ವೊರ್‍ಗೆ, ನನ್ನ ಮರೆತುಬುಟ್ಟ ಐತಲ್ಲ, ಕುಡಿತಾ ಕುಂತುಬುಟ್ಯ ವಬ್ನೆ!" ಎಂದು ಹಾಸ್ಯದ ಚಟಾಕಿ ಹಾರಿಸಿದ್ರು.

ಅನಂತ್ರ ಸೊಕ ಮಾಡ್ತಿದ್ದ ಕಲ್ಯಾಣಿಯ ಸಮಾದಾನಪಡಿಸ್ತ,

"ಅರೆ, ಈಗ ಏನಾಗೋಯ್ತೂಂತ ಹಿಂಗೆ ಸೋಕ ಮಾಡ್ತಿದ್ದೀ ಥಯ್?.... ಯೇನು ಪರ್ಪಂಚ ಎಲ್ಲ ನಿಮ್ಮ ಈ ದರುಮನಳ್ಳೀಲೆ ಕುಂತೈತ?.... ಪಕ್ಕದಾಗೆ

ನಮ್ಮ ಸಕುನಿಕೊಪ್ಪಲೂ ಇದೆ, ಮರೀಬ್ಯಾಡ...... ನಿಮ್ಮಳ್ಳಿ ನ್ಯಾಯಸ್ತರು ಲಕ್ಕನ್ನ ಇಲ್ಲಿಂದ ದೂಡಬುಟ್ಟರೆ, ಅವನ್ಗೆ ಬ್ಯಾರೆ ಕಡೆ ಜಾಗಾನೆ ಇಲ್ವ? ನಮ್ಮ ಕಬೀರ್‌ದಾಸು ಹೇಳ್ತಾರೆ, ಥಾನ್ ಥಾನ್ ಪರ್ ಲಿಕ್ಖಾ ಹೈ, ಖಾನೇವಾಲೇಕಾ ನಾಮ್. ಅಂದ್ರೆ ನಾವ್ ತಿಂತೀವಲ್ಲ ಅನ್ನದ ಅಗಳು, ಆ ಒಂದೊಂದು ಅಗಳ್ನಲ್ಲೂ ತಿನನೊನ ಹೆಸರು ಬರೆದು ಬುಟ್ಟೈತೆ, ಅಂತಾವ... ಇದ್ಕೆ ಯಾಕೆ ಚಿಂತೆ ಮಾಡ್ಬೇಕು ನೀವು?... ಮನಸ್ರು ಕೈ ಬುಟ್ಟರೂ ಖುದಾ ಕೈ ಬುಟಕ್ಕಿಲ್ಲ...."ಅಂದೋರು, ಲಕ್ಕನ ಕಡೀಕೆ ತಿರುಗಿ

"ಕೇಳೋ ಲಕ್ಕ. ನೀನು ನನ್ನ ಸಿನೇಯಿತಗಾರ್ನ ಮಗ. ನಿನ್ಗೆ ನಾನು ನಮ್ಮ ಕೊಪ್ಪಲು ಗಡಿ ಜಮೀನುದಾಗೆ ತಾವುಮಾಡಿಕೊಡ್ತೀನಿ. ಕರಿಯಪ್ನೊ ನಾನೂವೆ ಅದ್ನೇ ಅಳದೂ ಸುರುದೂ ತೀರ್ಮಾನ ವಾಡ್ಕಂಡು ಬಂದ್‌ಬುಟ್ಟಿದ್ದೀವಿ...... ನಮ್ಮ ಕೊಪ್ಪಲ ವೋಳಗಡೆ ಜಾಗ ಕ್ವಟ್ಟರೆ ನಿಮ್ಮ ಯಜಮಾನರು ನಮ್ಮ್ಯಾಲೆ ಕತ್ತಿ ಮಸೀಬೌದು. ನಾವು ನಿಮ್ಮ ಪಕ್ಕದ ಕೊಪ್ಪಲೋರೆ ಅಲ್ವ?– ನಮ್ಮ ಕೊಪ್ಪಲ ಜಮೀನು ನಿಮ್ಮಳ್ಳಿ ಜಮೀನು ಒಂದಕೊಂದು ತಾಡಿಸಿಕೊಂಡೆ ಅವಲ್ಲ!... ಈಗ ನಾನೊಂದು ಕೆಲ್ಸ ಮಾಡ್ತೀನಿ. ಲಕ್ಕನ್ನ ಕರಕೊಂಡೋಗಿ ಐತಲ್ಲ, ಈ ರಾತ್ರಿ ನಮ್ಮಟ್ಟೀನಲ್ಲೆ ಮನಗಿಸಿದ್ದು, ನಾಳೆ ಆಚ್ಗೆ ನಮ್ಮ ಜಮೀನ ತಲೆಕೊಟ್ನಲ್ಲಿ ಅವನ್ಗೆ ಒಂದು ಜೋಪಡಿ ಹಾಕ್ಕೊಳಕ್ಕೆ ಸಾಮಾನು ಕೋಡ್ತೀನಿ. ಅದ್ಕೆ ಬೇಕಾದ ಸರ, ನೊರೆಹುಲ್ಲು ಎಲ್ಲ ನನ್ನ ತಾವು ಅದೆ. ಸಾಲ್ದೆ ಬಂದರೆ, ನಮ್ಮ ಕರಿಯಪ್ಪ ಕೊಡ್ತಾನೆ. ಏನಂತೀ ಕರಿಯಪ್ಪ?" ಎಂದು ಕರಿಯಪ್ಪನತ್ತ ದ್ರುಸ್ಟಿ ಹರಿಸಿದ್ರು–

"ಅದ್ಯಾವ ಮಾ ಸುದ್ದಿ. ನಿಮ್ಮ ತಾವಳ ಸಾಮಾನು, ನಮ್ಮ ತಾವಳ್ದು ಎಲ್ಲಾನು ಸೇರಿಸಿದ್ರೆ ಒಂದಲ್ಲ ನಾಕು ಜೋಪಡಿ ಏಳಿಸೌದು. ಒಂದು ಜೋಪಡಿಗೆ ಸಾಮಾನು ವದಗಿಸೋದು ಯಾವ ಲೆಕ್ಕ, ತೆಗೀರಿ" ಎಂದು ಕರಿಯಪ್ಪನೂ ವಪ್ಪಿಗೆಯಿತ್ತ.

ಗೋಸು ಸಾಬರು ತಮ್ಮ ಮಾತ ಮುಂದುವರಿಸಿದ್ರು:

"ಸೈ. ಜೋಪಡಿ ಒಂದು ಲಡಿ ಆದ್ರೆ, ಲಕ್ಕ ಅಲ್ಲಿಂದ್ಕಂಡು, ನಮ್ಮ ಕೊಪ್ಪಲು ಹಂಗೇನೆ ಸುತ್ತಾಮುತ್ತಾ ಹಿರೋ ಹಳ್ಳಿಗೊಳಲ್ಲಿ ಕೂಲಿನಾಲಿ ಮಾಡಿ ಕಾಲ ಹಾಕ್ಲಿ–ಹುಟ್ಸಿದ ಸಿವ ಹುಲ್ಲು ಮೇಯಿಸಕ್ಕಿಲ್ಲ..."

ಅವರು ಗಡ್ಡ ನೀವುತಿರೋ ಜ್ವತೆಜ್ವತ್ಗೇ ಉದುರ್ದ ಈ ಮಾತು, ದಿಕ್ಕು ಕಾಣದೆ ಪರಿತಪಸ್ತ ಇದ್ದ ಆ ಗುಡ್ಲಿನ ವಳಗೆಲ್ಲ ದೈರ್ಯ ತುಂಬಿದೊ.

ಲಕ್ಕ, ಎಣ್ಣೆ ನೀವುತಿದ್ದ ತಂಗಿಯ ಕಯ್ಯ ತಡದು,

"ಸಾಕು ಕನೆ, ಸಿವುನಿ" ಅಂದು ಎಕ್ಕಾಸಪಟು ಹೊಳ್ಳಿಕೊತ್ತ ಎದ್ದ. ಎದ್ದೋನೆ, ಗೋಸು ಸಾಬರ ಕಾಲಿಗೆ ಬೀಳಕ್ಕೆ ಹೋದ.

ಗೋಸು ಸಾಬರು ಅದ್ಕೆ ಅವಕಾಸ ಕ್ವಡನಿಲ್ಲ.

"ಅರೆ, ಅರೆ–ಏನೋ ನೀ ಮಾಡ್ತ ಹಿರೋದು, ಬೇಕೂಫ?– ಖುದಾ ಒಬ್ಬಂಗೇ ಮಂಡಿ ಬಗ್ಗಿಸೋದು. ನರಮನಸುನಿಗೆ ಬೊಗ್ಗಿಸ್ತಾರೇನೊ?... ಇದು ಯಾವತ್ತಿದ್ರೂ ಮಣ್ಣಾಗೋ ಸರೀರ. ಇದ್ಕೆ ಯಾಕೊ ಅಸ್ಟು ಮರ್ಯಾದೆ ಮಾಡ್ಬೇಕು?... ಬಾ ಬಾ, ಹೋಗಾನ" ಅಂದ್ರ, ಬಗ್ಗೆದ್ದ ಲಕ್ಕ ತಮ್ಮ ಪಾದಗಳ ಮುಟ್ಟುಕ್ಕು ಅವಕಾಸ ಕ್ವಡದೆ, ಅರ್ಧದಲ್ಲೆ ತಡದು, ಯೋಳಿದ್ರು.

ಏಡು ಅಂಗಿ, ಏಡು ಚೆಡ್ಡಿ, ಒಂದು ದಟ್ಟಿಪಂಚೆ ಸುತ್ತಿದ್ದ. ಅಂಗಿ ತೊಡುವಾಗ ಪರಮನಯಾತ್ನೆ ಆಯ್ತು. ಉಳುಕೆ ಒಂದು ಚಡ್ಡಿ ಒಂದು ಅಂಗಿಯ ಅವ್ನ ಚೌಕಕೇ ಸುತ್ತಿ ಒಂದು ಪುಟ್ಟ ಗಂಟು ಮಾಡಿ, ಅದ್ನ ಲಕ್ಕನ ಕೈಗಿತ್ತೋಳು ಸಿವುನಿಯೇಯ!

ಲಕ್ಕಗು ಡ್ಲಿನಾಚ್ಗೆ ಕಾಲಿಡ್ತಿರೋವಂಗೆ, ಪರ್ತಿಯೋಬ್ಬರೂವೆ ಕಂಬನಿಗರೆದ್ರು. ಬೋ ಪ್ರಲಪ ಮಾಡಿದೋಳಂದ್ರೆ ಅಣ್ಣನ್ನ ಅತಿಸಯ್ವಾಗಿ ಪ್ರೀತಿಸ್ತದ್ದ ಸಿವುನಿ! ಜೋರು ಮಳೆಯ ಸದ್ದಿನ ನಡನಡ್ವೆ ಗುಡುಗ್ನ ಅಬ್ಬರ ಕೇಳಿಸೂವಂಗೆ ಸಿವುನಿಯ ಊ ಊ ಊ ಜೋರು ರೋದನ್ದ ಮದ್ಯ, ಕಲ್ಯಾಣಿ–

"ನಿನಿಗೊಂದು ಎಣ್ಣ ಗಂಟಾಕಿ ಆ ಲಗ್ಣಾವ ನಿನ್ನಯ್ಯ ನಾನೂ ಇಬ್ರುವೆ ಕಣ್ಣತುಂಬ ನ್ವಾಡ್ಬೇಕೂ ಅಂತಿದ್ವಲ್ಲೊ, ಕಂದಾ...... ಈಗ ನಮ್ಮ ಕಾಡುಪಾಲು ಮಾಡಿ ವೋಂಟೋಯ್ತಿದೀಯಲ್ಲೋ... ನಮಗಿನ್ಯಾಕೆ ಈ ಬದುಕಾಟ?" ಅಂದು ಬೇಳುಗರೀತಿರ್ವಾಗ, ಗೋಸು ಬಾಬರು,

"ಇದ್ಯಾಕೆ ಕಲ್ಯಾಣಿ, ಈ ಮಟ್ಟಿಗೆ ಹುಯ್ಯಿಕಂಡೀ?.... ನಮ್ಮ ಹೊಲ, ನಿನ್ವಳ್ಳಿ ಹೊಲ ಬೋ ದೂರವ? ನಮ್ಮ ಕೊಪಲ್ನಲ್ಲಿ ಮನಕ್ಕಂಡು ಆ ಚೋರಿ ಹೊಳ್ಳಿದ್ರೆ ನಿಮ್ಮಳ್ಳಿ ಹೊಲ, ನಿಮ್ಮಳ್ಳೀಲಿ ಮನಕ್ಕಂಡು ಈಚೋರಿ ಹೋಳ್ಳಿದ್ರೆ ನಮ್ಮ ಹೊಲ!... ಇದಕ್ಯಾಕೆ, ಲಕ್ಕ ಯಾವುದೊ ಐಗಂಚಿ ಪಟ್ಟಣಕ್ಕೆ ಹೊಂಟೋಯ್ತಾನೆ ಅನ್ನೊ ಹಂಗೆ ಅತ್ತೀಯೆ?... ಅರೆ, ಸಿವುನಿ, ನೀನು ಅಸ್ಟೇಯ. ವಸಿ ಜೀವ ತಡಕೊನ್ನಿ, ಕಾಲ ಎಲ್ಲಾನು ಲಿಪೇರಿ ಮಾಡ್ತದೆ. ಯೋಚ್ನೆ ಮಾಡಬ್ಯಾಡಿ..." ಅಂದು ನಿಂಗಯ್ಯನ ಕಡೀಕೆ ತಿರಿಗಿ,

"ಇವೊತ್ತು ನಿಮ್ಮೂರ್ನ ಹಾಳುನ್ಯಾಯದಿಂದ ನಮ್ಮ ಕಾಪಿ ಕ್ಲಬ್ಬು

ತೆಪ್ಪೋಯ್ತು... ನಾಳೆ ಸಂಜೀಕೆ ಬತ್ತೀ ತಾನೆ?" ಅಂದು ಕೇಳಿ. ನಿಂಗಯ್ಯನ ಉತ್ತರಕೆ ಕಾಯದೆ, ಕುಳವಾಡಿ ಕುಂದೂರಯ್ಯಂಗೆ ಸಲಾಂ ಹೇಳಿ, ಲಕ್ಕನ್ನ ತಬ್ಬಿ ನಿಧಾನ್ವಾಗಿ ನಡುಸ್ತ, ಕರಿಯಪ್ಪನೊಡ್ನೆ ತಮ್ಮ ಕೊಪ್ಪಲ್ನ ಕಡೀಕೆ ಸಾಗಿದ್ರು.

ವೊಲಗೇರಿಯ ಮಂದಿ ಸಾಲುಗಟ್ಟಿ ನಿಂತು, ಅವರು ಹೋಗೋದ್ನೆ ಕಂಬನಿಗರೀತ ನ್ವಾಡ್ತಿದ್ರು.

* * * *

ಗೋಸು ಸಾಬರೂ ಕರಿಯಪ್ಪನೂ ಲಕ್ಕನೊಂದಿಗೆ ಕೊಪ್ಪಲು ಓಣಿಗೆ ತಿರುಗಿದಂತೆ, ಅವರ ಹಿಂದೆ ದೂರದಲ್ಲಿ ಬರುತ್ತಿದ್ದ ಪುರೋಹಿತ ವೆಂಕಣ್ಣಜೋಯಿಸರು ಯಾವುದೊ ಮಂತ್ರವನ್ನು ಗುನುಗುತ್ತ, ಕೆರೆಯ ಓಣಿಯತ್ತ ಹೆಜ್ಜೆಹಾಕುತ್ತಿದ್ದರು. ಆಗ ಯಾರೊ ಆ ಜೋಯಿಸರನ್ನು, "ಜೋಯಿಸರೆ... ನಿಂತುಕನ್ನಿ, ವಸಿ ನಿಂತುಕನ್ನಿ..." ಎಂದು ಕೂಗಿದಂತಾಯಿತು. ಜೋಯಿಸರು ನಿಂತರು. ಕೂಗುತ್ತಿದ್ದವನು ನಾಮಧಾರಿಗಳ ಬಿಳಿಗಿರಿ.

"ಏನಪ್ಪ ಬಿಳಿಗಿರಿ?– ಇಷ್ಟು ತರಾತುರಿಯಿಂದ ಕರೀತಾ ಇದೀಯಲ್ಲ, ಏನು ಸಮಾಚಾರ?"– ಕೇಳಿದರು.

"ಬಿಳಿಗಿರಿಗೆ ಗೂರಲು, ಸ್ವಲ್ಪ ಓಡುತ್ತ ಬಂದುದರಿಂದ, ಕುಲುಮೆಯಲ್ಲಿ ತಿದಿ ಒತ್ತಿದ ಹಾಗೆ ಏದುಸಿರು ಬಿಡುತ್ತ,"

"ಸೋಮಿ– ಇವೊತ್ತು ಒಳ್ಳೆ ಜಿನವಾ?" – ಕಾತರದಿಂದ ಪರಶ್ನಿಸಿದ.

"ಯಾಕಯ್ಯ, ಏನಾಗಬೇಕು?"

"ವಸಿ ಇದೊಂದು ಯೋಳಿ, ಸೋಮಿ ಬಾಕಿದು ಆಮ್ಯಾಕೆ ಹೇಳ್ತೀನಂತೆ."

ಬಿಳಿಗಿರಿ ಬಲು ರಗಳೆ ಮನುಷ್ಯ. ಯವಾಗಲೂ ಹೇಳೋದನ್ನ ನೇರವಾಗಿ ಹೇಳಲ್ಲ. ಸುತ್ತಿಬಳಸಿ, ಚಿತ್ರಮೂಲನ ಕೋಟೆ ಹೊಕ್ಕಿಬಂದ ಹಾಗೇ ಅವನ ಮಾತು! ಇದು ಜೋಯಿಸರಿಗೆ ಎಂದೋ ಅನುಭವವೇದ್ಯಾವಾಗಿತ್ತು. ಆದರೆ ಅವರು ತಾಳ್ಮೆ ಕಳೆದುಕೊಳ್ಳುವುದಕ್ಕೆ ಆಗುತ್ತೆಯೇ?... ಹೊಟ್ಟೆಪಾಡು ನಡೆಯಬೇಕಲ್ಲ–ಅವರಿಗೆ ಹೇಳಿಕೊಳ್ಳುವಂತಹ ಜಮೀನಿಲ್ಲ. ಮೂರು ಹೆಣ್ಣು ಮಕ್ಕಳು. ಅವರಲ್ಲಿ ಇಬ್ಬರು ಆಗಲೆ ಮದುವೆಗೆ ಬಂದಿದ್ದಾರೆ. ಜೋಯಿಸರ ಸಂಪಾದನೆಯೆಂದರೆ ಶುಭ ಅಶುಭಗಳ ಪೌರೋಹಿತ್ಯಾಗಿ ಈ ಊರು ಆ ಊರು ಎಂದು ತಿರುಗಿತಿರುಗಿ ತಂದ ಧಾನ್ಯಗಳು, ತೆಂಗಿನಕಾಯಿ, ಬೆಲ್ಲ, ಬಾಳೆಹಣ್ಣು ಇತ್ಯಾದಿ ಮತ್ತು ದಕ್ಷಿಣೆ. ಈಚೀಚೆಗೆ ಜನ, "ಮಂತ್ರಗಳ್ನ ಕಡಿಮೆ ಮಾಡಿ ಜೋಯಿಸರೆ, ಶಾಸ್ತ್ರಗಳನ್ನು ಅಷ್ಟೆ ಚಟುಕದಲ್ಲಿ ಮುಗಿಸಿಬಿಡಿ; ಎಲ್ಲಾ

ಪದಾರ್ಥಕ್ಕೂ ಈಚೀಚೆಗೆ ಧಾರಣೆವಸಿ ಹೆಚ್ತಾನೆ ಇದೆ. ಈ ಬೆಲೆಗಳಲ್ಲಿ ಸಂಪಾದ್ನೆ, ವೆಚ್ಚ ಎರಡನ್ನೂ ತೂಗಿಸೋದು ನಮಗೆ ಸಾಧ್ಯವಾಗ್ತಾ ಇಲ್ಲ"– ಎಂದು ಬೇರೆ ಶುರು ಮಾಡಿದ್ದಾರೆ!... ಆದ್ದರಿಂದಲೆ ಪೌರೋಹಿತ್ಯದ ಜೊತೆಗೆ ವೆಂಕಣ್ಣನವರು ರೈತಜನರಿಗೆ ಕಾಗದ ಪತ್ರ ಬರೆದು ಕೊಟ್ಟು ಅಲ್ಪಸ್ವಲ್ಪ ಮೇಲುಸಂಪಾದನೆಗೂ ಅವಕಾಶ ಮಾಡಿಕೊಂಡಿದ್ದಾರೆ!...

"ಇದ್ಯಾಕೆ ಸೋಮಿ, ಸುಮ್ಮನೆ ತಿಂಗಳ ಬೆಳಕ ನ್ವಾಡ್ತ ತಿಂತುಬಿಟ್ರಿ?..... ನಾ ಕ್ಯಳಿದ ಪ್ರಸ್ನೆಗೆ ಒಂದುತ್ರ ಯೋಳಿ, ಸೋಮಿ.'

"ನೋಡಯ್ಯ, ಇದು ವೈಶಾಖ ಮಾಸ. ಈ ದಿವಸ ಹುಣ್ಣಿಮೆ... ಹುಂ. ಅದೇನು ವಿಷಯ ಹೇಳು– ಒಳ್ಳೇದೊ ಕೆಟ್ಟದೊ ಅನಂತರ ಲೆಖ್ಖ ಹಾಕಿ ಹೇಳ್ತೇನೆ."

"ನ್ವಾಡಿ ಜೋಯಿಸರೆ, ನಾನೊಂದು ಜೊತೆ ಎತ್ತು ಕರೀದಿ ಮಾಡ್ತಾ ಇವ್ನಿ. ಪರಮಾಸಿ ಜೋಡಿ. ಯಾವುತ್ತೂ ಒಳ್ಳೆ ಅರಬ್ಬಿತಾಕಣ ಇದ್ದಂಗವೆ. ಇವೊತ್ತು ಬುಟ್ಟರೆ, ಆ ಕೊಡೊ ಬಡ್ಡೀ ಹೈದ ಮನಸ್ಸ ಬದ್ಲಾಯಿಸಿ ಬುಡ್ತಾನೆ... ಅಯ್ಯೊ, ಬುಡ್ತಾನೆ ಅನಾದೇನು–ಅವನು ಯೋಳೇಬುಟ್ಟ: ಇವೊತ್ತು ಮಾತು ಮುಗಿಸಿ, ಪೂರ್ತಾ ದುಡ್ಡು ಕ್ವಟ್ಟರೆ, ಎತ್ತಿನ ಜೋಡಿ ನಿನ್ನದು. ಬ್ಯಾರೆಯೋರು ಕೇಳ್ತಾ ಅವರೆ. ನಾಳೀಕೆ ಈ ಜೋಡಿ ನಿನ್ನ ಕೈ ತೆಪ್ಪಿದ್ರೆ ಮಾತ್ರ ನನ್ನ ನೀನು ದೂಸಣೆ ಮಡಬ್ಯಾಡದು– ಅಂತ!– ಅದ್ಕೆ ಸೋಮಿ. ನಿಮ್ಮ ಕ್ಯಾಲಕ್ಕೆ ಬಂದೆ. ಅಟ್ಟಿ ತಾವಿಕೆ ಹ್ವಾಗಿದ್ದೆ. ಕೆರೆ ಕಡೀಕೆ ಈಗ ತಾನೆ ವೋದರು, ಅಂತಾವ ನಿಮ್ಮ ಹಿರೀ ಎಣ್ಣುಯೊಳ್ತು. ಅದ್ಕೆ ನಿಮ್ಮ ಇಂದಗುಟ್ಟೇನೆ ಬಂದೆ,"

"ಹುಂ....." ಎಂದು ಜೋಯಿಸರು ಹೂಗುಟ್ಟಿ, ಏನೋ ಗಾಢವಾಗಿ ಆಲೋಚಿಸುವವರಂತೆ ಕೆಂಡದ ಉಂಡೆಯಾಗಿ ಹೊಲೆಯುತ್ತ ಮೂಡಲ ದಿಕ್ಕಿನಿಂದ ಬಾನಿನಲ್ಲಿ ಮೇಲೇರಿದ ಚಂದ್ರಬಿಂಬವನ್ನೆ ದಿಟ್ಟಿಸುತ್ತಿದ್ದು, ನಂತರ,

"ಇದು ಕೊಂಚ ಲೆಖ್ಖ ಹಾಕಬೇಕು, ಕೆರೆ ಕಡೆ ಹೋಗಿ ಬರ್ತೀನಿ. ಇನ್ನೊಂದು ಅರ್ಧ ಮುಕ್ಕಾಲು ಗಂಟೆ ಬಿಟ್ಟು ನಮ್ಮ ಹಟ್ಟಿಗೆ ಬಂದುಬಿಡು" ಎಂದು ಕಾಲ್ತೇಗೆಯುವುದುರಲ್ಲಿದ್ದರು.

ಜೋಯಿಸರಿಗೆ ದೈಹಿಕ ಬಾಧೆಯ ಆತುರವಾದರೆ, ಬಿಳಿಗಿರಿಗೆ ಆ ದಿನ ಎತ್ತಿನ ಒತೆ ಕೊಳ್ಳಲು ಪ್ರಶಸ್ತವೊ ಇಲ್ಲವೊ ಎಂದು ತಿಳಿಯುವ ಕಾತರ. ಇಂದ್ಕೆ ಇಂಗೇ ಯಾರನೂ ಕ್ಯಾಳದೆ ಅಟ್ಟೀಲೆ ಇದ್ದ ಒಂಟಿ ಎತ್ತಿನ ಜೊತೆಗೆ ಇನ್ನೊಂದು ಎತ್ತ ಕೊಂಡು, ಅದು ಚಪ್ಪೆರೋಗ ಬಂದು ನಿಗರಿಕೊಂಡಿತ್ತು!

"ಒಳ್ಳೆ ಅವಸರದ ಹೋಬಳಿ ಶಿರಸ್ತೇದಾರ ಕಣಯ್ಯ ನೀನು!... ನೋಡು, ನೀನು ಕೇಳಿದ್ದಕ್ಕೆ ಇಷ್ಟು ಮಾತ್ರ ಹೇಳ್ತೀನಿ. ಇವತ್ತು ಪೂರ್ಣಿಮೆ. ದಿನವೇನೊ ವ್ಯವಹಾರಕ್ಕೆ ಪ್ರಶಸ್ತವಾಗಿದೆ. ಆದರೆ ಹಟ್ಟಿಗೆ ಬಂದು, ನೀನು ಯಾವ ಶುಭಲಗ್ನದಲ್ಲಿ ಕುಳಿತು ವ್ಯವಹರ ಮುಗಿಸಬೇಕು ಎನ್ನೊಂದನ್ನ ಗುಣಿಸಿ ಲೆಖ್ಖ ಹಾಕಿ ಹೇಳಿಕೊಡ್ತೀನಿ.... ಈಗ ನೀನು ನಡಿ" ಎಂದು ಇನ್ನು ಒಂದು ಗಳಿಗೆ ತಡೆದರೂ ಅಪಾಯವೆಂದು ಭರಭರನೆ ಕೆರೆಯ ಕಡೆ ನಡೆದರು.

"ಅಂತೂ ಈ ಜಿನ ಯವಾರ ಮಾಡಬೌದು. ಸದ್ಯ, ವೋಟು ಯೋಳಿ ಕೊಟ್ರೆಲ್ಲ. ಅದೇ ನಂಗೆ ಪರಮಾನ್ನ ಉಂಡೋಟು ತ್ರುಪ್ತಿ ಆಗೋಯ್ತು. ನೀವು ನಡೀರಿ. ಆವಯ್ಯನೂ ಕರಕಂಡು ನೀವು ಹೇಳಿದಂಗೆ ಒಂದರ್ಧ ಮುಕ್ಕಾಲು ಗಂಟೆ ತಡಮಾಡಿ ಬಂದುಬುಡ್ತೀನಿ" ಎಂದು ಕೂಗಿ ಹೇಳಿ, ತನ್ನ ಹಟ್ಟಿಗೆ ಹಿಂದಿರುಗಿದ.

"ಈ ವ್ಯವಹಾರ ನಿಷ್ಕರ್ಷೆ ಮಾಡಲಿಕ್ಕೆ ರುಸುಂ ಎಷ್ಟು ಕೇಳಿದರೆ ತಡೆಯುತ್ತೆ?" ಎಂಬ ತರ್ಕದಲ್ಲೆ ತಲ್ಲೀನರಾಗಿ ವೆಂಕಣ್ಣ ಜೋಯಿಸರು ಕೆರೆಯನ್ನು ಸಮೀಪಿಸಿ, ಅದರೊತ್ತಿನ ಮೆಳೆಯೊಂದರ ಮರೆಗೆ ಪಂಚೆಯ ಕಚ್ಚೆಯನ್ನು ಸಡಿಲಿಸಿ ಕುಳಿತರು.

ಗೋಸುಸಾಬರೂ ಲಕ್ಕನೂ ಕೊಪ್ಪಲನ್ನ ಸಮೀಪಿಸುತ್ತಿದ್ದಂತೆ,

"ಅರೆ, ಯಾಕಯ್ಯ–ದಾರಿ ಉದ್ದಕೂ ನಾನು ನೂರು ಮಾತಾಡಿದ್ರೆ, ನೀನು ಐತಲ್ಲ ಒಂದು ಮಾತಾದ್ರೂ ಆಡಬ್ಯಾಡದು?... ಈಪಟ್ಟು ನಿನ್ನ ಯೋಚ್ಣೆ ಗೀಚ್ಣೆ ಎಲ್ಲಾನು ಬುಟ್ಟುಬುಡು. ನಮ್ಮ ಕೊಪ್ಪಲ್ನಲ್ಲಿ. ಸುತ್ತಮುತ್ತಲ್ನ ಹಳ್ಳಿಗೋಳಲ್ಲಿ ಕೂಲಿಕಂಬಳ ನಿನ್ನಂತ ಗೇಯೋನಿಗೆ ಮುಲಾಜಿಲ್ದೆ ಸಿಕ್ತದೆ. ಕಯ್ನಲ್ಲಿ ಒಂದೀಟು ಸೇರಿತು ಅನ್ನು. ಆಗ ನಮ್ಮ ಸಾಬರದೆ ಒಂದು ಚೆಂದುಳ್ಳಿ ಹೆಣ್ಣು ನಿಕಾ ಮಾಡಿಕಂಡುಬುಡು. ನಿನ್ನ ಜೀವ್ನಕ್ಕೆ ಆರಾಮ್‌ಬಂದುಬುಡ್ತದೆ. ಏನಂತಿಯ?" – ದೊಡ್ಡದಾಗಿ ನಕ್ಕು ಗೋಸುಸಾಬರು ಲ್ಕಕನ ಬೆನ್ನು ತಟ್ಟಿದರು. ಹಾಗೆ ತಟ್ಟಿದಾಗ ಲಕ್ಕನ ಬೆನ್ನಿನಲ್ಲಿ ಮೂಡಿದ್ದ ಬಾಸುಂಡೆಗಳು ನೋವಿನಿಂದ ಮುಲುಕಿದವು ಎನ್ನುವುದನ್ನು ಅವರು ಕಾಣರು. ಆ ನೋವಿನಲ್ಲೂ ಹೇಗೊ ಮುಖದಲ್ಲಿ ನಗು ತಂದು, ಲಕ್ಕ ಆ ಕೊಪ್ಪಲಿನೊಳಗೆ ಕಾಲಿಟ್ಟ

## ೩೪

ವೈಶಾಖದ ಹುಣ್ಣಿಮೆ ಕಳೆದ ಮಾರನೆಯ ದಿನ ದರುಮನ ಹಳ್ಳಿಯ ಬ್ರಾಹ್ಮಣರು ಸಭೆ ಸೇರಿ ಹೊಲೆಯನ ಸಂಪರ್ಕ ಮಾಡಿ ಮಹಾಪಾತಕವೆಸಗಿದ್ದರಿಂದ

ರುಕ್ಮಿಣಿಗೆ ಅವಳು ಜೀವಂತವಿರುವಾಗಲೆ ಘಟಸ್ಫೋಟ ಕರ್ಮಮಾಡಿ ಅವಳಿಗೂ ತಮಗೂ ನಡುವೆ ಇನ್ನುಮುಂದೆ ಎಲ್ಲ ಸಂಬಂಧಗಳನ್ನೂ ಕಡಿದು ಕೊಳ್ಳಲು ತೀರ್ಮಾನಿಸಿದರು. ಈ ಕರ್ಮವನ್ನು ನೀರಿರುವ ಸ್ಥಳದಲ್ಲಿ, ಅಂದರೆ ಹೊಳೆ ಅಥವಾ ಕೆರೆಕಟ್ಟೆಗಳ ದಡದಲ್ಲಿ ನಡೆಸಬೇಕಾದ್ದು ನಿಯಮ. ಆದ್ದರಿಂದ ಕೆರೆಯ ದಡದಲ್ಲಿ ಇದನ್ನು ಆಚರಿಸಬೇಕೆಂದು ಯರೊ ವೈದಿಕ ಸೂಚಿಸಿದಾಗ, ಅಲ್ಲೇ ಕುಳಿತಿದ್ದ ಲಕ್ಷಮ್ಮ,

"ಛೆ, ಛೆ– ಇಂಥ ಪಾಪಿಗೆ ನೀರಿರೊ ಜಾಗದಲ್ಲಿ ಕರ್ಮ ಆಚರಿಸಬಾರದು. ಅವಳ ಮನೆ ಮುಂದೇನೆ ನಡೆಸಬೇಕು" ಎಂದು ಬಲವಾಗಿ ವಾದಿಸಿದಳು.

ಬ್ರಾಹ್ಮಣ ಸಮೂಹ,

"ಲಕ್ಷ್ಮಮ್ಮನೋರು ಹೇಳ್ತಿರೊ ಮಾತಿನಲ್ಲಿ ಅರ್ಥವಿದೆ. ಅವಳ ಮನೆ ಎದುರಿಗೆ ಆಚರಿಸಿದರೆ, ಊರಿನ ಎಲ್ಲಾ ಜನರೂ ನೋಡ್ತಾರೆ. ಊರಿನಲ್ಲಿ ಇಂಥಾದ್ದು ನಡೆಯಬಾರದು ಎಂದು ಸರ್ವರಿಗೂ ಮನದಟ್ಟಾಗತ್ತೆ" ಎಂದು ಒಪ್ಪಿತು.

ಆ ಸಭೆಯಿಂದ ಎದ್ದ ಹೋಗುವಾಗ ಲಕ್ಷಮ್ಮ,

"ಅವಳ ಜಲ್ಮಾನ ಒದ್ದೆ ಬಟ್ಟೇಲು ಒರಸಬಾರದು. ಬರಬಟ್ಟೇಲಿ ಒರೆಸ ಬೇಕು" ಎಂದು ಔಡು ಕಚ್ಚುತ್ತ ಎದ್ದು ಹೊದರು.

ಬ್ರಾಹ್ಮಣರು ರುಕ್ಮಿಣಿಗೆ ಘಟಸ್ಫೋಟ ಕರ್ಮ ಮಾಡಬೇಕೆಂದು ತೀರ್ಮಾನಿಸುತ್ತಿರುವಾಗ, ಕೃಷ್ಣಶಾಸ್ತ್ರಿಗಳು ದೇವರ ಕೋಣೆಯಲ್ಲಿ ಕುಳಿತು ದೇವರ ಧ್ಯಾನ ಮಾಡುತ್ತ ಚಿಂತೆಯಲ್ಲಿ ಮುಳುಗಿದ್ದರು. ವಿಧಿಬರಹವನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಮಾನವರಿಗೇ ಏಕೆ, ಹರಿಹರಬ್ರಹ್ಮಾದಿ ದೇವತೆಗಳಿಗೂ ಸಹ ಪ್ರಾಕ್ತನಕರ್ಮ ತಪ್ಪಿದ್ದಲ್ಲ, ಎಂಬ ಭಾವ ಸುಳಿಯಿತು. ತತ್‌ಕ್ಷಣ,

ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪಿ।
ಲಲಾಟಲಿಖಿತ ರೇಖ ಪರಿಮಷ್ಟುಂನ ಶಕ್ಯತೇ॥

–ಈ ಶ್ಲೋಕವನ್ನು ಕೊಂಚ ಗಟ್ಟಿಯಾಗೇ ಹೇಳಿಕೊಂಡರು. ನಂತರ ಹಾಗೇ ಚಿಂತನೆ ಮಾಡುತ್ತ ಕುಳಿತರು.... ಯಾವ ಯಾವ ಕರ್ಮವನ್ನ, ಕರ್ಮಫಲವನ್ನ, ಯಾರು ಯಾರು, ಯವ ಯಾವ ರೀತಿಯಿಂದ, ಎಲ್ಲೆಲ್ಲಿ, ಹೇಗೆ ಹೇಗೆ ಅನುಭವಿಸಬೇಕಾಗಿದೆಯೊ–ಹಾಗೆ ಹಾಗೆ, ಅದೇ ರೀತಿ, ನಾವು ಕರ್ಮಫಲವನ್ನು ಅನುಭರಸಬೇಕಾಗಿರುತ್ತದೆ, ಇದಕ್ಕೆ ಯಾರೂ ಹೊಣೆಯಲ್ಲ. ಇದರಲ್ಲಿ ಕೃತಿ ನಡೆದೂ ನಡೆಯದೆಯೂ, ನೋಡಿಯೂ ನೊಡದೆಯೂ,

ಮಾತನಾಡಿಯೂ ಮಾತನಾಡದೆಯೂ ಅಪವಾದ ದೋಷಗಳಿಗೆ ಪ್ರಾಪ್ತರಾಗಬಹುದು– ಎಂದು ಧರ್ಮಶಾಸ್ತ್ರದ ಕೆಲವು ಉಕ್ತಿಗಳನ್ನೂ ನೆನೆಸಿಕೊಂಡರು. ಅವರ ಸೋತ ಮನಸ್ಸು ಯುಕ್ತ ಪರಿಜ್ಞಾನವನ್ನು ಕಳೆದುಕೊಂಡು ಕರ್ಮಕ್ಕೆ ಶರಣಾಗಿತ್ತು...

ಬ್ರಹ್ಮಾಯೇನ ಕುಲಲವನ್ನಿಯಮಿತೋ
ಬ್ರಹ್ಮಾಂಡಭಾಂಡೋದರೇ।
ವಿಷ್ಣುರ್ಯೇನ ದಶಾವತಾರಗಹನೇ
ಕ್ಷಿಪ್ತೋ ಮಹಸಂಕಟೇ।
ರುದ್ರೋಯೇನ ಕಪಾಲಪಾಣಿಪುಟಕೇ
ಭಿಕ್ಷಾಟನಂ ಸೇವತೇ।
ಸೂರ್ಯೋಭ್ರಾಮ್ಯತಿ ನಿತ್ಯಮೇವ ಗಗನೇ
ತಸ್ಮೈನಮಃ ಕರ್ಮಣೇ॥

–ಹೀಗೆ ಕೃಷ್ಣಶಾಸ್ತ್ರಿಗಳು ಜಪ, ತಪ, ಧ್ಯಾನ, ಪೂಜೆ, ಪುರಸ್ಕಾರಗಳಿಂದ ತಮ್ಮ ತಾಪವನ್ನು ಮುಳಗಿಸಲೆತ್ನಿಸಿದರೆ, ರುಕ್ಮಿಣಿಯು ತನ್ನ ಭಯಂಕರ ಯಾತನೆಯನ್ನು ಮರೆಯಲು ಯಾವ ಆಸರೆಯೂ ಇಲ್ಲದೆ ನರಳುತ್ತಿದ್ದಳು. ಚಾವಡಿಯಿಂದ ಬಂದವಳೇ ಸರಸಿ ಕೇಳಿದ್ದಳು:

"ಲಕ್ಕನ್ನ ಯಾಕಕ್ಕ ಹಾಗೆ ಹೊಡದ್ರು?– ನನಗಂತೂ ನೋಡಕ್ಕೇ ಆಗಲಿಲ್ಲ. ಆಲೂನೆ ಬಂದುಬಿಡ್ತಮ್ಮ....."

ರುಕ್ಮಿಣಿಗೆ, ಹೇಗೆ ಆ ಕಂದನಿಗೆ ಉತ್ತರವೀಯಬೇಕೊ ತಿಳಿಯದೆ ಒಳಗೇ ಜೀವ ಮುಲುಮುಲುಗುಟ್ಟಿತು. ಕೇವಲ ಒಂದು ಮಗುವಿನಿಂದ ಮುಚ್ಚಿಡುವಷ್ಟು ಹೀನ ರಹ್ಯಸವಾಯಿತೆ ತನ್ನ ಬದುಕು, ಎಂದು ತನ್ನನ್ನೇ ಹಳಿದುಕೊಂಡಳು.

ಊಟ ಮಾಡಿ ಮಲಗುವ ಪದ್ಧತಿಯಂತೆ ಸರಸಿ 'ರಾಮಂ ಸ್ಕಂದಂ ಹನೂಮಂತಂ..." ಶ್ಲೋಕವನ್ನು ಗಟ್ಟಿಯಾಗಿ ಹೇಳಿದಳು. ತರುವಾಯ ಆ ಕೋಣೆಗೆ ಸರ್ಪದ ಪ್ರವೇಶವಾಗುವ ಮೊದಲು ರೂಢಿಯಾಗಿದ್ದ –'ಇಂದ್ರನ ಮನೆ ನಂದಾದೀವಗೆ ಇಂದು ಹೋಗಿ, ನಾಳೆ ಬಾ' ಹೇಳಿ, ಸರಸಿಯೂ ಮೂಲೆಯ ದೀಪಾಲೆಕಂಬದ ಮೇಲೆ ಹೊತ್ತಿಸಿಟ್ಟ ಹಣತೆಯನ್ನು ಉಫ್ ಎಂದು ಆರಿಸಿಬಿಟ್ಟಳು. ಒಡನೆಯೆ ಕೋಣೆಯನ್ನು ಗಕುಂ ಎಂದು ತುಂಬಿದ ಕತ್ತಲೆ ಅವಳೊಳಗೆ ಭೀತಿ ಹುಟ್ಟಿಸಿತು. "ಅಕ್ಕ, ಅಕ್ಕ–ದೀಪ ಯೋಯ್ತು ಕಣೆ...

ಹೆದರಿಕೆಯಾಗುತ್ತ" ಕಿರುಚಿದಳು. ಕೂಡಲೆ ಆರಿದ್ದ ದೀಪವನ್ನು ರುಕ್ಮಿಣಿಯು ಪುನಃ ಹಚ್ಚಿ, ಅವಳನ್ನು ತಟ್ಟುತ್ತಾ ಮಲಗಿಸಿದಳು. ಕಣ್ಣು ಮಿಟುಕಿಸುವಷ್ಟು ಜಾಗ್ರತೆ ಸರಸಿಯನ್ನು ನಿದ್ರೆ ಆವರಿಸಿತ್ತು. ರುಕ್ಮಿಣಿಗೆ ಮಾತ್ರ ನಿದ್ರೆ ಬಾರದು. ಮತ್ತೆ ಮತ್ತೆ ಲಕ್ಕನನ್ನು ಚಾವಡಿಯ ಮುಂದೆ ಕಂಬಕ್ಕೆ ಕಟ್ಟಿ ಹೊಡೆದ ದೃಶ್ಯವೂ ತಾನೇ ಸ್ವತಃ ಎದುರಿಗಿದ್ದು ನೋಡಿದಷ್ಟು ಸ್ಪಷ್ಟವಾಗಿ ಕಣ್ಣಿಂದೆ ಕುಣಿಯುವುದು. ಆ ಬೆತ್ತದ ಕೊಲಿನ ಏಟು ತನಗೇ ಬಿದ್ದು ಮೈಮೇಲೆಲ್ಲ ಬಾಸುಂಡೆ ಎದ್ದಂತೆ ನೋವು ಅನುಭವಿಸುವಳು.. ಈ ಯಮಯತನೆಯಿಂದ ಮುಕ್ತಿ ಎಂತು? ಎಂದು ಪರಿತಪಿಸುವಳು. ಪಾರಾಗುವ ದಾರಿಯೆ ಕಾಣದೆ ತಳಮಳದಿಂದ ಹೊರಳವಳು... ಹೀಗೆ, ಬೆಳಕಿಂಡಿಯಿಲ್ಲದ ಕೋಣೆಯ ಹೊಗೆಯಾಗಿ ಸುತ್ತುವ ಚಿಂತೆಯಿಂದ ಉಸಿರುಗಟ್ಟಿ ಇಡೀ ರಾತ್ರಿಯನ್ನು ಕಳೆದಳು.

ಬೆಳಿಗ್ಗೆ ವೆಂಕಣ್ಣ ಜೋಯಿಸರ ಮನೆಯಿಂದ ಎದ್ದ ಬಾಲಕರ ವೇದಘೋಷದೊಡನೆ ತಾನೂ ಎದ್ದ ನಿತ್ಯಕರ್ಮದಲ್ಲಿ ತೊಡಗಿದ್ದಳು. ಇಷ್ಟರಲ್ಲಿ ಒಂದು ವಿಚಿತ್ರ ಶಾಂತಿ ನೆಲೆಸಿದಂತಿತ್ತು. ಇಷ್ಟು ದಿನ ಸದಾ ದುಖಿಯಾಗಿರುತ್ತಿದ್ದ ರುಕ್ಮಿಣಿಯಲ್ಲಿ ಒಂದು ಸಮಾಧಾನದ ಪ್ರಶಾಂತತೆಯನ್ನು ಗಮನಿಸಿದ ಕೃಷ್ಣಶಾಸ್ತ್ರಿಗಳು, ಅದರ ಕಾರಣ ತಿಳಿಯದೆ ಅಚ್ಚರಿಪಡುತ್ತಿದ್ದರು. ಈ ದಿನ ಅವಳೇ ಹೂಗಳನ್ನು ಬಿಡಿಸಿ ತಂದು [ಈ ಕರ್ಮ ಆ 'ಸಂಗತಿ' ನಡೆದ ದಿನದಿಂದ ನಿಂತು ಹೋಗಿತ್ತು. ಶಾಸ್ತ್ರಿಗಳೇ ಹೂ ಬಿಡಿಸಿ ತರುವುದನ್ನು ಅಭ್ಯಾಸ ಮಾಡಿಕೊಂಡಿದ್ದರು.] ದೇವರಿಗೆ ಹೂಮಾಲೆ ಕಟ್ಟಿ ಇಟ್ಟಿದ್ದಳು. ಅವಳೇ ಶ್ರೀಗಂಧವನ್ನು ಪೂರ್ತಾ ತೇದು ಬೆಳ್ಳಿಯ ಬಟ್ಟಲಲ್ಲಿ ಎತ್ತಿ ಇಟ್ಟಿದ್ದಳು. ಮಂತ್ರಾಕ್ಷತೆಯನ್ನು ಸಿದ್ಧಗೊಳಿಸಿದ್ದಳು. ಶಾಸ್ತ್ರಿಗಳ ಸಂಧ್ಯಾವಂದನೆಗೆ ಹಿಂದಿನಂತೆಯೇ ಎಲ್ಲವನ್ನೂ ಅಣಿಮಾಡಿದ್ದಳು... ಭೀಮನಳ್ಳಿಯಿಂದ ಬಂದಾಗಿನಿಂದ ಅವಳು ಇದ್ಯಾವುದನ್ನೂ ಈ ದಿನದ ಮುತುವರ್ಜಿಯಿಂದ ಮಾಡಿದ್ದಿಲ್ಲ!– ಶಾಸ್ತ್ರಿಗಳು ಕಂಡೂ ಕಾಣದಂತೆ ಇದೆಲ್ಲವನ್ನೂ ಗಮನಿಸುತ್ತಿದ್ದರು. ಸರಸಿಯನ್ನು ಎಬ್ಬಿಸಿ, ಅವಳು ಬೇಡಬೇಡವೆಂದರೂ ಮುದ್ದು ಮಾಡಿ ಒಲಿಸಿಕೊಂಡು ಅವಳಿಗೆ ಸೊಗಸಾಗಿ ಅಭ್ಯಂಜನ ಮಾಡಿಸಿದ್ದಳು. ಸ್ನಾನ ಮಾಡಿಸಿದ್ದಳು. ಅನಂತರ ಬಾಳೆಹಣ್ಣು, ದೀಪದ್ರಾಕ್ಷಿಗಳ ಸಹಿತ ನೀರು ಬೆರಸದೆ, ಕೇವಲ ಹಾಲಿನಲ್ಲೆ ತಯಾರಿಸಿದ ಸಜ್ಜಿಗೆಯನ್ನು ದೇವರಿಗೆ ನೈವೇದ್ಯವಾದ ಬಳಿಕ, ಒಲ್ಲೆ ಒಲ್ಲೆನೆಂದರೂ ಬಿಡದೆ, ತನ್ನ ತೊಡೆಯ ಮೇಲೆ ಸರಸಿಯನ್ನು ಕೂರಿಸಿಕೊಂಡು, ಎಂದಿಲ್ಲದ ಅಕ್ಕರೆಯಿಂದ ಅದನ್ನು ತಿನ್ನಿಸಿದ್ದಳು. ಸಾಸ್ತ್ರಿಗಳ ತಟ್ಟೆಯಲ್ಲೂ ಹಿಂದೆ ನೀಡುತ್ತಿದ್ದ ಅಭ್ಯಾಸದಂತೆ, ಆಗ ನೀಡುತ್ತಿದ್ದದಕ್ಕೂ ಮೀರಿದ

ಸಜ್ಜಿಗೆಯ ಮೊತ್ತ. [ಶಾಸ್ತ್ರಿಗಳು ಅದನ್ನು ಸೇವಿಸುವುದನ್ನು ಎಂದೋ ಬಿಟ್ಟಿರುವುದನ್ನೂ ಮರೆತು]

ರುಕ್ಮಿಣಿಯ ಈ ಎಲ್ಲ ಚರ್ಯೆಗಳಿಂದ ಮೊದಮೊದಲು ಚಕಿತರಾದರೂ, ಕಾಲಕ್ರಮೇಣ ಅವಳಿಗೆ ಆರಂಭದ ನೋವು ಕಡಿಮೆಯಾಗಿರಬೇಕೆಂದು ಶಾಸ್ತ್ರಿಗಳು ಊಹಿಸಿದರು. ಅವರು ಬೀದಿಗೆ ಇಳಿಯುತ್ತಿದ್ದಂತೆ, ರುಕ್ಮಿಣಿಯು ಧಾವಿಸಿ ಬಂದು, ಬಾಳೆ ಎಲೆ ತಗೊಂಡು ಬನ್ನಿ ಮಾವಯ್ಯ, ಎನ್ನುತ್ತಿದ್ದಂತೆ, ವೆಂಕಣ್ಣ ಜೋಯಿಸರ ಜಗಲಿಯ ಮೇಲೆ ನೆರೆದ ಬ್ರಾಹ್ಮಣ ಪ್ರಮುಖರ ಕೊನೆಕೊನೆಯ ಮಾತುಗಳು ರುಕ್ಮಿಣಿಯ ಕಿವಿಗೆ ಬಿದ್ದವು:

"...... ಆದ್ದರಿಂದ ರುಕ್ಮಿಣಿಗೆ ಘಟಸ್ಫೋಟಮಾಡಿ, ಮಂಡೆ ಬೋಳಿಸಿ, ಕತ್ತೆಯ ಮೇಲೆ ಕೂರಿಸಿ, ಊರು ಬಿಟ್ಟು ಓಡಿಸಬೇಕು..... ನಮ್ಮ ಇಡೀ ಬ್ರಾಹ್ಮಣ ಸಮುದಾಯದ ಮಾನವನ್ನ ಕಳೆದಿರತಕ್ಕ ಆ ಪಾಪಿಗೆ ಇದೊಂದೇ ತಕ್ಕ ಪ್ರಾಯಶ್ಚಿತ್ತ......"

ಈ ಮಾತುಗಳನ್ನು ಆಲಿಸಿ, ಗಾಬರಿಗೊಂಡ ಶಾಸ್ತ್ರಿಗಳು ಆತಂಕದಿಂದ ರುಕ್ಮಿಣಿಯತ್ತ ದೃಷ್ಟಿ ಹೊರಳಿಸಿದರು. ವಿಷಣ್ಣಛಾಯೆ ಒಂದು ಕ್ಷಣ ಅವಳ ಮುಖವನ್ನು ಕವಿಯಿತು. ಮರುಗಳಿಗೆಯಲ್ಲಿಯೇ ಹಿಂದಿನ ಪ್ರಶಾಂತತೆ ಮೂಡಿತು. ಏನೂ ಆಗಲಿಲ್ಲವೇನೋ ಎಂಬಂತೆ ಸಮಾಧಾನವಾಗಿ ಒಳಗೆ ನಡೆದಳು. ಶಾಸ್ತ್ರಿಗಳು ಮಾತ್ರ ಬ್ರಾಹ್ಮಣಸಮೂಹದ ತೀರ್ಮಾನದಿಂದ ಕಂಗೆಟ್ಟರು. ಇಷ್ಟು ಕಾಲ ಅವರಲ್ಲಿ ಭದ್ರವಾಗಿ ಮನೆಮಾಡಿದ್ದ ಚಿತ್ತಸ್ಥೈರ್ಯ, ಬ್ರಾಹ್ಮಣರ ತೀರ್ಪನ್ನು ಕೇಳಿ ಜರ್ಝರಿತವಾಯಿತು.....

ರುಕ್ಮಿಣಿಗೆ ಘಟಸ್ಫೋಟ ಮಾಡಲು ಅವರು ನಿರ್ಧರಿಸಿದ್ದು ಶಾಸ್ತ್ರಿಗಳಿಗೆ ಅಂತಹ ಆತಂಕದ ವಿಷಯವೇನೂ ಆಗಿರಲಿಲ್ಲ! ಅವರು ಅದನ್ನು ನಿರೀಕ್ಷೆ ಮಾಡಿಯೇ ಇದ್ದರು. ಆದರೆ ಅವಳಿಗೆ ಮಂಡೆ ಬೋಳಿಸಿ, ಕತ್ತೆಯ ಮೇಲೆ ಕೂರಿಸಿ, ಊರು ಬಿಟ್ಟು ಓಡಿಸಬೇಕೆಂಬ ತೀರ್ಮಾನ ಅವರನ್ನು ಕುಕ್ಕಿತು. ಜೊತೆಗೆ ಅವರು ಅದೇ ದಾರಿಯನ್ನು ಹಿಡಿದು ತೋಟಕ್ಕೆ ತೆರಳುವಾಗ, ಕೇಶವಯ್ಯನು ಶಾಸ್ತ್ರಿಗಳಿಗೆ ಕೇಳಿಸಲೆಂದೇ "ಒಂದು ಪಕ್ಷ ಶಾಸ್ತ್ರಿಗಳು ಅಡ್ಡಿ ಪಡಿಸಿದರೆ, ಅವರನ್ನು ಕಟ್ಟಿಹಾಕಿ, ಈ ಕಾರ್ಯಾನ ಪೂರ್ಣಗೊಳಿಸಬೇಕು" ಎಂದು ಜಗಲಿಯ ಮೇಲಿನಿಂದ ಮಾತನ್ನು ಉಡಾಯಿಸಿದ್ದ. ತೋಟದಿಂದ ಬಾಳೆಲೆಯ ಕಟ್ಟು ಹಿಡಿದು ಮನೆಗೆ ಬರುವಾಗಲೂ ಅವರನ್ನು ಇದೇ ಕಳಕಳ ಬಾಧಿಸುತ್ತಿತ್ತು...

ಇದೇ ವ್ಯಾಕುಲದೊಡನೆ ಶಾಸ್ತ್ರಿಗಳು ಮನೆಯೊಳಗೆ ಬಂದರು. ಇಷ್ಟು ದಿನ ಹಿತ್ತಾಳೆ ತಂಬಿಗೆಯಲ್ಲಿ ನೀರು ತುಂಬಿಟ್ಟು ಮರೆಯಾಗುತ್ತಿದ್ದವಳು, ಈ ದಿನ ಅವರು ಕೈಕಾಲು ತೊಳೆಯಲು ರುಕ್ಮಿಣಿಯೇ ನೀರು ಕೊಟ್ಟಳು. ಶಾಸ್ತ್ರಿಗಳು ಪೂಜಾದಿಗಳನ್ನು ಮುಗಿಸಿ ಸರಸಿಯೊಡನೆ ಮಧ್ಯಾಹ್ನ ಭೋಜನಕ್ಕೆ ಕುಳಿತಾಗ ಚಿತ್ರಾನ್ನ, ಬೂದುಗುಂಬಳಕಾಯಿ ಮಜ್ಜಿಗೆಹುಳಿ, ಆಂಬೋಡೆ, ಸೌತೆಕಾಯಿ ಕೋಸುಂಬರಿ, ಬದನೆಕಾಯಿ ಗೊಜ್ಜು, ಗಸಗಸೆ ಖೀರು ಇತ್ಯಾದಿಗಳನ್ನು ಗಮನಿಸಿ ಸೋಜಿಗಪಟ್ಟರು. ಅಂಥ ದುಃಖದ ಸಂದರ್ಭದಲ್ಲೂ, "ಇದೆಲ್ಲ ಯಾಕೆ ಮಾಡಿದೆ?" ಕೇಳಿದರು.

"ನೆನ್ನೆ ಪೂರ್ಣಿಮ ಗಲಾಟೆ ಇತ್ತಲ್ಲ. ಏನೂ ಮಾಡಲಿಕ್ಕೆ ಆಗಲಿಲ್ಲ. ಅದಕ್ಕೆ ಈ ದಿನ ಅದರ ನೆನಪಿಗಾಗಿ ಇಷ್ಟಾದರೂ ಇರಲಿ ಎಂದು ಮಾಡಿದೆ" ಎಂದು, ಸರಸಿಗೆ ಇನ್ನಷ್ಟು ಗಸಗಸೆ ಖೀರನ್ನು ಅವಳ ಖಾಲಿಯಾಗಿದ್ದ ಬಟ್ಟಲಿಗೆ ತುಂಬಿ ಹಿಂದಿರುಗಿದಾಗ, ಅವಳು ತಲೆಯಿಂದ ಸ್ನಾನ ಮಡಿ ಆತುರಕ್ಕೆ ಹೇಗೊ ಹಾಕಿದ್ದ ಗಂಟು ಬಿಚ್ಚಿಹೋಗಿ, ಅಳ ತಲೆ ಕೂದಲು ಅವಳ ಬೆನ್ನ ಮೇಲೆಲ್ಲ ಹರಡಿತು. ಅವಳು ಕೋಣೆ ಹೊಕ್ಕು ಸರಸರನೆ ಪುನಃ ಕೂದಲನ್ನು ಒಟ್ಟುಗೂಡಿಸಿ ಈ ಬಾರಿ ಬಿಗಿಯಾಗಿ ಗಂಟು ಹಾಕಿದಳು... ಆದರೆ ಅವಳ ಬಿಚ್ಚಿದ ಮುಡಿಯನ್ನು ಕಂಡ ಶಾಸ್ತ್ರಿಗಳ ಮನದಲ್ಲಿ ಭಾವನೆಗಳ ಒಂದು ಗಂಟೇ ಬಿಚ್ಚಿಕೊಂಡಿತು...

ಊಟ ಮುಗಿದು ಕೈ ತೊಳೆದು ಎದ್ದರು. ಊಯ್ಯಾಲೆಯ ಮೇಲೆ ಕುಳಿತರು. ಚಿಂತೆ ಕಾಡುತ್ತಲೆ ಇತ್ತು:

'ನನ್ನ ಮಡದಿಯನ್ನು ಸುಟ್ಟು ಬಂದ ಬಳಿಕೆ ನನ್ನ ಕಾಮವನ್ನೂ ಸುಟ್ಟೆನೆಂದು ಬಗೆದಿದ್ದೆ. ಬಹುಕಾಲ ಅದೇ ರೀತಿ ಅಸಾಧಾರಣ ಸಂಯಮದಿಂದ ನನ್ನ ಬ್ರಹ್ಮಚರ್ಯವನ್ನು ಪಾಲಿಸುತ್ತ ಊರಿನವರಿಂದ ಶಹಬಾಸ್‌ಗಿರಿ ಪಡೆದಿದ್ದುದೂ ಉಂಟು... ಆದರೆ ತುಂಬುಹರೆಯದ ಒಂದು ಹೆಣ್ಣು ಒಂಟಿಯಾಗಿ ಮನೆಯಲ್ಲಿ ಉಳಿದಾಗ, ನಾನು ಬಹುಪ್ರಯಾಸದಿಂದಲೆ ವಿಧಿಸಿಕೊಂಡಿದ್ದ ದಿಗ್ಬಂಧನಗಳೆಲ್ಲ ಅನಿರೀಕ್ಷಿತವಾಗಿ ಒಂದೊಂದಾಗಿ ಕಳಚಿಬಿದ್ದವು!... ನಾನು ಇನ್ನೂ ಒಂದು ತಪ್ಪು ಮಾಡಿದೆನೊ, ಏನೊ?– ಕೇರಿಯ ಬ್ರಾಹ್ಮಣರು ಅವಳ ಕೇಶಮುಂಡನ ಮಾಡಲು ಹವಣಿಸಿದಾಗ ನಾನು ವಿರೋಧಿಸಬಾರದಿತ್ತೇನೋ?... ತುರವಾಯ ನನ್ನ ತಂಗಿ ಸುಶೀಲ ಒಂದು ರಾತ್ರಿ ಇವಳ ತಲೆಗೂದಲನ್ನು ಮರೆಮೊಸದಲ್ಲಿ ಕತ್ತರಿಸಲು ಹೋದಾಗ, ನಾನು ಅಡ್ಡಿಪಡಿಸಬಾರದಿತ್ತೇನೋ?' –ಹೀಗೆ ಸಾವಿರ ಚಿಂತೆಗಳ ಚಿತೆಯಲ್ಲಿ ಅವರ ಅಂತರಂಗ ಬೇಯುತ್ತ, ರಾತ್ರಿ ದಿಂಬಿಗೆ ತಲೆ ಕೊಟ್ಟ ಕ್ಷಣದಲ್ಲೇ ನಿದ್ರೆಯು ಅವರ ಎಚ್ಚರದಪ್ಪಿಸಿತ್ತು.

## ೩೫

ಮರುದಿನದ ಪ್ರಾತಃಕಾಲ ಎಂದಿನಂತೆ ಸೂರ್ಯೋದಯಕ್ಕೆ ಮುನ್ನವೇ ಕೃಷ್ಣಶಾಸ್ತ್ರಿಗಳು ಎದ್ದು ತೋಟಕ್ಕೆ ಹೋದರು. ಎಂದಿನಂತೆ ಹರಬಿಗಳಲ್ಲಿ ಕೊಳದ ನೀರನ್ನು ಗಿಡಗಳಿಗೆ ಊಡಿದರು. ಎಂದಿನಂತೆ ಕೊಳದಲ್ಲಿ ಸ್ನಾನ ಅಹ್ನೀಕಗಳನ್ನು ಪೂರೈಸಿ, ಸೂರ್ಯನಾರಾಯಣನಿಗೆ ಅರ್ಘ್ಯ ಕೊಟ್ಟು, ಕೆಲವಾರು ದಿನಗಳಿಂದ ನಡೆದುಬಂದ ಪದ್ಧತಿಯಂತೆ ;ಒದ್ದೆ ಪಂಚೆಯಲ್ಲಿಯೆ ಮನೆಗೆ ಹಿಂದಿರುಗಿದರು. ಆದರೆ ತೋಟದಿಂದ ಈ ದಿನ ಅವರು ಸ್ವಲ್ಪ ಜಾಗ್ರತೆಯಾಗಿಯೇ ಬಂದಿದ್ದರು. ಏಕೆಂದರೆ ಕೇರಿಯ ಬ್ರಾಹ್ಮಣರು ರುಕ್ಮಿಣಿಗೆ ಇದೇ ಬೆಳಿಗ್ಗೆ ಘಟಸ್ಫೋಟ ಮಡುವವರಿದ್ದರು! ಆ ಕರ್ಮವನ್ನು ಅವರು ಆರಂಭಿಸುವುದಕ್ಕೂ ಮುನ್ನ ತಾವು ಮನೆ ಸೇರಿಬಿಡಬೇಕು. ಅವರು ಎಲ್ಲಿ ಬೇಕದರೂ ಘಟಸ್ಫೋಟ ಮಾಡಿಕೊಳ್ಳಲಿ. ಆದರೆ ಅವರು ರುಕ್ಮಿಣಿಗೆ ತಲೆ ಬೋಳಿಸಿ, ಕತ್ತೆಯ ಮೇಲೆ ಕೂರಿಸಿ, ಊರಿನಿಂದ ಓಡಿಸುವುದಕ್ಕೆ ಮಾತ್ರ ಅವಕಾಶವೀಯಬಾರದು... ನನ್ನ ರೆಟ್ಟೆಯಲ್ಲಿ ಇನ್ನೂ ಶಕ್ತಿ ಕುಂದಿಲ್ಲ. ಈ ಹಾರುವಮಂದಿ ನಾನು ಪ್ರತಿಭಟಿಸಿದರೆ, ನನ್ನನ್ನು ಕಟ್ಟಿಹಾಕಿ ಅವಳ ತಲೆ ಬೋಳಿಸುತ್ತಾರಂತೆ!.... ಬರಲಿ, ಇವರು ಅದೆಷ್ಟು ಮಂದಿ ಬರುತ್ತಾರೋ ಬರಲಿ. ಒಬ್ಬೊಬ್ಬರನ್ನು ಸದೆಬಡಿದು ಅವರು ಹುಟ್ಟಿದ ದಿನ ಕಾಣಿಸಿಬಿಡುತ್ತೇನೆ!.... ಕೃಷ್ಣಶಾಸ್ತ್ರಿಯನ್ನು ಕೆಣಕುವುದು ಈ ಶೋಭೆಮುಂಡೇಗಂಡರು ಹೋಳಿಗೆ, ಆಂಬೋಡೆ, ಬೂದುಗುಂಬಳ ಮಜ್ಜಿಗೆಹುಳಿ, ಚಿರೋಟಿಗಳನ್ನು ಚಪ್ಪರಿಸಿ ಹೊಟ್ಟೆಗಿಳಿಸುವಷ್ಟು ಸುಲಭವಲ್ಲ ಎನ್ನುವುದನ್ನು ಸ್ಪಷ್ಟವಾಗಿ ತೋರಿಸಿಕೊಡುತ್ತೇನೆ... ಇವರೆಲ್ಲ ಮಾತಿನಲ್ಲಿ ಶೂರರು. ಒಂದೆರಡು ಬಿದ್ದರೆ ಆ ಪೌರುಷವೆಲ್ಲ ಕ್ಷಣಾರ್ಧದಲ್ಲಿ ಧೂಳೀಪಟವಾಗುತ್ತದೆ. ಅವರ ಗುಣ ನನಗೆ ತಿಳಿಯದೆ?... ಶಾಸ್ತ್ರಿಗಳು ಆ ಬ್ರಾಹ್ಮಣರ ಗುಂಪನ್ನು ಮನಸ್ಸಿನಿಂದ ತಳ್ಳಿಹಾಕಿದರು. ಬೇರೆ ಆಲೋಚನೆ ಅವರ ಚಿತ್ತವನ್ನು ಆಕ್ರಮಿಸಿತು... ರುದ್ರಪಟ್ಟಣದ ವೈಣಿಕ ಶ್ಯಾಮ ಹಿಂದೆ ರುಕ್ಮಿಣಿಯನ್ನು ವಿವಾಹವಾಗಬೇಕೆಂದು ಬಯಸಿದ್ದನಲ್ಲವೆ?... ಆಗ ಸಾವಿತ್ರಿಯ ವಿರೋಧದ ಜೊತೆಗೆ ರುಕ್ಮಿಣಿಯೂ ಆತನನ್ನು ಲಗ್ನವಾಗಲು ಒಪ್ಪದೆ ನಿರಾಕರಿಸಿದ್ದಳು. ತಾರುಣ್ಯದಲ್ಲಿ ಯಾವುದು ಹಿತ, ಯವುದು ಅಹಿತ ಎಂಬುದು ನಮಗೇ ತಿಳಿದಿರುವುದಿಲ್ಲ. ರುಕ್ಮಿಣಿಗಾದರೂ ಆ ಸಮಯದಲ್ಲಿ ಹಾಗೆ ಆಗಿರಬೇಕು..... ವಿಚಿತ್ರವೆಂದರೆ ಆ ಶ್ಯಾಮನಿಗೆ ರುಕ್ಮಿಣಿಯ ಮೇಲಿನ ಮೋಹ ಹೋದಂತೆ ತೋರುವುದಿಲ್ಲ. ಅವನು ಮೈಸೂರಿನಿಂದಲೋ ರುದ್ರಪಟ್ಟಣದಿಂದಲೊ ನಮ್ಮ ಊರಿಗೆ ಮೇಲಿಂದಮೇಲೆ ಬರುತ್ತಲೇ ಇರುತ್ತಾನೆ. ರುಕ್ಮಿಣಿಯ ಸಂಗಡ

ಮಾತಾಡುವಾಗ ಅವನ ನೋಟ ಅಪೂರ್ವ ಮಾರ್ದವತೆಯಿಂದ ತೇಲುವುದನ್ನು ತಾನು ಗಮನಿಸಿಲ್ಲವೆ?..... ಅಂದರೆ ರುಕ್ಮಿಣಿಯ ಬಗ್ಗೆ ಅವನ ಪ್ರೇಮೋನ್ಮಾದ ಹಿಂದಿನಂತೆಯೇ ಉಳಿದಿದೆ ಎಂದಾಯಿತು... ನಮ್ಮ ವಿಶ್ವ ಮೃತನಾದ ಹತ್ತು ಹನ್ನೊಂದು ತಿಂಗಳಲ್ಲೆ ರುಕ್ಮಿಣಿಯು ಈಗಲೂ ಇಚ್ಛಿಸಿದರೆ ತಾನು ಅವಳನ್ನು ಲಗ್ನವಾಗಲು ಸಿದ್ಧ ಎಂದು ಶ್ಯಾನುಭೋಗರ ಸಂಗಡ ಹೇಳಿಕಳಿಸಿರಲಿಲ್ಲವೆ?– ಆಗಲೂ ರುಕ್ಮಿಣಿಯು ಅವನ ಪ್ರೇಮಹಸ್ತವನ್ನು ಕೋಪದಿಂದಲೆ ನಿರಾಕರಿಸಿರಲಿಲ್ಲವೆ?... ಆದರೆ ಬದಲಾದ ಇಂದಿನ ಪರಿಸ್ಥಿತಿಯಲ್ಲಿ ಅವಳು ಬದುಕಿ ಉಳಿಯಬೇಕಾದರೆ, ಶ್ಯಾಮನನ್ನು ಕೂಡಿಕೊಳ್ಳುವುದೊಂದೇ ಈಗ ಉಳಿದಿರುವ ಮಾರ್ಗವಲ್ಲವೇ?– ಈಗಲೂ ರುಕ್ಮಿಣಿ ಒಪ್ಪಿದರೆ, ಶ್ಯಾಮ ಅವಳ ಕೈ ಹಿಡುದು ತನ್ನ ಮನೆ ತುಂಬಿಕೊಳ್ಳಲು ಹಿಂಜಿರಿಯಲಾರ... ಈ ಆಲೋಚನೆ ಬಂದೊಡನೆಯೇ ಥೂ ಎಂದು ತಮ್ಮ ಬಗ್ಗೆಯೇ ಶಾಸ್ತ್ರಿಗಳಿಗೆ ಹೆಸಿಗೆಯಾಯಿತು. ತನ್ನ ಪಾಪದ ಹೊರೆಯನ್ನು ಇಳುಕಲು ಆ ನಿಷ್ಕಳಂಕ ಮುಗ್ಧನನ್ನು 'ಹೊರೆಕಲ್ಲು' ಮಾಡಿಕೊಳ್ಳುವುದೇ?... ನನ್ನೊಳಗೆ ಈ ನೀಚ ಭಾವನೆ ಯಾಕಾದರೂ ಮೊಳೆಯಿತೊ!... ಛಿ, ಛಿ. ನಾನು ಮಾಡಿದ ಪಾಪಕ್ಕೆ ಇನ್ನೊಬ್ಬರನ್ನು ಎಂದೆಂದಿಗೂ ಪರಿಹಾರಪಶುವಾಗಿ ಉಪಯೋಗಿಸಬಾರದು. ನನ್ನ ಪಾಪಕರ್ಮಕ್ಕೆ ನಾನೇ ಹೊಣೆಗಾರನಾಗಿ ನಿಲ್ಲಬೇಕು!....

ಇದೇ ವಿಚಾರದ ಗುಂಗಿನಲ್ಲಿ ಮುಳುಗಿ ಏಳುತ್ತ, ಕೃಷ್ಣಶಾಸ್ತ್ರಿಗಳು ಗೊದಮೊಟ್ಟೆ ಕಟ್ಟನ್ನು ಹೊತ್ತು ಮನೆಯೊಳಗೆ ಕಾಲಿಟ್ಟರು. ಮನೆ ನಿಶ್ಯಬ್ದವಾಗಿತ್ತು. ಅವರು ಒಳಗೆ ಬಂದೊಡನೆಯೆ, ಕೈಕಾಲುಗಳಿಗೆ ನೀರು ಕೊಡಲು ಬರುತ್ತಿದ್ದ ರುಕ್ಮಿಣಿಯು ಇಂದೇಕೆ ಬರಲಿಲ್ಲ? ಕೇರಿಯ ಬ್ರಾಹ್ಮಣರ ಘಟಸ್ಫೋಟದ ತೀರ್ಮಾನ ಕೇಳಿ ಖೇಗೊಂಡು ಅಡಿಗೆ ಕೋಣೆಯಲ್ಲಿ ಒಬ್ಬಳೇ ಕುಳಿತು ಕಂಬನಿ ಸುರಿಸುತ್ತಿರಬೇಕು. ಆದರೆ ಸರಿಸಿ ಕಾಣುತ್ತಿಲ್ಲವಲ್ಲ? ಎಂದು, ಗೊದಮೆಟ್ಟೆಯ ಕಟ್ಟನ್ನು ಅಂಗಳದ ಒಂದು ಮೂಲೆಗೆ ಒಗೆದು, ಅವರಿಬ್ಬರೂ ಮಲಗುವ ಕೋಣೆಯೊಳಗೆ ಇಣಿಕಿದರು. ಸರಸಿ ಇನ್ನೂ ಮಲಗೇ ಇದ್ದಳು. ರುಕ್ಮಿಣಿಯೇಕೆ ಈ ದಿನ ಇವಳನ್ನಿನ್ನೂ ಎಬ್ಬಿಸಿಲ್ಲ?– ನೋಡೋಣವೆಂದು ಅಡಿಗೆಕೋಣೆಯಲ್ಲಿ ಬಗ್ಗಿ ನೋಡಿದರು. ರುಕ್ಮಿಣಿ ಅಲ್ಲೂ ಕಾಣಲಿಲ್ಲ!... ಅವಳಿಗೆ ವಿಪರೀತ ಜುಗುಪ್ಸೆಯಾಗಿ ಯವ ಕೆಲಸ ಮಡಲೂ ಮನಸ್ಸಿಲ್ಲದೆ, ಯಾವುದೊ ಮೂಲೆ ಹಿಡಿದು ಕುಳಿತರಬೇಕು... ಈ ಭಾವನೆಯಿಂದ ಮನೆಯನ್ನೆಲ್ಲ ಶೋಧಿಸಿದರು. ಅವಳು ಎಲ್ಲೂ ಕಾಣಲಿಲ್ಲ!... ಹಿತ್ತಿಲ ಬಾಗಿಲು ತೆರೆದಿತ್ತು. ಕೋಟ್ಟಿಗೆಯಲ್ಲಿ

ಹಾಲು ಕರೆಯುತ್ತಿರಬಹುದು ಎಂದು ಅಲ್ಲಿ ಹೊಗಿನೋಡಿದರು. ಅಲ್ಲಿ ಕಸ ಹಕಿ, ದನಗಳನ್ನು ಕಾಡಿಗೆ ಅಟ್ಟಿಕೊಂಡು ಹೋಗಲು ತಾವು ನೇಮಿಸಿಕೊಂಡಿದ್ದ ಹೊಲೆಯರ ಹುಡುಗ ಸೊಸಿಯ, ಕೊಟ್ಟಿಗೆಯ ಕಲ್ಲುಕಂಬವೊಂದನ್ನೊರಗಿ ತೂಕಡಿಸುತ್ತಿದ್ದ.

ಶಾಸ್ತ್ರಿಗಳು "ಸೊಸಿಯ–" ಎಂದು ಕೂಗಿದರು.

ಹುಡುಗ ಬೆಚ್ಚಿ ಕಣ್ಣುಹೊಸಗುತ್ತ ಎದ್ದುನಿಂತ.

"ಅಮ್ಮಾವರು ಹಾಲು ಕರೆಯೋಕೆ ಇನ್ನೂ ಬರಲಿಲ್ಲವೇನೊ?–" ಆತಂಕದಿಂದ ಕೇಳಿದರು.

"ಇಲ್ಲ, ಸೋಮಿ. ನಾನೂವೆ ವೋಟೋತ್ತಿಗೇ ಬಂದು, ದನ, ಎಮ್ಮೆ, ಎತ್ತುಗಳ್ನೆಲ್ಲ ವೊಡಕಂಡೋಗಿ ಇತ್ತಲ ಗೂಟಗಳ್ಗೆ ಕಟ್ಟಾಕಿ ಬಂದು, ಕಸ ಬೊಳುದು ತಿಪ್ಪೆಗಕಿ, ಮಂತೆ ಕರೆಯೋ ಹಸ, ಎಮ್ಮೆಗಳ ಅಟ್ಟಿಗಂಬಂದು ಕಾಯ್ತಾ ಕುಂತೆ. ಅಮ್ಮಾರು ಬರನಿಲ್ಲ. ಹಿತ್ತಲ ಬಾಕ್ಲು ತೆಗುದಿತ್ತು. ಈಗ ಬತ್ತಾರೆ, ಆಗ ಬತ್ತಾರೇಂತ ಕಾದೂ ಕಾದೂ ಸಾಕಾಯ್ತು. ಅಂಗೇ ಈ ಕಂಬಕ್ಕೆ ವರಿಕ್ಕಂಡೆ. ಬಡ್ಡೀಹೆತ್ತ ನಿದ್ದೆ ಜೋಂಪು ಅಂಗೇ ಎಳುದು ಬುಡ್ತು– ಅಮ್ಮಾರ ಕರುದುಬುಡಿ ಮಂತೆ. ಹಸೀನ ಕರ ಬುಟುಕಳ್ಳಿ–" ಎಂದು ಅವಸರಪಡಿಸಿದ ಸೊಸಿಯ.

ಶಾಸ್ತ್ರಿಗಳು ಈಗಲೀಗ ಅವಾಕ್ಕಾದರು!... ರುಕ್ಮಿಣಿ ಮನೆಯ ಒಳಗಂತೂ ಇಲ್ಲ. ಹಿಂದಿನ ಬಾಗಿಲು ತೆರೆದಿದೆ. ಅವಳು ಕೊಟ್ಟಿಗೆಯಲ್ಲೂ ಇಲ್ಲ–ಬೇರೆ ಎಲ್ಲಿ ಹೋಗಲು ಸಾಧ್ಯ?...

ಬ್ರಾಹ್ಮಣರ ಘಟಸ್ಫೋಟದ ಬೆದರಿಕೆಯಿಂದ ಮನಸ್ಸು ಕೆಟ್ಟಿ ಏನಾದರೂ ಕೆರೆ, ಬಾವಿ–ಎಂಬ ಯೋಚನೆ ಬಂದು, ಮುಂದೆ ಅವರ ಮನಸ್ಸು ಚಿಂತನೆ ಮಡುವ ತನ್ನ ಕ್ರಿಯಶೀಲತೆಯನ್ನು ತಟಸ್ಥವಾಯಿತು......

*　　　*　　　*　　　*

ಶಾಸ್ತ್ರಿಗಳು ಹೀಗೆ ರುಕ್ಮಿಣಿಯು ಎತ್ತ ಹೋದಳೋ ಎಂಬ ಚಿಂತೆಯಲ್ಲಿ ಮುಳುಗಿರುವಾಗ, ಅವರ ಮನೆಯ ಹೊರಗೆ ರುಕ್ಮಿಣಿಯ ಗಂಡನ ಸಪಿಂಡರು, ಸಮಾನೋದಕರು, ಹಾಗೂ ಬಾಂಧವರು ಸೇರಿ, ರುಕ್ಮಿಣಿಯ ವಿರುದ್ಧ ಘಟಸ್ಫೋಟ ಕರ್ಮವನ್ನು ಆಚರಿಸುತ್ತಿದ್ದರು. ವೆಂಕಣ್ಣಜೋಯಿಸರ ಪ್ರಕಾರ ಈ ಘಟಸ್ಫೋಟ ಕರ್ಮವನ್ನು ಎರಡು ಕಾರಣಗಳಿಗಾಗಿ ಆಚರಿಸುತ್ತಿದ್ದರು. ಒಂದೊ ಪಾತಕಿ ಮಾಡಿದ ಪಾಪಕರ್ಮದಿಂದ ಈ ಸಪಿಂಡರು, ಸಮಾನೋದಕರು, ಹಾಗು ಬಂಧುಬಾಂಧವರು ಮುಕ್ತರಾಗುವ ಬಯಕೆ. ಪಾತಕಿಗೆ ಜನ್ಮಾಂತರಗಳಲ್ಲಿ

ಪಾಪನಿವಾರಣೆಯಾಗಲಿ, ಎಂಬುದು ಇನ್ನೊಂದು ಇಚ್ಛೆ.

ಸುಬ್ಬಾವಧಾನಿಗಳ ಮಗ ಸುಬ್ರಹ್ಮಣ್ಯನ ಕೆಲಸದಾಳು ಸಾಕಿಯ ಕೈಯಿಂದ ಒಂದು ಘಟದಲ್ಲಿ ಅಶುದ್ಧವಾದ ನೀರು ತರಿಸಿದ್ದರು. ಹಾಗೆ ಆ ಸೇವಕಿಯು ಅಶುದ್ಧ ಜಲ ತುಂಬಿ ತಂದ ಘಟವನ್ನು, ತುದಿ ಕತ್ತಿರಿಸದ ದರ್ಭೆಗಳ ಹಾಸಿನ ಮೇಲೆ ಇಡುವಂತೆ ಮಾಡಿದರು. ಆ ಕ್ರಿಯೆಯು ಮುಗಿದ ಬಳಿಕ, ಆ ಬಂದುಬಾಂಧವರೆಲ್ಲರೂ ತಂತಮ್ಮ ಶಿಖೆಗಳನ್ನು ಬಿಚ್ಚಿದರು. ಜನಿವಾರವನ್ನು ಎಡಭಾಗಕ್ಕೆ ಬದಲಿಸಿ, ಪ್ರಾಚೀನಾವೀತಿಯಾಗಿ ಹಾಕಿಕೊಂಡರು. ಅನಂತರ ಆ ಸೇವಕಿ ಸಾಕಿಯನ್ನು ಮುಟ್ಟಿ ನಿಂತರು. ಆಗ ಆ ಸೇವಕಿಯು ಆ ಘಟವನ್ನು ತನ್ನ ಎಡಗಾಲಿನಿಂದ ಒದೆದಳು. ಘಟದ ನೀರು ತುದಿ ಕತ್ತರಿಸಿದ ದರ್ಭೆಗಳ ಉರುಳಿ ಘಟವೊ ಒಡೆಯಿತು......

ಅದಾದನಂತರ ಆ ಸೇವಕಿಗೆ ವೆಂಕಣ್ಣ ಜೋಯಿಸರು,

"ನೋಡೆ ಸಾಕಿ, ನಮ್ಮ ಜೊತೆ ನೀನು ನಾವು ಹೇಳಿದ ಹಾಗೆ ಹೇಳಬೇಕು. ಹೇಳ್ತೀಯ?" ಎಂದರು.

"ಆಗ್ಲಿ, ನೋಡಾನ. ಅದೆಂಗೆ ಯೋಳುಕಡಿ. ಪರ್ಯತ್ನ ಮಾಡ್ತೀನಿ" ಎಂದು ಸಾಕಿ ಹೇಳಿದಳು.

"ನೋಡೆ, ಹೀಗೆ ಹೇಳಬೇಕು: ಇನ್ನು ಮುಂದೆ ಈ ಪಾಪಿ ರುಕ್ಮಿಣಿಗೂ ನನಗೂ ಉದಕ ಸಂಬಂಧವಿಲ್ಲ... ಇಷ್ಟೆ. ಇಲ್ಲಿ ಹೇಳು ನೋಡೋಣ....."

ಸಾಕಿ ಹೇಳಲುಪಕ್ರಮಿಸಿದಳು:

"ನೋಡೆ ಹಿಂಗೆ ಹ್ಯಾಳಬೇಕು......"

ವೆಂಕಣ್ಣಜೋಯಿಸರು ಹಣೆ ಹಣೆ ಚಚ್ಚಿಕೊಂಡರು.

"ಹಾಗಲ್ಲ. ಹೀಗೆ ಹೇಳು..... ಆ ಪಾಪಿ ರುಕ್ಮಿಣಿಗೂ ನನಗೂ ಉದಕ ಸಂಬಂಧವಿಲ್ಲ"

ಸಾಕಿ ಪುನಃ ಪ್ರಯತ್ನಿಸಿದಳು.

"ಹಂಗಲ್ಲ. ಹಿಂಗೇಳು...... ಮುಂದಕೆ?" –ಮುಂದೆ ಹೇಳಬಾಕಾದುದನ್ನು ಮರೆತು ಕೇಳಿದಳು. ಹೀಗೆಯೇ ಬಹಳ ಸಮಯ ಕಳೆದುಹೊಯಿತು. ವೆಂಕಣ್ಣ ಜೋಯಿಸರು ಅವಳಿಂದ ಆ ವಾಕ್ಯವನ್ನು ಹೇಳಿಸಲು ಪಟ್ಟ ಶ್ರಮವೆಲ್ಲ ವ್ಯರ್ಥವಾಯಿತು.

ಆಗ ಸುಬ್ಬಾವಧಾನಿಗಳು ಶಾಂತವಾಗಿ,

"ಲೇ ಸಾಕಿ, ನಾನು ಹೇಳಿದ ಹಾಗೆ ಸುಮ್ಮನೆ ಗಂಭೀರವಾಗಿ ಹೇಳು.

ಹೇಳ್ತೀಯ?'

ಸಾಕಿ ಮನದಲ್ಲೆ 'ಇದೊಳ್ಳೆ ರಾಮಾಣ್ಯ' ಎಂದುಕೊಳ್ಳುತ್ತ,

"ಊ, ಅದೇನ ಹ್ಯಾಳಿ" ಎಂದಳು.

ಸುಬ್ಬಾವಧಾನಿಗಳು,

"ರುಕ್ಮಿಣವ್ವಂಗೂ....." ಎಂದು ನಿಲ್ಲಿಸಿದರು.

ಸಾಕಿ,

"ರುಕ್ಮಿಣವ್ವಂಗೂ....."–ಗಿಣಿಪಾಠ ಒಪ್ಪಿಸಿದಳು.

ಉತ್ತೇಜಿತರಾದ ಸುಬ್ಬಾವಧಾನಿಗಳು,

"ನನಗೂ......" ಎಂದು ನಿಲ್ಲಿಸಿದರು.

"ನಂಗೂ..." ಎಂದು ಪಾಠ ಒಪ್ಪಿಸಿದಳು, ಸಾಕಿ.

"ಇನ್ನುಮುಂದೆ...."

"ಇನ್ನುಮ್ಯಾಕೆ....."

"ಉದಕ...."

"ಉದಕ....."

"ಸಂಬಂಧ,....."

"ಸಮ್ಮಂದ....."

"ಇಲ್ಲ....."

"ಇಲ್ಲ....."

ಸುಬ್ಬಾವಧಾನಿಗಳು ವೆಂಕಣ್ಣ ಜೋಯಿಸರನ್ನುದ್ದೇಶಿಸಿ,

"ಪಾಪ, ಅವಳಿಗೆ ಅಕ್ಷರಾಭ್ಯಾಸವಾಗಿಲ್ಲ. ಆದ್ದರಿಂದ ಒಟ್ಟಾರಿ ಸೇರಿಸಿ ಹೇಳುವುದು ಪ್ರಯಾಸವಾಗುತ್ತೆ. ಆದ್ದರಿಂದ ಅವಳು ಹೇಳಿದ ಹಾಗೆ ಹೇಳಲಿ. ನಾವು ಆ ವಾಕ್ಯ ಹೇಳಿ ಮುಗಿಸಿದರೆ ಆಯ್ತಲ್ಲ?" ಎಂದಾಗ, ವೆಂಕಣ್ಣಜೋಯಿಸರು,

"ಉಂಟೆ, ಉಂಟೆ, ಅವಧಾನಿಗಳೆ. ಅದು ಶಾಸ್ತ್ರಸಮ್ಮತವಾಗಲ್ಲ" ಎಂದುಬಿಟ್ಟರು.

ಅವಧಾನಿಗಳಿಗೆ ರೇಗಿತು.

"ರೀ ಜೋಯಿಸರೆ, ವೇಳೆ ಸುಮ್ಮನೆ ವ್ಯಯವಾಗ್ತಾ ಇದೆ. ಇಷ್ಟರಲ್ಲೆ ನಿಮ್ಮ ಶಾಸ್ತ್ರ ಹೋಗೋದಾದ್ರೆ ಹೋಗಲಿ ಬಿಡಿ" ಎಂದರು.

"ಎಲ್ಲಾದರೂ ಉಂಟೆ? ಶಾಸ್ತ್ರಕ್ಕೆ ಅಪಚಾರಮಾಡಲು ಬರುತ್ತೆಯೆ?" ಎಂದು ಜೋಯಿಸರು ಪಟ್ಟುಹಿಡಿದರು.

ಒಬ್ಬೊಬ್ಬರೂ ತಮ್ಮತಮ್ಮಲ್ಲೆ ತರ್ಕವಿತರ್ಕಕ್ಕೆ ನಿಂತರು.

ಅಲ್ಲಿ ನೆರೆದಿದ್ದವರೆಲ್ಲರಿಗಿಂತ ವಿಶ್ವೇಶ್ವರನಿಗೆ ಅತ್ಯಂತ ಸಮೀಪಬಂಧುವಾದ ಸುಬ್ರಹ್ಮಣ್ಯ.

"ನೀವು ಹೀಗೆ ತರ್ಕ ಮಾಡ್ತಾ ನಿಂತಿರಿ. ನನಗೆ ಹೊಟ್ಟೆ ಚುರುಗುಟ್ತಾ ಇದೆ. ನೆನ್ನೆ ರಾತ್ರಿ ನಮ್ಮ ಮನೇಲಿ ಒಂದಿಷ್ಟು ಅವಲಕ್ಕಿ ಉಪ್ಪಿಟ್ಟಿನ ಫಳಾರ ಮಾಡಿದ್ದು" ಎಂದು ಆ ಸ್ಥಳದಿಂದ ಹೊರಡಲು ಅನುವಾದ.

ಆ ಕರ್ಮಕ್ಕೆ ಆತನೇ ಹೆಚ್ಚ ಭಾಧ್ಯನದುದರಿಂದ,

"ಪೂರ್ತಿ ಮಾಡದೆ ಹೋಗಬೇಡವೊ, ಸುಬ್ರಹ್ಮಣ್ಯ..... ಅದೂ ನಿನಗೂ ಶ್ರೇಯಸ್ಕರವಲ್ಲ, ನಮಗೂ ಶ್ರೇಯಸ್ಕರವಲ್ಲ" ಎಂದು ವೆಂಕಣ್ಣಜೋಯಿಸರು ಪೋಚಾಡಿದರು.

"ಹಾಗಿದ್ರೆ, ಅವಳು ಪಾಪ, ಹೇಳಿದ ಹಾಗೆ ಹೇಳಲಿ. ನಾವೆಲ್ಲರೂ ಒಟ್ಟಿಗೆ ಹೇಳಿಬಿಟ್ಟು ಕರ್ಮ ಮುಗಿಸೋಣ. ಅದಕ್ಕೊಪ್ಪಿದರೇ ನಾನು ಇಲ್ಲಿರೋದು. ಇಲ್ಲದಿದ್ದರೆ, ಇಗೊ....." ಎಂದು ಹೆಜ್ಜೆ ತೆಗೆದ, ಸುಬ್ರಹ್ಮಣ್ಯ.

ಒಡನೆಯೇ ಜೋಯಿಸರು.

"ಹೋಗಬೇಡವೋ ಮಹಾರಾಯ..... ನಿಲ್ಲ, ನಿಲ್ಲು ನಿನ್ನಿಷ್ಟಪ್ರಕಾರವೇ ಮಾಡೋಣ... ಕಲಿಕಾಲ, ಎಲ್ಲವೂ ಸೂಕ್ಷ್ಮಕ್ಕೆ ಬಂದೋಯ್ತು....." ಎಂದು ಸೋತರು.

"ಅಪದ್ಧರ್ಮ ಅಂತ ಮಾಡಿಬಿಡಿ. ಎಲ್ಲ ಸರಿಹೋಗುತ್ತೆ" ಎಂದು ಹೇಳುತ್ತ, ಸುಬ್ರಹ್ಮಣ್ಯನು ಹಿಂದಕ್ಕೆ ಬಂದ.

ತರುವಾಯ ಎಲ್ಲರೂ ಒಟ್ಟಾಗಿ ಕೂಡಿ, ಆ ವಾಕ್ಯವನ್ನು ಹೇಳಿ ಮುಗಿಸಿದರು. ಅವನ ಜೊತೆಯಲ್ಲಿ ಸಾಕಿ ಸುಮ್ಮನೆ ಬಾಯಿ ಕುಣಿಸುತ್ತ ಪಿಟಿಪಿಟಿ ಎನ್ನುತ್ತಿದ್ದಳು!

* * * *

ರುಕ್ಮಿಣಿಯನ್ನು ಮನೆ ಕೊಟ್ಟಿಗೆ ಹಿತ್ತಲು ಎಲ್ಲೂ ಕಾಣದೆ, ಕೃಷ್ಣಶಾಸ್ತ್ರಿಗಳು ಕಂಗಾಲಾದರು. ಮನೆಯ ಹಿಂದಿನ ಬಾಗಿಲು ತೆರೆದಿರುವುದನ್ನು ನೋಡಿದರೆ, ಅವಳು ಮುಂದಿನ ಬಗಿಲಿನಿಂದ ಹೋದಲ್ಲಿ ಯಾರ ಕಣ್ಣಿಗಾದರೂ ಬೀಳಬಹುದೆಂದು ಎಣಿಸಿ, ಈ ಬಾಗಿಲಿನಿಂದಲೇ ಹೊರಟುಹೋಗಿರಬೇಕು!...

ಶಾಸ್ತ್ರಿಗಳಿಗೆ ಮುನ್ನಾದಿನದ ನಡತೆ ಈಗ ಅರ್ಥವಾಗುತ್ತಿತು:

ವಾರಕ್ಕೊಮ್ಮೆ ಸರಸಿಗೆ ಅಭ್ಯಂಗನಸ್ನಾನ ಮಾಡಿಸುತ್ತಿದ್ದಳು ನಾಲ್ಕೇ

ದಿನದ ಅಂತರದಲ್ಲಿ ಪುನಃ ಎಣ್ಣೆ ಎರೆದು ಸರಸಿಗೆ ಸ್ನಾನ ಮಾಡಿಸಿದ್ದು: ಸರಸಿಗೆ ಸಜ್ಜಿಗೆಯನ್ನು ಎಷ್ಟು ದಿನವೂ ತಟ್ಟೆಯಲ್ಲಿಟ್ಟು ಅವಳು ತಿಂದಷ್ಟು ತಿನ್ನಲಿ ಎಂದು ಬಲವಂತ ಮಾಡಲು ಹೋಗಿದ್ದವಳು, ಸರಸಿಯನ್ನು ಪ್ರೀತಿಯಿಂದ ತನ್ನ ತೊಡೆಯ ಮೇಲೇರಿಸಿ ತಿನ್ನು ತಿನ್ನು ಎಂದು ಒತ್ತಾಯ ಪೂರ್ವಕ ತಿನ್ನಿಸಿದ್ದ; ಆ ಬಳಿಕ ಮಧ್ಯಾಹ್ನದ ಊಟಕ್ಕೆ ಹಬ್ಬಕ್ಕೆ ಮಾಡುವ ವಿಶೇಷ ಅಡಿಗೆ ಮಾಡಿದ್ದುದು– ಒಂದೊಂದೂ ಅವರ ಕಣ್ಮುಂದೆ ಚಕಚಕನೆ ಸುಳಿದುಹೋಗಿ ಅವಳು ತಮ್ಮಿಬ್ಬರನ್ನೂ ತೊರೆದು ಹೋಗುವ ಮುನ್ನ, ತನ್ನ ಋಣ ತೀರಿಸಲು ಹಾಗೆ ವರ್ತಿಸಿದಳೊ ಏನೊ, ಎನ್ನಿಸಿತು... ಯಾಕೊ ಅ ವೇಳೆಯಲ್ಲಿ ನನಗೆ ಮಂಕು ಕವಿದು ಇದೊಂದರ ಅರ್ಥವೂ ಸ್ಫುರಿಸದೆ, ಅನರ್ಥ ನಡೆದುಹೊಯಿತು– ಎಂದು ಕಂಬನಿಗರೆಯುತ್ತ ಪಶ್ಚಾತ್ತಾಪ ಪಟ್ಟರು.....

ಅವಳೆಲ್ಲೊ ಕೆರೆಗೊ ಬಾವಿಗೊ ರಾತ್ರಿಯೆ ಬಿದ್ದಿರಬೇಕೆಂದು ಬಗೆದು, ಸರಸಿ ಇನ್ನೂ ಯಾಕೆ ಎದ್ದಿಲ್ಲ, ಎಂದು ಅವಳು ಮಲಗುವ ಕೋಣೆಗೆ ಧಾವಿಸಿದರು.

"ಸರಸು, ಸರಸು–ಏಳಮ್ಮ, ನೋಡು ಅಗ್ಲೆ ಎಷ್ಟು ಹೊತ್ತಾಗಿದೆ?" ಎಂದು ಮೈ ಮುಟ್ಟಿದರು. ಮಗುವಿನ ಜ್ವರ ಬಂದು ಮೈ ಕುಡಿದುಹೋಗುತ್ತಿತ್ತು.

ಸರಸಿಯನ್ನು ಮೆಲ್ಲನೆ ಎತ್ತಿಕೊಂಡರು. ವೆಂಕಣ್ಣಜೋಯಿಸರ ಮೂವರು ಹೆಣ್ಣುಮಕ್ಕಳೂ ಸರಸಿಯನ್ನು ಬಹುವಾಗಿ ಪ್ರೀತಿಸುತ್ತಾರೆ. ಇವಳನ್ನು ಅವರ ವಶಕ್ಕೊಪ್ಪಿಸಿ, ಅನಂತರ ರುಕ್ಮಿಣಿಯ ಶೋಧಕ್ಕೆ ಹೊರಡುವುದೆಂದು ನಿಶ್ಚಯಿಸಿದರು. ಜೊತೆಗೆ ಅಜ್ಜನ ಕಾಲದಿಂದಲೂ ತಮ್ಮಲ್ಲಿದ್ದ ಸರ್ವರೋಗಗಳಿಗೂ ಉಪಯುಕ್ತವಾದ ಕುಪ್ಪಿ ಮಾತ್ರೆಯನ್ನು ಕೈಗೆತ್ತಿಕೊಂಡರು.

ಅವರು ಹಜಾರಕ್ಕೆ ಬಂದಾಗ ಸರಸಿ,

"ಅಕ್ಕ–ಅಕ್ಕ ಎಲ್ಲಿ?" ಕೇಳಿದಳು.

"ಯಾವ ಮನೆಗೊ ಹೋಗಿದ್ದಾಳೆ. ಇನ್ನೇನು ಬರ್ತಾಳೆ. ಅಷ್ಟರಲ್ಲಿ ನಿನಗೆಜ್ವರ ಬಂದಿದೆ_ವೆಂಕಣ್ಣಜೋಯಿಸರ ಮನೆಗೆ ಹೋಗೋಣ. ಅಲ್ಲಿ ಅವರ ಮಕ್ಕಳಿದ್ದಾರಲ್ಲ–ನಾಗಲಕ್ಷ್ಮಿ, ವಸಂತ, ಶಾಂತಿ ಅವರು ಇಲ್ನೋಡು ಈ ಕುಪ್ಪಿ ಮಾತ್ರೇನ ಜೇನುತುಪ್ಪದಲ್ಲಿ ತೆದು ನಿನಗೆ ತಿನ್ನಿಸಿದರೆ, ನಿನ್ನ ಜ್ವರ ಸಾಯಂಕಾಲದೊಳಗೆ ಚೆಟ್ ಆಗಿ ಹೋಗುತ್ತೆ" ಎಂದು ಜ್ವರದ ತಾಪದಲ್ಲಿ,

ಆ ಮಾತು ಸರಸಿಗೆ ಬೇಕಾಗಿರಲಿಲ್ಲ. ಅವಳು ಜ್ವರದ ತಾಪದಲ್ಲಿ,

"ಅಕ್ಕ ಎಲ್ಲಿ?– ನನಗೆ ಅಕ್ಕಬೇಕು....." ಎಂದು ಕೇಳುತ್ತಿರುವಂತೆ ಆಗಾಗ ಸ್ವಲ್ಪ ಬೆಚ್ಚುತ್ತಿದ್ದಳು. ಪಂಚಾಯಿತಿಕಟ್ಟೆಗೆ ಈ ಕೂಸನ್ನು ಬಿಡಬಾರದಾಗಿತ್ತು. ಅಲ್ಲಿ

ಲಕ್ಕನಿಗೆ ಸಿಕ್ಕಾಪಟ್ಟೆ ಹೊಡೆದುದನ್ನು ನೋಡಿ ಇವಳು ಹೆದರಿರಬೇಕು. ಇದಕ್ಕೆ ಈಗ ಜ್ವರ ಬಂದಿದೆ, ಎಂದು ಶಾಸ್ತ್ರಿಗಳು ತಮ್ಮೊಳಗೇ ಅಂದುಕೊಂಡರು.

"ಅವಳಿಗೂ ಹುಷಾರಾಗಿಲ್ಲ. ಹುಣಸೂರಿಗೆ ಹೋಗಿದ್ದಾಳೆ. ಸಾಯಂಕಾಲದ ಹೊತ್ತಿಗೆ ಬಂದುಬಿಡ್ತಾಳೆ...."

"ಮತ್ತೆ ಆಗ ಯೋರದೊ ಮನೆಗೆ ಹೋಗಿದಾಳೆ ಅಂದೆ?" ಎಂದು ಕೇಳಿ ಸರಸಿ, ಶಾಸ್ತ್ರಿಗಳನ್ನು ಪೇಚಿಗೆ ಸಿಕ್ಕಿಸಿದಳು. ಅವರು,

"ಮರೆತುಹೋಗಿ ಹೇಳಿದ. ಆಗ ಜ್ಞಾಪಕ ಬಂತು. ಅವಳು ಗಾಡಿ ಕಟ್ಟಿಸಿಕೊಂಡು ಹುಣಸೂರಿನಲ್ಲಿ ಡಾಕ್ಟರ್ ಹತ್ರ ಔಷಧಿ ತಕ್ಕೊಂಡು ಬರ್ತೀನಿ ಎಂದು ಹೋಗಿದ್ದಾಳೆ. ಬಂದುಬಿಡ್ತಾಳೆ. ಬಾ. ಜೋಯಿಸರ ಮನೆಯಲ್ಲಿ, ನಿನಗೆ ಮುಖ ತೊಳೆಸಿ, ಆ ಹುಡುಗಿಯರು ನಿನ್ನನ್ನ ಚೆನ್ನಾಗಿ ನೋಡಿಕೊಳ್ತಾರೆ" ಎಂದು ಅವರು ಸುಳ್ಳಿಗೆ ಶರಣಾದಂತೆ, ಮುಂಬಾಗಿಲನ್ನು ದಢಾರನೆ ನೂಕಿ, ಅವರ ಬಂಧುಬಾಂಧವರು ಒಳನುಗ್ಗಿ,

"ಆ ಪಾತಕಿ– ರುಕ್ಮಿಣಿ, ಎಲ್ಲಿ?" ಎಂದು ಗಂಟಲು ಜೋರುಮಾಡಿದರು.

"ಅವಳು ಮನೆಯಲ್ಲಿ ಇಲ್ಲ–" ಎಂದು ಅಪ್ರತಿಭರಾಗದೆ ಶಾಸ್ತ್ರಿಗಳು ಸಂಯಮದಿಂದ ಉತ್ತರವಿತ್ತರು.

"ಸುಳ್ಳು, ನೀವೆಲ್ಲೋ ಅವಳನ್ನು ಬಚ್ಚಿಟ್ಟಿದ್ದೀರಿ."

"ಬೇಕಾದರೆ ನೀವೆ ಪರೀಕ್ಷೆ ಮಾಡಿಕೊಳ್ಳಿ" ಶಾಸ್ತ್ರಿಗಳು ಆ ದುಃಖದಲ್ಲೂ ಶಾಂತರಾಗಿ ನುಡಿದರು.

ಆ ಗುಂಪು ಶಾಸ್ತ್ರಿಗಳ ಮಾತನ್ನು ನಂಬದೆ ಮನೆಯ ಒಂದೊಂದು ಮೂಲೆಮುಡಕಲನ್ನೂ ಸೋದಿಸಿ ತಪಾಸಣೆ ನಡೆಸಿತು. ಕೊನೆಗೆ ಕೊಟ್ಟಿಗೆ, ಹಿತ್ತಿಲುಗಳನ್ನು ಶೋಧಿಸಿಯಾಯಿತು.

"ರುಕ್ಮಿಣಿ ಎಲ್ಲಿ?– ಗೋಪ್ಯವಾಗಿ ನೀವು ಅವಳನ್ನೆಲ್ಲಿಗೋ ರವಾನಿಸಿಬಿಟ್ಟಿದ್ದೀರಿ..." ಎಂದು ಅವರಲ್ಲಿ ಯೋರೊ ಗುಡುಗಿದರು. ಸುಬ್ರಹ್ಮಣ್ಯನೇ ಇರಬಹುದು.

"ನಾನಲ್ಲ ಅವಳನ್ನ ಕಳಿಸಿರೊನು. ಅವಳನ್ನ ಕೆರೆಗೊ ಬಾವಿಗೊ ತಳ್ಳಿರೋರು–ನೀವು!"– ಶಾಸ್ತ್ರಿಗಳು ಖಾರವಾಗಿ ನುಡಿದರು. ಅವರು ಹಾಗೆ ಹೇಳುವಾಗ ಅವರ ಒಂದೊಂದು ನುಡಿಯೂ ನರಳುತ್ತಿತ್ತು.

"ಏನು ಶಾಸ್ತ್ರಿಗಳೇ ನೀವು ಹೇಳ್ತಿರೋದು?"– ಗುಂಪಿನ ಮಂದಿ ಈಗ ಕೊಂಚ ಚಕಿತಗೊಂಡಂತೆ ಕಾಣುತ್ತಿತ್ತು.

"ನೀವು ತಲೆ ಬೋಳಿಸಿ, ಕತ್ತೆ ಮೇಲೆ ಕೂರಿಸಿ, ಊರಿನಂದಾಚೆಗೆ ಓಡಿಸ್ತೀವಿ ಎಂದು ತೀರ್ಮಾನ ಮಾಡಿದ್ರೆ. ಅವಳು ನಿಮ್ಮಿಂದ ಆ ವಿರೂಪ ತಪ್ಪಿಸಿಕೊಳೊಕೆ ಕೆರೆಗೊ ಬಾವಿಗೊ ಹಾರಿರಬೇಕು......"

"ಏನೆಂದಿರಿ?"

"ಹೌದು. ರಾತ್ರಿ–ನಾವೆಲ್ಲರೂ ಮಲಗಿದ್ದಾಗಲೆ ಅವಳು ಮೆಲ್ಲನೆದ್ದು ಹೊರಟುಹೋಗಿರಬೇಕು... ಈಗ ನಿಮಗೆ ತೃಪ್ತಿಯಾಯಿತೆ?"

ಆ ಬ್ರಾಹ್ಮಣರು ಮನೆಯೊಳಗೆ ಕಾಲಿಟ್ಟ ಸಮಯದಿಂದಲೂ ಮೆಲ್ಲೆ ಆಳುತ್ತಿದ್ದ ಸರಸಿಗೆ, ಶಾಸ್ತ್ರಿಗಳ ಮಾತಿನಿಂದ ನಿಜಸ್ಥಿತಿ ಸ್ವಲ್ಪ ಸ್ವಲ್ಪವಾಗಿ ಅರಿವಾದಂತೆ, ಅವಳು ಜೋರಿನಿಂದ ಬಿಕ್ಕುವುದಕ್ಕೆ ಆರಂಭಿಸಿದಳು.

"ಅಳಬೇಡ ಸರಸು... ಅಳಬೇಡ ಕಂದ" ಎಂದು ಮಗುವನ್ನು ಸಂತೈಸುವಾಗ ತಾವೂ ಗದ್ಗದಿತರಾಗಿ, ಶಾಸ್ತ್ರಿಗಳು ಆ ಬ್ರಾಹ್ಮಣರ ತಂಡವನ್ನು ತಮ್ಮ ಮನೆಯೊಳಗೇ ಬಿಟ್ಟು ಹೊರನಡೆದರು.

ಆ ಗುಂಪಿನಲ್ಲಿ ಯಾರೋ ಅಂದೇ ಅಂದರು:

"ಅವಳು ಮಾಡಿದ ಪಾಪಕ್ಕೆ ದೇವರೇ ಶಿಕ್ಷೆ ಕೊಟ್ಟ. ನಾವು ಮಾಡಬೇಕು ಅಂತ ಇದ್ದದ್ದನ್ನ ಆ ದೇವರೇ ಮಾಡಿದ ಹಾಗಾಯಿತು!"

* * * *

ಊರಿನ ಎಲ್ಲ ಬಾವಿಗಳು, ಕೆರೆಕಟ್ಟೆಗಳು, ತೋಟದ ಕೊಳಗಳು, ನೆಲ ಬಾವಿಗಳು ಎಲ್ಲೆಡೆಯೂ ಶೋದಿಸಿಯಾಯಿತು. ದಿನಗಳು ಕಳೆದುಹೋದವೇ ವಿನಯ ರುಕ್ಮಿಣಿಯೂ ಮಾತ್ರ ಎಲ್ಲೂ ಸಿಗಲಿಲ್ಲ. ಅವಳು ಎಲ್ಲಿಗೆ ಹೋದಳೆಂಬ ಸುಳಿವೂ ಸಹ ಹತ್ತಲಿಲ್ಲ. ಅವಳು ಬಾವಿಗೊ ಕೆರೆಗೊ ಬಿದ್ದಿರಬೇಕು ಎಂದು ಹೇಳುತ್ತಿದ್ದವರ ಮಾತು ಸುಳ್ಳಾಯಿತು. ಯಾಕೆಂದರೆ ವಾರಗಳು ಉರುಳಿದರೂ ಯಾವ ಕೆರೆ, ಕಟ್ಟೆ, ಬಾವಿ, ಕೊಳಗಳಿಂದಲೂ ರುಕ್ಮಿಣಿಯ ಹೆಣ ತೇಲಲಿಲ್ಲ!... ರುದ್ರಪಟ್ಟಣ, ಭೀಮನಳ್ಳಿಗಳಿಗೂ ಹೋಗಿ ಬಂದದ್ದಾಯುಇತು. ಎಲ್ಲೂ ಅವಳಿಲ್ಲ. ವೈಣಿಕ ಶ್ಯಾಮ ಕೆಲವು ದಿನಗಳಿಂದಲೂ ಊರಿನಲ್ಲಿದ್ದವನು ಮೈಸೂರಿಗೆ ತುರ್ತಾಗಿ ಹೋಗಬೇಕಾಗಿದೆಯೆಂದು ರುಕ್ಮಿಣಿ ಕಾಣೆಯಾದ ಹಿಂದಿನ ಸಂಜೆಯೇ ಊರು ಬಿಟ್ಟಿದ್ದನಂತೆ, ಅವನೇನಾದರೂ ಹಿಕಮತ್ತು ಮಾಡಿ ರುಕ್ಮಿಣಿಯನ್ನು ಹಾರಿಸಿಕೊಂಡು ಹೋಗಿರಬಹುದೆ? ಎಂದು ಕೆಲವರ ಸಂದೇಹ. ಆ ಸಂದೇಹ ಪರಿಹರಾರ್ಥವಾಗಿ ಮೈಸೂರಿಗೂ ಕೆಲವರನ್ನು ಕಳಿಸಿ ಶ್ಯಾಮನ ಮನೆಯಲ್ಲಿ ಸಪಾಸಣೆ ಮಾಡಿದ್ದಲ್ಲದೆ, ಮೈಸೂರು ಮತ್ತು ಹುಣಸೂರು ಪೋಲೀಸ್ ಸ್ಟೇಷನ್ನುಗಳ್ಳಿ ಕಂಪ್ಲೇಂಟ್ ದಾಖಲೆ

ಮಾಡಿಸಿದ್ದಾಯಿತು. ರುಕ್ಮಿಣಿ ಹೇಗೂ ಕೆಟ್ಟೆ ಎಂದು ಲಕ್ಕನಿರುವಲ್ಲಿಗೇ ತೆರಳಿರಬಹುದೆ?... ಈ ಶಂಕೆಯ ಪರಿಹಾರಾರ್ಥ ಶೋಧನೆಯೂ ನಡೆಯಿತು. ರಂಡೇಗಂಡ ಬೇರೆಲ್ಲಿಗೆ ಕಳುಹಿಸಿ ಬಚ್ಚಿಟ್ಟಿದ್ದಾನೊ?– ಎನ್ನುವ ಅನುಮಾನವೂ ಉಳಿಯದಿರಲಿಲ್ಲ... ಮಾರಿಗುಡಿ ಅಣ್ಣದೀರ ಮೇಲೂ ಕೆಲವರ ಗುಮಾನಿ ಹರಿಯದಿರಲಿಲ್ಲ. ಇವಳು ರಾತ್ರಿ ಮನೆ ಬಿಟ್ಟು ಹೊರಟಾಗ, ಆ ಪಟಿಂಗರ ಕೈಗೆ ಸಿಕ್ಕಿ, ಅವರು ಇವಳನ್ನು ನಂಜೇಗೌಡನಿಗೆ ಒಪ್ಪಿಸಿರಬಹುದೆ?– ಇದು ಸ್ವಯಂ ಕೃಷ್ಣಶಾಸ್ತ್ರಿಗಳ ಸಂದೇಹ... ಅಂತೂ ರುಕ್ಮಿಣಿಯು ರಾತ್ರೋರಾತ್ರಿ ಮನೆಯಿಂದ ನಾಪತ್ತೆಯಾದ ಸುದ್ದಿ ಊರಿನ ಮನೆಮನೆಯಲ್ಲೂ ಕೋಲಾಹಲವನ್ನೆಬ್ಬಿಸಿತ್ತು.

ಮುಂದೆ ಒಂದು ಅಮಾವಾಸ್ಯೆಯ ರಾತ್ರಿ, ಊರಿನಲ್ಲಿ ಯಾರಿಗೊ ಚಿತ್ರ ಮೂಲನ ಕೋಟೆಯ ದಿಸೆಯಿಂದ ಹೆಣ್ಣು ಶೋಕಿಸುವ ದನಿ ಕೇಳಿಬಂದಿತಂತೆ!... ಆ ಸುದ್ದಿ ಬಾಯಿಂದ ಬಾಯಿಗೆ ಹರಡಿ, ಕಾಲಕ್ರಮೇಣ ಅದು ಊರಿನ ತುಂಬ ವ್ಯಾಪಿಸಿಬಿಟ್ಟಿತು– ರುಕ್ಮಿಣಿ ಆ ಚಿತ್ರಮೂಲನ ಕೋಟೇಗೆ ಹೋಗಿ ಸತ್ತಿರಬೇಕು. ಆ ಗೋಳಿನ ರಾಗ ಅವಳದೇ– ಎಂದು ಹಳ್ಳಿಯ ಮಂದಿ ನಂಬಿದರೆ, ತಾವು ತಿಳುವಳಿಕೆಯುಳ್ಳವರು ಎಂದುಕೊಂಡ ಮಂದಿ,

"ಅಯ್ಯೊ, ಹಾಗೆ ಕೊಟೆಯಿಂದ ಕೇಳಿ ಬರ್ತಾ ಇರೋದು ರುಕ್ಮಿಣಿಯ ಧ್ವನಿಯಲ್ಲ– ಅದು ಗುಳ್ಳೆನರಿ ಊಳಿಡ್ತಾ ಇರೋ ಶಬ್ದ!.... ಮೂಢ ಜನಕ್ಕೆ ಬುದ್ಧಿಯಿಲ್ಲ" ಎಂದು ತಮ್ಮ ಬುದ್ಧಿಂತಿಕೆಯನ್ನು ಪ್ರದರ್ಶಿಸುತ್ತಿದ್ದರು.

ಬರಬರುತ್ತಹಳ್ಳಿಯ ಬಹುತೇಕ ಮಂದಿಯ ನಂಬಿಕೇಯೇ ಹೆಚ್ಚು ಕಡಿಮೆ ದರಮನಳ್ಳಿಯ ಸಾರ್ವತ್ರಿಕ ಅಭಿಪ್ರಾಯವಾಗಿ ರೂಪುಗೊಂಡಿತು. ತಾವು ಬುದ್ಧಿವಂತರೆಂದು ತಿಳಿದ ಜನರೂ ಕಾಲಕ್ರಮೇಣ ತಮ್ಮ ಅಭಿಪ್ರಾಯ ತಪ್ಪಿರಬಹುದು ಎಂದು ಶಯಪಡುವಂತಾಯಿತು.

## ೩೬

ಲಕ್ಕನ ಸಂಪರ್ಕವ ಯಾರೂ ವೋಂದಿರಕ್ಕೇ ಕೂಡ್ದು ಅನ್ನಾ ಊರಿನೋರ್ ಕಟುಗ್ರ ಬಯಿಸ್ಕಾರ ಇದ್ದರೂವೆ, ಕಲ್ಯಾಣಿಯ ತಾಯಿಕರುಳು ತಡೀನಿಲ್ಲ. ಒಂದು ಸಂದೆ ದನೀಗೆ ಏಡು ರಾಗಿರೊಟ್ಟಿ ತಟ್ಟಿದ್ದಲು. ಅವೇಡರ ನಡ್ವೆ ಮಗ ಯಾವಾಗ್ಲೂ ಆಸೆಪಡೋ ಉಳ್ಳಿಜಿನುಕ ಸೇರಿಸಿದ್ಲು. ಅಮ್ಯಾಕೆ ಜನರ ಕಣ್ಣ ತೆಪ್ಪುಸಿ, ಯಾರುಯಾರ್ದೊ ವೊಲದ ತೆವರೀಲಿ ಬೆರಿಕೆ ಸೊಪ್ಪು ಕುಯ್ಯೋಳಂಗೆ ನಟನೆ ಮಡ್ತಾ ಸಾಗಿ ಅತ್ತ ಇತ್ತ ನ್ವಾಡ್ತ ಮೆಲ್ಲಗೆ ಸಕುನಿಕೊಪ್ಲ ವೊಲಗಳ ತಾವಿಕೆ

ವೊರಳಿದ್ಲೂ. ಸಾಬರ ವೊಲ ಅವಳು ಕಾಣದೇ ಇದ್ದದ್ದಾ?... ಕೆಲವು ಸಾಲ್ನಲ್ಲಿ ಅವರೊಲದಲ್ಲಿಕಳೆ ಕೀಳಕ್ಕೆ ಅವಳೂ ವೋದ್ದುಂಟು. ಆದ್ರೆ ಗೋಸು ಸಾಬ್ರ ವೊಲದ ತೆವರೀಲಿ ಬಡಗಳಾಗಿ ಎದ್ದಿದ್ದ ಲಕ್ಕನ ಗುಡ್ಲಲ್ಲಾಗ್ಲಿ ಸುತ್ನ ವೊಲದಲ್ಲಾಗ್ಲಿ ಮಗನ್ನ ಕಾಣ್ದೆ ನಿರಾಸಿಂದ ಬೆಂದೋದ್ದಲು. ಮಗ ಕಟ್ಟಿದ್ದ ಗುಡ್ಲ ನೆರಕೆಯ ಬರಲ್ನ ಕಿಂಡಿಂದ ಪರಿಕ್ಸೆ ಮಡಿದ್ಲು. ಎಂಗೋ ಕಂದನಿಗೆ ನಿಲ್ಲಕೆ ಒಂದು ನೆಲೆ ಆಯ್ತೂಂತ ಸಮಾದಾನ ಪಟ್ಟುಕಂಡ್ಲು. ಆದರೂವೆ ಮೊಗ ಸಿಕ್ಕನಿಲ್ಲವಲ್ಲ. ಅಂತ ಎದೆ ಕುದಿತ ಬತ್ತಾ ಇರ್ವಾಗ, ಗೋಸುಸಾಬ್ರ ಕಿರಿಹೈದ ಬುಡನ್ ಸಿಕ್ತು. ಅವನ್ನ ಇಚಾರಿಸಚ್ಚಾಗ, ಲಕ್ಕ ಗೋಸು ಸಾಬ್ರ ಇತ್ತಲ ಬೇಲಿ ಕಟ್ಟಕ್ಕೆ ಮುನಿಸೋಡ್ನೆಮುಳ್ಳನೊ, ತಣಚಿಮುಳ್ಳನೊ, ಗೆಜ್ಜಲುಮುಳ್ಳನೊ, ಕಾರೆ ಮುಳ್ಳನೊ, ಚೊಟ್ಟೆಮುಳ್ಳನೊ ಯೇರಿಕಂಡು ಬರಕ್ಕೆ ಗಾಡಿ ಕಟ್ಟಿಗಂಡೊಗವ್ನೆ ಮುದುಕಿ– ಅಂತ ಒಂದೇ ಉಸಿರ್ಗೆ ಯೇಳಿ ಫೇರಿ ಕಿತ್ತಿತ್ತು.

ಇನ್ನಾಕೆ ಕಾಯೋದು. ಕಾಡ್ನಿಂದ ಅವ್ನು ಬರೋದು ಇನ್ನೂ ಏಡೋತ್ತಾದದೊ ಏನೊ, ಅಂತ ಊರಿಗೆ ಮೊಕ ತಿರುಗ್ಸಿ ನಡೆಯಕ್ಕೆ ಮುಟ್ಟಿಕಂಡ್ಲು. ಬೆಟ್ಟದ ಕಂಡಿಂದ ಕತ್ತಲು ವೊಲಗಳ ಮ್ಯಲೆ ಆಗ್ಲೆ ದಾಪುಗಾಲು ಆಕಕ್ಕೆ ಸುರುಮಾಡಿತ್ತು. ಈಚೀಚ್ಗೆ ಕಲ್ಯಾಣಿಗೆ ದಿಟ್ಟಿಯೂ ಸುದ್ದವಾಗಿಲ್ಲ. ಕತ್ತಲು ಕವೀತು ಅಂದರೆ, ಚೋಟು ದೂರಕೂ ನೆಟ್ಟಗೆ ಕಾಣಕ್ಕಿಲ್ಲ. ದಿಸ್ಟಿನೆಟ್ಟು ನ್ವಾಡಕ್ಕೆ ವೋದರೆ ಕಣ್ನಲ್ಲಿ ನೀರು ಕಿತ್ತುಗತ್ತದೆ..... ಆದರೂವೆ ತಂದ ರೊಟ್ಟಿ ಮಗನ ವೊಟ್ಟೆಗೆ ಸೇನಿಲ್ಲವಲ್ಲಾಂತ ಯತೆ...... ತಲೆ ಬೊಗ್ಗಿಸಿ, ಇದೇ ಯೋಚ್ನೇಲಿ, ಅವಳು ಸಾಗ್ತಾ ಇರ್ವಾಗ, ಯಾವುದೊ ನಾಯಿ ಬೊಗಳ್ದ ಅಂಗಾಯ್ತು...... ಯೌದು ಈ ನಾಯಿ?– ನಮ್ಮ ಬೊಡ್ಡನಂಗೆ ಬೊಗಳ್ತ ಇಲ್ಲವ?... ಒಂದು ಗಳಿಗೆ ಅಲಲೇ ನಿಂತು ಆಲಿಸಿದ್ಲು.... ಬೊಡ್ಡನೆ!..... ಅದರಲ್ಲಿ ಯವ ಸಂಸಯ?... ಈಟೋತ್ನಲ್ಲಿ ಒಚಿಟಿನಾಯಿ, ಈ ಬೆಟ್ಟದ ಸಾಲಿಗೆ ಬಂದ್ರ, ಅದು ಜೀವಸ್ಯೆತ ಊರು ಸೇರಾನ ಅಂದರೇನು? ಅದು ಸೀದ ಕಿರುಬನ ವೊಟ್ಟೆಗೆ ವೋಗದೇಯ...... ಕಲ್ಯಣಿ ಇಂಗೆ ಆಲೋಚ್ಣೆ ಮಾಡ್ತ ನಿಂತಿರೋ ವ್ಯಾಳ್ಯದಲ್ಲಿ, ಬೊಡ್ಡ ಬೊಗಳ್ತಾನೆ ಬಂದು, ಅವಳ್ನ ಗುರುತ್ಸಿ ಕಾಲು ನೆಕ್ತಾ ನಿಂತುಗ್ತತ್ತು. ಅದ್ರ ಇಂದುಗುಟ್ಟ ಲಕ್ಕನೂ ಮೂಡಿದ. ಕಲ್ಯಾಣಿಗೆ ಕಡೆಗಾದರೂ ಮಗ ಬಂದ್ನಲ್ಲ ಅಂತ ಕುಸಿ ಆಯ್ತು. ಅವ್ವನ್ನ ಕಂಡು ಲಕ್ಕಂಗೂ ಪಂಚಬಕ್ಸಪರಮಾನ್ನ ಉಂಡೋಟು ಸಂತೋಸ ಆಯ್ತು.....

"ಊರಿನೋರ್ಗೆ ಎದುರದೇನೆ, ಅವರ ಕಣ್ಣ ತೆಪ್ಪುಸಿ, ಅದೆಂಗವ್ವ ಬಂದೆ?" ಕೇಳ್ದ.

"ಎತ್ತ ಮೊಟ್ಟೆ, ತಡೀನಾರದೆ ವೋಯ್ತು. ಆ ನಾತ್ರೆ ನೀನು ನಮ್ಮ ಗುಡ್ಲ ಬುಟ್ಟೋದೇನಿಂದ ನಾನು ಮನಸ್ಯೇನ ಆಗಿಲ್ಲ– ಎಂಗೊ ಗೇದು, ಎಂಗೊ ಉಂಡುಬಿದ್ದುಕೊತ್ತೀನಿ. ನಿನ್ನ ತಂಗಿ ಸಿನುನಿಯೂ ಪೋಟೀಯ–ಎದ್ದ ವೋತ್ತಿನಿಂದ ನಿನ್ನ ಒಂದೆ ಸಮಕೆ ನೆನೀತಾನೆ ಇರ್ತಾಳೆ. ಎದ್ದಾಗ್ಲೂ ನಿನ್ನ ಸೊಲ್ಲೇಯ. ಒಲೆ ಕತ್ತಿಸೊವಾಗ್ಲೂ ನಿನ್ನ ಸೊಲ್ಲೇಯ. ಅಂಬಲಿಗೆ ಎಸರೆತ್ತೋವಾಗ್ಲು ನಿನ್ನ ಸೊಲ್ಲೇಯ. ಉಣ್ಣೋವಾಗ್ಲು ನಿನ್ನ ಸೊಲ್ಲೇಯ. ಮೊಗೀಗೆ ಮೊಲೆ ಕಚ್ಚಿಸೋವಾಗ್ಲು ನಿನ್ನ ಸೊಲ್ಲೇಯ–ಬ್ಯಾಡ, ಬ್ಯಾಡ, ಅವಳ ಗೋಲು. ನಂಗಂತೂ ನ್ವಾಡಕ್ಕೆ ಆಕ್ಕಿಲ್ಲ."

"ಆಣೆ ಬರಾವು. ಏನು ಮಾಡಕ್ಕಾದಾತು?" ನಿಟ್ಟುಸಿರುಬಿಟ್ಟು, "ಸಮಾಸು, ಅಯ್ಯ ಎಂಗವ್ನೆ?" ಕೇಳಿದ.

"ಅಯ್ಯಂದು ಮೊದ್ಲೆ ರಂಪ ಆಗಿದ್ದದ್ದು, ಈಗ ಆಡರಂಪ ಆಗೋಗದೆ..... ಅವ್ನ ಕತೆ ಆಮ್ಯಾಕೆ ಯೋಳಿ ಕ್ವಟ್ಟೀನಂತೆ, ನಿನ್ನ ಗುಡ್ಲಿಗೆ ನಡಿ"

ಲಕ್ಕ, "ಅದೂ ಸರಿ, ನಿನ್ನ ನನ್ನ ಇಬ್ಬರ್ನೂವೆ ನಮ್ಮೂರೋರು ಯಾರಾರು ಇಲ್ಲಿ ನ್ವಾಡದ್ರೆ ನಮ್ಮ ಕತೇನೆ ಮುತೀತು. ಬಾ, ಬಾ, ಗುಡ್ಲೊಳಿಕೆ ವೋಗವ" ಎಂದು ಎಜ್ಜೆ ಕಿತ್ತ.

ಗುಡ್ಲ ಬಾಗಿಲ ತೆಗದು, ದೀಪ ಕತ್ತಿಸ್ದಾಗ, ಕಲ್ಯಾಣಿ,

"ಪರವಿಲ್ಲ, ವಾಸ ಮಾಡಬ್ಯೆದು. ನೀನು ಗೋಸುಸಾಬರ ವೊಲದ ತೆವರೀಲಿ ಜೋಪಡಿ ಎತ್ತಿದ್ದೀ ಅಂತ ಕ್ಯಳಿ, ಏನೊ ಎಂತೊ ಅಂತಿದ್ದೆ... ಗೋಸುಸಾಬ್ರೆ ಆಕಿಸಿಕ್ವಟ್ರ?"

"ಗೋಸುಸಾಬ್ರು ಈ ಜೋಪಡಿ ಆಕಕ್ಕೆ ಏನೇನು ಬೇಕೊ ಅದೆಲ್ಲಾನು ಕ್ವಟ್ಟರು. ಅವರ ಸೀನೇಯಿತ ಕರಿಯಪ್ಪನೂ ವಸಿ ಕ್ವಟ್ಟ ಅನ್ನು. ಮಡಿಕೆ ಕುಡಿಕೆ ಮುಕ್ಕಸ ಆ ಸಾಬ್ರೇ ಕ್ವಟ್ಟರು."

"ಈ ಜೋಪಡೀನೂ ಕಟ್ಟಿಸಿಕ್ವಟ್ರ?"

"ಇದೇನವ್ವ, ನೀ ಯೋಲದು–ಇತತ್ತ ಬಾ ಅಂದ್ರೆ, ಇದ್ದದ್ನೆಲ್ಲ ಕಿತ್ತುಗಂಡರು ಅಂದಂಗಾಯ್ತು– ಅವರು ಸಾಮಾನು ಕ್ವಟ್ಟರು ನಾ ಕಟ್ಟಿಕಂಡೆ/"

"ಅವ್ವಿ, ಈ ಜೋಪಡೀಯ ಯಾರ ಸಾಯವೂ ಇಲ್ಲದೇಯನೀ ಒಬ್ಬನೆ ಎತ್ತಿದ್ಯ?... ಬೇಸ್ ಬೇಸ್, ನನ್ನ ಮಗನಾಗಿ ಉಟ್ಟಿದ್ಕೆ, ಸಾರ್ತಕ ಆಯ್ತುಕನ ಬುಡು" ಅಂದು ಲಕ್ಕ, ಅವ್ನ ಉಲ್ಲು ಜೋಪಡಿ ಬಾಗ್ಲ ತಗೀವಾಗ ಅವನ್ಗೆ ಗ್ವತ್ತಾಗದಂತೆ ನೆರಿಗೆ ವಳುಗ್ನಿಂದ ಈಚ್ಗೆ ತೆಗ್ದದ ರೊಟ್ಟಿಗಳ್ನ ನೀಡ್ತ,

"ಅದ್ಯಲ್ಲ ಸರಿ, ಈಗ–ಇದು ಕ್ವಾ... ತಿನ್ನು" ಎಂದಳು.

ಆ ತಿಂಡ್ಯ ಈಸಿಗೊತ್ತ

"ಇನ್ನೂವೆ ರೊಟ್ಟಿ ಬೆಚ್ಚಗೆ ಅವಲ್ಲವ್ವ!– ಇಂಗೆ ತಂದೆ?... ಇದೇನು ಚೋಜಿಗ?" ಅಂದು ಲಕ್ಕ ಬೆರಗುದ.

"ಎಂಗೊ ತಂದೆ–ಅದರ ಕೇಮೆ ನಿಗ್ಯಾಕಲ?– ಗಮ್ಮನೆ ನಿನ್ನೋಟಿಗೆ ನೀನು ಇವ್ನ ವೊಟ್ಟೆಗೆ ಸೇರಿಸಾದು ನ್ವಾಡು."

ಲಕ್ಕ, ತಿಂತಾ ತಿಂತಾ–

"ಅಯ್ಯನ ಚಮಾಚಾರ್ವ ಆಮ್ಯಾಕೆ ಯೋಳ್ತೀನಿ ಅಂದ್ಯಲ್ಲ. ಈಗ ಎಂಗಿದ್ದನು ಅಯ್ಯ?" ಅಂದು ಒಂದೊಂದು ರಾಗಿರೊಟ್ಟಿ ಮುರುಕ ಬೊಡ್ಡಂಗೂ ಎಸೀತಿದ್ದ.

"ಇನ್ನು ಎಂಗಿರಕ್ಕೆ ಆದಾತು–ಆಪಾಟಿ ಎಂಡ ಈರಿದ್ರೆ?"

"ಅದು ಮೊದ್ಲಿಂದ್ಲೂ ಇದ್ದದ್ದೇಯ–ಅದ್ಯಾವ ವೊಸ ಸುದ್ದಿ, ಬುಡು"

"ಅಂಗಲ್ಲ ಕನೊ, ನೀ ಹ್ವಾದ ತಾವಿನಿಂದ್ಲೂವೆ, ನಮ್ಮ ಗುಡ್ಲಲ್ಲಿ ಅವುನು ಒಂದು ಜಿನ ಆದ್ರೂವೆ ನೆಟ್ಟಗೆ ಇಟ್ಟು ಉಂಡಿಲ್ಲ. ನೀರು ಕುಡಿದಿಲ್ಲ. ಸದೊಪ್ಪತ್ತು ಕಾಲವೊವೆ ಈ ಈಚಲುಪ್ಯಟೆ ಆ ಈಚಲುಪ್ಯಾಟೇಂತ ತಿರುಗ್ತಾನೆ ಇರ್ತಾನೆ... ಅವುನು ಮನೆ ಕರ್ಚಿಗೆ ಒಂದು ಚಿಕ್ಕಾಸನೂ ಕ್ವಡ್ತಾ ಇಲ್ಲ... ಅದೆಲ್ಲಿ ಬಿದ್ದಿದ್ದಾನೊ ಏನು ಕತೆಯೊ, ಆ ಬಿಸಿಲು ಮಾರಮ್ಮಂಗೇ ಗೊತ್ತು... ಈಗಂತೂ ಕುಡುದು ಎಂಗಾಗವ್ನೆ ಅಂದೀ–ನ್ವಾಡಬ್ಯಡದು... ಬರೀ ಚಕ್ಕಳಮೂಳೆ!... ಯಾವ ಗಳಿಗೇಲಿ ಏನೊ ನಂಗೆ ಪೂರಾ ಬಯ ಬಂದುಬುಟ್ಟದೆ... ಅಂತಂತ ನಾನೇನಾರ ಇವೇಕ ಯೋಳಕ್ಕ ಹ್ವಾದರೆ, ಅವ್ನ ಕ್ಯಾಣ ಅದೇಟು ತೊರ ತಗೀತಾನೆ ಅಂತೀ–ಆ ಕ್ಯಾಣಾವ ನಮ್ಮೂರ ತುಂಬ ಅಂಚಬೌದು!..."

ಲಕ್ಕ ದುಕ್ಕದ ಜ್ವತೆಗೇ ನಕ್ಕ.

"ಕೂಸು ಎಂಗಿದ್ದರು?"

"ನೀ ಕಂಡಂಗೆ ಚೆಂದಾಗೇ ಇತ್ತು. ಆದೆ ಈಗೀಗ ಯಾಕೊ ನಮ್ಮ ಸಿವುನಿ ಹಾಲೇ ಬತ್ತೋಯ್ತು ಕುಂತದೆ."

"ಇದೊಳ್ಳೆಗಾಚಾರ."

"ಇದಕ್ಕಿಂತ್ಲೂವೆ ದೊಡ್ಡ ಗಾಚಾರ ನಮ್ಮೂರಿಗೆ ಅಂಟಿಕಂಡದೆ.' ಇಲ್ಲೀಗಂಟ ಅವರಿಬ್ರೂವೆ ಎತ್ತಕ್ಕೆ ಇಂಜರೀತದ್ದ ಇಸ್ಯ ಗುಡುಕ್ನೆ ಈಚ್ಗೆ ಬಂತು.

"ಆ ರುಕ್ಮಿಣವ್ವ ಊರ ಬುಟ್ಹೋದ ಇಸ್ಯ ಇಟೋತ್ತಿಗೆ ನಿನ್ನ ಕಿವಿಗೂ ಬಿದ್ದರಬೌದು..."

"ಬೀಳದೇ ಯೇಣವ್ವ–ಆಗ್ಲೆ ಸುತ್ತ ಅತ್ತು ಹಳ್ಳಿಗೂ ಟಾಂ ಟಾಂ ಆಗದೆ."

"ಯೇನಾರ ಆಗ್ಲಿ. ಆ ಬ್ರಾಂಬರು–ತಲೆ ಬೋಳುಸ್ತೀವಿ, ಊರು ಬುಟ್ಟೋಡುಸ್ತೀವಿ, ಅನ್ನೋತಂಕ ವೋಗ್ಬಾರದಾಗಿತ್ತು... ಬೊಸರಿ ಎಂಗಸು. ಅವುಳ ಆ ತೊರ ಗೋಳುಕಿಚ್ಚು ಉಯ್ಯಿಕೊಬ್ಯಾಡದೂಂತ ಅವರಿಗೆ ಅನ್ನುಸಬ್ಯಾಡ್ದ?... ಮ್ವಾಡರು, ಮ್ವಾಡರು ಅಂತ ನಮ್ಮ ಕರೀತಾರಲ್ಲ, ಅವುರಿಗಿಂತ ನಾನು ಏಟೊ ವಾಸಿ ಕನ, ಬುಡು."

"ರುಕ್ಮಿಣವ್ವ ಚಿತ್ರಮೂಲನಕ್ವಾಟೆಗೋಗಿ ಸತ್ತರು ಅಂತಾರಲ್ಲವ್ವ, ನಿಜವಾ?"

"ನಿಜ ಇದ್ರು ಇರಬೌದು. ವೋದ ಅಮಾಸಿಂದ, ಆ ಕ್ವಾಟೆ ಕಡಿಂದ ರಾತ್ರಿನಾಗ ಎಂಗಸು ಸೋಕ ಮಾಡಿದಂಗೇ ನಂಮೂರಿಗೆ ಕೇಳುಸ್ತಾ ಅದೆ~ ಎಲ್ಲಾರು ಅಂಗೆ ಯೋಳಕ್ಕೆ' ಮುಟ್ಟಿಕಂಡಮ್ಯಲೆ, ನನೂವೆ ನಾಕೈದು ಜಿನದಿಂದ ಒಂದೇ ಸಮಕೆ ಆ ಅಳೋ ಸೊಲ್ಲ ಕೇಳ್ತಾನೆ ಇವ್ನಿ. ಸಮರಾತ್ರಿಗೆ ಸುರು ಆಯ್ತದೆ. ನ್ವಡು. ಅದು ಬೆಳಕು ಅರಿಯೋ ವರ್ಗೂವೆ ನಿಲ್ಲಕ್ಕೇ ಇಲ್ಲ!..."

"ಒಳ್ಳೆ ಇಚಿತ್ರ ಕನವ್ವ, ಇದು ನಿಮ್ಮೂರಿಗೆ ಮಾತ್ರ ಎಂಗಸು ಅಳೋ ಅಂಗೆ ಕ್ಯಾಳೋದು. ಇಲ್ಲಿ ನಮ್ಮ ಸಕುನಿಕೊಪ್ಪಲೋರು ಯರಿಗೂವೆ ಅಂಗೆ ಕ್ಯಾಳಿಸಕ್ಕೇ ಇಲ್ಲ. ಇಲ್ಲಿಯೊರಿಗೆಲ್ಲ ಬರಿ ಗುಳ್ಳೆಲಕ್ಕ ಊಳಿಟ್ಟಂಗೇ ಕ್ಯಾಳೋದು!... ಈ ಸಕುನಿಕೊಲ್ಲಲೂವೆ ನಮ್ಮ ದರುಮನಳ್ಳಿ ಅಂಗೆ ಬೆಟ್ಟದ ಬುಡದಲ್ಲೆ ಅಲ್ವ ಇರಾದು?– ಇಲ್ಲಿಗೂ ಯಾಕೆ ಎಂಗಸಿನ ಅಳುವಿನಂಗೆ ಕ್ಯಳಿಸಬ್ಯಾಡದು... ಅದ್ಯಾಕೆ ನಿಮಗೊಂತರ ಸೊಲ್ಲು, ಇಲ್ಲಿಯೋರಿಗೇ ಒಂದು ತರ ಸೊಲ್ಲು ಕ್ಯಾಳಿಸಬೇಕು?...

"ನಂಗೆ ತಿಳೀದು ಕನಪ್ಪ–ಈ ಇಚಿತ್ರ!... ಇದರಿಂದ ನಮ್ಮೂರಿಗೆ ಮತ್ರ ಯೇನೊ ಗಂಡಾಂತ್ರ ಕಾದದೆ ಅನ್ನಾದೇನೊ ಕಾತ್ರಿ– ಇದು ಈಚೀಚ್ಗೆ ಊರಿನಾಗೆ ಸಾಮಾನ್ನವಾಗಿ ಕಡೀತಿರೋ ವಾಕ್ಸ!"

ಆಗ್ಲೆ ವೊತ್ತು ಮೀರಿತ್ತು. ಅವ್ವ ವೊತ್ತಾಗಿ ಊರಿಗೆ ವೋದರೆ ಯಾರಿಗಾದರೂ ಸಂಸಯ ಬರಬೌದು, ಅಂತ.

"ಏಳವ್ವ, ಒಂದು ಮಾಡಕ್ಕೊಗಿ ಇನ್ನೊಂದಾದಾತು!... ನೀನು ನಂಗೆ ರೊಟ್ಟಿ ತಿನ್ನುಸಕ್ಕೆ ಬಂದು, ನನ್ನ ಜ್ವತ್ಗೆ ನೀನನೂವೆ ಗಡೀಪಾರು ಮಾಡಾರು....." ಅಂದು, ಲಕ್ಕ ಎದ್ದ.

"ಮಾಡಿದ್ರೆ ಮತ್ತೂ ವಳ್ಳೇದೆ. ನಿನ್ನ ಜ್ವತ್ಗೆ ನಾನೂ ಬಂದು ಇದ್ದುಕೊತ್ತೀನಿ. ಅದುಕ್ಯಾಕೆ ಚಿಂತೆ?"

ಕತ್ತಿಸ್ದ ಲಾಟೀನ ಕೈಗೆತ್ತಿಗೊತ್ತ,

"ಒಳ್ಳೆ ಮಾತ್ನೆ ಯೋಳ್ದೆ ನೀನು... ಅಲ್ಲ, ನೀನು ಊರು ಬುಟ್ಟು ಬಂದರೆ, ಅಲ್ಲಿ ಸಿವುನಿ ಗತಿಯೇನು? ಆ ಕಂದನ ಗತಿಯೇನು? ವಸಿ ಯೋಚ್ನೆ ಮಾಡು. ಆಮ್ಯಾಕೆ ಅಯ್ಯ ಗುಡ್ಲಿಗೆ ಯಾವತ್ತೊ ಒಂಜಿನ ಗ್ಯಾನ ಬಂದಂಗೆ ಬತ್ತಾ ಅವ್ನೆ ಅಂತಿದ್ದಿ. ನೀ ಇಲ್ಲದೇ ಇದ್ರೆ, ಅದೂ ತೆಪ್ಪೋಗಿ–ಅಯ್ಯ ಪೂರ್ತಾ ಆಲಾಗಬೌದು!..." ಅಂದು ಕರ್ತವ್ಯದ ಕಡ್ಗೆ ಅವ್ವನ ಎಚ್ಚರಿಸ್ದ ಲಕ್ಕ.

"ನೀ ಯೋಳೋದು ಸರಿಕನೊ. ಏಟೇ ಆದ್ರೂ ನಂದು ಎಂಗಸು ಬುದ್ಧಿ. ನಮ್ಮ ನೆರಳು ಮುಂದಕೆ ನಾವು ನ್ವಾಡನಾರೊ..."

ಊರಿನ ಕೆರೆಯ ಕೋಡಿ ಸಮೀಪಿಸುವವರೆಗೂ ಅವರಿಬ್ಬರ ನಡುವೆ ಇಂಥವೇ ಮತುಗಳು ಲಕ್ಕ ಅಲ್ಲಿ ನಿಂತು,

"ಅವ್ವ, ಇನ್ನು ನೀನು ವೊಂಡು, ಇನ್ನುಮುಂದುಕೆ ನಾ ಬರಾದು ತರವಲ್ಲ... ಕತ್ತಲೆ ಆಗ್ಲೆ ಗಕುಂ ಅನ್ನಕ್ಕೆ ಅತ್ತದ. ದಾರೀಲಿ ಹೊಳ ಹುಪ್ಪಟೆ ಹರೀತಿರ್ತವೆ. ಎಚ್ಚರದಿಂದ ಎಜ್ಜೆ ಹಾಕ್ಕಂಡೋಗು...ನಿಂಗೊ ಮೊದ್ಲೇ ಕಣ್ಣು ಮಂಜು. ಆಮ್ಯಾಕೆ ನೀ ಇಂಗೇ ಪದೇ ಪದೇ ನಂಗೆ ರೊಟ್ಟಿ ತಿನ್ನುಸ್ತೀನಿಂತ ಇಲ್ಲಿಗೆ ಬರೊ ಸಾಸ ಮಾಡಬ್ಯಾಡ, ಉಸಾರು."

ಕಲ್ಯಾಣಿ ಲಕ್ಕನ ಎಚ್ಚರಿಕೆಗೆ ಸೊಪಪ್ಪಸು ಹಾಕಲಿಲ್ಲ. ಮುಂದಿನ ದಿನಗಳಲ್ಲಿ ಅವಳು ರೊಟಿಗಳನ್ನ ತನ್ನ ನೆರಿಗೆ ಒಳಗೆ ಸಿಕ್ಕಿಸಿ ತರೋದು ತೆಪ್ನಿಲ್ಲ. ಇನ್ನುಮ್ಯಾಗೆ ತರಬ್ಯಾಡ ಕನವ್ವ, ಅಂತ ಲಕ್ಕ ಯೋಳೋದು ತೆಪ್ನಿಲ್ಲ!

ಕಲ್ಯಾಣಿ ಆ ರಾತ್ರಿ ಗುಡ್ಲಿಗೆ ಬಂದೊಡನೆಯೇ, ಸಿವುನಿ ಲಕ್ಕನ ಯೋಗಕ್ಷೇಮದ ವಿಚಾರವಾಗಿ ಕೇಳಿದ್ದಳು. ಆಗ ಕಲ್ಯಾಣಿ ತಾನು ಹೋಗಿಬಂದ ವಿವರಗಳನ್ನೆಲ್ಲ ಸಾಂಗವಾಗಿ ತಿಳಿಸಿ,

"ಆ ಇಚಾರ ಹೆಂಗಾರ ಇರ್ಲಿ, ಆದ್ರೆ ನಮ್ಮ ಲಕ್ಕ ಒಬ್ಬನೇ ಆ ಗುಡ್ಲ ಎತ್ತಿರಾದು ಯಾರಾರು ತಾರೀಪು ಮಾಡಬೇಕು, ನ್ವಾಡೇ ಸಿವುನಿ..... ಆ ಗುಡ್ಲ ಏಳಿಸೋವಗ, ಅವನೊಬ್ಬಂದೆ ಕೇಮೆ.... ದೊಂಬನೂ ಅವನೆ, ಧೂಳು ಹ್ವಡೆಯೋನು ಅವನೆ, ಗಣೆ ಎತ್ತೋನೂ ಅವನೆ...."

"ನೀ ಹ್ಯಾಳಾದ ಕ್ಯಾಳ್ತದ್ದರೆ, ನಂಗೂ ಆಸೆ ಆಯ್ತದೆ. ನಾನೂವೆ ಹ್ವಾಗಿ ಅಣ್ನ ನ್ವಾಡಿಕಂಬರಾನೆ ಅಂತ! ಹ್ವಾಗಲವ್ವ?"

"ಅಯ್ಯಯ್ಯೊ ಬ್ಯಾಡ, ಬ್ಯಡ..... ಪುಣಾತಿಗಿತ್ತಿ, ಹಂಗೆಲ್ಲಾರ ದುಡುಕಿ ಬುಟ್ಟೀಯೆ!... ಈ ಊರಿನ ಉತ್ಪತ್ತಗರ ಕೈಗೆ ಸಿಕ್ಕಂಡರೆ, ಮುಗುದೋಯ್ತು ಕತೆ! ನಿನ್ನೂವೆ ಇಲ್ಲಿಂದ ಅಟ್ಟದೆ ಬುಡಕ್ಕಿಲ್ಲ...."

## ೩೭

ಹೊಲಗೇರೀಲಿ ಅವರ ಬದುಕು ಇಂಗೆ ಮಂಟಾಡಿಕಂಡೇ ವಾರದ ಮ್ಯಾಲೆ ವಾರ ಕಳೀತು. ಕದ್ದಕದ್ದು ಕಲ್ಯಾಣಿ ಲಕ್ಕಂಗೆ ರಾಗಿರೊಟ್ಟಿ ತಟ್ಟಿ, ಜಿನಕಾನೊ ಖಾರಾನೋ ಅವೆರಡು ರೊಟ್ಟಿ ವಳುಗಿಟ್ಟು, ತನ್ನ ಸೀಗೆ ನೆರಿಗೆಗೆ ಸೆಕ್ಕಿಸಿ, ತಕ್ಕಂಡೋಗದ ಮಾತ್ರ ನಿಲ್ಲಸನಿಲ್ಲ. ಆದರೆ ಈಚೆಗೆ ನಾಕೈದು ಜಿನದಿಂದಲೂವೆ, ಜ್ವರ ಬಂದು ಅವಳು ಪೂರ ಸೋತಿದ್ದಳು. ಸಿವಿನಿ,

"ಇದ್ಯಾನವ್ವ, ನಿನ್ನ ಮೈಯಿ ನಾಕು ಜಿನದಿಂದಲೂವೆ ಕುದ್ದೊಯ್ತಾ ಕುಂತದೆ. ಈ ಸ್ತಿತೀಲಿ ನೀ ರೊಟ್ಟಿ ತಕ್ಕಂಡು ಅಣ್ಣನ್ನ ತಾವಿಕೆ ಹ್ವಾಗದು ಬ್ಯಾಡ. ಜ್ವರ ಬುಟ್ಟಮ್ಯಾಲೆ ಹ್ವಾಗೀವಂತೆ" ಎಂದು ತಡೆದರೂ ಕಲ್ಯಾಣಿ,

"ಅಯ್ಯೋ, ಅದೇಟು ಜಿನ ಬದುಕಬೇಕು, ಬುಡೆ ಸಿವುನಿ... ಬಿದ್ದೋಗೊಮರ, ಬೀಸೋಗೊ ಗಾಳಿ ಹಂಗಿರೋ ಈ ಜಲ್ಮಕ್ಕೆ ಅದ್ಯಾಕೆ ವೋಟು ಪೋಸಾಕು ಮಾಡಬೇಕು?– ಈ ಕಾಲು ನಡೀತೀನಿ ಅನ್ನಾವರ್ಗೆ ನಡುದು ಬುಡಾದು, ವೋಟೇಯ" ಎಂದು ಲಕ್ಕನ ಗುಡ್ಲಿಗೆ ಹೋಗಿ ಬರೋದ ನಿಲ್ಲಸನಿಲ್ಲ.

ಲಕ್ಕನೂ ಹೇಳ್ತಾನೇ ಇದ್ದ:

"ಬ್ಯಾಡ ಕನವ್ವ, ನೀನು ಈಪಾಟಿ ಜರದಲ್ಲಿ ಓಡಡಿದ್ರೆ, ಅದು ಇಸಮಿಸಿಕಂಡು ಯೆಚ್ಚುಕಮ್ಮಿ ಆದ್ರೇ ನೋಡಾರ್ಯರು?"

ಅವನ ಬುದ್ಧವಾದದ ಮಾತಿಗೆ ಕಲ್ಯಾಣಿ ನಿಶ್ಯಕ್ತನಗೆ ನಕ್ಕು,

"ನೀ ಇದ್ದೀಯಲ್ಲ" ಅಂದು, "ಗುಮ್ಮನೆ ರೊಟ್ಟಿ ತಿನ್ನು" ಅಂದಿದ್ದಳು.

ಅಂತೂ ಪ್ರತಿ ರಾತ್ರಿ ಲಕ್ಕ ಮಾಡಿಕೋಬೇಕಾಗಿದ್ದ ಒಪ್ಪೊತ್ತಿನ ಅಡಿಗೇಯ ಕಲ್ಯಾಣಿ ಹೀಗೆ ಬಹುತೇಕ ತಪ್ಪಿಸಿದ್ದಳು!

ನಾಕು ಜಿನದಿಂದ ಎಡದ ಕಂಕುಳಲ್ಲಿ ಅದೇನೊ ಕುಂದಂಗೆ ಎದ್ದುಬುಟ್ಟು, ಕಲ್ಯಾಣಿಗೆ ಅದು ಬ್ಯಾರೆ ಬಾಯಿಬಡಿಕೊಳೋವೋಟು ನೋವು!... ಆದರೂ ಭಾತಿ ಹೆಂಗಸು. ಅದರಾಗು ಮಗನಿಗೆ ರಾಗಿರೊಟ್ಟಿಯ ಸಂಜೆ ದನೀಗೆ ತಕ್ಕಂಡೋಗೋದ ಮಾತ್ರ ತಪ್ಪಿಸನಿಲ್ಲ.

ಒಂದು ಜಿನ ಸಂಜೆ, ಕನ್ಯಾಣಿ ಮಂಟಾಡ್ತ ಲಕ್ಕನ ಗುಡ್ಲ ತಾವಿಕೆ ಹೋಯ್ತಿದ್ಲು. ಇನ್ನೂ ಮುಕ್ಕಾಲು ದಾರಿ ಸಾಗಿರನಿಲ್ಲ ಇನ್ನು ಮುಂದಕೆ ನಡೆಯಕ್ಕೇ ಆಗಕ್ಕಿಲ್ಲ ಅನ್ನುಸಿ, ನಂಜೇಗೌಡರ ಹೊಲದ ತೇವರೀಲಿ ಇದ್ದ ಬ್ಯಲದ ಮರ ಒರಗಿ ಕುಂತಳು. ದೇಯ ಪೂರ ದಣಿದಿದ್ರೂವೆ, ಬ್ಯಾಲದ ಮರ ಆಂತು

ನೋಡಿದ್ಲು. ತಾನು ಆ ಮರದ ಹಣ್ಣ ಅದೇಟು ತಿಂದಿದ್ನೊ ಅನ್ನೊಸೀ ಯೋಚ್ಣೆ ಮಿಂಚಿ ಮಾಯವಾಯ್ತು. ಯಾಕೋ ಪೂರ ಸುಸ್ತು. ಅಲ್ಲೆ, ಬ್ಯಾಲದ ಮರದ ಬುಡದಲ್ಲೆ ಮನಗಾನ ಅನ್ನುಸ್ತು. ಕುಂತಿದ್ದಂಗೇಯ ವಕ್ಕಡೀಕೆ ಮಂಟಿಗಂಡಿದ್ದಲು.

ಬೆಟ್ಟದ ಕಡಿಂದ ಬತ್ತಿದ್ದ ರೈತರು "ಇದ್ಯಾಕೆ ಕಲ್ಯಾಣಿ, ಇಲ್ಲಿ ಬಂದು ಬಿದ್ದುಕಂಡಿದ್ದಾಳು?" ಅಂದುಕೊತ್ತ ಹೋದರು. ಇನ್ನು ಕೆಲವರು ಅವಳ್ನ ಕೂಗಿ ಏಳಸಕ್ಕೆ ಪ್ರಯತ್ನ ಮಾಡಿ, "ಇದೇಟು ಯಮನಿದ್ದೆಯಪ್ಪ, ಈ ಮುದುಕಿಗೆ?" ಅಂದುಕೊತ್ತ ಹೋದರು.

ಆದ್ರೆ ಅದೇ ಹಾದೀಲಿ ಬೆಟ್ಟದ ಕಿಬ್ಬಿಯಿಂದ ಪುಳ್ಳೆ ಮುರಿದು, ಅದರ ಕಟ್ಟ ಹೊತ್ತುಗಂಡು ಬತ್ತಿದ್ದ ದ್ಯಾವಾಜಿ ಮಾತ್ರ, ಕೊಂಟಿನಂಗೆ ಬಿದ್ದಿದ ಕಲ್ಯಾಣಿ ನೋಡಿ, ಹತ್ರ ವೋಗಿ ಮುಟ್ಟಿ ನೋಡಿದಳು. ದೇಹವಗ್ಲೆ ಶೀತಗಟ್ಟಿತ್ತು. ಬಿರ್‍ರನೆ ಲಕ್ಕನ್ನ ಹುಡುಕ್ಕೊಂಡು ಹ್ವಂಟಳು. ಅವನು ಶಕುನಿ ಕೊಪ್ಪಲಲ್ಲಿ ಗೋಸು ಸಾಬಹ ಹಿತ್ತಲ ಬೇಲಿಗೆ ಮುಳ್ಳು ತಂದು ಹೊದ್ದಿಸಿದ್ರೂವೆ, ಯಾರೊ ಪರಿಂಗರು, ಸಾಬರ ಹೆಡತಿ ಬೆಳುದಿದ್ದ ತರಕಾರಿ ಕದಿಯಕ್ಕೆ ಅಲಲ್ಲಿ ಮಾಡಿದ್ದ ಕನ್ನವ ಮುಚ್ಚುತಾ ನಿಂತಿದ್ದೋನು "ಕನ್ನ ಮುಚ್ಚಿ, ಮುಗೀತು ಸಾಹೇಬ್ರೆ" ಅಂತ ಅವರ ಹಟ್ಟಿ ಮುಂದುಕೆ ಬರಕ್ಕೂ ದ್ಯಾವಾಜಿ ಅಲ್ಲಿಗೆ ಬರಕ್ಕೂ ಒಂದಾಯಿತು.

ದ್ಯಾವಾಜಿ ಕಲ್ಯಾಣಿ ಸತ್ತ ಸುದ್ದಿ ತಿಳಿಸಿದ ಕೂಡಲೆ, ಜಟ್ಟನೆ ಕಲ್ಯಾಣಿ ಸತ್ತು ಬಿದ್ದ ಜಾಗಕ್ಕೆ ದೌಡಾಯಿಸಿದ ಲಕ್ಕ. ತಾಯಿಯ ಹೆಣದ ಮೇಲೆ ಬಿದ್ದು ಒದ್ದಾಡಿದ. ತಟಕ್ಕನೆ ಅವನಿಗೆ ದರುಮನಳ್ಳಿ ಪಾಲಿನ ನೆಲದಲ್ಲಿ ತಾನುನಿಂತಿವ್ನಿ ಅಂತ ಅರುವಾಯಿತು. ಇನ್ನೂ ಇಲ್ಲಿ ಒಂದುಗಳಿಗೆ ನಿಂತರೂ ಕೇಡು ತಪ್ಪದು ಅಂದುಕೊತ್ತ, ಅವ್ವವನ ಹೆಣವ ಹೆಗಳಿಗೆ ಹಾಕ್ಕೊಂಡು ಅವಳ ಹೆಣಕೆ ಪದ್ಧತಿಯಂತೆ 'ಕಲ್ಲುಸ್ಯಾವೆ" ಮಾಡಕ್ಕೆ ಬೆಟ್ಟದ ಕಿಬ್ಬಿಯಲ್ಲಿರೊ ಕಲ್ಲುಮಂಟಿ ತಾವಿಕೆ ಹ್ವಂತ.

ಇಷ್ಟರಲ್ಲಿ ದ್ಯಾವಾಜಮ್ಮ ಓಡೋಗಿ ಸಿವುನಿಯೊಬ್ಬಳಿಗೇ ಅಲ್ಲದೆ ಹೊಲಗೇರಿಯೋರು ಯಾರ್‍ಯಾರು ಸಿಕ್ಕಿದರೊ ಅವರಿಗೆಲ್ಲ, ಕಡೀಕೆ ಊರಿನಾಗೆ ಅವಳಿಗೆ ಯೋಗ್ಯರು ಅನ್ನಿಸಿದೋರಿಗೂ ಮುಕ್ಕಸ, ಸುದ್ದಿ ಮುಟ್ಟಿಸಿದಳು.

ಲಕ್ಕ ಅವ್ವನ ಶವಾವ ಕಲ್ಲುಮಂಟೀಲಿ ಉಪಾಯದಲ್ಲಿ ಇಳುಸಿದ. ಅವಳ ಕಾಲುಗಳ ಮಡಿಸಿ, ಕುಂಡರಿಸಕ್ಕೆ ಯತ್ನ ಮಾಡಿದ. ಅವು ಆಗ್ಲೆ ಬಿಗಿತುಕೊಂಡು ಮಡಿಚೋದು ಎಕ್ಕಾಸ ಆಯ್ತು. ಹಂಗೂ ಅರ್ದ ಕುಂತ ಸ್ತಿತೀಲಿ, ಅರ್ದ ನಿಂತ ಸ್ತಿತೀಲಿ, ಅವಳ್ನ ಮಂಟಿವಕ್ಕಡೀಕೆ ವರಿಗಿಸಿ, ಅವಳ

ಕಾಲಗಳ್ನ ನೆಕ್ತಾ ಇದ್ದ ದೊಡ್ಡನ ಹಚಾ ಅಂತ ಓಡೀಸ್ದ. ಅಲ್ಲಿ ಮಸ್ತಾಗಿ ಬಿದ್ದದ್ದ ದಪ್ಪದಪ್ಪ ಕಲ್ಲುಗಳ ಅವಳ ಸುತ್ತ ಒಂದೊಂದಾಗಿ, ಒಂದರಮ್ಯಲೊಂದ ಇಡಕ್ಕೆ ಸುರುಮಾಡಿದ.

ಲಕ್ಕ ಹಿಮಗೆ ಕಲ್ಲುಸ್ಯವೆ ಮಾಡ್ತಿರೋನಾಗ, ಬೊಡ್ಡ ಕ್ಲಯಾಣಿಯ ಹೆಣದ ನಡುವಿನ ತಾವಿಕೆ ನಗೆದು ನೆಗೆದೂ ಕೆಳಕ್ಕೆ ತುಪ್ಪನೆ ಬೀಳ್ತಿದ್ದದ್ದು, ಒಂದು ಪದ ಲಕ್ಕ ಕಲ್ಲುಗಳ ಎತ್ತಿಗಂಡು ಬರಕ್ಕೆ ಹ್ವಾದ ಸಮಯ ಕಾದು ಆ ಹೆಣದ ಸ್ಯಾಲೆ ನೆರಿಗೇಯ ಕಚ್ಚಿ ಏಳೀತು. ಆಗ ನೆರಿಗೆ ಬಿಚ್ಕೋಗಿ, ರೊಟ್ಟಿಗಳು ಕೆಳೀಕೆ ಬಿದ್ದದ್ದು ಕಾಣಿಸದೆ ಇದ್ರೂವೆ, ಸದ್ದಿನಲ್ಲೆ ಗ್ವತ್ತುಮಾಡಿಕಂಡು, ಸ್ಯಾಲೆ ಕೆಳ್ಗೆ ನುಸುದು, ರೊಟ್ಟಿ ಕಚ್ಚಿ, ಈಚ್ಗೆ ಎಳಕತ್ತು.

ಲಕ್ಕ ಇದೇನು ಗಲಾಟೆ ಅಂತ ತಿರುಗಿ ನ್ವಾಡ್ದ. ಕ್ವಾಪ ಅತ್ತಿ, ಒಂದು ಸಣ್ಣಕಲ್ಲು ಎತ್ತಿ ಅದರ ಮ್ಯಾನೆ ಬೀಸ್ದ. ರೊಟ್ಟಿ ಕಚ್ಚಿದಂಗೇಯ ಬೊಡ್ಡ ದೂರಕೆ ಓಡೋಗಿ ತಿಂತಾ ನಿಂತುಕತ್ತು.

"ಮಾಳೋತ್ತದ್ದಕ್ಕೆ ಬಕಾಸುರನ ವೊಟ್ಟೆ..." ಅಂತ ಬೈಕೊತ್ತ, ಬೊಡ್ಡನ ಜಗಾಗಟದಲ್ಲಿ ಬಿಚ್ಕೊದ ಅವ್ವನ ನೆರಿಗೆ ಸರಿಪಡಿಸ್ತ ಇರೋನೂವೆ, ಅವ್ವನ ವೊಕ್ಕಲದ ಸುತ್ತ ರೊಟ್ಟಿ ಆಗಲಕ್ಕೆ ಸುಟ್ಹೋಗಿ, ಗುಂಡಗಿನ ಗಾಯದ ಕಪ್ಪುಕಲೆ ಕಾಣುಸ್ತು. ಲಕ್ಕ ಬೆಚ್ಕೊದ. ಅವನ್ಗೆ ಈಗ ವೋಳೀತು–ಅವ್ವ ತತ್ತಿದ್ದ ರೊಟ್ಟಿ, ಇಲ್ಗೆ ಬರೋಗಂಟ ಅದೆಂಗೆ ಬೆಚ್ಚಗೆ ಇರ್ತಿದ್ದೊ ಅಂತ!... ಇನ್ನೂ ಬಿಸಿಯಾಗಿದ್ದಂಗೇಯ ರೊಟ್ಟಿಗಳ ಮೊಡಿಸಿ ತನ್ನ ನೆರಿಗ್ಗೆ ಸೆಕ್ಕುಸಿ ತತ್ತಿದ್ದಲು. ಕಿಬ್ಬಟ್ಗೆ ನೆರಿಗ್ಗೆ ನಡೂಮದ್ಯ ಅವು ತಮ್ಮ ಸಾಖ ಕಳಕೊಳ್ಳದೆ ಬೆಚ್ಚಗೆ ಇರ್ತಾ ಇದ್ದೊ... ಒಕ್ಕ ಅವ್ವನ ವೊಕ್ಕಳದ ಸುತ್ತ ಕಯ್ಯಿಡುಸ್ದ. ಓಲ್ಲನೆ ಕಣ್ಣಲ್ಲಿ ನೀರು ಬಸೀತು...

ಅವ್ವ, ತನಗಾಗಿ ಅದೇಟು ಸ್ರಮ ತಕ್ಕತಿದ್ದಲು... ಮಗ ತಿನ್ನಬೇಕು, ಸುಕವಾಗಿರಬೇಕು. ಚೆಲುವಿಯ ಲಗ್ಣಮಾಡಿ, ಮೊಮ್ಮಗ್ನ ತತ್ತುಗಾಬೇಕು!... ನಾ ಚಿಕ್ಕೋನಾಗಿರೋ ಕಾಲದಿಂದ್ಲೂವೆ ಇದೊಂದೆ ಜಪ ಅವಳ್ಗೆ... ಇವತ್ತು ಅನ್ನದ ಮಗ, ನಳಿಕೆ ಚಿನ್ನದ ಮಗ–ಅಂತ ತನ್ನ ವೊಟ್ಟೆ ಕಟ್ಟಿ ಸಕಿದ್ಲು... ನಂಗೆ ಗೆಪ್ತಿ ಇರೊ ಅಂಗೆ, ತಾನು ಅಸಿದಿದ್ರೂವೆ, ಒಂಜಿನ ಅದ್ರೂ ಲಕ್ಕ ಅಸಿದಿರಕ್ಕೆ ಬುಡ್ತಿರನಿಲ್ಲ. ಎಲ್ಲಿಂದಲೊ ಸಾಲ ಸೊಲ ಮಾಡಿ ತಂದಾಕಿ, ಅಮ್ಯಾಕೆ ಆ ಸಾಲ ತೀರುಸಕ್ಕೆ ತನ್ನ ಮೈ ಮುರುದು ಗೇಯಿತಿದ್ಲು!... ಆಗ ದ್ಯಾವ್ಯಜಿ ಕುಸಾಮತ್ತಿಗೆ ಅಂತಿದ್ದಲು?

"ಊ–ನೀನು ಇಂಗೆ ತಿನ್ನದೇಯ, ಇವುನ್ಗೆ ತಿನ್ನುಸಿ ತಿನ್ನುಸಿ, ಇವುನ ಅಂಡ ದಪ್ಪ ಮಾಡು. ಕೊನೀಕೆ ಇವನೇ ನಿನ್ನ ತಿಕ್ಕೆ ಗೇರು ಉಯ್ತಾನೆ..."

–ಈಗ ದ್ಯಾವಾಜಿ ಮತೇ ನಿಜ ಆಯ್ತಲ್ಲ?...

ನನ್ನವ್ವ ಸಾಕಿ, ಸಲಯಿದ್ದಕ್ಕ, ಅವಳ ಕಡೆಗಾಲ್ದಲ್ಲಿ ನನ್ನಿಂದ ಅವುಳು ಯಾವ ಸುಕ ಕಂಡ್ಲು?.... ಸುಕ ಕ್ವಡದಿದ್ರೆ ಸಮಾಸು, ನನ್ನಿಂದ ಅವಳು ವಳುಗೆ ಕೊರಗೊ ಅಂಗಾಯ್ತಲ್ಲ?...

ಅವ್ವನ ವೊಟ್ಟೆಗೆ ಮೊಕ ಅಂತು ಲಕ್ಕ ಕಣ್ಣೀರಿನಿಂದ್ಲೆ ಅವನ ವೊಟ್ಟೆ ತೊಳಿತಿದ್ದ. ಅಂಗಿರುವಾಗ ಅವ್ನ ಮನಸು ಇಂದ್ಕೆ ಇಂದಕೋಯ್ತು: ಲಕ್ಕ ಚಿಕ್ಕೋನಾಗಿದ್ದಾಗ ಮೈಮ್ಯಾಲೆ ಬಟ್ಟೆ ಆಕದೆ ಗೊಣ್ಣೆ ಸುರುಸ್ತ ನಿಂತಿದ್ದ. ಇದ ದ್ವಾವಾಜಮ್ಮ ನ್ವಾಡಿ,

"ಕಲ್ಯಾಣಿ, ಕಲ್ಯಾಣಿ–ಬಾರೆ ಇಲ್ಲಿ– ನ್ವಾಡು ನಿನ್ನ ಹೈದ ಇಲ್ಲಿ ಜಿನ್ನಯ್ಯವಾಗಿ ನಿಂತವ್ನೆ. ಆ ಸವಣಪ್ಪನ ನ್ವಾಡಕ್ಕೆ ದುಡ್ಡು ಖರ್ಚುಮಾಡ್ಕಂಡು ಆ ಸವಣಬೆಳ್ಗೊಳಕ್ಕೆ ಯಾಕವ್ವ ವೋಗಬೇಕು?– ಈಗ ಭೂಪತಿ ಕಿಟ್ನ ದುರಸ್ನ ಆದಮ್ಯಾಲೆ ಮುಗೀತು, ಕೈಲಾಸ ಮೂರೇ ಗೇಣು!" ಅಂದಿದ್ಲು.

ಅವ್ವ ಗುಡ್ಡಲು ವಳುಗ್ನಿಂದ ಬಂದೋಳು, ಗುಡ್ಲ ವೋರೀಕೆ ಬೆತ್ತಾನು ಬೆತ್ತಲೆ ಹಂಚಿಕಡ್ಡಿಗೆ ಕಾಚೆಕಾಯಿ ಸಿಕ್ಕಿಸಿ, ದೂರದೂರ್ಕೆ ವೋಗೋವಂಗೆ ಎಸೀತಿದ್ದ ನಾಕು ವರುಸದ ಮಗನ್ನ ನಗಡ್ತ ತತ್ತಿಗಂಡು,

"ಏಡು ಜಿನಕೊಂದು ಬಟ್ಟೆ ಈ ಕೊಳಕ ಹೈದಂಗೆ ದಿರುಸು ಅವಣಿಸಿಕ್ಕೆ ನವೇನು ಕುಬೇರ್ನ ಮೊಮ್ಮಕ್ಳ?" ಅಂದು, ಗುಡ್ಲ ವಳೀಕೋಗಿದ್ದಲು.

ಅವ್ವ ಇಂಗೆ ಆಗಾಗ ಮಾಡ್ತಾನೆ ಇದ್ಲು...

ಇದೆ ಯೋಚ್ನೇಲಿ, ಅದೇಟೊತ್ತು ಅವ್ವನ ಎಣಾವ ತಬ್ಬಿದಂಗೇ ನಿಂತಿದ್ದನೋ ತಿಳೀದು!... ಅಪ್ಪಾರ ಕಾಲ ಕಳುದಮ್ಯಾಲೆ, ಮೆತ್ತಗೆ ಅವ್ವನ ವೊಟ್ಟಿಂದ ಮೊಕ ತೆಗುದ... ಏಟೊತ್ತು ತಬ್ಬಿಕಂಡಿದ್ರೆ ತಾನೆ, ವೊಂಟೋದ ಜೀವ ಮತ್ತೆ ಮರಳಿ ಬಂದತ?– ಅಂತ ಸಮಾದಾನ ತಂದುಕಂಡು, ಪುನಾ ಕಲ್ಲುಗಳ ಒಂದೊಂದಾಗಿ ಎತ್ತಿ ಎತ್ತಿ ಅವ್ವನ ಎಣದ ಸುತ್ತ ಪೆರಿಸಕ್ಕೆ ಆರಂಬಿಸ್ದ...

ಸಿವುನಿ ಮೊಗ ತತ್ತುಗಂಡು ದ್ವಾವಾಜಿ ಜ್ವತ್ಗೆ ಸುಮಾರು ವೊತ್ನಲ್ಲೆ ಬಂದು, ಅಣ್ಣ ಅವ್ವನ ಸವಕೆ ಕಲ್ಲುಸ್ಯಾವೆ ಮಾಡಾದ್ನೇ ಕಣ್ಣೀರು ಕಚ್ಚಿ ನ್ವಾಡ್ತಾ ನಿಂತಿದ್ದಲು. ವೊಲಗೇರ್ಯ ಇನ್ನೂ ಕೆಲವು ಗಂಡಸರು ಎಂಗಸರೂವೆ ಬಂದು ನಿಂತು ಕಂಡು ನ್ವಾಡ್ತಿದ್ರು. ಆ ಕಡೆ ಕೆಲುಸ್ಕೆ ಬಂದ ಊರ್ನ ಬಾಕಿ ಜನವೊನೆ ಅಂಗೆ ನ್ವಾಡ್ತ ನಿಂತುಕಂಡು. ನಂಜೇಗೌಡರೂವೆ ತಮ್ಮ ಹೊಲಕೆ ಬಂದು ನಿಂತುಕಂಡಿದ್ರಿಂದ, ಸಿವುನಿ ಅಣ್ಣನ ಸಮೀಪ್ಕೆ ವೋಗಕ್ಕೆ ಅಡಚ್ಣಗಿ ದೂರದಿಂದ್ಲೆ

ಕಣ್ಣೀರು ಸುರುಸ್ತಾ ನಿಂತ್ಲು.

ನಂಜೇಗೌಡ್ರು ಲಕ್ಕ ತನ್ನ ಅವ್ವಂಗೆ ಕಲ್ಲುಸ್ಯಾವೆ ಮಾಡೋದ ನ್ವಾಡಕ್ಕೆ ಬಂದೋರಲ್ಲ. ಪಾರೆಸ್ಟ್ ಗಾರ್ಡು ರಾಮಯ್ಯ ತನ್ನ ಮಾಮೂಲು ಸರ್‍ಯಾಗಿ ಬಟವಾಡ ಆಗನಿಲ್ಲ ಅಂತ, ಕಾಡ್ನಲ್ಲಿ ಕದ್ದು ಗಂಧದ ಮರಗಳ ಕಡಿಯಕ್ಕೆ ಅವಕಾಸ ಕ್ವಟ್ಟಿರನಿಲ್ಲ. ಅದಕ್ಕೇನೆ ಊರ್‍ನಲ್ಲಿ ರಸಕವಳ ಮೆದ್ದಿಸಿ, ಕಾಂಚಣ ಏನು ಕ್ವಡಬೇಕು ಅನ್ನಾದು ಇನ್ನೂ ಬಗೆ ಅರೀದೆ, ಅದರ ತಿರ್ಮಾನಕ್ಕಾಗಿ ತಮ್ಮ ಮೊಲಕ್ಕೆ ಬಂದು, ಗಾರ್ಡಿನ ಜ್ವತ್ಗೆ ಚರ್ಚೆ ಮಾಡ್ತ, ಬ್ಯಾಲದ ಮರದ ಕೆಳ್ಗೆ ಕುಂತರು.

ಕಲ್ಲು ಸ್ಯವೆ ಮಾಡ್ವಾಗ ಲಕ್ಕ ದೂರದ ವೊಲದಲ್ಲಿ ತನ್ನ ತಂಗಿ ಸಿವುನಿ ಮೊಗ ತತ್ತಿಗಂಡು ನಿಂತಿದ್ದ ನ್ವಡಿದ್ರೂವೆ, ನಂಜೇಗೌಡ್ರು ಸಮಾಪದಲ್ಲೆ ಕುಂತಿದ್ರಿಂದ, ಅವಳತ್ರಕ್ಕೆ ತಾನು ವ್ವಾಗೋದಾಗ್ಲಿ, ತನ್ನತ್ರಕ್ಕೆ ಅವಳು ಬರೋದಾಗ್ಲಿ ಸಧ್ಯಾನೇ ಇರನಿಲ್ಲ...

"ಇವರ ಮನೆ ಕಿಸಾಂತರಾಗ, ನನ್ನ ಸೊಂತ ತಂಗಿ ಕುಟ್ಟು ಮಾತಾಡಕ್ಕೆ ಆಸ್ಪದ ಕ್ವಡಲ್ಲರಲ್ಲ! ಅಂತ ಕ್ಯಾಣದಿಂದ ಗೊಣಗ್ತ ಅವನು ಮಾಡ್ತಿದ್ದ ಕಲ್ಲುಸ್ಯಾವೆ ತನ್ನವ್ವನ ಮೊಕ ಮುಚ್ಚಿದಮ್ಯಾಲೆ, ತಲೆಗೆ ದಪ್ಪ ಮರದ ಐದಾರು ತುಂಡು ಬಡಿಗೆಗಳ್ನ ಕ್ವಟ್ಟು, ಅದರ ಮ್ಯಲೆ ಒಂದು ದಪ್ಪಾನೆ ಬುಂಡುಗಲ್ಲ ಯೇರ್‍ದ.

## ೩೮

ಕುಂಬಾರಗೇರಿಯಲ್ಲಿ ಮರಿಸೆಟ್ಟಿ ಬೆಳಿಗ್ಗೆ ಎದ್ದವನೆ, ತನ್ನ ಎಡತಿ ಜವನಿಯನ್ನು ಕರೆದು, "ಜವನಿ, ಇವೊತ್ತು ಕಂಪಲಾಪುರದ ಸಂತೆಗೆ ನಾ ವೋಗಕ್ಕಿಲ್ಲ" ಎಂದು ತಿಳಿಸಿದ.

"ಯಾಕೆ?– ನೆನ್ನೆ ಹೇಳ್ತಿದ್ರೆ. ಕಂಪಲಪುರದ ಸಂತ್ಗೆ ವೊಸ ಮಡಕೆಗಳ್ನ ತಕ್ಕೊಂಡೋಯ್ತೀನಿ ಅಂತಾವ?" ಜವನಿ ಮೂಗಿನ ತುದಿಗೆ ಬೆರಳಿಟ್ಟುಕೇಳಿದ್ದಳು.

"ನಾತ್ರ ವೊಯ್ತುನಿ ಅಂದಿ. ಆದ್ರೆ ಈಗ್ಯಾಕೊ ಮಯ್ಯಿನಲ್ಲಿ ವ್ಯನ ಕಾಣ್ತಾ ಇಲ್ಲ..."

"ಅಂದ್ರೆ, ಜರಗಿರ ಬಂದಿದ್ದತ?"

"ಇರಬೌದು, ಯಾಕೋ ಎದ್ದೇನಿಂದ ಬೋ ಸುಸ್ತು."

"ಊ. ಜರ ಬಂದಿರೋವಂಗದೆ. ನೀವು ಸುಮ್ಮಕೆ ಅಟ್ಟೀಲೆ ಮನಕ್ಕನ್ನಿ. ನಾನು ಮಡಿಕೆಗಳ ಕಂಪಲಪುರದ ಸಂತ್ಗೆ ತಕ್ಕಂಡೋಗಿ ಮಾರಿಕೊಂಬತ್ತೀನಿ"

ಎಂದು ಜವನಿ ಏಳುತ್ತಿರುವಂತೆ, ಹೊಸ ಗಡಿಗೆಯೊಂದರೊಳಗೆ ಇಲಿಯೊಂದು ಹೇಗೋ ಒಳಗೆ ಬಿದ್ದು ಒದ್ದಾಡುತ್ತಿತ್ತು. "ಇದರ ವಂಸ ನಿರ್ವಂಸವಾಗ! ಆಳುಗೇರಿಯೋವು ಯಪಟೆ ಎಚ್ಚಬುಟ್ಟವೆ..." ಎಂದು ಸಾಪಳ ಹಾಕುತ್ತ, ಆ ಗಡಿಗೆಯನ್ನೆತ್ತಿಕೊಂಡುವೋಗಿ ಬೀದಿಗೆ ದಬ್ಬಾಕಿದಳು. ಗಡಿಗೆಯನ್ನು ಮೇಲೆತ್ತುವಾಗ ಇಲಿ ಇನ್ನೂ ಒದ್ದಾಡಿತ್ತಿದ್ದು, ತುಸು ವತ್ತಿನಲ್ಲೆ ಅದರ ಚಲನೆಯೆಲ್ಲ ನಿಂತು, ಅದು ತಟಸ್ಥವಾ ಅಂಗಾತ ಬಿದ್ದುಕೊಂಡಿತು.

"ಇದೇನು ಕತೆ. ಮೂರು ಜಿನದಿಂದ್ಲೂವೆ ಮೂಲೇಲಿ ಮೂಡಕಲಲ್ಲಿ, ಅಲ್ಲೊಂದು ಇಲ್ಲೊಂದು ಇಲಿ ಸತ್ತು ಬೀಳ್ತಾನೆ ಅವೆ. ನಾನೂವೆ ಅವ್ನ ಗುಡಿಸಿ ಇತ್ತಲ ಚೋರಿ ಆಕಿ ತೆಪ್ಪಗಾದೆ– ಈಗ ಇನ್ನೂಒಂದು ಇಲಿ ಗಡಿಗೇಲಿ ಸ್ವತ್ತು ಬಿದ್ದದೆ. ನಾನು ಆವತ್ತೇನಿಗಾ ಮಡಗಡೆ ವೋದ್ದು ತೆಪ್ಪಾಯ್ತು. ಇವೊತ್ತು ನ್ವಾಡನೆ– ಕಾಗೆ ಬಂದು ಇದ್ನ ಎತ್ತಿಗೊಂಡೋಯ್ತದೊ ಎಂಗೆ ಅಂತಾವ" ಎಂದು ಆ ಸತ್ತ ಇಲಿಯನ್ನು ಹಟ್ಟಿಯ ಬೀದಿಗೆಸೆದು, ಜಗಲಿಯ ಕಂಬ ಹಿಡಿದು ನೋಡ್ತಾ ನಿಂತಳು. ಅವಳು ನಿಂತಿದ್ದ ಹಾಗೆಯೇ ಒಂದು ಕಾಗೆ ಎಲ್ಲಿಂದಲೋ ಅರಿಬಂತು. ದೂರದಲ್ಲಿ ಕುತುಕೊಂಡ್ತು. ಕುಪ್ಪುತ್ತ ಕುಪ್ಪುತ್ತ ಬಂದು ಆ ಸತ್ತ ಇಲಿಯನ್ನು ಸಮೀಪಿಸಿತು. ಅಲ್ಲೇ ಕುಳಿತು ಸೂಕ್ಷ್ಮವಾಗಿ ತನ್ನ ಬೇಟೆಯನ್ನು ಪರಿಶೀಲಿಸಿತು. ಕೊನೆಗೆ ಅದಕ್ಕೆ ಏನೆನ್ನಿಸಿತೊ, ಆ ಇಲಿಯನ್ನು ಮುಟ್ಟದೆ "ಕಾ, ಕಾ" ಎಂದು ಕರ್ಕಶವಾಗಿ ಕೂಗುತ್ತ ಹಾರಿರೋಯಿತು. ಇನ್ನೊಂದು ಕಾಗೆ ಬಂತು. ಮತ್ತೊಂದು ಬಂತು ಆದರೆ ಯಾವ ಕಾಗೆಯೂ ಆ ಇಲಿಯನ್ನು ಮುಟ್ಟಲಿಲ್ಲ!... ಆ ಬೀದಿಯ ಮೇಲೆ ಆ ಇಲಿಯ ನೇರಕ್ಕೇ ಗುರಿರಯಿಟ್ಟು ಹಾರುತ್ತಿದ್ದ ಒಂದು ಹದ್ದು, ಆ ಸತ್ತ ಇಲಿಯ ಮೇಲೆ ಎರಗುವಂತೆ ಸರ್ರನೆ ಇಳಿದು ಬಂದದ್ದು, ಅದೂ ಸಹ ಇಲಿಯನ್ನು ಮುಟ್ಟದೆ, ಕೆಳಗೆ ಇಳಿದುಬಂದಷ್ಟೇ ಕ್ಷಿಪ್ರವಾಗಿ ಹಾರಿಹೋಯಿತು!

ಜವನಿಯ ಮನಸ್ಸಿನಲ್ಲಿ ಇನ್ನು ಸಂದೇಹ ಉಳಿಯಲಿಲ್ಲ–ಕೂಡಲೆ ಹಟ್ಟಿಯೊಳಗಡೆ ಓಡಿ, ನಡೆದ ಸಂಗತಿಯನ್ನು ಗಂಡನಿಗೆ ನಿವೇದಿಸಿ,

"ಸತ್ತ ಇಲಿನ ಕಾಗೆ, ಅದ್ದು ಯಾವ್ದೂ ಮುಟ್ಟನಿಲ್ಲ. ನಾನೂ ನ್ವಾಡ್ತಾನೆ ಇದ್ದೆ–ಇದು ಪಳೇಗು..." ಎಂದಳು, ಕೈಕೈ ಹಿಸುಕಿಕೊಳ್ಳುತ್ತ, "ಅಯ್ಯೊ, ಇನ್ನೇನ ಗತಿ. ನಮ್ಮೂರ್ಗೆ ಪಳೇಗಿನ ಸೋಂಕು ತಟ್ಟಿದಂಗೆ ಕಾಣ್ತದಲ್ಲ!" ಎಂದೆನ್ನುತ್ತ, ಏದುಸಿರು ಬಿಡುತ್ತ ನಿಂತಳು.

ಅವಳ ಗಂಡ ಈ ಸುತ್ತಿ ಕೇಳಿ ಗಾಬರಿಯಾದ. ಆದರೆ ಈ ಸುದ್ದಿ ಊರಿನಲ್ಲಿ ಪ್ರಕಟವಾಗಬಾರದೆಂಬುದೇ ಅವನ ಹೆಬ್ಬಯಕೆ. ಯಾಕೆಂದರೆ,

"ಗಟ್ಟಿಯಾಗಿ ಅನ್ನಬ್ಯಾಡ ಕನೆ. ಊರು ಬುಟ್ಟು ನಾವು ಮಕ್ಕಳು ಮರಿ ಕಟ್ಕೊಂಡು ಹೋಗಬೇಕಾಯ್ತದೆ... ಆ ಫಜೀತಿ ಅತ್ತೋರು ಯಾರು?– ಸುಮ್ಕಿರು" ಎಂದು ಅವಳ ಬಾಯಿ ಮುಚಿಸಲು ಹವಣಿಸಿದ.

ಜವನಿ,

"ಇದೇನು ನಿಮ್ಮ ಹುಚ್ಚು?" ಎಂದು ಹಣೆ ಬಡಿದುಕೊಳ್ಳುತ್ತ "ಇಲಿ ಬೀಳಕ್ಕೆ ಸುರು ಆದರೆ, ನಮ್ಮಟ್ಟಿ ಒಂದರಲ್ಲೆ ಬಿದ್ದಾವ?– ಊರಿನಾಗೆ ಎಲ್ಲಾ ಕಡೆನೂ ಬೀಳ್ತವಪ್ಪ. ಇದ ಏಟು ಜಿನ ಅಂತ ಮುಚ್ಚಿಕಳಕ್ಕಾದದಾತು?" ಎಂದವಳು, ಮರಿಸೆಟ್ಟಿಯನ್ನು ಸಮೀಪಿಸಿ, "ನಿಮ್ಮ ಕಂಕುಳಲ್ಲಾಗಲೀ, ತೊಡೇಲಾಗಲಿ, ಏನಾರ ಗಂಟು ಎದ್ದಿದ್ದ ನೋಡಕನ್ನಿ. "ದನಿ ತಗ್ಗಿಸಿರ ಕೇಳಿದಳು.

ಮರಿಸೆಟ್ಟಿ ಜವನಿ ಸೂಚಿಸಿದ ಎಡೆಗಳಲ್ಲಿ ಮುಟ್ಟಿನೋಡಿ,

"ಸದ್ಯಕ್ಕೆ ಯಾ ತಾವೂದೆ ಗಂಟು ಕಾಣ್ತಾ ಇಲ್ಲ!" ಎಂದು ನಿಡಿದಾಗಿ ಉಸಿರು ಬಿಟ್ಟ.

ಜವನಿ ಇನ್ನೂ ನಿದ್ರೆ ಮಾಡುತ್ತ ಮಲಗಿದ್ದ ಮಕ್ಕಳನ್ನು ಎಬ್ಬಿಸಿ, ಅವಕ್ಕೂ ಜ್ವರ ಬಂದಿಲ್ಲವೆಂಬುದನ್ನು ಖಾತರಿಪಡಿಸಿಕೊಂಡಳು. ಆದರೆ ತನ್ನ ಪತಿಗೆ "ಜ್ವರ ಈಗತಾನೆ ಸುರು ಆಗದೆ... ಮುಂದ್ಕೆ ಪಳೇಗಿನ ಗಂಟು ಕಾಣಿಸಿಗ್ವತ್ತದೊ, ಏನೋ– ಯಾರು ಯೋಳೋವಂಗಿದ್ದು?... ಏನೋ ಆ ಬಿಸಿಲು ಮಾರಮ್ಮ ನೇ ಕಾಯಬೇಕು!..." ಎಂದು ಅರಸಿನ ಪಾವುಡೆಯಲ್ಲಿ ನಾಕಾಣೆಯನ್ನು ಆ ದೇವಿಗೆ ಕಾಣಿಕೆಯಾಗಿ ಕಟ್ಟಿಟ್ಟು, "ತಾಯಿ, ನಮ್ಮಟ್ಟಿ ಕಾಯಿ ಕವ್ವ" ಎಂದು ಬೇಡಿದಳು.

ಆದರೆ ಎಣಿಸಿದ ಹಾಗೆ ಇಲಿಗಳು ಸತ್ತುಬಿದ್ದಿದ್ದು ಅವಳೊಬ್ಬಳ ಹಟ್ಟಿಯಲ್ಲೇ ಏನಲ್ಲ. ಊರಿನ ಇನ್ನೂ ಕೆಲವು ಮನೆಗಳಲ್ಲಿ ಏಳೆಂಟು ದಿನಗಳಿಂದಲೂ ಸತ್ತು ಬೀಳುತ್ತಲೇ ಇದ್ದವು. ಮೂರೊ ನಾಲ್ಕೊ ಮಂದಿ ಆಗಲೆ ಸತ್ತು, ಆ ಹೆಣಗಳನ್ನು ಮನೆಯವರು ಗೋಪ್ಯವಾಗಿ ಮಣ್ಣು ಮಾಡಿದ್ದರು. ಈ ಸಮಾಚಾರ ಒಳಗೇ ಗುಡುಗಾಡುತಿದ್ದ ಬಾವಿಗಳಲ್ಲಿ ಹೆಂಗಸರು ನೀರು ಸೇದುವಾಗ, ಕೆರೆ ಕಟ್ಟೆ, ಕೊಳಗಲ್ಲಿ ಬಟ್ಟೆ ಒಗೆಯುವಾಗ; ಗಂಡಸರು ಚಾವಡಿ, ಅಶ್ವಸ್ಥಕಟ್ಟೆಗಳ ಮೇಲೆ ಕುಳಿತಾಗ ಸ್ಫೋಟಗೊಳ್ಳುತ್ತಿತ್ತು. ಭಯದಿಂದ ಅದರ ಬಗ್ಗೆ ಮಾತು ಸಿಡಿಸಿದವರು, ಮರುಗಳಿಗೆಯಲ್ಲೆ "ಅಯ್ಯೊ, ಊರು ಅದಮ್ಯಾಲೆ, ಕಾಯಿಲೆಕಸಾಲೆ ಬರತೋದೆ ಇಲ್ವಾ?– ಇದಕ್ಯಾಕೆ ಎದರಬೇಕು?" ಎಂದು ಸಮಾಧಾನ ತಂದುಕೊಳ್ಳುವರು.

ಸಿವುನಿಗೆ ತನ್ನ ತಾಯಿ ಕಲ್ಯಾಣಿಯು ಸತ್ತದ್ದು ಪ್ಲೇಗಿನಿಂದಲೆ ಎಂಬುದು ಈಗ ಖಚಿತವಾಗಿತ್ತು. ಕಲ್ಯಾಣಿಯ ಕಂಕುಳಲ್ಲಿ ಎದ್ದಿದ್ದ ಗಂಟೇ ಅವಳ ನಂಬಿಕೆಗೆ

ಪ್ರಮಾಣವಾಗಿತ್ತು. "ಆಗ ನಂಗೆ ಗ್ವತ್ತೇ ಅಗ್ನಿಲ್ಲ ಕನತ್ತೆ. ಅವ್ವನ ಕಂಕುಳಲ್ಲಿ ಎದ್ದ ಗಂಟ ಕುರ ಅಂದುಕಂಡು ಸುಮ್ಮನಾಗಿಬುಟ್ಟೆ" ಎಂದು ದ್ಯಾವಾಜಿಯ ಸಂಗಡ ತೋಡಿಕೊಂಡಳು. ಅದಕ್ಕೆ ದ್ಯಾವಾಜಿ "ಗ್ವತ್ತಾಗಿದ್ರೆ ತಾನೆ ನೀ ಯೇನು ಮಾಡೊಹಂಗಿದೆ?" ಎಂದು ಕೇಳಿದವಳು, "ಈ ಮಾತ ಬ್ಯಾರೆಯೋರ ಬಾಯ್ಗೆ ಆಕಬ್ಯಾಡ. ಆಮ್ಯಾಕೆ ನಾವು ಊರು ಬುಟ್ಟು ದೌಡು ವೋಡೀಬೇಕಾಯ್ತದೆ. ಅದ್ಯಾರು ಆ ಫಜೀತಿ ಅತ್ತೊರು? ಸಾಯೊದಿದ್ರೆ, ಪಳೇಗು ಬಂದೆ ಸಾಯಬೇಕ?– ಭ್ರಾಂತು, ಬ್ರಾಂತು...." ಎಂದು ಅಟಕಾಯಿಸಿದಳು.

ಮುಂದಿನ ದಿನಗಳಲ್ಲಿ ಸಾಮಾನ್ಯವಾಗಿ ಊರಿನ ಎಲ್ಲ ಕೇರಿಗಳಲ್ಲೂ ಇಲಿಗಳು ಮೇಲಿಂದಮೇಲೆಸತ್ತು ಊರಿನವರನ್ನುರ ದಿಗಿಲುಗೊಳಿಸಿದ್ದವು. ಯಾರದೊ ಹಟ್ಟಿಯ ತೊಂಬೆಯಲ್ಲೆ ಒಂದು ಇಲಿ ಸತ್ತುಬಿದ್ದಿತ್ತಂತೆ!– "ತಿನ್ನೊ ಕಾಳಿಗೂ ಬಂದು ಬಿತ್ತಲ್ಲ, ಹಾಳುಗೇರೀದು" ಎಂದು ಆ ಮನೆ ಯಜಮಾನಿತಿ ಹುಯಿಲೆಬ್ಬಿಸಿದ್ದಳಂತೆ! ಬೇರೆ ಯಾರದೊ ಹಟ್ಟಿಯಲ್ಲಿ ಮೇಲಿನಿಂದ ಉಣ್ಣುವ ತಣಿಗೆಗೇ ಬಿದ್ದು, ಆವೋಪ್ಪತ್ತಿನ ಊಟವನ್ನು ಕಿತ್ತುಹಾಕಿತ್ತಂತೆ! ಬಾವಿಕಟ್ಟೆಯಲ್ಲಿ ಒಬ್ಬಳು ಬಾವಿಗೆ ಚರಿಗೆ ಬಿಟ್ಟು ನೀರು ಸೇದುವಾಗ ಬಾವಿಕಟ್ಟೆ ಗೂಡಿಗೆ ಕಾಲಿಟ್ಟರೆ, ಏನೋ ಪಾದಕ್ಕೆ ಮೆತ್ತಗೆ ನುಣುಪಗಿ ಸಿಕ್ಕಿ ಪಿಚಕ್ ಅಂತ ಎಂಥದೊ ಕಡೆದಂತಾಗಿ, ಅವಳು ಹೆದರಿ, ತನ್ನ ಪಾದವನ್ನು ಹಿಂದಕ್ಕೆ ತೆಗೆದು ನೋಡಿದರೆ, ಅವಳು ಗೂಡಿನಲ್ಲಿ ಒದ್ದಾಡ್ತ ಕೂತಿದ್ದ ಒಂದು ಇಲ್ಯನ್ನು ಫನ ಮಾಡಿ, ಅವಳ ಪಾದಕ್ಕೆಲ್ಲ ಅದರ ರಕ್ತ ಮೆತ್ತಿತ್ತಂತೆ! ಮಕ್ಕಳು ಶಾಲೆಗೆ ಹೋಗುವಾಗ ದಾರಿಯಲ್ಲಿ ಅವರ ಮುಂದೆ ಬಂದು, ಸುತ್ತಿಸುತ್ತಿ ರಕ್ತಕಾರಿ ಬೀಳುತ್ತಿದ್ದ ಇಲಿಗಳನ್ನು ಆ ಮಕ್ಕಳು ಚೆಂಡಾಡುವ ಹಾಗೆ ಅವನ್ನು ಒದ್ದು ಬೇಲಿಗೆ ತಳ್ಳುತ್ತಿದ್ದರಂತೆ. ಅವರು ಹಾಗೆ ಮಾಡುವುದನ್ನು ಕಂಡಾಗ ಉಪಾದ್ಯರು ಆ ಹುಡುಗರನ್ನು ಬೈದು,

"ಪಾದ್ದು ಮುಂಡೆಯೋವ. ನಿಮುಗೆ ಸಾಯಬೇಕು ಎಂದು ಆಸೆಯೇನು?... ಇವು ಪ್ಲೇಗು ತಗಲಿರುವ ಇಲಿಗಳು!– ಇವನ್ನ ಮುಟ್ಟಿದರೆ ನಿಮುಗೂ ಪ್ಲೇಗ್ ಗೆಡ್ಡೆ ಬಂದುಬಿಡುತ್ತೆ– ಹುಶಾರಾಗಿರಿ!" ಎಂದು ಹೆದರಿಸಿದರಂತೆ!" ಇನ್ನು ಮೇಲೆ ಈ ಇಲಿಗಳ ತಂಟೆಗೆ ಹೋಗಬೇಡಿ" ಎಂದು ಬುದ್ದಿವಾದ ಹೇಳಿದರಂತೆ!...

ಊರಿನ ತುಂಬ ಇಂಥವೆ ಸುದ್ದಿ!– ಎಲ್ಲಾದರೂ ಸರಿ, ಒಬ್ಬರು ಇನ್ನೊಬ್ಬರನ್ನು ಸಂಧಿಸಿದಾಗ, ಊರಿನಲ್ಲಿ ಇಲಿಗಳು ಸಾಯುವ ಸುದ್ದಿಯಲ್ಲದೆ ಬೇರೆ ಮಾತೇ ಅವರ ನಡುವೆ ಸುಳಿಯುತ್ತಿರಲಿಲ್ಲ.

ಇಲಿಗಳು ಹೀಗೆ ಸತ್ತುಬೀಳುವುದರ ಜೊತೆಗೆ ಪ್ರತಿರಾತ್ರಿ ಬೆಟ್ಟದ ಚಿತ್ರ ಮೂಲಕ್ನ ಕೋಟೆಯಿಂದ ಹೆಣ್ಣು ಆಳುವಂತಹ ಸದ್ದು ಕೇಳಿಸುತ್ತಲೆ ಇದ್ದುದರಿಂದ ದರುಮನಳ್ಳಿಯ ಜನ ಊರಿಗೆ ಬಂದಿರುವ ಈ ವಿಪತ್ತಿಗೂ ಬಸುರಿಯಾದ ರುಕ್ಮಿಣಿ ಕಾಣೆಯಾದುದಕ್ಕೂ ಸಂಬಂಧ ಕಲ್ಪಿಸಿ ಭೀತರಾದರು.

ಊರಿನಲ್ಲಿ ಯಾರೊ ಅಂದರು:

"ರುಕ್ಮಿಣವ್ವನ ಆ ತರ ಗೋಳುಕಿಚ್ಚು ಉಯ್ಯಿದಿದ್ದರಿಂದ್ಲೆ, ಊರ್‍ಗೆ ಈ ಪಳೇಗ್ ಉಪದ್ರ ಕಾಣಿಸಿರಾದು. ಇವರೆಲ್ಲ ಬೋ ಸುದ್ದ ಅನ್ನೋವಂಗೆ, ಪಾಪ ಆ ಬಡಪಾಯಿ ಮ್ಯಾಲೆ ನ್ಯಾಯ ಅಕ್ಕಂಡರು–ಅದರಾಗೂ ಆ ಬ್ರಾಂಬರು ಅವಳ ತಲೆ ಬೋಳುಸಿ ಕತ್ತೆ ಮ್ಯಾಲೆ ಕುಂದರಿಸಿ ಉರ್‍ನಿಂದ ಓಡುಸ್ತೀವಿ ಅಂದ್ರಲ್ಲ– ಅದ್ಕೇ ಆ ಪುಣ್ಯಾತಿಗಿತ್ತಿ, ತನ್ನ ಎಣವೂ ಸಿಕ್ಕದಂಗೆ, ಚಿತ್ರಮೂಲನ ಕ್ವಾಡಿಗೋಗಿ ಸತ್ತಿರಬೇಕು. ಅವರು ಮಾಡಿದ ತೆಪ್ಪಿಗೆ ಈಗ ಊರಿಗೆ ಊರೇ ಅನುಭೋಗಿಸಬೇಕಾಗಿ ಬಂದದೆ!... ಪರ್ತಿ ರಾತ್ರೆ ಆ ಎಣ್ಣು ಅಲ್ಲಿಂದ ಸೋಕ ಮಾಡಾದು ಕೇಳಿಸಕ್ಕಿಲ್ಲವ?– ಅವಳ ಕಿಚ್ಚು ನಮ್ಮೂರ ಸುಡದೆ ಬುಡಕ್ಕಿಲ್ಲ!..."

ಒಬ್ಬರಿಗನ್ನಿಸಿದ್ದು ಇನ್ನೊಬ್ಬರಿಗೂ ಅನ್ನಿಸಿ, ಬ್ರಾಹ್ಮಣರ ವರ್ತನೆಯ ಬಗ್ಗೆ ಜನರಲ್ಲಿ ವಿರೋಧ ವ್ಯಕ್ತವಾಗತೊಡಗಿತು. ಇದರಿಂದ ಹೆದರಿದ ವೆಂಕಣ್ಣ ಜೋಯಿಸರು ನಂಜೇಗೌಡನ ಸಂಗಡ,

"ಇದೇನು ನಂಜೇಗೌಡರೆ, ರುಕ್ಮಿಣಿ ನಾಪತ್ತೆಯಾದ್ದಕ್ಕೆ ನಾವು ಬ್ರಾಹ್ಮಣ ಕೇರಿಯೋರು ಮಾಡಿದ ತೀರ್ಮಾನವೆ ಕಾರಣ, ಎಂದು ಊರಿನೋರು ನಮ್ಮ ಮೇಲೆ ದೂರು ಹೊರಿಸ್ತಾ  ಇದಾರಲ್ಲ?– ಇದಕ್ಕೆ ನೀವು ಏನು ಹೇಳ್ತೀರಿ?" ಎಂದು ಪ್ರಸ್ತಾಪ ಮಾಡಿದರು.

"ಹಯ್ಯೋ, ಗೋಕುಲಾಸ್ಟಮೀಗೂ ಇಮಾಂ ಸಾಬೀಗೂ ಯಾವ ಸಮ್ಮಂದವ?– ಬುಡಿ, ದೋಯಿಸರೆ... ಜನದ ಮಾತ ಕೇಳ್ತಾನೆ ಇರಿ... ನಿಮ್ಮ ಕೈಯ ಇಡಕಂಡೋಗಿ ಅಮೇದ್ಯ ತುಣಿಸಿಬುಡ್ತಾರೆ."

ನಂಜೇಗೌಡ ಹುರಿದುಂಬಿಸಿದರೂ ವೆಂಕಣ್ಣಜೋಯಿಸರ ಪಡಸಾಲೆಯಲ್ಲಿ ಸೇರಿದ್ದ ಬ್ರಾಹಣರಿಗೆ ಧೈರ್ಯವುಂಟಾಗಲಿಲ್ಲ. ನಂಜೇಗೌಡ ಗುಳ್ಳೆ ನರಿಯಂತಹ ಮನುಷ್ಯ. ಅವನದ್ದು ಹಿಂದೆ ಒಂದು ಮಾತು, ಮುಂದೆ ಇನ್ನೊಂದು ಮಾತು. ಆ ಗುಂಪಿನಲ್ಲಿ ನಮ್ಮನ್ನ ಬೈದು, ಇಲ್ಲಿ ಬಂದು ನಮ್ಮನ್ನ ಉಬ್ಬಿಸ್ತಾ ಇದಾನೆ!... ಊರಿನ ಬಹುಮಂದಿಯ ವಿರೋದ ಕಟ್ಟಿಕೊಂಡರೆ, ಮುಂದೆ ನಮ್ಮ ಮಕ್ಕಳು, ಮರಿ ಬಾಳ್ವೆ ಮಾಡೋದಾದರೂ ಹೇಗೆ? ಎಂಬ

ಚಿಂತೆ ಅವರನ್ನು ಕಾಡಿತು. ಬ್ರಾಹ್ಮಣಕೇರಿಯ ಮಾನಸದಲ್ಲಿ ಈ ರೀತಿ ತಳಮಳ ಉದ್ಭವಿಸಿದಾಗ, ಒಂದು ರಾತ್ರಿ ಕೇಶವಯ್ಯನಿಗೆ ಒಂದು ಕನಸು ಬಿದ್ದಿತು.

ಕೇಶವಯ್ಯ ಹಜಾರದಲ್ಲಿ ಮಲಗಿದ್ದಾನೆ. ಅವನ ಜೊತೆಯಲ್ಲಿ ಸಾಲಾಗಿ ಅವನ ಮಡದಿ, ಮಕ್ಕಳು ಮಲಗಿದ್ದಾರೆ. ಇದ್ದಕ್ಕಿದ್ದಂತೆ, ಯಾರೊ ಹಜಾರದ ಬಾಗಿಲನ್ನು ದೈಡ್ ಎಂದು ನೂಕಿ ಒಳಗೆ ಬಂದಂತಾಯಿತು. ಕೇಶವಯ್ಯ ಕಣ್ಣು ಬಿಟ್ಟ. ಅವನು ಕಂಡ ದೃಶ್ಯ ಅವನು ಪುನಹ ಕಣ್ಣು ಮುಚ್ಚವಂತಿತ್ತು!– ಕೆದರಿದ ತಲೆಗೂದಲು, ಮುಖ ಕೈ ಕಾಲುಗಳಿಗೆಲ್ಲ ಬಳಿದ ಅರಿಶಿನ, ಹಣೆಗೆ ರೂಪಾಯಿ ಅಗಲದ ಕುಂಕುಮ, ಅಚ್ಚಬಿಳಿ ಸೀರೆ ಕುಪ್ಪಸ ತೊಟ್ಟು ಉಗ್ರವಾಗಿ ಬಾಯಿ ತೆರೆದು, ರುಕ್ಮಿಣಿಯ ಪ್ರೇತ ತನ್ನತ್ತಲೆ ಬುರತ್ತ – "ನಾ ಸಾಯಕ್ಕೆ ನೀವೇ ಕಾರಣ; ನಿಮ್ಮ ನ್ಯಾಯವೇ ಕಾರಣ. ನೀವು ಸುಮ್ಮನೇ ಇದ್ದಿದ್ರೆ ನಾನು ಎಲ್ಲೋ ಹೋಗಿ ಬದುಕಿ ಕೊಳ್ಳದ್ದೆ... ನಾನು ಮಾಡಿದ ಪಾಪಕ್ಕಿಂತ ನೂರ್ಮಡಿ ಪಾಪ ಮಾಡಿದವರು ನಿಮ್ಮಲಿದ್ದೀರಿ!– ಹೀಗಿದ್ದೂ ನೀವು ನಾನು ಒಂದು ಬಾರಿ ಎಡವಿದ್ದನ್ನೆ ದೊಡ್ಡದು ಮಾಡಿ, ನನ್ನನ್ನು ನಾಶಮಾಡಿದ್ದೀರಿ... ಈಗ ನಾನು ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. ನಿಮ್ಮ ಕೇರಿಯವರಲ್ಲಿ ಯಾರು ಯಾರು ನನಗೆ ತೊಂದರೆ ಕೊಟ್ಟಿದ್ದೀರೊ, ನೀವು ಪ್ರತಿಯೊಬ್ಬರ ಮೇಲೂ ನನ್ನ ಸೇಡು ತೀರಿಸಿಕೊಳ್ಳದೆ ಬಿಡುವುದಿಲ್ಲ. ನಿಮ್ಮ ಎದೆಯ ಮೂಳೆಗಳನ್ನೆಲ್ಲ ಮುರಿದು ಒಲೆಯ ಬೆಂಕಿಗೆ ಒಟ್ಟುತ್ತೇನೆ. ನಿಮ್ಮ ಶರೀರದ ರಕ್ತವನ್ನೆಲ್ಲ ನಾನು ತೃಪ್ತಿಪಡುವಷ್ಟು ಹೀರಿ, ಅಂತರ ಶಾಕಿನಿ ಡಾಕಿನಿಯರನ್ನು ನಿಮ್ಮ ರಕ್ತ ಕುಡಿಯಲು ಬಿಟ್ಟು ಆ ನನ್ನ ಪಿಶಾಚಿಬಾಂಧವರನ್ನೂ ಸಂತೃಪ್ತಿಪಡಿಸುತ್ತೇನೆ... ಈಗ ಮೊದಲು ನಿನ್ನನ್ನು ನಾನು ಆಹುತಿ ತೆಗೆದುಕೊಳ್ಳಬೇಕು!– ನಿನ್ನನ್ನು ಕೊಂದ, ನಿನ್ನ ರಕ್ತ ಹೀರಬೇಕು... ಹೋ..." ಎಂದು ವಿಲಕ್ಷಣವಾಗಿ ಅಬ್ಬರಿಸುತ್ತ ಬಂದೆರಗಿ, ಕೇಶವಯ್ಯನ ಎದೆಯ ಮೇಲೇರಿ ಕುಳಿತು, ಕುತ್ತಿಗೆ ಹಿಚುಕಿದಂತಾಗಿ, ಕೇಶವಯ್ಯ ಬೆವೆತು ಕಂಗಾಲಾಗಿ "ಅಯ್ಯೊ, ಕೆಟ್ಟೆ–ಕೆಟ್ಟೆ..." ಎಂದು ಕಿರುಚಿದ. ಆದರೆ ಅವನ ಕಿರುಚಾಟವೆಲ್ಲ ಸದ್ದಿಲ್ಲದ್ದು. ಬಾಯಿ ಪಿಟಪಿಟ ಎನ್ನುತ್ತಿತ್ತೆ ವಿನಹ ಶಬ್ಧ ಮಾತ್ರ ಅಲ್ಲಿಂದ ಹೊರಡುತ್ತಿರಲಿಲ್ಲ... ಎಷ್ಟು ವೇಳೆ ಹೀಗೆ ಕಳೆಯಿತೊ. ಯುಗಯುಗಗಳೇ ಕಳೆದು ಹೋದಂತೆ ಅವನಿಗೆ ಭಾಸ. ತನ್ನನ್ನು ಕೊಂದೇ ಅ ಪ್ರೇತ ತನ್ನೆದೆಯ ಮೇಲಿನಿಂದ ಇಳಿಯುವುದಿಂದು ಅವನು ಭಾವಿಸಿದ್ದ. ಆದರೆ ಅದೇನೋ ಕಡೆಗೊಮ್ಮೆ, ಅದು ಅವನೆದೆಯ ಮೇಲಿಂದ ಥಂಗನೆ ಹಾಗೆ ಮಾಯವಾಯಿತು.!...

ಕನಸು ಮುಗಿದು ಕೇಶವಯ್ಯನಿಗೆ ಎಚ್ಚರವಾದಾಗ, ಅವನು ಶರೀರಾದ್ಯಂತ

ಬೆವರಿನಿಂದ ತೋಯ್ದುಹೋಗಿದ್ದ. ತತ್‌ಕ್ಷಣ ಹೆಂಡತಿಯನ್ನೆಬ್ಬಿಸಿ, ರ ತಾನು ಕಂಡ ಭೀಕರ ಕನಸನ್ನು ಅವಳಿಗೆ ತೊದಲುತ್ತ ತೊದಲುತ್ತ ವರ್ಣಿಸಿದ. ಗಂಡನಿಗೆ ಬಿದ್ದ ಕನಸಿನ ವಿವರ ಕೇಳಿ, ಅವಳೂ ಸಹ ಕಳವಳಗೊಂಡು,

"ಇದು ನಮಗೆ ಸಂಭವಿಸಲಿರುವ ದೊಡ್ಡ ಅನಾಹುತದ ಸೂಚನೆ ಇರಬಹುದು" ಎಂದು ನಡುಗಿಹೋದಳು.

ಬೆಳಗಾಗುವುದನ್ನೆ ಕಾದಿದ್ದು ಕೇಶವಯ್ಯ ಬ್ರಾಹ್ಮಣರನ್ನೆಲ್ಲ ಒಂದು ಕಡೆ ಸೇರಿಸಿ, ತನಗೆ ಬಿದ್ದ ಕನಸನ್ನು ಅವರೆಲ್ಲರ ಮುಂದೆ ನಿವೇದಿಸಿದ. ಕನಸಿನ ಸ್ವರೂಪ ಅವರೆಲ್ಲರಲ್ಲೂ ಭೀತಿ ಹುಟ್ಟಿಸಿತು. ಮುಂದೇನು ಮಾಡಬೇಕೆಂದು ಚರ್ಚೆ ನಡೆಸಿದರು. ಒಬ್ಬೊಬ್ಬರು ಒಂದೊಂದು ಪರಿಹಾರ ಸೂಚಿಸಿದರೂ ಅಂತಿಮವಾಗಿ ವೆಂಕಣ್ಣ ಜೋಯಿಸರ ಸಲಹೆಯೇ ನಿರ್ಣಾಯಕವಾಯಿತು. ಕಾಣೆಯಾದ ರುಕ್ಮಿಣಿಗೆ 'ಅನಾಥ ಪ್ರೇತ ಸಂಸ್ಕಾರ' ಮಾಡಬೇಕೆಂಬುದೇ ಅವರ ಸಲಹೆಯಾಗಿತ್ತು. ಈ ಸಲಹೆಯನ್ನು ಸಕಲರೂ ಒಪ್ಪಿದರು.

ಆ ಪ್ರಕಾರ ವಾರ, ತಿಥಿಗಳನ್ನು ಲೆಕ್ಕಹಾಕಿ, ರುಕ್ಮಿಣಿಯ ಹೆಸರಿನಲ್ಲಿ ಒಂದು ಕಾಷ್ಟವನ್ನಿಟ್ಟರು. ಅದಕ್ಕೆ ರುಕ್ಮಿಣಿಯ ಪ್ರೇತವನ್ನು ಅವಾಹನೆ ಮಡಿದರು. ಅನಂತರ ಅದನ್ನು ಸುಟ್ಟು, ಸಂಸ್ಕರಿಸಿ, ಅದಕ್ಕೆ ಸಕ್ರಮವಾಗಿ ಕ್ರಿಯಾದಿಗಳನ್ನು ನಡೆಸಿದರು. ಅನಂತರ ಎಲ್ಲರೂ ಹಣ, ಧಾನ್ಯಗಳನ್ನು ಕೂಡಿಸಿ, ರುಕ್ಮಿಣಿಯ ಹೆಸರಿನಲ್ಲಿ ಉರಿನವರಿಗೆಲ್ಲ ಊಟ ಹಾಕಿ, ಸಮಾರಾಧನೆ ಮಾಡಿದರು. ಇದರಿಂದ ಪ್ರೇತಕ್ಕೆ ಶಾಂತಿ ದೊರಕಲೆಂಬುದು ಒಂದು ಆಶಯ. ಆ ಪ್ರೇತಕ್ಕೆ ತೃಪ್ತಿಯಾಗಿ ಇನ್ನುಮುಂದೆ ತಮ್ಮನ್ನು ಪೀಡಿಸದಿರಲಿ, ಎಂಬುದು ಇನ್ನೊಂದು ಆಶಯ

ಆದರೆ ಭೂತತೃಪ್ತಿಗಾಗಿ ಬ್ರಾಹ್ಮಣ ಕೇರಿಯ ಮಂದಿ ನಡೆಸಿದ ಕ್ರಿಯಾದಿಗಳಿಂದ ಪ್ಲೇಗು ಜಾಡ್ಯದ ಮೇಲೆ ಯಾವ ಪ್ರಭಾವವೂ ಆದಂತೆ ತೋರಲಿಲ್ಲ. ಅದು ಇನ್ನೂ ಉಲ್ಬಗೊಂಡಿತೇ ಹೊರತು ಕಡಿಮೆಯಗುವ ಸೂಚನೆಗಳೇ ಕಾಣಲಿಲ್ಲ!.... ಶ್ಯಾನುಭೋಗರು ಪಟೇಲರೇ ಆದಿಯಾಗಿ ಊರಿನ ಎಲ್ಲ ಯಜಮಾನರೂ ಜಪ್ಪಯ್ಯನ ಮಟದಲ್ಲಿ ಶಿವಪದಪ್ಪನವರ ಸಮ್ಮುಖದಲ್ಲೆ ಸಭೆ ಸೇರಿ, ಊರನ ಯರೊಬ್ಬರ ಮನೆಯಲ್ಲೂ ಎಣ್ಣೆಕಂಟು, ಮೆಣಸಿನ ಕಾಯಿ ಘಾಟು ಇದೆಯಲ್ಲ ಮಾಡಬಾರದು, ಒಗ್ಗರಣೆ ಕೂಡ ಹಾಕಬಾರದು, ಎಂದು ಕಟ್ಟು ಮಾಡಿದರು. ಆದರೆ ಊರಿನಲ್ಲಿ ಬಹುತೇಕ ಮಂದಿ "ಅಗ್ರಣೇನು ಹಾಕಬ್ಯಾಡ ಅಂದ್ರೆ ಯಾವ ಮಾತ ತೆಗಿ–" ಎಂದು ಹೆಂಗಸರು ಒಗ್ಗರಣೆ ಹಾಕಿದ್ದು ಮಾತ್ರವಲ್ಲದೆ, ಮೆಣಸಿನ ಕಾಯನ್ನೂ ಹುರಿದು, ಹುಚ್ಚೆಳ್ಳೆಣ್ಣೆಯಲ್ಲಿ ಕಜ್ಜಾಯ ಮುಂತಾದ ತಿಂಡಿ

ಪದರ್ಥಗಳನ್ನೂ ಕರಿದರು. ಬ್ರಾಹ್ಮಣ ಮಹಿಳೆಯರೂ ಸಹ, ಕೆಲವು ದಿನ ಹೇಗೊ ಪ್ರಯಸದಿಂದ ತಡೆದಿದ್ದವರು, "ಇದೇನು ಕಟ್ಟು–ನಮ್ಮ ಜಮಾನರಿಗೆ ಊಟಕ್ಕೆ ಹಪ್ಪಳ, ಸೆಂಡಿಗೆ, ಉಪ್ಪುಮೆಣಸಿನಕಾಯಿ ಇತ್ಯದಿ ವ್ಯಂಜನಗಳು ಇಲ್ಲದಿದ್ದರೆ, ಅನ್ನದ ತುತ್ತು ಅವರ ಗಂಟಲೊಳಗೇ ಇಲಿಯಲ್ಲ!...ಊಟ ಮುಗಿದ ಬಳಿಕ, ಬೆಣ್ಣೆ ಮುಚ್ಚೋರೆ, ಚಕ್ಕುಲಿ, ಕೋಡುಬಳೆ, ಖಾರದ ಅವಲಕ್ಕಿ, ಇಂಥ ಯಾವುದಾದರೂ ಕುರುಕು ತಿಂಡಿ ಇದ್ದೇ ಇರಬೇಕು, ಒಂದೊಂದು ಸಲ ಆಪೇಕ್ಷೆಪಟ್ಟು ಹೀರೇಕಾಯಿ ಬೋಂಡವನ್ನೊ, ಈರುಳ್ಳಿ ಬೋಂಡವನ್ನೊ ಮಾಡು ಅಂತ ಹೇಳೋದು ಉಂಟು. ವಸ್ತುಸ್ಥಿತಿ ಹೀಗಿರುವಾಗ, ಯಾರೂ ನಡೆಸಲಿಕ್ಕಾಗದ ಈ ಕಟ್ಟುಪಾಡಿಗೆ ನಮ್ಮ ಯಜಮಾನರು ಹೇಗೆ ಒಪ್ಪಿಗೆ ಕೊಟ್ಟರೊ?"– ಎಂದು ಮೂಗು ಮುರಿದು ಊರಿನ ಯಜಮಾನರು ನಿರ್ಣಯಿಸಿದ್ದ ಕಟ್ಟುಪಾಡನ್ನು ಗಾಳಿಗೆ ತೂರಿದರು. ಕಟ್ಟು ಮಾಡಿದ ಕೆಲವು ಮುಖಂಡರೇನೋ "ಊರಿಗೆ ಇಂಥ ವಿಪತ್ತು ಬಂದಾಗಲೂ ಬಾಯಿಚಪಲ ಬಿಡೋಲ್ಲರಲ್ಲ, ಇವರಿಗೆ ದೊಡ್ಡಾಪತ್ತು ಬರ" ಎಂದು ಎಗರಾಡಿದರು. ಆದರೆ ಈ ಕಟ್ಟುಪಾಡನ್ನು ಮುರಿಯುವುದರಲ್ಲಿ ಊರಿನ ಎಲ್ಲ ಕೇರಿಗಳ ಮಹಿಳೆಯರದ್ದೂ ಸಮಪಾಲು ಇದ್ದುದರಿಂದ, ಊರಿನ ಯಜಮಾನರುಗಳು ಕೇವಲ ಗೊಣಗುವುದರಲ್ಲಿಯೇ ತಮ್ಮ ಪ್ರತಾಪ ತೋರಿ ತೆಪ್ಪಗಾಗಬೇಕಾಯಿತು!.

ಊರಿನಲ್ಲಿ ಎಣ್ಣೆಯ ಕಂಟು, ಮೆಣಸಿನಕಾಯಿಯ ಘಾಟು ಅಧಿಕಗೊಂಡಂತೆ ಪ್ಲೇಗು ಉಪದ್ರವದ ಬರಾಟೆಯೂ ಹೆಚ್ಚಿತು. ರೋಗ ತಗಲಿದವರಿಗೆ ಉದರ ಉಪಶಮನಕ್ಕಾಗಿ ಕೆಲವರು ಹಳ್ಳಿಯ ವೈದ್ಯರು ಕೊಟ್ಟ ನಾರುಬೇರುಗಳನ್ನು ತೇದು ಲೇಪ ಹಾಕಿದರು. ಕೆಲವರು ಕತ್ತೆಯ ಹಾಲನ್ನು ಕುಡಿಸಿದರು. ಆದರೂ ಊರಿನ ಎಲ್ಲ ಕೇರಿಗಳಲ್ಲಿಯೂ ತೆಳ್ಳತೆಳ್ಳಗೆ ಹೆಣಗಳು ಬೀಳುತ್ತಲೇ ಇದ್ದವು ಈಗಲೀಗ ಊರಿನಲ್ಲಿ ಇರುವುದು ಸೂಕ್ತವಲ್ಲವೆಂದು ಅನೇಕರು ಊರಿನಾಚೆ ಗುಡ್ಲುಗಳನ್ನು ಕಟ್ಟಿ ವಾಸಿಸಲಾರಂಭಿಸಿದರು. ಕೆಲವರು ಗೋಮಾಳದಲ್ಲಿ ಗುಡ್ಲುಗಳನ್ನು ನಿರ್ಮಿಸಿದರೆ, ಇನ್ನು ಕೆಲವರು ತಮ್ಮ ತಮ್ಮ ಹೊಲಗಳಲ್ಲಿ ಎತ್ತು ಕರು ಮೇಯಿಸಲು ಹುಲ್ಲು ವೊಚುಡಿ (ತೆವರಿ)ಗಳಲ್ಲಿ ಗುಡ್ಲುಗಳನ್ನು ಕಟ್ಟಿದರು. ಅಂಥ ವಿಷಮಪರಿಸ್ಥಿತಿಯಲ್ಲೂ ಬೇರೆ ಬೆರೆ ಜಾತಿಯವರು ಪ್ರತ್ಯೇಕ ಪ್ರತ್ಯೇಕ ಜಾಗಗಳಲ್ಲಿ ತಮ್ಮ ತಮ್ಮ ಗುಡ್ಲುಗಳನ್ನು ನಿರ್ಮಿಸಿ, ಸಾಮಾನುಗಳ ಜೊತೆಗೆ ತಮ್ಮ ದನಕರು, ಎತ್ತು, ಎಮ್ಮೆ, ಆಡು ಕುರಿ ಕೋಳಿ ಇತ್ಯಾದಿಗಳನ್ನು ಕೊಂಡೋಯ್ದಿದ್ದರು.

ಆದರೂ ಸುಮಾರು ಜನ ಎಲ್ಲ ಕೇರಿಗಳಲ್ಲಿಯೂ ಉಳಿದೇ ಇದ್ದರು. ಆಪ್ಪಯ್ಯನ ಮಠದ ಸ್ವಾಮಿಗಳಂತೂ ಶಿವನ ಕರುಣೆ ಇರೋ ತನಕ ಯಾವ ಉಪದ್ರವವೂ ನಮ್ಮನ್ನ ಮುಟ್ಟೋಲ್ಲ; ಒಂದು ಪಕ್ಷ ನಮ್ಮನ್ನ ತನ್ನ ಪಾದಕ್ಕೆ ಸೇರಿಸಿಕೊಳ್ಳೋದು ಆ ಸ್ವಾಮಿಯ ಇಚ್ಛೆಯಾದರೆ, ಅದೂ ಅವನ ಕರುಣೆ ಎಂದೇ ತಿಳಿದು ಶರಣಾಗೋದು–ಎಂದು ತಮ್ಮ ಭಕ್ತವೃಂದಕೆ ಸಾರಿ ಅವರೂ ಸಹ ಊರಿನಲ್ಲೆ ಉಳಿದರು.

ರುಕ್ಮಿಣಿಗೆ ತಮ್ಮಿಂದ ಉಂಟಾದ ದುರ್ಗತಿಗೆ ಪಶ್ಚಾತ್ತಾಪದ ಬೆಂಕಿಯಲ್ಲಿ ಬೆಂದು ಕೃಷ್ಣಶಾಸ್ತ್ರಿಗಳು ಕಾಶಿಗೆ ಹೊರಟುಹೊಗಬೇಕೆಂದು ಬಯಸಿದರೂ ಪುಟ್ಟ ಸರಸಿಯನ್ನು ಅನಾಥೆಯನ್ನಾಗಿ ಮಾಡಿ, ಇನ್ನೊಂದು ಪಾಪದ ಹೊರೆಯನ್ನು ಹೊರಬೇಕಾಗುವುದೆಂದು ಅವರು ಮನಗಂಡು, ಆ ಬಯಕೆಯನ್ನು ತಮ್ಮ ಅಲೋಚನೆಯಿಂದ ಅಳಿಸಿದ್ದರು. ಸರಸಿಗೆ ಈಗ ಜ್ವರ ಬಿಟ್ಟಿದ್ದರೂ ಹಿಂದಿನ ಲವಲವಿಕೆ ಆ ಮಗುವನ್ನು ಬಿಟ್ಟು ಹೋಗಿತ್ತು. ರುಕ್ಮಿಣಿಯಿಲ್ಲದಮನೆ ಅವಳೊಳಗೆ ಶೂನ್ಯವನ್ನು ತುಂಬಿತ್ತು. ಆ ಮನೆಗೆ ಬಂದಾಗಿನಿಂದಲೂ ಅವಳು ತನ್ನ ತಾಯಿಗಿಂತಲೂ ವಿಶೇಷವಾಗಿ ರುಕ್ಮಿಣೆಯನ್ನೇ ಅವಲಂಬಿಸಿದ್ದಳು. ರುಕ್ಮೀಣಕ್ಕ ಎಲ್ಲಿ ಹೋದಳು ಎಂಬ ವಿಚಾರದಲ್ಲಿ, ಎಲ್ಲರೂ ಅವಳ ಮನದಲ್ಲಿ ಗೊಂದಲವನ್ನೇ ಉಂಟುಮಾಡಿದ್ದರು. ರುಕ್ಮಿಣಿ ಬೇಸರಗೊಂಡು ಎಲ್ಲಿಗೊ ಹೊರಟುಹೋದಳೆಂದು ಮಾವಯ್ಯ ಹೇಳಿದ್ದರು. ವೆಂಕಣ್ಣಜೋಯಿಸರ ಹೆಣ್ಣುಮಕ್ಕಳು ಅವಳು ಚಿತ್ರ ಮೂಲನ ಕೋಟೆಗೆ ಹೋಗಿ ಸತ್ತಿರುವಳೆಂದು ಹೇಳಿದ್ದರು. ಅಕ್ಕನಿಗೆ ನಮ್ಮ ಮೇಲೆ ಯಾಕೆ ಬೇಜಾರು?– ಚಿತ್ರಮೂಲನ ಕೋಟೆಗೆ ಯಾಕೆ ಹೋದಳು?– ನ್ಯಾಯದಲ್ಲಿ ಲಕ್ಕನ್ನ ಆ ಕೆಟ್ಟ ರುದ್ರ ಹೊಡೆಯುವಾಗ, ರುಕ್ಮಿಣಿ ಅಕ್ಕನ ವಿಚಾರ ಬಂದಿತ್ತಲ್ಲ, ಯಾಕೆ?– ಕೇಶವಯ್ಯನೋರು ಜೋಯಿಸರು ಇನ್ನು ಯಾರ್‍ಯಾರೊ ನಮ್ಮ ಮನೆಗೆ ಬಂದು ರುಕ್ಮಿಣಿ ಅಕ್ಕ ಎಲ್ಲಿ, ಅವಳ ತಲೆ ಬೋಳಿಸಬೇಕು ಅಂತಿದ್ರಲ್ಲ, ಯಾಕೆ?... ಅವಳ ಪುಟ್ಟ ಮಸ್ಸನ್ನು ಬಾಧಿಸುತ್ತಿದ್ದ ಇಂತಹ ಹಲವಾರು ಪ್ರಶ್ನೆಗಳಿಗೆ ಮಾವಯ್ಯ ಕಣ್ಣೀರು ತುಂಬಿಕೊಳ್ಳುತ್ತಿದ್ದರೇ ವಿನಹಃ ಸಮರ್ಪಕವಾಗಿ ತಿಳಿಯಹೇಳುತ್ತಿರಲಿಲ್ಲ. ಅದು ಆ ಪುಟ್ಟ ಬಾಲಕಿಯನ್ನು ಮತ್ತಷ್ಟು ಗೊಂದಲಕ್ಕೆ ಈಡುಮಾಡುವುದು. ಆದರೂ ವೆಂಕಣ್ಣಜೊಯಿಸರ ಹೆಣ್ಣುಮಕ್ಕಳು, ಸರಸಿಯನ್ನು ಅತ್ಯಂತ ಅಕ್ಕರೆಯಿಂದ ನೋಡಿಕೊಳ್ಳುತ್ತ, ಅವರಲ್ಲಿ ಒಬ್ಬರು ತಪ್ಪಿದರೆ ಇನ್ನೊಬ್ಬಳು ಸರಸಿಯನ್ನು ಆದಷ್ಟು ಸೌಖ್ಯವಾಗಿಡಲು ಪ್ರಯತ್ನ ಮಾಡುತ್ತಿದ್ದರು.

ಊರಿಗೆ ಪ್ಲೇಗ್ ಜಾಡ್ಯ ಹರಡಿದಾಗ, ಇತರೆ ಕೇರಿಯವರಂತೆ

ಬ್ರಾಹ್ಮಣಕೇರಿಯ ಕೆಲ ಜನರೂ ಸಹ ಊರಿನ ಹೊರಗೆ ಗುಡ್ಲುಗಳನ್ನು ಹಾಕಿ ಅಲ್ಲಿಗೆ ಸಂಸಾರಸಮೇತ ತೆರಳಿದ್ದರು. ಆದರೆ ಜೀವನದಲ್ಲಿ ಅತೀವ ಜುಗುಪ್ಸೆಗೆ ಒಳಗಾಗಿದ್ದ ಕೃಷ್ಣಶಾಸ್ತ್ರಿಗಳು" ಮರಣ ಎಲ್ಲಿ ಹೋದರೆ ತಾನೆ ತಪ್ಪೀತು?– ಜಾತಸ್ಯ ಮರಣಂ ಧ್ರುವಂ.... ಅದು ಬರುವುದಾದರೆ, ನಮ್ಮ ಮನೆಯಲ್ಲೇ ಬರಲಿ" ಎಂದು ಧೈರ್ಯ ತಾಳಿದ್ದರು. ಕೇಶವಯ್ಯನಂತಹ ಉಳಿಕೆ ಬ್ರಾಹ್ಮಣರು, "ನಾವೆಲ್ಲರೂ ಊರು ಬಿಟ್ಟಲ್ಲಿ, ಕಳ್ಳಕಾಕರು, ನಮ್ಮ ಮನೆ ಹೆಂಚು ಗಳುಗಳನ್ನೂ ಬಿಡದೆ ಕದ್ದುಕೊಂಡು ಹೋಗುತ್ತಾರೆ" ಎಂದು ಊರಿಗೇ ಅಂಟಿ ಉಳಿದಿದ್ದರು.

ಪರಿಸ್ಥಿತಿ ಹೀಗಿರುವಾಗ ಕೇಶವಯ್ಯನ ಹೆಂಡತಿಗೆ ಪ್ಲೇಗಿನ ಗೆಡ್ಡೆ ಎಡತೊಡೆಯ ನಡುವೆ ಕಾಣಿಸಿಕೊಂಡಿತು. ತತ್‌ಕ್ಷಣ ಕೇಶವಯ್ಯ ಮಾನ ಮರ್ಯಾದೆಗೆ ತಿಲಾಂಜಲಿಯಿತ್ತು ಕೃಷ್ಣಶಾಸ್ತ್ರೀಗಳ ಮನೆಗೆ ಧಾವಿಸಿದ. ಅವರ ಬಳಿ ಸರ್ವರೋಗಕ್ಕೂ ಸಿದ್ಧೌಷಧವೆನಿಸಿದ ಕುಪ್ಪಿ ಮಾತ್ರೆ ಇದ್ದುದು ಅವನಿಗೆ ತಿಳಿದಿತ್ತು. ಅವನು ಬಂದು ಮನೆಯ ಬಾಗಿಲು ತಟ್ಟಿದಾಗ, ಶಾಸ್ತ್ರಿಗಳು ಸರಸಿಗೆ ಊಟಕ್ಕಿಟ್ಟು, ತಾವು ಕೇವಲ ತುಳಸಿ ದಳ ಸೇರಿಸಿದ ನೀರು ಸೇವಿಸಿ, ಅವಳನ್ನು ತಮ್ಮ ಮಗ್ಗುಲಲ್ಲೆ ಮನಗಿಸಿಕೊಂಡು ಮಹಾಭಾರತದ ಕತೆ ಹೇಳುತ್ತಿದ್ದರು. ಅವಳು ಮಲಗುವಾಗ ಯಾವುದಾದರೊಂದು ಕತೆ ಹೇಳುವ ಪರಿಪಾಠ ರುಕ್ಮಿಣಿಗೆ ತಪ್ಪಿ, ಆ ಸರದಿ ಈಗ ಅವರ ಪಾಲಿಗೆ ಬಂದಿತ್ತು.

"ಕುಂತಿ ಕರ್ಣನ ಬಳಿ ಬಂದು, ನಾನೇ ನಿನ್ನ ತಾಯಿ, ಪಾಂಡವರೈವರೂ ನಿನ್ನ ತಮ್ಮಂದಿರು, ಎಂದು ತಿಳಿಸ್ತಾಳೆ..." ಎಂದು ಹೇಳುತ್ತಿರುವಾಗ, ಹೊರಗೆ ಬಾಗಿಲು ತಟ್ಟಿದ ಶಬ್ಧವನ್ನು ಕೇಳಿ,

"ತಾಳಮ್ಮ, ಯಾರೋ ಬಾಗಿಲು ತಟ್ಟುತ್ತಾ ಇದ್ದಾರೆ. ಅದೇನು ನೋಡಿ ಬರ್ತೇನೆ. ಆಮೇಲೆ ಈ ಕಥೇನ ಮುಂದುವರಿಸ್ತೇನೆ." ಮಗುವನ್ನು ರಮಿಸಿ, ಎದ್ದು ಹೋಗಿ ಬಾಗಿಲು ತೆಗೆದು ನೋಡಿದರು– ಕೇಶವಯ್ಯ!... ಕೃಷ್ಣಶಾಸ್ತ್ರಿಗಳಿಗೆ ವಿಪರೀತ ಸಿಟ್ಟು ಬಂದು ಬಾಗಿಲನ್ನು ಮುಚ್ಚಿಬಿಡಬೇಕೆಂದಿದ್ದರು. ಆದರೆ ಕೇಶವಯ್ಯನಾಗಲೆ ಒಳಗೆ ನುಗ್ಗಿ ಅವರ ಕಾಲುಕಟ್ಟಿದ್ದ ಅಷ್ಟರಲ್ಲಿ ಸರಸಿಯೂ ಎದ್ದು ಓಡುತ್ತ ಬಂದು ಮಾವಯ್ಯನ ತೊಡೆಯನ್ನು ತಬ್ಬಿ ನಿಂತಳು.

ಅವಳಿಗೆ ಕೇಶವಯ್ಯನನ್ನು ಕಂಡರೆ ಆಗದು. ರುಕ್ಮಿಣಕ್ಕ ಎಲ್ಲಿ ಎಲ್ಲಿ, ಎಂದು ಆ ದಿನ ತಮ್ಮ ಮನೆಯೊಳಗೆ ಬಂದವರಲ್ಲಿ ಕೇಶವಯ್ಯನದೇ ಬಲು ಜೋರು ಆ ದಿನದಿಂದ ಅವನ ಮುಖ ಕಂಡ ಕಡೆ ಸರಸಿ ನಿಲ್ಲುತ್ತಿರಲಿಲ್ಲ. ಅಲ್ಲಿಂದ ದೌಡು ಹೊಡೆಯುವಳು. ಹಾಗೇನೆ ಜೋಯಿಸರ ಬಗ್ಗೆಯೂ ಕೂಡ

ಅವಳಿಗೆ ಅಸಮಾಧಾನವಿತ್ತು. ಅವರು ಈತನಷ್ಟು ಜೋರು ಮಾಡದಿದ್ದರೂ ಈತನ ಜೊತೆಗೆ ಇದ್ದುದೇ ಮಗುವಿನ ಮನಸ್ಸನ್ನು ಕೆಡಿಸಿತ್ತು. ಆ ಕಾಣದಿಂದಲೆ, ಅವರ ಮನೆಯಲ್ಲಿ ಅವರ ಹೆಣ್ಣುಮಕ್ಕಳಿಗೆ ಸರಸಿ ಒಗ್ಗಿಕೊಂಡಿದ್ದರೂ ಜೋಯಿಸರು ಪರಿಪರಿಯಲ್ಲಿ ಪುಸಿ ಮಾಡಿದರೂ ಅವರ ಬಳಿ ಸುಳಿಯುತ್ತಿರಲಿಲ್ಲ..... ಈಗ ಕೇಶವಯ್ಯ ತಮ್ಮ ಹಟ್ಟಿಗೆ ಬಂದು ಮಾವಯ್ಯನ ಕಾಲು ಹಿಡಿದಿದ್ದಾನೆ!.... ಅಮ್ಮ, ಅಮ್ಮ, ಆ ದಿನ ಅವನು ಏನು ಹಾರಾಡ್ತಿದ್ದ!.... ಈಗ ಬಂದಿದಾನೆ ಮಾವಯ್ಯನ ಕಾಲು ಹಿಡಿಯೋಕೆ–ಒದೀಬೇಕು ಎಂದಿತು ಮಗುವಿನ ಅಂತರಾಳ.

ಕೃಷ್ಣಶಾಸ್ತ್ರಿಗಳಿಗೂ ಕಾಲು ಹಿಡಿದ ಕೇಶವಯ್ಯನನ್ನು ಹಾಗೇ ಝಾಡಿಸಿ ಒದೆಯಬೇಕೆಂದು ಮನಸ್ಸಾಯಿತು. ಕೋಪ ಎನ್ನುವುದು ಕೂಡ ಇನ್ನೊಂದು ರೀತಿಯ ಪಾಪ, ಎಂದು ತಮ್ಮನ್ನೇ ಹೇಗೊ ಸಮಾಧಾನಪಡಿಸಿಕೊಂಡರು.

ಕೇಶವಯ್ಯ ಒರಲುತ್ತಿದ್ದ:

"ನಾನು ನಿಮಗೆ ಶತಾಪರಾಧ ಮಾಡಿದ್ದೇನೆ, ಶಾಸ್ತ್ರಿಗಳೇ.... ಈಗ ನೀವು ಅದನ್ನೆಲ್ಲ ಮರೆತು ದೊಡ್ಡ ಮನಸ್ಸು ಮಾಡಿ ನನಗೊಂದು ಉಪಕಾರ ಮಾಡಬೇಕು, ಶಾಸ್ತ್ರಿಗಳೆ..."

"ಮೊದಲು ನನ್ನ ಕಾಲು ಬಿಟ್ಟು, ಏಳು" ಎಂದ ಶಾಸ್ತ್ರಿಗಳ ಮಾತಿನಲ್ಲಿ ಇನ್ನೂ ಕೋಪ ಹೆಡೆಯಾಡುತ್ತಿತ್ತು. ಕೇಶವಯ್ಯ ಎದ್ದು ನಿಂತು, ಕೈ ಜೋಡಿಸಿ,

"ಶಾಸ್ತ್ರಿಗಳೆ, ನನ್ನ ಹೆಂಡತಿಗೆ ಪ್ಲೇಗ್ ಆಗಿದೆ..." ಎಂದು ಹೇಳುತ್ತ ಗದ್ಗದಿತನಾದ.

"ಗ್ರಹಚಾರ–ಅದಕ್ಕೆ ನಾನೇನು ಮಾಡುವ ಹಾಗಿದೆ?" ಶಾಸ್ತ್ರಿಗಳ ಧ್ವನಿ ಇನ್ನೂ ಗಡುಸಾಗೇ ಇತ್ತು.

"ಅವಳ ಜೀವ ಈಗ ನಿಮ್ಮ ಕೈಯಲ್ಲೇ ಇದೆ... ನಿಮ್ಮ ಹತ್ತಿರ ಕುಪ್ಪಿ ಮಾತ್ರೆ ಇದೆಯಲ್ಲ?– ಅದನ್ನು ಉಪಯೋಗಿಸಿ ದಯಮಾಡಿ ನನ್ನ ಹೆಂಡತಿ ಜೀವವನ್ನ ಉಳಿಸಿಕೊಡಿ."

"ನನ್ನಲ್ಲಿ ಕುಪ್ಪಿ ಮಾತ್ರೆ ಇರೋದು ಸಹಜ. ಅದು ನಮ್ಮಜ್ಜನ ಕಾಲದ್ದು. ಇದನ್ನು ಉಪಯೋಗಿಸೋದು ನಮ್ಮ ತಂದೆಯವರಿಗೂ ಸರಿಯಾಗಿ ತಿಳಿದಿರಲಿಲ್ಲ. ಅವರು ಜ್ವರ ಬಂದೋರಿಗೆ ಗಂಧದ ಕಲ್ಲಿನ ಮೇಲೆ ಜೇನುತುಪ್ಪದ ಸಮೇತ ಇದನ್ನ ಮೂರು ಸುತ್ತು ತೇದು ನೆಕ್ಕಿಸೋರು. ಅಜ್ಜನಿಂದ ನಮ್ಮ ತಂದೆ ಕಲಿತಿದ್ದದ್ದು ಅಷ್ಟೇ. ಅಜ್ಜ ಕಲಿಸಲು ತಯಾರಿದ್ದರೂ ನಮ್ಮ ತೀರ್ಥರೂಪರವರಿಗೆ ಕಲಿಯುವ ಆಸಕ್ತಿಯಿರಲಿಲ್ಲವಂತೆ. ನಮ್ಮ ತಂದೆಗೆ ಕುದುರೆ ಸವಾರಿ, ಕುಸ್ತಿ ಇಂಥವುಗಳಲ್ಲಿ

ಅಭಿಲಾಷೆ...ಆದ್ದರಿಂದ ಕುಪ್ಪಿ ಮಾತ್ರೇನ ಜ್ವರಕ್ಕೆ ಉಪಯೋಗಿಸೋದು ಮಾತ್ರ ಅವರಿಗೆ ಗೊತ್ತಿತ್ತು. ಅದಷ್ಟನ್ನೆ ಅವರಿಂದ ನಾನು ಕಲಿತಿರೋದು... ಇದನ್ನ ಅನೇಕ ರೋಗಗಳಿಗೆ ಉಪಯೋಗಿಸಬಹುದು ಎಂದು ಅಜ್ಜ ನಮ್ಮ ತಂದೆಯ ಸಂಗಡ ಹೇಳುತ್ತಿದ್ದರಂತೆ– ಒಂದೊಂದು ಖಾಯಿಲೆಗೆ ಒಂದೊಂದು ಅನುಪಾನ. ನೀರು, ಹಾಲು, ಘೃತ– ಹೀಗೆ ಬೇರೆ ಬೇರೆ ಅನುಪಾನದಲ್ಲಿ ಇದನ್ನು ಪ್ರಯೋಗಿಸಬೇಕಂತೆ. ಅದರಲ್ಲೂ ಇಂಥಿಂಥ ರೋಗಕ್ಕೆ ಇಷ್ಟಿಷ್ಟು ಸುತ್ತು ತೇಯಬೇಕು ಎಂದು ಕ್ರಮವಂತೆ... ಅಜ್ಜನಿಂದ ನನ್ನ ತೀರ್ಥರೂಪರು ಎಷ್ಟು ವಿಚಾರ ಕೇಳಿಸಿಕೊಂಡಿದ್ದರೆ ವಿನಾ, ಇದನ್ನು ಯಾವ ರೋಗಕ್ಕೆ ಯಾವ ಕ್ರಮದಲ್ಲಿ, ಹೇಗೆ ಪ್ರಯೋಗಿಸಬೇಕು ಎಂಬ ವಿವರಗಳನ್ನು ಅರಿಯಲು ಪ್ರಯತ್ನ ಮಾಡಲಿಲ್ಲ...... ಆದ್ದರಿಂದ–"

"ನೀವು ಹೇಗಾದರೂ ದೊಡ್ಡ ಮನಸ್ಸು ಮಾಡಬೇಕು. ನನ್ನಾಕೆಯನ್ನು ಮಕ್ಕಳ ತಾಯಿಯಾಗಿ ಉಳಿಸಬೇಕು..." ಕೇಶವಯ್ಯ ಗೋಗರೆಯುತ್ತಲೇ ಇದ್ದ.

"ನೋಡಪ್ಪ ಕೇಶವಯ್ಯ, ಪ್ಲೇಗ್ ಜಾಡ್ಯಕ್ಕೆ ಈ ಕುಪ್ಪಿ ಮಾತ್ರೇನ ಹೇಗೆ ಉಪಯೋಗಿಸಬೇಕು ಅನ್ನೋದು ನನಗಂತೂ ದಿಟವಾಗಿಯೂ ತಿಳೀದು. ಅದಕ್ಕೆ ಯಾವ ಅನುಪಾನವೊ, ಎಷ್ಟು ಸುತ್ತೋ..."

ಶಾಸ್ತ್ರಿಗಳ ಹೃದಯ ಕೊಂಚ ಕರಗಿದುದನ್ನು ಗಮನಿಸಿ, ಕೇಶವಯ್ಯ ಕಣ್ಣೀರು ಸುರಿಸುತ್ತ,

"ಹಾಗಿದ್ದರೆ, ತಾವು ಇಷ್ಟು ಉಪಕಾರ ಮಾಡಿ.." ಎಂದು ಬೇಡಿದ.

"ಏನು?"

"ಆ ಕುಪ್ಪಿ ಮಾತ್ರೇನ ನನ್ನ ಕೈಲಿ ಕೊಡಿ. ನಾನು ಯರನ್ನಾದರೂ ಕೇಳಿ ಉಪಯೋಗಿಸ್ತೀನಿ."

"ಈ ಊರಿನಲ್ಲೆ ಅಲ್ಲ, ಇದರ ಉಪಯೋಗ ಈ ಸುತ್ತಿನಲ್ಲೆ ಯಾರಿಗೂ ಗೊತ್ತಿಲ್ಲ."

"ಹೋಗಲಿ. ಅದನ್ನ ನನ್ನ ಕೈಲಿ ಕೊಡಿ. ಇದರಿಂದ ಜೇನುತುಪ್ಪದ ಅನುಪಾನದಲ್ಲಿ ಗಂಧ ತೇದು ಆ ಪ್ಲೇಗಿನ ಗಂಟಿಗೆ ಲೇಪ ಹಾಕ್ತೀನಿ..."

ಶಾಸ್ತ್ರಿಗಳು ದ್ವೇಷದಿಂದಲೇ ನಕ್ಕರು.

"ಜ್ವರಕ್ಕೆ ಉಪಯೋಗಿಸೊ ಅನುಪಾನವನ್ನ ಪ್ಲೇಗಿಗೆ ಉಪಯೋಗಿಸ್ತೇನೆ, ಎನ್ನುತ್ತೀಯಲ್ಲ?"

"ಹೇಗೊ ಗಂಡ ಅನ್ನಿಸಿಕೊಂಡಮೇಲೆ ಅವಳನ್ನ ಉಳಿಸಿಕೊಳ್ಳಲಿಕ್ಕೆ

ಕೊನೆ ಪ್ರಯತ್ನ ಮಡ್ತೀನಿ."

ಶಾಸ್ತ್ರಿಗಳು ಕೊಡುವುದೊ ಬೇಡವೊ ಎಂಬ ಜಿಜ್ಞಾಸೆಯಲ್ಲಿ ನಿಂತರು.

"ನಿಮ್ಮ ದಮ್ಮಯ್ಯ ಅಂತೀನಿ, ಶಾಸ್ತ್ರಿಗಳೆ, ದಯಮಾಡಿ ಕೊಡಿ. ಇದರಿಂದ ಒಂದು ಜೀವ ಉಳಿದರೂ ಉಳಿಯಬಹುದು."

ಒಂದು ಜೀವ ಉಳಿಸುವ ಮತೆತ್ತಿದಾಗ, ಶಾಸ್ತ್ರಿಗಳ ಅಂತಃಕರಣ ಕಲಕಿತು. ಇದರಿಂದ ಆ ಜೀವ ಉಳಿಯುತ್ತದೊ ಇಲ್ಲವೊ. ಕೊಡದೇ ಹೊದರೆ, ಜೀವ ಹೋಗುವಾಗ ಇದ್ದ ಒಂದು ಪದಾರ್ಥವನ್ನು ಕೊಡದೇ ಹೋದೆನಲ್ಲ, ಎಂಬ ಅಪರಾಧಭಾವ ಮಾತ್ರ ಉಳಿದುಬುಡುವುದು... ಈಗಲೇ ತನ್ನ ಪಾಪದ ಹೊರೆ ದೊಡ್ಡದಾಗಿದೆ. ಅದಕ್ಕೆ ಇದೂ ಒಂದನ್ನು ಯಾಕೆ ಸೇರಿಸಲಿ?... ಶಾಸ್ತ್ರಿಗಳು ಒಳಗೆ ಹೋಗಿ ಮರದ ಸಂದೂಕಿನಿಂದ ಕುಪ್ಪಿ ಮಾತ್ರೆ ತೆಗೆದು, ತಂದು ಕೊಡುತ್ತ,

"ಇದನ್ನ ಮಾತ್ರ ಜೋಪಾನವಾಗಿ ಹಿಂದಿರುಗಿಸಬೇಕು... ಇತರೆ ರೋಗಗಳಿಗೆ ಹೇಗೊ ಕಾಣೆ. ಆದರೆ ಜ್ವರಕ್ಕೆ ಮಾತ್ರ ಇದು ರಾಮಬಾಣ. ಇದನ್ನ ಅನೇಕ ಸಲ ಉಪಯೋಗಿಸಿ ನೋಡಿದ್ದೇನ. ಯಾಕೆ, ಮೊನ್ನೆ ನಮ್ಮ ಸರಸಿಗೇ ಜ್ವರ ಬಂದಿದ್ದಾಗ, ಇದನ್ನ ಉಪಯೋಗಿಸಿದೆ. ಎರಡೇ ದಿನದಲ್ಲಿ ಜ್ವರ ನಿಂತುಬಿಟ್ಟಿತಲ್ಲ!....."

"ಇದರ ವಿಚಾರ ನೀವು ಯೋಚನೆ ಮಾಡಬೇಡಿ. ಒಳ್ಳೇದಾಗಲಿ, ಕೆಟ್ಟದಾಗಲಿ–ಮಾರನೆ ದಿನವೇಯೆ, ನಿಮ್ಮ ವಶಕ್ಕೆ ಇದನ್ನ ತಂದು ಒಪ್ಪಿಸ್ತೇನೆ" ಎಂದು ಆಶ್ವಾಸನೆ ಕೊಟ್ಟು, "ತುಂಬ ಉಪಕಾರವಾಯಿತು" ಎಂದು ಹಲ್ಲುಕಿರಯುತ್ತ ಕೇಶವಯ್ಯ ನಿರ್ಗಮಿಸಿದ.

ಕೆಲವು ದಿನಗಳು ಕಳೆದಿದ್ದವು. ಒಂದು ಮಧ್ಯಾಹ್ನ ಕೇಶವಯ್ಯನು ಶಾಸ್ತ್ರಿಗಳ ತೋಟಕ್ಕೆ ಬಂದವನೇ,

"ನಿಮ್ಮ ಕುಪ್ಪಿ ಮಾತ್ರೆಯಿಂದ ಬಹಳ ಅನುಕೂಲವಾಯಿತು. ಶಾಸ್ತ್ರಿಗಳೆ. ಅದರಿಂದಲೇ ನನ್ನ ಹೆಂಡತಿ ಜೀವ ಉಳೀತು. ಇದನ್ನ ತೇದು ಲೇಪ ಹಾಕ್ತಿದ್ದ ಹಾಗೆ ಹಾಗೇನೆ ಪ್ಲೇಗಿನ ಗಂಟು ಮರಿಹೋಯ್ತು... ನಿಮ್ಮ ಋಣ ಹೇಗೆ ತೀರಿಸಬೇಕೊ ತಿಳಿದು." ದೈನ್ಯ ತುಂಬಿ ಹೇಳಿದ.

"ಸಂತೋಷ ಇನ್ನು ಆ ಕುಪ್ಪಿ ಮಾತ್ರೆ ಅಗತ್ಯವಿಲ್ಲವಲ್ಲ?" ಶಾಸ್ತ್ರಿಗಳು ಕೇಳಿದರು.

"ಅದನ್ನೆ ಹೇಳಲಿಕ್ಕೆ ಬಂದೆ. ಯಾವಾಗ ರೋಗ ಗುಣಮುಖವಾಯಿತೊ, ನಿಮಗೆ ಅದನ್ನ ಹಿಂದಿರುಗಿಸೋಣ ಎಂದುಕೊಳ್ಳುವುಷ್ಟರಲ್ಲಿ, ನಾನು ಮನೇಲಿ

ಇಲ್ಲದಿರುವಾಗ, ನಮ್ಮ ಹುಡುಗ ಇದನ್ನ ಕಪ್ಪುಕಲ್ಲು ನೋಡಲಿಕ್ಕೆ ಅಂದವಾಗಿದೆ ಅಂತ ಆಟವಾಡಲು ತೆಕ್ಕೊಂಡು ಹೋಗಿ, ಅಲ್ಲೆಲ್ಲೊ ಕಳೆದುಬಿಟ್ಟು ಬಂದಿದ್ದಾನೆ... ನಾನು ಅವನು ಆಟ ಆಡ್ತಿದ್ದ ಜಾಗದಲ್ಲೆಲ್ಲ ತಲಾಷುಮಾಡಿದೆ. ಎಲ್ಲೂ ಸಿಗಲಿಲ್ಲ.... ಆವೊತ್ತಿನಿಂದ ನಿಮಗೆ ಮುಖ ತೋರಿಸಲೂ ನನಗೆ ಸಂಕೋಚವಾಗಿತ್ತು..... ಅಯ್ಯೊ, ಸತ್ಯವನ್ನ ಎಷ್ಟು ದಿನ ಮುಚ್ಚಲು ಸಾಧ್ಯ?.... ಯಾವತ್ತಿದ್ದರೂ ಹೇಳಲೇಬೇಕು–ಅದಕ್ಕೇ ಈ ದಿನ ಹೇಳೇಬೀಡೋಣಾಂತ ಧೈರ್ಯ ಮಾಡಿ ಬಂದೆ" ಎಂದುಬಿಟ್ಟ.

ಅವನ ಉದ್ಧಟತನಕ್ಕೆ ಶಾಸ್ತ್ರಿಗಳಿಗೆ ಆರಂಭದಲ್ಲಿ ಹುಚ್ಚುಕೊಪ ಬಂದಿತು. ಆದರೆ ಕ್ರಮೇಣ ಅದನ್ನೂ ಅಡಗಿಸಿಕೊಂಡರು. ಇಂಥ ದುಷ್ಟರಿಗೆ ಒಂದು ವಸ್ತುವನ್ನು ಕೊಟ್ಟು, ಅದನ್ನು ಹಿಂದಕ್ಕೆ ಪಡೆಯುವೆನೆಂದು ನಾನು ಭಾವಸಿದ್ದೇನನ್ನ ಮೊದಲು ಅವಿವೇಕ!– ಎಂದು ಸಮಾಧನ ತಂದುಕೊಳ್ಳಲು ಯತ್ನಿಸಿದರು.

"ಹೋಗಲಿ, ಬಿಡು. ಯಾರೂ ಏನನ್ನೂ ಶಾಸ್ವಾತವಾಗಿ ಇಟ್ಟುಕೊಳ್ಳಲು ಆಗಲ್ಲ... ಎಲ್ಲರೂ ಒಂದು ದಿನ ಹೋಗಲೇಬೇಕಲ್ಲ!" ಎಂಬ ಕಹಿ ಬೆರೆತತ್ತ್ವೋಪದೇಶದಲ್ಲಿ ಅವರ ಕೋಪ ಹಿಂಗಿತು.

## ೩೯

ಒಂದು ಸಂದೆ ನಂಜೇಗೌಡ್ನ ವೊಲದಲ್ಲಿ ಅವ್ನ ಆಳುಗಳು 'ಗುದ್ದ'ತೋಡ್ತ ಇದ್ದರು. ಆಗಲೆ ಕೆಲಸದಿಮದ ಗುಡ್ಲಿಗೆ ಇಂದಿರುಗಿದ್ದ ಲಕ್ಕ ಅಟ್ಟೀಲಿ ಯಾರು ಸತ್ತರು?– ಅಂತಾ ಚಿಂತಿಸ್ತಾ ಕುಂತ. ವಸಿ ವೊತ್ತು ಇಂಗೆ ಕಳೀತು. ನಾಕುಜನ ವೊತ್ತ ಚಟ್ಟದ ಮ್ಯಾಲೆ ಒಂದು ಎಣ ಬಂತು. ಚಟ್ಟದ ಮುಂದೆ ನಂಜೇಗೌಡ್ರ ಅವರ ಸಂಬಂಧಿಕ ಗಂಡಸ್ರು ಇದ್ದರು. ಅದರ ಇಂಚೋರಿ ನೆಂಟ್ರ ಎಂಗಸ್ರು ಕಣ್ಣಿರ ಕಚ್ಚಿ, ಬಾಯ್ಗೆ ಬಟ್ಟೆ ತುರುಕಿ, ಬತ್ತಾ ಇದ್ದರು. ಗುದ್ದ ಸಮೀಪಿಸ್ತಲೆ ಚಟ್ಟಾವ ಇಳುಕಿದ್ರು. ಅಮ್ಯಾಕೆ ಸಿವಾಚಾರದೋರು ಎಣಕ್ಕೆ ಮಾಡೊ ಪತ್;ತಿಮ್ಯಾರ್‍ಗೆ ಕ್ರಿಯಾದಿಗಳ ನಡಸಿ, ಎಣವ ಗುದ್ದದೋಳೀಕೆ ಇಳಿಸಿದ್ರು. ಅನಂತ್ರ ಕಡದು ತಂದಿದ್ದ ಗಬ್ಬದ ಬಳೆಯ ಗುದ್ದಕಿಟ್ಟು ಮಣ್ಣು ಮುಚ್ಚಿದರು. ಎಣದ ತಲೆದಿಸ್ಗೆ ಗುದ್ದದ ಅಂಚ್ಗಲ್ಲೆ ಒಂದು ಕಲ್ಲು, ಕಾಲು ದಿಸ್ಗೆ ಒಂದು ಕಲ್ಲು ನೆಟ್ಟರು. ಆ ಎಂಗಸ್ನ ಎಣ ನಂಜೇಗೌಡ್ನ ಎಡತೀದು ಅಂತಃ ನಂಜೇಗೌಡ ತಾನು ವೊದಿದ್ದ ವಲ್ಲಿಯಿಂದ ಕಣ್ಣೀರವರುಸ್ತ ನಿಂತಿದ್ದಾಗ್ಲೆ–ಲಕ್ಕಂಗೆ ತಿಳಿದುವೋಗಿತ್ತು.

ಎಲ್ಲರೂ ಸೋಕ ಮಾಡ್ತ ವೊಂಬೋದಮ್ಯಲೂವೆ ಲಕ್ಕ ತೆವರಿ ಮ್ಯಾಲೆ

ಕುಂತೇ ಇದ್ದ. ಬಾಣದಲ್ಲಿ ಅಲ್ಲೊಂದು ಚುಕ್ಕಿ ಮೂಡಿದರೂವೆ ಚಿಂತಿಸ್ತಾ ಕುಂತೇ ಇದ್ದ.

ನಂಜೇಗೌಡ್ರ ಎಡತಿ ತಾನು ಕಂಡಂಗೆ ಸಾದುಪ್ರಾಣಿ. ಮೂಗೆತ್ನಂಗೆ ದುಡಿಯಾದಂದೇ ಅವುಳಿಗೆ ಗ್ವತ್ತು. ಅವುಳ್ನ ಈ ಗೌಡ ಸಣ್ಣಸಣ್ಣ ಇಚಾರಕೆಲ್ಲ ಕ್ಯಾತೆ ತಕ್ಕಂಡು ವೋಡದು ಫಜೀತಿ ಮಾಡಿ, ಅಣ್ಣುಗಾಯಿ, ನೀರುಗಾಯಿ ಮಾಡ್ತಿದ್ದು ಊರಿಗೆಲ್ಲ ಗ್ವತ್ತಿದ್ದ ಇಸ್ಯಾನೆ!... ಗೌರಮ್ಮ ಏಡನೇ ಎಡತಿ. ಇನ್ನೂ ಚಿಕ್ಕಪ್ರಾಯ. ತಾನು ಬ್ಯರೆ ಎಂಗಸರ ಕುಟ್ಟೆ ಏಟೇ ಅಡಿದರೂವೆ ಗೌರಮ್ಮ ಮಾತ್ರ ಬಿಚ್ಚಾಲೆ ಗೌರಮ್ಮ ನಂಗೇ ಇರಬೇಕು ಅಂತ ಗೌಡ್ನ ಇರಾದೆ!... ಅವುಳು ಯಾವ ಗಂಡಸ್ನ ಕುಟ್ಲೂ ಮಾತಾಡಬ್ಯಾಡದು. ಒಂದು ಪಕ್ಸ ಮಾತಾಡಬೇಕಾಗಿ ಬಂದ್ರೂವೆ ಮೊಕದಲ್ಲಿ ನಗ ಇರಬ್ಯಾಡದು. ಮೊಕ ಯಾವತ್ತೂವೆ ಸಿಣಿಸಿಣಿ ಅಂತಿರಬೇಕು. ವೋಟೆ ಅಲ್ಲ... ಬಾವೀಲಿ ನೀರು ಸೇದಿ ಅಟ್ಟಿಗೆ ತತ್ತ ಇರ್ವಾಗ, ಯಾರಾರು ಗಂಡಸು ಎದುರ್ಗೆ ಬಂದ್ರೆ ಅವನ್ನ ಕತ್ತೆತ್ತ ಕೂಡ ನ್ವಾಡಬ್ಯಾಡದು. ಅಪ್ಪಿತಪ್ಪಿ ನ್ವಾಡಿದ್ರೆ, ಆಗ ಗೌಡ ಯಾರ ಜಗಲೀ ಮ್ಯಾಲಾರು ಕುಂತಿದ್ದು ಇದು ಕಣ್ಣಿಗೆ ಬಿದ್ದರೆ, – ಆ ನಾತ್ರೆನಾಗ ಗೌರಮ್ಮನ ಗತಿ ಮುಗಿದಂಗೇಯ...

"ಏನೇ ಭೋಷಡಿ. ಮಿಂಡಾಟ ಆಡಕ್ಕೆ ಸುರು ಮಾಡಕಂಡ್ಯೇನೆ?" ಅಂತ ಗುಡುಗಿ, ಅರಿಕಡ್ಡಿಯೊ, ಇಡಗಲು ಮುಂಡಿಯೊ, ಕಯ್ಗೆ ಯೇನು ಸಿಕ್ತೋ ಅದರಲ್ಲಿ ಚೆಂದಾಗಿ ತರಿದು, ಅವಳ್ಗೆ ಉಟ್ಟಿದ ಜಿನವ ಕಾಣಿಸಿಬುಡ್ತಿದ್ದ!–

ಏನಿದು ಅನ್ನಾಯ– ಯಾವತ್ತೂವೆ ಒಳ್ಳೆಯೋರಿಗೆ ಜೀವ್ನ ಸಲೀಸಿಲ್ವಲ್ಲ?... ವೋಟೆ ಅಲ್ಲ. ಒಳ್ಳೆಯೋರು ಬ್ಯಾಗಬ್ಯಾಗ ಸ್ವಾಮಿಪಾದವ ಸೆರುಬುಡ್ತಾರಲ್ಲ!– ಕೆಟ್ಟೋರು ಮಾತ್ರ ನಿಂಬಳಾಗೆ, ಯಾವ ದೊಡ್ಡ ಆಪತ್ತೂ ಇಲ್ಲದೇಯ ಬೋ ಜಿನಗಂಟ, ಒಳ್ಳಿ ದಿಮಾಕ್ಕಿನಿಂದ್ಲೆ ಬದುಕಿರ್ತಾರಲ್ಲ?... ನಂಗೊಂದೂ ವೊಳೆಯಕ್ಕಿಲ್ಲ. ದ್ಯಾವಾಜಮ್ಮ ಎಂಗೊ ಜನದ ಕಣ್ಣತೆಪ್ಪುಸಿ, ನಮ್ಮವು ಮಾಡ್ತಿದ್ದಂಗೆ, ಒಂದೊಂದು ದಪ ನನ್ನ ನ್ವಾಡಕ್ಕೆ ಬತ್ತಾಳಲ್ಲ–ಆಗ ಅವುಳೂ ಅಂಗೇ ಅಂತಳೆ:

"ಇದ್ಯಾವ ನ್ಯಾಯುವ ಲಕ್ಕ? ಈ ಪ್ಲೇಗ್‌ಮಾರಿ ಬಡಿಕಂಡು ವೋಗಿರೋರಲ್ಲಿ ಸುಮಾರು ಮಂದಿ ವಳ್ಳೆಯೋರೇಯ!.... ಆ ಬುಂಡಮ್ಮನಂತ ಪುಣ್ಯಾತಿಗಿತ್ತಿ ಸತ್ತು. ನಂಜೇಗೌಡನಂತೋರು, ಗಂಗಪ್ಪನಂತೋರು, ಕೇಸವಯ್ಯನಂತೋರು ಇನ್ನೂವೆ ಬದುಕ್ಕಂಡು ಅವರಲ್ಲ–ಇದಕೇನು ಯೋಳಾವ?"...

ಈ ಪ್ರಸ್ನೆ ಲಕ್ಕನ್ನ ಕಾಡ್ತಾನೆ ಇತ್ತು. ಅದರಾಗೂ ಬಂಡಮ್ಮ ಸತ್ತದ್ದ ತನ್ನ

ಸ್ವಂತ ತಾಯಿ ಸತ್ತದ್ದಕ್ಕಿಂತ ಎಚ್ಚಾಗಿ ಅವನ್ನ ಅಣ್ಣಮಾಡಿತ್ತು.

* * * *

ಲಕ್ಕ ಕುಂತೇ ಇದ್ದ. ಅವಂಗೆ ಗುಡ್ಲಿಗೋಗಿ ಉಣ್ಣಬೇಕು ಅನ್ನುಸನೇ ಇಲ್ಲ. ಬೊಡ್ಡಂಗೆ ಉಸಾರು ತೆಪ್ಪಿ, ಗುಡ್ಲಲ್ಲೆ ಬಿದ್ದಿತ್ತು. ಬೊಡ್ಡಿಮಗಂದು ಆಸೆ ಹೂಸು ಕುಡ್ಡಂಗೆ ಒಂದೇ ಜಿನ ಏಡು ಮೊಲವ ತಿಂದಕಿ ನಳ್ಳಾಡ್ತ ಬಿದ್ದದೆ...

ಅಮಾಸ್ಗೆ ಆತ್ರದ ದಿನಗಳು. ಕತ್ತಲೆ ಆಚೋರೀ ಈಚೋರಿ, ಎಲ್ಲಾ ಕಡೆನೂವೆ ಇಟ್ಟಾಡ್ತ ಇತ್ತು. ಲಕ್ಕ ಅಲ್ಲೊಂದು ಇಲ್ಲೊಂದು ಪಿಣಿಪಿಣಿ ಅಂತಿದ್ದ ಚುಕ್ಕಿಗಳನ್ನೇ ನ್ವಾಡ್ತ ಕುಂತಿದ್ದ. ದೊಡ್ಡಯ್ಯ ಇಂದ್ಕೆ ಆಯ್ತಾರೆ ಅಂತ ಯೋಳ್ತಿದ್ದು ಗೆಪ್ತಿ ಆಯ್ತು. ಅಂಗಾದ್ರೆ ನಮ್ಮ ಬುಂಡಮ್ಮಾರೂ ಚುಕ್ಕಿ ಆಗೇ ಇರಬೇಕಲ್ವ?.... ನಮ್ಮವ್ವನೂ ವೋಟೇಯ– ಅವಳೂ ಆಗಿರ್ನೇ ಬೇಕು. ಆದ್ರೆ ದ್ರುವ ನಕ್‌ಸತ್ರವ ನಮ್ಮ ದೊಡ್ಡಯ್ಯ ತೋರಿಸ್ದಂಗೆ ಈಗ ಈ ಚುಕ್ಕಿಗಳನ್ನೂ ನಂಗೆ ತೋರಿಸೋರು ಯೋರು?....

ಲಕ್ಕ ಇಂಗೆ ಆಲೋಚ್ನೆ ಮಾಡ್ತ ಇರ್ವಾಗ, ಊರು ಕಡಿಂದ ಒಂದು ಬೆಳಕು ವೋಟುದೂರ ಬಂದು ಆರೋಯ್ತು ಪುನಾ ಅದು ಇನ್ನೊಸಿ ದೂರ ಮುಂದ್ಕೆ ಕತ್ತಿಗತ್ತು. ಪುನ ಆರೋಯ್ತು. ಇನ್ನೊಸಿ ದೂರಕೆ ಪುನಾ ಕತ್ತಿಗತ್ತು... ಇಂಗೆ ವಸಿ ದೂರಕ್ಕೆ ಸರ್‍ಯಾಗಿ ಸಾಸ್ತ್ರ ಮಾಡಿ ಕಳುಸ್ತೀನಿ ಅಂದು, ಮೆಟ್ಟಿದ ಎಕ್ಕಡ ಕಳಚಿ ಕೈಗೆ ತಕ್ಕಂಡ. ಆದ್ರೆ ನಂಜೇಗೌಡ್ನ ವೊಲದ ಮ್ಯಲೆ ಆ ಬೆಳಕು ಕಾಣಿದ್ದಾಗ, ಅದು ಲಾಟೀನ ಬೆಳಕು ಅನ್ನೋದು ತಿಳುದು ಬಿಗ್ಯಾಗಿ ಇಡುದಿದ್ದ ಉಸುರು ಸರಾಗ್ವಾಗಿ ಅಡಕ್ಕೆ ಸುರುವಾಯ್ತು. ಎಕ್ಕಡ ಕೆಳಗಿಟ್ಟು ಲಕ್ಕ ಸೂಕ್‌ಸ್ಮಾಗಿ ನಿಟ್ಟುಸ್ದ. ಆಗ ಲಾಟೀನ ಒಬ್ಬ ಮನುಸ ಇಡಿದಿದ್ದು ಗೋಚರಾಯ್ತು. ಅವನ ಇಂದೆನೆ ನೆರಳಿನಂಗೆ ನಾಕು ಜನ ಬತ್ತಾ ಇದ್ದದ್ದೂ ಕಾಣಸ್ತು. ಲಕ್ಕಂಗೆ ಕುತೂಲ ಕೆರಳ್ತು. ಮೆಲ್ಲಗೆ ಎದ್ದ. ಸದ್ದು ಮಾಡ್ದೆ ತೆವರಿ ಮ್ಯಾಲಿದ್ದ ಒಂದು ಮರದ ಮರೆಯಿಂದ ಇನ್ನೊಂದು ಮರದ ಮಮರ್‍ಗೆ ಚಿಗೀಂತ, ನಂಜೇಗೌಡ್ನ ಎಡತಿ ಮಣ್ಣು ಮಾಡಿದ್ದ ಜಾಕ್ಕೆ ಜಮೀಪ ಇದ್ದ ಭಾರಿ ಹಲಸ್ನ ಮರದ ಮರ್‍ಗೆ ಅಂತು ನಿಂತ. ಅಂಗೆ ಅವುತು ನಿಂತು ನ್ವಾಡಿವಾಂತ ಯೋಚ್ನೆ ಮಾಡ್ತಿರುವಾಗ, ಬೈಲಿಗ ರಂಗ, ರಾಚೇವಾರದ ಕಾರೂ, ಕೊಪ್ಪಲು ಚೆನ್ನ, ಗುರುಮಲ್ಲು, ನಾಕಾಳೂವೆ ಆರೆ, ಗುದ್ದಲಿಗಳಿಂದ ನಂಜೇಗೌಡ್ನ ಎಡತಿ ಉಳಿದ್ದ ಗುದ್ದವ ಅಗೆಯಕ್ಕೆ ಮುಟ್ಟಿಕಂಡರು. ರುದ್ರ ಲಾಟೀನು ಇಡದು ಅವರ್‍ಗೆ ಬೆಳಕು ತೋರ್‍ತಿದ್ದ. ಗುದ್ದ ಇದ್ದದ್ರಿಂದ, ಅವರು ಅಗದು ಮಣ್ಣ ತೋಡೊದು ಸುಮಾರು ಕಾಲವೇ ಇಡೀತು. ಅಳ್ಳ ಆದಂಗಾದಂಗೆ

ಕುಕ್ಕರುಗಾಲ್ನಲ್ಲಿ ಕುಂತು ರುದ್ರ ಲಾಟೀನಿ ಅಳ್ಳದ ವಳೀಕೆ ಇಡಿದಿದ್ದರಿಂದ, ಗುದ್ದದ ವೊರೀಕೆ ಕತ್ತಲೆ ಮತ್ತೆ ಅದೀಕತ್ತು...

"ಎಣ ಕಾಣಿಸ್ತಾ ಇದ್ದದೇನ್ರೋ?" ಮೆತ್ತಗೆ ಕೇಳಿದ ರುದ್ರು.

"ಇನ್ನೂ ವಸಿ ತಗೀಬೇಕು–" ಅಂದೋನು ರಂಗ.

ಲಕ್ಕನ ಕುತೂಲ ಎಚ್ಚತ್ತಾ ಇತ್ತು.

ಕಡೆಗೊಮ್ಮೆ ವಳಗ್ನಿಂದ ಗುರುಮಲ್ಲು,

"ಈಗ ಸಿಕ್ಕಿದಂಗೆ ಕಾಣಿಸ್ತದೆ. ಲಾಟೀನ ನಮ್ಮ ಕೈಗೇ ಕ್ವಟ್ಟುಬುಡೊ, ರುದ್ರ" ಎಂದು ಕೇಳ್ದ.

ರುದ್ರ ಲಾಟೀನ ಅವನ ಕೈಗೆ ಕ್ವಟ್ಟು ಬೀಡಿ ಕತ್ತಿಸ್ಧ.

ಲಾಟೀನು ಈಸುಕೊಂಡ ಬಳಿಕ ಗುದ್ದದ ವಳಗಿದ್ದ ಮಂದಿ, ಇನ್ನು ಎಚ್ಟೊತ್ತು ಒಳಗೇಯ ಕಾಲ ಕಳೀನಿಲ್ಲ. ಅವರು ವೊರೀಕೆ ಬತ್ತಿದ್ದಂಗೆ, ರುದ್ರ ಎಗ್ಗಿದ ದನೀಲಿ,

"ಸಿಕ್ಕಿತೇನ್ರೋ"– ಕೇಳ್ದ.

ಅವರೆಲ್ಲಾರೂವೆ,

"ಸದ್ಯ, ಸಿಕ್ತು ಕನೊ ರುದ್ರ, ತಕೊ, ಮಡಗಿರು– "ಅವನಕೈಲಿ ಕ್ವಟ್ಟು, ಜಟಜಟ್ನೆ ಗುದ್ದದಿಂದ ವೊರೀಕೆ ತೆಗದಿದ್ದ ಮಣ್ಣ ಪುನಾ ಅದರೊಳೀಕೆ ತುಂಬಕ್ಕೆ ಸುರುಮಾಡಿದ್ರು. ಅದು ಮುಗಿದ ಕೂಡ್ಲೆ ಗುಟ್ಟು ಗುಟ್ಟಾಗಿ ಮಾತಾಡ್ತ ಅವರೆಲ್ಲರೂವೆ ಆ ಜಾಗವ ಖಾಲಿ ಮಾಡಿದ್ರು.

ಲಕ್ಕಂಗೆ ಚೋಜಿಗ...

ಅವರು ಗುದ್ದ ಯಾಕೆ ತೋಡಿದ್ರು– ಆ ಮಾರಿಗುಡಿ ಅಣ್ಣದೀರಿಗೆ ಅಲ್ಲೇನು ಸಿಕ್ತು?...

ಅವ್ನ ಈ ಸಮಸ್ಗೆ ಪರಿಯಾರ ಸಿಕ್ಕಕ್ಕೆ, ಮುಂದೆ ನಾಕು ಜಿನ ತಕ್ಕತ್ತು.

ದ್ಯಾವಾಜಮ್ಮ ಈ ನಾಕು ಜಿನವೂವೆ ಇತ್ತ ಕಡೆ ಸುಳುದೇ ಇರನಿಲ್ಲ. ಐದನೆ ಜಿನ ಆದಮ್ಯಾಲೆ, ಅವಳು ಬಂದಾಗ ನಡೆದದ್ನೆಲ್ಲ ಅವಳ್ಗೆ ತಿಳಸ್ದ ಲಕ್ಕ.

ದ್ಯಾವಾಜಮ್ಮ ಉರಿದುರಿದು ಬಿದ್ಲು:

"ಬೊಡ್ಡಿ ಹಕ್ಕಳು, ಸತ್ತ ಎಣಾನು ಬುಡೊಲ್ಲರಲ್ಲ– ಈ ಆಳಮುಂಡೆ ಜಲ್ಮ, ಆಸೆ ತಂದು ಉಟ್ಟಿದ್ದದೇ ವೊರತು ಆಯುಸ ತಂದು ಉಟ್ನಿಲ್ಲ..."

"ದ್ಯಾವಾಜಮ್ಮ ಅದೇನು ಯೋಳ್ತಿದ್ಲು ಅನ್ನೋದು ಅರ್ತ ಆಗದೆ,"

"ಅಂಗಂದ್ರೆ ಯೇನತ್ತೆ?" ಅಂತ ಕೇಳ್ದ.

"ಐ, ವೋಟೂ ನಿಂಗೆ ಗ್ವತ್ತಾಗನಿಲ್ವ?... ಇಲ್ನೋಡು ಲಕ್ಕ– ಈ ನಂಜೇಗೌಡ್ನ ಎಡತಿ ಸತ್ತಾಗ ಅವಳ ಮೈಮ್ಯಾಲೆ ಭಾರಿ ಚಿನ್ನದ ವಡುವೆ ಯೇರಿಕಂಡಿತ್ತು. ಅವಳ ಚೆಂದ ನೋಡಿ, ಬ್ಯಾರೆ ಗಂಡಸರು ಅವಳ ಮೇಲೆ ಕಣ್ಣಾಕ್ತಾರೆ ಅಂತ ಸಿಕ್ಸೆ ಕ್ವಟ್ರೂವೆ, ಅವಳ್ನ ಚಿನ್ನದ ವಡುವೇಲಿ ಸುಂಗಾರ ಮಾಡಕ್ಕೆ ಅವಯ್ಯಂಗೆ ಬೋ ಇಸ್ಟವಂತೆ. ಅವಮ್ನೆ ನಂಗೆ ಸಿಕ್ಕದಾಗ್ನೆಲ್ಲ ನನ್ನ ಕುಟ್ಟೆ ಯೋಳೋಳು. ನೆಲ ಕಚ್ಕೋವಂಗೆ ವೊಡದೂ ಬುಡೋದು. ಆಮ್ಯಾಕೆ ನನ್ನ ಅಣ್ಣತಮ್ಮದೀರ್ಗೆ ಎದುರಿ, ಅವರ್ಗೆ ಯೇಳ್ದೆ ಇರಲೀಂತ, ಸಣ್ಣಪುಟ್ಟ ಚಿನ್ನದ ವಡುವೆ ಮಾಡಿಸಿಕ್ವಡಾದು... ಸಣ್ಣ ಪುಟ್ಟ ಏಟು ವೊಡದ್ರೆ ಏನೂ ಕ್ವಡ್ತಿರನಿಲ್ಲ– ಅದುಕೆ, ನಾನು ಅವರ ಏಟು ವಡಿಯಕ್ಕೆ ಮುಟ್ಟಿಕಂಡಾಗ್ಲೆಲ್ಲ, 'ದ್ಯಾವರೆ, ಅವರ ಏಟು ಈ ವತ್ತ ಜೋರಾಗೆ ಬೀಳಲೀಂತ ಪಾರ್ತನೆ ಮಾಡ್ತಿದ್ದೆ'–ಅನ್ನಾಳು!"

"ಅಂಗಾರೆ ಪುರಾ ವಡವೆ ಇದ್ದರಬೇಕಲ್ವ ಅತ್ತೆ, ಅಯಮ್ಮನತ್ರ?"

"ಮಸ್ತಾಗಿತ್ತು. ಸಾಯೋ ವೊತ್ನಲ್ಲಿ, ಗೌರಮ್ಮನ ಮೈಮ್ಯಾಲಿದ್ದ ವಡವೇನೆಲ್ಲ ತಗಿಯಕ್ಕೆ ಸುರು ಮಾಡಿದ್ರು. ಕೈಗೆ ಸಿಕ್ಕಿದ ಚಿನ್ನದ ಪೌಚಿ, ದಪ್ಪಾನೆ ಚಿನ್ನದ ಬಳೆಗಳು, ಕುತ್ತಿಗ್ಗೆ ಆಕಿದ್ದ ದೊಡ್ಡ ಗುಂಡಿನಸರ, ಚಿನ್ನದ ಕಾಸಿನಸರ, ನಡೀಗೆ ತ್ವಡಿಸಿದ್ದ ಬೆಳ್ಳಿ ಗೆಜ್ಜೆಡಾಬು– ಈ ವಡುವೆ ತರಗೆಯೋವರ್ಗೂ ಸುಮ್ಮಕಿದ್ದೋಳು, ಕೆಂಪು ಅರಳು ಮೆಟ್ಟಿದ ಕಿವಿ ವಾಲೆ, ಕುತ್ತಿಗ್ಗೆ ಆಕ್ದ ಚಿನ್ನದ ದಪ್ಪಾನೆ ಅಡ್ಡಿಕೆ, ಏಡೂ ಬೆಳ್ಳಿಗೂ ತ್ವಡಿಸಿದ್ದ ಚಿನ್ನದುಂಗರ, ನನ್ನ ಮುಸ್ಟಿ ವೋಟು ಗಾತ್ರದ ಚಿನ್ನದ ಲಿಂಗದಕಾಯಿ, ಇವ್ನ ಮಾತ್ರ ತಗಿಯಕ್ಕೆ ಅವುಳು ಅವಕಾಶ ಕ್ವಡ್ನಿಲ್ಲ... ಅವುಳು ಸಾಯೋ ವ್ಯಾಳ್ಯಾದಲ್ಲಿ ನಾನೂ ಅಲ್ಲೆ ನಿಂತಿದ್ದಿ– ಅವಳ್ನ ಅವುರಟ್ಟಿ ಜಗಲಿ ಮ್ಯಾಲೆ ತಂದು ಮನಗಿಸಿದು. ಅವಳ್ನ ಜಗಲಿಗೆ ಇಡುದ ವಸಿವೋತ್ನಲ್ದೆ ಕೈಕಾಲು ಆಡೋದು ನಿಂತಿದ್ದ ಕಂಡು, ನಂಜೇಗೌಡ ಅವಳ ಮೈಮ್ಯಾಗಿನ ವಡವೆ ಬಿಚ್ಚಕ್ಕೆ ಸುರು ಮಾಡ್ದ ಎಲ್ಲಾ ವಡವೆ ಬಿಚ್ಕೋವರ್ಗೂ ಆಗ್ಲೆ ಸತ್ತೋದಂಗೆ ಬಿದ್ದಿದ್ದೋಳು, ಗಂಡ ವಾಲೆ ಬಿಚ್ಚಕೆ ಕೈ ಆಕಿದಾಗ, ತಟಕ್ನೆ ತನ್ನ ಏಡೂ ಕೈಯೆತ್ತಿ ಅಡ್ಡಿ ಮಾಡಿದ್ದಲು. ಗೌಡ ಆಮ್ಯಾಕೆ ಅಪ್ಪರ ಬೆಲೆ ಬಾಳೊ ಅಡ್ಡಿಕ್ಗೆ ಕೈಯಿಟ್ಟ. ಕೊಸಾರ್ನೆ ಅವ್ನ ಕೈಯ ಭದ್ರಾಗಿ ಇಡುಕಂಡ್ಲು!.... ಏನು ಮಾಡಕ್ಕೂ ಗ್ವತ್ತಾಗ್ದೆ. ಗೌಡ ವೋಟೋತ್ನಿಂದ ಅಲ್ಲೇ ಇದ್ದ ಮಟದ ಸ್ವಾಮಿಗಳ ಕಡೆ ನ್ವಾಡ್ದ. ಸ್ವಾಮಿಗಳು, 'ವೋಗ್ಲಿ, ಬುಟ್ಟುಬುಡು ನಂಜೇಗೌಡ. ಅವಳ್ಗೆ ಬಂಗಾರದ ಉಚ್ಚ ಇಡಿಸಿಕೋನು ಪ್ರತುಮಾಗಿ ನೀನೆಯ! ಆಗ ಸುಮಾರು ವಡವೆ ಬಿಚ್ಚಿಕಂಡಿದ್ದೀ. ಇನ್ನು ಉಳಿದಿರಾದು ವಾಲೆ, ಅಡ್ಡಿಕೆ, ಲಿಂಗದ ಕರಡಿಗೆ–ಈಟು ತಾನೆ?... ವಾಲೆಭ್ಯಾಗ್ಯ ಮುತ್ತೈದೆಯೋರ್ಗೆ

ಮುಕ್ಯ. ಅದ ಅಸಿಯಕ್ಕೆ ಅವುಳು ಬುಡ್ತಾಯಿಲ್ಲ. ಚಿನ್ನದ ಕರಡಿಗೇಲಿ ಲಿಂಗು ಇದೆ. ಸ್ವಾಮಿನ ಎದೆಮ್ಯಾಲೆ ಮಡಿಕ್ಕಂಡೆ ಕೈಲಾಸ ಸೇರಬೇಕೂಂತ ಆಸೆ ಅವಳ್ಗೆ, ಇನ್ನು ಉಳಿಕಂಡದ್ದು ಚಿನ್ನದ ಅಡ್ಡಿಕೆ. ಆ ಅಡ್ಡಿಕೆ ನೀನು ಮಾಡಿಸಿಕ್ವಟ್ಟ ಜಿನದಿಂದ್ಲೂವೆ, ಅವಳು ನಮ್ಮ ಮಟಕ್ಕೆ ಬರೋವಾಗ್ನೆಲ್ಲ ಅಕ್ಕಂಡೆ ಬತ್ತಿದ್ಲು. ಆ ವಡವೆ ಕಂಡರೆ ಅವಳ್ಗೆ ತನ್ನ ಪಿರಾಣಕ್ಕಿಂತಲೂ ಎಚ್ಚ ಪಿರೀತಿ... ಇವಿಸ್ಟೂವೆ ಅವುಳ ಜ್ವೇಲೆ ಗುದ್ದಕೋಗ್ಲಿ ಬುಡು. ಸಾಯೋ ವೊತ್ನಲ್ಲಿ, ಆ ಜೀವಾವ ನೋಯಸಬ್ಯಾಡ" ಅಂದರು... ಸ್ವಾಮಿಗಳೇ, ಇರಲಿ ಅಂದಮ್ಯಾಲೆ ನಂಜೇಗೌಡ ಯೇನ ಮಾಡಾನು?– ಗಮ್ಮನೆ ವಪ್ಲಿ, ಆ ಉಳಿಕೆ ವಡವೆಗಳ ಅಂಗೆ ಅವುಗಳ ಮೈಮ್ಯಾಲೇ ಬುಟ್ಟ.... ಆಯಮ್ಮ ಸಾಯೋ ವತ್ನಲ್ಲಿ ನಡೆದ ಈ ಯಾವಾರಾನೆಲ್ಲ ನನ್ನಂಗೆ, ಆ ಮಾರಿಗುಡೀಗೆ ಸೇರ್ತಾ ಇರ್ತವಲ್ಲ, ಆ ಪೋಲಿಮುಂಡೆಯೊವೊವೆ, ಅಲ್ಲೆ ನಿಂತು ನ್ವಾಡ್ತ ಇದ್ದೊ– ಸರಿ. ಅವಕೆ ಆಸೆ ಆಯ್ತು. ನೀ ಯೋಳಿದಂಗೆ, ರಾತ್ರಿನಾಗ ಇಲ್ಲಿಗೆ ಬಂದ್ರು, ಗುದ್ದ ಆಗದ್ರು, ಎಣದ ಮ್ಯಾಲಿನ ವಡವೇನೆಲ್ಲ ಅಸಿಕಂಡರು, ಫೇರಿ ಕಿತ್ತರು...." ಎಂದು ಇವರಿಸಿ, "ಹೆತ್ತ ತಾಯ ಲಾಡಿ ಬಿಚ್ಚೋ ಲೌಡಿ ಮಕ್ಕಳು" ಅಂತ ಖಾರವಾಗಿ ಬೈದು, ಬಾಯ್ಗೆ ತುಂಬಿದ ಎಲಡಿಕೆ ರಸವ ಪಿಚ್ಚನೆ ಉಗಿದ್ಲು.

"ಇಂತಾ ಸೊಳೆಮಕ್ಕಳ ಸಾಕ್ಕಂಡು ಊರ್ನೆ ನಿಪಾತ ಮಾಡ್ತಾ ಅವ್ನಲ್ಲ, ಆ ಗೌಡ?– ಈಗ ಅವನಿಗೇಯ ಒಳುಗೆ ದಸಿ ಕ್ವಟ್ರಲ್ಲ!..." ಎಂದ ಲಕ್ಕ.

"ಉಲಿ ಸವಾರಿ ಮಾಡಕ್ಕೊಂಟರೆ, ಒಂದಲ್ಲ ಒಂದು ದಪ ಅದು ನಮ್ನೇ ತಿನ್ನುದೆ ಬುಟ್ಟಾದೇನೊ?"

ದ್ಯಾವಾಜಮ್ಮ ಇಷ್ಟು ಯೋಳಿ ವೊಂಡುತಾ ಇದ್ಲು. ಲಕ್ಕ–

"ಈ ಆಳುಗೇರಿಯೋರ ಸುದ್ದಿ ಆಳಾಗೋಗ್ಲಿ. ಅಯ್ಯ ಎಂಗವ್ನೆ–ವಸಿ ಯೋಳು, ದ್ಯಾವಾಜತ್ತೆ?" ಕಾತರದಿಂದ ಕೇಳ್ದ.

"ಅವನ್ಯಾರೊ ನೋಡಿದೋರು?– ಸದಾ ರಾಚನ ಈಚಲು ಪ್ಯಾಟೇಲೊ ಬ್ಯಾರೆ ಯಾವುದಾರ ಈಚಲುವನದಲ್ಲೊ ಕುಡುದು ಅದೆಲ್ಲಿ ಬಿದ್ದಿರ್ತಾನೊ ಯೇನು ಕತೆಯೊ!... ನಿಮ್ಮವ್ವ ತೀರಿಕಂಡ ಮ್ಯಾಲಂತೂ ನಿಮ್ಮ ಗುಡ್ಲಿಗೆ ಮೊಕ ತೋರುಸೋದೆ ಅಪುರ್ಪ. ಅವುನು ಗೇಯೋದೆಲ್ಲ ಅವನ ಸರಾಪಿಗೇ ಸಮ ಆಯ್ತಿರಬೇಕು– ಆಪಾಟಿ ಕುಡುದ್ರೆ; ಅವನೊಂದು ಸತ್ತ ಕೂಟವೆ ಕನ ಬುಡು. ಕುಡುದು, ಕುಡುದು ಸಾಯಕ್ಕೆ ಜರ್ರನೆ ಜರಿಕಂಡೋಯ್ತಾ ಅವ್ನೆ. ನಾವೇನೂ ಅವ್ನ ಅಸೆ ಇಟ್ಟುಕಳೊವಂಗಿಲ್ಲ ಇನ್ನು..."

ತನ್ನ ಅಯ್ಯಂಗೆ ಬಂದ ಅವಸ್ತೆ ಕೇಳಿ ಲಕ್ಕನ ಕಣ್ಣು ಒದ್ದೆಯಾಯ್ತು. ಎಜ್ಜೆ ತೆಗೆದು ಮುಂದುಕೊಂಟ ದ್ಯಾವಾಜಮ್ನ.

"ನನ್ನ ತಂಗಿ ಸಿವುನಿ ಎಂಗಿದ್ದಾಳು?" ಕೇಳ್ದ.

"ಅವಳೇನಾಗಿದ್ದಾಳು?" ಅವಳೆ.

"ವೊಗ–?"

"ಅದರ ಪಾಡಿಗೆ– ಅದೂ ಅದೆ" ಅಂದೋಳು ದ್ಯಾವಾಜಮ್ಮ ನಿಲ್ಲನೇ ಇಲ್ಲ. ಸರಪರ ವೊಂಟೋದ್ಲು. ಲಕ್ಕಂಗೆ ಯೋಚ್ನೆಗೆ ಇಟ್ಟುಕತ್ತು. ಅಲ್ಲೀಗಂಟ ತನ್ನ ಕುಟ್ಟೆ ಚೆನ್ನಾಗಿ ಮಾತಾಡಿದೋಳು, ತನ್ನ ತಂಗಿ ಸಿವುನಿ ಇಸ್ಯ ಕೇಳಿದೇಟಿಗೆ, ಮೊಕ ಗಂಟು ಅಕ್ಕಂಡಳಲ್ಲ ಯಾಕೆ?... ಇವಳು ಅಣ್ಣೆಲೆ, ಸಿವುನಿ ಇನ್ನೂ ಚಿಗುರಿಲೆ. ಎಲ್ಲಿ ಆ ಎಣ್ಣು ತನ್ನದ ಅರೇದ ಸೋಕ್ಕಿನಲ್ಲಿ ಈ ಮುದುಕಿಗೆ ಏನಾರ ಅಂದು ಬೇಜಾರು ಮಾಡದ್ತೋ, ಯಾನು ಕತೆಯೊ?....

ಇಂಗೆ ಲಕ್ಕನ ಮನಸು ತನ್ನ ತಂಗಿ ಸುತ್ತ ಸುತ್ತುತ್ತಾ ಇದ್ದಾಗ, ಅವಳ್ನ ಒಂದು ಸಲ ನ್ವಾಡಿಕೊಂಡು ಬರಬೇಕು ಅನ್ನಿಸ್ತು. ವೊಗಾನು ತತ್ತಿಗಂಡು ಮುದ್ದಾಡಿ ಬರಬೇಕು, ಅನ್ನೊ ಆಸೆಯೂ ಬಲವಾಗಿ ತುಯ್ಯಿತು. ಆದರೆ, ಊರಿನ ಉತ್ವತ್ತಗರ ಕಾಟಕೆ ಎದುರಿ, ವೋಗೋದೊ ಬ್ಯಾಡವೊ ಅಂತ ಅವನ ಚಿತ್ತ ಏಡು ಜಿನ ಜೀಕ ಆಡ್ತು. ಮೂರನೆ ಜಿನ, "ಬಂದದ್ದು ಬರಲಿ, ಸಿವುನಿಯ ಈ ಜಿನ ನ್ವಾಡಿಕಂಡೇ ಬತ್ತೀನಿ" ಅಂತ ತೀರ್ಮಾನ ಮಡ್ದ. ಸಕುನಿ ಕೊಪ್ಪಲ ಕಾಕನ ಅಂಗಡೀಲಿ ವೊಗೀಗೆ ಒಂದು ಗಿಲಕಿ, ಸಿವುನಿಗೆ ನಾಕಾಣೆ ಬಿಸ್ಕತ್ತು ಕಟ್ಟಿಸಿಕಂಡ ಬೆಟ್ಟದ ಸಾಲಿನ ಇಂದುಗಡಿಂದ ಎದ್ದು, ಭೂಮಿ ಮ್ಯಾಲೆ ಕತ್ತಲು ಪಟ್ಟಾಗಿ ಕವುಚಿಗತ್ತ ಬತ್ತಾ ಇದ್ದಂಗೆ, ಲಕ್ಕ ತಾನೂ ಕಲ್ಲಕುಣಿಕೆ ಕಂಬಳಿ ಕವುಚಿಕಂಡು ಊರ ದಿಕ್ಕೆ ವೊಂಟ. ತಂಗೀನೂ ವೊಗಾನೂ ನ್ವಾಡ್ತೀನಿ ಅನ್ನೊ ಸಂಬ್ರಮ್ದ ನ್ವತೆಜ್ವತೆಗೇಯ ಯಾರಾರೂ ಕಂಡರೆ ಏನು ಗತಿ ಅನ್ನೊ ಭಯವೊವೆ ವಳವಳುಗೇ ತಮಟೆ ಬಾರಿಸ್ತಿತ್ತು...

ಲಕ್ಕ ಕೆರೆ ಓಣೀಲಿ, ಜೀವಾವ ಏಡು ಕೈಲೂ ಇಡುಕಂಡೇ ಬತ್ತಿದ್ದ. ದೂರದಲ್ಲಿ ಮನುಸರ್ಯಾರೊ ಮಾತಾಡೊ ಸಬ್ದ ಕೇಳಿ ಓಣಿ ಬೇಲಿ ಇಂದುಕೆ ಚಿಗಿದು, ಆ ಬೇಲಿ ವತ್ತಿನಲ್ಲೆ ಮೆತ್ತಮೆತ್ತಗೆ ಬಂದುಆ ಮನುಸರು ಮಾತಾಡೋದು ಕೇಳೊ ವೋಟು ದೂರದಲ್ಲಿ ನಿಂತ. ಬೇಲಿ ಉಣ್ಣೆಮೆಳೆ ಇಂದುಕಿದ್ದುದ್ರಿಂದ ಆ ಮನುಸರ್ಗೆ ಇವ್ನು ಕಾಣೋವಂಗಿರನಿಲ್ಲ.

ಆ ಕೆರೆ ಓಣೀಲಿ ಲಕ್ಕ ನಿಂತಿರೋ ಚೋರೀಕೆ ಉದ್ದಕೆ ಅಳ್ಳ.

ಆ ಅಳ್ಳದಲ್ಲಿ ಅಲ್ಲಲ್ಲೆ ಊರಿನೋರು ತಿಪ್ಪೆಗುಂಡಿಗಳು. ಒಂದು ತಿಪ್ಪೆಗುಂಡಿಗೂ ಇನ್ನೊಂದು ಗುಂಡಿಗೂವೆ ಇರೊ ಅಳ್ಳಗಳು, ಊರ‍್ನ ಸೊಂತ ಇತ್ತಲಿಲ್ಲದೇ ಇದ್ದ ಮನೆ ಎಂಗಸರು ನಾತ್ರೆನಾಗ ಬಯಿರ್ದೆಸೆಗೆ ಉಪಯೋಗಿಸ್ತಿದ್ದ ತಳ ಆಗಿದ್ದೊ.

ಲಕ್ಕ ಓಣಿಮೆಳೆ ಹಿಂದ ಬಂದು ನಿಂತಾಗ, ಊರ‍್ನ ಯಾರೊ ಹೆಂಗಸು ಗುಂಡೀಲಿ ಕುಂತಿದ್ಲು. ಇನ್ನೊಬ್ಬಳು ಅವಳ ಜ್ವತೆಗಾತಿ ಸುಮ್ಮಕೆ ತನ್ನ ಸಿನೇಯಿತಗಾತಿ ವಂದ್ಗೆ ಬಂದಿದ್ದೋಳು ಅಂತ ಕಾನ್ತದೆ. ಅವಳು ಮಾತ್ರ ಗುಂಡಿ ವೊರಗೇ ನಿಂತು ಒಂದು ಚೊಂಬ್ನಲ್ಲಿ ನೀರ ಇಡ್ಕಂಡು, ತನ್ನ ಗೆಣಕಾತಿಯೊಂದ್ಗೆ ಯಾವುದೊ ಗನ್ವಾದ ಆಲೋಚ್ನೇಲಿ ತ್ವಡಗಿದಂಗಿತ್ತು. ಲಕ್ಕಂಗೆ ಅವರಿಬ್ಬರೂ ಎಂಗಸರೂಂತ ಕಾಣ್ತ ಇದ್ದರೂವೆ, ಕತ್ತಲೇಲಿ ಅವರು ಯಾರೂಂತ ಗುರ್ತು ಅತ್ತೂವಂಗಿರ‍್ನಿಲ್ಲ. ವೊರಗೆ ನಿಂತೋಳು ಕೇಳ್ತಾ ಇದ್ಲು:

"...... ಕ್ಯಾಳಿದ್ಯವ್ವ ನನ್ನ ಗೋಳಿನ ಕತ್ಯ?.... ಒಂದು ಹೆತ್ತೋಳ ಹಂದಿ ಸುಮಾನ್ವಂತೆ. ಈಗ ನಾನು ಮೂರು ಹೆತ್ತಿರೋದರಿಂದ, ನನ್ನ ಗಂಡಂಗೆ ಬಿಡ ಬ್ಯಾಸರ... ಈಗ ನಾ ಯಾನು ಮಾಡಲಿ?"

ಗುಂಡೀಲಿ ಕುಂತೋಳು,

"ಮಾಡೋದೇನ, ಸಕುನಿ ಕೊಪ್ಪಲ್ಗೆ ಆ ಮಲೆಯಾಳಿ ಮಾಟಗಾರ ಬಂದವ್ನಲ್ಲ. ಅವ್ನ ಕಯ್ಲಿ ನಿನ್ನ ಗಂಡ ನಿನ್ನೇ ಮತ್ತೆ ಒಲಿಯೋವಂಗೆ ಮಾಟ ಮಾಡ್ಸು..."

"ಅದಕೆ ಏಟು ದುಡ್ಡ ಕ್ಯಾಳಾನೊ ಯಾನೊ?..."

"ಹಯ್ಯೋ, ಕಾರ್ಯ ಸಾದಿಸಬೇಕು ಅಂದಮ್ಯಾಲೆ ಅದೇಟು ದುಡ್ಡಾದರೂವೆ ಮಾಡಿಸನೇ ಬೇಕು..."– ಅಂದೋಳು, ಇದ್ದಕಿದ್ದಂಗೆ ಬೆಚ್ಚಿ,

"ಇನ್ನೇನವ್ವ ಗತಿ–ಊರ ಕಡಿಂದ ಯಾನೊ ಅಯ್ಯ ಈ ಕಡೀಕೆ ಬತ್ತಾ ಇರೋವಂಗದಲ್ಲ... ನಂದಿನ್ನೂ ಮುಗಿದಿಲ್ಲ!" ಎಂದು ಚಡಪಡಿಸಿದ್ಲು.

ಗುಂಡಿ ವೊರ‍್ಗೆ ಓಣೀಲಿ ನಿಂತಿದ್ದೋಳು ದ್ರುಸ್ಟಿಸಿ ನ್ವಾಡಿ,

"ಅವದೂತ–ಅವದೂತಪ್ಪ ಬತ್ತಾ ಅವ್ನೆ!... ಕುಂತುಗೊ, ಅವನ ಪಾಡಿಗೆ ಅವ್ನು ವೋಯ್ತಾನಂತೆ" ಅಂದ್ಲು.

ಲಕ್ಕನೂ ನ್ವಾಡ್ದ. ಅವದೂತಪ್ಪನೇಯ ಬತ್ತಾ ಇದ್ದದ್ದು!... ಕಚ್ಚೆ ಪಾವುಡೆ ಒಂದು ಬುಟ್ಟು ಅವನ ಮೈಮ್ಯಾಲೆ ಒಂದು ಅಂಗೈಯಗಲ ಬಟ್ಟೆ ಇರ‍್ನಿಲ್ಲ! ತಲೆಯಲ್ಲ ಜಡೆ ಕಟ್ಟಿದೆ. ಉದ್ದಾನೆ ಬಿಳಿ ಗಡ್ಡ ಮಾಸಲು ಬಣ್ಣಕ್ಕೆ ತಿರುಗುದೆ–

ಅವ್ನು ಯಾರು? ಯಾತಾವ್ನಿಂದ ಬಂದ– ಅಂತ ಊರ್ನಲ್ಲಿ ಯಾರ್ಗೂ ತಿಳೀದು. ಯಾವಾಗಲಾರೂ ಇಂಗೆ, ಗಾಳಿ ಬೀಸ್ದಂಗೆ ಬಂದು, ವೋಟೋಯ್ತಿದ್ದ. ಮೂರುನಾಕು ಜಿನದ ಮ್ಯಾಲೆ ನಿಲ್ತಿರ್ನಿಲ್ಲ. ಅವ್ನು ಯಾವ ಜಾತಿ ಅಂತ ಯಾರ್ಗೂ ತಿಳೀದು. ಯಾರು ಏನು ಕ್ಯಾಳಿದರೂವೆ, ಅದ್ಕೆ ಅವ್ನು ಜಬಾಬೇ ಕ್ವಡ್ತಿರ್ನಿಲ್ಲ. ಸುಮ್ಮಕೆ ನಕ್ಕು ಬುಡೋನು. ಒಂದೊಂದು ದಪ ಮಾತ್ರ ತನ್ನೋಟ್ಟಿಗೆ ತಾನು ಏನಾರ ಚುರುಕಾಗಿ ಅಂದುಬುಡೋನು!.... ಬ್ರಾಂಬರು ಮಾತ್ರ, “ಅವ್ನು ನಮ್ಮೋನೇಯ ಅವದೂತಪ್ಪ ಆಗವ್ನೆ” ಅಂತಿದ್ರು. ಅವಯ್ಯಗೆ ಯಾವ ಕಟ್ಟೂ ಇಲ್ಲ. ಯಾರೇನು ಕ್ವಟ್ಟರೂ ತಿಂದುಬುಡೋದು. ಇಲ್ಲದಿದ್ರೆ ಆಸಿಗೊಂಡು ಯಾರ ಜಗಲಿ ಮ್ಯಾಲೊ ಮರದ ಗುಡದಲ್ಲೊ ಬಿದ್ದಿರಾದು. ಅವನು ತಾನ ಮಾಡದ್ನೂ ಯಾರೂ ಕಾಣರು...”

“ಅಯ್ಯಯ್ಯೊ, ಈ ಅವದೂತಪ್ಪ ಬಂದು ನನ್ನ ಸಮೀಪಾನೆ ಕುಂತುಗಂಡನಲ್ಲವ್ವ, ಲಂಗೋಟಿ ಬಿಚಾಕಿ!.... ಇನ್ನೇನವ್ವ ಗತಿ?– ನಂಗೊ ವೊಟ್ಟೆ ಕಟ್ಟಿಗಂಡು ಬ್ಯಾಗ ಬ್ಯಾಗ ಜಾರ್ತಾನೆ ಇಲ್ಲ!– ಯಾನವ್ವ ಮಥಲಿ?... ಅರ್ದದಲ್ಲೆ ಎಂಗವ್ವ ಯೇಳಲಿ?– ವೊಟ್ಟೆ ಬ್ಯಾರೆ ನುಲೀತಾ ಕುಂತದೆ...” ಗುಂಡಿಯೊಳಗಿದ್ದೋಳು ಆಡಿದ ಮಾತ ಕೇಳಿ, ಲಕ್ಕನ ಯೋಚ್ಣೆ ಮುಕ್ಕಾಗಿ, ಗುಂಡಿ ಕಡೀಕೆ ನ್ವಾಡ್ದ. ಈಗ ಮಾತ್ರ ಅವದೂತ ಅವಳ ಸಮೀಪದಲ್ಲೆ ವೋಟು ದೂರಕೆ ಕುಂತಿದ್ದು ಗೋಚರಾಯ್ತು.

ಇಂಗೇ ಕುಂತಿದ್ದೋನು ಲಾಜಾದಲ್ಲಿ ಅಂಗೇ ಎದ್ದಿದ್ದ. ಹಕ್ಕಿ ಇಚಕಿ ಆಕೊ ತರ!... ಗುಂಡಿಂದ ಎದ್ದ ಬಂದೋನು ಬಿಚ್ಚಿದ್ದ ಲಂಗೋಟಿಯ ಪುನಾ ಇಂಡ್ಡೆ ಸೇರುಸ್ದ–ನಡೀತಿದ್ದ...

ವೊರಗಡೆ ನಿಂತಿದ್ದ ಎಂಗಸ್ನ ಗುಂಡಿ ವಳುಗಿದ್ದ ಎಂಗಸು ಕೇಳ್ತು:

“ಇದ್ಯಾಕೆ ಸೋಮಿ–ಇಂಗೂ ಉಂಟ?... ಉಮ್ಮ ವೋದೋರು, ನೀರ್ನಲ್ಲಿ ತ್ವಳೀಬ್ಯಾಡದ? ಅಂತ ಆವಯ್ನ ಕ್ಯಾಳೀವೆ?’

“ಊ, ಅಂಗೂ ಅವನ್ನ ಕೆಣಕು. ಆಗ ಅವಯ್ಯ, ‘ನಿಮ್ಮೆತ್ತು, ದನ, ಕರ, ಎಮ್ಮೆ, ಮತ್ತೆ ಬಾಕಿ ಪ್ರಾಣಿಗಳು ಮಲ ವೊರೀಕಾಕಿ, ನಿಮ್ಮಂಗೆ ನೀರು ಎರಚಿ ತ್ವಳುಕಂಡವ?’ ಅಂತ ಅನ್ನೊ ಗೆಣೆಕಾರನೆಯ ಅವ್ನು “ ಅಂದ್ಲು.

ಆ ಎಂಗಸು ಬೆಪ್ಪಾಗಿ, ‘ಅವ್ವೀ–‘ ಅಂದು ನಾಚಿ, ಸೀರೆ ಸೆರಗ್ನಲ್ಲಿ ಬಾಯಿ ಮುಚ್ಚಿಕಂಡಿಗಿತ್ತು. ಅವದೂತಪ್ಪ ವೋಗೋದ್ನೆ ಲಕ್ಕ ನ್ವಾಡ್ತಿದ್ದ. ಅವದೂತಪ್ಪ ಕಣ್ಣುತುಂಬೋವಂತೆ ಆಳು, ಅವಂಗೆ ಯಾವ ಚಿಂತೇನೂ ಇರೋವಂಗೆ ಕಾಣ್ನಿಲ್ಲ.

ಅವನ ಮೊಕ ನ್ವಾಡಿದಾಗ್ಲೆಲ್ಲ ಲಕ್ಕಂಗೆ, ಅವದೂತಪ್ಪ ವಳುಗೇ ನಕ್ಕೂತ ಅನ್ನೆ ಅನ್ನುಸ್ತಿತ್ತು.... ಅವದೂತಂಗೆ ಎಡತಿ, ಮಕ್ಕಳಿಲ್ವ? ಅಕ್ಕ ತಂಗಿ, ಅಣ್ಣ ತಮ್ಮ ಇಲ್ವ?– ಅಪ್ಪ ಅಮ್ಮ ತೀರಿಕಂಡ್ರ? ಸಮ್ಮಂದೀಕ್ದರು ಅನ್ನೋರು ಯಾವ ಊರ್ನಲ್ಲೂ ಇಲ್ಲವೆ ಇಲ್ವ?– ಈವಯ್ಯ ಲಗ್ಗಾನೆ ಆಗಿಲ್ವ?– ಅತ್ವಾ ಲಗ್ಣಾಗಿ, ಎಡತಿ ಸತ್ತೋದ್ಲ, ಇಲ್ಲ ಇವ್ನ ಬುಟ್ಟು ಇನ್ನಾರ ಕುಟ್ಟೆ ಆದ್ರೂ ವೋಡೋದ್ಲ– ಆ ಒಂದು ಇಚಾರವೂ ಯಾರ್ಗೂ ಇಳಿದಿರ್ನೇ ಇಲ್ಲ. ಲಕ್ಕ ಊರ್ನಲ್ಲಿ ತಿಳುವಳಿಕಸ್ತರು ಅನ್ನುಸಿಕೊಂಡೋರ ಯಾರ್‍ಯಾರನೊ ಕೇಳಿದ್ದ. ಯಾರೊಬ್ಬರೂ ನಂಗ್ವತ್ತಿಲ್ಲ. ನಂಗ್ಗೊತ್ತಿಲ್ಲ, ಅನ್ನೋರು!... ಕೆಲವು ಇವರ್ನ "ಅವರೊಬ್ಬರು ಮಾತ್ಮ" ಅಂದರೆ, ಇನ್ನೂ ಕೆಲವ್ರು "ಅವನೊಬ್ಬ ಉಚ್ಚ" ಅನ್ನೋರು... ಯಾವ್ದು ದಿಟವೊ ಯಾವ್ದು ಸಟೆಯೊ–ಲಕ್ಕಂಗಂತೂ ವೊಳೀನೆ ಇಲ್ಲ.....

ಅದೇ ಚಿಂತೇಲಿದ್ದಾಗ, ಇಂದ್ಕೆ ನಡೆದ ಒಂದು ಸಂಗ್ತಿ ಗೆಪ್ತಿ ಆಯ್ತು! ಒಂದು ಜಿನ ತಮ್ಮ ಗುಡ್ಲಲ್ಲಿ ಅವ್ವ ರೊಟ್ಟಿ ಆಕ್ತಾ ಇದ್ಲು. ಅಯ್ಯ, ನಾನು ಎಲ್ಲ ಕುಂತೇ ಇವಿ. ಅವ್ವ ಬೇಯ್ಸಿ, ಒಲೆ ಉರೀಲಿ ರೊಟ್ಟಿ ಅಂಚು ಸುಟ್ಟು, ಮೊದಲ್ನೆ ರೊಟ್ಟ್ಯ ಅಯ್ಯಂಗೆ ಅಂತ ತಣಿಗ್ಗೆ ಆಕಿದ್ಲು. ಈ ಅವದೂತಪ್ಪ ಅದ್ಯಾವ ಮಾತ್ದಲ್ಲಿ ಗುಡ್ಲೊಳೀಕೆ ಬಂದನೊ?– ಬಂದೋನೆ, ನೆಟ್ಟಗೆ ತಣ್ಣಿಗ್ಗೆ ಕೈ ಆಕಿ, ಬಿಸಿ ರೊಟ್ಟಿ ತಕ್ಕಂಡು, ಕಡಿಯಕ್ಕೆ ಮುಟ್ಟಿಕಂಡ. ಅವ್ವ,

"ಅಯ್ಯಯ್ಯೊ, ಇದೇನ ಬಂತು ಕೇಡು?– ಈ ಅವದೂತಪ್ಪ ಯಾಕೆ ನಮ್ಮ ಗುಡ್ಲೊಳೀಕೆ ಬರಬೇಕು? ವೊರೀಕೆ ನಿಂತು ಕ್ಯಾಳಿದ್ರೆ, ನಾವು ಕ್ವಡದೇ ಇದ್ತ?.... ಅದೂ ಅಲ್ಲದೇಯ ಈ ಉತ್ತಮರೋನು ನಮ್ಮ ವೊಲೇರ ಗುಡ್ಲೊಳೀಕೆ ನುಗ್ಗದ್ದೂ ಅಲ್ದೆ, ನಾವು ಅಟ್ಟ ಅಡಿಗೇನು ತಿಂತಾ ಅವ್ನಲ್ಲ?..." ಎಂದು ಅಣಣೆ ಗಟ್ಟಿಸಿಕಂಡ್ಲು. ರೊಟ್ಟಿ ಕಡೀತ ಕಡೀತ,

"ವೊಲೆಯ ಅನ್ನೋನೆ ವೊಲೆಯ?..." ಅಂದು ನಗಾಡ್ತ, ನಗಾಡ್ತ ವೊಂಟೋದ, ಅವದೂತಪ್ಪ.

ಆವೊತ್ತೆಲ್ಲ ಅಯ್ಯನ ಕುಟ್ಟೆ ಅವ್ವ ಯೋಳೋದು ತೆಪ್ಪಿಲ್ಲ:

"ಉತ್ತಮರು ಇಂಗೆ ನಮ್ಮ ಗುಡೊಳೀಕೆ ಬಂದದ್ದು, ನಂಗ್ಯಾಕೊ ಇತ ಕಾಣಿಕ್ಕಿಲ್ಲ "ಅಂತಾನೆ ಇದ್ಲು...

ಇಸ್ವರಾಗೆ ಆ ಎಂಗಸು ಗುಂಡೀಲಿ ಇನ್ನೊಂದು ಎಂಗಸು ತಂಬಿಗೇಲಿ ಕ್ವಟ್ಟ ನೀರ ಉಪಯೋಗ್ಸಿ ಸುದ್ದಿಮಾಡ್ಕಂಡು ಗುಂಡಿಂದ ಮ್ಯಲೆ ಬಂದ್ಲು. ಅನಂತ್ರ ಅವರಿಬ್ಬರೂವೆ ಅವದೂತಪ್ಪನ ಬಗ್ಗೆ ಚರ್ಚಿಸ್ತ ಊರ್ಗೆ ವೊಂಟರು.

ಲಕ್ಕ ವಸಿ ವೊತ್ತ ಅಂಗೇ ಮರ್ಯಾಗಿ ನಿಂತಿದ್ದ. ಅವರಿಬ್ಬರು ಎಂಗಸರು ವೊಂಟೋದ ಮ್ಯಾಲೂವೆ, ಊರ್ನ ಸಮೀಪಿಸಕ್ಕೆ ಅವನ್ಗೆ ದೈರ್ಯ ಸಾಲದು. ದಾರೀಲು ಯರು ಸಿಕ್ಕಾರೊ, ಏನು ಕೇಡು ಕಾದಿದ್ದದೊ ಅನನೊ ದಿಗಲು. ಇಂಗೆ ಆಡಿಚೋಡಿ ಆಡಿಕಂಡು ಅರ್ಧಮುಕ್ಕಾಲು ಗಂಟೆ ಕಳದ. ಓಣೀಲಿ ಯಾರ ಸುಳುವೂ ಇಲ್ಲ. ಇಲ್ಲ ಕಳ್ಳ ಎಚ್ಚೆ ಆಕ್ತ ಮೆತ್ತಮೆತ್ಗೆ, ಮೆತ್ತ ಮೆತ್ಗೆ ತಮ್ಮ ಗುಡ್ಲ ತಾವಿಕೆ ಬಂದ. ಅವನು ಇಂಗೆ ತಮ್ಮ ಗುಡ್ಲಿನ ತಾವಿಕೆ ಬರೋ ವ್ಯಾಳ್ಯಕ್ಕೆ, ಊರು ಮುಕ್ಕಾಲುಮೂರುವೀಸೆ ನಿದ್ದೇಲಿ ಮುಳುಗಿದಂಗಿತ್ತು. ಈಗ ಮಾತ್ರ ಒಂದು ನರಪಿಳ್ಳೆಯೂ ಎಲ್ಲೂ ಕಾಣ್ತಾ ಇರ್ನಿಲ್ಲ. ಈಗ ಮೊದಲಂಗೆ ಆಗಿದ್ದ ಬೊಡ್ಡ ಜ್ವತೆಗಿದ್ರೆ, ಊರ್ನ ಬ್ಯಾರೆ ನಾಯಿಗಳು ಬೊಗಳ್ದಾಗ ಇದು ಬೊಗಳಿ ರಾದ್ದಾಂತ ಆದದೂಂತ ಎಣಿಸಿ ಬೊಡ್ಡನ್ನ ತನ್ನ ಗುಡ್ಲಲ್ಲೆ ಬಿಗ್ಯಾಗಿ ಕಟ್ಟಾಕಿ, ಕದಕ್ಕೆ ಬೀಗ ಜಡಿದು ಬಂದಿದ್ದ.

ಆದ್ರೆ ತಮ್ಮ ಗುಡ್ಲ ಮುಂದುಕೆ ಬಂದು ನಿಂತಗ, ಅದರ ಮುಂದುಗಡೆ ಯಾರೊ ಬುಟ್ಟಿದ್ದ ಮೆಟ್ಟು ನ್ವಾಡಿ, ಲಕ್ಕನ ಸಂಬ್ರಮವೆಲ್ಲ ಸೋರೋಗಿ, ಗುಡ್ಲ ವೊರಗಡೆ ಬುಟ್ಟಿರೊ ಈ ಜೋಡು ಯಾರ್ದು?... ಯಾರಾರು ವೊಸಬರು ವಳುಗಡೀಕೆ ಬಂದಿದ್ದಾರ?. ಅನ್ನೊ ಸಂಸಯ್ಕೆ ಎಡೆಮಾಡ್ತು. ಅಂಗೇ ನಿಂತ. ವಳುಗಡೆ ಸಿವುನಿ ಜ್ವತ್ಗೆ ಯಾರೋ ಗಂಡಸು ಮಾತಾಡ್ತ ಇರೋವಂಗೆ ಕಾಣಿಸ್ತದೆ!... ಅಯ್ಯ, ಏನಾರ ಅಪುರ್ಪಕೆ ;ಮಗಳ್ನೂ ಮೊಗಾನೂವೆ ನ್ವಾಡಕ್ಕೆ ಆಸ್ಯಾಗಿ ಬಂದಿರಬೌದ?... ಇನ್ನೂ ಸಮೀಪ್ಸಿಸಿ ಕಿವಿಕ್ವಟ್ಟು ಆಲಿಸ್ದ– ಈಗ ಸಿವುನಿ ಮಾತಾಡಿದ್ದಲು:" ವೋಗಿ ಕೇಸವಯ್ಯಾರೆ– ವೋಗಿ, ನೀವು ಇಂಗೇ ಯಾವತ್ತುವಿ ತಳಕು ವೋಡೀತಲೆ ಬತ್ತಾ ಇದ್ದೀರಿ... ಬಂದಾಗ ಒಂದು ರುಪಾಯಿ, ಎಡು ರೂಪಾಯಿ ಬಿಸಾಕಾದು. ವಾಟ ವೊಡೀತಿರಾದು..... ನಾ ಕ್ಯಾಳಿದ ಸ್ಯಾಲೆ, ಕುಪ್ಪಸ ಇನ್ನೂ ಬತ್ತಾನೆ ಅವೆ..." ನೀವು ಇನ್ನಂದ ಜಿನ ತಕ್ಕಂಬರದೇ ವೋದರೆ, ನನ್ನ ಗುಡ್ಲ ವಳೀಕೆ ನಿಮ್ನ ಕೂಡಕ್ಕೇ ಇಲ್ಲ– ಈ ಮಾತ ಮಾತ್ರ ನಿಮ್ಮೆದೆಗೂಡ್ನಲ್ಲಿ ಚೆಂದಾಗಿ ಬರೆದಿಟ್ಟುಕೊನ್ನಿ..."

ನನ್ನ ತಂಗಿ ಬಾಯಿಂದ ಈ ಮಾತ ಕೇಳ್ತಿದಂಗೇನೆ ಲಕ್ಕಂಗೆ ರುದ್ರ ಕ್ವಾಪ ಬಂದುಬುಡ್ತು

ಈಗ ಕೇಸವಯ್ನ ಸುಸ್ವರ ಕೇಳುಸ್ತು:

"ಇಸ್ಟು ದಿವಸವಾದರೂ ನನ್ನನ್ನ ನಂಬ್ತಾನೆ ಇಲ್ಲವಲ್ಲ, ಸಿವುನಿ?... ಹೋದ ಸಲ ನಾನು ಹುಣಸೂರಿಗೆ ಹೋಗಿದ್ದಾಗ ಯಾವ ಅಂಗಡೀಲೂ ಒಳ್ಳೆ

ಮಾಲು ಬಂದಿರಲಿಲ್ಲ. ಅದಕ್ಕೆ ಬರೋ ಸಂತೆಗೆ ತರೋಣಾಂತ ವಾಪಸು ಬಂದೆ. ಈ ಸರ್ತಿ ಸಪ್ಪೊಲ್ಲ. ಖಂಡ್ತಾ ತಂದುಕೊಡ್ತೀನಿ..." ಅಂದು ಭಾಷೆಕೊಟ್ಟು, "ಹುಂ–ಈಗ" ಅಂತಾ ಇರೊ ವ್ಯಾಳ್ಯಕ್ಕಾಗಲೆ ಅಂಡೇಲಿ ಬಿಸಿನೀರು ಕುಡಿಯೋ ಅಂಗೆ ಕುದೀತಿದ್ದ ಲಕ್ಕ, ಇನ್ನು ತಡಕೋನಾರದೆ ಗುಡ್ಲು ಕದವ ದಬದಬ ತಟಕ್ಕೆ ಮುಟ್ಟಿಕಂಡ...

ಗುಡ್ಲು ವಳುಗಡೆ, ಕೇಸವಯ್ಯ, ಸಿವುನಿ ಇಬ್ಬರೂವೆ ಗುಬ್ಬಲು ಪರದಾಡಕ್ಕೆ ಸುರುಮಾಡಿದ್ರು. ಇಬ್ಬರೂವೆ ಏನೇನೋ ಪಿಸುಗುಟ್ಟಿಕಂಡರು. ಲಕ್ಕ ತನ್ನ ನಡೀನ ಪಟ್ಟಿಂದ ಮಚ್ಚು ಇರಿದು ಕದ ತಳ್ಳಿ ವಳೀಕೆ ನುಗ್ಗಕೆ ಯತ್ನಿಸ್ತಾ ಇದ್ದ... ವೋಟರಲ್ಲಿ ವಳುಗಡಿಂದ ಗಡಿಬಿಡಿ ಎಚ್ಚಾಯ್ತು. ಸಿವುನಿ ಸ್ಯಾಲೆ ಸರಿಮಾಡಿಕೊತ್ತ ಬಂದು,

"ಅದ್ಯಾರು, ಈಟೋತ್ನಲ್ಲಿ ಬಂದು ನಮ್ಮ ಗುಡ್ಲ ಕದಾನ ಮುರೀತಿರೋರು?... ನಾ ಒಬ್ಬಳೇ ಇವ್ನೀಂತ ಗುಡ್ಲುವಳೀಕೆ ನುಗ್ಗಕ್ಕೆ ಬಂದಿದ್ದೀರಾ?– ನಾಯೇನು ನಿಮ್ಗೆ ಬಗ್ಗೊ ಎಣ್ಣಲ್ಲ, ತಿಳಿಕ್ಕೊ... ಅದ್ಯಾಕಂಗೆ ಒಂದೇ ಸಮಕೆ ಕದವ ಆಕ್ಕೊಂಡು ದಬ್ಬೀರಿ?– ವಸಿ ತಡಕನ್ನಿ. ನಾನೇ ಕಡ ತೆಗೀತೀನಿ. ಸುಮ್ಕೆ ಕಡಯಾಕೆ ಮುರುದೀರಿ!..."

ಬಾಗ್ಲ ತಗದು ನ್ವಾಡಿದ್ರೆ–ಅಣ್ಣ ಲಕ್ಕ!...

ಒಡನೆಯೆ, "ಅ–ಣ್ಣ..." ಚೀರಿದಳು.

ವೋಷ್ಟರಲ್ಲಿ ಸಿವುನಿ ಇಂಡುಗಡಿಂದ ಕಳ್ಳೆಜ್ಜೆ ಆಕ್ತ ಮೆತ್ತಗೆ ಕೆಸವಯ್ಯ ನುಸ್ದು ಪರಾರಿಯಾಯ್ತ ಇದ್ದದ್ದ ಕಂಡ ಲಕ್ಕ.

ಅಲ್ಲು ಮುರಿ ಕಡೀತ, ಮಚ್ಚುಗತ್ತಿ ಎತ್ತ ಇಡುದು ಅವ್ನ ಅಟ್ಟಿಸ್ಕಂಡು ವೋಗಾನ ಅಂತ, ಲಕ್ಕ ನುಗ್ಗಕ್ಕೊಂಟ. ವೋಟರಲ್ಲಿ ಲಕ್ಕನ್ನ ನ್ವಾಡ್ದ ಗಳಿಗೇಲಿ ತಬ್ಬಿಬ್ಬಾಗಿ ನಿಂತಿದ್ದ ಸಿವುನಿ, ತಟಕ್ನೆ ಅವ್ನ್ನ ಅಡ್ಡಗಟ್ಟಿ ನಿಂತು. "ಮೊದ್ಲು, ನನ್ನ ಕ್ವಚ್ಚಾಕಿಬುಟ್ಟು ಮುಂದ್ಕೆ ನೀ ಕಾಲಿಡು" ಅಂದಾಗ, ಲಕ್ಕ ಬೆರುಗಾಗಿ ಕೈ ಸೋತು,

"ನಿಂಗೇನು ಬಂದಿತ್ತೇ ಕೇಡು–ಇಂಗೆ ಆ ಅರುವಯ್ನ ಕುಟ್ಟೆ ಆದ್ರೆ ಮಾಡಕ್ಕೆ?" ಅಂದ.

ಸಿವುನಿ ಮೊಕದಲ್ಲಿ ಚಾಮುಂಡಿಯೇ ಮೂಡಿದ್ಲು. ಬಾಂಡಲೀಲಿ ಮೆಣಸಿನ್ಕಾಯಿ ಘಟಘಟ ಸಿಡಿಯೊ ಅಂಗೆ ಸಿಡಿದ್ಲು.

"ಏನಂದಿ?– ನಂಗೇನು ಬಂದಿತ್ತು ಕೇಡು ಅಂದ್ಯಾ?... ಇನ್ನೆನ ಬರಬೇಕಾಗಿತ್ಲ. ಅಪ್ಪಯ್ಯ?– ನೀನು ಗ್ರಾಸ್ತ, ಆ ಆರುತಿ ತಂಟೆಗೋಗಿ ಊರ ಬುಟ್ಟು ಕಡದೋದೆ. ಅವ್ವನ್ನೂ ಪಳೇಗ್‌ಮಾರಿ ತತ್ತಿಗಂಡೋಯ್ತು. ಅಯ್ಯ

ಇದ್ರೂವೆ, ನಮ್ಮ ಬಾಗಕ್ಕಿಲ್ಲದಂಗೆ, ಎಲ್ಲೊ ಕುಡುದು, ಎಲ್ಲೊ ಬಿದ್ದು, ನಮ್ಮ ಗುಡ್ಲನ್ನೇ ಸೇರ್ತಾ ಇಲ್ಲ... ನಾನೊಬ್ಬಳೆ ಇಲ್ಲಿ ಈ ಕೈಕೂಸ ಮೊಡ್ಲಿಗೆ ಕಟ್ಕಂಡು ಎಂಗೆ ಬದುಕಬೇಕು?... ನನ್ನ ಎದೇಲಿ ಬ್ಯಾರೆ ಹಾಲು ಸುಂಡೋಗಿ ಮೊಗ ಗಳಿಗ್ಗೊಂದು ಸಲ ಕಜೆ ತಗೀತದೆ. ಅಂಗೂವೆ ಕೂಲಿಗೆ ವೋಯ್ತಿದಿ. ಆದರೆ ಮೊಗ ಕಜೆ ತಗೀತಿದ್ದ ನ್ವಾಡಿ, ಒಂದು ಸರ್ತಿ ಕರದೋರು ಇನ್ನೊಂದು ಸರ್ತಿ ಕಂಬಳ್ಕೆ ಕರೀತಿರ್ನಿಲ್ಲ... ಇಂಗಾಗಿ."

ಸಿವುನಿ ತನ್ನ ಮಾತ ಇನ್ನೂ ಮುಗಿಸೇ ಇರ್ನಿಲ್ಲ. ವೋಟ್ರಲ್ಲಿ ಲಕ್ಕನ ಕಣ್ಣು ಒಂದು ಸಲ ಗುಡ್ಲ ವಳುಗಡೆ ತಡಕಾಡ್ತು. ಕೂಸು ವಕ್ಕಡೀಕೆ ನಿದ್ದೆ ಮಾಡ್ತ ಬಿದ್ದಿತ್ತು. ತನ್ನ ವಳುಗಿನ ಪಿರೀತಿನೆಲ್ಲ ತುಂಬಿ ತುಂಬಿ ಒಂದ್ಸಲ ಆ ಕಂದ್ನ ಕಣ್ನಲ್ಲೆ ಮುದ್ದಾಡಿ, ತಾನು ತಂದಿದ್ದ ಬಿಸ್ಕತ್ತು ಪೊಟ್ಣ, ಗಿಲಕಿಗಳ ಕೆಳಕ್ಕೆ ಬಿಸಾಕಿ, ಮುಂದ್ಕೆ ಒಂದು ಮಾತ್ನು ಆಡ್ದೆ, ಸಿವುನೀಯ ಪುನಾ ಕತ್ತೆತ್ತೂ ನ್ವಾಡ್ದೆ, ಕಣ್ಣೀರು ಕಚ್ಚಿ, ಲಕ್ಕ ತಮ್ಮ ಗುಡ್ಲು ಮುಂದುಗಡಿಂದ ಕಾಲು ಕಿತ್ತ...

ಸಿವುನಿ ಗುಡ್ಲು ಬಾಗ್ಲಲ್ಲೆ ನಿಂತು. "ಅಣ್ಣಾ–" ಅಂತು ಕೂಗಿದ್ಲು...

ಗುಡಿ ವಳುಗಡೆ ಗಂಟೆ ಬಾರಿಸ್‌ದ್ರೆ, ಏಟೋ ವೊತ್ತು ಅದರ ಸಬ್ದ ಕೇಳ್ತಾನೆ ಇರೋವಂಗೆ, ಲಕ್ಕನ ಅಂತರಾಳ್ದಲ್ಲಿ ಹಾದಿ ಉದ್ದಕೂವೆ, ತಂಗಿ, 'ಅಣ್ಣಾ–' ಅಂತ ಕೂಗದ್ದು, ಬೋಕಾಲ ವೊರೀತಾನೆ ಇತ್ತು!... ಇಂದ್ಕೆ ತನ್ನ ತಂಗಿ ಸಿವುನಿ, 'ಅಣ್ಣ' ಅಂದ್ರೆ ಇಗ್ಗಿ ಈರೇಕಾಯಿ ಆಯ್ತಿದ್ದ ಲಕ್ಕ. ಆದ್ರೆ ಈಗ?...

ಅಯ್ಯೋ, ನನ್ನ ತಂಗಿ ಕೆಟ್ಟೋದ್ಲು. ಕಂಡಕಂಡೋರ್ಗ... ತೂ–ಅಂತಾವ ಎಜ್ಜೆ ಎಜ್ಜೆಗೂ ಅವ್ನ ಜೀವ ಮುಕ್ತಾ ಇತ್ತು..... ಸಿವುನಿ ಎಂಗವಳೆ ಅಂತ ಅವೊತ್ತು ತಾನು ಕ್ಯಾಳಿದಾಗ, ದ್ಯಾವಾಜಿ ಯಾಕೆ ಒಂದು ತರಾ ಮಾತಾಡಿದ್ಲು ಅನ್ನೊದು ಈಗ ಅವನ್ಗೆ ಅರ್ತವಾಗ್ತ ಅದೆ!... ಯಾವುದು ಯೇನಾರ ಆಗ್ಲಿ. ನನ್ನ ತಂಗಿ ಸಿವುನಿ ಈ ಸ್ತಿತೀಗೆ ಬತ್ತಾಳೇಂತ ನಾನು ಸೊಪ್ಪನದಲ್ಲೂ ಎಣಿಸಿರನಿಲ್ಲ....

ಚಿಕ್ಕಂದಿನಲ್ಲಿ ನಾನು ಸಿವುನಿ ಇಬ್ಬರೂವೆ ಒಂದೆ ತಣಿಗೇಲಿ ಉಣ್ಣುತ್ತಿದ್ದೊ. ಒಂದೇ ಚಾಪೇಲಿ ವತ್ಗೊತ್ತಿಗೇ ಮನಗುತ್ತಿದ್ದೊ. ಅವಳು ಯವಾಗ್ಲೂವೆ ನನ್ನ ಮ್ಯಲೆ ಒಂದು ಕಾಲೆತ್ತಿ ಅಡ್ಡಗಾಲು ಆಕ್ಕಂಡೇ ನಿದ್ದೆ ಮಡ್ತಿದ್ಲು. ಒಂದೊತ್ನಲ್ಲಿ ನಂಗೆ ಎಚ್ಚರಾಗಿ ಅವಳ ಕಾಲ ವಚ್ಚೋರಿಕೆ ಸರಿಸಿ ಇಟ್ಟು ಮನಗಿದ್ರೆ, ಪುನಾ ಅವಳ ಪುಟ್ಟ ಕಾಲು ತುಸ ವ್ಯಾಳ್ಯದಲ್ಲೆ ನನ್ನ ನಡೀನ ಮ್ಯಲೆ ಅಜರಾಯ್ತಿತ್ತು!.... ಬಿಡುವು ಸಿಕ್ಕದಂಗೆ ನಾವಿಬ್ರೂವೆ ಚವಕಾಬಾರ ಆಡ್ತಿದ್ದದ್ದೇಟು! ಅಣ್ಣೆಕಲ್ಲು ಅಡಿದ್ದೇಟು! ಉಲಿಮನೆ ಅಟ ಆಡಿದ್ದೇಟು!–

ಆಮ್ಯಾಕೆ ಕಾಡಾದೀಲಿ ಬತ್ತಾ ಇರಬೇಕಾರೆ, ಮುಟ್ಟಿದರೆ ಮುನಿ ಗಿಡ ಸಿಕ್ತವೆ ಅಂದರೆ ಅವಳಿಗೆ ಬೋ ಸಂತೋಸ. ಆ ಗಿಡಗಳ ಮುಟ್ಟಿದೇಟಿಗೆ ಕೆಲವು ವಳೀಕೆ ಮುಚ್ಚಿಗತ್ತವೆ, ಕೆಲವು ವೊರೀಕೆ ಮುಚ್ಚಿಗತ್ತವೆ. ವಳಮುಚ್ಚದ ಗಿಡ ಕಂಡರೆ, ಅಲ್ಲಿ ನಿಂತುಕಳಾದು. "ವಳಮುಚ್ಚುಗ, ವಳಮುಚ್ಚಗ– ನಿನ್ನ ಮೊಕ ಮುಚ್ಚ "ಅಂದು ಆ ಗಿಡವ ಮುಟ್ಟಿಗೊಂಡ್ರೆ, ಆ ಗಿಡದ ಪುಟ್ಟಪುಟಾಣಿ ಎಲೆಗೋಳೆಲ್ಲ ಸರಕ್ನೆ ವಳೀಕೆ ಮುಚ್ಚಕೊಳೋವು! ಆಮ್ಯಾಕೆ ಅಂಗೇಯ ವೊರಮುಚ್ಚುಗದ ಗಿಡದ ಮುಂದೆ ನಿಂತು, "ವೊರಮುಚ್ಚುಗ, ವೊರಮುಚ್ಚುಗ– ನಿನ್ನ ಕುಂಡಿ ಮುಚ್ಚ" ಅಂದು,,ಆ ಗಿಡ ಮುಟ್ಟಿತೊಂಡ್ರೆ ಆ ಗಿಡದ ಎಲೆಗೋಳೆಲ್ಲ ವೊರೀಕೆ ಮೊಡಚಿಕೊಳ್ಳೊವು!... ಅದ ಕಂಡು ಅವಳು ಕೇಕೆ ಆಕಿದ್ದೂ ಆಕಿದ್ದೇ. ಪುನಾ ಪುನಾ ಅಂತಾ ಗಿಡ ಎಲ್ಲೆಲ್ಲಿ ಕಾಣ್ತಾವೆ ಅಲ್ಲೆಲ್ಲ ನಿಂತು ನಿಂತು, ಅವಳ್ದು ಇದೇ ಆಟ ಆಗೋದು!...

ಗೌರಿ ತಿಂಗಳು ಬಂತು ಅಂದರೆ, ಅವಳು ನಾನು ಇಬ್ಬರೂವೆ ಸೀತಪಲದ ಹಣ್ಣ ಬಿಟ್ಟದಕಿಬ್ಬಿ ತಾವ್ನಿಂದ ಕಿತ್ತುಗಂಬಂದ ಬೇಲಿ ವಳಾಗಡೆ ಇಟ್ಟು ಅಡ ಹಾಕೋವು. ಅವು ಕಣ್ಣಾಗಬುಟ್ಟಾಗ ಅದೇಟು ಕಿಲಿಕಿಲೀಂತ ತಿನ್ನೋಳು!..... ಜೇನುತುಪ್ಪ ಅಂದರೂ ಅವಳಿಗೆ ಅಪೆಕ್ಸೆ. ನಾನು ಕಾಡಿಗೆ ದನ ಅಟ್ಟಗಂಡು ಹ್ವಾದಾಗ ಯವಾಗಲಾರೂ ಕೋಲುಜೇನುತುಪ್ಪಾನೊ ತುಡುವೆ ಜೇನುತುಪ್ಪಾನೊ ತಂದು ಕ್ವಟ್ರೆ ನನ್ನ ತಬ್ಬಿಕಂಡು ನನ್ನ ಸುತ್ತ ಕುಣಿದಾಡೋಳು... ಹಂಗೇಯ ಗಿಜಗನ ಗೂಡು ತಂದು ಕ್ವಡೊ ಅಂತ ಒಂದು ಜಿನ ಗಂಟು ಬಿದ್ದಿದ್ದು. ಯಾರ ದನನು ಮೇಯಿಸಕ್ಕೋಗದಿದ್ದ ಒಂದು ಜಿನ, ಅವಳು ನಾನು ಇಬ್ಬರೂವೆ ಅತ್ತಿರದ ಕಾಡಿಗೆ ಪುಳ್ಳೆ ಮುರಿಕಂಡು ಬರಕ್ಕೋಗಿದ್ದೊ. ಕೆರೆ ಆಚೆಗಿದ್ದ ಕಾಡ್ನಲ್ಲಿ ಸಮೀಪ್ದಲ್ಲೆ ಒಂದು ಮರದಲ್ಲಿ ಮಸ್ತಾಗಿ ಗೀಜಗಳ ಹಕ್ಕಿಗಳು ಗೂಡ ಕಟ್ಟಿದ್ದೊ. ತಂಗೆಮ್ಮ ನೋಡಿಬುಟ್ಟಲು. ಅದರಲ್ಲಿ ಒಂದು ಗೂಡ ಕಿತ್ತುಗೊಡೊ, ಕಿತ್ತುಗೊಡೊ– ಅಂತ ಇಂವುಸೆ ಮಾಡಿದ್ಲು. ಆ ಗೂಡಗಳತ್ರ ಮೊಪಟ್ಟೇನೂ ಮರಿಗಳನ್ನೂ ತಿನ್ನಕೆ ಸರ್ಪಗಳು ಬತ್ತವೆ. ನಾನು ಆ ದೊಡ್ಡ ಮರ ಅತ್ತ, ಆ ರೆಂಬೆಗೆ ತೂಗುಬಿದ್ದಿರೊ ಗೂಡ ಬಿಚ್ಕಂಡು ಬರಕ್ಕೆ ಎದುರಿಕಾಯ್ತದೆ, ಅಂದೆ... ಅವಳ್ಗೆ ಕ್ವಾಪತ್ತಿ ಕೆನ್ನೆಯ ವೋಟು ದಪ್ಪ ಊದಿಸ್ಕಂಡು, "ಒಂದು ಮರ ಅತ್ತ, ಗೀಜನಗನ ಗೂಡ ಕಿತ್ತುಗಂಡು ಬರನರದೋನು, ನೀ ಯಾವ ಸೀಮೆ ಗಂಡಸ?" ಅಂದೇ ಬುಟ್ಟಲು!

ಆ ಚೋಟುದ್ದ ಎಣ್ಣಿನ ಕೈಲಿ ಈ ಮಾತ ಕೇಳಿ, ನಂಗೆ ನಾಚಿಕಾಯ್ತು.

ದ್ಯಾವರ ಮ್ಯಲೆ ಭಾರ ಆಕಿ ಆ ಮರ ಅತ್ತಿದೆ. ರೆಂಬೆ ಮ್ಯಾಲೆ ತೆವಳಿ ಕಂಡೋಗಿ, ಒಂದು ಗೂಡ ಬಿಚ್ಚಿಗಂಡು ತಂದೇ ಬುಟ್ಟೆ!....

ಸಿವುನಿ ಕಾಕು ಅಕ್ಕಂಡು ವೋಟಗಲಕೂ ಕುಣಿದಾಡಿಬುಟ್ಲು.

ವೋಟರಲ್ಲಿ ನಾ ಕೈಲಿ ಇಡಿದಿದ್ದ ಗೂಡ್ನ ವಳೀಕೆ ಮೊಕ ಆಕಿ ನ್ವಾಡಿದ ನಾನು, ಮಳೆ ಎರಚಲು ವಳೀಕೆ ಬಡೀದಂಗೆ ಕೆಳೀಕೆ ಮುನ್ನ ಬಾಯಿ ಮಾಡಿ, ಆ ಗೂಡ ನೆಯ್ದು, ತಲೆ ಕೆಳೀಕೆ ಮಾಡಿ, ಆ ಗೂಡ ಮರದ ರೆಂಬೆಗೆ ನ್ಯಾತು ಆಕಿದ್ದ ಆ ಗಿಝುಗನ ಹಕ್ಕಿ ಕರಾಮತ್ಗೆ ಬೆರುಗಾದೆ. ಆದ್ರೆ ಗೂಡ್ನ ವಳುಗಡೆ ಅದು ಮೊಟ್ಟೆ ಆಕಕ್ಕೆ, ಮರಿ ಮಾಡಕ್ಕೆ ನೇಯ್ದಿದ್ದ ಅಗಲಾದ ಜಾಗ ಕಂಡು ನಂಗೆ ಇನ್ನೂ ಚೊಚಿಗ ಆಯ್ತು– ಅದರ ವಳುಗಡೆ ಕಣ್ಣಾಯ್ಸಿ, ಇನ್ನೂ ಸುಕ್‌ಸ್ಮಾಗಿ ನ್ವಾಡಿದಾಗ, ಆಗ್ಲೆ ವಳುಗಡೆ ಮರಿಗಳು ಬಾಳಬಾಳ ಮೆತ್ಗೆ ಕಿಚಪಚ ಅಂತಿದ್ದದ್ದು ಕೇಳುಸ್ತು... ವೊಟೇ ಅಲ್ಲ. ವಳುಗಡೆ ಆ ಮರಿಗಳ್ಗೆ ಬೆಳಕು ಕಾಣಲಿ ಅಂತ, ಮಿಣಕುಹುಳುಗೊಳ ಕೆರೆ ಅಂಗಳದಿಂದ ಕಚ್ಚಿಗಂಬಂದು ವಳುಗಡೆ ಅಲಲ್ಲೆ ಅಲ್ಲಲ್ಲೆ ದೀಪ ಕತ್ತಿಸಿದಂಗೆ ಇಟ್ಟಿತ್ತು ಆ ಗಿಜಗನ ಹಕ್ಕಿ!...

ನಾನು ನ್ವಾಡಿದ ಮ್ಯಾಲೆ, ಗಿಜಗನ ಗೂಡು ಸಿಕ್ತೂಂತ ತಪ್ಪಾಳೆ ತಟ್ಕಂಡು ರಕುಪ್ಪುಳಸ್ತಿದ್ದ ಸಿವುನಿಯೂ ಬಂದು ಆ ಗೂಡ್ನ ವಳೀಕೆ ನನ್ನಂಗೆ ಬೊಗ್ಗಿ ನ್ವಾಡಿದ್ಲು.

"ಓ, ಪುಟಪುಟಾಣಿ ಮರಿಗಳು, ಎಟು ಚೆಂದಾಗವೆ!.... ಮಿಣಕುಳ ಎಂಗೆ ಪಿಣಿಪಿಣೀಂತಾ ಅವೆ. "ನಂಗಿಂತಲೂವೆ ಕುಸಿಪಟ್ಟು ಕುಣದಾಡಿದ್ಲು...

"ಅಂಗಾರೆ ಇನ್ನೂ ಈ ಗೂಡ, ನಮ್ಮ ಗುಡ್ಲಿಗೆ ತಕ್ಕಂಡೋಗಿ ನ್ಯಾತಾಕಳಾವ?" ಕ್ಯಾಳಿದೆ.

ತಟಕ್ನೆ ಸಿವುನಿ, ಕಣ್ಣ ವೋಟಗಲಕೂ ಅಗಲಿಸಿ,

"ಬ್ಯಾಡಪ್ಪಾ ಬ್ಯಾಡ. ನಾನು ತಕ್ಕೊಂಡೋಗಿ ಗುಡ್ಲೊಳಗೆ ಇಟ್ಕಂಡರೆ, ಪಾಪ ಈ ಮರಿಗಳ್ಗೆ ಅಲ್ಲಿ ಗುಟುಕು ಕ್ವಡೋರು ಯಾರು?... ಬ್ಯಾಡ, ಬ್ಯಾಡ– ಈಗ ನಾನು ನ್ವಾಡಾಯ್ತು. ನೀನು ಇದ್ನ ತಕ್ಕೊಂಡೋಗಿ ಮೊದ್ಲು ಅದು ಎಲ್ಲಿ ನ್ಯಾತಾಡಿತ್ತೊ ಅದೇ ಜಾಗ್ದಲ್ಲಿ ನ್ಯಾತಾಕುಬುಟ್ಟು ಬಾ" ಅಂದ್ಲು.

"ನೀನೊಳ್ಳೆ ಗ್ಯಾನ ಕೆಟ್ಟೋಳು ಕಣೆ" ಅಂತ ಗೊಣಗಿ, ಆ ಮರದತ್ರ ವದೆ. ಕೆಳಗಡೆ ನಿಂತು ಕತ್ತ ಅಂತು ಮ್ಯಾಕೆ ನ್ವಾಡ್ದೆ.

ಕೈಕಾಲು ವದರು ಬಂದುಬುಡ್ತು!

ಅಯ್ಯಯ್ಯಾಪ್ಪಾಂತ ಬೇಳುಗರಿದು, ಇಂದ್ಕೆ ಓಡೋಡ್ತ ಬಂದೆ.

ಸಿವುನಿ, ಚೋಚಿಗಪಡ್ತ–"ಯಾಕಣ್ಣ ಇಂದ್ಕೇ ಬಂದೆ?" ಕ್ಯಾಳಿದ್ಲು.

ಅವಳ ಕ್ಯಾಳಿದ್ಕೆ ನಾ ಯೇನು ಜಬಾಬು ಕ್ವಡದೆ,

"ಬಾ ಇಲ್ಲಿ" ಅಂತ ಅವಳ ಕೈ ಇಡುದು ಆ ಮರದ ಸಮೀಪಕ್ಕೆ ಕರಕೊಂಡೋಗಿ,

"ಮ್ಯಾಕೆ ಅಂತುಗಂಡು ನ್ವಾಡು" ಅಂದೆ.

ಸಿವುನಿ ಕತ್ತೆತ್ತಿ ಅಂತುಗಂಡು ನ್ವಾಡಿದ್ದಲು. ಒಂದು ಸರ್ಪ ರೆಂಬೆಮ್ಯಾಲೆ ಪರಿದಾಡಿಕಂಡು ಇನ್ನೊಂದು ಗೀಜಗನ ಗೂಡ್ನ ವಳೀಕೆ ಬಾಯಕ್ತಿತ್ತು. ಆ ದ್ರುಸ್ಯವ ನ್ವಾಡಿದ್ದೇ ತಡ.

"ಅವ್ವಾಣೆ..." ಅಂತ ಚೀರ್‍ತ, ವೋಟು ದೂರಕೆ ಅಲ್ಲಿಂದ ವಟವೋಡದ್ಲು.

ನಂಗೆ ಯೇನು ಮಾಡಬೇಕೂಂತ ತಿಳೀನಿಲ್ಲ.

"ಬಾ ಸಿವುನಿ, ನಮ್ಮ ವೊಲಗೇರಿಗೋಗಿ ಯಾರಾರ ದೊಡ್ಡೋರ ಕರಕಂಬರಾವ" ಅಂತೇಳಿ, ಅವಳ್ನ ಅಲ್ಲಿಂದ ವೋಂಡಿಸಿಕಂಬಂದೆ...

ನಾವು ಕೆರೆ ಓಣೀಗೆ ಬರೋ ವೋಟರಲ್ಲಿ ನಮ್ಮ ದೋಡ್ಡಯ್ನ ಮಗ ಪುಟ್ಟಾರಿ ಬತ್ತ ಇದ್ದ. ಅವ್ನು ನಂಗಿಂತ ಏಳೆಂಟು ವರ್ಸ ದೊಡ್ಡೋನು. ದೈಯ್ಯಾಗ್ರ. ಎಂತಾ ಹಾವನೂ ನಿಸೂರಾಗಿ ವೊಡದಾಕೋನು! ನನ್ನ ಕೈಲಿದ್ದ ಗೀಜಗನ ಗೂಡ ಕಂಡು,

"ಇದೇನ ಲಕ್ಕ– ಈಗೀಜಗ್ನ ಗೂಡ ಗುಡ್ಲಿಗೆ ತಕ್ಕಂಡೋಯ್ತಾ ಇದ್ದೀರೇನೊ?– ಸಿವುನಿಗೆ ಆಸೆಯಾಗಿಬುಡ್ತು ಅಂತ ಕಾಣಿಸ್ತದೆ..." ಅಂತ ಕ್ಯಾಳ್ದ.

ನಾನು ನಡುದ ಸಂಗ್ತೀನೆಲ್ಲ ವಾಕವಾಗಿ ಯೋಳ್ದೆ.

ಅವ್ನು ನಮ್ಮ ಭಯವ ಲೆಕ್ಕಕ್ಕೆ ತಕ್ಕಳ್ಳದೆ, "ಈಟೇಯ?– ಬಾ, ಅದೆಲ್ಲಿದ್ದದು ಮರ, ತೋರಸು" ಅಂತ ನಮ್ಮ ವಂದಿಗುಟ್ಟೇನೆ ಬಂದ...

ಮಸ್ತಾಗಿ ಗೂಡುಗಳು ನ್ಯಾತಾಕಿದ್ದ ಮರದ ತಾವಿಕೋಗಿ ನಿಂತೊ. ನಮ್ಮೆದೆ ಝಲ್ ಅಂದೋಯ್ತು. ಆ ಘಟಸಪ್, ಒಂದು ಗೂಡ್ನ ಮರಿಗಳ ಸಾಫ್ ಮಾಡಿ, ಅಂಗೆ ಹರೀತಾ ಹರೀತಾ ಇನ್ನೊಂದು ಗೂಡ್ನ ಮರಿಗಳ ಸಾಫ್ ಮಾಡಾದರಲ್ಲಿತ್ತು!... ಅಣ್ಣ ನಮ್ಮ ದೂರಕೆ ಕರಕೊಂಡೋಗಿ ನಿಲ್ಲುಸಿ.

"ಎದರಿಕೊಬ್ಯಾಡಿ. ಅದ್ನ ನಿಮ್ಮ ತಾವಿಕೆ ಬರೊಗಂಟ ಬುಡಕ್ಕಲ್ಲ" ಅಂದು ಪುನಾ ಮರದ ಮರದ ಸಮೀಪಕ್ಕೋದ. ಆದ್ರೆ ಅವನ ಕೈಲಿದ್ದ ಕೋಲು ಆ ರಂಬೆ ಎತ್ತರಕೆ ಎಟಿಕಿಸ್ತಾ ಇರ್‍ನಿಲ್ಲ. ಅದಕೆ ಮರಾನೆ ಅತ್ತಕ್ಕೆ ಸುರು ಮಾಡ್ದ... ನಾವು ದೂರದಿಂದ ನ್ವಾಡ್ತಾನೇ ಇದ್ದೊ...

ಅವ್ನು ಮರ ಅತ್ತೋದ. ಆ ಗೀಜಗ್ನ ಗೂಡಗಳಿಂದ ರೆಂಬೆ ಮ್ಯಾಲೆ ಕುಂತ. ಅಂಗೇ ಕುಂತು ಹುನ್ನಾರಿನಿಂದ ಕೋಲ್ನಲ್ಲಿ ಜೋರಾಗಿ ನೂರ, ಆ ಹಾವ ಕೇಳೀಕ್ಕೆ ಕೆಡುವ್ದ... ಆಮ್ಯಾಕೆ ತಾನು ಇನ್ನು ವಕ್ಕಡಿಂದ ತಟಕ್ನೆ ಕೆಳೀಕೆ ಕುಪ್ಪುದ. ನಾಗರಾವು ಸೆಡೆಯ ವೋಟೆತ್ತರ ಎತ್ತಿ ಬುಸುಗರೀತಿತ್ತು... ನಮ್ಮಣ್ಣ ಧೀರ. ಒಂದೀಟೂ ಎದುರ್ದೆ. ಆ ಸಪ್ದ ತಾವಿಕೆ ಸರಿದು, ಕೋಲ್ನಿಂದ ಅದರ ಸೆಡೆಗೆ ಒಂದೇ ಸಮಕ್ಕೆ ಚಿಕ್ಕೊಂಡು ಚಿಕ್ಕೊಂಡೊಡದು, ಅದ್ನ ಕೊಂದಾಕಿಬುಟ್ಟ!... ಸಿವುನಿ ಎದುರಿ ಎಪ್ಪುಳಿಸೋಗಿ, ಮಟ್ಟಾರಣ್ಣ ಹಾವು ವೊಡೆಯೋದ ನ್ವಾಡಲಾರ್ದೆ. ನ್ನ ಬಲವಾಗಿ ತಬ್ಬಿಕಂಡಿದ್ದಲು.

... ಅಣ್ಣ ಬಂದು, "ಮಕ್ಕಲಿ" ಅಂತು ಸಿವುನಿ ಕೆನ್ನೆ ಗಿಂಡಿ, ಗೀಜಗ್ನ ಗೂಡ ನನ್ನ ಕೈಯಿಂದ ಈಸುಕಂಡೋಗಿ ಮರ ಅತ್ತಿ, ಅದು ಮೊದ್ಲು ಎಲ್ಲಿತ್ತೊ ಆ ರೆಂಬೆಗೇ ಆ ಗೂಡ ಕಟ್ಟಿಬುಟ್ಟು ಬಂದ...

–ಇದ್ಯಲ್ಲ ಗ್ಯಪಕ ಆದಂಗೆ ಚಿಕ್ಕೋರಾಗಿದ್ದಾಗ ನಾವೇಟು ಸುಕವಾಗಿದ್ದೊ ಅಂತ ಲಕ್ಕ ಕರಗೋದ... ಇನ್ನು ಈ ಮಣ್ಣಿನ ರುಣ ನಂಗೆ ತೀರ್ತು ಅಂದ್ಕಂಡು. ನನ್ನವ್ವ ವೋದ್ಲು. ನನ್ನ ತಾಯಿಗಿಂತ ಎಚ್ಚಗಿದ್ದ ಬುಂಡಮ್ಮರು ವೊಂಟೋದ್ರು. ಅವರಂಗೆ ನನ್ನ ನ್ವಾಡ್ಕತ್ತಿದ್ದ ರುಕ್ಮಿಣಿವ್ವಾರು ಅನ್ನಯ ಮಾಡ್ಕಂಡ್ರು. ನಮ್ಮ ದೊಡ್ಡಯ್ಯಂಗೂ ಜರ ಅಂದ ದ್ಯವಾಜಮ್ಮ ಯೋಳಿದಂಗಿತ್ತು. ಇನ್ನೇನು ಅದೂ ಪಳೇಗೇ ಇರ್ಬೇಕು. ನಮ್ಮ ಮಟ್ಟಾರಿ ನಮ್ಮ ಬುಟ್ಟು ದೂರ ವೋಂಟೋದ. ನನ್ನಯ್ಯ ಕುಡ್ದು ಕುಡ್ದು ನಿಪಾತಾಗಿ ಅವ್ನು ಬದುಕಿದ್ರೂವೆ, ಸತ್ತ ಕೂಟಕೇ ಸೇರೋದ. ಎಲ್ಲಕ್ಕಿಂತ ಮುಕ್ಯಾಗಿ ನನ್ನ ತಂಗಿ ಸಿವುನಿ–ಇಂಗಾಗೋದ್ಲು!... ಈ ಸುತ್ನಲ್ಲಿ ನಂಗೇ ಇನ್ನೇನ ಉಳುದಿರಾದು?...

ನಕ್ಕ ನಂಜೇಗೌಡ್ನ ವೊಲ ಸಮೀಪಿಸ್ತಿದಂಗೆ ಇನ್ನೊಂದು ಇಚರವೂ ಅವ್ನ ತಲೇಗೆ ವೊಕ್ಕೊತ್ತು.

ಆ ನಾತ್ರೆ ಗುದ್ದ ಬಗದು ನಂಜೇಗೌಡ್ನ ಎಡತಿ ಗೌರಮ್ನ ಎಣದ ಮೈಮ್ಯಾಗ್ನಿಂದ ಬಂಗಾರದ ಅಡ್ಡಿಕೆ, ಕಿವಿವಾಲೆ, ಕರಡಿಗೆ, ಎಲ್ಲಾನೂವೆ ಆ ಮಾರಿಗುಡಿ ಅಣ್ಣದೀರು ಕದ್ಕಂಡು ವೋದ್ರಲ್ಲ, ಆ ಇಸಂಗಳು ಈ ಕಳ್ಳತನ್ವ ನ್ನ ಮ್ಯಾಲೆ ಏರಿಬುಟ್ಟರೂ ಏರಿಬುಟ್ಟರೆ!– ಎಂಗೆ ಯೋಳೋದು?... ಎಂಗಿದ್ದರೂ ಈ ಗುದ್ದಕೂ ನನ್ನ ಗುಡ್ಲಿಗೂ ಅಂತಾ ದೂರ ಯಾನಿಲ್ಲ. ಈ ಕಡೀಗೆ ದುರಮನಳ್ಳಿಯೋರು ಯಾರೂವೆ ಪಳೇಗ್ನ ಗುಡ್ಲುಗಳ ಅಕ್ಕಂಡಿಲ್ಲ.....ಆ ಬೊಡ್ಡಿಹಕ್ಕಳು ಇಂಗೆ ಪಳಾನು ಮಾಡಿದ್ರೂವೆ ಮಾಡೋರೆ!...

ಲಕ್ಕಂಗೆ ಈಗ ದಾದಿಲ್ಲ, ಪಿರ್ಯಾದಿಲ್ಲ. ಈಗವನ್ನ ಯಾನು ಮಾಡಿದ್ರೆ ತಾನೆ ಯಾರು ಕ್ಯಾಳೋವಂಗಿದ್ದಾರು?... ಎಂಗಿದ್ರೂವೆ ಎಣದ ಮೈಮ್ಯಾಗಿನ ವಡವೇನೆಲ್ಲ ಕದ್ದಿರಬೇಕು! ಅಂತ ಗುಮಾನು ಅಬ್ಬಿಸಿದ್ರೆ, ಜನ ನಂಬ್ತಾರೆ. ಇಂಗೆ ದುರಾಲೋಚ್ನೆ ಮಾಡಿ ತಮ್ಮ ತೆಪ್ಪ ನನ್ನ ಮ್ಯಾಲೆ ಎತ್ತಾಕಕ್ಕಿಲ್ಲಾಂತ ಎಂಗೆ ಯೋಳದು?... ಹೊತ್ತಾರೆ ನಂಜೇಗೌಡ ಈ ಕಡೀಕೆ ಬಂದು ಗುದ್ದದ ಮಣ್ಣು ಕೆದಕಿದಂಗಿರೊ ಅವಸ್ತ್ರಯ ನ್ವಾಡಿದ್ರೆ, ಕಂಡ್ತಾ ಅವಯ್ಯಂಗೆ ಅನುಮನಸು ಬಂದು, ಯಾನೊ ಅಸಂದರ್ಬ ನಡದದೇಂತ ಗುದ್ದ ಅಗಸಿ ನ್ವಾಡೇ ನ್ವಾಡ್ತಾನೆ. ಆಮ್ಯಾಕೆ ಯೇನಪ್ಪ ಮಡಾದು?....

ತಾವು ತೆಪ್ಪಿಸ್ಕಳಕ್ಕೆ ಈ ಪಟಿಂಗರು ಊರ್‍ನಲ್ಲಿ ನನ್ನ ಮ್ಯಾಲೆ ತೆಪ್ಪ ವೊರಿಸಿ, ತಮಾಸಿ ನ್ವಾಡಕ್ಕೂ ಏಸಿದೊರಲ್ಲ!... ಆಗ ಊರ್‍ನಲ್ಲಿ ನನ್ನ ಮ್ಯಾಲೆ ಮತ್ತೊಂದು ನ್ಯಾಯ! ತೂ! ಈ ಹಾಳು ಜನದ ಸಾವಾಸವೇ ಬ್ಯಾಡ....

ಲಕ್ಕ ಗುಡ್ಲ ವೊಕ್ಕು ಕಟ್ಟಾಕಿದ್ದ ಬೊಡ್ನ ಬಿಚ್ಚಿದ...

ತಿರುಗ ಅವಂಗೆ ಯೋಚ್ನೆ:

"ಗೋಸು ಸಾಬರೇನೊ ನನ್ನ ಕಸ್ಟದಲ್ಲಿ ಉಪಕಾರ ಮಾಡರೆ. ಸರಿ. ಆದ್ರೆ, ನಾನು ಇಲ್ಲಿಂದ ವೊಂಬೋಗಕ್ಕೆ ಅವರು ಸುತರಾಂವಪ್ಪಕ್ಕಿಲ್ಲ. ನಂಗ್ವತ್ತು. ಅವರು ನನ್ ಬೋ ಪಿರೀತ ಮಾಡಾದ್ರಿಂದ, ನನಿಲ್ಲಿ ಬೊಡ್ನ ಕಟ್ಟಾಕಿದ್ದಂಗೆ, ನನಿಲ್ಲಿಂದೋಗಕ್ಕೆ ಬುಡದೆ ಬೀರುಗುಣಿಕೆ ಬಿಗುದು ನನ್ನ ಇಲ್ಲೆ ಕಟ್ಟಾಕಿಬುಡ್ತಾರೆ!... ಆದ್ರಿಂದ ಅವರ್ಗೆ ಯಾವು ಸುಳುವನೂ ಕ್ವಡದೆ, ಗಮ್ಮನೆ ಇಲ್ಲಿಂದ ಕಾಲುಕೀಳಾದೆ ಚೆಂದ!....

ಇದೇ ಚಿಂತೇಲಿ ಚ್ಯಾಪೆ ಮ್ಯಾಲೆ ಮನಗಿ ನಾತ್ರೆ ಪೂರ್ತ ವೊಳ್ಳಾಡ್ದ... ಮೊದಲ ಕೋಳಿ ಜ್ವತ್ಗೆ ಎದ್ದ. ಕಾವಳ ಇನ್ನೂ ಗಕುಂ ಅಂತಿತ್ತ. ಲಾಟಿನು ಕತ್ತಿಸ್ದ. ದಡದಡ್ನೆ ಆದ ಇಡಕಂಡು ಕಾಡುಹಾಕಿ ಬಿದ್ದ. ಆತುರಾತ್ರಾಗಿ ಅವನು ವೋಯ್ತಿದ್ದಾಗ, ಬೊಡ್ಡ ಅವನ ಕಾಲ್ಗೆ ತ್ವಡರಿಕತ್ತು.

"ಅಯ್ಯಯ್ಯೊ, ಬಿದ್ದೇ ವೋಗಿದ್ನಲ್ಲ!... ಇದರ ವಂಸ ಎಕ್ಕುಟ್ಟೋಗ!... ಇತ್ತಾಗೋದರೂವೆ ಬಂದು ಬಂದು ಕಾಲಗೇ ತ್ವಡರಿಕತ್ತದಲ್ಲ!..."

ಕ್ವಾಪದಿಂದ ಲಕ್ಕ ಬೋಡ್ನ ಕಾಲ್ನಿಂದ ಝಾಡಿಸ್ದ.

ಕುಂಯಯ್ಯೊ ಕುಂಯಯ್ಯೊ ಅಂತ ಬೊಡ್ಡ ವಚ್ಚೋರಿಕೆ ಬಿದ್ದು ಓಡ್ತು.

## ೪೦

ಲಾಟೀನು ಬೆಳಕ್ನಲ್ಲಿ ಕೈದೊಣ್ಣೆಯ ಕುಟ್ಟಿಕುಟ್ಟು ಸದ್ದು ಮಾಡ್ತ ಕಾಡುಹಾದೀಲಿ ಲಕ್ಕ ಸಾಗ್ದ. ಜೀರುಂಡೆಗಳ ಜೀರ್ ಜೀರ್ ಸಬ್ದ ಆ ಅರಣ್ಯಪ್ರದೇಸ್ದ ಒಡಲ್ನೆಲ್ಲ ತುಂಬಿಕಂಡಿತ್ತು.....

"ಅಯ್ಯನ್ನ ನ್ವಾಡ್ದೆ ಬಂದುಬುಟ್ನೆಲ್ಲ; ಅಯ್ಯನ್ನ ನ್ವಾಡ್ದೆ ಬಂದುಬುಟ್ನೆಲ್ಲ!... "ಅವ್ನ ಜೀವ ಉಯ್ಯಿಕತ್ತು...

ರಾಚನ ಈಚಲು ಪ್ಯಾಟ್ಗೆ ವೋಗಬೇಕೂಂತ ಏಟೋ ಸಲ ಮನಸುಮಾಡ್ದ. ಆದ್ರೆ, ಅಯ್ಯ ನನ್ನ ನ್ವಾಡಿದ್ರೆ–ನನ್ನ ಬೊಯ್ತಿದ್ದ; ಇಲ್ಲ, ಆಳ್ತಿದ!..."ಈಚೀಚ್ಗೆ ಅಂಗೆ ಬೊಯ್ಯೊ ಸಕುತಿನೂ ವೊಂಟೋಗದೆ. ಸುಮ್ಮಕೆ ಕುಂತು ಅಳೋದೊಂದೇಯ ಈಗ ಅವ್ನ ಕೈಲಿ ಕಿಸಿಯೋದು"– ಯಾವುದೊ ಮಾತಿನ ಸಂದೀಲಿ, ದ್ಯಾವಾಜಮ್ಮ ಯೋಳಿದ್ದು ಗ್ಯಾಪನ ಆಯ್ತು.....

ನನ್ನಯ್ಯ ಬೊಯ್ದಿದ್ದರೆ ತಾನೆ ಯೇನು–ಅದ್ರಿಂದ ನಂಗೇನು ಮುಕ್ಕಾಯ್ತಿಯ್ತು?... ಆದ್ರೆ ಆ ದೊಡ್ಡ ಗಂಡಸು ಆಟುದ್ದ ಸರೀರದ ಚೋಟುದ್ದ ಮಾಡಿ ದುಕ್ಕಡಿಸಿ ದುಕ್ಕಡಿಸಿ ಅಳೋದ ಮಾತ್ರ ನಾ ಸೈಸನಾರೆ!...

ಲಕ್ಕ ಇಂಗೆ ಚಿಂತೆ ಮಾಡ್ತ ವೋಯ್ತಿರ್ವಾಗ, ಇದ್ದಕಿದ್ದಂಗೆ ವಚ್ಚೋರಿಕ ದೂರದಲ್ಲಿ ಕಾಡಿನ ವೊಟ್ಟೆ ವಳುಗ್ನಿಂದ ಜ್ವಾಲೆ ಕಿತ್ತುಗತ್ತು. ತಟಕ್ನೆ ಲಕ್ಕಂಗೆ ಅದು ಕೊಳ್ಳಿದೆವ್ವಾನೇ ಇರಬೇಕು ಅನ್ನಿಸ್ತು. ಅತ್ವಾ ಜನ ಯೋಳೋವಂಗೆ ಮುನೀಸ್ವರ ಸಂಚಾರ ವೋಂಟಿದ್ದಾನೊ?– ಚಿಕ್ಕೋನಾಗಿದ್ದಾಗ ಲಕ್ಕ ದೆವ್ವ, ಪಿಚಾಚಿ ಅಂದ್ರೆ ಎದುರಿಕೊತ್ತಿದ್ದು ದಿಟ. ಆದ್ರೆ ಈಗ ಇದ್ಯಾವುದಕೂ ಎದರೊ ಗಂಡಲ್ಲ!.... ಇದು ನಂಗೇನು ಮಾಡಾದು ಅಂತ ಧೈರ್ಯವಾಗೆ ಮುಂದುವರೀತಿದ್ದ.

ಭೂಗಿಲೆದ್ದ ಬೆಂಕಿ ಜ್ವಾಲೇಯ ನ್ವಾಡ್ತ. ಲಕ್ಕ ಸಾಗ್ತಾ ಇರೋನೂವೆ ಒಂದು ಮರದ ಬೊಡ್ಡೆಮ್ಯಾಲೆ ಒಬ್ಬ ಮನುಸ ಕುಂತಿದ್ದದ ಕಂಡು ಬೆಚ್ಚ. ಇದು ಭೂತದ ಚಾಷ್ಟ್ಯ ಇರಬೌದ? ಅಂತ ಅವನ ಮನಸು ಅಳುಕ್ತು.

ಆದ್ರೆ ಅತ್ರಕ್ಕೆ ಬತ್ತಿದ್ದಂಗೆ, ಅವ್ನು ದೆಯ್ಯವೂ ಅಲ್ಲ ಪಿಚಚಿಯೂ ಅಲ್ಲ– ನಮ್ಮೂರ್ನ ಬುಡುಬುಡಿಕೆ ದಾಸಯ್ಯ ಅಂತ ಗ್ವತ್ತಾಗಿ. ಲಕ್ಕಂಗೆ ಸರಾಗ್ವಾಗಿ ಉಸಿರಾಡುವಂಗಾಯ್ತು!.

"ಈಟೋತ್ನಲ್ಲಿ ಇಲ್ಲೇನು ಮಾಡ್ತ ಕುಂತಿದ್ದೀರಯ್ಯ?" ಅಂತ ಸಾಜವಾಗಿ ಕೇಳ್ದ. "ಸ್, ಗಟ್ಯಾಗಿ ಮಾತಾಡಬ್ಯಾಡ. ಹಾಲುಹಕ್ಕಿ ನುಡೀತಾ ಅದೆ. ನಾನು ಜಾಬು ಕಟ್ತಾ ಇವ್ನಿ..." ಅಂದ.

ಊ. ಇನ್ನು ಅಲ್ಲಿ ನಿಲ್ಲೋದು ಚೆಂದಾಗಿಲ್ಲ ಅಂತ ಲಕ್ಕ ಮುಂದ್ಕೆ ವೊಂಟ. ಹಾಲಕ್ಕೆ ಕಿಚಪಚ ಅಂತಿದ್ದದ್ದು ಲಕ್ಕಂಗೂ ಕೇಳಸ್ತು. ಇವನ್ನೇಯ ಸಕುನದ ಹಕ್ಕಿ ಅನ್ನೋದು?– ಈ ಹಕ್ಕಿಗಳು ಯೋಳೊ ಸಕುನಾನೆ ಈ ದಾಸಯ್ಯ ಬೆಳುಗಾದಮ್ಯಾಲೆ ಊರ್ನಲ್ಲಿ ಮನೆಮನ್ಗೂವೆ ವೋಗಿ ಸರಿ, ಅಕ್ಕಿ, ರಾಗಿ ಬಿಕ್ಸೆ, ದೋತ್ರ ಯೆಲ್ಲಾನು ಪಡಕಂಡೋಯ್ತಾನೆ. ಇರೋರು ಕ್ವಡ್ತಾರೆ, ಇಲ್ಲದೆ ಇರೋರು ಕ್ವಡಕ್ಕಿಲ್ಲ...

ಲಕ್ಕನ ಪಯಣ ಮುಂದುವರಿದಂಗೆ ಮೂಡಲ ಬಾನು ಕೆಂಪಾಯ್ತು ಬತ್ತಿತ್ತು. ಆಗ ಅಡವಿ ನಡೂಮಧ್ಯದಲ್ಲಿ ಇನ್ನೂ ಜ್ವಾಲೆ ಉರೀತಿದ ಕಂಡು, ಆಗ ಲಕ್ಕಂಗೆ ವೊಳೀತು... ಅಲ್ಲಿ ಕಾಣೋದು ಕೊಳ್ಳಿದೆವ್ರ ಅಲ್ಲ–ಬಿದಿರು ಇಂಡಲು ಉಜ್ಜಿ ಉಜ್ಜಿ ಅತ್ತಿಗಂಡು ಉರಿತಿರೊ ಕಾಡ್ಗಿಚ್ಚು, ಅಂತಾವ!...

ಬೆಳಗಾಯ್ತಿದಂಗೆ, ಕಾಡಿನ ಗಿಡ, ಮರ, ಎಲ್ಲವೂವೆ ನಾತ್ರೆ ನಿದ್ದೆ ಮುಗಿಸಿ ಎಚ್ಚರಾಯ್ತ ಇದ್ದೊ. ಕಾಡಕ್ಕಿಗಳು ತರಾವರಿ ಮಟ್ನಲ್ಲಿ ಹಾಡಕ್ಕೆ ಮುಟ್ಟಗಂಡಿದ್ದೊ– ಇದ್ನ ಕೆಳ್ತಾ ನಡದಂಗೆ, ಲಕ್ಕಂಗೆ ಊರ್ನ ನಾಟಕದ ಹೈಕಳು ಪಾಲ್ಟು ಮಾಡೋವಾಗ ಹಾಡ್ತಾ ಇದ್ದದ್ದು ಗೆಪ್ತಿಆಯ್ತು!...

ಲಕ್ಕ ಮುಂದುಮುಂದುಕೋದಂಗೆ, ಬೆಳಕು ಹರಿದು ಬಂದು ಅವನ ಮೈಯ ಬೆಚ್ಚಗೆ ಮಾಡ್ತು..... ಲಕ್ಕಂಗೆ ಆ ಗಳಿಗೇಲಿ ಹಿಂದಿನದೆಲ್ಲ ಮರೆತೋದಂಗಾಯ್ತು. ಎಳಬಿಸಿಲ್ನ ಸಾಕ ಅವ್ನ ನರನರಾನೂವೆ ಚುಮುಚುಮುಗುಟ್ಸಿ, ಅವನ ವೊಟ್ಟೆ ವಳುಗೆ ಕುಸಿ ತುಂಬಾ ಇತ್ತು...

ತನಗೇ ಅರುವಿಲ್ಲದೆ ಲಕ್ಕ ಪದ ಯೋಳಕ್ಕೆ ಸುರುಮಾಡ್ದ. ಒಂದು ಜಿನ ಕಾಡ್ನಲ್ಲಿ ತಾವಿಬ್ರೂ ಚಿಕ್ಕೋರಾಗಿದ್ದಾಗ, ತಂಗಿ ಸಿವುನಿ ತನ್ನ ತಿಟೆ ಮಾಡ್ಕೆಕ ಮರ ಅತ್ತಿ ಕುಂತು ಯೋಳಿದ್ದ ಪದ!....

ಲಕ್ಕಪ್ಪ ಲಕ್ಕಪ್ಪ ಲೋ ಲೋ ಲೋ
ಎಕ್ಕದ ಗಿಡದಲ್ಲಿ ಲೋ ಲೋ ಲೋ
ಬೆನಕಪ್ಪ ಕುಂತವ್ನೆ ಲೋ ಲೋ ಲೋ
ಕರಿಗಡುಬ ತಿಂತವ್ನೆ ಲೋ ಲೋ ಲೋ...

ಅವನು ಇಂಗೆ ಪದ ಯೋಳ್ತ ವೋಯ್ತಿರಬೇಕದರೆ, ಬೊಡ್ಡ ಒಂದು ನಾಗರಾವಿನ ಪೊರೆಯ ಕಚ್ಚಿಗಂಬಮತು. ಲಕ್ಕ ಪೊರೆಯ ಬೊಡ್ನ ಬಾಯಿಂದ ಕಿತ್ತಾಕ್ತ.

"ಬೋ ಸೂರ ಕಾಲಿ ಪೊರೆ ಕಚ್ಚಿಗಂಬರಬೇಕಾರೆ ನೀನೆ

ಆಗಬೇಕಾಗಿತ್ತೇನೊಪ. ಆ ಪೊರೆ ಬುಟ್ಟೋದ ಸರ್ಪವ ಕಚ್ಚಿಗಂಬರಬೇಕಾಗಿತ್ತು. ಆಗ ನಿನ್ನ ಸಾಸ ಮೆಚ್ಚಿಗಂಡು ಬೇಸ್ ಅಂತ ನಿಂಗೆ ಸಾಬಾಸ್‌ಗಿರಿ ಕ್ವಡ್ತಿದ್ದೆ" ಅಂದು ನಕ್ಕ.

ಬೊಡ್ಡ, ಲಕ್ಕ ಯೋಳಿದ್ದ ಅರ್ತ ಆಗ್ದೆ, ಅವನ್ನೇ ಕತ್ತು ಕೊಂಕುಸ್ತಾ ನ್ವಾಡ್ತು ಮೂಡ್ಲಲ್ಲಿ ಸ್ವಾಮಿ ಆಗ್ಲೆ ಆಳುದ್ದ ಏರಿದ್ದ. ಮರ ಗಿಡ ಆಸುರೆಲೆ ಮ್ಯಾಲೆಲ್ಲ ಇಬ್ಬನಿ ಬಿದ್ದಿತ್ತು. ಸ್ವಾಮಿ ಮೊಕ ಕಾಣ್ತಿದ್ದಂಗೆ ಆ ಇಬ್ಬನಿ ಫಳಫಳಳಾಂತ ವೊಳೆಯಕ್ಕೆ ಸುರು ಆಯ್ತು.....

ಲಕ್ಕ ಇಂಗೆ ಕಾಡ್ನಲ್ಲಿ ವೊಯ್ತಾ ಇರೋನೂವೆ, ಉಚ್ಚೆಗೆ ಅವಸರಾಗಿ ಒಂದು ಮೆಳೆ ಮೊಗ್ಗಲಿಗೋಗಿ ಕುಂತ. ಆ ಮೆಳೆ ಪಕ್ಕದಾಗೊ ಒಂದು ಬೊಸರಿ ಮರ. ಆ ಮರದಿಂದ ಒಂದು ಕಟ್ಟಿರುವೆ ಗೊದ್ದಗಳ ದೊಡ್ಡ ದಂಡು ಸಾಲುಗಟ್ಟಿ ಎತ್ತಾಗೊ ವೊಂಟಿತ್ತು. ಆ ದಂಡು ಲಕ್ಕ ಕುಂತಿದ್ದ ಜಾಗದಲ್ಲೆ, ಅವನ ಕಾಲಿ ಸೋಕೋವಸ್ಟು ಸಮೀಪಾಗಿ ಅರೀತಿತ್ತು. ಆದ ಕಂಡು ಲಕ್ಕ ದಿಗ್ಗನೆದ್ದು ಅಲ್ಲಿಂದ ವಸಿ ಅಂತರಕೋಗಿ ಕುಂತ. ಇಂದ್ಕೆ ಇಂತದೆ ಒಂದು ಕರಿಗೊದ್ದ ಅವನಕಾಲ ಕಚ್ಚಿತ್ತು. ಏಟು ವೊದರಿದರೂ ಬುಡದೇ, ಕೊನೀಕೆ ಅದ್ನ ಲಕ್ಕ ವೊಸಗಾಕಿ ಸಾಯಿಸಬನೇಬೇಕಾಯ್ತು. ಅಲ್ಲಿಗಂಟ ಅದು ಬುಟ್ಟಿರ್ನಿಲ್ಲ. ಕಚ್ಚಗಂಡೇ ಇತ್ತು! ಆಮ್ಯಾಕೂ ಕಾಲ್ನಲ್ಲಿ ಬಾಯಿ ಬಡಿಕೊಳೊ ವೋಟು ಉರಿ, ಉರಿ!...

ಆ ಜಾಗ ಬುಟ್ಟು ಚಿಗದು ಕುಂತೋನು ಸುಮ್ಮಕೆ ಮಾಡಕ್ಕೆ ಬ್ಯಾರೆ ಕೇಮೆ ಇಲ್ಲದ್ಕೆ ಈ ಗೊದ್ದಗಳು ಇಂಗೆ ಈಟುದ್ದ ದಂಡಕಟ್ಟಿ ಯುದ್ದ ಮಾಡಕ್ಕೊಂಟ ಸಿಪಾಯಿಗಳಂಗೆ, ಎತ್ತಾಗಿ ಪಯಣ ವೊಂಟವೆ? ಅಂತ ಚೋಜಿಗ ಪಡ್ತ, ಉಚ್ಚೆ ಚೋರ್ ಅನ್ನುಸ್ತ, ಅಂಗೇನೆ ಆ ಗೊದ್ದಗಳ ಮ್ಯಾಲೆ ಕಣ್ಣರಿಸ್ತಾ ವೋದ. ಅಂಗೆ ದ್ರಸ್ಟಿ ಅರಿಸ್ದಾಗ ಅವಂಗೆ ಇನ್ನೂ ಚೋಜಿಗ ಕಾದಿತ್ತು ಆ ಕಟ್ಟಿರುವೆ ಗೊದ್ದಗಳ ದಂಡು ಸುಮಾರು ದೂರದಲ್ಲಿ ಒಂದು ಸಪ ಮ್ಯಾಲೆ ಉದ್ದಕೆ ಅತ್ತಿಗಂಡು ಅದರ ಮೈಮ್ಯಲೆ ಇಂಕರ ಜಾಗಾನು ಬುಡದಮಗೆ ಪಟ್ಟಾಗಿ ಕಚ್ಚಿಗಂಡಿದ್ದೊ! ಆ ಭಾಗಿ ಸರ್ಪ ರೋಸ ಅತ್ತಿ, ಮೊಳದುದ್ದ ಸೆಡೆ ಎತ್ತಿ, ಎತ್ತೆತ್ತಾಗೊ ರೊತ್‌ರೊತ್ತನೆ ನೆಲಕ್ಕೆ ಬಡಿದು ಆದಸ್ಟು ಗೊದ್ದಗಳ ಸಾಯಿಸ್ತ ತನ್ನ ರೊಸ ತೀರಿಸಿಗತ್ತಿತ್ತು... ಆದರೆ ಬತ್ತಾ ಬತ್ತಾ ಕಟ್ಟಿರುವ ದಂಡಿನ ಕಡಿತವ ಸೈಸಕ್ಕಾಗದೆ ಸುಸ್ತಾಯ್ತು ಕೊನೀಕೆ, ಲಕ್ಕ ನ್ವಾಡ್ತಿದ್ದಂಗೇಯ, ಆ ಘಟಸರ್ಪ ಮಿಸುಗಾಡಕ್ಕಗದೆ ತೆಪ್ಪಗೆ ವಕ್ಕಡೀಕೆ ಬಿದ್ದು ಕತ್ತು. ಅಂತು ಈಟು ಸಣ್ಣ ಪ್ರಾಣಿಗೋಳು ಒಟ್ಟಾಗಿ ಎಂತಾ ಭಾರಿ ಗೋದಿ ನಾಗರಾವ ಸಯಿಸಿಬುಟ್ವೊ?.... ಏಟು ಆಚರ್ಯ ಇದು?....

ಇಂತಾ ಇರುವೇನೂವೆ ಒಂದು ಭಾರಿ ಸರ್ಪವ ಕೊಲ್ಲಬೌದು ಅಂತ ನಂಗೆ ತಿಳಿದೇ ಇರನಿಲ್ಲ, ಅಂದ್ಕಂಡ ಲಕ್ಕ...

ಲಕ್ಕ ಇಂಗೆ ನ್ವಾಡ್ತಾ ಇರೋನೂವೆ, ಅವನ ಪಕ್ಕದಾಗಿದ್ದ ಬೊಡ್ಡೆ, ಅದೂ ಒಂದು ಮರದ ಬೊಡ್ಡೆಗೆ ಕಾಲೆತ್ತಿ ಚೋರ್ ಅನ್ನಿಸ್ತಿದ್ದದ್ದು, ಆಗಲೆ ವೋಗಿ ಆ ಕಟ್ಟಿರುವೆ–ಸಪ್ಪೆ ಕದ್ನಾವ ನ್ವಾಡ್ತ ನಿಂತದೆ! ಭಯಕೊ ಯೇನೊ ದೂರದಿಂದ್ಲೆ ವಸಿ ವೊತ್ತು ಬುಟ್ಟುಬುಟ್ಟು ಮೆತ್‌ಮೆತ್ತಗೆ ಬೊಗಳ್ತಾನೂ ಅದೆ!....

ಲಕ್ಕನ ವೊಟ್ಟೆ ನಾತ್ರಿಂದ ಅಸಿದಿದ್ದದ್ದು, ಈಗ ತಡೀನಾರ್ದೆ ಚುರುಗಟ್ಟಕ್ಕೆ ಮುಟ್ಟಗತ್ತು. ಚಿಕ್ಕೊಂಡು ನೋಡೋನೂವೆ ಅವನ ಚೋರೀಲೆ ವಸಿ ದೂರಕೆ ಪಾಪಾಸುಗಳ್ಳಿ ಗಿಡ ಕಣ್ಣಿಗೆ ಬಿಟ್ತು. ಅದರ ಮ್ಯಲೆ ಕೆಪ್ಪಟೆ ಕೆಂಪಿನಿ ಹಣ್ಣು ರಸ ತುಂಬ್ಕಂಡು ವಾಲಾಡ್ತಿದೊ. ಆ ಹಣ್ಣ ಬುಡುಸಿ ತಿನ್ತಾ ತಿನ್ತಾ ಲಕ್ಕ ಮುಂದುಮುಂದ್ಕೆ ವೊಂಟ. ಅವ್ನು ಕಾಲು ಕಿತ್ತದ್ದ ಕಂಡು ಬೊಡ್ಡನೂವೆ ಆ ಸತ್ತ ಹಾವಿದ್ದ ಜಾಗ ಬುಟ್ಟು ಲಕ್ಕನ ಇಂದ್ಗುಟ್ಟೇನೆ ಪುನಾ ಬಾಲ ಅಲ್ಲಾಡುಸತ ಬಂತು.

ಆಗ್ಲೆ ಬಾಣದಲ್ಲಿ ಸ್ವಾಮಿ ಸುಮಾರು ಏಡಾಳುದ್ದ ಮ್ಯಾಕ್ಕೇರಿದ್ದ.

ಲಕ್ಕ ಇಂಗೇ ವೋಯ್ತಾ ಇರೋನೂವ, ಎತ್ತೆತ್ತಗೊ ನ್ವಾಡ್ತ ಆನೆ ಆಕ್ದ ಲದ್ದಿ ತುಣುದುಬುಟ್ಟ, ಲದ್ದಿ ಬಿಸಿಯಾಗಿತ್ತು. ಎಲ್ಲೊ ಈಗ್ಲೆ ವಸಿ ವೊತ್ನಲ್ಲೆ ಆಕಿರಬೇಕು. ಅಂಗಾರೆ ಅತ್ರ ಇಲ್ಲೆ ಎಲ್ಲೋ ಆನೆ ಇರಬ್ಯೆದು, ಅಂದುಕೊತ್ತ ನಿಂತ್ಕಂಡು ಗಾಳಿ ಯಾವ ಕಡಿಂದ ಬೀಸ್ತಿದೇಂತ ಲೆಕ್ಕ ಆಕ್ದ. ಗಾಳಿ ಮೆಳೆ ಕಡಿಂದ ಅವ್ನ ಮೊಕ್ಕಿದಿರಾಗಿ ಬೀಸ್ತಾ ಇತ್ತು. ಆನೆ ಏಟು ದೂರದಲ್ಲಿದ್ದದು ನ್ವಾಡಾನಾಂತ ಮೆಳೆ ಸಂದೀಲಿ ದ್ರುಸ್ಟಿ ಆಯಿಸ್ದ. ಅಲ್ಲಿ ಒಂದಾನೆ ಅಲ್ಲ, ಆನೆಗೊಳ ಒಂದು ಭಾಗಿ ಇಂಡೇ ನೆರುದಿತ್ತು!....

ಗಾಳಿ ಆನೆಗೊಳ ಕಡಿಂದ ಬೀಸ್ತ ಇರೋನೂವೆ ಸದ್ಯಕ್ಕೆ ಬದುಕ್ಕಂಡೆ ಅಂತ ಬೆವರೋರಸ್ಕಂಡ ಲಕ್ಕ. ಯೇನಾರ ಅವ್ನಿದ್ದ ಕಡಿಂದ ಆನೆಗಳಿದ್ದ ಜಾಕ್ಕೆ ಗಾಳಿ ಬೀಸಿದ್ರೆ, ಅವ್ಕೆ ವಾಸಣ ಬಿದ್ದು ಅಟ್ಟಿಸಿಕೊಂಬಂದು ಅವನ್ನ ಸಿಗುದು ಆಕೋವು!... ಲಕ್ಕ ಕಾಡುಕುರುಬರಿಂದ ಈ ಗುಟ್ಟ ಅರಿತಿದ್ದ. ಆದ್ರಿಂದ ತುಸ ಧೈಯ್ ಬಂದು, ಒಂದ್ಸಲ ಆ ಗುಂಪ ಕಣ್ತುಂಬ ನ್ವಾಡಿಬುಟ್ಟು ವೊಂಡೋಗಾನಾಂತ ನಿಂತ.

ಒಂದು ಗಳಿಗೆ ಕಣ್ಣ ಮುಟ್ಟ ನ್ವಾಡಿ, ಆ ಜಾಗದಿಂದ ಆದಷ್ಟು ಬ್ಯಾಗ ವಾಟ ವೋಡೀಬೇಕು, ಇಲ್ಲದಿದ್ರೆ ಪ್ರಾಣಕೇ ಅಪಾಯಾಂತ ತೊಳ್ಳೆ ವಳುಗೆಲ್ಲ ನಡುಕ ಅರಿದಾಡ್ತು. ಆದರೂವೆ ಕಣ್ಣ ಮುಂದೆ ನಡೀತಿದ್ದ ಚೋಜಿಗ ನ್ವಾಡ್ತಾ

ನ್ವಾಡ್ತ ಬೆಪ್ಪಾಗಿ ಗೂಟ ವೊಡದಂತೆ ನಿಂತೆಬುಟ್ಟ ಲಕ್ಕ!...

ಒಂದು ಎಣ್ಣಾನೆ ಒಂದು ಮರಿಯ ಈಯಿತಾ ಇತ್ತು. ಇಂದುಗಡಿಂದ ತಲೆ ಆಗ್ಲೆ ಈಚ್ಗೆ ಕಡಕಂಡಿತ್ತು. ಹಿಂಡಾನೆಗೊಳು ಆ ಎಣ್ಣಾನ್ಗೆ ವತ್ತಾಸ್ಯಾಗಿ ನಿಂತು ಅದು ಮರಿ ಆಕಕ್ಕೆ ಸಾಯ ಮಾಡ್ತಿದ್ದೊ...

ಆನೆ ಮರಿ ಆಕೋದ ಲಕ್ಕ ಯಾವತ್ತೂವೆ ಕಂಡೋನೆ ಅಲ್ಲ. ಆ ಮರಿ, ಬಾಕಿ ಆನೆಗಳ ಸಾಯದಿಂದ ತಲೆ ಮುನಾಗಿ, ವಸಿವಸ್ಯಾಗಿ ಈಚ್ಗೆ ಕಡದು ಕೊನೀಕೆ ತಪ್ಪನೆ ನೆಲಕ್ಕೆ ಉಳ್ಳಿಕೊಂಬಿತ್ತು. ಬಾಕಿ ಆನೆಗೊಳು ಆ ಮರಿ ಮೈಯ್ನೆಲ್ಲಾನೂವೆ ತಮ್ಮ ಸೊಂಡಿಲ್ನಿಂದ ಆದಷ್ಟು ಮಡಿ ಮಾಡ್ದೊ. ಆಮ್ಯಾಕೆ, ತುಸ ವೊತ್ತು ಆ ಮರಿ ಸುದರಾಯಿಸಿಕಂಡಮ್ಯಾಲೆ, ಅದ್ನ ಬಾಕಿ ಆನೆಗಳು ಎತ್ತಿ ನಿಲ್ಲಿಸ್ದೊ. ಅದ್ರೆ ಅವು ನಿಲ್ಲುಸ್ದ ಕೂಡ್ಲೆ ಆ ಮರಿ ಪುತಕ್ನೆ ಬಿದ್ದುಕತ್ತು. ಪುನಾ ಆ ಆನೆಗಳು ಅದ್ನ ಎತ್ತಿ ನಿಲ್ಲಿಸೋದು, ಅದು ಪುನಾ ಕೆಳಕೆ ಬಿದ್ದಕೊಳಾದು–ಇಂಗೆ ಏಟೊ ಸರ್ತಿ ನಡೀತು. ಆಮ್ಯಾಕೆ ಅದ್ರೆ ತಾಯಿ, ಆ ಮರಿಯ ತನ್ನ ಕಾಲುಸಂದಿಗೆ ಸೇರುಸ್ಕಂಡ್ತು. ಮರಿ ಮತ್ತೆ ಪುಸ್ಕೆ ಬಿದ್ದುಕತ್ತು. ಅದ್ನ ಬ್ಯಾರೆ ಆನೆಗೋಳು ಪುನಾ ಮ್ಯಾಕ್ಕೆತ್ತಿ ನಿಲ್ಲುಸ್ದೊ. ಪುನಾ ಬಿದ್ಕತ್ತು. ಪುನಾ ನಿಲ್ಲಸ್ದೊ. ಇಂಗೇ ಏಟೋ ವೊತ್ತು ಕಳೀತು. ಆಮ್ಯಾಕೆ ವಸವಸ್ಯಾಗಿ ಆ ಮರೀಗೆ ನಿಂತ್ಕಳೋ ತ್ರಾಣ ಬಂತು. ಅಂಗೇ ಇನ್ನೂ ವಸಿ ವೊತ್ತ ಕಳುದಮ್ಯಾನೆ ತಾಯಾನೆ ಮೆತ್ತ ಮೆತ್ತಗೆ ಆ ಮರೀಯ, ತನ್ನ ಮುಂದ್ಕೆ ತಕ್ಕಂಡು, ತಾನೂವೆ ತನ್ನ ಸೊಂಡ್ಲಿಂದ ಅದ್ನ ಮಡಿ ಮಾಡಕ್ಕೆ ಮುಟ್ಟಗಂತು. ಆಗ ಆ ಗುಂಪಿಗೆಲ್ಲ ಯಜಮಾನ ಸಲಗ, ಆ ಎಣ್ಣಾನ್ಗೆ ಹೆರಿಗೆ ಆಗೋವರ್ಗೂ, ಅದ್ಕೆ ವೊರಗಡಿಂದ ಯಾವ ಅಪಾರನೂವೆ ತಟ್ಟದಂಗೆ ಕಾವಲುಕಾಯ್ತ ಸುತ್ತಾಲು ಗಸ್ತಾಕ್ತಾ ಇದ್ದದ್ದು, ಒಂದು ಸಲ ಜೋರಾಗಿ ಕೂಗ್ತು....

ಲಕ್ಕ ಬೆಚ್ಚೋದ.

ಆಮ್ಯಾಕೆ, ಆ ಇಚಿತ್ರಾನೆಲ್ಲಾನು ನ್ವಾಡಿಕಂಡು ಲಕ್ಕ ಅಲ್ಲಿಂದ ಎಜ್ಜೆ ಕಿತ್ತಂಗೆ, ಬತ್ತಾ ಬತ್ತಾ ಹಿಂದಿನದೆಲ್ಲ ಮರತೋದಂಗಾಗಿ, ಬ್ಯಾರೆ ಲೋಕ್ಕೇ ಅವನ್ನ ಕರಕೊಂಡೋಯ್ತಿತ್ತು... ಲಕ್ಕನ ಅಂತರಾಳ್ದಲ್ಲಿ ಇಲ್ಲೀಗಂಟ ವೊಳೆವೋಳ್ಯಾಗಿ ಅರಿಕಂಡೋಯ್ತ ಇದ್ದ ಯೋಚ್ನೆ ಈಗ ನಿಂತೋಗಿ ಅವನ್ನ ಮನಸ್ಸು ಒಂದು ಸಮಾದಾನ್ದ ಸ್ತಿತಿಯ ಮುಟ್ಟಿತ್ತು... ಆಗ–ಕಾಡಿನ ಒಡಲು ವಳುಗ್ನಿಂದ ಯಾವುದೊ ಹಕ್ಕಿ ಸಿಳ್ಳು ಆಕಿದಂಗೆ ಹಾಡ್ತು. ಲಕ್ಕನೂವೆ, ಅದ್ಕೆ ಪರ್ತಿಯಾಗಿ ಜಬಾಬು ಕ್ವಟ್ಟಂಗೆ, ಸಿಳ್ಳಿ ಆಕ್ದ...

ಅವನ ವಳುಗೆ ಈಗ, ಚಿಕ್ಕೋನಾಗಿದ್ದಾಗ ಊರ್‍ನ ಓಕುಳಿ ಹಬ್ಬದಲ್ಲಿ ತಮಟೆ ಬಾರುಸ್ತ ಮೈಮ್ಯಾಲೆ ಯಾವುದೋ ದೇವತೆ ಬಂದೋನಂಗೆ, ಜಗ್ಗಣಕ, ಜಗ್ಗಣಕ ಕುಣೀತ ಊರೋರ್‍ನೆಲ್ಲ ದಂಗುಮಾಡಿದ್ದ ಹೈದ ಲಕ್ಕ ಮೂಡಿದ್ದ!...

ಈ ಕುಸಾಮತ್ನಲ್ಲೆ ಲಕ್ಕ ನಡೀತಾ ಇದ್ದ. ಬೊಡ್ಡನೂವೆ ಕುಲುಕುಲುಕ್ತ ಅವನೊಂದ್ಗತೆ ಬತ್ತಾನೆ ಇತ್ತು. ಅವ್ನ ನಡೀತಿದ್ದಂಗೆ ಒಂದು ಸೋರೆಕಟ್ಟ ಧೂಪದ ಮರದ ಮ್ಯಾಲೆ ಕುಂತು ಹಾಡ್ತು:

ಉಪ್ಪಲ ಸೆಟ್ಟಿ
ಉಪ್ಪಲ ಸೆಟ್ಟಿ
ನೀ ತರ್‍ರೆ
ನಾ ಪುರ್‍ರೆ

ಲಕ್ಕ ಕತ್ತೆತ್ತಿ ನ್ವಾಡ್ದ. ಬೂದುಬಣ್ಣದ ಆ ಪುಟಾಣಿ ಹಕ್ಕಿ ಧೂಪದ ಮರದ ರೆಂಬೆ ಮ್ಯಾಗ್ನಿಂದ ಪುರ್‍ರಂತ ಹಾರ್‍ತು. ಅವ್ನ ದ್ರುಸ್ಟಿ ಅದರಾಗೆ ನೆಟ್ಟು. ಆ ಸೋರೆಕಟ್ಟ ಅಲ್ಡಾರಿ, ಇಲ್ಡಾರಿ, ಎತ್ತೆತ್ತಗೊ ಹಾರೊಯ್ತು!....

ಲಕ್ಕ ಅಂಗೇ ಇನ್ನೂ ಮ್ಯಾಕ್ಕೆ ಕತ್ತೆತ್ತಿದ. ಆಕಾಸ ತೋಲುದಂಗಿತ್ತು. ಅಲ್ಲೊಂದು ಗರುಡಾಳ ಪಕ್ಸಿ ತೇಲ್ತಾ ಹಾರಾಡಿತ್ತು. ಲಕ್ಕನ ಮನಸೂವೆ ಅದರ ವಂದಗುಟ್ಟಗೇಯ ತೇಲ್ತಾ ವಾಲ್ತಾ ಹಾರಾಡಕ್ಕೆ ಮುಟ್ಟಿಗಂತು. ಅದರಾಗೆ ದ್ರುಸ್ಟಿ ನೆಟ್ಟು ಲಕ್ಕ ತಳತಳಾರ್‍ವಾಗಿ ಎಜ್ಜೆಯ ಮುಂದಮುಂದ್ಕಿಟ್ಟ.

* * * *